ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧನೆ
ಮಂಜಣ್ಣ ಪಿ.ಬಿ.



ಮಾರ್ಗದರ್ಶನ
ಡಾ.ಎಸ್.ವೈ.ಸೋಮಶೇಖರ್
ಸಹಾಯಕ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬
೨೦೧೬

703

ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ

**(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ ಮಹಾಪ್ರಬಂಧ)**

ಸಂಶೋಧನೆ
ಮಂಜಣ್ಣ ಪಿ.ಬಿ.

ಮಾರ್ಗದರ್ಶನ
ಡಾ.ಎಸ್.ವೈ.ಸೋಮಶೇಖರ್
ಸಹಾಯಕ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೧೬

ದೃಢೀಕರಣ ಪತ್ರ

ಶ್ರೀ ಮಂಜಣ್ಣ ಪಿ. ಬಿ. ಇವರು ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಡಾ. ಎಸ್. ವೈ. ಸೋಮಶೇಖರ್)
ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ಥಳ : ವಿದ್ಯಾರಣ್ಯ

ದಿನಾಂಕ :

ಪ್ರಮಾಣ ಪತ್ರ

ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಎಸ್. ವೈ. ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಮಂಜುಣ್ಣ ಪಿ.ಬಿ.)
ಸಂಶೋಧನಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ಥಳ : ವಿದ್ಯಾರಣ್ಯ

ದಿನಾಂಕ : 8/8/2016

ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ

ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ

ಪ್ರಸ್ತಾವನೆ

ಮಾನವನ ಜೀವನದಲ್ಲಿ ಹಾಸುಹೊಕ್ಕಾಗಿರುವ ಕ್ರೀಡೆ ಮತ್ತು ವಿನೋದಾವಳಿಗಳು ಬದುಕಿನ ಮುಖ್ಯ ಭಾಗವಾಗಿರುವುದು ಗಮನಾರ್ಹ. ಇವು ಹವ್ಯಾಸ, ವ್ಯಾಯಾಮ, ಬೌದ್ಧಿಕ ಕಸರತ್ತಿನ ಪ್ರತೀಕಗಳು. ಮಾನವ ತನ್ನ ದುಡಿಮೆಯ ಜೊತೆಗೆ ನಲಿವನ್ನು ಹಂಚಿಕೊಳ್ಳಲು ಹಬ್ಬ, ಜಾತ್ರೆ, ಉತ್ಸವಗಳನ್ನು ಆಚರಿಸುತ್ತಾ ಬಂದಿದ್ದಾನೆ. ಮಕ್ಕಳಿಂದ ಮುದುಕರವರೆಗೆ, ಸಾಮಾನ್ಯನಿಂದ ಅರಸನವರೆಗೆ ಲಿಂಗಭೇದವಿಲ್ಲದೆ ತಮ್ಮ ಶಕ್ತಿಗನುಗುಣವಾಗಿ ಆಡುವ ಆಟ ಮತ್ತು ಮನರಂಜನೆಯೇ ಕ್ರೀಡೆ ಮತ್ತು ವಿನೋದಾವಳಿಗಳಾಗಿವೆ.

ಕ್ರೀಡೆ ಎನ್ನುವುದು ಸಂಸ್ಕೃತದ ಕ್ರೀಡಾ ಎನ್ನುವ ಧಾತುವಿನಿಂದ ಬಂದಿದೆ. ಅದಕ್ಕೆ ಆಟ, ವಿಲಾಸ, ವಿನೋದ ಎಂಬಿತ್ಯಾದಿ ಅರ್ಥಗಳಿವೆ. ದೇಹ, ಮನಸ್ಸು ಮತ್ತು ಬುದ್ಧಿಗಳ ಸಹಯೋಗದೊಂದಿಗೆ ಮಾಡುವ ಪ್ರತಿಯೊಂದು ಕೌಶಲ್ಯಯುತ ಕಾರ್ಯವೂ ಕ್ರೀಡೆಯೆಂದು ಕರೆಸಿಕೊಳ್ಳುತ್ತದೆ. ಕ್ರೀಡೆ ಎಲ್ಲರಲ್ಲೂ ಸಾಮಾನ್ಯವಾಗಿ ಇರುವ ಭಾವ ಪ್ರದರ್ಶಕ ನಡವಳಿಕೆಯ ಒಂದು ರೂಪ. ಕಲೆ, ಭಾಷೆ ಮತ್ತು ಧರ್ಮಗಳಂತೆ ಕ್ರೀಡೆಯು ಒಂದು ಸಂಕೀರ್ಣ ಪರಿಕಲ್ಪನೆ. ಸಮಾಜ ತಜ್ಞ ಕೋಜೂನ್ಸ್ ಹೇಳಿರುವಂತೆ "ಕ್ರೀಡೆಗಳು ಒಂದು ದೇಶದ ಜನರ ಬದುಕು, ಕೆಲಸ ಹಾಗೂ ಯೋಚನೆಗಳನ್ನು ಅರ್ಥಮಾಡಿಕೊಳ್ಳುವ ಮೈಲುಗಲ್ಲು. ಅಲ್ಲದೆ ಅವು ಒಂದು ದೇಶದ ಸಾಂಸ್ಕೃತಿಕ ಉನ್ನತಿಯ ಮಾಪಕಗಳು". ಸ್ಪೋರ್ಟ್ಸ್ ಎಂಬ ಪದವು ವಿನೋದ ಮತ್ತು ಮನರಂಜನೆ ಎಂಬ ಅರ್ಥದ ಜೊತೆಯಲ್ಲಿ ಮೋಜಿಗಾಗಿ ಚಟುವಟಿಕೆಯಲ್ಲಿ ತೊಡಗಿರುವುದೇ ಕ್ರೀಡೆ ಎಂದು ರಾಜೆಟ್ ವ್ಯಾಖ್ಯಾನಿಸಿದ್ದಾರೆ. ಶಿಕ್ಷಣ ತಜ್ಞ ಲುಶ್ಚನ್ ಅವರ ಪ್ರಕಾರ ಕ್ರೀಡಾ ಸಮಾಜ ವಿಜ್ಞಾನ, ಸಮಾಜ ಶಾಸ್ತ್ರದ ಒಂದು ಅಂಗ, ಸಂಶೋಧನೆಯ ಸಿದ್ಧಾಂತದನ್ವಯ ಕ್ರೀಡೆ ಒಂದು ಉಲ್ಲಾಸದ ತರ್ಕಬದ್ಧವಾದ ಪ್ರತಿಫಲಾಪೇಕ್ಷಿತ ಚಟುವಟಿಕೆಯಾಗಿದೆ. ಇವು ಪರಸ್ಪರ ಒಂದಕ್ಕೊಂದು ಪೂರಕವಾಗಿವೆ. ವಸ್ತುನಿಷ್ಠ ಹಾಗೂ ಸಾಮಾಜಿಕ ಪ್ರತಿಫಲವನ್ನು ಅವಲಂಬಿಸಿವೆ. ಕೆಲಸ ಹಾಗೂ ಆಟದ ಸಂಬಂಧವನ್ನು ಕಂಡುಕೊಳ್ಳುವ ಚಟುವಟಿಕೆಯೇ ಕ್ರೀಡೆಯಾಗಿದೆ.

ವಿನೋದಾವಳಿ ವಿನೋದ ಎನ್ನುವ ಸಂಸ್ಕೃತ ಪದವಾಗಿದ್ದು, ಮನಸ್ಸನ್ನು ಆಹ್ಲಾದಗೊಳಿಸಿ ಹರ್ಷವನ್ನು ನೀಡುವುದಾಗಿದೆ. ಹಾಗೆಯೇ ವಿನೋದವು ಹಾಸ್ಯಭರಿತ ಮತ್ತು ಸಂತೋಷಗೊಳಿಸುವ ಘಟನೆ ಅಥವಾ ಸಂದರ್ಭಗಳನ್ನು ಅನುಭವಿಸುವ ಸ್ಥಿತಿ. ಇದರಲ್ಲಿ ಆನಂದ, ಆಹ್ಲಾದ, ನಗೆ ಸುಖಗಳು ಹಾಸುಹೊಕ್ಕಾಗಿರುತ್ತವೆ.

ವಿನೋದ ಪದದ ಅರ್ಥವನ್ನು ನೋಡುವುದಾದರೆ, ಆನಂದ, ಪ್ರಮೋದ, ಸಂತೋಷಗಳಾಗಿವೆ; ವಿನೋದವೆಂದರೆ ಆನಂದಗೊಳಿಸುವುದು, ಸಂತೋಷಪಡಿಸುವುದು; ಆಟವಾಡಿ ಸಂತೋಷಪಡಿಸುವುದು, ಮನಸ್ಸನ್ನು ಬೇರೆ ಕಡೆ ತಿರುಗಿಸುವುದು; ವಿನೋದನೀಯ ಅಂದರೆ ಸಂತೋಷಪಡಿಸಲ್ಪಡುವವ. ಎಂಬ ಅರ್ಥಗಳಿವೆ. ಆವಳಿ ಅಂದರೆ ಸಾಲು, ಸಮೂಹ. ವಿನೋದ+ಆವಳಿ=ವಿನೋದಾವಳಿ ಅಂದರೆ ವಿನೋದಾವಳಿಗಳ ಸಮೂಹ ಅಥವಾ ಸಮುಚ್ಚಯ; ಮನಸ್ಸಿಗೆ ಮುದ ನೀಡುವ ಅಂಶಗಳ ಸಾಲು ಎಂದು ಅರ್ಥೈಸಬಹುದು. ಅಂದರೆ ಇತರರು ತೋರುವ ಆಟ ಅಥವಾ ಪ್ರದರ್ಶನಗಳನ್ನು ನೋಡಿ ಮನರಂಜನೆ ಪಡೆಯುವಂತಹವು. ಇವುಗಳನ್ನು ವಿನೋದ ಪ್ರದರ್ಶನಗಳೆಂದು ಕರೆಯಬಹುದು. ಇದರಲ್ಲಿ ಮನರಂಜನೆ ಪಡೆದವರು ಪ್ರೇಕ್ಷಕರಷ್ಟೆ. ಜಾತ್ರೆ, ರಥೋತ್ಸವ, ಹಬ್ಬಹರಿದಿನ ಸುಗ್ಗಿ, ಬಿಡುವಿನ ವೇಳೆ ಮುಂತಾದ ಸಂದರ್ಭಗಳಲ್ಲಿ ಜನರು ಸೇರಿದಾಗ ಅವರನ್ನು ವಿನೋದಪಡಿಸಲು ನೃತ್ಯ, ಸಂಗೀತ, ಕೋಲಾಟ, ಯಕ್ಷಗಾನ, ಭಜನೆ, ನಾಟಕ ಮುಂತಾದ ಪ್ರದರ್ಶನ ಏರ್ಪಡುತ್ತವೆ. ಹಾಗೆಯೇ ಅರಮನೆಗಳಲ್ಲಿ ತೆಪ್ಪೋತ್ಸವ, ನಾಮಕರಣ, ವಿವಾಹ, ಪಟ್ಟಾಭಿಷೇಕ, ವಿಜಯೋತ್ಸವ, ಗಣ್ಯವ್ಯಕ್ತಿಗಳ ಆಗಮನ ದೇವರ ಪೂಜೆ ಮುಂತಾದ ಸಂದರ್ಭಗಳಲ್ಲಿ ಮನರಂಜನಾ ಪ್ರದರ್ಶನಗಳು ನಡೆಯುವವು. ಇವೆಲ್ಲಪ್ರಕಾರಗಳ ಸಮುಚ್ಚಯವನ್ನು ವಿನೋದಾವಳಿಯೆಂದು ಕರೆಯಲಾಗಿದೆ. ಒಂದು ನಾಡಿನ ಸಂಸ್ಕೃತಿಯನ್ನು ಪರಿಚಯಿಸಿ ಬೆಳಗಿಸುವ ಹಬ್ಬ, ಜಾತ್ರೆ, ಉತ್ಸವ, ಸಂತೋಷ, ಸಮಾರಂಭಗಳಲ್ಲಿ ನಡೆಯುವ ಕಾರ್ಯಕ್ರಮಗಳೆಲ್ಲವೂ ವಿನೋದಾವಳಿಗಳಾಗಿವೆ. ವಿನೋದ ಯಾವುದೇ ಒಂದು ಕಾಲ ಮತ್ತು ದೇಶಕ್ಕೆ ಸೀಮಿತವಾಗಿಲ್ಲ. ಮನರಂಜನೆ ಎಲ್ಲರಿಗೂ ಅಗತ್ಯ. ಎಲ್ಲಾ ದೇಶಗಳಲ್ಲೂ ಹಬ್ಬ–ಉತ್ಸವ–ಆಚರಣೆಗಳಂತಹ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಜಗತ್ತಿನ ಎಲ್ಲ ದೇಶಗಳಲ್ಲೂ ಆಯಾ ಜನ ಸಮುದಾಯಗಳು ಹಾಗೂ ಅವರು ಅನುಸರಿಸುವ ಮತ ಧರ್ಮಗಳಿಗೆ ಅನುಸಾರವಾಗಿ ಹಬ್ಬ–ಉತ್ಸವಗಳು ರೂಪುಗೊಂಡಿವೆ.

ವಿಜಯನಗರ ಅವಧಿಯು ಕನ್ನಡಿಗರ ಸ್ಮೃತಿಪಟಲದಲ್ಲಿ ಎಂದೂ ಮರೆಯಲಾಗದ ಕಾಲವಾಗಿದೆ. ಇದು ಸ್ಥಾಪನೆಯಿಂದ ಅಂತ್ಯದವರೆಗೂ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಗಳ ಕೇಂದ್ರವಾಗಿದ್ದಿತು. ಸ್ಮಾರಕ ದೇಗುಲಗಳ ಮೇಲಿರುವ ಉಬ್ಬುಶಿಲ್ಪಗಳು ಕ್ರೀಡೆ, ನೃತ್ಯ, ಸಂಗೀತ, ಬೇಟೆ ಮುಂತಾದವುಗಳಿಗೆ ಸಂಬಂಧಿಸಿವೆ. ವಿದೇಶಿ ಪ್ರವಾಸಿ ಪಾಯೇಸ್ ಅರಮನೆಯ ಕುಟುಂಬದ ಸ್ತ್ರೀಯರಿಗಾಗಿಯೇ ನರ್ತನ ಶಾಲೆಯೊಂದಿತ್ತು. ಅಲ್ಲಿಗೆ ಅರಸನು ತನ್ನ ಸ್ತ್ರೀಯರನ್ನು ನೃತ್ಯ ಕಲಿಯಲು ಕಳುಹಿಸಿಕೊಡುತ್ತಿದ್ದನು ಎಂದು ಹೇಳಿದ್ದಾನೆ.[೧] ಈ ಅರಮನೆಯ ನಾಟ್ಯದ ಹಜಾರವು ಕರ್ನಾಟಕ ದೇಶದಲ್ಲಿ 'ಪಟ್ಟದ ನಾಟಕ ಶಾಲೆ' ಎಂದು ಪರಿಚಯವಾಗಿತ್ತು.[೨]

ಅರಸ ಹಾಗೂ ಪ್ರಾಂತ್ಯಗಳನ್ನು ಆಳುತ್ತಿದ್ದ ಶ್ರೀಮಂತರಲ್ಲಿ ಜನ್ಮದಿನದ ಉತ್ಸವ ಸಮಾರಂಭಗಳು ಸಾಮಾನ್ಯವಾಗಿದ್ದವು. ಮಹಾನವಮಿ ಉತ್ಸವ, ದೀಪಾವಳಿ ಹಬ್ಬ ಅರಸನ ಪಟ್ಟಾಭಿಷೇಕ ಸಮಾರಂಭಗಳು ಹಾಗೂ ರಾಜನ ಆಸ್ಥಾನದಲ್ಲಿ ನೃತ್ಯಾಂಗನೆಯರು ಪ್ರಮುಖವಾಗಿ ಕಾಣಿಸಿಕೊಳ್ಳುತ್ತಿದ್ದರು. ನರ್ತನ, ಗಾಯನಗಳಲ್ಲಿ ಮತ್ತು ಪುರುಷರನ್ನು ರಂಜಿಸುವಲ್ಲಿ ಇರುವ ತಮ್ಮ ಕಲಾತ್ಮಕ ಪ್ರತಿಭೆಗಳಿಂದಾಗಿ ಸಮಾಜದಲ್ಲಿ ಪ್ರಮುಖ ಸ್ಥಾನಮಾನವನ್ನು ಹೊಂದಿದಂತೆ ತೋರುವ ವಿಜಯನಗರದ ವೇಶ್ಯೆಯರ ಬಗ್ಗೆ ನಮಗೆ ವಿದೇಶಿ ಪ್ರವಾಸಿಗರಿಂದ ಅನೇಕ

ಕಥನಗಳು ದೊರೆಯುತ್ತವೆ. ದೇವಾಲಯ ಹಾಗೂ ಅರಮನೆಗೆ ಸೇರಿದ ನೃತ್ಯಾಂಗನೆಯರಿದ್ದಾರೆ. ಹಬ್ಬ ಹರಿದಿನಗಳಲ್ಲಿ ಅವರನ್ನು ಆಹ್ವಾನಿಸಲಾಗುತ್ತದೆ.[೬] ಹೀಗೆ ಇನ್ನೂ ಅನೇಕ ರೀತಿಯ ವಿನೋದಾವಳಿಗಳು ಅರಮನೆಯಿಂದ ಹಿಡಿದು ಜನಸಾಮಾನ್ಯರವರೆಗೂ ಇದ್ದವೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಅವುಗಳನ್ನು ದೇವಾಲಯಗಳ ಮೇಲಿನ ಶಿಲ್ಪ, ವರ್ಣಚಿತ್ರ, ಶಾಸನ, ಸಾಹಿತ್ಯ ಕೃತಿಗಳಿಂದ ದೃಢಪಡಿಸಬಹುದು.

ವಿಜಯನಗರ ಅರಸರು ಬೇಟೆಯನ್ನು ವಿನೋದದ ದೃಷ್ಟಿಯಿಂದ ಆಡುತ್ತಿದ್ದರು. ಅಂದಿನ ರಾಜರು ಬೇಟೆಯಲ್ಲಿ ಎಂತಹ ಪ್ರಾವಿಣ್ಯತೆ ಹೊಂದಿದ್ದರೆಂಬುದಕ್ಕೆ ಅವರಿಗಿದ್ದ ಬಿರುದುಗಳೇ ಸಾಕ್ಷಿಯಾಗಿವೆ. ಬೇಟೆಗಾರಿಕೆ ಅರಸರು ತಮ್ಮೊಂದಿಗೆ ಅನುಸರಿಸಿಕೊಂಡು ಬಂದ ಒಂದು ಪ್ರಾಚೀನ ಕಲೆ. ಇದೊಂದು ವಿನೋದವು ಆಗಿದ್ದಿತು. ಎರಡನೆಯ ದೇವರಾಯ 'ಗಜವೇಂಟೆಕಾರ', 'ಅಪ್ರತಿಮ ಬಿರುದಂಕ ಗಜವೇಂಟೆಕಾರ ದೇವೇಂದ್ರ' ಎಂಬ ಬಿರುದುಗಳಿಂದ ಪ್ರಸಿದ್ಧಿ ಹೊಂದಿದದ್ದನು, ಹಾಗೆಯೇ ತಮಿಳು ಶಾಸನಗಳಲ್ಲಿ ಅವನನ್ನು ಗಜವೇಟ್ಟೈಕಾರನ್, ಗಜವೇಟ್ಟೈ ಕಣ್ಡ, ಗಜವೇಟ್ಟೈ ಖಂಡು, ಕೆಸವೆಟ್ಟೈಕಕಂಡುರುಳಿಯ ಎಂದು ಕರೆಯಲಾಗಿದೆ.[೭] ಉಮ್ಮತ್ತೂರಿನ ಮಹಾಮಂಡಳೇಶ್ವರ ನಂಜರಾಜ ಒಡೆಯ, ಸೋಮರಾಜ ಒಡೆಯ, ದೇವಣ್ಣ ಒಡೆಯರಿಗೆ 'ಗಜವೇಂಟೆಕಾರ' ಎಂಬ ಬಿರುದಿತ್ತು.[೮] ಮಹಾನವಮಿ ದಿಬ್ಬ ಹಾಗೂ ಹಜಾರ ರಾಮಚಂದ್ರ ದೇವಾಲಯದ ಪ್ರಾಕಾರದ ಮೇಲೆ ಕಡೆಯಲಾದ ಉಬ್ಬು ಕೆತ್ತನೆಗಳಲ್ಲಿ ಬೇಟೆ, ಕೋಲಾಟ, ಓಕುಳಿಯಾಟ ಮೊದಲಾದವುಗಳು ಇದಕ್ಕೆ ಪುಷ್ಟಿ ನೀಡುತ್ತವೆ.

ಆಯುಧಗಳ ಸಹಾಯವಿಲ್ಲದೆ ಕೇವಲ ದೈಹಿಕ ಶಕ್ತಿ ಮತ್ತು ಯುಕ್ತಿಯಿಂದ ಒಬ್ಬನೊಡನೆ ಸೆಣಸಾಡುವ ಕ್ರೀಡೆ ಕುಸ್ತಿ ಅಥವಾ ಮಲ್ಲಯುದ್ಧ. ಈ ಕ್ರೀಡೆಯು ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಖ್ಯಾತವಾಗಿತ್ತು.[೯] ಇದಕ್ಕೆ ವಿದೇಶಿ ಪ್ರವಾಸಿಗರ ಬರಹಗಳು, ದೇವಾಲಯ ಮತ್ತು ಕಟ್ಟಡಗಳ ಮೇಲಿನ ಉಬ್ಬು ಕೆತ್ತನೆಗಳು ಸಾಕ್ಷ್ಯಗಳಾಗಿವೆ. ಅಂದಿನ ಸಾಹಿತ್ಯದಲ್ಲೂ ಕ್ರೀಡೆ ಮತ್ತು ವಿನೋದಾವಳಿಗಳ ಅನೇಕ ನಿದರ್ಶನ ಹಾಗೂ ವರ್ಣನೆಗಳಿವೆ. ಇದಕ್ಕೆ ನಂಜುಂಡ ಕವಿಯ ರಾಮನಾಥ ಚರಿತೆ, ಕನಕದಾಸರ ಮೋಹನ ತರಂಗಿಣಿ ಇತ್ಯಾದಿ ಕೃತಿಗಳನ್ನು ಗಮನಿಸಬಹುದು. ಇವುಗಳಲ್ಲಿ ಅಂದಿನ ಜನರ ಜೀವನ, ಸಂಸ್ಕೃತಿ, ಕ್ರೀಡೆ, ಹಬ್ಬ, ಉತ್ಸವಗಳ ಉಲ್ಲೇಖಗಳಿವೆ. ಪಗಡೆಯಾಟ, ಮೂರು ಮನೆಯಾಟ, ಹುಲಿಮನೆಯಾಟ, ಕುಸ್ತಿ, ಚಿನ್ನಿಕೋಲು, ಬುಗರಿ, ಗೋಲಿಯಾಟ, ಗುಂಡು ಎಸೆತ, ಕೋಳಿ ಕಾಳಗ ಮುಂತಾದ ಕ್ರೀಡೆಗಳು ಪ್ರಚಲಿತವಾಗಿದ್ದುದನ್ನು ಕಾಣಬಹುದು.

ಹಬ್ಬ, ಜಾತ್ರೆ, ಉತ್ಸವಗಳ ಸಂದರ್ಭದಲ್ಲಿ ಅಳವಡಿಸಿಕೊಂಡಿದ್ದ ಸಂಗೀತ, ನೃತ್ಯ, ನಾಟಕ, ಕೋಲಾಟ, ಕೊರವಂಜಿ ಕುಣಿತ, ದೊಂಬರಾಟ ಮೊದಲಾದ ವಿನೋದಾವಳಿಗಳನ್ನು ವಿದೇಶಿ ವರದಿ, ಐತಿಹ್ಯ ಹಾಗೂ ಸಾಹಿತ್ಯ ಕೃತಿಗಳಲ್ಲಿ ಕಾಣುತ್ತೇವೆ. ಈ ಬಗೆಯ ಎಲ್ಲ ಆಕರಗಳ ಹಿನ್ನೆಲೆಯಲ್ಲಿ ವಿಜಯನಗರ ಕಾಲದಲ್ಲಿ ಆಚರಿಸಿ ಅನುಸರಿಸುತ್ತಿದ್ದ ಕ್ರೀಡೆ ಮತ್ತು ವಿನೋದಾವಳಿಗಳ ಕುರಿತ ಸಮಗ್ರ ಅಧ್ಯಯನವೇ ಪ್ರಸ್ತುತ '**ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ**'ಯಾಗಿದೆ.

ಅಧ್ಯಯನದ ಉದ್ದೇಶ

ಇತಿಹಾಸದ ಅಧ್ಯಯನವು ಇಂದು ವೈಚಾರಿಕ ಮತ್ತು ವೈಜ್ಞಾನಿಕ ದೃಷ್ಟಿಕೋನದತ್ತ ಸಾಗಿದೆ. ಕ್ರಿ.ಶ.೧೩೩೬ರಲ್ಲಿ ಸ್ಥಾಪನೆಯಾದ ಈ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದ ಹಂಪಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಒಂದು ಪ್ರಬಲ ಅರಸುಮನೆತನವಾಗಿ ಆಳ್ವಿಕೆ ಮಾಡಿತು. ಇಂತಹ ಸಾಮ್ರಾಜ್ಯದ ಕುರಿತು ವಿವಿಧ ಮಗ್ಗಲುಗಳಲ್ಲಿ ಅಧ್ಯಯನಗಳು ನಡೆದಿವೆ ಹಾಗೂ ನಡೆಯುತ್ತಲಿವೆ. ಅಂದಿನ ಅರಸರ ರಾಜಕೀಯ, ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪ, ಯುದ್ಧ, ಸೈನ್ಯವ್ಯವಸ್ಥೆ, ವ್ಯಾಪಾರಗಳಿಗೆ ಸಂಬಂಧಿಸಿದಂತೆ ಹೆಚ್ಚು ಅಧ್ಯಯನಗಳಾಗಿವೆ. ಅಂದಿನ ಅರಸರು ಕೇವಲ ಮೇಲ್ಕಾಣಿಸಿದ ಅಂಶಗಳಿಗೆ ಒತ್ತು ಕೊಟ್ಟಿರಲಿಲ್ಲ, ವಿರಾಮದ ಸಮಯವನ್ನು ಕ್ರೀಡೆ, ಧಾರ್ಮಿಕ ವಿಧಿಗಳಿಗನುಗುಣವಾಗಿ ಹಬ್ಬ-ಉತ್ಸವ, ಜಾತ್ರೆಗಳಂತಹ ಕಾರ್ಯಕ್ರಮಗಳಿಗೆ ಮಿಸಲಾಗಿಟ್ಟಿದ್ದರು. ಅರಸರಾದಿಯಾಗಿ ಸಾಮಾನ್ಯ ಪ್ರಜೆಗಳು ಇವುಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವಿಷಯದ ಕುರಿತ ಅಧ್ಯಯನವು ಅತ್ಯಗತ್ಯವಾಗಿದೆ.

ಕ್ರೀಡೆಯಾಡುತ್ತಿದ್ದ ವಿಧಾನ, ಸಮಯ, ಸಂದರ್ಭಗಳೂ ಅತಿಮುಖ್ಯವಾಗಿದೆ ಹಾಗೆಯೇ ಅಂದು ಅರಸರು ಪೋಷಿಸಿ ಬೆಳಸಿದ ಕ್ರೀಡೆಗಳು ಯಾವುವು? ಅವುಗಳ ಕಟ್ಟುಪಾಡುಗಳೇನು? ಕ್ರೀಡೆಗೆ ಬಳಸುತ್ತಿದ್ದ ಉಪಕರಣಗಳಾವುವು? ಜೊತೆಗೆ ಸಾಮನ್ಯವರ್ಗದವರು ಆಯ್ಕೆಮಾಡಿಕೊಂಡ ಕ್ರೀಡೆಗಳು ಮತ್ತು ಅವುಗಳ ವಿಧಿವಿಧಾನಗಳು ಏನು? ಎಂಬುದನ್ನು ಅರಿಯುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಹಬ್ಬ, ಜಾತ್ರೆ, ಉತ್ಸವಗಳನ್ನು ಹೇಗೆ ಆಚರಿಸುತ್ತಿದ್ದರು, ಅಂತಹ ವೇಳೆಯಲ್ಲಿ ವಿನೋದವನ್ನು ಪಡೆಯಲು ಇವುಗಳ ಮೊರೆ ಹೋದ ಬಗೆ, ಯಾವ ರೀತಿ ಮನರಂಜನೆಯನ್ನು ಅರಸರಾದಿಯಾಗಿ ಜನಸಾಮಾನ್ಯರು ಪಡೆಯುತ್ತಿದ್ದರು ಎಂಬುದನ್ನು ತಿಳಿಯವ ಪ್ರಯತ್ನವನ್ನು ಮಾಡಲಾಗಿದೆ. ಹೀಗೆ ಪುರುಷ, ಮಕ್ಕಳು, ಮಹಿಳೆಯರಾದಿಯಾಗಿ ಎಲ್ಲಾ ವರ್ಗದವರು ಕ್ರೀಡೆ ವಿನೋದಾವಳಿಯಲ್ಲಿ ಭಾಗವಹಿಸುತ್ತಿದ್ದ ಪದ್ಧತಿ ಮತ್ತು ಕ್ರಮ, ಕ್ರೀಡೆಯಾಡುವ ತಂತ್ರ, ಅರಸರ ಪಾತ್ರ ಇವೇ ಮುಂತಾದ ವಿವರವನ್ನು ಆಕರಗಳ ಹಿನ್ನೆಲೆಯಲ್ಲಿ ಚರ್ಚಿಸಿ ವಿಶ್ಲೇಷಿಸುವುದರ ಜೊತೆಗೆ ಫಲಿತಗಳನ್ನು ಅರಿಯುವುದು ಆಧ್ಯಯನದ ಪ್ರಮುಖ ಉದ್ದೇಶವಾಗಿದೆ.

ವ್ಯಾಪ್ತಿ

ಯಾವುದೇ ಒಂದು ಅಧ್ಯಯನಕ್ಕೆ ವ್ಯಾಪ್ತಿ ಅಗತ್ಯ. ಪ್ರಸ್ತುತ ಮಹಾಪ್ರಬಂಧವನ್ನು ಸಾಮ್ರಾಜ್ಯದ ಆಳ್ವಿಕೆಯ ಕಾಲವೆಂದು ತಿಳಿಯಲಾದ ಕ್ರಿ.ಶ. ೧೩೩೬ ರಿಂದ ೧೫೬೫ರವರೆಗೆ ಸೀಮಿತಗೊಳಿಸಲಾಗಿದೆ, ಹಂಪಿ ಪರಿಸರಕ್ಕೆ ಹೆಚ್ಚು ಒತ್ತು ನೀಡಲಾಗಿದ್ದು, ಅಧ್ಯಯನದ ಅವಶ್ಯಕತೆ, ಸಂದರ್ಭಕ್ಕನುಗುಣವಾಗಿ, ಅವರ ಆಳ್ವಿಕೆಯ ಪ್ರದೇಶಗಳಾದ ಆಂಧ್ರ, ತಮಿಳುನಾಡಿನಲ್ಲಿ ನಡೆದ ಸಂಗತಿ ಹಾಗೂ ವಿಜಯನಗರ ಪೂರ್ವ ಮತ್ತು ಉತ್ತರ ಕಾಲದ ವಿಷಯಗಳನ್ನು ಬಳಸಿಕೊಳ್ಳಲಾಗಿದೆ.

ಸಂಶೋಧನೆಗೆ ಆಕರಗಳು ಪ್ರಮುಖವಾಗುತ್ತವೆ. ಈ ಅಧ್ಯಯನದಲ್ಲಿ ವಿಜಯನಗರ ಸಾಹಿತ್ಯ ಕೃತಿ, ವಿದೇಶಿ ಪ್ರವಾಸಿಗರ ವರದಿ, ಶಾಸನ, ಶಿಲ್ಪ, ವೀರ–ಮಹಾಸತಿಗಲ್ಲು ಉತ್ಖನನ ವರದಿ– ಇವೇ ಮುಂತಾದ ಪ್ರಾಥಮಿಕ ಆಕರಗಳಾಗಿ ನೆರವಾಗಿವೆ. ಸಾಹಿತ್ಯ ಕೃತಿಗಳಲ್ಲಿ ಗಂಗಾದೇವಿಯ ಮಧುರಾವಿಜಯಂ ಅರಸ ಅರಸಿಯರ ನೀರಾಟದ ಸಂಪೂರ್ಣ ಚಿತ್ರ ಕಟ್ಟಿ ಕೊಡುತ್ತದೆ. ಕೊಮಾರ ರಾಮಯ್ಯನ ಚರಿತೆ, ಹೊಸ ಕುಮಾರ ರಾಮನ ಸಾಂಗತ್ಯ– ಇವು ಅಂದಿನ ದೈಹಿಕ ಮತ್ತು ಬೌದ್ಧಿಕ ಕ್ರೀಡೆಗಳ ವಿವರ ನೀಡುತ್ತವೆ. ನಂಜುಡ ಕವಿಯ ರಾಮನಾಥ ಚರಿತವು ಕಂಪಿಲರಾಯ ಮತ್ತು ಅವನ ಮಗ ಕುಮಾರ ರಾಮನಿಗೆ ಸಂಬಂಧಿಸಿದ್ದರೂ, ಅದರಲ್ಲಿ ವ್ಯಕ್ತವಾಗಿರುವ ಕ್ರೀಡೆ ವಿನೋದಾವಳಿಗಳ ಘಟನೆಗಳು ವಿಜಯನಗರ ಕಾಲದ ಚಿತ್ರಣಗಳೇ ಆಗಿವೆ. ಈ ಕವಿಯು ವಿಜಯನಗರ ಅವಧಿಯಲ್ಲಿ ಜೀವಿಸಿದ ಕವಿಯಾದ್ದರಿಂದ ಅಂದು ನಡೆದ ಘಟನೆಗಳನ್ನು ತನ್ನ ಕೃತಿಯಲ್ಲಿ ಪ್ರತಿಬಿಂಬಿಸಿರುವನು. ಈ ಮೇಲಿನ ಕೃತಿಗಳಂತೆ ಭೀಮಕವಿಯ ಬಸವಪುರಾಣ, ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ, ಕನಕದಾಸರ ಮೋಹನ ತರಂಗಿಣಿ ಇನ್ನು ಮುಂತಾದ ಕೃತಿಗಳು ವಿಜಯನಗರ ಕಾಲದ ಕ್ರೀಡೆ ಮತ್ತು ವಿನಾದಾವಳಿ ಅಧ್ಯಯನಕ್ಕೆ ಪೂರಕವಾಗಿವೆ.

ಸಾಹಿತ್ಯ ಆಕರಗಳಲ್ಲದೆ ವಿಜಯನಗರ ಆಳ್ವಿಕೆಯ ಅವಧಿಯಲ್ಲಿ ಭೇಟಿ ನೀಡಿದ ವಿದೇಶಿ ಪ್ರಾವಾಸಿಗರ ವರದಿಗಳು ಈ ಚರಿತ್ರೆಗೆ ಪುಷ್ಟಿಕೊಡುವಂತಹ ಆಕರ ಸಾಮಗ್ರಿಗಳಾಗಿವೆ.

ಸ್ವತಃ ಭೇಟಿ ನೀಡಿ ಇಲ್ಲಿ ಕಂಡಂತಹ ಹಬ್ಬ–ಉತ್ಸವ, ಜಾತ್ರೆ, ರಥೋತ್ಸವಗಳಲ್ಲಿ ನಡೆಯುವ ಆಚರಣೆ, ಕ್ರೀಡೆ ಮುಂತಾದ ವಿನೋದಗಳನ್ನು ಈ ಪ್ರವಾಸಿಗರು ಮನದಣಿಯೆ ವರ್ಣಿಸಿದ್ದಾರೆ. ಅಂತಹವರಲ್ಲಿ ಅಥನೇಷಿಯಸ್ ನಿಕಿಟಿನ್, ನಿಕೊಲೊಕೊಂತಿ, ಅಬ್ದುರ್ ರಜಾಕ್, ಡೊಮಿಂಗೋ ಪಾಯೇಸ್, ಡುಯೆರ್ಟೆ ಬಾರ್ಬೊಸಾ, ಫೆರ್ನಾವೊ ನ್ಯೂನಿಜ್, ಸೀಜರ್ ಫ್ರೆಡರಿಕ್ ಪ್ರಮುಖರು. ಇವರ ವರದಿಗಳಲ್ಲಿ ಕ್ರೀಡೆ ಮತ್ತು ವಿನೋದಾವಳಿಗೆ ಇಂಬು ಕೊಡುವಂತಹ ಅಂಶಗಳು ವ್ಯಕ್ತಗೊಂಡಿವೆ.

ಸಾಹಿತ್ಯ ಮತ್ತು ಪ್ರವಾಸಿಗರ ವರದಿಗಳಲ್ಲಿ ಉಲ್ಲೇಖವಾದ ಘಟನೆಗಳನ್ನು ಸಮರ್ಥಿಸುವಲ್ಲಿ ಪ್ರಾಕ್ತನ ಆಕರಗಳು ಮಹತ್ವದ ಪಾತ್ರವಹಿಸುತ್ತವೆ. ಇವು ಪ್ರಮುಖ ಪ್ರಾಥಮಿಕ ಆಕರಗಳು ಹೌದು. ಅಂತಹುಗಳಲ್ಲಿ ಶಾಸನ, ಸ್ಮಾರಕ, ಶಿಲ್ಪ, ಚಿತ್ರಕಲೆ, ವೀರಗಲ್ಲು, ದೇವಾಲಯಗಳ ಮೇಲಿನ ಉಬ್ಬು ಶಿಲ್ಪಗಳು ಮತ್ತು ಜಗುಲಿಯ ಮೇಲಿರುವ ಗೆರೆಯಾಟದ ಹಾಸುಪಟಗಳು ಮುಖ್ಯವಾಗಿವೆ. ಶಾಸನಗಳು ಅಂದಿನ ಹಬ್ಬ–ಉತ್ಸವ, ಜಾತ್ರೆ, ರಥೋತ್ಸವದ ಆಚರಣೆಗಳಿಗೆ ಬಿಟ್ಟ ದಾನದತ್ತಿಯ ವಿವರಗಳನ್ನೊಳಗೊಂಡಿವೆ. ಇವರ ಬಿರುದಾವಳಿಗಳು ಇವರ ಕ್ರೀಡಾಸ್ಫೂರ್ತಿಗೆ ದಾಖಲೆಗಳಾಗಿವೆ. ದೇವಾಲಯದ ಬಿತ್ತಿ, ಕಂಬಗಳ ಮೇಲಿನ ಉಬ್ಬು ಶಿಲ್ಪಗಳು, ಮುಂದಿನ ಜಗುಲಿಗಳ ಮೇಲೆ ಕೊರೆದಿರುವ ಕ್ರೀಡೆಯ ಹಾಸುಪಟಗಳು ಅಂದಿನ ಕ್ರೀಡೆ ಮತ್ತು ವಿನೋದಾವಳಿಯ ನೈಜ ಚಿತ್ರಣಗಳಾಗಿವೆ. ನೃತ್ಯ, ಕೋಲಾಟ, ಕತ್ತಿವರಸೆ, ಕುಸ್ತಿ, ವಾದ್ಯನುಡಿಸುವ, ಹೋಳಿಯಾಟ. ಅವರ ಉಡುಗೆ ತೊಡಿಗೆ ಸಮಕಾಲೀನ ಸ್ಥಿತಿಯನ್ನು ಪ್ರತಿಬಿಂಬಿಸುತ್ತವೆ.

ಇಂತಹ ಕೆತ್ತನೆಗಳು ಹಂಪಿಯ ಹಜಾರರಾಮಚಂದ್ರ, ಬಾಲಕೃಷ್ಣ, ವಿಜಯವಿಠಲ, ವಿರೂಪಾಕ್ಷ, ಅಚ್ಯುತ, ರಘುನಾಥ, ಅನಂತಶಯನ ದೇವಸ್ಥಾನಗಳಲ್ಲಿವೆ. ಮಹಾನವಮಿ ದಿಬ್ಬ

ಈ ಅಧ್ಯಯನಕ್ಕೆ ಒಂದು ದಾಖಲೆಯಾಗಿದೆ. ಆಂಧ್ರದ ಲೇಪಾಕ್ಷಿಯ ವೀರಭದ್ರ, ಗೋರಂಟ್ಲದ ಮಾಧವರಾಯ, ಕದರಿಯ ನರಸಿಂಹ, ಪೆನುಗೊಂಡದ ರಾಮಭದ್ರ, ತಾಡಪತ್ರಿಯ ಬುಗ್ಗಾರಾಮಲಿಂಗೇಶ್ವರ, ಚಿಂತಾಲ ವೇಂಕಟರಮಣ ದೇವಾಲಯಗಳ ಮೇಲಿನ ಉಬ್ಬು ಶಿಲ್ಪಗಳು, ಅವುಗಳ ಮುಂದಿರುವ ಕ್ರೀಡೆಯ ನಕಾಶೆಗಳಿಂದ ಇನ್ನು ಮುಂತಾದ ವಿಷಯಗಳನ್ನು ಅರಿಯಬಹುದು. ಈ ಎಲ್ಲಾ ಪ್ರಮುಖ ಆಕರಗಳು ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿಯ ಅಧ್ಯಯನಕ್ಕೆ ಪುಷ್ಟಿದಾಯಕವಾಗಿವೆ.

ಅಧ್ಯಯನದ ವಿಧಾನ

ಸಂಶೋಧನೆ ಮಾಡುವ ಮುನ್ನ ಅಧ್ಯಯನದ ವಿಧಾನ ಪ್ರಮುಖವಾಗುತ್ತದೆ. ಅದರಂತೆ ಪ್ರಸ್ತುತ ಅಧ್ಯಯನ ಆರಂಭಿಸುವ ಮುನ್ನ ವಿಜಯನಗರ ಸಾಮ್ರಾಜ್ಯ ಕುರಿತು ಗ್ರಂಥಗಳ ಸೂಚಿಯನ್ನು ತಯಾರಿಸಿ ಅಧ್ಯಯನ ವಿಷಯಗಳ ಸಮೀಕ್ಷೆ ನಡೆಸಲಾಗಿದೆ. ಇದುವರೆಗೂ ನಡೆದ ಹಾಗೂ ನಡೆಯಬೇಕಾದ ಅಧ್ಯಯನಗಳನ್ನು ಹಲವು ವಿದ್ವಾಂಸರೊಂದಿಗೆ ಚರ್ಚಿಸಿ ಪ್ರಸ್ತುತ ವಿಷಯವನ್ನು ಅಧ್ಯಯನ ಯೋಗ್ಯವೆಂದು ತಿಳಿದು ಆಯ್ದುಕೊಳ್ಳಲಾಯಿತು. ವಿಷಯದ ಆಯ್ಕೆಯು ಅಧಿಕೃತಗೊಂಡ ಬಳಿಕ ಅದರ ಬಗೆಗೆ ಅಧ್ಯಯನಗಳತ್ತ ಗಮನಹರಿಸಿ ಕ್ರೀಡೆ ಮತ್ತು ವಿನೋದಾವಳಿಗಳು ಯಾವ ಯಾವ ಅಂಶಗಳು ಒಳಗೊಳ್ಳಬೇಕೆಂಬುದರ ಪಟ್ಟಿ ತಯಾರಿಸಲಾಯಿತು. ನಂತರ ವಿಷಯದ ಬಗೆಗಿನ ಅಧ್ಯಯನಗಳನ್ನು ಗಮನಿಸಿ ಅಧ್ಯಯನ ಯೋಗ್ಯ ಅಂಶಗಳು, ಮಾಹಿತಿ ಸಂಗ್ರಹಣಾ ಪಟ್ಟಿಕೆಗಳ ವಿಷಯ ಮತ್ತು ಕಾಲಾನುಕ್ರಮಗಳಿಗೆ ಅನುಗುಣವಾಗಿ ದಾಖಲಿಸಿಕೊಂಡು ವಿಜಯನಗರ ಕಾಲದ ಪ್ರಾಥಮಿಕ ಆಕರಗಳಲ್ಲಿ ಸಾಹಿತ್ಯ ಕೃತಿಗಳಾದ ಕನಕದಾಸನ ಮೋಹನ ತರಂಗಿಣಿ, ಕೊಮಾರ ರಾಮಯ್ಯನ ಚರಿತ್ರೆ, ಪ್ರವಾಸಿಗರ ವರದಿಗಳು ಮತ್ತು ಶಾಸನಗಳಲ್ಲಿ ಉಲ್ಲೇಖವಾದ ಕ್ರೀಡೆ ಮತ್ತು ವಿನೋದಾವಳಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಯಥಾಪ್ರಕಾರ ವಿಷಯ, ಕಾಲಕ್ಕೆ ಅನುಗುಣವಾಗಿ ದಾಖಲಿಸಿಕೊಂಡು, ಕ್ಷೇತ್ರ ಕಾರ್ಯದ ಮೂಲಕ ವಿಜಯನಗರದರಸರು ನಿರ್ಮಿಸಿದ ಪ್ರಮುಖ ದೇವಾಲಯ, ಸ್ಮಾರಕ, ಕೋಟೆ ಕೊತ್ತಲಗಳಲ್ಲಿಯ ಶಿಲ್ಪಗಳನ್ನು ಅಧ್ಯಯನಕ್ಕೊಳಪಡಿಸಿ ವಿಶ್ಲೇಷಿಸಲಾಗಿದೆ.

ಹೀಗೆ ಚರಿತ್ರೆಗೆ ನೆರವಾಗುವ ಎಲ್ಲ ಬಗೆಯ ಆಕರಗಳನ್ನು ಸಂದರ್ಭಾನುಸಾರ ಬಳಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನಗಳ ಸಮೀಕ್ಷೆ

ಕ್ರೀಡೆ ಮತ್ತು ವಿನೋದಾವಳಿ ಕುರಿತು ಪ್ರತ್ಯೇಕ ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು. ಆದರೆ ಅಧ್ಯಯನದ ಒಂದು ವಿಭಾಗವಾಗಿ ಕೆಲವು ವಿದ್ವಾಂಸರು ತಮ್ಮ ಕೃತಿಗಳಲ್ಲಿ ಸಂದರ್ಭೋಚಿತವಾಗಿ ಅಭ್ಯಸಿಸಿರುವರು ಅಂತಹವರಲ್ಲಿ ಸಾಲೇತೊರೆ ಬಿ.ಎ. ಅವರ *ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ದ ವಿಜಯನಗರ ಎಂಪಾಯಿರ್* ಎಂಬ ಕೃತಿಯಲ್ಲಿ. ವಿಜಯನಗರ ಕಾಲದಲ್ಲಿ ಆಚರಿಸುತ್ತಿದ್ದ ಹಬ್ಬ-ಉತ್ಸವ, ಜಾತ್ರೆ, ನೃತ್ಯ, ಕ್ರೀಡೆ, ಸಂಗೀತದ ಕುರಿತು ಒಂದು ಅಧ್ಯಾಯಯದಲ್ಲಿ ಚರ್ಚಿಸಿದ್ದಾರೆ. ಅಂದು ಅರಸರಾದಿಯಾಗಿ ಸಾಮಂತರು ಹಬ್ಬ, ಉತ್ಸವಗಳಿಗೆ ದಾನದತ್ತಿ ಬಿಟ್ಟ ವಿವರ, ಸಾಮಾನ್ಯರಾದಿಯಾಗಿ ಅರಸರು ವಿರಾಮದ

ವೇಳೆಯಲ್ಲಿ ಯಾವ ರೀತಿಯ ಕ್ರೀಡೆಗಳನ್ನು ಆಡುತ್ತಿದ್ದರು. ಜಾತ್ರೆ, ಉತ್ಸವಗಳಂದು ದೇವಾಲಯಗಳಲ್ಲಿ ಯಾವ ವಿಧದ ವಿನೋದ ಪಡೆಯುತ್ತಿದ್ದರು. ದೇವಾಲಯಗಳಲ್ಲಿ ಸಂಗೀತ, ನೃತ್ಯ ನಾಟಕಗಳನ್ನು ಏರ್ಪಡಿಸುವ ವಿಧಾನ ಇತ್ಯಾದಿ ಅಂಶವನ್ನು ಶಾಸನ, ಸಾಹಿತ್ಯ, ವಿದೇಶಿ ಪ್ರವಾಸಿಗರ ವರದಿಗಳನ್ನು ಕೊಡುತ್ತಾ ಚರ್ಚಿಸಿದ್ದಾರೆ.

ಅಣ್ಣಾ ಎಲ್ ದಲ್ಲಾಪಿಕೊಲ್ಲಾ, ಅನಿಲವರ್ಗೀಸ್ ಅವರ *ಸ್ಕಲ್ಪ್ಚರ್ ಅಟ್ ವಿಜಯನಗರ ಐಕೋನಗ್ರಫಿ ಅಂಡ್ ಸ್ಟೈಲ್* ಎಂಬ ಕೃತಿಯಲ್ಲಿ ಅಂದಿನ ದೇವಾಲಯ, ಸ್ಮಾರಕ, ಕೋಟೆ, ಕಲ್ಯಾಣಿ, ಭವನಗಳ ಮೇಲಿರುವ ಶಿಲ್ಪಗಳು, ಸಂಗೀತಗಾರರು, ವಾದ್ಯಗಳು, ನೃತ್ಯಗಾರರು, ಬೇಟೆಯ ಚಿತ್ರಣ, ಉತ್ಸವ, ಮೆರವಣಿಗೆ, ಅವರ ಉಡಿಗೆ, ತೊಡಿಗೆ, ಕುಸ್ತಿ, ಕತ್ತಿವರಸೆ, ದೊಂಬರಾಟದ ಶಿಲ್ಪಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ರೆಡ್ಡೆಪ್ಪ ಕೆ. ಅವರ *ಮೆಟಿರಿಯಲ್ ಕಲ್ಚರ್ ಡಿಪಿಕ್ಟಡ್ ಇನ್ ಇನ್ ವಿಜಯನಗರ ಟೆಂಪಲ್ಸ್* ಎಂಬ ಕೃತಿಯಲ್ಲಿ, ಅಂದು ದೇವಾಲಯಗಳಲ್ಲಿ ನಡೆಯುತ್ತಿದ್ದ ಪೂಜಾ ವಿಧಾನ, ಸಂಗೀತ, ನೃತ್ಯಗಳು ಯಾವ ರೀತಿ ಏರ್ಪಡುತ್ತಿದ್ದ ಬಗೆ, ಹಬ್ಬ ಮತ್ತು ಉತ್ಸವಗಳಿಗೆ ಅರಸರ, ರಾಣಿಯರು, ಸಾಮಂತರು ದಾನ ಮಾಡಿದ ವಿವರ ಸಂಗೀತಕ್ಕೆ ಬಳಸುತ್ತಿದ್ದ ಪರಿಕರಗಳ ಕುರಿತು ತಿಳಿಸಿದ್ದಾರೆ.

ಶ್ರೀ ಲಕ್ಷ್ಮಿಕಾತರಗದ್ದೆ ಅವರ *ವುಮೇನ್ ಇನ್ ವಿಜಯನಗರ* ಎಂಬ ಕೃತಿಯಲ್ಲಿ ವಿಜಯನಗರ ಕಾಲದ ಸ್ತ್ರೀಯರ ಸ್ಥಾನಮಾನ, ಪೂಜೆ, ಹಬ್ಬ, ಹರಿದಿನ, ಜಾತ್ರೆ, ರಥೋತ್ಸವಗಳಲ್ಲಿ ಹೇಗೆ ಭಾಗಿಯಾಗುತ್ತಿದ್ದಳು. ವಿನೋದಾವಳಿಗೆ ಸ್ತ್ರೀಯರ ಕೊಡುಗೆ ಏನು ಇತ್ಯಾದಿ ಅಂಶಗಳನ್ನು ಸೋದಾಹರಣವಾಗಿ ವಿವರಿಸಲಾಗಿದೆ.

ಜೋತ್ಸ್ನಾ ಕೆ. ಕಾಮತ್ ಅವರ *ಸೋಷಿಯಲ್ ಲೈಫ್ ಇನ್ ಮಿಡೆವಲ್ ಕರ್ನಾಟಕ* ಎಂಬ ಕೃತಿಯ ಮೂರನೆಯ ಅಧ್ಯಾಯದಲ್ಲಿ ಜನರು ತಮ್ಮ ದಿನನಿತ್ಯದ ವಿರಾಮದ ವೇಳೆಯನ್ನು ಯಾವ ರೀತಿ ಕಳೆಯುತ್ತಿದ್ದರು, ಅಂದು ಜನಗಳು ದೈಹಿಕವಾಗಿ ಸದೃಢವಾಗಿದ್ದರು. ಅದಕ್ಕಾಗಿ ಅಂಗಸಾಧನೆ, ಕುಸ್ತಿ, ದ್ವಂದ್ವಯುದ್ಧ, ಬಿಲ್ವಿದ್ಯೆ, ಬೇಟೆ, ಪ್ರಾಣಿಕಾಳಗ, ಚೆಂಡಾಟ, ವನಕ್ರೀಡೆ, ಜಲಕ್ರೀಡೆಗಳನ್ನು ಆಡುತ್ತಿದ್ದರು. ಅಂದಿನ ಜನರ ಜೀವನ ಶೈಲಿಯ ಬಗ್ಗೆ ಸವಿವರವಾಗಿ ತಿಳಿಸಿದ್ದಾರೆ. ಮಧು ಪಿ. ಪಾಟೀಲ್ ಅವರ *ಕೋರ್ಟ್ ಲೈಫ್ ಅಂಡರ್ ದ ವಿಜಯನಗರ ರೂಲರ್ಸ್* ಎಂಬ ಕೃತಿಯಲ್ಲಿ ವಿಜಯನಗರ ಅರಸರ ಕಾಲದ ಕೂಟ ಜೀವನ ಚಿತ್ರಿಸಿದ್ದಾರೆ. ಅಂದು ಅರಸರು ವಿರಾಮದ ವೇಳೆಯಲ್ಲಿ ಹೇಗೆ ವಿನೋದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದರು, ರಾಣಿಯರು ಮತ್ತು ಸಖಿಯರೊಂದಿಗೆ ವನವಿಹಾರದ ವೇಳೆಯಲ್ಲಿ ಯಾವ ರೀತಿಯ ಮನರಂಜನಾತ್ಮಕ ಚಟುವಟಿಕೆಯಲ್ಲಿ ತೊಡಗುತ್ತಿದ್ದರು. ಆ ಸಮಯದಲ್ಲಿ ಬೇಟೆ ಅದಕ್ಕೆ ಬಳಸುವ ಸಾಧನ, ವಿದೇಶಿ ಪ್ರವಾಸಿಗರ ವರದಿಯ ವಿವರಗಳಲ್ಲಿಯ ವಿಷಯವನ್ನು ತಿಳಿಸಿದ್ದಾರೆ.

ಮಹಾಲಿಂಗಂ. ಟಿ.ವಿ. ಅವರ *ಅಡ್ಮಿನಿಸ್ಟ್ರೇಷನ್ ಅಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯನಗರ ಸೋಷಿಯಲ್ ಲೈಫ್ ಪಾರ್ಟ್–೨* ಎಂಬ ಕೃತಿಯಲ್ಲಿ, ಅಂದಿನ ಸಾಮಾಜಿಕ

ಜೀವನದ ಚಿತ್ರಣವಿದೆ. ಜನರ ತಮ್ಮ ದಿನನಿತ್ಯದ ಚಟುವಟಿಕೆಗಳು ಯಾವ ರೀತಿ ಇದ್ದವು. ವಿರಾಮದ ಸಮಯದಲ್ಲಿ ಕ್ರೀಡೆ ಮತ್ತು ವಿನೋದಾವಳಿಗಳ ಯಾವ ರೀತಿ ಕಳೆಯುತ್ತಿದ್ದರು ಎಂಬುದಕ್ಕೆ ಶಾಸನ, ಸಾಹಿತ್ಯ, ವಿದೇಶಿ ಪ್ರವಾಸಿಗರ ವರದಿ ನೀಡಿದ್ದಾರೆ. ಅಂದು ಹಬ್ಬ, ಜಾತ್ರೆ, ಉತ್ಸವಗಳು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಆ ವೇಳೆಯಲ್ಲಿ ವಿನೋದಕ್ಕಾಗಿ ಸಂಗೀತ, ನೃತ್ಯ, ನಾಟಕ, ಕೋಲಾಟ, ದೊಂಬರಾಟ, ಬೊಂಬೆಯಾಟದಂತಹ ಇತ್ಯಾದಿ ಕಾರ್ಯಕ್ರಮನ್ನು ನಡೆಸುತ್ತಿದ್ದ ವಿವರ ವಿವೇಚಿಸಿದ್ದಾರೆ.

ಸಾಲೇತೊರೆ ಆರ್. ಎನ್ ಅವರ *ವಿಜಯನಗರ ಆರ್ಟ್* ಎಂಬ ಕೃತಿಯಲ್ಲಿ ಅಂದಿನ ಅರಸರಾಧಿಯಾಗಿ ಸಾಮಂತ, ರಾಣಿ, ಸಾಮಾನ್ಯ ಜನರ ಜೀವನ ವಿಧಾನವನ್ನು ಶಿಲ್ಪಗಳ ಮೂಲಕ ಅಧ್ಯಯನ ಮಾಡಿದ್ದಾರೆ. ವಿರಾಮದ ಸಮಯದಲ್ಲಿ ಪಗಡೆ, ಬೊಂಬೆಯಾಟ, ಬೇಟೆ, ನೃತ್ಯ ಹುಲಿಕವಿಲೆ ಮನೆಯಾಟ, ಇತ್ಯಾದಿಗಳ ವಿವರವಿದೆ. ಯಾವ ದೇವಾಲಯಗಳ ಮುಂದೆ ಕ್ರೀಡೆಯ ವಿವರವಿದೆ. ಅಂದು ಯಾವ ಯಾವ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು, ಬೇಟೆಗೆ ಬಳಸುತ್ತಿದ್ದ ಆಯುಧಗಳು, ಅವರ ಉಡಿಗೆ ತೊಡಿಗೆ ಹಾಗೂ ಕುಸ್ತಿಯಾಟದ ವಿವಿಧ ಭಂಗಿಗಳು, ಇರುವ ಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ. ಪೆಯಿಂಟಿಂಗ್ ಅಂಡ್ ಅದರ್ ಪೈನ್ ಆರ್ಟ್, ಎಂಬ ಅಧ್ಯಾಯದಲ್ಲಿ ಅಂದಿನ ವರ್ಣಚಿತ್ರಗಳಲ್ಲಿ ಸಂಗೀತದ ಪರಿಕರಗಳಾದ, ವಾದ್ಯಗಳು, ನಾಟ್ಯ, ನೃತ್ಯಗಾರ್ತಿ, ಬೇಟೆಯ ಚಿತ್ರಣ, ವಿದೇಶಿ ಪ್ರವಾಸಿಗರ ಬೇಟೆಯ ಚಿತ್ರಣ ಇತ್ಯಾದಿ ಅಂಶಗಳನ್ನು ವಿಶ್ಲೇಷಿಸಲಾಗಿದೆ.

ವೆಂಕಟರಮಣಯ್ಯ ಅವರ *ಸ್ಟಡೀಸ್ ಇನ್ ದ ಹಿಸ್ಟರಿ ಆಫ್ ದ ಥರ್ಡ್ ಡೈಯನಸ್ಟಿ ಆಫ್ ವಿಜಯನಗರ* ಎಂಬ ಕೃತಿಯ ಮೂರನೆಯ ಅಧ್ಯಾಯದಲ್ಲಿ ವಿಜಯನಗರದರಸರ ಸಾಮಾಜಿಕ ಜೀವನ ಕುರಿತು ಚರ್ಚಿಸಿದ್ದಾರೆ. ಅಂದು ಅರಸರು ಕೇವಲ ಸಾಮ್ರಾಜ್ಯ ವಿಸ್ತರಣೆಯಲ್ಲಿ ತೊಡಗದೆ, ಹಬ್ಬ, ವಿಜಯೋತ್ಸವ, ಜಾತ್ರೆ, ಪುತ್ರೋತ್ಸವ ಇತ್ಯಾದಿಗಳ ಮೂಲಕ ಕ್ರೀಡೆ ಮತ್ತು ವಿನೋದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಮಕ್ಕಳಾದಿಯಾಗಿ ಸ್ತ್ರೀ-ಪುರಷರು ನೃತ್ಯ, ಸಂಗೀತ, ಯಕ್ಷಗಾನ, ಬೊಂಬೆಯಾಟ, ನಾಟಕ, ದೈಹಿಕ, ಬೌದ್ಧಿಕ, ಮನರಂಜನಾತ್ಮಕ ಕ್ರೀಡೆಯಲ್ಲಿ ತೊಡಗುತ್ತಿದ್ದ ವಿವರವಿದೆ.

ಕನ್ನಡ ಕೃತಿಗಳು

ಶ್ರೀಕಂಠಯ್ಯ ಕೆ. ಅವರ *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ* ಎಂಬ ಕೃತಿಯು ಅಂದಿನ ಕನ್ನಡ ಸಾಹಿತ್ಯದಲ್ಲಿ ಬರುವ ಆಡಳಿತ, ಸೈನಿಕ ವ್ಯವಸ್ಥೆ, ಸಾಮಾಜಿಕ ಪದ್ಧತಿ, ಗೃಹಜೀವನ, ವಸ್ತ್ರ, ಅಲಂಕಾರ, ಸಂಗೀತ, ನೃತ್ಯ ವಿನೋದಾವಳಿ, ಕ್ರೀಡೆಗಳ ಕುರಿತಿದೆ. ಇವುಗಳಲ್ಲಿ ಸಂಗೀತ, ನೃತ್ಯ, ಕಲೆ, ಕ್ರೀಡೆ ಮತ್ತು ಮನರಂಜನೆಯ ಬಗ್ಗೆ ಕನ್ನಡ ಸಾಹಿತ್ಯದಲ್ಲಿ ದಾಖಲಾದ ಅಂಶಗಳು, ವಿದೇಶಿ ಪ್ರವಾಸಿಗರ ವರ್ಣನೆ, ಅರಸರಾದಿಯಾಗಿ ಸಾಮಾನ್ಯ ಜನರು ಬಿಡುವಿನ ವೇಳೆಯಲ್ಲಿ ಯಾವ ಚಟುವಟಿಕೆ ಮಾಡುತ್ತಿದ್ದರು? ಅಂದು ಹಬ್ಬ, ಜಾತ್ರೆ, ಉತ್ಸವಗಳಂಥ ವೇಳೆಯಲ್ಲಿ ಯಾವ ರೀತಿಯ ಮನರಂಜನಾತ್ಮಕ ಚಟುವಟಿಕೆಗಳಿದ್ದವೆಂಬುದನ್ನು ಸೋದಾಹರಣವಾಗಿ ವಿಶ್ಲೇಷಿಸಿದ್ದಾರೆ. ನಾಗೇಗೌಡ ಹೆಚ್.ಎಲ್.

ಅವರ *ಪ್ರವಾಸಿ ಕಂಡ ಇಂಡಿಯಾ* ಸಂಪುಟ ಎರಡರಲ್ಲಿ ವಿಜಯನಗರ ಆಳ್ವಿಕೆಯ ಅವಧಿಯಲ್ಲಿ ಭೇಟಿ ನೀಡಿದ ಪ್ರವಾಸಿಗರು. ಅವರ ವರದಿಗಳನ್ನು ದಾಖಲಿಸಿದ್ದಾರೆ. ಇಬ್-ನೆ-ಬತುತಾ, ನಿಕೊಲೊ-ದೆ-ಕೊಂತಿ, ಅಬ್ದುರ್ ರಜಾಕ್. ಅಥನೇಷಿಯಸ್ ನಿಕಿಟಿನ್, ದು-ಅರ್ತೆ-ಬಾರ್ಬೊಸಾ, ಡೊಂಮಿಂಗೋ ಪಾಯೇಸ್, ಫೆರ್ನಾಂವ್ ನ್ಯೂನಿಜ್, ಸೀಜರ್ ಫ್ರೆಡರಿಕ್ ಮುಂತಾದವರ ವರದಿಗಳಿವೆ. ಅವರ ವರದಿಗಳಲ್ಲಿ ಹಬ್ಬ, ಜಾತ್ರೆ, ಉತ್ಸವ, ಕ್ರೀಡೆ, ನೃತ್ಯ, ಸಂಗೀತ, ವಾದ್ಯ ಇತ್ಯಾದಿಗಳನ್ನು ಹೇಗೆ ಬಳಸುತ್ತಿದ್ದರು ವಿವರವಿದೆ. ರಾಬರ್ಟ್‌ಸಿವೆಲ್ ಅವರ *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ* ಎಂಬ ಕೃತಿಯಲ್ಲಿ ವಿಜಯನಗರದ ಆಳ್ವಿಕೆಯ ಅವಧಿಯಲ್ಲಿ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಇಲ್ಲಿ ಕಂಡು ಕೇಳಿದ ವಿಷಯಗಳನ್ನು ದಾಖಲೆಯ ರೂಪದಲ್ಲಿ ಬಿಟ್ಟುಹೋಗಿದ್ದಾರೆ. ಅಂದು ಮಹಾನವಮಿ ಉತ್ಸವ, ವಿಜಯೋತ್ಸವ, ಆಡಳಿತ ವ್ಯವಸ್ಥೆಯ ಕುರಿತು ಅನೇಕ ಅಂಶಗಳನ್ನು ದಾಖಲಿಸಿದ್ದಾರೆ. ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಬಾಣ ಬಿರುಸುಗಳು ದೊಂಬರಾಟ, ಕುಸ್ತಿ, ಸಂಗೀತ, ನೃತ್ಯ, ನಾಟಕದ ಇತ್ಯಾದಿ ವಿವರ ಕೊಟ್ಟಿದ್ದಾರೆ. ಸೂರ್ಯನಾರಾಯಣರಾವ್ ಅವರ *ಮರೆಯಲಾಗದ ಮಹಾಸಾಮ್ರಾಜ್ಯ* ಎಂಬ ಕೃತಿಯಲ್ಲಿ ವಿದೇಶಿ ಪ್ರವಾಸಿಗರ ವರದಿಗಳಲ್ಲಿ ಮನರಂಜನಾತ್ಮಕ ಚಟುವಟಿಕೆಗಳನ್ನು ಯಾವ ಸಂದರ್ಭದಲ್ಲಿ ಹಮ್ಮಿಕೊಳ್ಳುತ್ತಿದ್ದರು? ಅವುಗಳಲ್ಲಿ ಯಾವ ಯಾವ ಅಂಶಗಳಿರುತ್ತಿದ್ದವು ಇತ್ಯಾದಿ ವಿಷಯಗಳಿವೆ. ಶ್ರೀ ಕಂಠಯ್ಯ ಕೆ. ರವರ ಕನ್ನಡ *ಕವಿಗಳು ಕಂಡ ಕ್ರೀಡೆಗಳು* ಎಂಬ ಕೃತಿಯಲ್ಲಿ ಪ್ರಾಚೀನ ಕಾಲದ ಕವಿಗಳು ತಮ್ಮ ಸಾಹಿತ್ಯ ಕೃತಿಗಳಲ್ಲಿ ಕ್ರೀಡೆಯ ಬಗ್ಗೆ ಸಾಂದರ್ಭಿಕವಾಗಿ ಬಂದಂತಹ ವಿಷಯಗಳನ್ನು ವಿಶ್ಲೇಷಿಸಿದ್ದಾರೆ.

ಚಿದಾನಂದಮೂರ್ತಿ ಎಂ., ಅವರ *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ* ಕೃತಿಯಲ್ಲಿ ಪ್ರಾಚೀನ ಶಾಸನಗಳಲ್ಲಿ ಉಲ್ಲೇಖವಾಗಿರುವ ಕಲೆಗಳನ್ನು ತಿಳಿಸಿದ್ದಾರೆ. ತಿಪ್ಪೇರುದ್ರಸ್ವಾಮಿಯವರ *ಕರ್ನಾಟಕ ಸಂಸ್ಕೃತಿ ಸಮೀಕ್ಷೆಯಲ್ಲಿ* ಕನ್ನಡಿಗರ ಸಾಮಾಜಿಕ ಜೀವನ, ಸಂಗೀತ ಮತ್ತು ನೃತ್ಯಗಳಿಗೆ ಸಂಬಂಧಿಸಿದಂತೆ ವಿವರವಾಗಿ ಚಿತ್ರಿಸಿದ್ದಾರೆ. ಚಲುವರಾಜು ಅವರು *ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು* ಎಂಬ ಕೃತಿಯಲ್ಲಿ ಹಂಪಿ ಪರಸರದ ಸುತ್ತ ಕಂಡುಬರುವ ಕ್ರೀಡೆಗಳ ಕುರಿತು ವಿವರ ಕೊಟ್ಟಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಹಂಪಿ ಜಾನಪದ ವಿಜಯನಗರ ಕಾಲದ ಸಾಮಾಜಿಕ ಧಾರ್ಮಿಕ ಆಚರಣೆ, ಕಲೆಗಳನ್ನು ತಿಳಿಸಿದ್ದಾರೆ. ಶಿವಕುಮಾರಸ್ವಾಮಿ ಸಿ.ಎಸ್., *ಕರ್ನಾಟಕದ ಜಾತ್ರೆಗಳು* ಎಂಬ ಕೃತಿಯಲ್ಲಿ ಅದರ ಹುಟ್ಟು, ಬೆಳವಣಿಗೆ, ಆಚರಣೆಗಳ ಕುರಿತು ವಿವರಿಸಿದ್ದಾರೆ. ಗಂಗಾಧರ ದೈವಜ್ಞ ಅವರ *ಸಣ್ಣಾಟಗಳ ಹುಟ್ಟು ಮತ್ತು ಬೆಳವಣಿಗೆ,* ವೇಣುಮಾಧವ ಶಾಸ್ತ್ರೀ ಜೋಶಿ ಅವರ *ಸಂಸ್ಕೃತ ಸಾಹಿತ್ಯದಲ್ಲಿ ಉತ್ಸವಗಳು,* ವೃಷಬೇಂದ್ರ ಸ್ವಾಮಿಯು *ಜಾನಪದ ಹಬ್ಬಗಳು,* ಕಬ್ಬಿನಾಲೆ ವಸಂತ ಭಾರದ್ವಾಜರು *ಯಕ್ಷಗಾನ ಪ್ರಸಂಗ ಸಾಹಿತ್ಯ,* ಪ್ರ.ಗ. ಖಾಡೆಯವರು *ಜಾನಪದ ಲೋಕ,* ಸೋಮಶೇಖರ್ ಎಸ್.ವೈ., ಅವರು *ಹಂಪಿಯ ಬಜಾರುಗಳು,* ಎಂಬ ಕೃತಿಯಲ್ಲಿ ವಿಜಯನಗರದ ರಾಜಧಾನಿ ಹಂಪಿಯಲ್ಲಿರುವ ಬಜಾರುಗಳ ಕುರಿತಿದೆ. ಅದರಲ್ಲಿ ಬಜಾರುಗಳ ಕಾರ್ಯವೈಖರಿಗಳನ್ನು ವಿಶ್ಲೇಷಿಸಿದ್ದಾರೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಅಲ್ಲಿ

ಬಜಾರುಗಳಲ್ಲಿ ಯಾವರೀತಿಯ ಮನರಂಜನಾತ್ಮಕ ಚಟುವಟಿಕೆಗಳಿಗೆ ಅವಕಾಶವಿತ್ತು ಎಂಬುದನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಅವರ ಮತ್ತೊಂದು ಕೃತಿ *ವಿಜಯನಗರ ಕಾಲದ ಸೈನ್ಯ ಮತ್ತು ಯುದ್ಧನೀತಿ* ಕೃತಿಯಲ್ಲಿ ಅಂದು ಸೈನ್ಯ ವ್ಯವಸ್ಥೆ ಯಾವ ರೀತಿಯಾಗಿತ್ತು, ಅದರ ಕಾರ್ಯ ಚಟುವಟಿಕೆಗಳ ಮಹತ್ವವನ್ನು ಚರ್ಚಿಸಿದ್ದಾರೆ. ವಿರೂಪಾಕ್ಷಿ ಪೂಜಾರಹಳ್ಳಿಯವರು *ಬೇಟೆ ಮತ್ತು ಬೇಡರು* ಹಾಗೂ *ವಿಜಯನಗರ ಕಾಲದ ಸಂಸ್ಕೃತಿ, ಕೃಷ್ಣದೇವರಾಯನ ತೀರ್ಥಯಾತ್ರೆಗಳು* ಎಂಬ ಕೃತಿಗಳಲ್ಲಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಲ್ಲಲ್ಲಿ ಸಂದರ್ಭನುಸಾರವಾಗಿ ವಿವರಗಳಿವೆ.

ಅಂಬಳಿಕೆ ಹಿರಿಯಣ್ಣ ಅವರ *ಜಾನಪದ ಕೆಲವು ಅಧ್ಯಯನಗಳು* ಎಂಬ ಕೃತಿಯಲ್ಲಿ ಕ್ರೀಡೆಗಳ ಪ್ರಾಚೀನತೆ ಮತ್ತು ಪರಂಪರೆ ಎಂಬ ಅಧ್ಯಾಯದಲ್ಲಿ ಪ್ರಾಚೀನತೆ, ಉಗಮ, ಆಟದ ವಿಧಾನಗಳನ್ನು ತಿಳಿಸಿದ್ದಾರೆ. ಕನ್ನಡದ ಪ್ರಾಚೀನ ಕೃತಿಗಳಾದ ವಡ್ಡಾರಾದನೆ, ಪಂಪಭಾರತ, ದಾಸರ ಕೃತಿ, ಶಾಸನಗಳಲ್ಲಿ ದಾಖಲಾದ ಕ್ರೀಡೆಯ ವಿವರವನ್ನು ವಿಶ್ಲೇಷಿಸಿದ್ದಾರೆ.

ಜಗನ್ನಾಥ ಹೆಬ್ಬಾಳೆ ಅವರ *ಹೈದರಾಬಾದ್ ಕರ್ನಾಟಕದ ಜಾತ್ರೆಗಳು:ಒಂದು ಸಾಂಸ್ಕೃತಿಕ ಅಧ್ಯಯನ* ಎಂಬ ಕೃತಿಯಲ್ಲಿ ಜಾತ್ರೆಗಳ ಉಗಮ, ವಿಕಾಸ, ವರ್ಗೀಕರಣ ಜೋತೆಗೆ ಜಾತ್ರೆಗಳ ಸಂದರ್ಭದಲ್ಲಿ ಪ್ರದರ್ಶನಗೊಳ್ಳುವ ಕಲೆಗಳ ಬಗ್ಗೆ ತಿಳಿಸಿದ್ದಾರೆ.

ಗಂಗಾನಾಯಕ್ ಇತರರು ಸಂಪಾದಿತ *ಕ್ರೀಡೆಗಳು* ಎಂಬ ಕೃತಿಯಲ್ಲಿ, ಇತ್ತೀಚಿನ ಕ್ರೀಡೆಗಳ ಜೊತೆಗೆ ಶಿಕ್ಷಣದಲ್ಲಿ ಕ್ರೀಡೆಗಳನ್ನು ಹೇಗೆ ಅಳವಡಿಸಲಾಗಿದೆ. ಕ್ರೀಡೆಗಳ ಉಪಯೋಗವೇನು ಎಂಬುದನ್ನು ತಿಳಿಸಲಾಗಿದೆ. ಸುಶೀಲ ಹೊನ್ನೇಗೌಡರ *ಜನಪದ ಆಟಗಳು* ಎಂಬ ಕೃತಿಯಲ್ಲಿ ಹುಡುಗಿಯರ, ಹುಡುಗರ, ದೊಡ್ಡವರ, ಮಕ್ಕಳ ಸಾಹಸದ ಆಟಗಳು ಎಂದು ವಿಭಾಗಿಸಿ ಪ್ರತಿಯೊಂದು ಆಟದ ವಿಶ್ಲೇಷಣೆಯನ್ನು ಕೊಟ್ಟಿದ್ದಾರೆ. ನಾಯಕ್ ಎನ್.ಆರ್ ಮತ್ತು ಶ್ರೀಮತಿ ಶಾಂತಿ ನಾಯಕ್ ಅವರ *ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು* ಎಂಬ ಕೃತಿಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಕ್ರೀಡೆಯ ಬಗ್ಗೆ ಕ್ಷೇತ್ರಕಾರ್ಯದ ಮೂಲಕ ಅಧ್ಯಯನ ಮಾಡಿ ವಿವರಿಸಿದ್ದಾರೆ. ದೇಜಗೌ ಅವರ *ಜಾನಪದ ಮಹಾಸಂಪುಟ* ಎಂಬ ಕೃತಿಯಲ್ಲಿ ಜಾನಪದ ಕ್ರೀಡೆಗಳು ಎಂಬ ಅಧ್ಯಾಯದಲ್ಲಿ ಕ್ರೀಡೆಗಳ ಹುಟ್ಟು, ಪ್ರಾಚೀನತೆ ಜೊತೆಗೆ ಕನ್ನಡ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ಕ್ರೀಡೆಗಳನ್ನು ದಾಖಲಿಸಿ ವಿಶ್ಲೇಷಿಸಿ, ಕ್ರೀಡೆಗಳಿಂದಾಗುವ ಪ್ರಯೋಜನವನ್ನು ತಿಳಿಸಿದ್ದಾರೆ. ವೇಣೀ ಮಾಧವ ಶಾಸ್ತ್ರೀ ಜೋಶಿ ಅವರ *ಕನ್ನಡ ಸಾಹಿತ್ಯದಲ್ಲಿ ಉತ್ಸವಗಳು* ಎಂಬ ಕೃತಿಯಲ್ಲಿ ಸಂಸ್ಕೃತದಲ್ಲಿ ಉಲ್ಲೇಖಗೊಂಡಿರುವ ಉತ್ಸವಗಳ ಪ್ರಕಾರ ಆ ಸಂದರ್ಭದಲ್ಲಿ ಯಾವ ರೀತಿಯ ಆಚರಣೆ ಮಾಡುತ್ತಿದ್ದರು ಎಷ್ಟು ವಿಧವಾದ ಉತ್ಸವಗಳಿದ್ದವು ಇತ್ಯಾದಿ ವಿಷಯಗಳನ್ನು ತಮ್ಮ ಉಪನ್ಯಾಸ ಮಾಲೆಯಲ್ಲಿ ತಿಳಿಸಿದ್ದಾರೆ.

ಶ್ರೀಮತಿ ಕರುಣಾ ವಿಜಯೇಂದ್ರ ಅವರು *ಕರ್ನಾಟಕ ದೇವಾಲಯಗಳಲ್ಲಿ ರಂಗಭೋಗ* ಎಂಬ ಕೃತಿಯಲ್ಲಿ ದೇವಾಲಯಗಳಲ್ಲಿ ಪೂಜೆ, ಉತ್ಸವ, ನಿತ್ಯೋತ್ಸವ ಮಾಡಬೇಕಾದರೆ ನೃತ್ಯ, ಸಂಗೀತ, ಇತ್ಯಾದಿ ಮನರಂಜನಾ ಕಾರ್ಯಕ್ರಮಗಳ ಕೆಲಸವನ್ನು ಯಾರು ಮಾಡುತ್ತಿದ್ದರು. ಕರ್ನಾಟಕದಲ್ಲಿ ಈ ಪರಂಪರೆ ಎಂದಿನಿಂದ ಬಂದಿತು. ಪ್ರಮುಖವಾಗಿ ಈ ಆಚರಣೆ ಯಾವ

ಯಾವ ದೇವಾಲಯಗಳಲ್ಲಿತ್ತು ಎಂಬುದನ್ನು ಶಾಸನ, ಎಂ.ಎ.ಆರ್. ರಿಪೋರ್ಟ್‌ಗಳಲ್ಲಿ ದಾಖಲಾಗಿರುವ ವಿಷಯ ತಿಳಿಸಿದ್ದಾರೆ. ಇದರಿಂದ ನೃತ್ಯ ಮಾಧ್ಯಮ, ವಿನೋದಾವಳಿಯಾಗಿ ಎಷ್ಟು ಪ್ರಭಾವಿಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಹನುಮಂತರಾವ್ ಬಿ. ದೊಡ್ಡಮನಿ ಅವರ *ಜಾನಪದ ಹಬ್ಬಗಳು ಮತ್ತು ಉತ್ಸವಗಳು* ಎಂಬ ಕೃತಿಯಲ್ಲಿ ಹಬ್ಬ ಮತ್ತು ಉತ್ಸವಗಳ ಪ್ರಾಚೀನತೆ, ನಮ್ಮ ಪೂರ್ವಿಕರು ಆಚರಿಸುತ್ತಿದ್ದ ವಿಧಿ ವಿಧಾನ, ಯುಗಾದಿ, ಕಾರಹುಣ್ಣಿಮೆ, ನಾಗರ ಪಂಚಮಿ, ವಿಜಯದಶಮಿ, ದೀಪಾವಳಿ, ಸಂಕ್ರಾಂತಿ ಇತ್ಯಾದಿ ಉತ್ಸವಗಳಲ್ಲಿ ಅನುಸರಿಸುವ ಪೂಜಾ ವಿಧಾನ, ವಿನೋದ ಚಟುವಟಿಕೆಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಕೌಸಲ್ಯಾ ಬಿ. ಅವರ *ಭಾರತೀಯ ಹಬ್ಬಗಳು ಮತ್ತು ವ್ರತಗಳು* ಎಂಬ ಕೃತಿಯಲ್ಲಿ ಭಾರತದಲ್ಲಿ ನಡೆಯುವ ಹಬ್ಬಗಳು ಯಾವ ಮಾಸದಲ್ಲಿ ನಡೆಯುತ್ತವೆ, ಅವುಗಳ ಐತಿಹಾಸಿಕ ಹಿನ್ನೆಲೆ, ಅದರ ಉಪಯೋಗ, ಹಬ್ಬಗಳ ದಿನದಂದು ಆಚರಿಸುವ ವ್ರತಗಳು, ಅವುಗಳನ್ನು ಮಾಡುವಾಗ ಅನುಸರಿಸಬೇಕಾದ ನಿಯಮಗಳು ಇತ್ಯಾದಿ ಅಂಶಗಳನ್ನು ದಾಖಲಿಸಿದ್ದಾರೆ.

ಶ್ರೀಮತಿ ಸರಸ್ವತಿದೇವಿ ಎಸ್. ಭಗವತಿ ಅವರ *ಹಂಪೆಯ ಶಾಸನಗಳು* ಎಂಬ ಕೃತಿಯಲ್ಲಿ ಶಾಸನಗಳಲ್ಲಿ ಹಬ್ಬ ಉತ್ಸವಗಳಂದು ಕೊಟ್ಟ ದಾನದತ್ತಿಗಳ ವಿಷಯ ತಿಳಿಸಲಾಗಿದೆ. ಇದರಿಂದ ವಿಜಯನಗರ ಕಾಲದಲ್ಲಿ ಯಾವ ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದರು ಎಂದು ತಿಳಿಯುತ್ತದೆ. ಬೈರಪ್ಪ ವಿಠಲಾಪುರ ಕೆ. ಅವರ *ಹರ್ಷತರುವ ಹಬ್ಬಗಳು* ಎಂಬ ಕೃತಿಯಲ್ಲಿ ಸಂಕ್ರಾಂತಿ, ಮಹಾಶಿವರಾತ್ರಿ, ಯುಗಾದಿ, ಮಹಾವೀರ ಜಯಂತಿ, ಗಣೇಶ ಚತುರ್ಥಿ ದಿಪಾವಳಿ, ಇತ್ಯಾದಿ ಹಬ್ಬಗಳನ್ನು ಮಕ್ಕಳಾದಿಯಾಗಿ ದೊಡ್ಡವರು ಯಾವ ರೀತಿಯಾಗಿ ಆಚರಿಸುವರು ಅದರಲ್ಲಿ ಅನುಸರಿಸುವ ವಿಧಾನಗಳಾವುವು ಎಂಬ ವಿಷಯ ತಿಳಿಸಿದ್ದಾರೆ.

ಎಸ್.ಕೆ. ಕರೀಂಖಾನ್ ಸಂಪಾದಿತ *ಜನಪದ ಆಟಗಳು* ಎಂಬ ಸಂಶೋಧನ ಲೇಖನಗಳ ಕೃತಿಯಲ್ಲಿ ಕ್ರೀಡೆಗಳ ಚಾರಿತ್ರಿಕ ಹಿನ್ನೆಲೆ, ಜೊತೆಗೆ ಅವುಗಳನ್ನು ಸಮಾಜಶಾಸ್ತ್ರೀಯ, ಮನೋವೈಜ್ಞಾನಿಕ, ಸಂವಹನ ಹೀಗೆ ವಿವಿಧ ದೃಷ್ಟಿಕೋನಗಳಲ್ಲಿ ಅರ್ಥೈಸಲು ಪ್ರಯತ್ನಿಸಲಾಗಿದೆ.

ಅಕ್ಷರ ಕೆ.ವಿ. ಅವರ *ರಂಗ ಪ್ರಪಂಚ* ಎಂಬ ಕೃತಿಯಲ್ಲಿ ನಾಗರೀಕ ಪೂರ್ವದಲ್ಲಿ ವಿನೋದಾವಳಿ ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ಹೇಗೆ ಬೆಳೆದು ಬಂದಿತು ಎಂಬುದರ ವಿವರವಿದೆ. ಭಾರತ ದೇಶವಲ್ಲದೆ ರೋಮ್, ಗ್ರೀಕ್, ಮಹಾಕಾವ್ಯಗಳಲ್ಲಿ ಉಲ್ಲೇಖವಾದ ವಿನೋದಾವಳಿ, ಹೀಗೆ ಹತ್ತು ಹಲವು ಅಂಶಗಳನ್ನು ಚರ್ಚಿಸಲಾಗಿದೆ. ಎ.ವಿ. ನಾವಡ ಸಂಪಾದಿತ *ಕುಂದ ದರ್ಶನ*ದಲ್ಲಿ ಕೋಳಿಕಾಳಗ, ಕಂಬಳ ಕ್ರೀಡೆಗಳ ಹುಟ್ಟು, ಬೆಳೆದು ಬಂದ ಬಗೆ ಅಂಶಗಳನ್ನು ವಿಶ್ಲೇಸಿದ್ದಾರೆ. ಕರೀಗೌಡ ಬೀಚನಹಳ್ಳಿ ಸಂಪಾದಿತ *ಕರಕುಶಲ ಕಲೆಗಳು* ಎಂಬ ವಿಶ್ವಕೋಶದಲ್ಲಿ ಮನರಂಜನಾ ಸಂಬಂಧಿ ಕರಕುಶಲ ಕಲೆಗಳು, ಅವರ ವೇಷಭೂಷಣಳನ್ನು ಶಿಲಾಯುಗದಿಂದ ಹಿಡಿದು ಆಧುನಿಕ ಕಾಲದವರೆಗೆ ಹೇಗೆ ಬೆಳವಣಿಗೆ ಹೊಂದಿದವು ಎಂಬ ವಿವರಗಳನ್ನು ಚರ್ಚಿಸಿದ್ದಾರೆ. ಮಲ್ಲಿಕಾರ್ಜುನ ಯು ಅವರ *ಗರಡಿ ಸಂಪ್ರದಾಯ* ಎಂಬ ಕೃತಿಯಲ್ಲಿ ದೈಹಿಕ ಕಸರತ್ತಿನ ಕ್ರೀಡೆಗಳಲ್ಲಿ ಪ್ರಮುಖವಾದ ಕುಸ್ತಿಯನ್ನು

ಆಡಲು ಬಳಸುವ ಗರಡಿ, ಅದರ ಪದನಿಷ್ಪತ್ತಿ, ಪ್ರಾಚೀನತೆ, ಸ್ವರೂಪದ ಜೊತೆಗೆ ಹೊಸಪೇಟೆ ತಾಲ್ಲೂಕು ಗರಡಿ ಮನೆಗಳ ಸ್ವರೂಪವನ್ನು ವಿಶ್ಲೇಸಿದ್ದಾರೆ. ಬನ್ನೆಂಜೆ ಬಾಬು ಅಮೀನರ *ಗರೋಡಿ ಒಂದು ಚಿಂತನೆ* ಎಂಬ ಕೃತಿಯಲ್ಲಿ ತುಳುನಾಡಿನಲ್ಲಿ ಬರುವ ಗರಡಿ ಶಾಲೆಗಳು ಅದರ ಪೂಜಾ ವಿಧಾನ ಆಚರಣೆ, ಗರೊಡಿಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಸಂಗಮೇಶ ಬಾ. ಮಟೋಳಿ ಅವರ *ಕರ್ನಾಟಕದ ಕುಸ್ತಿ ಪೈಲ್ವಾನರು ಒಂದು ಅವಲೋಕನ* ಎಂಬ ಕೃತಿಯ ಪ್ರಸ್ತಾವನೆಯಲ್ಲಿ ಕುಸ್ತಿಯ ಉಗಮ, ಅಂದರೆ ಆದಿಮಾನವ ವನ್ಯ ಮೃಗೋಪಾದಿಯಲ್ಲಿ ಕಾಡಿನ ನಡುವೆ ಜೀವಿಸುತ್ತಿದ್ದಾಗ ತನ್ನ ರಕ್ಷಣೆಗೆ ತನ್ನ ದೇಹ ಶಕ್ತಿಯನ್ನು ವೃದ್ಧಿಸಕೊಳ್ಳುವುದು ಅನಿವಾರ್ಯವಾಗಿತ್ತು. ಮಾನಸಿಕ ಸ್ತರ ವಿಸ್ತಾರಗೊಂಡಂತೆ ಜಟ್ಟಿಗನಿಂದ ದೊರೆತ ರಕ್ಷಣೆ. ಅವರ ಪರಂಪರೆ ಪುರಾಣದಲ್ಲಿ ಜಟ್ಟಿಗಳ ಉಲ್ಲೇಖ ನಂತರ ರಾಜರ ಕಾಲದಲ್ಲಿ ಹೇಗೆ ಕುಸ್ತಿ ಪ್ರವರ್ಧಮಾನಕ್ಕೆ ಬಂದಿತು ಎಂಬಿತ್ಯಾದಿ ಅಂಶಗಳಿವೆ.

ಚೂಡಾಮಣಿ ನಂದಗೋಪಾಲ್ ಅವರ *ಶಿಲೆ–ಕಲೆ* ಕರ್ನಾಟಕ ನೃತ್ಯ–ಶಿಲ್ಪಗಳ ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಯಲ್ಲಿ ಶಿಲ್ಪಗಳಲ್ಲಿ ನೃತ್ಯ ಮತ್ತು ಸಂಗೀತದ ಅಂಶಗಳು ಹೇಗೆ ಬಂದಿವೆ ಎಂಬುದನ್ನು ಶಾಸನ, ಶಿಲ್ಪ, ಚಿತ್ರಕಲೆಗಳ ಉಲ್ಲೇಖದೊಂದಿಗೆ ದಾಖಲಿಸಿದ್ದಾರೆ. ಕರ್ನಾಟಕವನ್ನಾಳಿದ ರಾಷ್ಟ್ರಕೂಟರಿಂದ ವಿಜಯನಗರದ ಅರಸರವರೆಗೆ ಸ್ಮಾರಕಗಳಲ್ಲಿ ಇರುವ ಶಿಲ್ಪಗಳಲ್ಲಿ ಹೇಗೆ ಸಂಗೀತ ಮತ್ತು ನೃತ್ಯದ ವಾದ್ಯಗಳು ಇವೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಮಂಜುನಾಥ ಸಿ.ಯು. ಅವರ *ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ* ಎಂಬ ಕೃತಿಯಲ್ಲಿ ಕ್ರಿ.ಶ. ೧೧೫೦ ರಿಂದ ೧೩೪೦ ರವರಗೆ ಅವಧಿಯಲ್ಲಿ ಕಂಡುಬರುವ ಶಾಸನ, ಸಾಹಿತ್ಯ ಶಿಲ್ಪಗಳಲ್ಲಿ ನೃತ್ಯ ಮತ್ತು ಸಂಗೀತದ ಅಂಶಗಳ ಕುರಿತು ವಿವರಿಸಿದ್ದಾರೆ. ಚಲುವರಾಜು ಅವರು ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು ಎಂಬ ಕೃತಿಯಲ್ಲಿ ಹಂಪಿ ಪರಿಸರದಲ್ಲಿ ಕ್ರೀಡೆ ಮತ್ತು ವಿನೋದಾವಳಿಗಳ ಹೇಗೆ ನಡೆಯುತ್ತಿವೆ. ಪ್ರದರ್ಶನಾತ್ಮಕ ಕಲೆ, ವಾದ್ಯ, ಅವರ ಉಡಿಗೆ–ತೊಡಿಗೆ, ಜನಪದ ಆಟಗಳ ಕುರಿತು ಶಿಲ್ಪಗಳಲ್ಲಿ ಬರುವ ಅಂಶಗಳ ವಿಶ್ಲೇಷಿಸಿದ್ದಾರೆ.

ಆರ್ ಸುನಂದಮ್ಮ ಅವರ *ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು* ಎಂಬ ಕೃತಿಯ ಅಧ್ಯಾಯ ಐದರಲ್ಲಿ ದಾಸರ ಕೀರ್ತನೆಗಳಲ್ಲಿ ಕ್ರೀಡೆ, ಸಂಗೀತ, ಕಲೆಯ ಅಂಶಗಳು ಹೇಗೆ ವ್ಯಕ್ತವಾಗಿವೆ ಎಂಬುದನ್ನು ತಿಳಿಸಿದ್ದಾರೆ. ಪ್ರದರ್ಶನಗೊಳ್ಳುವ ಕಲೆಗಳು ಯಾವುವು? ಅದಕ್ಕೆ ಬಳಸುವ ವಾದ್ಯ ಪರಿಕರಗಳು ಯಾವುವು? ಇತ್ಯಾದಿ ಅಂಶಗಳು ವಿಶ್ಲೇಷಿಸಿದ್ದಾರೆ. ಗಣನಾಥ ಎಕ್ಕಾರು ಅವರು *ತುಳುನಾಡಿನ ಜನಪದ ಆಟಗಳು* ಎಂಬ ಕೃತಿಯಲ್ಲಿ ಕ್ರೀಡೆಗಳ ಹುಟ್ಟು, ಸ್ವರೂಪ, ಬೆಳವಣಿಗೆಗಳ ಬಗ್ಗೆ ಎರಡನೇ ಆಧ್ಯಾಯದಲ್ಲಿ ತಿಳಿಸಿದ್ದಾರೆ. ತುಳುನಾಡಿನಲ್ಲಿ ಯಾವ ರೀತಿಯ ಕ್ರೀಡೆಗಳು ಇದ್ದವು ಅವುಗಳ ಚಾರಿತ್ರಿಕ ಹಿನ್ನೆಲೆ, ಶಾಸನ, ಮೌಖಿಕ ಸಾಹಿತ್ಯದ ಮೂಲಕ ದಾಖಲಿಸಿದ್ದಾರೆ. ಪ್ರಮುಖವಾಗಿ ಇವರು ಹುಲಿಮನೆಯಾಟ, ಚೆನ್ನೆಮಣೆ, ಚೆಂಡಾಟ, ಕೋಳಿಕಾಳಗ ಆಟಗಳನ್ನು ವಿಶ್ಲೇಷಿಸಿದ್ದಾರೆ. ಜೊತೆಗೆ ಕ್ರೀಡೆಗಳು ಶಿಕ್ಷಣದಲ್ಲಿ ಯಾವ ರೀತಿ ಉಪಯೋಗವಾಗುತ್ತದೆ. ಎಂಬುದನ್ನು ಸಾಧ್ಯತೆ, ಸಲಹೆಗಳನ್ನು ಕೊಟ್ಟಿದ್ದಾರೆ.

ದೇವರಕೊಂಡಾರೆಡ್ಡಿ ಸಂಪಾದಿತ *ಹಂಪಿ ಸಂಪುಟ, ಕಲೆ, ಕ್ರೀಡೆ ಮತ್ತು ಕೌಶಲ* ಎಂಬ ಕೃತಿಯಲ್ಲಿ ಕ್ರೀಡೆ ವಿನೋದಾವಳಿಯ ಕುರಿತು ವಿದ್ವಾಂಸರುಗಳಿಂದ ಮಂಡಿತವಾದ ಲೇಖನಗಳಿವೆ. ಅವುಗಳಲ್ಲಿ ಪ್ರಮುಖವಾಗಿ ಶಾಸನಾಧಾರಿತ ಸಂಗೀತ, ನೃತ್ಯ, ವಿಜಯನಗರದ ಶಾಸನಗಳಲ್ಲಿ ಕುಸ್ತಿಯ ಉಲ್ಲೇಖಗಳು, ಗರಡಿ, ಕುಸ್ತಿ, ವಿಜಯನಗರ ಕಾಲದ ಬೇಟೆ ಹಬ್ಬ, ಜನಪದ ಆಟಗಳ ಜನಪದ ಪ್ರದರ್ಶನಾತ್ಮಕ ಕಲೆಗಳ ಕುರಿತು ವಿದ್ವತ್ಪೂರ್ಣ ಲೇಖನಗಳಿವೆ. ಲಲಿತ ಶ್ರೀನಿವಾಸನ್ ಅವರು *ಕರ್ನಾಟಕ ನೃತ್ಯರಂಗ ಶಿಲ್ಪಗಳು* ಎಂಬ ಕೃತಿಯಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಹಾಗೆ ಕರ್ನಾಟಕವನ್ನಾಳಿದ ಅರಸುಮನೆತನದ ಕೊಡುಗೆ ಅಪಾರ, ಅಂತಹ ಕೊಡುಗೆಗಳಲ್ಲಿ ದೇವಾಲಯ, ಸ್ಮಾರಕಗಳಿವೆ. ನೃತ್ಯ ಶಿಲ್ಪಗಳ ಕುರಿತು ರಾಷ್ಟ್ರಕೂಟ, ಚೋಳ, ಚಾಲುಕ್ಯ, ಹೊಯ್ಸಳ, ವಿಜಯನಗರ ಶಿಲ್ಪಗಳು ಹೇಗೆ ಬೆಳೆದು ಬಂದಿವೆ ಎಂಬುದನ್ನು ಮನೋಜ್ಞವಾಗಿ ವಿಶ್ಲೇಷಿಸಿದ್ದಾರೆ.

ಶ್ರೀಧರ್ ಎಂ.ಕೆ. ಅವರು *ಸಾಹಸ ಕ್ರೀಡೆಗಳು* ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿ ಸಾಹಸ ಕ್ರೀಡೆಗಳ ಪ್ರಾಚೀನತೆ ಅವುಗಳ ಧ್ಯೇಯ, ಉದ್ದೇಶ, ಜೊತೆಗೆ ಇತ್ತೀಚಿಗೆ ಯಾವ ರೀತಿಯ ಸಾಹಸ ಕ್ರೀಡೆಗಳನ್ನು ಅಯೋಜಿಸಲಾಗುತ್ತದೆ. ಅವುಗಳಿಗೆ ತರಬೇತಿ ನೀಡುವ ರಾಜ್ಯ, ರಾಷ್ಟ್ರ, ಸಂಸ್ಥೆಗಳು ಯಾವುವು ಎಂಬುದರ ಸಂಕ್ಷಿಪ್ತ ಮಾಹಿತಿ ದಾಖಲಿಸಿದ್ದಾರೆ. ಈ ಮೇಲಿನ ಕೃತಿಗಳು ಪ್ರಸ್ತುತ ಅಧ್ಯಯನಕ್ಕೆ ಇಂಬು ನೀಡಲಿವೆ.

ಇಂಗ್ಲೀಷ್ ಲೇಖನಗಳು

ಜೋತ್ಸ್ನಾ ಕೆ. ಕಾಮತ್ ಅವರ *ಸ್ಪೋರ್ಟ್ಸ್ ಅಂಡ್ ಎ ಪಾಸ್ಟ್‌ಟೈಮ್ಸ್ ಇನ್ ವಿಜಯನಗರ ಟೈಮ್ಸ್* ಎಂಬ ಲೇಖನದಲ್ಲಿ ಅಂದು ಕ್ರೀಡೆಗಳನ್ನು ವಿದೇಶಿ ಪ್ರವಾಸಿಗರು ಯಾವ ರೀತಿ ಗುರುತಿಸಿದ್ದಾರೆ. ಸಾಮಾನ್ಯ ಜನರು ದೇವಾಲಯದ ಜಗುಲಿ, ಮನೆಯೊಳಗೆ ಯಾವ ರೀತಿಯ ಕ್ರೀಡೆಗಳನ್ನಾಡುತ್ತಿದ್ದರು. ಎಂಬುದರ ವಿವರ, ಹಂಪಿ ಪರಿಸರದಲ್ಲಿ ಈ ಕ್ರೀಡೆಗಳಿಗೆ ಯಾವ ರೀತಿಯ ಹೆಸರುಗಳಿಂದ ಕರೆಯುತ್ತಿದ್ದರು, ತೆಲುಗಿನಲ್ಲಿ ಅದರ ಹೆಸರು, ಆಟದ ವಿವರ ಜೊತೆಗೆ ಆಟವಾಡುವ ವಿಧಾನವನ್ನು ತಿಳಿಸಿದ್ದಾರೆ. ರಂಗಚಾರ್ ವಸಂತ್ ಅವರು *ಬೊರ್ಡ್‌ಗೇಮ್ಸ್ ಫ್ರಮ್ ದ ಸಿಟಿ ಆಫ್ ವಿಜಯನಗರ* ಎಂಬ ಲೇಖನದಲ್ಲಿ ಅಂದು ನೆಲದ ಮೇಲೆ, ಬಂಡೆಯ ಮೇಲಿನ ಗೆರೆಯಾಟಗಳಾದ ಮೂರು ಮನೆಯಾಟ, ಪಗಡೆಯಾಟ, ಆನೆ ನಾಯಿಯಾಟ ಹುಲಿಮನೆಯಾಟ, ಹುಲಿಕವಿಲೆ ಮನೆಯಾಟದ ವಿವರವನ್ನು ಛಾಯಚಿತ್ರಸಹಿತ ಮಾಹಿತಿ ನೀಡಿದ್ದಾರೆ.

ಕನ್ನಡ ಲೇಖನಗಳು

ಎಂ.ಎಂ. ಕಲಬುರ್ಗಿ ಸಂಪಾದಿತ *ಕರ್ನಾಟಕ ಭಾರತಿ* ಎಂಬ ತ್ರೈಮಾಸಿಕ ಪತ್ರಿಕೆಯಲ್ಲಿ ದೇವೇಂದ್ರ ಕುಮಾರ ಹಕಾರಿ ಎಂಬುವವರು *ಜಾತ್ರೆಗಳು ಮತ್ತು ಕಲೆ* ಎಂಬ ಲೇಖನದಲ್ಲಿ ಜಾತ್ರೆಗಳ ಉದ್ದೇಶ, ಅಲ್ಲಿ ನಡೆಯುತ್ತಿದ್ದ ಕಲಾ ಚಟುವಟಿಕೆಗಳು ಜನಸಾಮಾನ್ಯರು ದೇವರಿಗೆ ನಡೆದುಕೊಳ್ಳುವ ಪರಿ, ನಂಬಿಕೆ, ಆಚರಣೆ ಇತ್ಯಾದಿ ಅಂಶಗಳನ್ನು ತಿಳಿಸಿದ್ದಾರೆ. ಹಾ.ಮಾ ನಾಯಕ ಷೇಕ್ ಅಲಿ ಬಿ. ಸಂಪಾದಿತ *ಸಂಶೋಧನಾ ಲೇಖನಗಳು* ಎಂಬ ಕೃತಿಯಲ್ಲಿ

ದೀಪಾವಳಿ, ಕಾರ್ತಿಕ, ಸಂಕ್ರಾಂತಿ, ಹೋಳಿ ಇತರೆ ಭಾರತೀಯ ಹಬ್ಬಗಳ ವಿವರಣೆಯಿದೆ. ಈ ಹಬ್ಬಗಳ ಹಿನ್ನೆಲೆ, ಆಚರಿಸುವ ವಿಧಾನ ವಿವರಿಸಲಾಗಿದೆ.

ಇತಿಹಾಸ ದರ್ಶನ ಸಂಪಟ ೨೧ರಲ್ಲಿ ಕರುಣಾ ವಿಜಯೇಂದ್ರರವರು ಶಾಸನಗಳ ಬಿರುದಾವಳಿಗಳಲ್ಲಿ ನೃತ್ಯದ ಉಲ್ಲೇಖಗಳು ಎಂಬ ಲೇಖನದಲ್ಲಿ ಕ್ರಿ.ಶ. ೫ರಿಂದ ೧೩ನೆಯ ಶತಮಾನದವರೆಗಿನ ಶಾಸನಗಳಲ್ಲಿ ನೃತ್ಯವು ಉಲ್ಲೇಖವಾದ ಅಂಶ ತಿಳಿಸಿದ್ದಾರೆ. ಆ ಕಾಲದಲ್ಲಿ ಯಾವ ರೀತಿಯ ಹಬ್ಬಗಳನ್ನು ಆಚರಿಸುತ್ತಿದ್ದರು ಹಬ್ಬದ ಸಮಯದಲ್ಲಿ ದಾನ ದತ್ತಿ ನೀಡಿದ ವಿವರ, ಮನರಂಜನಾ ಕಾರ್ಯಕ್ರಮವನ್ನು ಹೇಗೆ ಹಮ್ಮಿಕೊಳ್ಳುತ್ತಿದ್ದರು ಇತ್ಯಾದಿ ವಿವರವಿದೆ. ವಸು ಎಂ.ವಿ. ಸಂಪಾದಿತ ಕನ್ನಡದೊಳ್ ಭಾವಿಸಿದ ಜನಪದಂ ಎಂಬ ಕೃತಿಯಲ್ಲಿ ಷ. ಶೆಟ್ಟರ್ ಅವರು *ವಿಜಯನಗರ ಜಲಕುಂಡಗಳು,* ಜಲಕ್ರೀಡೆಗಳು ಎಂಬ ಲೇಖನದಲ್ಲಿ ವಿಜಯನಗರ ಕಾಲದಲ್ಲಿ ಜಲಕ್ರೀಡೆಗಳು ಆಡುತ್ತಿದ್ದ ರೀತಿ ಅರಸಿಯರು ಜಲಕ್ರೀಡೆಯಾಡುವಾಗ ತೊಡುತ್ತಿದ್ದ ಉಡಿಗೆ, ಕ್ರೀಡೆಯಾಡುವಾಗ ಅವರು ಪೈಪೋಟಿ ನಡೆಸುತ್ತಿದ್ದ ರೀತಿ, ಜಲಕ್ರೀಡೆಯ ಪ್ರಾಚೀನತೆಗಳು ಎಂಬಿತ್ಯಾದಿ ವಿವರಗಳಿವೆ. *ವಿದ್ಯಾರಣ್ಯರ ಹಂಪಿ ಸ್ಮರಣೆ–೨* ವಿಶೇಷ ಸಂಚಿಕೆ ಎರಡರಲ್ಲಿ ವಿನೋದ ಕಲೆ ಹಾಗೂ ಸಾಹಿತ್ಯ ಎಂಬ ಲೇಖನದಲ್ಲಿ ಅಂದಿನ ಸಾಹಿತ್ಯದಲ್ಲಿ ಸಾಮಾನ್ಯ ಜನರ ಕ್ರೀಡೆಗಳು ಯಾವುವು? ಹೇಗೆ ಮನರಂಜನಾತ್ಮಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುತ್ತಿದ್ದರು ಇತ್ಯಾದಿ ಅಂಶಗಳಿವೆ. ಈ ರೀತಿಯಾಗಿ ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಲ್ಲಲ್ಲಿ ಸಂದರ್ಭಕ್ಕನುಗುಣವಾಗಿ ಕ್ರೀಡೆ ಮತ್ತು ವಿನೋದಾವಳಿ ಕುರಿತು ಚರ್ಚಿಸಲಾಗಿದೆ, *ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿಯ* ಕುರಿತು ಸಮಗ್ರ ಅಧ್ಯಯನವಾಗಿಲ್ಲ ಎಂದು ಹೇಳಬಹುದು.

ಸ್ವರೂಪ

ಪ್ರಸ್ತುತ ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಈ ಅಧ್ಯಯನದಲ್ಲಿ ಉಪಶೀರ್ಷಿಕೆಗಳು ಇವೆ. ಅದರ ಸಾರವು ಈ ಕೆಳಗಿನಂತಿವೆ.

ಅಧ್ಯಾಯ ಒಂದು ಪ್ರಸ್ತಾವನೆಯೊಂದಿಗೆ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನದ ವಿಧಾನ, ಸಮೀಕ್ಷೆ ಕುರಿತದ್ದಾಗಿದೆ. ಈ ಅಧ್ಯಾಯದಲ್ಲಿ ಶೀರ್ಷಿಕೆಯ ಸ್ಪಷ್ಟೀಕರಣ ನೀಡುವುದರ ಜೊತೆಗೆ ಕ್ರೀಡೆ ಮತ್ತು ವಿನೋದಾವಳಿಗಳ ಹಿನ್ನೆಲೆ ಹಾಗೂ ಸೂಕ್ಷ್ಮ ಸ್ವರೂಪವನ್ನು ತಿಳಿಸಿಕೊಡಲಾಗಿದೆ.

ಅಧ್ಯಾಯ ಎರಡು ಕ್ರೀಡೆ ಮತ್ತು ವಿನೋದಾವಳಿಗಳು ಪ್ರಾಗೈತಿಹಾಸಿಕ ಕಾಲದಿಂದ ಹೇಗೆ ಬೆಳೆದು ಬಂದವು. ಅವುಗಳಿಗೆ ದಾಖಲೆಗಳಾಗಿ ಗೀರು ಚಿತ್ರಗಳು, ವಿಜಯನಗರ ಪೂರ್ವದಲ್ಲಿದ್ದ ಸಾಹಿತ್ಯ ಕೃತಿಗಳಲ್ಲಿನ ಅಂಶ, ಶಾಸನ ಸ್ಮಾರಕಗಳ ಮೇಲಿನ ಶಿಲ್ಪಗಳನ್ನು ಅಧ್ಯಯನಕ್ಕೊಳಪಡಿಸಲಾಗುವುದು. ಬಗೆಬಗೆಯ ಕ್ರೀಡೆಗಳು ಐದುಸಾವಿರ ವರ್ಷಗಳ ಹಿಂದೆಯೇ ಇದ್ದವು ಎಂಬುದಕ್ಕೆ ಪುರಾವೆಗಳಿವೆ. ಈಜಿಪ್ಟ್, ಅಸ್ಸಿರಿಯಾ, ಬ್ಯಾಬಿಲೋನಿಯಾ, ಭಾರತ, ಚೀನಾ ಹೀಗೆ ಮಾನವ ಸಂಸ್ಕೃತಿ ಅರಳಿದ ಕಾಲವದು. ಭಾರತದಲ್ಲಿ ಆರ್ಯರ ಆಗಮನಕ್ಕಿಂತಲೂ

ಹಿಂದಿನದಾದ ಸಿಂಧೂ ಕಣಿವೆಯ ನಾಗರೀಕತೆಯಲ್ಲಿ ಕ್ರೀಡೆಗಳಿಗೆ ಮಹತ್ತರ ಸ್ಥಾನವಿತ್ತು ಎಂಬುದಕ್ಕೆ ಆಟಿಕೆಯ ಅವಶೇಷಗಳು ಲಭಿಸಿವೆ. ಈ ರೀತಿ ಕ್ರೀಡೆ ಮತು ವಿನೋದಾವಳಿಯ ಪರಿಕಲ್ಪನೆಯನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಮೂರು ಈ ಅಧ್ಯಾಯದಲ್ಲಿ ದೈಹಿಕ ಮತ್ತು ಬೌದ್ಧಿಕ, ಮನರಂಜನಾ ಕ್ರೀಡೆಗಳು ಎಂಬುದಾಗಿ ವಿಭಾಗಿಸಲಾಗಿದೆ. ದೈಹಿಕ ಕ್ರೀಡೆಯಾದ ಕುಸ್ತಿ ಇದು ಇಂದು ನಿನ್ನೆಯದಲ್ಲ. ಕ್ರಿಪೂ. ೩೦೦೦ರಲ್ಲಿ ಈಜಿಪ್ಟ್‌ನಲ್ಲಿ ಕುಸ್ತಿ ಪ್ರಚಾರದಲ್ಲಿತ್ತು. ವಿಜಯನಗರದಲ್ಲಿ ಸ್ತ್ರೀಯರಿಗೆ ಕುಸ್ತಿಯ ಪರಿಚಯವಿತ್ತು ಮತ್ತು ಮಹಾನವಮಿ ಉತ್ಸವದ ಕಾಲದಲ್ಲಿ ಅರಸನ ಮುಂದೆ ನಡೆಯುತ್ತಿದ್ದ ಕುಸ್ತಿ ಪಂದ್ಯಗಳಲ್ಲಿ ಅವರು ಭಾಗವಹಿಸುತ್ತಿದ್ದರು.[೬] ಕುಸ್ತಿ ಪಂದ್ಯಗಳಲ್ಲಿ ಅಳವಡಿಸಿಕೊಂಡಿದ್ದ ವಿಧಾನ ಮತ್ತು ನಿರ್ಣಯಗಳು ಮುಖ್ಯವಾಗಿವೆ. ಉಳಿದ ಕ್ರೀಡೆಗಳಾದ ಓಟ, ಚಿನ್ನಿದಾಂಡು, ಚಂಡಿನಾಟ, ಕತ್ತಿವರಸೆ, ಭರ್ಚಿ ಎಸೆತ, ಭಾರ ಎತ್ತುವುದು ಮುಂತಾದವು ವಿಜಯನಗರ ಕಾಲದ ಪ್ರಮುಖ ಕ್ರೀಡೆಗಳಾಗಿವೆ. ಮನರಂಜನಾ ಕ್ರೀಡೆಗಳಾದ ಕಣ್ಣುಮುಚ್ಚಾಲೆ, ಗಂಬದಗಡನ, ಮರಕೋತಿಯಾಟ, ಕೋಲಾಟ, ಅದರ ವಿಧಗಳು, ಗಾಳಿಪಟ, ಗೊಂಬೆಯಾಟ, ಕುಂಟಬಿಲ್ಲೆ, ಗೋಲಿ, ಪ್ರಾಣಿ ಕಾಳಗ ಮುಂತಾದ ಆಟಗಳ ವಿಧಾನ, ಆಡುವ ರೀತಿಯನ್ನು ಅಧ್ಯಯನ ಮಾಡಲಾಗುವುದು. ಬೌದ್ಧಿಕ ಕ್ರೀಡೆಗಳಾದ ಪಗಡೆಯಾಟ (ಚದುರಂಗ) ಇದು ಉಗಮಗೊಂಡಿದ್ದು ಎಲ್ಲಿ ಎಂಬುದರ ಬಗ್ಗೆ ಅನೇಕ ಊಹಾಪೋಹಗಳಿವೆ. ಗ್ರೀಸ್, ಭಾರತ, ಈಜಿಪ್ಟ್ ಮೊದಲಾದ ದೇಶಗಳಲ್ಲಿ ಉಗಮಗೊಂಡಿತು ಎಂಬುದು ಚರಿತ್ರೆಕಾರರ ಅಭಿಪ್ರಾಯ. ಇಂದಿನ ಚದುರಂಗ ಅದರ ಪೂರ್ವ ರೂಪದ ಉಗಮ ಸು.ಕ್ರಿಶ. ೬ನೆಯ ಶತಮಾನದಲ್ಲಿ ಭಾರತದಲ್ಲಿ ಆಯಿತು. ೧೦ನೆಯ ಶತಮಾನದ ನಂತರ ಭಾರತದಿಂದ ಮಧ್ಯಪೂರ್ವ ದೇಶಗಳ ಮೂಲಕ ಸ್ಪೇನ್ ಮತ್ತು ಯುರೋಪಿಯನ್ ದೇಶಗಳತ್ತ ಹರಡಿತ್ತು ಎಂದು ಹೇಳಲಾಗುತ್ತದೆ. ಈ ಕ್ರೀಡೆ ವಿಜಯನಗರ ಕಾಲದಲ್ಲಿತ್ತು ಎಂಬುದಕ್ಕೆ ಅನೇಕ ಆಧಾರಗಳಿವೆ. ಇಮ್ಮಡಿ ದೇವರಾಯನಿಗೆ ಚದುರಂಗದ ಆಟವೆಂದರೆ ಬಹಳ ಪ್ರೀತಿ. ಒಂದು ಸಂದರ್ಭದಲ್ಲಿ ಆ ಆಟವನ್ನು ಉತ್ತಮನಂಬಿ ಎಂಬ ವ್ಯಕ್ತಿಯ ಜೊತೆ ಆಡಿದ್ದುಂಟು.[೮] ಮೂರು ಮನೆಯಾಟ, ಹುಲಿಮನೆಯಾಟ, ಆನೆ ನಾಯಿಯಾಟ, ಹುಲಿಮೇಕೆ ಆಟ, ಚೆನ್ನೆಮಣಿಯಾಟ, ಒಂದು ಗೆರಯಾಟ ಮುಂತಾದ ಕ್ರೀಡೆಗಳ ಕುರಿತು ಆಧಾರಗಳಿವೆ. ಆಟದ ನಿಯಮ, ಆಡುತ್ತಿದ್ದ ರೀತಿ, ಮುಂತಾದ ವಿಷಯಗಳನ್ನು ಇಲ್ಲಿ ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ನಾಲ್ಕು ವಿನೋದಾವಳಿ- ಕಲಾಪ್ರದರ್ಶನ, ಧಾರ್ಮಿಕೋತ್ಸವಗಳು, ದೇವತಾರಾಧನೆಯ ಅಂಗವಾಗಿದ್ದವು. ವಿಜಯನಗರದಲ್ಲಿ ವರ್ಷದಲ್ಲಿ ಬಹುಭಾಗವೆಲ್ಲಾ ವಿಪರೀತ ಸೆಕೆಯಿದ್ದ ಕಾರಣ ವಿನೋದಾವಳಿ ಹೊರಬಯಲಿನಲ್ಲಿಯೇ ನಡೆಯುತ್ತಿದ್ದವು. ಸಾರ್ವಜನಿಕ ಸ್ಥಳಗಳಲ್ಲಿನ ದೇವತಾ ಪ್ರತಿಮೆಗಳು ಕಣ್ಮನ ಸೆಳೆಯುವಂತಿದ್ದವು. ರಾಮನವಮಿ, ಕೃಷ್ಣಜನ್ಮಾಷ್ಟಮಿ, ದೀಪಾವಳಿ, ಮಹಾಶಿವರಾತ್ರಿ, ಕಾಮನಹಬ್ಬ, ಇವೆಲ್ಲಕ್ಕೂ ಮಿಗಿಲಾಗಿ ಪ್ರಸಿದ್ಧವಾದ ಮಹಾನವಮಿ, ಬಡಿಗೆಹಬ್ಬ, ಬೇಟೆ ಹಬ್ಬ ಮೊದಲಾದ ಉತ್ಸವಗಳಿಂದ ಜನರು ಹರ್ಷಚಿತ್ತರಾಗಿದ್ದರು. ಕೌಶಲ ಪ್ರದರ್ಶನ, ನೃತ್ಯ, ದೇವತಾ ವಿಗ್ರಹಗಳ ಮೆರವಣಿಗೆ, ರಥ, ಮಲ್ಲಯುದ್ಧ, ಗೊಂಬೆಯಾಟ, ಇವೆಲ್ಲವೂ ಧಾರ್ಮಿಕ ಸಮಾರಂಭಗಳಲ್ಲಿ ಜರುಗುತ್ತಿದ್ದವು.

ವಿಜಯನಗರ ಕಾಲದ ಪ್ರಜೆಗಳು ವಿಹಾರ ಪ್ರಿಯರಾಗಿದ್ದರು. ನಗರದಲ್ಲಿ ಬಗೆಬಗೆಯಸಂತೆಗಳಿದ್ದವು. ಮನಸಂತೋಷಕ್ಕಾಗಿ ಉತ್ಸವಗಳನ್ನು ನೆರವೇರಿಸುವುದು, ಶ್ರೀಮಂತ ಪೌರರ ಕರ್ತವ್ಯವಾಗಿತ್ತು. ವಿಜಯನಗರ ಅರಸರು ಬೇಟೆಯನ್ನು ಮನರಂಜನೆಯ ದೃಷ್ಟಿಯಿಂದ ಆಡುತ್ತಿದ್ದರು. ಸಂಗೀತ, ನೃತ್ಯ, ನಾಟಕ, ಮುಂತಾದ ವಿನೋದಾವಳಿಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಐದು ವಿಜಯನಗರ ಕಾಲದಲ್ಲಿದ್ದ ಕ್ರೀಡೆ ಮತ್ತು ವಿನೋದಾವಳಿ ಇಂದು ಜಾಗತಿಕರಣ, ಕೈಗಾರಿಕಾಕರಣ, ಕಂಪ್ಯೂಟರ್‌ಗಳ ಹಾವಳಿಯಿಂದ ಹೇಗೆ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ ಇತ್ಯಾದಿ ಅಂಶಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದೆ.

ಅಧ್ಯಾಯ ಆರು ಈ ಅಧ್ಯಾಯದಲ್ಲಿ ಸಮಾರೋಪದ ಜೊತೆಗೆ ಅಧ್ಯಯನದ ಫಲಿತಗಳು ಮುಂದಿನ ಅಧ್ಯಯನಕ್ಕಾಗಿ ಕ್ರಮಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಆಕರಗ್ರಂಥಗಳ ಪಟ್ಟಿ, ನಕ್ಷೆ, ಸಂಕ್ಷೇಪಗಳು, ಛಾಯಚಿತ್ರಗಳನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಸಮಗ್ರ ಅಧ್ಯಯನ ದೃಷ್ಟಿಯಿಂದ ವಿಷಯ ಸಂಗ್ರಹಣೆ ಮಾಡಿ ಕೂಲಂಕಷವಾಗಿ ಪರಾಮರ್ಶಿಸಿ, ವಿವರಿಸಿ, ವಿಶ್ಲೇಷಿಸಿ ಅಧ್ಯಯನ ಕೈಗೊಳ್ಳುವುದು ಪ್ರಸ್ತುತ ಮಹಾಪ್ರಬಂಧದ ಉದ್ದೇಶವಾಗಿದೆ.

ಟಿಪ್ಪಣಿಗಳು

೧. ನಾಗರಾಜ ಹೆಚ್.ಎಂ., ವಿಜಯನಗರ ಇಮ್ಮಡಿ ದೇವರಾಯ, ಪು-೨೧೮
೨. E.CXII, Kg 29,ಪು-236)
೩. ಹೆಚ್.ಎಂ. ನಾಗರಾಜು, ವಿಜಯನಗರದ ಇಮ್ಮಡಿ ದೇವರಾಯ, ಪು-೨೦೫.
೪. ಸೋಮಶೇಖರ್ ಎಸ್.ವೈ. ಕರ್ನಾಟಕದ ಬಿರುದಾವಳಿಗಳು ಪು-೧೬೩
೫. ಅದೇ ಪು-೧೯೬-೧೯೭
೬. ಕಿರಿಯರ ವಿಶ್ವಕೋಶ, ಸಂ-೬, ಪು-೨೧೨
೭. ಸಿವೆಲ್ ರಾಬರ್ಟ., ಫರ್ಗಾಟನ್ ಎಂಪೈರ್, ಪು-೨೬೮, ೭೧, ೩೭೮.
೮. ನೀಲಕಂಠಶಾಸ್ತ್ರೀ ಕೆ.ಎ. ಮತ್ತು ವೆಂಕಟರಮಣಯ್ಯ ಎನ್., ಫರದರ್ ಸೂರ್ಸಸ್ ಆಫ್ ವಿಜಯನಗರ, ಪು-೫೧
೯. ನರೇಂದ್ರ, ರೈದೇರ್ಲ, ಕನ್ನಡ ಸಾಹಿತ್ಯದಲ್ಲಿ ಬೇಟೆ ಸಾಹಿತ್ಯ, ಪು-೧೯.

ಅಧ್ಯಾಯ ಎರಡು

ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ಎರಡು

ಚಾರಿತ್ರಿಕ ಹಿನ್ನೆಲೆ

ಒಂದು ವಿಷಯವನ್ನು ಅಧ್ಯಯನ ಮಾಡಲು ಕೈಗೆತ್ತಿಕೊಂಡರೆ ಮೊದಲು ಆ ವಿಷಯದ ಚಾರಿತ್ರಿಕ ಹಿನ್ನೆಲೆ ನೋಡುವುದು ಕ್ರಮ. ವಿಭಿನ್ನಕಾಲಿಕ ವಿಷಯದ ಪರಾಮರ್ಶೆ ನಡೆಸುವಾಗ ಅದರ ಹಿನ್ನೆಲೆಯನ್ನು ಅಧ್ಯಯನ ಮಾಡಬೇಕು. ಅದರಿಂದ ಆ ವಿಷಯದ ವೈಶಿಷ್ಟ್ಯ ಮತ್ತು ಪರಂಪರೆ ನಿರೂಪಿಸಲು ಸಾಧ್ಯವಾಗುವುದು. ಇಲ್ಲಿ ಚಾರಿತ್ರಿಕ ಹಿನ್ನೆಲೆ ಅಂದರೆ ಕರ್ನಾಟಕದ ಕ್ರೀಡೆ ಮತ್ತು ವಿನೋದಾವಳಿ ಪರಂಪರೆಯನ್ನು ಸಾಕ್ಷ್ಯಾಧಾರಗಳಿಂದ ಪ್ರತಿಪಾದಿಸುವುದೇ ಆಗಿದೆ.

ಕ್ರೀಡೆ ಮತ್ತು ವಿನೋದಾವಳಿಗಳು ಎಲ್ಲಾ ಕಾಲದ ಜನರ ಸಮಸ್ತ ಚಟುವಟಿಕೆಗಳನ್ನು ಒಳಗೊಳ್ಳುವ ವಿಷಯ ಎಂದು ಎಷ್ಟೇ ಬಲವಾಗಿ ಪ್ರತಿಪಾದಿಸಿದರೂ, ಅದು ಪ್ರಾಚೀನ ಮಾನವ ಸಂಸ್ಕೃತಿಯ ಉಳಿಕೆ ಎನ್ನುವ ಸಾಂಪ್ರದಾಯಿಕ ಪಂಥದ ವಿದ್ವಾಂಸರ ಅಭಿಪ್ರಾಯಗಳನ್ನು ಪೂರ್ತಿಯಾಗಿ ತಳ್ಳಿಹಾಕಲು ಸಾಧ್ಯವಿಲ್ಲ. ಕ್ರೀಡೆ ಮತ್ತು ವಿನೋದಾವಳಿಯನ್ನು ಪ್ರಾಚೀನ ಮಾನವ ಸಂಸ್ಕೃತಿಯ ಅವಶೇಷವಾಗಿ ನೋಡುವುದು ಕೂಡ ಅಂಥ ಒಂದು ದೃಷ್ಟಿಕೋನವೇ. ಹಾಗೆ ನೋಡಿದರೆ ಮಾನವನಿಗೆ ಸಂಬಂಧಿಸಿದ ಸಮಸ್ತ ಚಟುವಟಿಕೆಗಳು ಪ್ರಾಚೀನ ಸಂಸ್ಕೃತಿಯ ಅವಶೇಷಗಳೇ ಆಗಿವೆ. ಅವುಗಳ ಇತಿಹಾಸ ಮತ್ತು ಪರಂಪರೆ ತಿಳಿಯುವ ಮತ್ತು ಪ್ರಾಚೀನತೆಯನ್ನು ದೃಢಪಡಿಸುವ ಪ್ರಯತ್ನ ಮಾಡಲಾಗಿದೆ. ಪ್ರಾಗೈತಿಹಾಸಿಕ ಕಾಲದ ಆಕರ, ಪುರಾತತ್ತ್ವೀಯ, ಶಾಸನ, ಕಾವ್ಯ, ಶಿಲ್ಪ, ವಿದೇಶಿ ಪ್ರವಾಸಿಗರ ವರದಿಗಳ ಆಧಾರದಿಂದ ದೃಢಪಡಿಸಿ ಪ್ರಾಚೀನತೆಯನ್ನು ಹೇಳುವ ಪ್ರಯತ್ನ ಮಾಡಲಾಗಿದೆ.

ಕ್ರೀಡೆ ಮತ್ತು ವಿನೋದಾವಳಿಯನ್ನು ಕೇವಲ ಚಾರಿತ್ರಿಕ ದೃಷ್ಟಿಯಿಂದ ಸೂಕ್ಷ್ಮ ಅಧ್ಯಯನ ಕ್ರಮದಲ್ಲಿ ಅಭ್ಯಸಿಸುವುದು ಯುಕ್ತವಲ್ಲ. ಬದಲಾಗಿ ಅವುಗಳನ್ನು ಅಂತರ್‌ಶಿಸ್ತೀಯ ಸಮಗ್ರ ನೆಲೆಯಲ್ಲಿ ಪರಿಭಾವಿಸುವ ಅಗತ್ಯವಿದೆ. ವಸ್ತು ವಿಷಯದ ಮಾನಸಿಕ, ಸಾಮಾಜಿಕ, ಸಾಂಸ್ಕೃತಿಕ ಅಂತಃಸತ್ವವನ್ನು ಗುರುತಿಸದೆ ಸಮಗ್ರ ಹಿನ್ನೆಲೆಯಲ್ಲಿ ಅದರ ಮಹತ್ವವನ್ನು ಗ್ರಹಿಸದೆ ಕೇವಲ ವಿಷಯದ ಮೂಲ ಮತ್ತು ಪ್ರಸರಣದ ಬಗೆಗೆ ತಲೆಕೆಡಿಸಿ ಕೊಳ್ಳುವುದು

ಅರ್ಥಹೀನ. "One can Speak about Origin of any Phenomenon only After that Phenamenon has been described".[1] ಎಂಬ ಪ್ರಾಪ್ ಅವರ ವಿಚಾರಧಾರೆ ಇಲ್ಲಿ ಉಲ್ಲೇಖನೀಯ. ಯಾವುದೇ ಘಟನೆಯ ಮೂಲ ಹುಡುಕುವ ಮೊದಲು ಅದನ್ನು ವರ್ಣಿಸಬೇಕು ಎಂದು ಅವರು ಪ್ರತಿಪಾದಿಸುತ್ತಾರೆ. ಆದರೆ ವಸ್ತುವಿಷಯದ ಚಾರಿತ್ರಿಕ ಪರಿಶೀಲನೆ ಸಂಪೂರ್ಣ ನಿರರ್ಥಕ ಎಂದು ಅವರು ಸಾರಸಗಟಾಗಿ ಚಾರಿತ್ರಿಕ ದೃಷ್ಟಿಯನ್ನು ತಳ್ಳಿಹಾಕಿಲ್ಲ. ವಿಷಯದ ಸ್ಪಷ್ಟ ಗ್ರಹಿಕೆ, ಅರ್ಥೈಸುವಿಕೆಗೆ ಚಾರಿತ್ರಿಕ ಹಿನ್ನೆಲೆಯ ಅಪೇಕ್ಷಣೀಯವಾದ್ದರಿಂದ ಕ್ರೀಡೆ ಮತ್ತು ವಿನೋದಾವಳಿಯ ಚಾರಿತ್ರಿಕ ಹಿನ್ನೆಲೆ ಸಮರ್ಥನೀಯ.

ಮನುಷ್ಯ ತನ್ನ ಆಹಾರಕ್ಕಾಗಿ, ನೆಲೆಗಾಗಿ ನಡೆಸುತ್ತಿದ್ದ ಉದ್ದೇಶಪೂರ್ವಕ ಚಟುವಟಿಕೆಗಳಿಗೆಲ್ಲಾ ಕ್ರೀಡೆ ಮತ್ತು ವಿನೋದಾವಳಿಯ ಹಿನ್ನೆಲೆಯಿದೆ. ಆಹಾರಕ್ಕಾಗಿ ಅವನು ಪ್ರಾಣಿಗಳನ್ನು ಕೊಲ್ಲಬೇಕಾಗಿತ್ತು. ಸಹಸ್ರಾರು ವರ್ಷಗಳ ಹಿಂದೆ ಜನಿಸಿದ ಮಾನವ ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆ, ಗ್ರಹಿಸುವ ಶಕ್ತಿ ಹೊಂದುತ್ತಾ ತನ್ನ ಸುತ್ತ-ಮುತ್ತ ಚಲಿಸುತ್ತಿದ್ದ ಇತರ ಜೀವಗಳ ಚಟುವಟಿಕೆಗಳನ್ನು ಗಮನಿಸಿ ಅವುಗಳ ಅನುಕರಣೆ ಮಾಡಲು ಕಲಿತನೆಂದು ಹೇಳಬಹುದು.

ಕ್ರೀಡೆಗಳು ಇದೇ ಕಾಲಘಟ್ಟದಲ್ಲಿ ಪ್ರಾರಂಭವಾದವು ಎಂದು ಹೇಳುವುದು ಕಷ್ಟ. ಮನುಷ್ಯ ಮತ್ತು ಪ್ರಾಣಿಗಳ ಸರ್ವಸಾಧಾರಣವಾದ ಸಹಜ ಕ್ರಿಯೆಯೆಂದರೆ ಕ್ರೀಡೆ. ಕರು ಅಥವಾ ಮರಿ ಹುಟ್ಟಿದ ಕೆಲವೇ ನಿಮಿಷಗಳಲ್ಲಿಯೇ ಓಡಾಡಿ ಜಿಗಿಯುತ್ತದೆ, ಕುಣಿದು ಕುಪ್ಪಳಿಸುತ್ತದೆ. ಮಗು ತೊಟ್ಟಿಲಲ್ಲಿರುವಾಗಲೇ ಅದರ ಆಟಗಳು ಶುರುವಾಗುತ್ತವೆ. ಅಳು-ನಗು, ಕೇಕೆ, ಕೈಕಾಲು ಕುಣಿಸುವಿಕೆಗಳಲ್ಲಿ ಕ್ರೀಡೆಯ ಪ್ರಾಥಮಿಕ ಸ್ವರೂಪವನ್ನು ಗುರುತಿಸಬಹುದು. ಗಿಲಿಕೆಯ ನಾದಕ್ಕೆ ಸರಿಯಾಗಿ ಕೈಕಾಲುಗಳನ್ನು ಲಯಬದ್ಧವಾಗಿ ಕುಣಿಸುತ್ತದೆ. ಮಗು ತೊಟ್ಟಿಲಿನಿಂದ ನೆಲಕ್ಕುರುಳಿತೆಂದರೆ, ನೆಲದ ಮೇಲೆ ನಿಂತಿತೆಂದರೆ ಅದರ ಆಟಗಳು ಸುತ್ತಣವರ ಕಣ್ಣಿಗೆ ಹಬ್ಬವಾಗುತ್ತವೆ. ಈ ಕ್ರೀಡೆಗಳು ವಯೋಮಾನಕ್ಕನುಗುಣವಾಗಿ ಹೆಚ್ಚುತ್ತಾ, ಬದಲಾಗುತ್ತಾ, ಜೀವನ ಪರ್ಯಂತ ಜರುಗುತ್ತವೆ. ಪ್ರಾಣಿ ಸಮಾಜದಲ್ಲಿ ಹೆಚ್ಚು ಕಡಿಮೆ ಇದೇ ಪುನರಾವರ್ತನೆಯಾಗುತ್ತದೆ.

ಮಾನವ ಸಮಾಜದ ಕ್ರೀಡೆ ಮತ್ತು ವಿನೋದಗಳನ್ನು ಗಮನಿಸಿದಾಗ, ಅವು ಜೀವಂತ ಪ್ರಾಣಿಗಳ ಅಥವಾ ಮಾನವರ ಸಹಜ ಲಕ್ಷಣಗಳೆಂಬುದು ಹಾಗೂ ಅವು ಬದುಕಿನ ಒಂದು ಭಾಗವಾಗಿದ್ದು, ಹುಟ್ಟಿನಿಂದ ಸಾವಿನ ತನಕ ಒಂದಲ್ಲ ಒಂದು ರೂಪದಲ್ಲಿ ಅಸ್ತಿತ್ವದಲ್ಲಿವೆಯೆಂಬುದು ವೇದ್ಯವಾಗದಿರದು. ಅವು ಉಸಿರಿನಷ್ಟೇ ಸಹಜ. ಆಹಾರ ಪಾನೀಯಗಳಿಗಿಂತ ಮುಖ್ಯ. ಸಂಗಡಿಗರೊಡನೆ ಆಟವಾಡುವ ಮಕ್ಕಳಿಗೆ ಊಟ, ತಂದೆ-ತಾಯಿ ಯಾರು ಬೇಡ, ಅವು ಕೇವಲ ವ್ಯಾಯಾಮ, ಮನರಂಜನೆಯ ಸಾಧನಗಳಲ್ಲ, ಜೀವನದ ಸ್ವಾಭಾವಿಕ ವ್ಯಾಪಾರಗಳು, ಚೈತನ್ಯದ ಕುರುಹುಗಳು. ಆಹಾರ ಪಚನಕ್ಕೆ, ಅಂಗಾಂಗಳ ವೃದ್ಧಿಗೆ, ಮನೋವಿಕಾಸಕ್ಕೆ ಅತ್ಯವಶ್ಯಕವಾಗಿ ಬೇಕಾಗಿ ನಡೆಯುವ ನೈಸರ್ಗಿಕ ಕ್ರೀಯೇ, ಜ್ಞಾನ, ವಿಜ್ಞಾನ, ತಂತ್ರಜ್ಞಾನಗಳಿಗೆ ಸಂಬಂಧಿಸಿದ ಕೆಲವು ಪ್ರಾಥಮಿಕ ಅವಿಷ್ಕಾರಗಳಿಗೆ ಕ್ರೀಡೆಗಳೇ ಮೂಲ. ಆಟವಾಡುತ್ತಾ,

ಕಲ್ಲಿಗೆ ಕಲ್ಲು ತಾಕಿ ಬೆಂಕಿಯ ಕಿಡಿ ಸಿಡಿದು ಒಣಗಿದ ಹುಲ್ಲು ಹತ್ತಿಕೊಳ್ಳಲಾಗಿ ಮಾನವ ಬೆಂಕಿ ಕಂಡುಕೊಂಡ.[೨]

ಆದಿಮಾನವರ ಕ್ರೀಡೆ ಮತ್ತು ವಿನೋದಗಳು ಅತ್ಯಂತ ಸರಳವಾಗಿ, ವೈವಿಧ್ಯರಹಿತ ವಾಗಿದ್ದಿರಬೇಕು. ಕಾಲಕ್ರಮೇಣ ಅವುಗಳ ಮೂಲಕವೇ ಬುದ್ಧಿ ವಿಕಾಸಗೊಂಡು, ಕೈಚಳಕ ಕುದುರಿ ಸಂಕೀರ್ಣತೆ ತಲೆದೋರಿದಲ್ಲದೆ ಹೊಸ ಹೊಸ ಅಂಶಗಳು ಉಗಮ ಗೊಂಡವು. ಬರಬರುತ್ತಾ ಅವು ಅವನ ವರ್ತನೆಯ ಅಭಿವ್ಯಕ್ತಿ ಮಾದ್ಯಮಗಳಾದುವಲ್ಲದೆ ಗುಣಶೀಲ ಸಂವರ್ಧನೆಗೂ ಕಾರಣವಾಗುತ್ತವೆ. ಸಹನೆ, ಸಹಿಷ್ಣುತೆ, ಯುಕ್ತಿ, ಐಕ್ಯ ಮನೋಭಾವನೆ, ಬ್ರಾತೃತ್ವ, ಸಹಕಾರ, ಮನೋಧರ್ಮ ಮೊದಲಾದ ಗುಣಗಳು ಕ್ರೀಡೆ, ವಿನೋದಗಳ ಫಲವಾಗಿ ವರ್ಧಿಸುತ್ತವೆ. ಕೊನೆ ಕೊನೆಗೆ ಮಾತ್ಸರ್ಯ, ಸ್ಪರ್ಧಾ ಮನೋಭಾವನೆಗಳ ಸ್ಫೋಟನೆಗೂ ಅವು ದಾರಿಯಾಗುವುದುಂಟು, ಕೊನೆಗೆ ವಿರೋಧಿಗಳನ್ನು ಜಯಿಸಲೇಬೇಕೆಂಬ ಛಲ ಹುಟ್ಟುತ್ತದೆ. ಯುದ್ಧದ ಕಲ್ಪನೆ ಕುಡಿಯೊಡೆಯುತ್ತದೆ. ಮರಕೋತಿ, ಕಣ್ಣಾಮುಚ್ಚಾಲೆ, ಕುಸ್ತಿ, ಕೋಲಾಟ, ಕತ್ತಿವರಸೆ, ಚೆಂಡಾಟ, ಇವೇ ಮೊದಲಾದವು ಪರಿಷ್ಕಾರಗೊಂಡು ಯುದ್ಧಕಲೆಯ ಅವಿಭಾಜ್ಯ ಅಂಗಗಳಾದವು. ಮೊದಮೊದಲಿನ ಕ್ರೀಡೆಗಳು ಸಹಜವಾದ ಒತ್ತಡದ ಪರಿಣಾಮವಾಗಿ ಅವಿರ್ಭವಿಸಿರಬೇಕು, ಬರಬರುತ್ತಾ ಅವು ಬಾಳಿನ ಬೋಳುತನವನ್ನು ಬಗೆಹರಿಸುವ ವಿನೋದಾವಳಿಗಳ ಸಾಧನಗಳಾಗಿಯೂ, ಅನಂತರ ಅವು ಸಾಮಾಜಿಕ ಮತ್ತು ರಾಷ್ಟ್ರೀಯ ಅವಶ್ಯಕತೆಗಳನ್ನು ಪೂರೈಸುವ ಮಾಧ್ಯಮಗಳಾಗಿಯೂ ವಿಕಾಸಗೊಂಡವು. ಜತೆಗೆ ಬೌದ್ಧಿಕ, ದೈಹಿಕ ಮತ್ತು ಮನರಂಜನಾತ್ಮಕ ಕೌಶಲ್ಯಗಳನ್ನು ಪರೀಕ್ಷಿಸುವ ಮಾನದಂಡಗಳಾಗಿಯೂ ಬಳಕೆಯಾಗುತ್ತಿವೆ. ಅಷ್ಟೇ ಅಲ್ಲ, ಚೌಕಬಾರ, ಚದುರಂಗ, ಪಗ್ಗದಾಟಗಳು, ಬೌದ್ಧಿಕ ಶಕ್ತಿ ಪರೀಕ್ಷೆಗೆ ಕುಸ್ತಿ, ಗುಂಡೆತ್ತುವ, ಚಿನ್ನಿಕೋಲು, ಕ್ರೀಡೆಗಳು ದೈಹಿಕ ಪರೀಕ್ಷೆಗೊ ಬುಗುರಿ, ಗೋಲಿ, ಗಾಳಿಪಟ, ಕಣ್ಣಾಮುಚ್ಚಾಲೆ, ಕುಂಟಾಬಿಲ್ಲೆ, ಇತ್ಯಾದಿಗಳು ಮನರಂಜನಾತ್ಮಕ ಪರೀಕ್ಷೆಗೆ ಅನುವಾಗಿವೆ. ಪ್ರಾಣಿವಂಶದ ಉಗಮದಷ್ಟೇ ಕ್ರೀಡೆಗಳು ಪ್ರಾಚೀನವೆಂಬುದಂತೂ ಸತ್ಯ. ಜೀವ ವಿಕಾಸವಾದಂತೆಲ್ಲ ಅವು ಮಾರ್ಪಾಟು ಹೊಂದುತ್ತಾ ಬಂದಿವೆ.

ಪ್ರಪಂಚದಲ್ಲಿಯೇ ಪ್ರಾಚೀನ ಲಿಖಿತವೆನಿಸಿಕೊಂಡಿರುವ ವೇದಗಳಲ್ಲಿ ಕ್ರೀಡೆಗಳ ಪ್ರಸ್ತಾಪ ಬರುತ್ತದೆ. ಋಗ್ವೇದದಲ್ಲಿ ಅಕ್ಷಕ್ರೀಡೆಯ ಉಲ್ಲೇಖ ೧೦ನೆಯ ಮಂಡಲ ೩೪ನೆಯ ಸೂಕ್ತದಲ್ಲಿದೆ. ರಾಷ್ಟ್ರೀಯ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿಯೂ ಕ್ರೀಡೆಗಳ ಉಲ್ಲೇಖವಿದೆ.

ಕ್ರೀಡೆಗಳು ಇಂದು ನಿನ್ನೆಯವಲ್ಲ, ಬಗೆ ಬಗೆಯ ಕ್ರೀಡೆಗಳು ಪ್ರಾಚೀನ ಈಜಿಪ್ಟ್, ಗ್ರೀಸ್, ಬ್ಯಾಬಿಲೋನಿಯಾ, ಭಾರತ ಮತ್ತು ಚೀನಾಗಳಲ್ಲಿ ಐದು ಸಾವಿರ ವರ್ಷಗಳ ಹಿಂದೆಯೇ ಇದ್ದವೆಂಬುದನ್ನು ಐತಿಹಾಸಿಕ ದಾಖಲೆಗಳು ದೃಢಪಡಿಸಿವೆ. ಅಂದಿನ ಈಜಿಪ್ಟಿನ ಜೀವನದಿ ನೈಲ್‌ನ ಉದ್ದಕ್ಕೂ ಮಾನವತೆ ಮುಗುಳು ನಕ್ಕಿತು. ಆ ನದಿಯಲ್ಲಿ ದೋಣಿಗಾರಿಕೆ, ಮೀನುಗಾರಿಕೆ, ಕ್ರೀಡೆಗಳು, ಆ ದೇಶದಲ್ಲಿ ಸಾಮಾಜಿಕ ಹಂತಗಳು, ಸುಸ್ಪಷ್ಟ ರೂಪ

ತಳೆದಿದ್ದವು. ಮಲ್ಲಯುದ್ಧ, ಅಂಗಸಾಧನೆ, ಬಾರ ಎತ್ತುವುದು, ಎಸೆಯುವುದು, ಸಾಮಾನ್ಯರ ಕ್ರೀಡೆಗಳು, ಗೂಳಿಕಾಳಗ ಜನಪ್ರಿಯವಾಗಿತ್ತು. ಬೇಟೆ ಮತ್ತು ಮೀನು ಹಿಡಿಯುವುದು ಶ್ರೀಮಂತರಿಗೆ ಇಷ್ಟ, ಗಾಳಹಾಕಿ ಮೀನು ಹಿಡಿಯುವ ಪದ್ಧತಿ ಕ್ರಿ.ಪೂ. ನಾಲ್ಕುಸಾವಿರ ವರ್ಷಗಳಷ್ಟು ಹಿಂದೆಯೇ ಪ್ರಚಲಿತದಲ್ಲಿತ್ತು. ಅದೇ ವೇಳೆಗೆ ಹಾಕಿಯನ್ನು ಹೋಲುವ ಒಂದು ಆಟವೂ ಇದ್ದಿತು. ಈ ಆಟದ ಚಿತ್ರ ನೈಲ್ ಕಣಿವೆಯಲ್ಲಿ ಮಿನಿಯಾದ ಬಳಿ ಬೆಳಕಿಗೆ ಬಂದ ಪ್ರಾಚೀನ ಗೋರಿಯ ಮೇಲಿದೆ. ಬೊಂಬೆ, ಆಟಿಗೆ ದೋಣಿ, ಗೋಲಿ, ಬುಗುರಿ, ಚೆಂಡು ಮಕ್ಕಳ ಆಟದ ಸಾಮಗ್ರಿಗಳಾಗಿದ್ದವು. ಕೆಲ ಹಲಗೆ ಆಟಗಳೂ ಆ ಕಾಲದಲ್ಲೆ ರೂಪುಗೊಂಡು.[೩] ಪುರಾತನ ಅಸ್ಸೀರಿಯಾ, ಬ್ಯಾಬಿಲೋನಿಯಾಗಳಲ್ಲಿ ಮುಷ್ಟಿಯುದ್ಧ, ಕುಸ್ತಿ, ಬಿಲ್ಲುಗಾರಿಕೆ, ಪ್ರಚಲಿತವಿದ್ದ ಕ್ರೀಡೆಗಳು. ಗ್ರೀಸ್‌ನಲ್ಲಂತೂ ಇಲಿಯಡ್, ಒಡಿಸ್ಸಿಗಳಲ್ಲಿ ವರ್ಣಿತವಾಗಿರುವಂತೆ ಮಲ್ಲಯುದ್ಧ, ಮುಷ್ಟಿಯುದ್ಧ ಮುಂತಾದ ಕ್ರೀಡೆಗಳನ್ನು ಅತಿಥಿ ಸತ್ಕಾರಕ್ಕಾಗಿ ಏರ್ಪಡಿಸಲಾಗುತ್ತಿತ್ತು. ಧಾರ್ಮಿಕ ಉತ್ಸವಗಳಲ್ಲಿ ಓಟ ಸ್ಪರ್ಧೆ, ಕುದುರೆ, ಪಂದ್ಯ, ರಥಸ್ಪರ್ಧೆ, ಕುಸ್ತಿ, ಚಕ್ರ ಎಸೆತ ಮುಂತಾದ ಪಂದ್ಯಗಳು ಏರ್ಪಡುತ್ತಿದ್ದವು.[೪]

ಈಜಿಪ್ಟ್, ಗ್ರೀಸ್‌ಗಳಂತೆ ಭಾರತ ಕ್ರೀಡಾ ಪ್ರೇಮವುಳ್ಳ ರಾಷ್ಟ್ರ, ಸಿಂಧೂ ಕಣಿವೆಯ ನಾಗರೀಕತೆಯಲ್ಲಿ ಕ್ರೀಡೆಗಳಿಗೆ ಮಹತ್ವದ ಸ್ಥಾನವಿತ್ತು. ಅಂದು ಪಗಡೆಯಾಟ ತೀರಾ ಸಾಮಾನ್ಯವಾಗಿತ್ತು. ಹರಪ್ಪಾ, ಮಹೆಂಜೊದಾರೊ ಅವಶೇಷಗಳಲ್ಲಿ ಪಗಡೆಯ ದಾಳಗಳು ಹೇರಳವಾಗಿ ದೊರತಿವೆ. ಸುಮಾರು ನಾಲ್ಕುಸಾವಿರದ ಐನೂರು ವರ್ಷಗಳಿಗೆ ಹಿಂದೆಯೇ ಈ ನೆಲದ ಮಕ್ಕಳು ಆಡುತ್ತಿದ್ದ ಆಟಿಗೆಗಳು ಅವಶೇಷಗಳಲ್ಲಿ ಲಭಿಸಿವೆ. ದಾರದ ಆಧಾರದಲ್ಲಿ ಜಾರಿ ಬರುವ ಪುಟ್ಟ ಗೊಂಬೆ, ಚಲಿಸುವ ತಲೆಗಳಿರುವ ಪಶುಗಳು, ಆಟಿಗೆ ಗಾಡಿಗಳು, ಹಕ್ಕಿಗಳ ಆಕಾರದ ಶಿಳ್ಳೆಗಳು, ಮಣ್ಣಿನಿಂದ ಮಾಡಿದ ಈ ಎಲ್ಲಾ ಆಟಿಗೆಗಳು ಆಗಿನ ಮಕ್ಕಳನ್ನು ರಂಜಿಸುತ್ತಿದ್ದವು.[೫]

ಪ್ರಾಚೀನ ಭಾರತದ ಎಷ್ಟೋ ಮನರಂಜನೆಗಳನ್ನು ವೃತ್ತಿಪರ ಮನೋರಂಜನಾಕಾರರು ಒದಗಿಸುತ್ತಿದ್ದರು. ತುಂಬಾ ಬೆಳವಣಿಗೆ ಹೊಂದಿದ ನಾಟಕ, ಸಂಗೀತ ಮತ್ತು ನೃತ್ಯಗಳಂತ ಕಲೆಗಳನ್ನು ಅನುಸರಿಸುವವರಲ್ಲದೆ, ಹಳ್ಳಿ ಮತ್ತು ಪಟ್ಟಣಗಳಿಗೆ ತಿರುಗಾಡಿ ಸಂಸ್ಕರಿತ ಕಲಾರೂಪಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲಾಗದೆ ಜನಸಾಮಾನ್ಯರನ್ನು ರಂಜಿಸುವ ಇತರರೂ ಇದ್ದರು. ಪ್ರಾಚೀನ ಕಾಲದಿಂದಲೂ ಸಂಗೀತಗಾರರು, ಲಾವಣಿಗಾರರು, ದೊಂಬರು, ಕೈಚಳಕ ಮಾಡುವವರು, ಜಾದೂ ಮಾಡುವವರು, ಹಾವಾಡಿಗರೂ ತುಂಬಾ ಜನಪ್ರಿಯರಾಗಿದ್ದರು.

ರಾಜಾಶ್ರಯದ ರಂಗಭೂಮಿಯಂತೆ ಸಾಹಿತ್ಯದಲ್ಲಿ ಆಗಾಗ ಉಲ್ಲೇಖಿಸಲ್ಪಡುವ ಪುರಾಣ ದಂತಕತೆಗಳಿಗಿಂತ ದೃಶ್ಯಗಳನ್ನು ನೃತ್ಯ, ಹಾಡು ಮತ್ತು ಮೂಕಾಭಿನಯಗಳ ಮೂಲಕ ಪ್ರಸ್ತುತ ಪಡಿಸುವ ರಂಗಭೂಮಿಯು ಇತ್ತು.[೬] ಸಾಮಾನ್ಯವಾಗಿ ಸಂಗೀತದಂತಹ ಕಾರ್ಯಕ್ರಮಗಳು ದೇವಾಲಯ, ಬೀದಿಗಳಲ್ಲಿ ನಡೆಯುತ್ತಿದ್ದವು. ವಾದ್ಯಗಳ ಸಮೇತ ಸಂಗೀತದೊಡನೆ ಜನರು ಗುಂಪು ಗುಂಪುಗಳಾಗಿ ದೇವಾಲಯಗಳಿಗೆ ಪೂಜೆಗೆ ಹಾಡು, ನೃತ್ಯ, ಇತ್ಯಾದಿ

ಕಾರ್ಯಕ್ರಮಗಳೊಂದಿಗೆ ಹೋಗುತ್ತಿದ್ದರು.[೭] ಇಂದು ಸಹ ಜಾತ್ರೆ, ರಥೋತ್ಸವ, ಉತ್ಸವಗಳಲ್ಲಿ ಈ ರೀತಿ ನಡೆಯುವವು. ಸಾಯಂಕಾಲ ನಗರದ ವೇಶ್ಯಯರು ವೀಣೆಯನ್ನಿಡಿದು (ಯಾಳ) ನರ್ತಿಸುತ್ತಾ, ಹಾಡುತ್ತಾ ಧಣಿಗಳ ಮನರಂಜನೆಯಲ್ಲಿ ತೊಡುಗುತ್ತಾರೆ. ಅವರ ಸಂಗೀತದ ಅಲೆಗಳಿಂದ ಬೀದಿಗಳೆಲ್ಲಾ ತುಂಬಿ ಮಾರ್ಧನಿಸುತ್ತದೆ. ಕುಡಿತದ ಅಮಲಿನಲ್ಲಿರುವ ಹಳ್ಳಿಗರು ಹಬ್ಬಕ್ಕಾಗಿ ನಗರಕ್ಕೆ ಬಂದವರು ದಾರಿಗಳಲ್ಲಿ ಉರುಳಾಡುತ್ತಾರೆ. ತಮ್ಮ ಮಕ್ಕಳು ಮತ್ತು ಸ್ನೇಹಿತರೊಡನೆ ದೇವಾಲಯಗಳಿಗೆ ಹೋಗುತ್ತಾರೆ. ಅವರು ದೇವಾಲಯದ ಅಂಗಳದಲ್ಲಿ ನರ್ತಿಸುತ್ತಾರೆ. ಅವರ ಹಾಡುವಿಕೆ ಮತ್ತು ಹರಟೆ ಮಾತುಗಳ ಸದ್ದಿನಿಂದ ಅಂಗಳ ತುಂಬಿರುತ್ತದೆ. ಈ ರೀತಿಯಾಗಿ ವಿನೋದಾವಳಿಯಲ್ಲಿ ಕಳೆಯುತ್ತಾನೆ.

ಮನುಷ್ಯ ದಿನನಿತ್ಯ ಚಟುವಟಿಕೆ ಕೈಗೊಂಡ ಮೇಲೆ ವಿರಾಮ ಬಯಸುತ್ತಾನೆ. ಆ ವಿರಾಮದಲ್ಲಿ ಮನಸ್ಸಿಗೆ ಮುದವಾಗುವಂತಹ ಕಾರ್ಯಚಟುವಟಿಕೆ ಮಾಡುತ್ತಾನೆ. ಇದು ಇಂದು ನಿನ್ನೆಯದಲ್ಲ, ಪ್ರಾಚೀನ ಕಾಲದಿಂದಲೂ ನಡೆದು ಬಂದುದು. ಪ್ರಾಚೀನ ಕಾಲದ ವಿನೋದಾವಳಿ ಕ್ರೀಯೇಯನ್ನು ಸೂಚಿಸಬಹುದಾದ ಕೆಲವು ಪುರಾವೆಗಳನ್ನು ಮಾನವಶಾಸ್ತ್ರಜ್ಞರು ಹುಡುಕಿ ತೆಗೆದಿದ್ದಾರೆ. ಉದಾ: ಫ್ರಾನ್ಸಿನ ಗುಹೆಯೊಂದರಲ್ಲಿ ಸಿಕ್ಕ ಹಳೆಶಿಲಾಯುಗದ ಅಂದರೆ ಸುಮಾರು ಇಪ್ಪತ್ತೈದು ಸಾವಿರ ವರ್ಷಗಳಷ್ಟು ಹಿಂದಿನ ಒಂದು ಚಿತ್ರವಿದೆ. ಒಬ್ಬ ಮನುಷ್ಯ ಜಿಂಕೆಯಂತಹ ಒಂದು ಪ್ರಾಣಿಯ ಚರ್ಮ ಹೊದ್ದುಕೊಂಡಿದ್ದಾನೆ. ಅದರ ಕೊಂಬು-ಮುಖಗಳನ್ನು ಮುಖವಾಡದಂತೆ ಹಾಕಿಕೊಂಡಿದ್ದಾನೆ. ಆತ ನಿಂತಿರುವ ಭಂಗಿ ನೃತ್ಯದ ಚಲನೆ ಸೂಚಿಸುವಂತಿದೆ. ಅರ್ಥಾತ್ ಆತ ಯಾವುದೋ ಒಂದು ನಾಗರಿಕ ಪೂರ್ವ ವಿನೋದದಲ್ಲಿ ಪಾಲ್ಗೊಳ್ಳುತ್ತಿರುವ ಪಾತ್ರಧಾರಿಯಾಗಿರಬಹುದೆಂದು ಊಹಿಸಲಾಗಿದೆ.[೮] ಅಂದರೆ ಬೇಟೆಯಾಡಿದ ವಿಧಾನವನ್ನು ಅವರ ಕುಲದವರೆದುರು ಪ್ರಚುರಪಡಿಸುತ್ತಿದ್ದನು.

ಚಿತ್ರಗಳು ಮಾನವನ ಭಾವನೆಯನ್ನು ನೇರವಾಗಿ ಸೃಜಿಸುವ ಮಾಧ್ಯಮ ರೇಖೆಗಳು. ವರ್ಣಗಳ ಮೂಲಕ ಯಾವುದೇ ವಿಷಯವನ್ನು ನಿವೇದಿಸುವಾಗ ಹೆಚ್ಚು ಸ್ಪಷ್ಟ ಮತ್ತು ಪರಿಣಾಮಕಾರಿಯಾಗಿ ಪ್ರತಿಬಿಂಬಿಸಬಹುದು. ಕ್ರೀಡೆ ಮತ್ತು ವಿನೋದದ ಪ್ರಾಚೀನತೆ ತಿಳಿಯಲು ನಮಗೆ ಮೊದಲು ಆದಿಮಾನವ ತನ್ನ ಮನಸ್ಸಿನಾಳದ ಕಲ್ಪನೆಗಳನ್ನು ಗೆರೆಗಳಲ್ಲಿ ಕೊರೆದು ಅಥವಾ ವರ್ಣಗಳನ್ನು ಬಳಸಿ ಬಿಡಿಸಿದ ಚಿತ್ರಗಳು ಮಹತ್ವವಾಗಿವೆ. ಇಂಥ ಅನೇಕ ಚಿತ್ರಗಳು ಇವತ್ತಿಗೂ ಆದಿಮ ಜನಾಂಗಗಳಲ್ಲಿ ಕಾಣಸಿಗುವ ಬೇಟೆಯ ಆಯುಧಗಳು ಇವನ್ನೆಲ್ಲ ಕೂಡಿಸಿ ಆ ಕಾಲದ ಪ್ರಾಚೀನತೆಯನ್ನು ಊಹಿಸಬಹುದು. ಬೇಟೆಯಾಡಿ ಬಂದ ಆ ಆದಿಮಾನವ ಸಮುದಾಯವು ವಸತಿ ಸ್ಥಳಕ್ಕೆ ಹಿಂದಿರುಗಿದ ಮೇಲೆ ತಾನು ಬೇಟೆಯಾಡಿದ ವಿಧಾನವನ್ನು ಪರಸ್ಪರ ಹೇಳಿಕೊಳ್ಳಬೇಕಾಗಿತ್ತು. ಹಾಗೆ ಹೇಳಿಕೊಳ್ಳಲು ಯಾವುದೇ ರೀತಿಯ ಭಾಷೆಯಾಗಲಿ, ಸಂಕೇತ ಮಾಧ್ಯಮವಾಗಲಿ ಇನ್ನೂ ಹುಟ್ಟಿರದಿದ್ದುದರಿಂದ ಇದೇ ಬೇಟೆಯ ಘಟನೆಯನ್ನು ಮತ್ತೊಂದು ಬಾರಿ ಪುನಃ ಸೃಷ್ಟಿಸಿ ತೋರಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಆ ಗುಂಪಿನಲ್ಲಿ ಒಬ್ಬ ಅಥವಾ ಕೆಲವರು ಬೇಟೆಯಾಡಿದ ಪ್ರಾಣಿಯ ಚರ್ಮ ಕೊಂಬುಗಳನ್ನು

ಧರಿಸಿ ಆ ಪ್ರಾಣಿಯಾಗುತ್ತಿದ್ದರು. ಇಡೀ ಸಮುದಾಯ ಬೇಟೆಗಾರರಾಗಿ ಬೇಟೆಯ ಕ್ರೀಯೆಯನ್ನು ಅಭಿನಯಿಸುತ್ತಿತ್ತು. ಈ ರೀತಿಯಾಗಿ ಕ್ರಮೇಣ ಅವುಗಳೇ ವಿನೋದ ಚಟುವಟಿಕೆಗಳಾಗಿ ಮಾರ್ಪಾಡುಗೊಂಡವು.

ಒಬ್ಬ ಅಥವಾ ಹಲವರು ಪ್ರಾಣಿಯ ವೇಷ ಧರಿಸಿಕೊಂಡು ನಾಲ್ಕು ಕಾಲಿನ ಮೇಲೆ ಚಲಿಸುವ ಹಾಗೆ ನರ್ತಿಸುವುದು, ಉಳಿದ ಸದಸ್ಯರು ಈಟಿ ಭರ್ಚಿಗಳನ್ನಿಡಿದು ಆ ಪ್ರಾಣಿಯ ಬೇಟೆಯಾಡುವ ಕ್ರೀಯೆಯನ್ನು ಅಭಿನಯಿಸುವುದು, ಇಂಥ ಬೇಟೆಯ ಆಟ ಆಫ್ರಿಕಾದ ಕಾಫಿರ್ ಜನಾಂಗ, ಅಮೇರಿಕಾದ ಹಳೆಯ ಇಂಡಿಯನ್ ಸಮುದಾಯ, ಆಸ್ಟ್ರೇಲಿಯಾದ ಮೂಲ ನಿವಾಸಿಗಳಲ್ಲಿ ಕಾಣಸಿಗುತ್ತವೆ.[೯] ಆದಿಮಾನವರು ಪ್ರಕೃತಿಯ ಮಡಿಲಲ್ಲಿ ಬೆಳೆದವರು ಪ್ರಕೃತಿಯ ಶಕ್ತಿಗಳನ್ನು ಕಂಡು ಭಯಭೀತರಾಗುತ್ತಿದ್ದರು. ಸೂರ್ಯ, ಚಂದ್ರ, ಬೆಂಕಿ, ಗಾಳಿ, ಮಳೆ, ಗುಡುಗು, ಸಿಡಿಲು ಮೊದಲಾದ ನೈಸರ್ಗಿಕ ಶಕ್ತಿಗಳು ಅವರಿಗೆ ಬಿಡಿಸಲಾಗದ ಒಗಟುಗಳಾಗಿದ್ದವು. ಇಂತಹ ಅರ್ಥವಾಗದ ಶಕ್ತಿಗಳನ್ನು ಪೂಜಿಸಿ, ಪ್ರಾರ್ಥಿಸಿ ಆ ಶಕ್ತಿಗಳು ತಮಗೆ ಒಲೆಯುವಂತೆ ಮಾಡುವ ನಂಬಿಕೆಯಿಂದ ಅನೇಕ ಬಗೆಯ ನೃತ್ಯ, ಸಂಗೀತದಂತಹ ಚಟುವಟಿಕೆ ಪ್ರಾರಂಭಿಸಿರಬೇಕು. ಇಂಥ ಅನೇಕ ಚಿತ್ರಗಳು ದೊರೆತಿವೆ.

ಹೋಪಿ ಇಂಡಿಯನ್ನರೆಂಬ ಆದಿವಾಸಿಗಳು ಕೃಷಿ ದೇವತೆಯ ಮುಖವಿರುವ ಒಂದು ಬೊಂಬೆ ತಯಾರಿಸಿ ಅದರ ಮುಂದೆ ಎಲ್ಲರೂ ಕುಣಿಯುತ್ತಿದ್ದರು. ನೀರನ್ನು ಮೇಲೆರಚಿ ಮಳೆಯನ್ನೂ, ಮೋಡದ ಆರ್ಭಟವನ್ನು ಅನುಕರಿಸುತ್ತಿದ್ದರು. ಇಂತಹ ಮಾಂತ್ರಿಕ ನೃತ್ಯದಿಂದ ಮಳೆ ಬರಬಹುದೆಂಬುದು ಅವರ ನಂಬಿಕೆಯಾಗಿತ್ತು.[೧೦] ಇವರ ಪ್ರಮುಖವಾದ ವೃತ್ತಿ ಪ್ರಾಣಿಗಳ ಬೇಟೆಯಾಡುವುದಾಗಿತ್ತು. ಪ್ರಾಣಿಗಳಲ್ಲಿದ್ದ ಅನೇಕ ಗುಣ ವಿಶೇಷಗಳನ್ನು ಕಂಡು ಅವರು ಚಕಿತರಾಗುತ್ತಿದ್ದರು. ಚಳಿಗಾಲ ಬಂದಾಗ ಅನೇಕ ವಿನೋದ ಚಟುವಟಿಕೆಗಳಲ್ಲಿ ಪಾಲ್ಗೋಳ್ಳುತ್ತಿದ್ದರು. ಇಂತಹ ಸಾಮೂಹಿಕ ಅಭಿನಯದಲ್ಲಿ ಪ್ರಾಣಿಗಳ ಧ್ವನಿ, ಚಲನೆಗಳ ಅನುಕರಣೆ ಪ್ರಮುಖವಾಗಿರುತ್ತಿತ್ತು. ಗುಂಪಿನಲ್ಲಿ ಕೆಲವರು ಕುಣಿಯುತ್ತಿದ್ದರೆ, ಕೆಲವರು, ಬೇಟೆಗಾರರಂತೆ ಅಭಿನಯಿಸಿ ಉಳಿದವರು ತಮಗೆ ಬೇಕಿದ್ದ ಪ್ರಾಣಿಯ ಮುಖವಾಡ ಧರಿಸಿ ಆ ಪ್ರಾಣಿಯ ಚಲನವಲನಗಳನ್ನು ಯಥಾವತ್ತಾಗಿ ಅನುಕರಣೆ ಮಾಡುತ್ತಿದ್ದರು. ನ್ಯೂಗಿನಿಯಲ್ಲಿ ಮೀನು ಹಿಡಿಯುವ ಕಾಲದಲ್ಲಿ ಪಾವುವನ್ ಜನರು ಮೀನು ದೈವವನ್ನು ಒಲಸಿಕೊಳ್ಳಲು ಮೀನಿನ ಮುಖವಾಡ ಧರಿಸಿ ಕುಣಿಯುತ್ತಿದ್ದರು.[೧೧]

ಭಾರತದಲ್ಲಿಯೂ ಈ ರೀತಿಯ ಅನೇಕ ಚಿತ್ರಗಳು ದೊರಕಿವೆ. ಭಿಂಬೆಟ್ಕ ಮತ್ತು ಇತರ ಗುಹೆಗಳ ಬಂಡೆಗಳ ಮೇಲಿರುವ ಚಿತ್ರಗಳು ಪ್ರಾಚೀನತೆಯನ್ನು ತಿಳಿಯಲು ಜೀವಂತ ಉದಾಹರಣೆಗಳು. ಏಕ ವ್ಯಕ್ತಿಯ ಅಥವಾ ಸಮೂಹದಲ್ಲಿ ನರ್ತಿಸುವ ಅನೇಕ ರೇಖಾ ಚಿತ್ರಗಳು ಲಭ್ಯವಾಗಿದ್ದು ಮಾನವನ ವಿನೋದ ಚಟುವಟಿಕೆ ತಿಳಿಯಲು ಪ್ರಾಥಮಿಕ ದೃಶ್ಯ ಮಾಧ್ಯಮದ ದಾಖಲೆಗಳಾಗಿವೆ. ನಂತರ ಭಿತ್ತಿ ಚಿತ್ರಗಳಿಂದಲೂ ನಾವು ನೃತ್ಯ, ಸಂಗೀತ, ವಾದ್ಯಗಳ ಪ್ರಾಚೀನತೆ ತಿಳಿಯಬಹುದು. ಅಜಂತಾ ಗುಹಾಲಯಗಳು ಶಿಲ್ಪ ಮತ್ತು ಭಿತ್ತಿ ಚಿತ್ರಗಳಿಂದ ಹೆಸರುವಾಸಿ. ಇಲ್ಲಿ ಚಿತ್ರಗಳು, ಅರಮನೆ ಜೀವನ, ರಾಜಗೃಹ, ಗಿಡಬಳ್ಳಿಗಳು,

ಹೂ ವೃಕ್ಷಗಳು, ಪಶು, ಪ್ರಾಣಿ, ಪಕ್ಷಿ, ಹೀಗೆ ವಿವಿಧ ವರ್ಗಕ್ಕೆ ಸೇರಿದ ಜನರ ವೇಷಭೂಷಣ ತಿಳಿಸುತ್ತವೆ.

ಅಂದು ನೃತ್ಯ ಎಷ್ಟು ಪ್ರಾಮುಖ್ಯತೆ ಪಡೆದುಕೊಂಡಿತ್ತು ಎಂಬುದಕ್ಕೆ ಒಂದನೆಯ ಗುಹಾಂತರ ದೇವಾಲಯದಲ್ಲಿ ರಾಜ ಭವನದ ಒಳಗಿನ ಮಂಟಪದ ಮಧ್ಯ ಭಾಗದಲ್ಲಿ ಒಬ್ಬ ನರ್ತಕಿಯು ನರ್ತಿಸುತ್ತಿದ್ದಾಳೆ, ನರ್ತಕಿಯ ಹಿಂದೆ ಹಿಮ್ಮೇಳದಲ್ಲಿ ಇಬ್ಬರು ವಾದಕಿಯರು ಆಕರ್ಷಕ ಭಂಗಿಯಲ್ಲಿ ವಾದ್ಯ ನುಡಿಸುತ್ತಿದ್ದಾರೆ, ಇಬ್ಬರು ತಾಳಧಾರಿಯರು ವೀಣಾವಾದಕಿಯರು, ಚಿಕ್ಕ ಗಾತ್ರದ ಅವನದ್ಧ ವಾದ್ಯವನ್ನು ನುಡಿಸುತ್ತಿದ್ದಾರೆ. ನರ್ತನಕ್ಕೆ ಅಂದು ಬಳಸುತ್ತಿದ್ದ ವಾದ್ಯಗಳ ಸಮಗ್ರ ಚಿತ್ರಣ ಇದೆ. ಅಜಂತಾದಿಂದ ನೂರು ಮೈಲು ಉತ್ತರಕ್ಕಿರುವ ಬಾಘದಲ್ಲಿರುವ ಗವಿಯ ಹೊರಾಂಗಣದ ಗೋಡೆಗಳ ಮೇಲಿರುವ ಚಿತ್ರಗಳು ಆನೆಗಳ ಮೆರವಣಿಗೆಯನ್ನು ಚಿತ್ರಿಸುತ್ತವೆ. ಬಹುಶಃ ರಚನೆಯಲ್ಲಿ ಈ ಚಿತ್ರ ಅಜಂತಾದಲ್ಲಿರುವ ಇನ್ನಾವುದೇ ಚಿತ್ರಕ್ಕಿಂತಲೂ ಪ್ರಭಾವ ಶಾಲಿಯಾಗಿದೆ. ಹಾಗೆಯೇ ನೃತ್ಯಗಾರ್ತಿ ಮತ್ತು ಸ್ತ್ರೀ ಸಂಗೀತಗಾರರು ಎಂಬ ಚಿತ್ರವೂ ಕೂಡ ಅಜಂತಾ ಶೈಲಿಯ ವರ್ಣಚಿತ್ರಗಳ ಕುರುಹುಗಳು ದಖನ್‌ನಲ್ಲಿರುವ ಬೇರೆ ಗುಹೆಗಳಲ್ಲಿಯೂ ಕಂಡುಬರುತ್ತವೆ. ವಿಶೇಷವಾಗಿ ಬಾದಾಮಿ ಮತ್ತು ಎಲ್ಲೋರಾದಲ್ಲಿ ಇನ್ನೂ ಕೆಳಗೆ ತಮಿಳುನಾಡಿನ ಸೀತನ್ನವಸಲ್ ಎಂಬ ಒಂದು ಜೈನ ಗುಹೆಯಲ್ಲಿ ಕಾಣಬಹುದು.[೨] ಹೀಗೆ ಕರ್ನಾಟಕದ ಮೊಳಕಾಲ್ಮೂರು ತಾಲ್ಲೂಕಿನ ಸಂತೆಗುಡ್ಡ, ಹಿರೇಬೆಣಕಲ್, ಶಿರಾ, ಹಂಪಿ ಪರಿಸರ, ತುಮಕೂರು, ಚಿತ್ರದುರ್ಗ ನಾನಾಕಡೆಗಳಲ್ಲಿ ವಿನೋದಾವಳಿಯ ಚಿತ್ರಗಳು ಗೋಚರಿಸುತ್ತವೆ.

ದೇವಾಲಯಗಳ ರಚನೆಯಲ್ಲಿ ಸಂಗೀತ, ನೃತ್ಯದ ಶಿಲ್ಪಗಳಾದ, ನರ್ತಕ, ನರ್ತಕಿಯರು ನರ್ತಿಸುವ, ದೇವತಾಮೂರ್ತಿ, ನರ್ತಿಸುವ ಗಂಧರ್ವ, ಕಿನ್ನರರ, ಗಣಗಳ, ವಾದ್ಯವೃಂದದವರ ಸೇರ್ಪಡೆ ಒಂದು ರೂಢಿಯಾಗಿದೆಯೇನೊ ಅನ್ನಿಸುತ್ತದೆ. ಹೀಗಾಗಿ ಪ್ರಾಚೀನ ಕಾಲದಲ್ಲಿ ಶಿಲ್ಪಗಳು, ದೇವಾಲಯಗಳು ಸಾಗರೋಪಾದಿಯಲ್ಲಿ ನಿರ್ಮಿಸಲಾರಂಭಿಸಿದಾಗ ನೃತ್ಯಕ್ಕೆ ಸಂಗೀತವನ್ನು ಸಾಧ್ಯವಾದಷ್ಟು ಬಳಸಿಕೊಂಡರು ಅಂದು ಸಾಮಾನ್ಯರಾದಿಯಾಗಿ ಅರಸರು ವಿನೋದಾವಳಿಗೆ ತುಂಬಾ ಪ್ರಾಮುಖ್ಯತೆ ಕೊಟ್ಟಿದ್ದರು. ಶಿಲ್ಪ, ದೇವಾಲಯಗಳನ್ನು ರಚಿಸುವಾಗ ಅಂದಿನ ದೈನಂದಿನ ವಿನೋದಾವಳಿಯ ಅಂಶಗಳನ್ನು ಶಿಲ್ಪಗಳ ಮೂಲಕ ಖಂಡರಿಸಿದ್ದಾರೆ. ಪಟ್ಟದಕಲ್ಲಿನ ವಿರೂಪಾಕ್ಷ, ಲಕ್ಕುಂಡಿಯ ಕಾಶಿವಿಶ್ವೇಶ್ವರ, ಇಟ್ಟಗಿಯ ಮಹಾದೇವ, ಬೇಲೂರಿನ ಚೆನ್ನಕೇಶವ, ಹಳೇಬೀಡಿನ ಹೋಯ್ಸಳೇಶ್ವರ, ಕೋನಾರ್ಕದ ಸೂರ್ಯ, ಎಲ್ಲೋರಾದ ಕೈಲಾಸನಾಥ, ತಾಂಜಾವೂರಿನ ಬೃಹದೇಶ್ವರ, ಚಿಂದಂಬರದ ನಟರಾಜ, ಖಜುರಾಹೋವಿನ ಮಹಾದೇವ, ವಾರಂಗಲ್ಲಿನ ರಾಮಪ್ಪ ಇತ್ಯಾದಿ ದೇವಾಲಯಗಳಲ್ಲಿ ಸಂಗೀತ, ನೃತ್ಯ, ವಾದ್ಯಗಾರರ ಶಿಲ್ಪಗಳು ಸಾಕಷ್ಟು ಇವೆ. ಇದರಿಂದ ಅಂದು ನೃತ್ಯಕ್ಕೆ ಎಷ್ಟು ಮಹತ್ವವಿತ್ತು ಎನ್ನುವುದನ್ನು ಸ್ಪಷ್ಟಪಡಿಸುತ್ತವೆ.

ಪ್ರಾಚೀನ ಭಾರತದ ಕ್ರೀಡೆ ಮತ್ತು ವಿನೋದದ ಮತ್ತಷ್ಟು ವಿವರಗಳು ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿ ದೊರೆಯುತ್ತವೆ. ರಾಮಾಯಣದಲ್ಲಿ ಧನುರ್ವಿದ್ಯೆ, ಮೃಗಾಯ

ವಿನೋದ, ಮುಷ್ಠಿಯುದ್ಧಗಳು ಪ್ರಸ್ತಾಪಗೊಂಡಿದ್ದರೆ. ಮಹಾಭಾರತದಲ್ಲಿ ದುಶ್ಯಂತನ ಮೃಗಾಯ ವಿಹಾರ, ಭೀಮ–ಜರಾಸಂದರ ಭೀಕರ ದ್ವಂದ್ವಯುದ್ಧ, ಪಗಡೆಯಾಟ ಮುಖ್ಯ ಪ್ರಸ್ತಾವಗಳಿವೆ. ಅಂದು ಹಬ್ಬ ಹರಿದಿನಗಳಲ್ಲೆಲ್ಲಾ ಭಾರಿ ವಿನೋದಗಳಿಗೆ ಅವಕಾಶವಿದ್ದಿತು. ವಿವಾಹ, ವಿಜಯೋತ್ಸವ, ಇಂಥ ವಿಶೇಷ ದಿನಗಳನ್ನು ಜನ ಕ್ರೀಡೆ ಮತ್ತು ವಿನೋದದಲ್ಲಿ ಕಳೆಯುತ್ತಿದ್ದರು.[೧೩] ಅಂದು ಬೇಟೆಯನ್ನು ವಿನೋದಕ್ಕಾಗಿ, ಹಾಗೂ ಸಾಮಾನ್ಯ ಜನರ ರಕ್ಷಣೆಗಾಗಿಯೂ ಆಡುತ್ತಿದ್ದರು ಸಾಮಾನ್ಯವಾಗಿ ಅರಸರು ಮನರಂಜನೆಗಾಗಿ ಹೋಗುತ್ತಿದ್ದರು. ದುಶ್ಯಂತನ ಮೃಗಾಯ ವಿಹಾರ ಈ ರೀತಿ ವರ್ಣಿತವಾಗಿದೆ. ಒಮ್ಮೆ ಮಹಾಬಾಹುವಾದ ದುಶ್ಯಂತನು ಚತುರಂಗ ಬಲ ಸಮೇತವಾಗಿ ಗಹನವಾದ ಅರಣ್ಯಕ್ಕೆ ಬೇಟೆಯಾಡಲು ಹೋರಟನು ಇವನ ಯೋಧರು ಖಡ್ಗ, ಶಕ್ತ್ಯಾಯುಧ, ಗದೆ, ಚಕ್ರಗಳ ಕಿರ ಕಿರ ಶಬ್ದದಿಂದಲೂ, ಆನೆ ಕುದುರೆಗಳು ಮಾಡುತ್ತಿದ್ದ ಹೇಷಾರವರದಿಂದಲೂ ನಾನಾ ವಿಧವಾದ ಆಯುಧ, ವೇಷ ಧರಿಸಿ ನಡೆದು ಹೋಗುತ್ತಿದ್ದ ಕಾಲಾಳುಗಳ ಸಪ್ಪಳದಿಂದಲೂ ಉಂಟಾದ ಕಲ ಕಲ ಶಬ್ದದಿಂದ ರಾಜ ಮಾರ್ಗವು ತುಂಬಿಹೋಯಿತು. ಶೂರನಾದ ಮತ್ತು ತನ್ನ ಯಶಸ್ಸನ್ನು ಸರ್ವ ಪ್ರಕಾರಗಳಿಂದಲೂ ಹೆಚ್ಚಿಸಿಕೊಳ್ಳುತ್ತಿದ್ದ ದುಶ್ಯಂತನನ್ನು ಪ್ರಸಾದಗಳ ಶಿಖರಗಳಲಿ ಸಾಲಂಕೃತರಾಗಿ ಕುಳಿತಿದ್ದ ಸ್ತ್ರೀಯರು ಎವಯಿಕ್ಕದೆ ನೋಡುತ್ತಿದ್ದರು. ಹೀಗೆ ಸಾಗಿದ ಬಳಿಕ, ಸಿಂಹ ವ್ಯಾಘ್ರಾದಿ ದುಷ್ಟ ಮೃಗಗಳಿಂದ ಜಿಂಕೆ ಮೊದಲಾದ ಸಾಧು ಪ್ರಾಣಿಗಳಿಂದಲೂ ನಿಬಿಡವಾಗಿದ್ದ ವನ ಪ್ರದೇಶವನ್ನು ಮನುಜ ವ್ಯಾಘ್ರನಾದ ದುಶ್ಯಂತನು ಸಭೃತ್ಯವಾಹನನಾಗಿ ಪ್ರವೇಶಿಸಿ ಅಲ್ಲೋಲಕಲ್ಲೋಲ ಮಾಡಿಬಿಟ್ಟನು. ಗಾಬರಿಗೊಂಡು ತಮ್ಮ ತಮ್ಮ ಗುಹೆಗಳಿಂದ ಹೊರಬಂದ ಪ್ರಾಣಿಗಳನ್ನು ಬೇಟೆಯಾಡಲು ಪ್ರಾರಂಭಿಸಿದನು. ಬಾಣಗಳ ಲಕ್ಷ್ಯಕ್ಕೆ ಸಿಕ್ಕುತ್ತಿದ್ದ ಮೊಲ ಚಿರತೆಗಳನ್ನು ರಾಜನು ಕ್ಷಣ ಮಾತ್ರದಲ್ಲಿ ಧ್ವಂಸಗೊಳಿಸಿದನು ದೂರದಲ್ಲಿ ಓಡಿಹೋಗುತ್ತಿದ್ದ ಪ್ರಾಣಿಗಳನ್ನು ಬಾಣಗಳಿಂದಲೂ, ಹತ್ತಿರದಲ್ಲಿಯೇ ಸಿಕ್ಕಿದ ಮೃಗಗಳನ್ನು ಕತ್ತಿಯಿಂದಲೂ ಮತ್ತೆ ಕೆಲವು ಜಿಂಕೆಗಳನ್ನು ಶಕ್ತ್ಯಾಯುಧದಿಂದಲೂ ರಾಜನು ಬೇಟೆಯಾಡುತ್ತಿದ್ದನು.[೧೪]

ಹೀಗೆ ಅಂದು ಅರಸರು ಬೇಟೆಯನ್ನು ವಿನೋದಕ್ಕಾಗಿ ಆಡುತ್ತಿದ್ದರು. ಇದರಿಂದ ಬೇಟೆಯಾಡುವ ಸಿದ್ಧತೆ, ವಿಧಾನ, ಬಳಸುವ ಆಯುಧಗಳು, ಯಾವ ಪ್ರಾಣಿ ಬೇಟೆಯಾಡುತ್ತಿದ್ದ ಅಂಶಗಳು ತಿಳಿಯುತ್ತವೆ.

ಅಂದು ಕುಸ್ತಿಯು ತುಂಬಾ ಪ್ರಸಿದ್ಧಿ ಪಡೆದ ಕ್ರೀಡೆಯಾಗಿತ್ತು. ಅರಸರು ಇದರಲ್ಲಿ ಪಾಲ್ಗೊಳುತ್ತಿದ್ದರು. ಮಹಾಭಾರತದ ಭೀಮ, ಜರಾಸಂಧರು ಮಲ್ಲಯುದ್ಧ ಪ್ರವೀಣರು. ಅವರೊಳಗೆ ಭೀಕರ ದ್ವಂದ್ವಯುದ್ಧ ಹೀಗೆ ಬಣ್ಣಿಸಲ್ಪಟ್ಟಿದೆ. ಕೃಷ್ಣನು ನಮ್ಮ ಮೂವರಲ್ಲಿ ಯಾರ ಮೇಲೆ ಯುದ್ಧ ಮಾಡುತ್ತಿಯಾ ಎಂದು ಕೇಳಲು ಜರಾಸಂಧನು ಭೀಮನನ್ನು ಆರಿಸಿಕೊಂಡನು ಬಲಿಚಕ್ರವರ್ತಿಗೂ ಇಂದ್ರನಿಗೂ ಯುದ್ಧವಾದಂತೆ ಅವರಿಗೆ ಹೋರಾಟ ಮೊದಲಾಯಿತು ಅವರಿಬ್ಬರು ಶೂರರು, ಮಹಾಬಲ ಪರಾಕ್ರಮ ಉಳ್ಳವರು. ಆದ್ದರಿಂದ ತುಂಬಾ ಉತ್ಸಾಹದಿಂದ ತೋಳುತಟ್ಟಿಕೊಂಡು ಕುಸ್ತಿ ಆರಂಭಿಸಿದರು, ಎಳೆದಾಡಿದರು,

ಗುದ್ದಾಡಿದರು, ಹೊಡೆದಾಡಿದರು ಬಹಳ ಹೊತ್ತು ಹೀಗೆ ಯುದ್ಧ ನಡೆದ ಮೇಲೆ ಜರಾಸಂಧನ ಕೈ ಸೋಲುತ್ತಾ ಬಂತು ಕೃಷ್ಣನು ನಿನ್ನಲ್ಲಿರುವ ವಾಯುಬಲ ತೋರಿಸು ಭೀಮ ಎಂದನು. ಆಗ ಭೀಮನು ಜರಾಸಂಧನನ್ನು ಎರಡು ತೋಳಿನಿಂದಲೂ ಮೇಲಕ್ಕೆತ್ತಿ ಗರಗರನೆ ತಿರುಗಿಸಿ ನೆಲದ ಮೇಲೆ ಬೋರಲಾಗಿ ಕೆಡವಿ ಮರ್ದಿಸಿದನು.[೧೫] ಈ ರೀತಿಯಾಗಿ ಪ್ರಾಚೀನ ಕಾಲದಿಂದಲೂ ಕುಸ್ತಿಯ ಜೊತೆಗೆ ಪಗಡೆಯಾಟ, ಕುದುರೆ ಸವಾರಿ, ರಥ ಸ್ಪರ್ಧೆಗಳ ಅನೇಕ ಉಲ್ಲೇಖಗಳು ದೊರೆಯುತ್ತವೆ.

ವೇದ-ಉಪನಿಷತ್ತುಗಳಲ್ಲಿ ಬೇಟೆ, ಕುದುರೆ, ಸವಾರಿ, ದನುರ್ವಿಧ್ಯೆ, ಅಂಗಸಾಧನೆ, ಓಟ, ಈಜು ಮುಂತಾದ ಕ್ರೀಡೆಗಳ ಉಲ್ಲೇಖಗಳಿವೆ. ವೇದಕಾಲದಲ್ಲಿ ಭಾರತೀಯರು ಸಮೃದ್ಧ ಜೀವನ ನಡೆಸುತ್ತಿದ್ದರು. ಜೂಜಾಟ ಅವರಿಗೆ ತುಂಬಾ ಪ್ರಿಯವಾಗಿತ್ತು. ಅಕ್ಷ ಎಂದರೆ ಒಂದು ತೆರನಾದ ಕಾಯಿ ಅದೇ ದಾಳ ಅದನ್ನೆಸೆದಾಗ ಮೇಲೆ ಕಾಣಿಸುತ್ತಿದ್ದ ಸಂಖ್ಯೆಗಳ ಮೇಲೆ ಜೂಜಾಡುತ್ತಿದ್ದರು. ಋಗ್ವೇದದಲ್ಲಿರುವ ಕೆಲವು ಶ್ಲೋಕಗಳಲ್ಲಿ ಜೂಜುಗಾರನ ಅಳಲು ಚಿತ್ರಿತವಾಗಿದೆ.

'ಜೂಜಿನುಪಕರಣಗಳೆ ನಿಮ್ಮಗಣ ಮುಖ್ಯನಿಗೆ
ಇದಿಗೂ ಕೈ ಜೋಡಿಸಿದೆ ನಮಸ್ಕಾರ
ಜೂದಿಗಿನ್ನಂದಿಗೂ ಧನವನಾರ್ಜಿಸ ನಾನು
ಶಪಥವಿದು ಹೇಳುವನು ಸತ್ಯವಾಗಿ'.[೧೬]

ಈ ಮೇಲಿನ ಎಲ್ಲಾ ಅಂಶಗಳಿಂದ ದನುರ್ವಿಧ್ಯೆ, ಮೃಗಾಯ ವಿನೋದ, ಮಲ್ಲಯುದ್ಧ ಮುಷ್ಟಿಯುದ್ಧ, ಇತ್ಯಾದಿ ಕ್ರೀಡೆ ಮತ್ತು ವಿನೋದಗಳ ಪ್ರಾಚೀನತೆಯನ್ನು ಊಹಿಸಿಕೊಳ್ಳಬಹುದು.

ದೇವಾಲಯಗಳ ರಚನೆಯಲ್ಲಿ ಶಿಲ್ಪಗಳ ಪಾತ್ರ ವಾಸ್ತುವಿನಷ್ಟೇ ಪ್ರಮುಖವಾಗಿವೆ. ಗರ್ಭಗುಡಿಯಿಂದ ಹಿಡಿದು ನವರಂಗ, ದೇವಕೋಷ್ಠ, ದ್ವಾರಬಂಧ, ಕಂಬ, ಆವರಣದ ಭಿತ್ತಿಯ ಭಾಗ, ಬೋದಿಗೆ, ಶಿಖರ, ಪ್ರಕಾರ ಮಂಟಪ, ಮುಖಮಂಟಪ, ಕಲ್ಯಾಣ ಮಂಟಪ ಎಲ್ಲಾ ಅಂಗಗಳಲ್ಲಿ ಶಿಲ್ಪಗಳು ಆವೃತವಾಗಿರುತ್ತವೆ. ಶಿಲ್ಪರಹಿತ ದೇವಾಲಯಗಳ ರಚನೆ ನಮ್ಮ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಊಹಿಸುವುದು ತರವಲ್ಲ. ಶಿಲ್ಪಕಲಾ ಪರಂಪರೆಯಲ್ಲಿ ನಮ್ಮ ಸಾಂಸ್ಕೃತಿಕ ಜೀವನದ ಸ್ಪಷ್ಟ ಚಿತ್ರಣವು ನಮಗೆ ದೊರೆಯುತ್ತದೆ. ಶಿಲ್ಪಿಯು ವಿಗ್ರಹಗಳನ್ನು ರಚಿಸುವಾಗ ಮೂರ್ತಿಶಾಸ್ತ್ರದ ಪ್ರತಿಯೊಂದು ಅಂಶ ಅನುಸರಿಸುತ್ತಾನೆ. ಬೇರೆ ಶಿಲ್ಪ ರಚಿಸುವಾಗ ಅವನ ಕಲ್ಪನಾ ಲಹರಿ ಹರಿಯಲು ಪ್ರಾರಂಭವಾಗಿ ಕಲಾತ್ಮಕ ಅಂಶ ಮತ್ತು ತಂತ್ರ ಅನ್ವಯಿಸಿಕೊಂಡು ಶಿಲ್ಪ ರಚಿಸುತ್ತಾನೆ. ಮಾನವ ಜೀವನದ ಹಲವು ಮುಖಗಳು ಮತ್ತು ವಿಧಿ ವಿಧಾನಗಳು, ಭಾವನೆಗಳ ಪ್ರತಿಬಿಂಬವನ್ನು ಸ್ಥಿರವಾಗಿ ನಿಲ್ಲುವಂತೆ ಮಾಡಿದೆ. ಯುದ್ಧವಾಡುತ್ತಿದ್ದ ರೀತಿ ನೀತಿಗಳು, ಆಯುಧ ಬಳಕೆಯ ವಿವಿಧ ರೂಪಗಳು, ಬಿಡುವಿನ ಸಮಯ ಕಳೆಯುಲು ಆಡುತ್ತಿದ್ದ ಆಟಗಳು, ಅರಸನ ಒಡ್ಡೋಲಗದ ದೃಶ್ಯ, ವನ್ಯ ಜೀವನ, ನಗರದ ಭಾವನೆಗಳ ರಚನೆ, ಪ್ರಾಣಿ ಪಕ್ಷಿಗಳು, ಸಂಖ್ಯೆ ಮತ್ತು ವೈರುದ್ಯದ ವಿವಿಧ ಮುಖಗಳು, ಬಾಂಧವ್ಯಗಳ ಚಿತ್ರಣ, ಗುರುಶಿಷ್ಯರ ಸಂಬಂಧ, ರತಿ ಕ್ರೀಡೆ ವಿಲಾಸಗಳು

ಹಾಗೂ ನೃತ್ಯ, ಸಂಗೀತ ಮುಂತಾದ ಲಲಿತ ಕಲೆಗಳ ವಿಕಾಸನ, ರಾಮಾಯಣ, ಮಹಾಭಾರತ, ಭಾಗವತ, ಜಾತಕ ಕತೆಗಳು, ಪಂಚತಂತ್ರ ಕತೆಗಳು, ಗೀತೋಪದೇಶ, ಆಯಾ ಪ್ರಾಂತ್ಯದ ಚಕ್ರವರ್ತಿಗಳ, ರಾಜರ ವಂಶಪಾರಂಪರ್ಯ ಚಿತ್ರಣ, ಪೌರಣಿಕ ಕತೆಗಳ ದೃಶಾವಳಿ, ಜೀವನ ವಿಕಸನ ಹಂತಗಳು ಪ್ರಮುಖವಾಗಿದ್ದವು. ಈ ಎಲ್ಲಾ ವಿಷಯಗಳನ್ನು ಶಿಲ್ಪಿಯು ಸೃಜನಾತ್ಮಕವಾಗಿ ತನ್ನ ಕಲಾ ಅಭಿವ್ಯಕ್ತತೆಯಲ್ಲಿ ಬಳಸಿರುವ ರೀತಿಯು ಇಂದು ಜಾಗತಿಕ ಶಿಲ್ಪಕಲೆಗಳಲ್ಲಿ ಭಾರತೀಯ ಶಿಲ್ಪಕಲೆಗೆ ಅಗ್ರಸ್ಥಾನ ಪ್ರಾಪ್ತವಾಗುವಲ್ಲಿ ಮುಖ್ಯವಾಗಿದೆ. ಶಿಲ್ಪ ಸಮೃದ್ಧಿಯ ವಾಸ್ತುವಿನ ನಿರ್ಮಾಣ ಭಾರತೀಯರು ತಮ್ಮ ಪರಂಪರೆಯ ಚಿತ್ರಣದಲ್ಲಿ ಕಂಡುಕೊಂಡ ಹಾದಿಯಾಗಿದೆ.[೧೭] ವಿನೋದಾವಳಿಗಳಲ್ಲಿ ಪ್ರಮುಖವಾಗಿ ಸಂಗೀತ ಮತ್ತು ನೃತ್ಯಕ್ಕೆ ಸಂಬಂಧಿಸಿದ ಶಿಲ್ಪಗಳ ಮೂಲವನ್ನು ಪ್ರಸ್ತಾಪಿಸುವಾಗ ಸಿಂಧೂಕಣಿವೆ ಸಂಸ್ಕೃತಿಯ ನೃತ್ಯಗಾರ್ತಿಯ ಲೋಹಶಿಲ್ಪ, ಪುರುಷಾಕೃತಿಯ ಬೂದು ಬಣ್ಣದ ಶಿಲಾಪ್ರತಿಮೆ ಉಲ್ಲೇಖಿಸಬೇಕು. (ನೃತ್ಯಗಾರ್ತಿಯ ಶಿಲ್ಪ ಮಹೆಂಜೋದಾರೋನಲ್ಲಿಯೂ ಪುರುಷ ಶಿಲ್ಪ ಹರಪ್ಪದಲ್ಲಿ ಉತ್ಖನನ ಸಮಯದಲ್ಲಿ ದೊರತಿದ್ದು ಈಗ ದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಾಹಾಲಯದಲ್ಲಿ ಹೊಸದಾಗಿ ನಿರ್ಮಿತವಾದ ಹರಪ್ಪ ಗ್ಯಾಲರಿಯಲ್ಲಿ ಪ್ರದರ್ಶಿತಗೊಂಡಿವೆ) ಈ ಶಿಲ್ಪ ಕಲಾಕೃತಿಗಳ ಕಾಲ ಕ್ರಿಪೂ. ಸು.೨೫೦೦–೧೭೫೦ರ ಒಳಗೆ. ಸಿಂಧೂ ಕಣಿವೆಯ ಸಂಸ್ಕೃತಿಯ ಕಾಲದಲ್ಲಿ ಸಂಗೀತ, ನೃತ್ಯಗಳು ಜನರ ಜೀವನದಲ್ಲಿ ಹಾಸುಹೊಕ್ಕಾಗಿದ್ದವು ಎಂದು ಹೇಳಲು ಸಾಕಷ್ಟು ಆಧಾರಗಳಿವೆ.[೧೮]

ವೇದಗಳ ಕಾಲಕ್ಕಂತೂ ಸಂಗೀತವು ತುಂಬಾ ಅಭಿವೃದ್ಧಿಯಾಗಿತ್ತು. ಸಾಮವೇದವನ್ನು ಹಾಡುವ ರೂಢಿಯಿತ್ತು. ಸಪ್ತಸ್ವರಗಳ ಕಲ್ಪನೆಯು ಕ್ರಿಪೂ. ನಾಲ್ಕನೇಯ ಶತಮಾನದಷ್ಟು ಹಳೆಯದು.[೧೯] ನಂತರ ಅಶೋಕನ ಕಾಲದಲ್ಲಿ ರಚಿಸಲಾಗಿದೆಯೆಂದು ಗುರುತಿಸಿರುವ ಅನೇಕ ಶಿಲಾ ಶಿಲ್ಪಕೃತಿಗಳು ಭವ್ಯಕಾರವಾಗಿ, ಕಲಾತ್ಮಕವಾಗಿಯೂ ಮೂಡಿಬಂದಿವೆ. ಸ್ತಂಭಶಿಲ್ಪ, ಸ್ಮಾರಕ, ಯಕ್ಷಿಯರು ಹಾಗೂ ಬೌದ್ಧಸ್ತೂಪ, ಚೈತ್ಯಾಗೃಹಗಳ ರಚನೆಯು ಸ್ಪಷ್ಟರೂಪದಲ್ಲಿ ವಿಕಸನ ಹೊಂದಿದವು. ಶಿಲೆಯನ್ನು ವಾಸ್ತುಶಿಲ್ಪ ಮತ್ತು ಶಾಸನ ಬರೆಯಲು ಹಾಗೂ ಕಲಾಕೃತಿಗಳನ್ನು ರಚಿಸಲು ಮೊಟ್ಟಮೊದಲು ಪ್ರಯೋಗಿಸಿದವರು ಬೌದ್ಧಧರ್ಮದ ಪ್ರವರ್ತಕರು. ಅವರ ಪ್ರಯೋಗದ ಯಶಸ್ಸನ್ನು ಕಂಡು ಆ ಪದ್ಧತಿಯನ್ನು ದೇವಾಲಯ ರಚನೆಯಲ್ಲಿ ಗುಪ್ತರ ಕಾಲದಲ್ಲಿ ಪ್ರಯೋಗಿಸಲಾಯಿತು. ಹೀಗಾಗಿ ಪ್ರಾರಂಭದ ದಿಶೆಯ ನೃತ್ಯಭಂಗಿಗಳನ್ನು ನಾವು ಬೌದ್ಧಸ್ತೂಪ ಮತ್ತು ಚೈತ್ಯಗಳ ಫಲಕಗಳ ಉಬ್ಬುಶಿಲ್ಪಗಳ ರೂಪದಲ್ಲಿ ಕಾಣುತ್ತೇವೆ.[೨೦]

ವಿನೋದಾವಳಿಗಳು ಯಾವ ವಿಧಾನಗಳಲ್ಲಿ ನಡೆಯುತ್ತಿದ್ದವು ಎಂದು ನಮಗೆ ಬೌದ್ಧಧರ್ಮದ ಕಾಲದಲ್ಲೆ ತಿಳಿಯುತ್ತವೆ. ಅಂದು ಮೆರವಣಿಗೆಯನ್ನು ನೃತ್ಯ, ಹಾಡು, ಸಂಗೀತಗಳೊಂದಿಗೆ ನಡೆಸುತ್ತಿದ್ದರು ಎನ್ನುವುದಕ್ಕೆ ಬೌದ್ಧ ಧರ್ಮ ಪ್ರಚಾರದ ಕಾರ್ಯಕ್ರಮಗಳಲ್ಲಿ ಮೆರವಣಿಗೆಯ ದೃಶ್ಯಾವಳಿಗಳು, ಭಾರೋತ್ (ಮಧ್ಯಪ್ರದೇಶ), ನಾಗಾರ್ಜುನಕೊಂಡ, ಅಮರಾವತಿ (ಆಂಧ್ರಪ್ರದೇಶ) ಬೌದ್ಧ ಗ್ರಂಥಗಳನ್ನು ಆನೆಯ ಮೇಲೆ ಅಥವಾ ಅಶ್ವದ

ಮೇಲೆ ಇಟ್ಟು ಸುತ್ತ ಭಿಕ್ಷುಗಳು, ವಾದ್ಯಗಾರರು, ನರ್ತಕಿಯರು, ಹಾಡುತ್ತಾ, ಕುಣಿಯುತ್ತಾ ಸಾಗುವ ರೀತಿಯು ಶಿಲ್ಪಗಳಲ್ಲಿ ಚಿತ್ರಿತವಾಗಿವೆ.

ಭಾರೊತ್‌ನಲ್ಲಿ ನಾಲ್ಕು ಜನ ನರ್ತಕಿಯರು ಅರೆಮಂಡಿ ಸ್ವಸ್ತಿಕ ಸ್ಥಾನದಲ್ಲಿ ನಿಂತು ತಮ್ಮ ಎಡಗೈಯನ್ನು ಕಿವಿಯ ಬಳಿ ಮತ್ತು ಬಲಗೈಯನ್ನು ಮೇಲೆತ್ತಿ ಪತಾಕಿ ಹಸ್ತ ಬೀಸುತ್ತಾ ನರ್ತಿಸುತ್ತಿರುವಾಗ ಅವರ ಮುಂದೆ ಅವನದ್ಧ ವಾದ್ಯ ನುಡಿಸುವ ಲಯವಾದಕ, ಪುರಾತನವಾದ ಯಾಳತಂತೀ, ವಾದ್ಯ (ಹಾರ್ಪ್) ಕೋಳಲು, ತಾಳಗಳನ್ನು ನುಡಿಸುತ್ತಿರುವ ಪಕ್ಕಾ ವಾದ್ಯದವರು ನರ್ತಕಿಯರಿಗೆ ಅನುವಾಗುತ್ತಿರುವ ದೃಶ್ಯವಿದೆ. ಇವುಗಳಿಂದ ಅಂದು ಮನರಂಜನೆಗಾಗಿ ಹಾಡು, ಭಜನೆ, ನೃತ್ಯಗಳ ಜೊತೆಗೆ ವಾದ್ಯ ಬಳಸುತ್ತಿದ್ದರು. ನಂತರದ ಕಾಲದಲ್ಲಿ ಈ ಸಂಪ್ರದಾಯ ಮುಂದುವರೆದಿದೆ. ಪ್ರಾಯಶಃ ಈ ಫಲಕವೇ ನರ್ತಕಿಯರ ಹಾಗೂ ಪಕ್ಕಾವಾದ್ಯದವರ ಮತ್ತು ಸಂಗೀತ ವಾದ್ಯಗಳನ್ನು ಪ್ರತಿಬಿಂಬಿಸುವ ಪ್ರಪಥಮ ದೃಶ್ಯ ಪ್ರಮಾಣದ ದಾಖಲೆಯಾಗಿದೆ.[೨೧] ಭಾರೊತ್ ಸ್ತೂಪದ ಕೆಲವು ಭಾಗಗಳನ್ನು ದೆಹಲಿಯ ರಾಷ್ಟ್ರೀಯ ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ. ಇಲ್ಲಿ ಆನೆಗಳ ಸಾಲು ಮೆರವಣಿಗೆಯ ಮುಂಚೂಣಿಯಲ್ಲಿ ಇಬ್ಬರು ನರ್ತಕಿಯರು ನರ್ತಿಸುತ್ತಿರುವಂತಿದೆ. ಇಲ್ಲಿ ಒಂದು ವಿಶೇಷವೆಂದರೆ ಐದು ಜನ ಸ್ತ್ರೀ ವಾದ್ಯ ವೃಂದದವರು ಹಿಮ್ಮೇಳಗಳನ್ನು ಒದಗಿಸುತ್ತಿರುವುದು ಈ ಶಿಲ್ಪಗಳ ನೃತ್ಯ ಪ್ರತಿಪಾದನೆಯೊಂದಿಗೆ ಅಂದಿನ ವೇಷಭೂಷಣ, ಕೇಶವಿನ್ಯಾಸಗಳ ಅಧ್ಯಯನಕ್ಕೂ ನಿದರ್ಶನಗಳಾಗಿವೆ.

ಹೀಗೆ ನಮಗೆ ಅಮರಾವತಿ, ನಾಗರ್ಜುನಕೊಂಡ, ಅಜಂತಾ ಗುಹೆಗಳಲ್ಲಿರುವ ಶಿಲ್ಪಗಳು ಅಂದಿನ ಸಾಮಾಜಿಕ ಜೀವನದಲ್ಲಿ ನೃತ್ಯ, ಸಂಗೀತಕ್ಕೆ ಇದ್ದ ಸ್ಥಾನವನ್ನು ಪರಿಸ್ಫುಟಗೊಳಿಸುತ್ತದೆ. ದಕ್ಷಿಣ ಭಾರತದ ದೇವಾಲಯಗಳಲ್ಲಿ ಸಂಸ್ಕೃತಿ, ಆಚರಣೆ, ನೃತ್ಯ, ಸಂಗೀತದ ಸಂಶೋಧನೆಗೆ ಅಧಿಕ ಸಾಮಗ್ರಿ ಒದಗಿಸುತ್ತವೆ. ಈ ಎಲ್ಲಾ ಶಿಲ್ಪಗಳು ಮಾನಸೋಲ್ಲಾಸ, ಸಂಗೀತ ರತ್ನಾಕರ, ನೃತ್ಯರತ್ನಾವಳಿ ಮುಂತಾದ ಗ್ರಂಥಗಳನ್ನು ಬಳಸಿಕೊಂಡು ರಚಿತವಾಗಿವೆ ಎನ್ನಲು ಸಾಕಷ್ಟು ಆಧಾರಗಳು ಹೇರಳವಾಗಿವೆ. ಹೀಗೆ ನಮಗೆ ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ವಿನೋದಾವಳಿಗಳು ಹೇಗೆ ಪರಿವರ್ತನೆಯಾಗುತ್ತಾ ಬಂದಿತು ಎಂಬುದನ್ನು ಗುಹಾಂತರ ಬಂಡೆಗಳ ಮೇಲಿನ ಚಿತ್ರ, ಗೀರು ಬಂಡೆ ಚಿತ್ರ, ಭಿತ್ತಿಚಿತ್ರ ಶಿಲ್ಪ ಹೀಗೆ ನಾನಾ ವಿಧವಾದ ಮಾಧ್ಯಮಗಳ ಮೂಲಕ ಗಮನಿಸಬಹುದು.

ದೇವಾಲಯಗಳ ರಚನೆಯಲ್ಲಿ ವಿನೋದಾವಳಿಗಾಗಿ ಅಂದು ಮಾಡುತ್ತಿದ್ದ ಅಂಶಗಳನ್ನು ಶಿಲ್ಪಗಳ ಮೂಲಕ, ನೃತ್ಯದ ಶಿಲ್ಪಗಳಾದ ನರ್ತಕ, ನರ್ತಕಿಯರ, ನರ್ತಿಸುವ ದೇವತಾ ಮೂರ್ತಿ, ಗಂಧರ್ವ ಕಿನ್ನರರ, ಗಣಗಳ, ವಾದ್ಯ ವೃಂದದವರ ಸೇರ್ಪಡೆ ಒಂದು ರೂಢಿಯಾಗಿದೆಯೇನೊ ಅನ್ನಿಸುತ್ತದೆ. ದೇವಾಲಯಗಳನ್ನು ಸಾಗರೋಪಾದಿಯಲ್ಲಿ ನಿರ್ಮಿಸಲಾರಂಭಿಸಿದಾಗ ನೃತ್ಯಕ್ಕೆ ಸಂಗೀತವನ್ನು ಸಾಧ್ಯವಾದಷ್ಟು ಬಳಸಿಕೊಂಡರು. ಪಟ್ಟದಕಲ್ಲಿನ ವಿರೂಪಾಕ್ಷ, ಲಕ್ಕುಂಡಿಯ ಕಾಶಿವಿಶ್ವೇಶ್ವರ, ಇಟ್ಟಗಿಯ ಮಹಾದೇವ, ಚೆನ್ನಕೇಶವ, ಹಳೇಬೀಡಿನ

ಹೊಯ್ಸಳೇಶ್ವರ, ಕೊನಾರ್ಕಿನ ಸೂರ್ಯದೇವಾಲಯ, ತಂಜಾವೂರಿನ ಬೃಹದೇಶ್ವರ, ಚಿದಂಬರದ ನಟರಾಜ, ಖಜುರಾಹೋವಿನ ಮಹಾದೇವ, ವಾರಂಗಲ್ಲಿನ ರಾಮಪ್ಪ ಈ ದೇವಾಲಯಗಳಲ್ಲಿ ನೃತ್ಯದ ಶಿಲ್ಪಗಳು ಅಂದು ನೃತ್ಯಕ್ಕೆ ಎಷ್ಟು ಮಹತ್ವವಿತ್ತು ಎನ್ನುವುದನ್ನು ಸ್ಪಷ್ಟಪಡಿಸುತ್ತವೆ.

ಕನ್ನಡನಾಡನ್ನು ಅನೇಕ ಅರಸೊತ್ತಿಗೆಗಳು ಆಳಿವೆ. ಕಲೆಯ ವಿಕಾಸಕ್ಕೆ ಅವಕಾಶ ದೊರೆತ ಆಳ್ವಿಕೆಗಳಲ್ಲಿ ಸಹಜವಾಗಿಯೇ ಕ್ರೀಡೆ ಮತ್ತು ವಿನೋದಾವಳಿಯ ಚಟುವಟಿಕೆಗಳಿದ್ದವು. ಇದಕ್ಕೆ ಶಾಸನ, ದೇವಾಲಯ, ಸ್ಮಾರಕಗಳ ಮೇಲಿನ ಚಿತ್ರಗಳು ಆಯಾಕಾಲದ ಕಾವ್ಯಕೃತಿಗಳಲ್ಲಿ ಬಂದಿರುವ ಕ್ರೀಡೆಗಳ ಉಲ್ಲೇಖಗಳ ವರ್ಣನೆಗಳು ಸಾಕ್ಷಿಯಾಗಿವೆ. ಈ ಉಲ್ಲೇಖ ವರ್ಣನೆಗಳು ಆಯಾ ಕ್ರೀಡೆಯ ಪ್ರಾಚೀನತೆಯನ್ನು ಹೇಳುವುದರೊಂದಿಗೆ ಅವುಗಳ ಮೂಲದ ಮೇಲೂ ಬೆಳಕು ಚೆಲ್ಲುತ್ತವೆ.

ಪ್ರಾಚೀನ ಕಾಲದಲ್ಲಿ ಕ್ರೀಡೆ ಮತ್ತು ವಿನೋದಾವಳಿಗಳೆಲ್ಲವೂ ಯಾವುದೇ ವಿಧದಲ್ಲಿ ರಚನಾತ್ಮಕವಾಗಲಿ ಅಥವಾ ಬೌದ್ಧಿಕವಾಗಲಿ ಇರಲಿಲ್ಲ, ಶ್ರೀಮಂತರು, ಬಡವರು ಸಮನಾಗಿ ಆಚರಿಸುತ್ತಿದ್ದ ಹಬ್ಬಗಳು ಇಡೀ ಹಿಂದೂ ವರ್ಷದ ತುಂಬಾ ಇರುತ್ತಿದ್ದವು. ಅವುಗಳಲ್ಲಿ ಉಲ್ಲಾಸ ಮತ್ತು ಮೆರವಣಿಗೆಗಳು, ನೃತ್ಯ, ಸಂಗೀತಗಳಿರುತ್ತಿದ್ದವು. ವರುಷದ ಪ್ರಾರಂಭದಂತೆ ಋತುಗಳ ಪ್ರಾರಂಭವನ್ನು ಉಚಿತ ರೀತಿಯ ಉತ್ಸವಗೊಳೂಡನೆ ಆಚರಿಸುತ್ತಾರೆ. ಇವು ಪ್ರಾಚೀನವಾದ ವೇದ ಕಾಲದಲ್ಲೆ ಆರಂಭವಾದವು. ಆಗ ಚಾತುರ್ಮಾಸ್ಯದ ಮೂರು ಉತ್ಸವಗಳನ್ನು ಆಚರಿಸುತ್ತಿದ್ದರು. ಮೊದಲನೆಯದು ಚಳಿಗಾಲ ಕಳೆದ ಮೇಲೆ ಅಥವಾ ವಸಂತಕಾಲ (ಪಾಲ್ಗುಣ) ಆರಂಭದಲ್ಲಿ, ಎರಢನೆಯದು ಆಷಾಡದ ಮಳೆ ಪ್ರಾರಂಭವಾದ ಮೂರನೆಯದು ಶರತ್ಕಾಲದ (ಕಾರ್ತಿಕ)[೨೨] ಕರ್ನಾಟಕದ ಉದ್ದಗಲಕ್ಕೂ ದೊರೆಯುವ ಸಾವಿರಾರು ಶಾಸನಗಳಲ್ಲಿ ಕರ್ನಾಟಕದ ಜನತೆಗೆ ಕಲೆಯಲ್ಲಿ ಇದ್ದ ಅಭಿರುಚಿಯನ್ನು ಇವು ಪ್ರತಿಬಿಂಬಿಸುತ್ತವೆ.

ಈ ಶಾಸನಗಳು ಅಂದಿನ ಕಲಾವಿದರು ಮತ್ತು ಅವರ ಬಗ್ಗೆ ಹಲವು ವಿಶೇಷ ಮಾಹಿತಿಗಳನ್ನು ಇಂದಿನ ಜನರಿಗೆ ತಿಳಿಸುವಲ್ಲಿ ಬಹಳ ಮಹತ್ವವೆನಿಸಿವೆ. ಪ್ರಾಚೀನ ಕಾಲದಿಂದಲೂ ಸಂಗೀತ ಮತ್ತು ನೃತ್ಯ, ವಾದ್ಯದ ಉಲ್ಲೇಖಗಳು ಈ ಶಾಸನಗಳಿಂದ ಲಭ್ಯ. ನೃತ್ಯದ ಬಗ್ಗೆ ಭಾರತೀಯ ಕಲಾ ಇತಿಹಾಸದಲ್ಲಿ, ನರ್ತಕಿ, ರಾಜನರ್ತಕಿಯರ ಅನೇಕ ಉಲ್ಲೇಖಗಳು ದೊರೆಯುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕದ ಶಾಸನಗಳು ಹಲವು ವಿಷಯಗಳನ್ನು ಆಸಕ್ತಿಯುತವಾಗಿ ತಿಳಿಸುತ್ತವೆ. ಈ ರಾಜ ನರ್ತಕಿಯರು ಹಾಗೂ ದೇವದಾಸಿಯರು ಭಾರತೀಯ ಕಲಾ ಪರಂಪರೆಯನ್ನು ಪೋಷಿಸುವಲ್ಲಿ ಮತ್ತು ಉಳಿಸಿಕೊಳ್ಳುವಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಅವರು ತಾವು ಈ ವರ್ಗಕ್ಕೆ ಸೇರಿದವರೆಂದು ಹೇಳಿಕೊಳ್ಳಲು ಹಿಂಜರಿಯುತ್ತಿರಲಿಲ್ಲ. ರಾಜರು, ಅರಸಿಯರು, ಸ್ತ್ರೀಯರು ಸಾಕಷ್ಟು ದಾನಗಳನ್ನು ನೀಡಿ ಶಾಸನಗಳನ್ನು ಬರೆಸುತ್ತಿದ್ದರು.[೨೩]

ಉತ್ತಮ ಪ್ರಜಾಪಾಲಕನಾದ ರಾಜನ ಆಶ್ರಯದಲ್ಲಿ ಅವನ ಪ್ರಜೆಗಳು ಕಲಾವಿದರು ಸದಾ ಮಂಗಳ ಕಾರ್ಯಗಳಲ್ಲಿ ಹಾಗೂ ಉತ್ಸವಗಳಲ್ಲಿ ಬಹಳ ಉತ್ಸುಕರಾಗಿ ಸಂಭ್ರಮದಿಂದ ಪಾಲ್ಗೊಳ್ಳುತ್ತಿದ್ದರು. ಉತ್ಸವ ಎಂದಾಗ ಇಲ್ಲಿ ಅನೇಕ ರೀತಿಯ ಉತ್ಸವಗಳಿದ್ದವು. ಮಾಸ, ತಿಥಿ, ನಕ್ಷತ್ರಗಳ ಹಿನ್ನೆಲೆಯಲ್ಲಿ ಆಚರಿಸಲ್ಪಡುತ್ತಿದ್ದವು. ಪ್ರತಿಯೊಂದು ಉತ್ಸವಕ್ಕೂ ತನ್ನದೇ ಆದ ವೈಶಿಷ್ಟ್ಯವಿತ್ತು ಎಂದು ಸ್ಪಷ್ಟವಾಗುತ್ತದೆ.

ಸಾಧಾರಣವಾಗಿ ಉತ್ಸವಗಳಲ್ಲಿ ಕಲಾವಿದ ವಿವಿಧ ರೀತಿಯ ವೇಷಭೂಷಣಗಳಿಂದ ತಮ್ಮನ್ನು ವಿಶೇಷವಾಗಿ ಅಲಂಕರಿಸಿಕೊಂಡು ಹಾಡುವ, ನರ್ತಿಸುವ ಮೂಲಕ ಇತರರನ್ನು ಸಂಭ್ರಮದ ವಾತಾವರಣಕ್ಕೆ ಎಳೆದೊಯ್ಯುತ್ತಿದ್ದರು. ಒಟ್ಟಿನಲ್ಲಿ ರಾಜಾಶ್ರಯದಲ್ಲಿ ಅನೇಕಾನೇಕ ವಿಧವಾದ ಮಂಗಳ ಕಾರ್ಯಗಳು, ಉತ್ಸವಗಳು ನಡೆಯುತ್ತಿದ್ದು ಕಲಾವಿದರು, ಕಲಾರಸಿಕರು ಸಾಮಾನ್ಯ ಜನರು ಸಂಭ್ರಮದಿಂದ ಪಾಲ್ಗೊಳ್ಳುತ್ತಿದ್ದರು ಅಂತವುಗಳನ್ನು ಶಾಸನ, ಸಾಹಿತ್ಯ, ಶಿಲ್ಪ, ವಿದೇಶಿ ಪ್ರವಾಸಿಗರ ವರದಿಗಳ ಮೂಲಕ ಅಧ್ಯಯನಕ್ಕೊಳಪಡಿಸಲಾಗಿದೆ.

ದೇವಸ್ಥಾನಗಳಲ್ಲಿ ಸಭೆ ಸಮಾರಂಭಗಳಲ್ಲಿ ನೃತ್ಯದ ಮೂಲಕ ಜನರನ್ನು ರಂಜಿಸುತ್ತಿದ್ದ ಉಲ್ಲೇಖಗಳು ಅನೇಕ ಶಾಸನಗಳಲ್ಲಿ ದೊರೆಯುತ್ತವೆ. ಇವು ದೇವಾಲಯ ಸೇವೆಯಲ್ಲಿದ್ದ ಕಲಾವಿದರನ್ನು ಪೋಷಿಸುವ ಸಲುವಾಗಿ ಸಾಮಾನ್ಯ ಜನರು ಸಂಗ್ರಹಿಸಿ ನೀಡಿದ ಸಹಾಯದ ವಿಶೇಷತೆಯನ್ನು ನಿರೂಪಿಸುತ್ತವೆ. ಬಹಳಷ್ಟು ದೇವಾಲಯಗಳ ಆಡಳಿತಾತ್ಮಕ ಶಾಸನಗಳು ರಂಗಭೋಗವೆಂಬ ಧಾರ್ಮಿಕ ವಿಧಿ ನಡೆಸಲು ನೀಡಿರುವ ದಾನಗಳ ಮಾಹಿತಿ ನೀಡುತ್ತವೆ. ದೇವಾಲಯದ ಪ್ರಾಂಗಣದಲ್ಲಿ ಜನರ ರಂಜನೆಗಾಗಿ ಹಾಗೂ ದೇವರ ನಿತ್ಯ ಪೂಜಾ ವಿಧಿಯ ಅಂಗವಾಗಿ ನರ್ತಕಿಯರು, ಸಂಗೀತಗಾರರು ತಮ್ಮ ಕಲೆ ಪ್ರದರ್ಶಿಸುತ್ತಿದ್ದರು. ಈ ರೀತಿಯ ಕಲಾ ಪ್ರದರ್ಶನಕ್ಕಾಗಿಯೇ ದೇವಾಲಯಗಳಲ್ಲಿ ನವ್ಯ ನವರಂಗ. ನಾಟ್ಯಾ ಮಂದಿರ, ಎತ್ತರವಾದ ಮಂಟಪಗಳನ್ನು ಕಟ್ಟಿಸುತ್ತಿದ್ದರು. ಮಧ್ಯದ ನಾಲ್ಕು ಕಂಬಗಳು ರಂಗಭೋಗದ ವಿಶೆಷ ವಿಧಿಯ ನಿರೂಪವಾಗಿದ್ದವು. ಹೆಚ್ಚಾಗಿ ಬಯಲು ಸ್ತಂಭ ಮಂಟಪಗಳಾಗಿದ್ದು ಸುತ್ತಲೂ ಕಕ್ಷಾಸನಗಳು ಇರುತ್ತಿದ್ದವು ಮತ್ತು ವಿಶಾಲವಾದ ಪ್ರಾಕಾರಗಳಲ್ಲಿಯೂ ಜನ ಕುಳಿತು ನೃತ್ಯ ಮತ್ತು ಸಂಗೀತ ಕಲೆಗಳನ್ನು ನೋಡಿ ಆಹ್ಲಾದಿಸುತ್ತಿದ್ದರು. ರಂಗಭೋಗ ಸೇವೆಗಾಗಿ ಮತ್ತು ನಿತ್ಯ ಕಲಾಸೇವೆಯನ್ನು ಉಲ್ಲೇಖಿಸುವ ನೂರಾರು ಶಾಸನಗಳಿವೆ. ಕ್ರಿ.ಶ. ಸು. ೬ನೆಯ ಶತಮಾನದ ಒಂದು ತಾಮ್ರಶಾಸನದಲ್ಲಿ ಪುನ್ನಾಟ ರಾಜವಂಶದ ತಮರ ಕಶ್ಯಪ ಮನೆತನದ ರಾಷ್ಟ್ರವರ್ಮನನ್ನು ವರ್ಣಿಸುವಾಗ ನಟನರ್ತ್ತನ ನಾದ್ಯತ್ಸವ ವೇಪ್ತ್ರ ಎಂಬ ಉಲ್ಲೇಖ ದೊರೆಯುತ್ತದೆ.[೨೪]

ಕ್ರಿ.ಶ. ೭೫೩-೫೪ರ ಎರಡನೆಯ ಕೀರ್ತಿವರ್ಮನ ಒಂದು ಶಾಸನದಲ್ಲಿ ಚಾಲುಕ್ಯ ರಾಜವಂಶಾವಳಿ ವಿವರಿಸುವಾಗ ವಿಕ್ರಮಾದಿತ್ಯನನ್ನು ಹೆಸರಿಸುವಾಗ 'ನಟಪಾದಯುಗ್ಮ' ಎಂಬ ಬಿರುದಿನಿಂದ ಗುರುತಿಸಲಾಗಿದೆ. ನಟಪಾದಯುಗ್ಮ ಪದವು ಅಭಿನಯ ಮತ್ತು ನೃತ್ಯ ಎರಡರಲ್ಲೂ ಪಾರಂಗತನಾಗಿ ಪ್ರಕಾಶಿಸುವವನು ಎಂಬ ಅರ್ಥ ಕೊಡುತ್ತದೆ. ಎರಡನೇ

ವಿಕ್ರಮಾದಿತ್ಯನ ಕಾಲಕ್ಕೆ ನೃತ್ಯಕ್ಷೇತ್ರದ ವಿಚಾರ ತಿಳಿಸುವಂತಹ ೮ನೆಯ ಶತಮಾನದ ನೃತ್ಯ ಕಲಾವಿದನನ್ನು ಬಣ್ಣಿಸುವ ಎರಡು ಶಾಸನಗಳು ದೊರೆಯುತ್ತವೆ. ನಟಸೇವ್ಯ ಬಿರುದಾಂಕಿತನಾದ ನಾವಯಾಚಾರ್ಯ ನಿದ್ದನೆಂದೂ ಆತನ ಪಾಂಡಿತ್ಯದ ಮುಂದೆ ಇತರ ಕಲಾವಿದರ ಗರ್ವವೆಂಬ ಪರ್ವತವು ನಟಸೇವ್ಯನ ಪಾಂಡಿತ್ಯದ ಮುಂದೆ ವಜ್ರಾಘಾತದಂತೆ ಮುರಿದು ಬೀಳುತ್ತಿತ್ತು ಎಂಬ ವರ್ಣನೆ ಇದ್ದರೆ, ಇನ್ನೊಂದು ಶಾಸನದಲ್ಲಿ ಈ ನಟಸೇವ್ಯನು ಭರತಾಗಮದಲ್ಲಿ ಪಂಡಿತನೆಂದೂ ಈತನ ಮುಂದೆ ಯಥೋಚಿತವಾಗಿ ನಾಟ್ಯಶಾಸ್ತ್ರದಲ್ಲಿ ವಿವರಿಸಿರುವ ನೃತ್ತ ಪ್ರಬೇದಗಳನ್ನು ಮಾಡಿ ತೋರಿಸಿದವರನ್ನು ಮಾತ್ರ ನರ್ತಕರೆಂದು ಪರಿಗಣಿಸಲು ಸಾಧ್ಯ ಎಂಬ ವಿವರಣೆ ದೊರಕುತ್ತದೆ.[೨೫] ನಟಸೇವ್ಯ ಬಿರುದಾಂಕಿತನಾದ ನಾಟ್ಯಾಚಾರ್ಯನಾದ ಈತನು ಒಬ್ಬ ನೃತ್ಯ ಮೀಮಾಂಸಕನಾಗಿರಬೇಕೆಂದೂ ಈ ಕಾಲಕ್ಕೆ ನಾಟ್ಯಾಶಾಸ್ತ್ರಕ್ಕೆ ಸಮನಾಂತರವಾದ ಒಂದು ಗ್ರಂಥವನ್ನು ರಚಿಸಿರಬಹುದೆಂದು ವಿದ್ವಾಂಸರ ಅಭಿಮತ.[೨೬] ಕ್ರಿ.ಶ. ೯೦೬ರ ಒಂದು ಜೈನ ತಾಮ್ರ ಶಾಸನದಲ್ಲಿ ಗಂಗ ದೊರೆ ನೀತಿಮಾರ್ಗ ಎರಡನೇ ಎರೆಯಂಗ ದೇವನನ್ನು ನೃತ್ಯಾದಿ ತತ್‌ಶಿಕ್ಷೋ ಎಂದು ಗೇಯ ವಾದ್ಯ ನೃತ್ಯ ವಿದ್ಯೋಪ ವಿದ್ಯಾ ಭರತೇನ ಎಂದು ಉಲ್ಲೇಖಿಸಲಾಗಿದೆ.[೨೭]

ಅಂದು ಸ್ತ್ರೀಯರು ಸಂಗೀತ ನೃತ್ಯಗಳಲ್ಲಿ ಭಾಗವಹಿಸುತ್ತಿದ್ದರು. ರಾಜಸಭೆಯಲ್ಲಿ ಸೇವೆಯಲ್ಲಿದ್ದವರನ್ನು ರಾಜನರ್ತಕಿಯರೆಂದೂ, ಸಂಗೀತಗಾರರನ್ನು ಆಸ್ಥಾನ ವಿದುಷಿಯರೆಂದೂ ಕರೆಯುತ್ತಿದ್ದರು. ದೇವಾಲಯದ ಸೇವೆ ಮತ್ತು ಸಮಾರಂಭಗಳಲ್ಲಿ ನರ್ತಿಸುತ್ತಿದ್ದ ನರ್ತಕಿಯರು ದೇವದಾಸಿಯರೆನಿಸುತ್ತಿದ್ದರು.

ಭರತನ ಮತದಂತೆ ದೇವದಾಸಿಯು ಅರವತ್ನಾಲ್ಕು ಕಲೆಗಳಲ್ಲಿ ವಿಶೇಷ ಪರಿಣಿತಿ ಪಡೆದ ವೈಶೇಷಿಕಳಾಗಿದ್ದಳು.[೨೮] ಈ ರೀತಿ ನರ್ತನ ಮತ್ತು ಸಂಗೀತ ವಿದ್ಯೆಗಳ ಪ್ರದರ್ಶನದಲ್ಲಿ ತೊಡಗಿದ ಸ್ತ್ರೀಯರನ್ನು ಗುರುತಿಸುವಾಗ ಬಾದಾಮಿ ಚಾಲುಕ್ಯರ ಕಾಲದಲ್ಲಿ ಅವರ ಹೆಸರಿನೊಂದಿಗೆ 'ಪೋಟೀ' ಅಥವಾ 'ಬೊಡ್ಡಿ' ಯೆಂಬ ವಿಶೇಷತೆಯನ್ನು ಸೇರಿಸಲಾಗುತ್ತಿತ್ತು. ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳೆಲ್ಲ ಅವರನ್ನು ಸೂಳೆಯರು, ಹೊಯ್ಸಳರ ಕಾಲದಲ್ಲಿ ಸೂಳೆ ಮತ್ತು ಪಾತ್ರದವರು ಎಂದು ಗುರುತಿಸಲಾಗಿದೆ.[೨೯] ಬಾದಾಮಿ ಚಾಲುಕ್ಯರ ಕಾಲದ ಅನೇಕ ಶಾಸನಗಳಲ್ಲಿ ನಮಗೆ ನೃತ್ಯ ಸಂಗೀತದ ಉಲ್ಲೇಖಗಳು ಸಿಗುತ್ತವೆ. ಕ್ರಿ.ಶ. ೮ನೆಯ ಶತಮಾನದಲ್ಲಿ ಪಟ್ಟದ ಕಲ್ಲಿನ ವಿರೂಪಾಕ್ಷ ದೇವಾಲಯದ ಕಂಬದ ಹಿಂಬದಿಯಲ್ಲಿರುವ ಒಂದು ಶಾಸನವು ಅಚಲ ಎಂಬ ಕಲಾವಿಧನ ಮಾಹಿತಿ ನೀಡುತ್ತದೆ. ಇವನು ಉತ್ತಮ ನಟ ಮತ್ತು ನರ್ತಕನೂ ಆಗಿದ್ದನು ಬಹುಶಃ ಅಚಲನು ಶಾಸನದಲ್ಲಿ ಉಕ್ತವಾಗಿರುವ ಕರ್ನಾಟಕ ಪ್ರಥಮ ಶ್ರೇಷ್ಠ ನರ್ತಕ ಮತ್ತು ನಟ.[೩೦] ಇನ್ನೂ ವಿಕ್ರಮಾದಿತ್ಯನ ಪಟ್ಟ ಮಹಿಷಿ ಲೋಕಮಹಾದೇವಿಯು ಮಹಾ ಕಲಾಪೋಷಕಿಯಾಗಿದ್ದಳು ದೇವಾಲಯದ ಸೇವೆಯಲ್ಲಿದ್ದ ಗಾಯಕರಿಗೆ ಮತ್ತು ಶಿಲ್ಪಿಗಳಿಗೆ ದಾನ ನೀಡಿದ ವಿವರವಿದೆ.[೩೧]

ಇದರಿಂದ ಬಾದಾಮಿ ಚಾಲುಕ್ಯರ ಕಾಲದಲ್ಲಿ ವಿನೋದಾವಳಿಯಲ್ಲಿ ಸಂಗೀತ ಮತ್ತು ನೃತ್ಯಗಳಿಗೆ ಕೊರತೆಯಿರಲಿಲ್ಲ. ಅವರು ಕಲಾಪೋಷಕರಾಗಿದ್ದರಲ್ಲದೆ ರಾಜನರ್ತಕಿಯರನ್ನು ಮತ್ತು ದೇವದಾಸಿಯರನ್ನು ಗೌರವಿಸುತ್ತಿದ್ದರು. ಈ ವರ್ಗದ ಸ್ತ್ರೀಯರು ಹೀನ ಸ್ಥಿತಿಗೆ ತಲುಪಿರಲಿಲ್ಲ. ಆಗಿನ ಕಲಾವಿದರು ಶಾಸ್ತ್ರೀಯ ಸಂಪ್ರದಾಯಗಳಿಗೆ ಬದ್ಧರಾಗಿದ್ದರು ಎಲ್ಲಾ ಹೆಂಗಸರ ಹೆಸರಿನ ಕೊನೆಯನ್ನು ಗೌರವ ಸೂಚಕ, ಬಹುವಚನದ ನಾಮಗಳ ಮೂಲಕ ಸೂಚಿಸುತ್ತಿದ್ದುದನ್ನು ಗಮನಿಸಬಹುದು.[೩೨] ತಮಿಳುನಾಡಿನ ಸಿದ್ದಲಿಂಗಮಡಂ ಎಂಬ ಸ್ಥಳದಲ್ಲಿ ದೊರೆತ ರಾಷ್ಟ್ರಕೂಟ ಚಕ್ರವರ್ತಿ ಮೂರನೇ ಕೃಷ್ಣನ ಕಾಲದ ಶಾಸನದಲ್ಲಿ[೩೩] ಅಲ್ಲಿಯ ಸಭಾಸದರು ತಿರುಪ್ಪಳಿಪ್ಪಾಗುವ ನೃತ್ತವಿಂಟನಕೆ ಎಂಬ ನರ್ತಕಿಯನ್ನು ಅವಳ ವಂಶಸ್ಥರಿಗೆ ಕರ ವಿಚಿತ ನೃತ್ಯ ಭೋಗವನ್ನು ದೇವಾಲಯದ ತಿರುಪ್ಪುಳಿಪಾಗವ ದೇವರ ಉತ್ಸವವನ್ನು ತೆಗೆದುಕೊಂಡು ಹೋಗುವಾಗ ಸಲ್ಲಿಸಬೇಕೆಂದು ವಿಧಿಸಲಾಗಿದೆ. ದೇವಾಲಯದಲ್ಲಿ ನೃತ್ಯಭೋಗವು ಬಹುಮುಖ್ಯ ಪೂಜಾ ವಿಧಿಯಾಗಿತ್ತು. ಉತ್ಸವ ಕಾಲದಲ್ಲಿ ಈ ನರ್ತಕಿಯರು ತಮ್ಮ ಸೇವೆಯನ್ನು ಸಲ್ಲಿಸುವುದರ ಮೂಲಕ ಶುಭವನ್ನು ತೋರುವ ಪದ್ಧತಿ ಆಗಿನಿಂದಲೂ ನಡೆದುಕೊಂಡು ಬಂದಿದೆ ಎನ್ನುವುದು ವಿಧಿತವಾಗಿದೆ. ಪೆರಂಗಿಯೂರ್ ತಿರುಕ್ಕೊಯಿಲೂರ್ ತಾಲ್ಲೂಕು ದಕ್ಷಿಣ ಆರ್ಕಾಟ್ ಜಿಲ್ಲೆಯ ಹಾಳಾಗಿರುವ ಶಿವ ದೇವಾಲಯದ ದಕ್ಷಿಣ ಭಾಗದ ಗೋಡೆಯ ಮೇಲಿರುವ ಶಾಸನ[೩೪] ಪೆರುಮಾನಡಿಗಳಿಗೆ ತ್ರಿಸಂಧಿಯಲ್ಲಿ ಅಂದರೆ ತ್ರಿಕಾಲದಲ್ಲಿ ಸಂಗೀತ ವಾದ್ಯಗೋಷ್ಠಿ ಸೇವೆ ನಡೆಸಲು ದತ್ತಿಯಿತ್ತುದನ್ನು ದಾಖಲಿಸಿದೆ.

ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಇವರು ತಮ್ಮ ಪೂರ್ವಜರಾದ ಬಾದಾಮಿ ಚಾಲುಕ್ಯರ ಪರಂಪರೆಯನ್ನು ಬೆಳೆಸಿಕೊಂಡು ಬಂದರು. ಕ್ರೀಡೆ ಮತ್ತು ವಿನೋದಗಳಿಗೆ ಹೆಚ್ಚಿನ ವೈವಿಧ್ಯತೆಯನ್ನು ನೀಡುವಲ್ಲಿ ಮುಖ್ಯರೆನಿಸಿದ್ದಾರೆ. ನವಿರಾದ ಹಬ್ಬ ನೃತ್ಯ, ಸಂಗೀತದ ಅಂಶಗಳು ಇವರ ಕಾಲದಲ್ಲಿ ಮೇಳೈಸಿಕೊಂಡವು. ಚಕ್ರವರ್ತಿಗಳು, ಸಾಮಂತರು, ಅಧಿಕಾರಿಗಳು ಅರಸಿಯರು ಸ್ವತಃ ದಾನ ನೀಡಿ ಈ ಚಟುವಟಿಕೆಗಳಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿರುವುದನ್ನು ಶಿಲ್ಪ ಮತ್ತು ಶಾಸನಗಳಿಂದ ಮನದಟ್ಟಾಗುತ್ತದೆ.

ಬಾಗಳಿಯ ಕಲ್ಲೇಶ್ವರ, ನರಸಿಂಹಸ್ವಾಮಿ ದೇವಾಲಯದ ಒಂದು ಕ್ರಿ.ಶ. ೧೦೧೮ನೆಯ ವರ್ಷಕ್ಕೆ ಸೇರಿದ ಶಾಸನದಲ್ಲಿ[೩೫] ಯುಗಾದಿಯ ದಿನ ಈ ಶಾಸನವನ್ನು ಪೆರ್ಗಡೆ ನರಸಿಂಹಯ್ಯನನ್ನು ಬಾಗಳಿಗೆ ಹೋಗಿ ಮಹಾಜನರ ಅಭಿಮುಖದಲ್ಲಿ ಸೋಮಶಿಂಗ ಭರತನ ಪಾದಗಳನ್ನು ತೊಳೆದು ಕಳಿದೇವಸ್ವಾಮಿಗೆ ಭೂಮಿಯನ್ನು ಸಮರ್ಪಿಸುತ್ತಾ ದೇವದಾಸಿಯರು ಮತ್ತು ಅವರ ವೃಂದದವರಿಗೆ ಅನ್ನ ಸಂತರ್ಪಣೆ ಮಾಡಬೇಕು ಎಂಬ ಉಲ್ಲೇಖವಿದೆ. ಕ್ರಿ.ಶ. ೧೦೪೫ನೆಯ ವರ್ಷದ ಶಾಸನವು ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಮೋರಿಗೇರಿಯ ಉದ್ದಿಬಸವಣ್ಣನ ದೇವಾಲಯಕ್ಕೆ ಸೇರಿದೆ. ಇದು ಕಲ್ಯಾಣ ಚಾಲುಕ್ಯ ತ್ರೈಲೋಕ ಮಲ್ಲ ಅಹವಮಲ್ಲನ ಕಾಲಕ್ಕೆ ಸೇರಿದ್ದಾಗಿದೆ. ಫತ್ತರಸ, ಘಟ್ಟಿಯರಸ ಮತ್ತು ಸೇನಾಬೋವ ಗೋವಿಂದರಸ ಎಂಬ ಆಡಳಿತಾಧಿಕಾರಿಗಳು, ದೇವದಾಸಿಯರು ಮತ್ತು ಅವರ ವಾದ್ಯವೃಂದದವರ ಪೋಷಣೆಗಾಗಿ ಭೂಮಿ ಧಾನವನ್ನು ನೀಡಿದ ವಿಷಯವಿದೆ.

ಇನ್ನೊಂದು ಮುಖ್ಯ ಸಂಗತಿ ಎಂದರೆ ರೂವಾರಿ ಮುಚ್ಚೋಜ ಎಂಬ ಹೆಸರು ಸೂಚಿಸುವುದರೊಂದಿಗೆ ಜೊತೆಗೆ ಒಬ್ಬ ಪುರುಷ ನರ್ತಕನ ಬಗ್ಗೆಯೂ ಬೆಳಕು ಚೆಲ್ಲುತ್ತದೆ.[೩೬] ಮತ್ತೊಂದು ಕ್ರಿ.ಶ. ೧೦೪೫ ನೆಯ ವರ್ಷದ ಶಾಸನದಲ್ಲಿ ನರ್ತಕಿಯರ ಹಾಗೂ ವಾದ್ಯ ಮತ್ತು ವಾದಕರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುವಲ್ಲಿ ಮುಖ್ಯವಾಗಿದೆ. ಇಲ್ಲಿ ಸೂಲೆವಾಳಂಗೆ, ವಂಸಿಗಂಗೆ, ಪರೆಕಾರನಿಗೆ, ಸೂಳೆಯರಿಗೆ, ರೂವಾರಿಗೆ ಮತ್ತು ವಟ್ಟುವನಿಗೆ ಎಲ್ಲರಿಗೂ ಇಂತಿಷ್ಟು ನಾಣ್ಯ ಕೊಡಬೇಕೆಂದು ತಿಳಿಸಿದೆ.[೩೭] ಕ್ರಿ.ಶ. ೧೦೫೮ನೆಯ ವರ್ಷದ ಚಾಲುಕ್ಯ ಭುವನೈಕ್ಯಮಲ್ಲನ ಕಾಲದ ಶಾಸನ[೩೮]ಇದೊಂದು ದಾನ ಶಾಸನವಾಗಿದ್ದು ಇದರ ಪ್ರಕಾರ ಹನ್ನೆರಡು ಮತ್ತರಗಳನ್ನು ನರ್ತಕಿಯರಿಗೂ, ಹನ್ನೆರಡು ಮತ್ತರಗಳನ್ನು ಸಂಗೀತಗಾರರಿಗೂ ನೀಡಲಾಗಿದೆ. ಹನ್ನೆರಡು ಪಾತ್ರಕೆ ಮತ್ತಾರು ಹನ್ನೆರಡು ಪಾಡುವರ್ಗೆ.... ಎಂದಿದೆ.

ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಕ್ರಿ.ಶ. ೧೦೮೭ನೆಯ ವರ್ಷಕ್ಕೆ ಸೇರಿದ ಹರಪನಹಳ್ಳಿಯ ಹತ್ತಿರದ ನಿಲಗುಂದ ಶಾಸನದಲ್ಲಿ ಭೀಮೇಶ್ವರ ದೇವಾಲಯ ಜೀರ್ಣೋದ್ಧಾರದ ಸಮಾರಂಭದಲ್ಲಿ ನೀಡಿದ ಶಾಸನದಲ್ಲಿ ನಾಟ್ಯ, ಸಂಗೀತ ಮತ್ತು ವಾದ್ಯ ಕಲಾವಿದರಿಗೆ ಇತರ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಬೇಕಾಗುವ ದತ್ತಿಯ ವಿಷಯವನ್ನು ತಿಳಿಸುತ್ತದೆ.[೩೯] ಕ್ರೀ.ಶ.೧೦೬೮ ನೆಯ ವರ್ಷದ ಕಲ್ಯಾಣ ಚಾಲುಕ್ಯರ ಎರಡನೆಯ ಸೋಮೇಶ್ವರ ದೇವನ ಕಾಲದ ಬಾಗಳಿಯ ಕಲ್ಲೇಶ್ವರ ದೇವಸ್ಥಾನದ ಪಶ್ಚಿಮ ದಿಕ್ಕಿನಲ್ಲಿರುವ ಶಾಸನದಲ್ಲಿ ನೃತ್ಯ ಸಂಗೀತ ಸೇವೆಯು ಈ ದೇವಾಲಯದ ಮುಖ್ಯ ಅಂಗವಾಗಿತ್ತೆಂದು ತಿಳಿಸುತ್ತದೆ. ಮತ್ತರು ಹನ್ನೆರಡು ಪಾತ್ರಕ್ಕೆ, ಮತ್ತರು ಹನ್ನೇರಡು ಪಾಡುವರ್ಗ, ಮತ್ತರು ವಲಸೆಕಾರಂಗೆ, ಮತ್ತಾರು ಐದು ಮಾಲಗಾರಂಗೆ.[೪೦]ಎಂದಿದೆ.

ಗದುಗಿನ ಸೋಮೇಶ್ವರ ದೇವಾಲಯದಲ್ಲಿ ಸಿಕ್ಕಿರುವ ಶಾಸನವು ಕ್ರಿ.ಶ. ೧೧೪೨ನೆಯ ವರ್ಷಕ್ಕೆ ಸೇರಿದ್ದು ಜಗದೇಕ ಮಲ್ಲನ ಆಡಳಿತ ಕಾಲಕ್ಕೆ ಸೇರಿದ್ದಾಗಿದೆ. ಇಲ್ಲಿ ದೇವರ ರಂಗಭೋಗಕ್ಕಾಗಿ ದಾನ ನೀಡಿದ ಸಂದರ್ಭ ಸೂಚಿಸುತ್ತದೆ. 'ಸ್ವಯಂಭು ಸೋಮೇಶ್ವರ ದೇವರ ರಂಗಭೋಗಕ್ಕೆ' ಎಂದು ದಾಖಲಾಗಿದೆ.[೪೧] ಆರನೆಯ ವಿಕ್ರಮಾದಿತ್ಯನ ರಾಣಿಯರಿಗೆ ಸಂಬಂಧಿಸಿದ ಕೆಲವು ಶಾಸನಗಳು ಅವರು ಆ ಕಾಲದ ಕಲಾ ಪ್ರಕಾರಗಳಲ್ಲಿ ಉತ್ತಮ ಜ್ಞಾನ ಮತ್ತು ಅಭಿರುಚಿಯನ್ನು ಹೊಂದಿದ್ದರೆಂದು ತಿಳಿಸುತ್ತವೆ. ರಾಣಿ ಚಂದಲದೇವಿಯು ಸ್ವತಃ ಉತ್ತಮ ಕಲಾವಿದೆಯಾಗಿದ್ದು ನೃತ್ಯ ಕಲೆಯನ್ನು ಪೋಷಿಸುತ್ತಿದ್ದಳು.[೪೨]

ದೇವಾಲಯ ಚಕ್ರವರ್ತಿಯೆಂದೇ ಹೆಸರಾಗಿರುವ ಇಟಗಿ ಮಹದೇವ ದೇವಾಲಯಕ್ಕೆ ಸೇರಿದ ಕ್ರಿ.ಶ. ೧೧೧೨ ನೆಯ ವರ್ಷದ ಶಾಸನ ಈ ದೇವಾಲಯದ ಸೊಬಗನ್ನು ಮುಕ್ತವಾಗಿ ಶ್ಲಾಘಿಸುತ್ತಾ ಶಾಸನದ ೬೮ನೆಯ ಸಾಲಿನಲ್ಲಿ ನಾಟ್ಯ ಸೇವೆಯ ಪ್ರಸ್ತಾಪವಿದೆ. ಮಹಾದಂಡಾಧಿಕಾರಿ ಮಹಾದೇವನು ದೇವಾಂಗನೆಯರಾದ ರಾಜ, ರತಿ ಮತ್ತು ರಂಭೆಯರನ್ನು ಹೋಲುವಂತಹ ನರ್ತಕಿಯರಿಗಾಗಿ ಮತ್ತು ದೇವಾಲಯದ ಊಳಿಗದವರಿಗಾಗಿ ದಕ್ಷಿಣ ಭಾಗದ ದ್ವಾರದ ಸಮೀಪ ಸುಮಾರು ಇಪ್ಪತ್ನಾಲ್ಕು ಗೃಹಗಳನ್ನು ಕಟ್ಟಿಸಿದನೆಂದು ತಿಳಿಸಲಾಗಿದೆ.[೪೩] ಸಂಗೀತ ಮತ್ತು ನೃತ್ಯ ಕಲಾವಿದರ ಬಗ್ಗೆ ಕಲ್ಯಾಣ ಚಾಲುಕ್ಯರ ಕಾಲದಿಂದಲೇ ದೇವಾಲಯ

ವಾಸ್ತು ನಿರ್ಮಾಣದಲ್ಲಿ ರಂಗಭೋಗಕ್ಕಾಗಿಯೇ ನೃತ್ಯ ಮಂಟಪಗಳನ್ನು ವಿಶೇಷವಾಗಿ ನಿರ್ಮಿಸುತ್ತಿದ್ದರು. ಕೆಲವೊಮ್ಮೆ ಗರ್ಭಗುಡಿಯ ಎದುರು ನವರಂಗದಲ್ಲೇ ಮಧ್ಯದಲ್ಲಿ ನಾಲ್ಕು ಕಂಬಗಳ ಭಾಗವನ್ನು ರಂಗಭೋಗಕ್ಕೆ ಪ್ರಯೋಗಿಸಲಾಗುತ್ತಿತ್ತು. ಕಲ್ಯಾಣ ಚಾಲುಕ್ಯರ ಮತ್ತು ಹೊಯ್ಸಳರ ದೇವಾಲಯ ರಚನೆಗಳಲ್ಲಿ ಈ ಮಾದರಿಯು ಸಾಮಾನ್ಯವಾಗುತ್ತಾ ಹೋಗುತ್ತದೆ. ರಂಗಭೋಗದ ಬಗೆಗೆ ದೇವರ ನಾವಿದಿಗೆಯ ಒಂದು ಶಾಸನವು ಮಹತ್ವದ ವಿವರಗಳನ್ನು ನೀಡುತ್ತವೆ. ನಾವಿದಿಗೆಯ ಮೂಲಸ್ಥಾನ ಮಲ್ಲಿಕಾರ್ಜುನ ಆದಿತ್ಯದೇವರ ತ್ರಿಕೂಟಾಚಲದ ಪರಿಸೂತ್ರದಲ್ಲೇ ನೃತ್ಯ ಮಂಟಪವೊಂದಿದ್ದು ಅಲ್ಲಿ ನಿತ್ಯ ನೈಮತ್ತಿಕ ಗೀತ ವಾದ್ಯ ವಿವಿಧ ವಾದ್ಯಕ್ಕೆ ನೃತ್ಯ ವಿದ್ಯಾಧರಿ ಎಂದು ಪ್ರಸ್ತಾಪಿಸಿದೆ.[೪೪] ದೇವಾಲಯಗಳಲ್ಲಿ ಸಂಗೀತ, ನೃತ್ಯ ಇತ್ಯಾದಿಗಳು ಜನರನ್ನು ರಂಜಿಸುತ್ತಿದ್ದು ಕುರಿತು ಹೇಳುವ ಅನೇಕ ಶಾಸನಗಳಿವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ದೇವಸ್ಥಾನಗಳಲ್ಲಿ ಗೀತೆ, ವಾದ್ಯ, ನೃತ್ಯಗಳಂತಹ ವಿನೋದಾವಳಿಗಳು ರಾಜರಾದಿಯಾಗಿ ಸಾಮಾನ್ಯ ಜನರನ್ನು ರಂಜಿಸುತ್ತಿದ್ದವು[೪೫] ಆದ್ದರಿಂದಲೇ ಶಿಲ್ಪಗಳಲ್ಲಿ ಕೂಡ ನರ್ತಕರು ಮತ್ತು ಗಾಯಕರು ಹೆಚ್ಚಾಗಿ ಕಾಣುತ್ತಾರೆ.

ಕಲ್ಯಾಣ ಚಾಲುಕ್ಯರಂತೆ ಹೊಯ್ಸಳರು ಕನ್ನಡ ನಾಡನ್ನು ಆಳ್ವಿಕೆ ಮಾಡಿದ್ದಾರೆ. ಇವರ ಕಾಲವೂ ಕ್ರೀಡೆ ಮತ್ತು ವಿನೋದಾವಳಿಯ ಪರ್ವ ಕಾಲ ಎನ್ನಬಹುದು. ಇವರ ಕಾಲದ ದೇವಾಲಯಗಳು ಇಂದು ಭಾರತೀಯ ಕಲಾಸ್ಮಾರಕಗಳಲ್ಲಿ ಅದ್ವಿತೀಯ ಸ್ಥಾನವನ್ನು ಗಳಿಸಿವೆ. ಸಂಗೀತ, ನೃತ್ಯ, ವಾದ್ಯಗಳಿಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ಬೇಲೂರು, ಹಳೆಬೀಡು ಮುಂತಾದ ಕಡೆಗಳಲ್ಲಿ ದೊರೆಯುತ್ತವೆ.

ಸಿಂದಗಿ ಗ್ರಾಮದ ಬ್ರಹ್ಮೇಶ್ವರ ದೇವಾಲಯದ ಕ್ರಿ.ಶ. ೧೧೨೦ನೆಯ ವರ್ಷದ ಒಂದು ಶಾಸನವು ಹೊಯ್ಸಳ ವಿನಯಾದಿತ್ಯ ಮತ್ತು ಎರೆಯಂಗರ ವಂಶಾವಳಿಯನ್ನು ಅವರ ದಂಡಾಧಿಕಾರಿಗಳಾಗಿದ್ದ ಮರಿಯಾನೆ ದಂಡನಾಯಕನ ಮತ್ತು ಅವನ ಪತ್ನಿ ಚಾಮವ್ವೆಯರ ಮನೆತನದ ವಿಷಯವನ್ನು ವಿವರಿಸುತ್ತದೆ. ಈ ದಂಪತಿಗಳ ಪುತ್ರಿಯರಾದ ಪದ್ಮಲದೇವಿ, ಚಾಮಲದೇವಿ ಮತ್ತು ಬೊಪ್ಪದೇವಿಯರು ನೃತ್ಯ ಮತ್ತು ಸಂಗೀತಗಳಲ್ಲಿ ಪರಿಣತಿ ಹೊಂದಿದ್ದರು ಅವರುಗಳು ಮೂರು ರಾಜಮನೆತನವನ್ನು ಬೆಳಗುವಷ್ಟು ಯೋಗ್ಯತೆಯನ್ನು ಹೊಂದಿದ್ದರು.[೪೬] ಈ ವಿಷಯವನ್ನು ಗಮನಿಸಿದಾಗ ಈ ಸೋದರಿಯರು ನಾಟ್ಯ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಂತೆ ವಿಧಿತವಾಗುತ್ತದೆ.

ಬೇಲೂರು ಚೆನ್ನಕೇಶವ ದೇವಾಲಯದ ಮಧ್ಯ ಶಿಲಾದೀಪಸ್ತಂಭದ ಬುಡದಲ್ಲಿರುವ ಶಾಸನದಲ್ಲಿ

'ಪೂಜಿಪಳಾನಂದದೆ ಶಾಂತಿದೇವಿ ಶೈಳಾತ್ಮಜೆಯು/ಸಾ.....ತಾಳದೊಳ...ಗದ
ಬಿನಯಂಗಳ ಭರತಾಗಮದ ತಿರುಳೆನಿಸಲುಭಯ ಕ್ರಮ ನೃತ್ಯಂ.
ಶಾಸ್ತಿದೇವಿಯಾಳ ಸೊಗಯಿಸುಗುಂ....[೪೭] ಎಂದಿದೆ.

ಶ್ರವಣಬೆಳಗೊಳದ ಸವತಿ ಗಂಧವಾರಣ ಬಸದಿಯಲ್ಲಿ ದೊರೆಯುವ ಕ್ರಿ.ಶ. ೧೧೧೨ ನೆಯ ವರ್ಷದ ಶಾಸನದಲ್ಲಿ ಶಾಂತಲ ದೇವಿಯ ಗುಣಗಳನ್ನು ನಿರೂಪಿಸುವಾಗ ಅವಳನ್ನು ನೃತ್ಯ, ಸಂಗೀತ ಮತ್ತು ವಾದ್ಯಗಳಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಪಡೆದಿದ್ದಳೆಂದು ವಿವರಿಸುತ್ತದೆ.

ಶ್ರವಣಬೆಳಗೊಳದಲ್ಲಿ ಕಂಡುಬರುವ ಇನ್ನೊಂದು ಶಾಸನ ಕತ್ತಲೆ ಬಸದಿಯ ಕಂಬದ ಮೇಲಿದೆ. ಇದು ನೃತ್ಯ, ಸಂಗೀತ ವಾದ್ಯ, ಸಂಗೀತ ಮುಂತಾದವುಗಳಲ್ಲಿ ಅಪ್ರತಿಮ ಸಾಧನೆಯನ್ನು ಪಡೆದಿದ್ದ ಜಯಚಂದ್ರನೆಂಬ ವ್ಯಕ್ತಿಯ ಬಗ್ಗೆ ತಿಳಿಸುತ್ತದೆ.[೪೮]

ನಾಗಮಂಗಲದ ಶಾಸನವು ವಿಷ್ಣುವರ್ಧನನನ್ನು ವರ್ಣಿಸುವಾಗ ಬೇಲೂರಿನ ಶಾಸನವನ್ನೆ ಹೋಲುತ್ತದೆ. ಇಲ್ಲಿಯೂ ಅವನನ್ನು ಸಕಲ ಕಲಾ ಪಾರಾಂಗತನೆಂದು ವರ್ಣಿಸಲಾಗಿದೆ. ಸೌಮ್ಯಕೇಶವ ದೇವಾಲಯದ ಭುವನೇಶ್ವರಿಯಲ್ಲಿರುವ ಈ ಶಾಸನ ಕ್ರಿ.ಶ. ೧೧೧೩ ನೆಯ ವರ್ಷಕ್ಕೆ ಸೇರಿದೆ. ವಿಷ್ಣುವರ್ಧನನ ಸಭೆಯು ವಿದ್ವಜ್ಜನರಿಂದ ಕೂಡಿದ್ದು ಪಾಂಡಿತ್ಯ ಚಟುವಟಿಕೆಯ ಕೇಂದ್ರದಂತಿತ್ತು. ರಾಜನೇ ಸ್ವತಃ ನೃತ್ಯ, ತರ್ಕ ಮತ್ತು ವಿದ್ಯಾಭ್ಯಾಸದಲ್ಲಿ ನಿಪುಣನಾಗಿದ್ದನು. ಅವನು ರಂಗ ಕಲೆಯಲ್ಲಿ ಭರತನೇ ಆಗಿದ್ದನು ಎಂದು ಈ ಶಾಸನವು ವಿಷ್ಣುವರ್ಧನನ ಕಲಾ ಪ್ರೌಢಿಮೆಯ ಕಡೆಗೆ ಗಮನ ಸೆಳೆಯುತ್ತದೆ.[೪೯]

ಅಂದು ಅರಸುಮನೆತನದವರಲ್ಲದೆ ಸಾಮಾನ್ಯ ವರ್ಗದ ನರ್ತಕಿಯರು ಇದ್ದು ಅವರು ದೇವಾಲಯಗಳಿಗೆ ದಾನ ದತ್ತಿ ನೀಡಿರುವ ಉದಾಹರಣೆಗಳಿವೆ. ಇದೇ ಹಳೇಬೀಡಿನ ಪ್ರಖ್ಯಾತ ಹೊಯ್ಸಳೇಶ್ವರ ದೇವಾಲಯದ ಪಶ್ಚಿಮ ಗೋಡೆಯ ಮೇಲಿರುವ ಶಾಸನವು ದೇವಾಲಯದ ನರ್ತಕಿಯರು ನೀಡಿದ ದಾನದತ್ತಿಯ ಬಗ್ಗೆ ಉಲ್ಲೇಖಿಸುತ್ತದೆ. ಈ ನರ್ತಕಿಯರ ಹೆಸರುಗಳನ್ನು ಊರಿನ ಇತರ ಮಹಾಜನರ ಹೆಸರಿನೊಂದಿಗೆ ಬರೆಯಲಾಗಿದೆ. ಪಾತ್ರದ ಮೂಲವ್ವೆಯು ಮೂರು ಸ್ವರ್ಣ ನಾಣ್ಯಗಳನ್ನು ಇತರ ದಾನಗಳನ್ನು ಪ್ರತಿವರ್ಷ ಕೊಡುತ್ತಿದ್ದಳು ಹಾಗೆಯೇ ಪಾತ್ರದ ಮಾಣಿರ್ಗ ಮಾದವ್ವೆಯು ಹೊಯ್ಸಳೇಶ್ವರನಿಗೆ ಆಭರಣಗಳನ್ನು ದಾನವಾಗಿ ನೀಡಿದಳೆಂಬ ಮಾಹಿತಿಯಿದೆ.[೫೦]

ನೃತ್ಯ ಮಾಡಲು ಕೇವಲ ದೇವಾಲಯಗಳನ್ನು ಅಷ್ಟೇ ಬಳಸುತ್ತಿರಲಿಲ್ಲ, ನಾಟ್ಯ ಮಂಟಪಗಳನ್ನು ಕಟ್ಟಿಸಿ ಅಲ್ಲಿ ನೃತ್ಯ ಸಂಗೀತ ಗೋಷ್ಠಿಗಳಿಗೆ ಅನುವು ಮಾಡಿಕೊಟ್ಟ ಶಾಸನಗಳ ಉಲ್ಲೇಖವಿದೆ. ಭಂಡಾರಿ ಬಸದಿಯ ಪೂರ್ವಭಾಗದ ಕಲ್ಲಿನ ಮೇಲಿರುವ ೧೧೫೦ನೆಯ ವರ್ಷದ ಶಾಸನದಲ್ಲಿ [೫೧] ನೃತ್ಯಕ್ಕೆ ಎರಡು ನಾಟ್ಯ ಮಂಟಪಗಳು ಜೈನ ಮುನಿಗಳಿಗೆ ತಂಗುದಾಣಗಳು ನಿರ್ಮಿತವಾಗಿದ್ದವು ಎಂದು ಉಲ್ಲೇಖಿಸುತ್ತದೆ.

ಶಾಸನದ ಪಾಠ ಗೊಮ್ಮಟಪುರ ಭೂಷಣವಿದು—ಜಿನೋತ್ತಮಾಳಯ ಮನಿದಂ! ವೃ

ಪರಿಸೂತ್ರ ನೃತ್ಯಗೇಹಂ ಪುವಿಪುಳ ವಿಳಸತ್ಪ—

ಈ ಶಾಸನದಿಂದ ತಿಳಿದು ಬರುವ ಮುಖ್ಯ ಮಾಹಿತಿಯೆಂದರೆ ಜೈನ ಬಸದಿಯನ್ನು ನಿರ್ಮಿಸುವಾಗಲೂ ನಾಟ್ಯಾ ಮಂಟಪಗಳಿಗೆ ವಿಶೇಷ ಗಮನ ಕೊಡಲಾಗುತ್ತಿತ್ತು ಎಂದು ಚೆನ್ನರಾಯ ಪಟ್ಟಣದ ಅತ್ತಿಹಳ್ಳಿಯ ಮಲ್ಲೇಶ್ವರ ದೇವಾಲಯದ ಆವರಣದಲ್ಲಿರುವ ಒಂದು ಕಲ್ಲಿನ ಮೇಲಿರುವ ಕ್ರಿ.ಶ. ೧೧೮೪ ನೆಯ ವರ್ಷದ ಶಾಸನವು ವೀರಬಲ್ಲಾಳನ ಪಟ್ಟಮಹಿಷಿಯಾದ ಬೊಮ್ಮಲದೇವಿಯನ್ನು ಶ್ಲಾಘಿಸುತ್ತದೆ. ಶಾಂತಲೆಯ ನಂತರ ಇವಳ ನೃತ್ಯ–ಸಂಗೀತದಲ್ಲಿ ಪ್ರಸಿದ್ಧಳಾಗಿದ್ದಳೆಂದು ತೋರುತ್ತದೆ. ಇವಳು ನೃತ್ಯ ಮತ್ತು ಸಂಗೀತ ವೃಂದಗಳನ್ನು ನಿಯೋಜಿಸುತ್ತಿದ್ದಳೆಂದು ಹೇಳುತ್ತದೆ.[೫೨]

ವೀರಭದ್ರ ದೇವಾಲಯ ಅಸಂದಿಯ ಕ್ರಿ.ಶ. ೧೨೦೫ರ ಶಾಸನವು ನರಸಿಂಹನ ಕಾಲದ್ದು ಈ ಶಾಸನವು ಮಹಾಮಂತ್ರಿಯ ಧಾರ್ಮಿಕ ಕಾರ್ಯಗಳ ಬಗ್ಗೆ ಗಮನಹರಿಸುತ್ತದೆ. ತಾಂಡಿಗೆರೆ ಗ್ರಾಮವನ್ನು ವಸಂತೋತ್ಸವಕ್ಕಾಗಿ ಗಾಯಕರು, ವಾದ್ಯದವರು ಮತ್ತು ನರ್ತಕಿಯರು ದೇವರಿಗೆ ನಡೆಯುವ ದಿನ ನಿತ್ಯ ಸೇವೆಗಾಗಿ ವಿನಿಯೋಗವಾಗುವಂತೆ ದಾನ ನೀಡಿದರೆಂದು ತಿಳಿಸುತ್ತದೆ.[೫೩] ಹೀಗೆ ಬಾದಾಮಿ ಚಾಲುಕ್ಯರಿಂದ ಹೊಯ್ಸಳರ ಕಾಲದವರೆಗೆ ಕ್ರೀಡೆ ಮತ್ತು ವಿನೋದಾವಳಿಗಳಿಗೆ ವಿಫುಲ ಅವಕಾಶಗಳಿದ್ದವು. ಅಲ್ಲದೆ ಅಂದು ಕೇವಲ ಅರಸರಷ್ಟೇ ಅಲ್ಲದೆ ಸಾಮಾನ್ಯ ಜನಗಳೂ ಕೂಡ ಹಬ್ಬ, ಜಾತ್ರೆ, ಉತ್ಸವ ಕಾರ್ಯಕ್ರಮಗಳಲ್ಲಿ ಸಂಗೀತ ಮತ್ತು ನೃತ್ಯಗಳಲ್ಲಿ ಭಾಗವಹಿಸಿ ದಾನ ಮಾಡುತ್ತಿದ್ದರು ಎಂಬುದು ಈ ಶಾಸನಗಳಿಂದ ವೇದ್ಯವಾಗುತ್ತದೆ. ಇದೇ ರೀತಿಯ ಬೆಳವಣಿಗೆಯು ವಿಜಯನಗರ ಕಾಲದಲ್ಲಿ ಮುಂದುವರಿದಿರುವುದನ್ನು ಕಾಣುತ್ತೇವೆ. ವಿನೋದಾವಳಿಯ ಪ್ರಮುಖ ಅಂಶಗಳಾದ ನೃತ್ಯ, ಸಂಗೀತ, ನಾಟ್ಯಾ, ನಾಟಕ, ವಾದ್ಯಗಳ ಕುರಿತು ಪ್ರಾಚೀನ ಕಾಲದಿಂದಲೂ ಇತ್ತು ಎಂಬುದು ಇದರಿಂದ ತಿಳಿಯುತ್ತದೆ.

ಕನ್ನಡ ನಾಡನ್ನು ಅನೇಕ ಪ್ರಖ್ಯಾತ ಅರಸೊತ್ತಿಗೆಗಳು ಆಳಿವೆ. ಅಂದಿನ ಅರಸರು ಯುದ್ಧ, ಶಾಸನ, ಸ್ಮಾರಕ, ದೇವಾಲಯ ನಿರ್ಮಾಣಗಳ ಜೊತೆಗೆ ತಮ್ಮ ಆಸ್ಥಾನಗಳಲ್ಲಿ ಕವಿಗಳಿಗೂ ಸ್ಥಾನ ಕಲ್ಪಿಸಿದ್ದರು. ಅಂದು ಅನೇಕ ಕನ್ನಡ ಕಾವ್ಯಗಳು ರಚಿತಗೊಂಡವು. ಅವುಗಳಲ್ಲಿ ಕ್ರೀಡೆ ಮತ್ತು ವಿನೋದಾವಳಿಯ ಅಂಶಗಳು ಪ್ರಸ್ತಾಪಗೊಂಡಿವೆ. ಮೇಲಿಂದ ಮೇಲೆ ಪ್ರಸ್ತಾಪಗೊಳ್ಳುವ ಕ್ರೀಡೆಗಳಲ್ಲಿ ಪಗಡೆ, ಚದುರಂಗ, ಕಂದುಕದಾಟ, ಗುಡುಗಿನಾಟ, ಗಜ್ಜುಗದಾಟ, ದೊಂಬರಾಟಗಳು ಪ್ರಮುಖವಾಗಿವೆ. ಪಗಡೆಯಾಟದ ಕುರಿತು ಆದಿ ಕವಿ ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಉಲ್ಲೇಖ ಮಾಡಿದ್ದಾನೆ.

ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾಡುತ್ತಿರೆ
ಲಂಬಣಂ ಪವ(ರೆ)ಯ ಮುತ್ತಿನ ಕೇಡನೆ ನೋಡಿ ಬಳ್ಳುತ್ತಿರೆ.[೫೪]

ಹಾಗೆ ಚದುರಂಗದಾಟದ ಹೆಸರಿನ ಉಲ್ಲೇಖದೊಂದಿಗೆ ಅದನ್ನು ಆಡಲು ಬಳಸುವ ಮಣಿಯ ಪ್ರಸ್ತಾಪವು ಇದೆ

ನೆಲನೊಡ್ಡನಿಂದ ಚತುರಂಗ ಮುಮಾರ್ಮದೆಲೆ ನಡುಗಿದುದು
ಕೂಡಿದ ಚದುರಂಗದ ವಣಿಯನಲ್ಲಿದು ತಪ್ಪನಗೆಂ.[೫೫]

ರನ್ನ ಕವಿಯ ಅಜಿತ ತೀರ್ಥಂಕರ ಪುರಾಣ ತಿಲಕಂ ಕಾವ್ಯದಲ್ಲೂ ನೆತ್ತ ಮತ್ತು ಚದುರಂಗದಾಟಗಳ ಉಲ್ಲೇಖಗಳಿವೆ.

ತ್ರಿದಶಕುಮಾರರ್ ನೆತ್ತದ
ಚದುರಂಗದ ಮುಟ್ಟನೆ ವ್ತೆಯಂ ಮರವಟ್ಟಂ
ಪದ ಪೊದೆವೆಸಗ್ಗದಿಂ ತಂ
–ದು ಕೆಲಗಲದೂಳಾಡುವರ ಜಿನಪತಿಯಂ[೫೬]

ಪಗಡೆಯಾಟವನ್ನು ಕನ್ನಡನಾಡಿನಲ್ಲಿಷ್ಟೇ ಅಲ್ಲ ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಮತ್ತು ಇತಿಹಾಸದ ಎಲ್ಲಾ ಕಾಲಗಳಲ್ಲಿ ಜನಪ್ರಿಯವಾಗಿತ್ತು ಎನ್ನುವುದಕ್ಕೆ ಸಾಕ್ಷ್ಯಾಧಾರಗಳು ದೊರೆತಿವೆ.

ಪ್ರಪಂಚದಲ್ಲಿಯೇ ಪ್ರಾಚೀನ ಲಿಖಿತವೆನಿಸಿಕೊಂಡಿರುವ ವೇದಗಳಲ್ಲಿ ಚತುಷ್ಷಷ್ಟಿ ಕಲೆಗಳನ್ನು ಹೇಳುವಾಗ ಪಗಡೆಯಾಟವನ್ನು ಸೇರಿಸಿ ಹೇಳಲಾಗಿದೆ.[೫೭] ಇದು ಪಗಡೆಯಾಟದ ಪ್ರಾಚೀನತೆಯನ್ನು ಸ್ಪಷ್ಟಪಡಿಸುತ್ತದೆ.

ಇನ್ನೂ ಅನೇಕ ಕ್ರೀಡೆಗಳ ಕುರಿತು ಮಾಹಿತಿಗಳಿವೆ.
ಆದಿ ಕವಿ ಪಂಪನು ಪಂಪ ಭಾರತದಲ್ಲಿ
ಒಡನಾಡಿಯು ಮೊಡನೋದಿಯು
ಮೊಡವಳೆದುಂ ಗುಳ್ಳಗೂಟ್ಟ, ಬಟ್ಟು ಸೆಂಡು !
ಪೊಡೆ ಸೆಂಡೆಂಬಿವನಾಡು
ತ್ತೊಡವಳೆದರ್ ತಮ್ಮೊಳೂಳಸೆ ತಂತಂಗೆಡೆಗಳ್.[೫೮]

ಪಂಪನ ಕಾಲದಲ್ಲಿ ಉಳಿಸೆಂಡು, ಬಟ್ಟು, ಪೊಡೆಸೆಂಡಿನಾಟಗಳು ಅತ್ಯಂತ ಜನಪ್ರಿಯವಾಗಿದ್ದವು ಎನ್ನಲು ಮೇಲಿನ ಕಂದ ಪದ್ಯವೇ ಸಾಕ್ಷಿ.

ಮರಕೋತಿಯಾಟವು ಇತ್ತು ಎನ್ನುವುದಕ್ಕೆ ಪಂಪ ಕವಿ 'ಮರಗೆರಸಿ' ಎಂದು ತನ್ನ ಕಾವ್ಯದಲ್ಲಿ ಪ್ರಸ್ತಾಪಿಸಿದ್ದಾನೆ.

ವ೧– ಅಂತಾ ಕೂಸುಗಳ್ ಕೂಸಾಟವಾಡುತ್ತಿರ್ದೊಂದು ದಿವಸಂ ಮರಗೆರಸಿಯಾಡಲೆಂದು ಮುಂದೆ ತಮ್ಮ ಪಗೆ ಪರ್ವುಂತೆ ಪನ್ನಿರ್ವರ್ಂತ್ತರ್ ಪರ್ವಿದಾಲದ ಮರದ ಮೊದಲಗ್ಗೆ ವೆಂದು ಭೀಮನಂ ಮರೆಮಾಡಿ ಕೋಲನೀಡಾಡಿ ಪಲವು ಸೊಮಿಕಾಡಿ ಇಲ್ಲಿ ಭೀಮನನ್ನು ಕಳ್ಳನನ್ನಾಗಿಸಿ ಮರಕೂತಿಯಾಡುವ ಸ್ವಾರಸ್ಯಪೂರ್ಣ ವರ್ಣನೆ ಇದೆ. ಇಂದು ಸಹ ಗ್ರಾಮೀಣ ಪ್ರದೇಶಗಳಲ್ಲಿ ಮರಕೊತಿಯಾಟವಿದೆ.

ಜನಸಾಮಾನ್ಯರ ಬದುಕು ಮತ್ತು ಜನತೆಯೊಡನೆ ನಿಕಟ ಸಂಪರ್ಕ ಹೊಂದಿದ್ದ ದಾಸರು ಕ್ರೀಡೆಗಳ ಪ್ರಸ್ತಾಪದಲ್ಲಿ ಮೈಲುಗೈ ಸಾಧಿಸಿದ್ದಾರೆ. ತಮ್ಮ ಸಾಹಿತ್ಯದಲ್ಲಿ ಕೆಲವು ಸಾಮಾನ್ಯ ಕ್ರೀಡೆಗಳ ನಿರೂಪಣೆಯಿದೆ. ಗಜ್ಜುಗ, ಗೋಲಿ, ಕವಡೆ, ಕಲ್ಲಾಟ ಇತ್ಯಾದಿ ಎಲ್ಲಾ ಕಾಲಕ್ಕೂ ಪ್ರಿಯವಾಗಿದ್ದವು ಎಂಬುದಕ್ಕೆ ಆ ಸಂಬಂಧವಾಗಿ ಎಲ್ಲಾ ಕೃತಿಗಳಲ್ಲೂ ಬಂದಿರುವ ಚಿತ್ರಗಳೇ ಆಧಾರ. ಜನಸಾಮಾನ್ಯರಲ್ಲಿ ಬಹು ಹಿಂದಿನಿಂದಲೇ ಗಜ್ಜುಗದಾಟ, ಗೆರೆದಾಟುವಾಟ ಜನಪ್ರಿಯವಾಗಿದ್ದವು ಎಂಬುದಕ್ಕೆ ದಾಸರು

ಪರಿಪರಿ ಗಜುಗದಾಟ ಮಕ್ಕಳ ಸಂಗಡ ಗೆರೆಯದಾಟುವ ಆಟ
ಗಜುಗವ ನಾಡುತಲಿರ್ದನು ನಮ್ಮ ರಂಗ ಎಂಬ ಕೀರ್ತನೆ ಇಲ್ಲಿ ಉಲ್ಲೇಖಾರ್ಹವಾದುದು.[೫೯]

ಪ್ರಸನ್ನ ವೆಂಕಟದಾಸರೂ ಸಾಮಾನ್ಯರ ಅನೇಕ ಕ್ರೀಡೆಗಳ ಪಟ್ಟಿಯನ್ನು ಕೊಟ್ಟಿದ್ದಾರೆ.
ಚಿಣ್ಣಿ ಪೊಂಬಗರ್ಚೆಂಡು ಗುಸುಗುಸುಕುದು ಹಬ್ಬೆ
ಅಣ್ಣಿಕಲ್ಲು, ಹಳ್ಳಿ, ಗಜಗ, ಘಲ್ಲೆ
ಕಣ್ಣು ಮುಚ್ಚಾಳೆ, ಮರನೇರಾಟ, ನೀರಾಟ
ಸಣ್ಣರೂಳಾಡಿ ಸೋಲಿಪೆನೆಂಬ ತವಕದಿ.[೬೦]

ಗ್ರಾಮೀಣ ಭಾಗದಲ್ಲಿ ಪ್ರಸ್ತುತ ಚಿಣ್ಣಿಕೋಲು, ಚೆಂಡು, ಅಣ್ಣೆಕಲ್ಲಾಟ, ಗಜಗ, ಕಣ್ಣುಮುಚ್ಚಾಲೆ, ಮರನೇರಾಟ, ನೀರಾಟ, ಇವೇ ಇತ್ಯಾದಿ ಕ್ರೀಡೆಗಳು ಚಾಲ್ತಿಯಲ್ಲಿವೆ.

ಪ್ರಾಚೀನ ಜನಪ್ರಿಯ ಕ್ರೀಡೆಗಳಲ್ಲಿ ಕಂದುಕ (ಚೆಂಡಾಟ)ವು ಒಂದು. ಇದರ ಕುರಿತು ಶಾಸನ, ಕಾವ್ಯಗಳಲ್ಲಿ ಸಾಕ್ಷ್ಯಾದಾಗಳು ದೊರೆಯುತ್ತವೆ. ಕಂದುಕದಾಟದ ಕ್ರಮ, ವ್ಯೂಹಗಳು, ಆಡುವ ವಿಧಾನ, ಜಾಗ, ಸಜ್ಜುಗೊಳ್ಳುವ ಬಗೆ, ಆಟಕ್ಕೆ ಮೊದಲು ನಡೆಸುವ ಆಚರಣೆ, ವರ್ಣನೆಗಳು ಲಭ್ಯವಾಗುತ್ತವೆ.

ಅನೇಕ ಶಾಸನಗಳಲ್ಲಿ ಕದುಂಕದಾಟದ ಪ್ರಸ್ತಾಪವಿದೆ. ಶ್ರವಣಬೆಳಗೊಳದ ಶಾಸನವೊಂದರಲ್ಲಿ ಶ್ರೀಗೆ ವಿಜಯಕ್ಕೆ ವಿದ್ದೆಗೆ ಜಾಗಕ್ಕೆದಟಂಗೆ ಜಸಕೆ ಪೆಂಪಿಂಗೆ ನಿತರ್ಕ್ಕಾಗರ ಮಿದೆನ್ದು ಕನ್ದುಕದಾಗಮದೊಳೆ ನೆಮ್ಗಿ ಮಲ್ತೆ ಬೀರರ ಬೀ.[೬೧]

ರಾಷ್ಟ್ರಕೂಟ ನಾಲ್ಕನೆಯ ಇಂದ್ರರಾಜನ ಗುಣಸ್ತವನ ಮಾಡುವಾಗ ಆತನ 'ಕಂದುಕಾಗಮ'ದ ಕೌಶಲವನ್ನು ವಿಸ್ತಾರವಾಗಿ ನಿರೂಪಿಸಿರುವುದು ಕುತೂಹಲಕಾರಿಯಾಗಿದೆ. ಬೇಲೂರಿನ ಶಾಸನದಲ್ಲಿ ರಿಪು ನೃಪತಿ ಶಿರಃ ಕಂದುಕ ಕ್ರೀಡಿತಂ ಎಂದಿದೆ.[೬೨]

ಚೆಂಡಾಟದಲ್ಲಿ ನಿಪುಣರಾದವರಿಗೆ ಬಿರುದುಗಳನ್ನು ನೀಡುವುದಿತ್ತು. ಹಾಗೆ ಬಿರುದು ನೀಡಿದ ಸಂದರ್ಭವೊಂದರಲ್ಲಿ ಬರೆಸಿದ ಒಂದು ಶಾಸನ ಹೀಗಿದೆ. ಭಟ್ಟ ಜನ ಬಾಂಧವ ಬೂಪ್ಪನಂಕಕಾರ ಕಂದುಕ ನೀಡಿ ರಣರಂಗ ಸಿಂಗ ವಡೆಯ ವೆಡುಂಗ.[೬೩]

ಹೀಗೆ ಚೆಂಡಾಟದಲ್ಲಿ ನಿಪುಣರಾದವರಿಗೆ ಬಿರುದುಗಳನ್ನು ನೀಡಿ ಅವರನ್ನು ಪ್ರೋತ್ಸಾಹಿಸುವುದು ಆಗಿನ ಪ್ರಭುತ್ವದ ನೀತಿ. ಕ್ರೀಡೆ ವಿನೋದಗಳನ್ನು ರಾಜ ಮನೆತನಗಳು ಎಷ್ಟು ಆದರದಿಂದ ಕಾಣುತ್ತಿದ್ದವು ಎಂಬುದು ಸ್ಪಷ್ಟವಾಗುತ್ತದೆ.

ಇಂಥವೇ ಮತ್ತೊಂದು ಸಂದರ್ಭವನ್ನು ನಿರೂಪಿಸುವ ಸೊರಬದ ಶಾಸನ ಕೆಳಗೆ ಕಾಣಿಸಿದಂತಿದೆ.

ಮಾಸಾಮಾನ್ತ ಚಲ್ಲ ಧ್ವಜರಣದುತ್ತರ ಜ್ಞಾನನ್ತು ಮೊಳಿದು
ಕನುಮಾಳನ ಧಳಕ್ಕೆ ದೊರೆಯ್ಗಂ ಮೈರಿ ಕಳಾನಳಂ
ಚೆಣ್ಣ ವೂರ್ತ್ತಣ್ಣಂ ಸರಯ್ಕ ಸೂದ್ರಕ ಶ್ರೀ.ಕ(ಲಿ) ಉಟ್ಟರಸರ್[೬೪]

ಜ್ಯೋತ್ಸ್ನಾ ಕಾಮತ್‌ರವರ ಪ್ರಕಾರ ಈ ಶಾಸನಗಳಲ್ಲಿ ಪ್ರಸ್ತಾಪಗೊಂಡಿರುವ ಕಂದುಕದಾಟ ಇಂದಿನ ಗಾಲ್ಫ್ ಆಟದ ಹಿಂದಿನ ರೂಪ ಇದರ ಆಟದ ಬಯಲು ವರ್ತುಲಾಕಾರದ್ದು ಆಟಗಾರರು ಕುದುರೆ ಸವಾರಿ ಮಾಡುತ್ತಾ ಉದ್ದ ಕೋಲಿ (ಬ್ಯಾಟ್)ನಿಂದ ಚೆಂಡನ್ನು ಬಲವಾಗಿ ಹೊಡೆದು ಮುಂದಿದ್ದ ಕುಳಿಗೆ ಸೇರಿಸಲು ಯತ್ನಿಸುತ್ತಿದ್ದರು. ಇದಕ್ಕಾಗಿ ಅವರು ವಿವಿಧ ಚಾರಣ (ಹೊಡೆತ)ಗಳನ್ನು ಬಳಸುತ್ತಿದ್ದರು. ವಿವಿಧ ದಿಕ್ಕುಗಳಲ್ಲಿ ಬಳಸುವ ಚಾರಣಗಳಿಗೆ ಸುಕರ, ದುಷ್ಕರ, ವಿಷಮ ಮತ್ತು ವಿಷಯ ದುಷ್ಕರಗಳೆಂಬ ಹೆಸರುಗಳಿದ್ದವು ಇವುಗಳಲ್ಲಿ ಸಿದ್ಧ ಹಸ್ತನಿಗೆ ಎರೆವ ಬೆಡಂಗ ಎಂದು ಕರೆಯಲಾಗುತ್ತಿತ್ತು. ಒಮ್ಮೆ ಆಟ ಆಡಲಾರಂಭಿಸಿದಾಗ ಚೆಂಡನ್ನು ಎಷ್ಟು ಸುತ್ತು ಮೈದಾನದಲ್ಲಿ ತಿರುವುತ್ತಾರೂ ಅದರ ಆದಾರದ ಮೇಲೆ ವಿಜಯವನ್ನು ನಿರ್ಧರಿಸಲಾಗುತ್ತಿತ್ತು. ರಾಷ್ಟ್ರಕೂಟರ ರಾಜನು ಒಂದೇ ಆಟದಲ್ಲಿ ಹತ್ತು ತಿರುವು ಹಾರಿಸುತ್ತಿದ್ದನಂತೆ.[೬೫]

ಸೋಮೇಶ್ವರನ ಮಾನಸೋಲ್ಲಾಸದ ಕಾವ್ಯದ ೨೬೧ನೆಯ ಪದ್ಯದಲ್ಲಿ ಆಟದ ವಿವರ, ವಿಜಯ ಶಾಲಿಗಳನ್ನು ಘೋಷಿಸುವ ಬಗೆ ಇದೆ.[೬೬] ಕನ್ನಡ ಮತ್ತೊಬ್ಬ ಜನಪ್ರಿಯ ಕವಿ

ರತ್ನಕರವರ್ಣಿ ತನ್ನ ಕಾವ್ಯದ ನವರಾತ್ರಿ ಸಂದಿಯಲ್ಲಿ ಕ್ರೀಡೆಗಳ ಒಂದು ವಿಸ್ಮಯ ಪ್ರಪಂಚವನ್ನು ತಂದು ನಿಲ್ಲಿಸುತ್ತಾನೆ. ಬೊಂಬೆಯಾಟ, ದೊಂಬರಾಟ, ಮಲ್ಲಯುದ್ಧ, ಬಾಣಬಿರುಸು ಮುಂತಾದವುಗಳನ್ನು ಸಮಕಾಲೀನ ದಾಖಲೆಗಳಿಗೆ ಸರಿಮಿಗಿಲಾಗಿ ನಿರೂಪಿಸಿರುವುದು ಅವನ ವೈಶಿಷ್ಟ್ಯ.

ಪ್ರಾಚೀನ ಕಾಲದಲ್ಲಿ ಮನರಂಜನೆ ಪಡೆಯಲು ನೃತ್ಯ, ಸಂಗೀತದಂತಹ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು ಎಂದು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಉಲ್ಲೇಖ ದೊರೆಯುತ್ತವೆ. ವನವಿಹಾರ, ಜಲಕ್ರೀಡೆ, ಉದ್ಯಾನ, ನಗರ ವರ್ಣನೆ, ಯುದ್ಧ, ಸಂಗೀತ, ನೃತ್ಯ ಇತ್ಯಾದಿ ಹದಿನೆಂಟು ಬಗೆಯ ಅಷ್ಟಾದಶ ವರ್ಣನೆಗಳು ಕಾವ್ಯದ ಪ್ರಮುಖ ಲಕ್ಷಣಗಳು ಸಾವಿರ ವರ್ಷಕ್ಕೂ ಹೆಚ್ಚಿನ ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ನಮ್ಮ ಕವಿಗಳು ವಿನೋದಾವಳಿ ಪ್ರಸಂಗಗಳ ವರ್ಣನೆಗಳಿಂದ ಶ್ರೀಮಂತಗೊಳಿಸಿದ್ದಾರೆ.

ಕರ್ನಾಟಕದ ಪ್ರಮುಖ ರಾಜವಂಶಗಳಾದ ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ ಅರಸರುಗಳು ವಿನೋದಾವಳಿಯನ್ನು ಬೌದ್ಧಿಕ, ಅಧ್ಯಾತ್ಮಿಕ, ಚಟುವಟಿಕೆಗಳಾಗಿ ಪರಿಭಾವಿಸಿದ್ದಾರೆ. ಇವರು ತಮ್ಮ ಆಳ್ವಿಕೆಯಲ್ಲಿ ಬೃಹತ್ ದೇವಾಲಯಗಳನ್ನು ನಿರ್ಮಿಸಿ ಅಲ್ಲಿ ಶಾಶ್ವತವಾಗಿ ವಿನೋದಾವಳಿ ಅಂಶಗಳು ವಿಜೃಂಭಿಸುವಂತೆ ಶಿಲ್ಪಗಳಲ್ಲಿ ಕಡೆಸಿದ್ದಾರೆ. ಅಲ್ಲದೆ ಪ್ರತಿಭಾವಂತ ಕವಿಗಳಿಗೆ ಆಶ್ರಯವನ್ನಿತ್ತು ಆಯಾ ಕಾಲದ ನೃತ್ಯ, ಸಂಗೀತ ಹಬ್ಬ, ಉತ್ಸವಗಳು ಪ್ರತಿಬಿಂಬವಾಗುವಂತಹ ಕಾವ್ಯಗಳ ರಚನೆಗೆ ಕಾರಣ ಶೀಲರಾಗಿದ್ದಾರೆ. ಪಂಪ, ಪೊನ್ನ, ನೇಮಿಚಂದ್ರ, ನಾಗಚಂದ್ರ, ಜನ್ನ, ಅಗ್ನಿದೇವ, ಬಾಹುಬಲಿ, ರತ್ನಾಕರವರ್ಣಿ, ಚಾಮರಸ, ಚಂದ್ರಶೇಖರ, ಕನಕದಾಸ, ಗೊವಿಂದ ವೈದ್ಯ ಮೊದಲಾದ ಕವಿಗಳು ತಮ್ಮ ಕಾವ್ಯಗಳಲ್ಲಿ ನೃತ್ಯ, ನರ್ತನ, ಸಂಗೀತ, ಹಬ್ಬ, ಉತ್ಸವಗಳ ಸುಂದರ ನಿರೂಪಣೆ ಮಾಡಿದ್ದಾರೆ.

ಕನ್ನಡ ಕಾವ್ಯಗಳಲ್ಲಿ ಸಾಮಾನ್ಯವಾಗಿ ಮಂಗಳಕರ ಸನ್ನಿವೇಶಗಳಾದ ಪುತ್ರಜನನ, ವಿವಾಹ, ಸ್ವಯಂವರ, ದೇವಪೂಜಾ ವಿಧಾನ, ದಿಗ್ವಿಜಯ, ಜಾತ್ರೆ, ಉತ್ಸವ, ಹಬ್ಬ ಹರಿದಿನಗಳಂತಹ ಸಂದರ್ಭದಲ್ಲಿ ನೃತ್ಯ, ನಾಟಕ, ಸಂಗೀತಗಳು ವರ್ಣಿತವಾಗಿವೆ.

ವಿವಾಹ, ಪುತ್ರಜನನ, ನಾಮಕರಣದಂತಹ ಶುಭ ಸಮಾರಂಭಗಳಲ್ಲಿ ನೃತ್ಯವನ್ನು ಆಚರಿಸಬೇಕೆಂದು ಭರತನ ಆದೇಶವು ಹೌದು.[೬] ದಕ್ಷಿಣ ಭಾರತದ ದೇವಾಲಯಗಳಲ್ಲಿ ಸಂಗೀತ, ನೃತ್ಯ, ಸೇವೆಗಳು ರಂಗಭೋಗವೆಂದು ಗುರುತಿಸಿ ಗರ್ಭಗುಡಿಯ ಪ್ರಧಾನ ದೇವತೆಯ ಎದುರೆ ನಡೆಯುತ್ತಿತ್ತು. ಇದೊಂದು ಪೂಜಾ ವಿಧಾನವು ಆಗಿತ್ತು ಇದು ದೇವರಿಗೆ ಸಲ್ಲಿಸುವ ಉಪಚಾರಗಳಲ್ಲಿ ಸೇರಿತ್ತು.

ಕನ್ನಡದ ಆದಿಕವಿ ಪಂಪನ ಹೊತ್ತಿಗಾಗಲೆ ಕನ್ನಡ ನಾಡಿನಲ್ಲಿ ನೃತ್ಯ, ಸಂಗೀತವು ಒಂದು ಶಿಷ್ಟ ಕಲೆಯಾಗಿ ನಾಡಿನ ಸಂಸ್ಕೃತಿಯ ದ್ಯೋತಕವಾಗಿ ಸಮಾಜದಲ್ಲಿ ಉನ್ನತ

ಸ್ಥಾನ ಪಡೆದಿತ್ತು. ಅದಕ್ಕೆ ಪುರಾವೆಗಳಿವೆ. ಶುಭ ಸಮಾಚಾರಗಳನ್ನು ನೃತ್ಯ, ಸಂಗೀತ ಕಾರ್ಯಕ್ರಮಗಳ ಮೂಲಕ ಆಚರಿಸುತ್ತಿದ್ದರು ಎನ್ನುವುದಕ್ಕೆ ಪಂಪನು ಇಂದ್ರನ ನೃತ್ಯವನ್ನು ವರ್ಣಿಸುವಾಗ ಒಂದು ಕಾರ್ಯಕ್ರಮದ ಪರಿಕರವನ್ನು ದೃಶ್ಯ ಮಾನವನ್ನಾಗಿಸುತ್ತವೆ.

ಧರೆರಂಗಂ ಗಗನಂ ಮನೋಹರ ನಾಟ್ಯಾಲಯಂ, ನರ್ತಕಂ, ಸುರರಾಜಂ
ಸಭೆ ದೇವ – ಮತ್ಯಥಸಭೆ, ಸಂದರಾಧ್ಯ ನೀಶಂಜಂತದ್ ಗುರು
ತನ್ನೃತ್ಯಫಲಂ ತ್ರಿವರ್ಗವಿಭವಂ ತಾನೆಂದೊಡೇ ಮಾತೋಸಾ
ಸಿರಮುಂ ನಾಲಗೆಯುಳ್ಳ ವಾಸುಗಿಯುಂ ಮಿನ್ನೇನೆಂದದಂ ಬಣ್ಣಿಸು.[೮]

ಮತ್ತೊಬ್ಬ ಕವಿ ಪೊನ್ನ ತನ್ನ ಕಾವ್ಯ ಶಾಂತಿ ಪುರಾಣದಲ್ಲಿ ವೈವಿಧ್ಯಮಯ ನೃತ್ಯದ ಹಲವು ಪ್ರಸಂಗಗಳನ್ನು ಹೃದಯಂಗಮವಾಗಿ ಚಿತ್ರಿಸಿದ್ದಾನೆ.

ನಿಲೆ ಸೂಚಿಯ ಲರೆಸಳ್ಕೊರ
ಗಲೀಯ ದೆಭಿ ನಯದ ಕರಣದ ಭ್ರಮರಿಯ ನಿ
–ಶ್ಚಲತೆಯ ಲಘತೆ ಮಾರ್ದವ ವಿಲಾಸ ವರ್ತನದಿನ ಮರಿಯರ ನರ್ತಿಸಿದರ್ ![೯]

ಕ್ರೀಡೆ ಮತ್ತು ವಿನೋದಾವಳಿಯ ಉಲ್ಲೇಖಗಳು ಕನ್ನಡ ಕಾವ್ಯಗಳಲ್ಲಿ ಸಾಕಷ್ಟು ಬಂದಿವೆ. ಆದರೆ ಇವು ಹೆಚ್ಚಾಗಿ ನಡುಗನ್ನಡ ಸಾಹಿತ್ಯದಲ್ಲಿ ಪ್ರಸ್ತಾಪಗೊಂಡಿವೆ. ಸಾಮ್ರಾಜ್ಯದಲ್ಲಿ, ಅರಮನೆಗಳಲ್ಲಿ ಪುತ್ರೋತ್ಸವ, ನಾಮಕರಣ, ವಿವಾಹ, ಪಟ್ಟಾಭಿಷೇಕ, ಹಬ್ಬಹರಿದಿನಗಳು, ಗಣ್ಯವ್ಯಕ್ತಿಗಳ ಆಗಮನ, ಯುದ್ಧದಲ್ಲಿ ಜಯ, ಜಾತ್ರೆ, ಉತ್ಸವ, ಇತ್ಯಾದಿಗಳು ಜರುಗಿದ ಸಂದರ್ಭದಲ್ಲಿ ಮಲ್ಲಯುದ್ಧ, ಕತ್ತಿವರಸೆ, ದೊಂಬರಾಟದಂತಹ ಕ್ರೀಡಾ ಪ್ರದರ್ಶನಗಳು ನೃತ್ಯ, ಸಂಗೀತ, ನಾಟಕದಂತಹ ವಿನೋದಾವಳಿಯ ಪ್ರಸಂಗಗಳು ಏರ್ಪಾಡಾಗುತ್ತಿದ್ದುದು ಸಾಮಾನ್ಯ. ಈ ರೀತಿಯ ಪ್ರದರ್ಶನಗಳು ದಿಢೀರನೆ ಹುಟ್ಟಿಕೊಂಡವುಗಳಲ್ಲ. ನಮಗೆ ಪ್ರಾಗ್ಯೆತಿಹಾಸಿಕ ಕಾಲದಿಂದಲೂ ಕ್ರೀಡೆ ಮತ್ತು ವಿನೋದಾವಳಿಗಳಿಂದ ಅಂಶಗಳು ದೊರಕುತ್ತವೆ. ಆದರೆ ಅಂದು ಅವು ಒಂದು ವ್ಯವಸ್ಥಿತ ರೀತಿಯಲ್ಲಿ ಇರಲಿಲ್ಲ ದಿನದಿಂದ ದಿನಕ್ಕೆ ಮಾನವ ಬದುಕು ಬದಲಾದಂತೆ ಕ್ರೀಡೆ ಮತ್ತು ವಿನೋದಾವಳಿಗಳ ಸ್ವರೂಪವು ಬದಲಾಯಿತು. ಇತಿಹಾಸದ ಕಾಲಕ್ಕಾಗಲೇ ಒಂದು ಸ್ಪಷ್ಟ ರೂಪವನ್ನು ಪಡೆದುಕೊಂಡಿತ್ತು. ಹೀಗೆ ಕ್ರೀಡೆ ಮತ್ತು ವಿನೋದಾವಳಿಯ ಚಾರಿತ್ರಿಕವಾಗಿ ಬೆಳೆದು ಬಂದುದನ್ನು ಕಾಣಬಹುದು.

ಟಿಪ್ಪಣಿ

೧. ಜವಾಹರ್‌ಲಾಲ್ ಹುಂಡೂ, ಕರಂಟ್ ಟ್ರಂಡ್ಸ ಇನ್ ಫೋಕ್ಲೊರ್, ಇನ್ಸ್‌ಟಿಟ್ಯೂಟ್ ಆಪ್ ಕನ್ನಡ ಸ್ಟಡೀಸ್, ಪು–೧೧.
೨. ದೇಜಗೌ, ಜಾನಪದ ಮಹಾಸಂಪುಟ, ಪು–೪೧೪.
೩. ನಿರಂಜನ ,(ಸಂ) ಕ್ರೀಡೆ ಮತ್ತು ಮನೋಲ್ಲಾಸ, ಪು–೨.
೪. ವಿವೇಕ್ ರೈ ಬಿ.ವಿ., (ಸಂ) ಜನಪದ ಆಟಗಳು, ಪು–೪.
೫. ನಿರಂಜನ, ಪೂರ್ವೋಕ್ತ, ಪು–೬.
೬. ಬಾಶಮ್ ಎ.ಎಲ್., (ಇಂಗ್ಲೀಷ್ ಮೂಲ) ಮಿರ್ಜಿ ಡಿ.ಆರ್., (ಕನ್ನಡಕ್ಕೆ) ಪ್ರಾಚೀನ ಭಾರತವೆಂಬ ಅದ್ಭುತ, ಪು–೩೦೨.

೭. ಅದೇ, ಪು–೨೯೪.
೮. ಅಕ್ಷರ ಕೆ.ವಿ. ರಂಗ ಪ್ರಪಂಚ, ಪು–೨೦.
೯. ಮೆರ್‍ಗಾನ್ ಕಿನಿತ್, ಅಂಡ್ ಮಿಲ್‌ನಿಜ್ ವಿಲಿಯಂ, ದ ಲಿವಿಂಗ್ ಸ್ಟೇಜ್,ಪು–೬.
೧೦. ವೆಂಕಟರಾವ್ ಎನ್.ಎಸ್., ರಂಗಭೂಮಿ, ಪು–೧೧.
೧೧. ಅದೇ, ಪು–೧೨.
೧೨. ಬಾಶಮ್ ಎ.ಎಲ್., ಪೂರ್ವೋಕ್ತ, ಪು–೫೩೯.
೧೩. ಅಂಬಳಿಕೆ ಹಿರಿಯಣ್ಣ, ಜಾನಪದ ಕೆಲವು ಅಧ್ಯಯನಗಳು, ಪು–೪೮.
೧೪. ನಿರಂಜನ, ಪೂರ್ವೋಕ್ತ, ಪು–೮.
೧೫. ಕೃಷ್ಣಶಾಸ್ತ್ರೀ ಎ.ಆರ್., ಅವರ ವಚನ ಭಾರತದಿಂದ, ಪು– ೧೨.
೧೬. ಕೃಷ್ಣಸ್ವಾಮಿ ಎಂ.ಎ., ಅವರ ಋಗ್ವೇದದಿಂದ ಉದ್ಧೃತ, ಪು–
೧೭. ಚೂಡಾಮಣಿ ನಂದಗೋಪಾಲ್, ಶಿಲೆಕಲೆ, ಪು–೧೫೩.
೧೮. ಸ್ವಾಮಿಪ್ರಜಾನಂದ, ಎ ಹಿಸ್ಟಾರಿಲ್ ಸ್ಟಡಿ ಆಫ್ ಇಂಡಿಯನ್ ಮ್ಯೂಸಿಕ್, ಪು–೩.
೧೯. ಬಾಗಿ ಎಂ.ಎಲ್., ಏನ್ಸಿಯಂಟ್ ಇಂಡಿಯನ್ ಕಲ್ಚರ್ ಅಂಡ್ ಥಾಟ್, ಪು–೫೪.
೨೦ ಚೂಡಾಮಣಿ ನಂದಗೋಪಾಲ್, ಪೂರ್ವೋಕ್ತ, ಪು–೧೫೭.
೨೧. ಹರಿದಾಸ ಭಟ್ಟಾಚಾರ್ಯ(ಸಂ), ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂ–೪, ಪು–೩೬೯.
೨೩. ಕರ್ನಾಟಕ ಥ್ರೂ ದ ಏಜಸ್, ಪು–೧೬೭.
೨೪. ಎ.ಕ. ಸಂ–೪, ಯಳಂದೂರು–೧೬೭, ಕ್ರಿ.ಶ. ೫೫೦., ಇ.ದ.ಸಂ.೨೧, ಪು–೧೨೩.
೨೫. ಕರುಣಾ ವಿಜಯೇಂದ್ರ, ಶಾಸನಗಳ ಬಿರುದಾವಳಿಗಳಲ್ಲಿ ನೃತ್ಯದ ಉಲ್ಲೇಖಗಳು, ಇ.ದ. ಸಂ–೨೧, ಪು–೧೨೨.
೨೬. ಚೂಡಾಮಣಿ ನಂದಗೋಪಾಲ್., ಡ್ಯಾನ್ಸ್ ಅಂಡ್ ಮ್ಯೂಸಿಕ್ ಇಸ್ ಟೆಂಪಲ್ ಆರ್ಕಿಟಿಕ್ಚರ್, ಪು–೪೯.
೨೭. ಎ.ಕ. ಸಂ–೪, ಚಾಮರಾಜನಗರ–೩೫೪, ಕ್ರಿ.ಶ. ೯೦೬.
೨೮. ಇಂ.ಆಂ., ಸಂ–೧೦, ಪು–೧೬೭.
೨೯. ಚೂಡಾಮಣಿ ನಂದಗೋಪಾಲ್, ಪೂರ್ವೋಕ್ತ, ಪು–೮೦.
೩೦. ಇಂ.ಆಂ., ಪೂರ್ವೋಕ್ತ, ಪು–೧೬೪.
೩೧. ಇಂ.ಆಂ., ಸಂ–೧೫, ಪು–೧೭೦.
೩೨. ಕರ್ನಾಟಕ ಥ್ರೂ ದ ಬಾದಾಮಿ ಚಾಲುಕ್ಯಸ್,
೩೩. ಸ್ವಾಮಿನಾಥನ್ ಎಸ್.ಎನ್., ತಮಿಳುನಾಡಿನಲ್ಲಿಯ ರಾಷ್ಟ್ರಕೂಟರ ಶಾಸನಗಳು, ಪು–೧೫೦.
೩೪. ಎ.ಆರ್. ೧೯೯ ಆಫ್ ೧೯೫೬, ಸಂಖ್ಯೆ–೧೩.
೩೫. ಎಸ್.ಐ.ಐ., ೯ ಭಾಗ–೧, ಸಂಖ್ಯೆ–೮೦, ಪು–೫೦–೫೧.
೩೬. ಅದೇ, ಸಂಖ್ಯೆ–೧೦೧, ಪು–೭೦–೭೧.
೩೭. ಅದೇ, ಸಂಖ್ಯೆ–೧೩೩, ಪು–೨೯–೩೧.
೩೮. ಅದೇ, ಸಂಖ್ಯೆ–೩೩, ಪು–೧೧೫–೧೧೬.
೩೯. ಎ.ಕ., ಸಂ–೭, ಸಂಖ್ಯೆ–೧೯, ಪು–೧೬೬–೧೬೭.
೪೦. ಎಸ್.ಐ.ಐ., ಸಂ–೯, ಭಾಗ–೧, ಸಂಖ್ಯೆ–೧೭೨.
೪೧. ಎಸ್.ಐ.ಐ., ಸಂ–೯, ಭಾಗ–೨, ಸಂಖ್ಯೆ–೨೮, ಪು–೨೪.
೪೨. ಚೂಡಾಮಣಿ ನಂದಗೋಪಾಲ್, ಪೂರ್ವೋಕ್ತ, ಪು–೪೨.

೪೩. ಇಂ.ಆಂ., ಸಂ–೧೩, ಸಂಖ್ಯೆ–೨೦.
೪೪. ಗೋಪಾಲರಾವ್ ಎಚ್.ಎಸ್., ಕಲಾಣ್ಯ ಚಾಲುಕ್ಯರ ಕಾಲದ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು–೨೫೨.
೪೫. ಅದೇ. ಪು–೨೪೩.
೪೬. ಎ.ಕ., ಸಂ–೬, ಶ್ರೀರಂಗಪಟ್ಟಣ, ಸಂಖ್ಯೆ–೧.
೪೭. ಎ.ಕ., ಸಂ–೫, ಹಾಸನ(ತಾ), ಶ್ರವಣಬೆಳಗೊಳ, ಸಂಖ್ಯೆ–೬೯.
೪೮. ಅದೇ, ಸಂಖ್ಯೆ–೬೯.
೪೯. ಎ.ಕ., ಸಂ–೭, ನಾಗಮಂಗಲ, ಸಂಖ್ಯೆ–೩, ಕ್ರಿ.ಶ. ೧೧೩೫.
೫೦. ಎ.ಕ. ಸಂ–೫, ಸಂಖ್ಯೆ–೧೦೪–೧೦೬.
೫೧. ಎ.ಕ. ಸಂ–೨, ಸಂಖ್ಯೆ–೪೭೬, ಪು–೩೦೧.
೫೨. ಎ.ಕ. ಸಂ–೫, ಚನ್ನರಾಯಪಟ್ಟಣ, ಸಂಖ್ಯೆ–೨೫೪.
೫೩. ಎ.ಕ. ಸಂ–೬, ಕಡೂರು, ಸಂಖ್ಯೆ–೧೪೯, ಕ್ರಿ.ಶ. ೧೨೦೫.
೫೪. ಪಂ.ಭಾ. ಆಶ್ವಾಸ–೯, ಪದ್ಯ–೬೯.
೫೫. ಅದೇ, ಆಶ್ವಾಸ–೧೧, ಪದ್ಯ–೭೦.
೫೬. ಅಜಿತ, ೫–೮೦.
೫೭. ಸುಶೀಲೆ ಹೊನ್ನೇಗೌಡ., (ಸಂ) ಜನಪದ ಆಟಗಳು, ಪು–೧೦.
೫೮. ಪಂ.ಭಾ, ಆಶ್ವಾಸ–೨, ಪದ್ಯ–೩೦.
೫೯. ಪುರಂದರ ಸಾಹಿತ್ಯ ದರ್ಶನ, ಭಾಗ–೧, ಪು–೯೧.
೬೦. ನಾಗರತ್ನ ಟಿ.ಎನ್., (ಸಂ) ಶ್ರೀ ಪ್ರಸನ್ನ ವೆಂಕಟದಾಸರ ಕೃತಿಗಳು, ಪು–೧೪.
೬೧. ಎ.ಕ. ಸಂ–೨, ಸಂಖ್ಯೆ–೧೬೩/೧೩೩, ೧೯೭೩, ಪು–೧೦೮.
೬೨. ಎ.ಕ. ಸಂ–೫, ಬೇಲೂರು, ಸಂಖ್ಯೆ–೧೨೪, ಕ್ರಿ.ಶ.೧೧೩೩.
೬೩. ಎಸ್.ಐ.ಐ. ಸಂ–೪–೧, ಸಂಖ್ಯೆ–೩೪೩, ಕ್ರಿ.ಶ. ೧೨೨೬.
೬೪. ಎ.ಕ. ಸಂ–೮, ಸೊರಬ, ಸಂಖ್ಯೆ–೮೮, ಪು–೧೯೨.
೬೫. ಜ್ಯೊತ್ಸ್ನಾ ಕಾಮತ್., ಕರ್ನಾಟಕ ಶಿಕ್ಷಣ ಪರಂಪರೆ, ಪು–೭೭.
೬೬. ಶ್ರೀಗೊಂಡೇಕರ್ ಜಿ.ಕೆ.,(ಸಂ), ಮಾನಸೋಲ್ಲಾಸ ಆಫ್ ಕಿಂಗ್ ಸೋಮೇಶ್ವರ, ಸಂ–೨, ಪು–೩೪–೩೫.
೬೭. ತುಳಸಿ ರಾಮಚಂದ್ರ, ಕನ್ನಡ ಕಾವ್ಯಗಳಲ್ಲಿ ನೃತ್ಯ, ಪು–೧೪೪.
೬೮. ಆದಿಪುರಾಣ, ೭–೧೨೮.
೬೯. ಶಾಂತಿನಾಥ ಪುರಾಣ, ೭–೩೪

ಅಧ್ಯಾಯ ಮೂರು

ಕ್ರೀಡೆಗಳು

ಅಧ್ಯಾಯ ಮೂರು

ಕ್ರೀಡೆಗಳು

ಕ್ರೀಡೆ ಮನುಷ್ಯನ ಆಸಕ್ತಿಯ ವಿಷಯಗಳಲ್ಲಿ ಒಂದಾಗಿದೆ. ಇದು ಅವನ ಹುಟ್ಟಿನಿಂದಲೇ ಪ್ರಾರಂಭವಾದದ್ದಾಗಿದೆ. ಇವನ ಕೆಲವು ಚಟುವಟಿಕೆಗಳು ಕ್ರೀಡೆಗಳ ಹುಟ್ಟಿಗೆ ಕಾರಣವಾಗಿವೆ. ನಿತ್ಯದ ಬೇಟೆಗಾಗಿ ಕೈಗೊಳ್ಳುತ್ತಿದ್ದ ಓಟ, ನೆಗೆತ, ಜಿಗಿತಗಳು ಬಿಡುವಿನ ಸಮಯದಲ್ಲಿ ವಿನೋದದ ಅನುಕರಣಗಳಾಗಿ ಕ್ರಮೇಣ ಕ್ರೀಡೆಗಳ ರೂಪ ತಾಳಿವೆ. ಕಾಲಾನುಕ್ರಮದಲ್ಲಿ ಇವು ನಿರ್ದಿಷ್ಟ ಸ್ವರೂಪಕ್ಕೆ ಬರುತ್ತಾ ನಿಯಮಾವಳಿ, ಸ್ಪರ್ಧೆ, ಪಂದ್ಯಗಳು ಅಸ್ತಿತ್ವಕ್ಕೆ ಬಂದಿವೆ. ಕ್ರೀಡೆಗಳು ಮಾನವನ ಶಕ್ತಿ ಸಾಮರ್ಥ್ಯಗಳ ದ್ಯೋತಕ ಆಗಿರುವಂತೆ ಅವನ ಆರೋಗ್ಯ ಅಭಿರುಚಿಗಳ ದ್ಯೋತಕವೂ ಆಗಿವೆ. ಪ್ರಾಚೀನ ಕಾಲದಿಂದಲೂ ಆಳರಸರಿಂದ ಹಿಡಿದು ಜನಸಾಮಾನ್ಯರವರೆಗೆ ವಿವಿಧ ಕ್ರೀಡೆಗಳಲ್ಲಿ ಆಸಕ್ತಿಯನ್ನು ಹುಟ್ಟಿಸಿ ಅದನ್ನು ಬೆಳೆಸುತ್ತಾ ಬಂದಿದ್ದಾರೆ. ಪುರಾತನ ಗ್ರೀಸ್, ರೋಮ್, ಚೀನಾ ಈಜಿಪ್ಟ್ ದೇಶಗಳಂತೆಯೇ ನಮ್ಮ ದೇಶವೂ ಅನೇಕ ಕ್ರೀಡೆಗಳ ತವರಾಗಿದೆ. ದಕ್ಷಿಣ ಭಾರತವನ್ನು ಅನೇಕ ಅರಸೊತ್ತಿಗೆಗಳು ಆಳ್ವಿಕೆ ಮಾಡಿವೆ. ಅಂತಹ ಸಾಮ್ರಾಜ್ಯಗಳಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಇವರು ಕೇವಲ ಸಾಮ್ರಾಜ್ಯದ ವಿಸ್ತರಣೆ ಹಾಗೂ ಸ್ಮಾರಕಗಳ ನಿರ್ಮಾಣಗಳಿಗೆ ಗಮನ ಕೊಡದೆ ವಿರಾಮದ ವೇಳೆಯಲ್ಲಿ ಅರಸರಾದಿಯಾಗಿ ಮಾಂಡಲಿಕರು, ಸ್ತ್ರೀ-ಪುರಷ ಮಕ್ಕಳೊಡಗೂಡಿ ಕ್ರೀಡೆ ಮತ್ತು ವಿನೋದಾವಳಿಗಳಲ್ಲಿ ಕಾಲ ಕಳೆಯುತ್ತಿದ್ದರು.

ಕನ್ನಡ ನಾಡನ್ನು ಅನೇಕ ಅರಸು ಮನೆತನಗಳು ಆಳಿವೆ. ಕಲೆಯ ವಿಕಾಸಕ್ಕೆ ದೊರೆತ ಕೆಲವು ಆಳ್ವಿಕೆಗಳಲ್ಲಿ ಸಹಜವಾಗಿಯೇ ಕ್ರೀಡಾ ಚಟುವಟಿಕೆಗಳಿದ್ದವು. ದಕ್ಷಿಣ ಭಾರತವನ್ನಾಳಿದ ಅರಸು ಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯವೂ ಒಂದು. ಆ ಕಾಲದ ಸಾಹಿತ್ಯ, ಶಾಸನ, ಪುರಾತತ್ವೀಯ ಆಕರ, ವಿದೇಶಿ ಪ್ರವಾಸಿಗರ ವರದಿ, ಶಿಲ್ಪಗಳ ಕುರುಹುಗಳಿಂದ ಅಂದಿನ ಕ್ರೀಡೆಯ ಬಗೆಗೆ ಮಾಹಿತಿ ದೊರೆಯುತ್ತದೆ. ಆ ಕ್ರೀಡೆಯ ಪ್ರಾಚೀನತೆ ಹೇಳುವುದರೊಂದಿಗೆ ಅವುಗಳ ಮಹತ್ವದ ಬಗೆಗೆ ಚಾರಿತ್ರಿಕವಾಗಿ ದಾಖಲಿಸಬಹುದು. ವಿಜಯನಗರ ಕಾಲದ

ಕ್ರೀಡೆಗಳನ್ನು ಅಧ್ಯಯನದ ದೃಷ್ಟಿಯಿಂದ ಮೂರು ವರ್ಗಗಳಾಗಿ ವಿಂಗಡಿಸಿ ಅಧ್ಯಯನಕ್ಕೊಳಪಡಿಸಲಾಗಿದೆ.

ಸಾಮಾನ್ಯವಾಗಿ ಇದುವರೆಗೂ ನಡೆದಿರುವ ಕ್ರೀಡೆಗಳ ಅಧ್ಯಯನಗಳಲ್ಲಿ ಹೊರಾಂಗಣ ಮತ್ತು ಒಳಾಂಗಣ ಕ್ರೀಡೆಗಳು, ಸ್ತ್ರೀಯರಾಡುವ, ಪುರುಷ-ಮಕ್ಕಳಾಡುವ ಕ್ರೀಡೆಗಳೆಂದು ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ. ವಿಜಯನಗರ ಕಾಲದಲ್ಲಿ ಈ ಎಲ್ಲಾ ವರ್ಗದ ಕ್ರೀಡೆಗಳಿದ್ದಾಗ್ಯೂ ಒಂದು ಸಾಮ್ರಾಜ್ಯ ಆಳ್ವಿಕೆಯ ವಿಸ್ತರಣೆಯ ದೃಷ್ಟಿಯಿಂದ ಕ್ರೀಡೆಗಳನ್ನು ಕೇವಲ ಮನರಂಜನೆಗಾಗಿ ಆಡುತ್ತಿರಲಿಲ್ಲ. ದೈಹಿಕವಾಗಿ, ಮಾನಸಿಕವಾಗಿ ಸದೃಢವಾಗುವ ದೃಷಿಯಿಂದ ಅಂದಿನ ಕ್ರೀಡೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರು. ಅದರಲ್ಲಿ ಬೌದ್ಧಿಕತೆಗೆ ಪ್ರಾಮುಖ್ಯತೆ ಕೊಟ್ಟಂತೆ, ಪ್ರಜೆಗಳಾದಿಯಾಗಿ ಅರಸರು ಮನರಂಜನಾತ್ಮಕ ಮತು ದೈಹಿಕ ಕಸರತ್ತಿಗೂ ಪ್ರಾಧಾನ್ಯತೆ ನೀಡಿದ್ದರು ಎಂಬುದಕ್ಕೆ ಅಂದಿನ ಕ್ರೀಡೆಗಳೇ ದಾಖಲೆಯಾಗಿ ನಿಂತಿವೆ. ಅಂದಿನ ಸಾಹಿತ್ಯ ಕೃತಿ, ವಿದೇಶಿ ಪ್ರವಾಸಿಗರ ಬರಹ, ಶಾಸನ, ಶಿಲ್ಪಗಳು ಇತ್ಯಾದಿ ದಾಖಲಿಸಿವೆ. ಪ್ರಮುಖವಾಗಿ ವಿಜಯನಗರ ಸಾಮ್ರಾಜ್ಯದ ಕ್ರೀಡೆಗಳನ್ನು ದೈಹಿಕ, ಬೌದ್ಧಿಕ ಕಸರತ್ತಿನ, ಮನರಂಜನಾತ್ಮಕ ಕ್ರೀಡೆಗಳು ಎಂದು ವಿಭಾಗಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೩.೧. ದೈಹಿಕ ಕ್ರೀಡೆಗಳು

ಕ್ರೀಡೆಗಳನ್ನು ಆಡದೇ ಇರುವ ಸಂಸ್ಕೃತಿಗಳು ಇದ್ದಿರಬಹುದು. ಆದರೆ ಬಹು ಮಟ್ಟಿನ ಸಂಸ್ಕೃತಿಗಳಲ್ಲಿ ಕ್ರೀಡೆಗಳು ಅವರ ಜೀವನ ವಿಧಾನವನ್ನು ತಿಳಿಯಲು ಸಹಾಯಕವಾಗಿವೆ. ಸರಿಯಾದ ವಿನೋದಾವಳಿ ಅಥವಾ ಹೊತ್ತು ಕಳೆಯುವ ಸಾಧನವೆಂದರೆ ಕ್ರೀಡೆಗಳು. ಬೇಟೆ, ಚೆಂಡಾಟ, ಚಿನ್ನಿಕೋಲು, ಪಗಡೆಯಾಟ, ಬುಗುರಿ, ಗೋರಿ, ಗಂಬದ ಗಡನೆ, ಕುಸ್ತಿ, ಓಟ, ಇತ್ಯಾದಿಗಳು, ಮಾನವ ಏನು ಮಾಡುತ್ತಾನೋ ಅವುಗಳನ್ನು ಹುಸಿ ಆಟವನ್ನಾಗಿ ಆಡುವುದುಂಟು. ಆಟ ಕೇವಲ ಕ್ರೀಡೆ ಅಥವಾ ವಿನೋದದ ಸಾಧನವಲ್ಲ, ಅದು ಸಾಮಾಜಿಕ ಚಟುವಟಿಕೆ. ಕ್ರೀಡೆಯನ್ನು ಒಬ್ಬನೇ ಆಡಬಹುದು ಅಥವಾ ಸಾಮೂಹಿಕವಾಗಿ ಆಡಬಹುದು. ಅದರಲ್ಲಿ ಸ್ಪರ್ಧೆ ಪೈಪೋಟಿ ಇರುತ್ತದೆ. ಸೋಲು ಗೆಲುವು ಇದ್ದುದೇ. ಕ್ರೀಡಾ ನಿಯಮಗಳು ದೇಶ, ಕಾಲ, ಸ್ಥಳಗಳಿಗೆ ಅನುಗುಣವಾಗಿ ವ್ಯತ್ಯಾಸಗಳಿರುತ್ತವೆ.

ಜನರು ತಮ್ಮ ದಿನನಿತ್ಯದ ಹೊಟ್ಟೆಪಾಡಿಗಾಗಿ ಅಷ್ಟೇನು ಕಷ್ಟ ಪಡಬೇಕಾಗಿರದಿದ್ದ ಆ ಕಾಲದಲ್ಲಿ ಅವರಿಗೆ ಸಾಕಷ್ಟು ವಿರಾಮ ಸಮಯವಿರುತ್ತಿದ್ದು, ಅದನ್ನು ಅವರು ತಮ್ಮ ದೇಹ ಸದೃಢತೆಗೆ ಮತ್ತು ವಿನೋದಾವಳಿಗಳಿಗೆ ವಿನಿಯೋಗಿಸಿಕೊಳ್ಳುತ್ತಿದ್ದರು. ದೈಹಿಕ ವ್ಯಾಯಾಮದ ಮಹತ್ವವನ್ನು ಶಾಸ್ತ್ರಗಳು ಮತ್ತು ಅನೇಕ ವಿದ್ವಾಂಸರು ಗುರುತಿಸಿದ್ದಾರೆ. ಸೋಮದೇವ ಸೂರಿ ಹೇಳುವಂತೆ ಪಾತ್ರೆಯನ್ನು ಸರಿಯಾಗಿ ಮುಚ್ಚಿಡದಿದ್ದರೆ ಮತ್ತು ಕೈ ಆಡಿಸದಿದ್ದರೆ ಅಡುಗೆ ಹೇಗೆ ಚೆನ್ನಾಗಿ ಬೇಯುವುದಿಲ್ಲವೂ ಹಾಗೆಯೇ ಸರಿಯಾದ ನಿದ್ರೆ ಮತ್ತು ವ್ಯಾಯಾಮಗಳನ್ನು ಮಾಡದಿದ್ದರೆ ಮನುಷ್ಯ ತಿಂದ ಆಹಾರ ಜೀರ್ಣವಾಗುವುದಿಲ್ಲ. ಮನುಷ್ಯನು ಪ್ರಾಣಿವರ್ಗಗಳಲ್ಲಿ ಶ್ರೇಷ್ಠನೆನಿಸಿಕೊಂಡಿದ್ದು ಅವನ ಭಾವನೆಗಳು ಬುದ್ಧಿ ಬಲದಿಂದ. ಆಟ, ಕಸರತ್ತು, ಕ್ರೀಡೆಗಳು

ಶಕ್ತಿ ಕೇಂದ್ರಗಳಾಗಿ ಬೆಳೆದು ಬಂದವು. ಇವು ದೇಹ ಮತ್ತು ಮನಸ್ಸಿನ ಆತ್ಮ ಬಲದೊಂದಿಗೆ ಜನ್ಮ ತಾಳುತ್ತವೆ. ಈತನ ಇತರ ಚಟುವಟಿಕೆಗಳು ದೈಹಿಕ ಕುರುಹುಗಳಂತೆ ಕಂಡುಬಂದಿರುವುದರಿಂದ ಅವುಗಳನ್ನೇ ಆದಿ ಮಾನವನ ಕ್ರೀಡಾ ಕುರುಹುಗಳೆಂದು ಪರಿಭಾವಿಸಬಹುದು.

ಆದಿ ಮಾನವ ತನ್ನ ಭಾವನೆಗಳನ್ನು ಹರ್ಷ, ಉಲ್ಲಾಸ, ಕಲ್ಪನೆ, ಕನಸುಗಳನ್ನು ಹೊರಹಾಕಲು ದೈಹಿಕ ಚಟುವಟಿಕೆಗಳನ್ನು ಪ್ರಾರಂಭಿಸಿದ. ಅವುಗಳನ್ನು ಸಿದ್ಧಪಡಿಸಲು ಹಾಗೂ ನೆನಪಿಡಲು, ಮಾನವ ಶಕ್ತಿ ಜಾಗೃತಗೊಳ್ಳಲು ದೇಹದೊಂದಿಗೆ ಅವನ ಬುದ್ಧಿ ಭಾವನೆಗಳ ಸಂಗಮದಿಂದ ಮಾರ್ಪಟ್ಟು ಪ್ರಕಟಗೊಂಡಿದ್ದು ಕ್ರೀಡಾ ಸಂಸ್ಕೃತಿ. ಆದಿ ಮಾನವ ವನ್ಯ ಮೃಗೋಪಾದಿಯಲ್ಲಿ ಕಾಡಿನ ನಡುವೆ ಜೀವಿಸುತ್ತಿದ್ದಾಗ ತನ್ನ ರಕ್ಷಣೆಗೆ ಕ್ರೂರ ಪ್ರಾಣಿಗಳ ಭಯದಿಂದ ತನ್ನ ದೇಹ ಶಕ್ತಿಯನ್ನು ವೃದ್ಧಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಹಾಗೆ ಪ್ರಕೃತಿ ವಿಕೋಪ ಕೃತ್ಯಗಳು ಸಂಭವಿಸಿದಾಗ ಮಳೆ, ಗಾಳಿ, ಬಿಸಿಲು ಇವುಗಳ ಕಾಟದಿಂದ ರಕ್ಷಿಸಲು ತನ್ನ ದೇಹವನ್ನು ದಂಡಿಸಿ ವಿಕೋಪಕ್ಕೆ ಎದುರಾಗಿ ನಿಲ್ಲುವುದು ಅನಿವಾರ್ಯವಾಗಿತ್ತು. ಹಾಗೆ ಕಾಡು ಪ್ರಾಣಿಗಳಾದ ಹುಲಿ, ಸಿಂಹ, ಆನೆ, ಕರಡಿ, ಮೊಸಳೆ, ಹಾವು ಇತ್ಯಾದಿ ಕ್ರೂರ ಪ್ರಾಣಿಗಳಿಂದ ರಕ್ಷಣೆ ಪಡೆಯಲು ಕಲಿಯುತ್ತಾ ಬಂದನು. ಹೀಗೆ ದೇಹ ಮತ್ತು ಬುದ್ಧಿ ಮನಸ್ಸುಗಳ ಸಂಗಮದಿಂದ ಉಂಟಾದ ಶಕ್ತಿ ವೃದ್ಧಿ ಭಾವನೆ ಬೆಳೆದದ್ದು ಅಜ್ಞಾನದಿಂದಲ್ಲ ಕೃತಜ್ಞಾತಾ ಭಾವದಿಂದ. ಹೀಗೆ ದೈಹಿಕ ಕಸರತ್ತಿನ ಕ್ರೀಡೆಗಳಿಗೆ ಇದೇ ಮೂಲವಾಗಿ ಇಂದಿಗೂ ಉಳಿದು ಬೆಳೆದುಕೊಂಡು ಬಂದಿವೆ, ದೇಹದಂಡನೆ ಹೆಚ್ಚು ಕಂಡುಬರುವ ಕ್ರೀಡೆಗಳಿಗೆ ದೈಹಿಕ ಕಸರತ್ತಿನ ಕ್ರೀಡೆಗಳೆನ್ನಬಹುದು. ಇಲ್ಲಿ ಮುಖ್ಯವಾಗಿ ಶಕ್ತಿಗೆ ಹೆಚ್ಚು ಪ್ರಾಧಾನ್ಯತೆಯಿರುತ್ತದೆ. ಬೌದ್ಧಿಕತೆ ಇದ್ದರೂ ದೇಹ ಸದೃಢವಾಗಿರದಿದ್ದರೆ ಗೆಲವು ಸಾಧ್ಯವಿಲ್ಲ. ಹಾಗಾಗಿ ಇಲ್ಲಿ ಕೆಲವು ಕ್ರೀಡೆಗಳನ್ನು ದೈಹಿಕ ಕಸರತ್ತಿನ ಕ್ರೀಡೆಗಳೆಂದು ವಿಭಾಗಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ವಿಜಯನಗರ ಕಾಲದಲ್ಲಿ ಈ ರೀತಿಯ ಕ್ರೀಡೆಗಳಿದ್ದವು ಎಂಬುದಕ್ಕೆ ಸಾಹಿತ್ಯಕೃತಿ, ವಿದೇಶಿ ಪ್ರವಾಸಿಗರ ಬರಹಗಳು ಸಾಕ್ಷ್ಯಗಳಾಗಿವೆ.

ಚೆಂಡಾಟ

ಚೆಂಡು ಮಾನವ ಕಂಡುಕೊಂಡ ಅತ್ಯಂತ ಹಳೆಯ ಆಟದ ಸಾಧನಗಳಲ್ಲಿ ಒಂದು. ರಾಮಾಯಣ ಮಹಾಭಾರತಗಳಲ್ಲಿ ಕಾಳಿದಾಸಾದ ಕವಿಗಳ ಕೃತಿಗಳಲ್ಲಿ ಇದರ ಉಲ್ಲೇಖವಿದೆ. ಇದನ್ನು ಕಂದುಕ ಕ್ರೀಡೆ ಎನ್ನುವರು. ಈ ಕ್ರೀಡೆಯ ಪ್ರಾಚೀನತೆ ರಾಮಾಯಣಕ್ಕೂ ಮೊದಲಿನ ಕಾಲಕ್ಕೆ ಹೋಗುತ್ತದೆ. 'ಕಂದುಕ ಕೇಳಿ' ಕಂದುಕ ಕ್ರೀಡೆ ಪ್ರಸ್ತಾವಗಳು ಒಂಬತ್ತನೆಯ ಶತಮಾನಕ್ಕೂ ಹಿಂದೆಯೇ ಕನ್ನಡ ನಾಡಿನಲ್ಲಿ ಪ್ರಚಲಿತದಲ್ಲಿತ್ತು ಎಂಬುದನ್ನು ಡೋಳಾ ಕೇಳಿಯ ಕಂದುಕ ಕೇಳಿಯ... ಬಿನದದೊಳ ಸತಿಯನವರೊಸೆಯಿಸಿದರ್[೧] ಅರಮರಸು ಕೃತಾಕಾದ್ರಿಯಾಳರಮರ ಮನೆಯೋಳಗೆ ಕಂದುಕ ಕ್ರೀಡೆಗಳೋಳಿ...ನಿಲ್ವಂ[೨] ಕಂದುಕ ಕ್ರೀಡಾದಿ ನಾನಾ ವಿಧ ವಿನೋದಂಗಳಿಂ ಕೆಲವು ದಿವಸ ಮನಿರ್ದು[೩] ಕನಕ್ಕಳ ಶನಿಕರೆಮಮ್ ಕೈಯ್ಗೆಯ್ಯಾಳ್ ತಂದೀವ ಕೊಳ್ವ

ಸಂಭ್ರಮದಂದಂ ಪೋಲ್ತತ್ತು. ಕಂದುಕ ಕ್ರೀಡಿತಂ[೪] ಹೀಗೆ ಚೆಂಡಾಟವು ವಿಜಯನಗರ ಪೂರ್ವದಲ್ಲಿಯೇ ಇತ್ತು ಎಂದು ಈ ಕಾವ್ಯಗಳ ಮೂಲಕ ತಿಳಿಯುತ್ತದೆ. ಹಾಗೆ ಶಾಸನಗಳಲ್ಲಿ ಚೆಂಡಾಟದ ಉಲ್ಲೇಖ ಗಮನಿಸಬಹುದು. ಆಟದ ವಿವರ ಕ್ರಮ, ವ್ಯೋಹಗಳು, ಆಡುವ ವಿಧಾನ, ಜಾಗ, ಸಜ್ಜುಗೊಳ್ಳುವ ಬಗೆ, ಅದಕ್ಕೆ ಮೊದಲು ಆಟದ ಅಂಗವಾಗಿ ನಡೆಸುವ ವಿಧಿ ಆಚರಣೆಗಳ ಸವಿಸ್ತಾರ ವರ್ಣನೆಗಳು ಲಭ್ಯವಾಗುತ್ತವೆ. ಶ್ರವಣಬೆಳಗೊಳದ ಶಾಸನವೊಂದರಲ್ಲಿ ಈ ಆಟದ ಪ್ರಸ್ತಾಪ ಹೀಗೆ ಬರುತ್ತದೆ. ಶ್ರೀಗೆ ವಿಜಯಕ್ಕೆ ವಿದ್ದೆಗೆ ಜಾಗಕ್ಕೆದಟಿಂಗೆ ಜಸಕೆ ಪೆಂಪಿಂಗಿನಿತಕ್ಕಾಗರವಿಂದ್ದೆನು ಕನ್ದುಕಾದಗಮದೊಳೆ ನೆಗೆಮ್ಗಿತ್ತಿ ಬೀರರ ಬೀ.[೫]

ಈ ಶಾಸನದಲ್ಲಿ ರಾಷ್ಟ್ರಕೂಟರ ನಾಲ್ಕನೆಯ ಇಂದ್ರರಾಜನ ಗುಣಸ್ತಾವನೆ ಮಾಡುವಾಗ ಆತನ ಕಂದುಕಾಗಮದ ಕೌಶಲವನ್ನು ವಿಸ್ತಾರವಾಗಿ ನಿರೂಪಿಸಿರುವುದು ಕೂತೂಹಲಕರ ಸಂಗತಿ ಇಲ್ಲಿ ಎರೆವ ಬೆಡಂಗನಾದ ಇಂದ್ರರಾಜನು ಮಂಡಳ, ತ್ರಿಮಂಡಳ, ಯಾವಕ ಮಂಡಳ, ಅರ್ಧ ಚಂದ್ರಗಳೆಂಬ ಚಮತ್ಕಾರಗಳನ್ನು ಮಾತ್ರವೇ ಅಲ್ಲದೆ 'ಆರ್ಗ ಬಗೆವೂಡರಿದಪ್ಪ ಸರ್ವತೋಭದ್ರ' ಉದ್ದಕವಿ, ಚಕ್ರವ್ಯೂಹ ಸಾಮರ್ಥ್ಯವನ್ನು ಹೊಗಳಿಸತಕ್ಕ ಇನ್ನೂ ಎಷ್ಟೋ ದುಷ್ಕರದೆವಿಪೇಗಳನ್ನು ಬಲ್ಲವನಾಗಿದ್ದನೆಂದು ಇಂದ್ರ ರಾಜನನ್ನು ಸ್ತುತಿಸಲಾಗಿದೆ[೬]. ಸರ್ವತೋಭದ್ರ ಮೂಲತಃ ಚಿತ್ರಕಾವ್ಯ ಗತಿ ಚಿತ್ರದ ಒಂದು ಪ್ರಭೇದವೇ ಇಲ್ಲಿ ಆಗತಿ ಚಿತ್ರದ ನಡೆಯನ್ನು ಆ ಕರ್ಣಾಟಕದ ಚಕ್ರವರ್ತಿ ಆ ಕಾಲದ ಅದೊಂದು ರೀತಿಯ ಚೆಂಡಿನಾಟದ ಕೌಶಲದಲ್ಲಿ ತೋರಿಸುತ್ತಿದ್ದುದು ಮೇಲಿನ ಪದ್ಯದಿಂದ ತಿಳಿಯುತ್ತದೆ. ಅದರ ಸ್ವರೂಪವನ್ನು ಆ ಗತಿ ಚಿತ್ರದ ಉದ್ಧಾರ ಕ್ರಮವನ್ನು ಹಿಡಿದು ನಾವು ದೃಶ್ಯಗೊಳಿಸಿಕೊಳ್ಳುವುದು ಸಾಧ್ಯವಿದೆ. ಡಾ. ಜ್ಯೋತ್ಸ್ನಾ ಕಾಮತ್ ಪ್ರಕಾರ ಈ ಶಾಸನದಲ್ಲಿ ಪ್ರಸ್ತಾಪಗೊಂಡಿರುವ ಕಂದುಕದಾಟ ಇಂದಿನ ಗಾಲ್ಫ್ ಆಟದ ಹಿಂದಿನ ರೂಪ. ಇದರ ಆಟದ ಬಯಲು ವರ್ತುಲಾಕಾರದ್ದು. ಆಟಗಾರರು ಕುದುರೆ ಸವಾರಿ ಮಾಡುತ್ತಾ ಉದ್ದ ಕೋಲಿ (ಬ್ಯಾಟ್)ನಿಂದ ಚೆಂಡನ್ನು ಬಲವಾಗಿ ಹೊಡೆದು ಮುಂದಿದ್ದ ಕುಳಿಗೆ ಸೇರಿಸಲು ಯತ್ನಿಸುತ್ತಿದ್ದರು. ಇದಕ್ಕಾಗಿ ಅವರು ವಿವಿಧ ಚಾರಣ (ಹೊಡೆತ)ಗಳನ್ನು ಬಳಸುತ್ತಿದ್ದರು. ವಿವಿಧ ದಿಕ್ಕುಗಳಲ್ಲಿ ಬಳಸುವ ಚಾರಣಗಳಿಗೆ ಸುಕರ, ದುಷ್ಕರ, ವಿಷಮ ಮತ್ತು ವಿಷಮ–ದುಷ್ಕರಗಳೆಂಬ ಹೆಸರುಗಳಿದ್ದವು. ಇವುಗಳಲ್ಲಿ ಸಿದ್ಧ ಹಸ್ತನಿಗೆ ಎರೆವ ಬೆಡಂಗ ಎಂದು ಒಮ್ಮೆ ಆಡಲಾರಂಭಿಸಿದಾಗ ಚೆಂಡನ್ನು ಎಷ್ಟು ಸುತ್ತು ಮೈದಾನದಲ್ಲಿ ತಿರುವುತ್ತಾರೊ ಅದರ ಆಧಾರದ ಮೇಲೆ ವಿಜಯವನ್ನು ನಿರ್ಧರಿಸಲಾಗುತ್ತಿತ್ತು. ರಾಷ್ಟ್ರಕೂಟರ ಇಂದ್ರ ರಾಜನು ಒಂದೇ ಆಟದಲ್ಲಿ ಎಂಟು, ಹತ್ತು ತಿರುವು ಹಾರಿಸುತ್ತಿದ್ದನಂತೆ.[೭] ಕಂದುಕದಾಟದ ಮತ್ತೊಂದು ಸಾಮಾನ್ಯ ಬಗೆ ಪೋಲೋ, ಸೋಮೇಶ್ವರನ ಮನಸೋಲ್ಲಾಸ ಕಾವ್ಯದ ೨೬೧ನೆಯ ಪದ್ಯದಲ್ಲಿ ಅದರ ವಿವರವಿದೆ. ಆ ವಿವರಗಳನ್ನು ಡಾ. ಜ್ಯೋತ್ಸ್ನಾ ಕಾಮತ್ ಹೀಗೆ ದಾಖಲಿಸಿದ್ದಾರೆ. ನಾನೂರು ಅಡಿಯ ಚಚೌಕಾಕಾರದ ಮೈದಾನಕ್ಕೆ ಎರಡು ಪ್ರವೇಶ ದ್ವಾರಗಳನ್ನು ನಿಲ್ಲಿಸಿ ಬೇಲಿ ಹಾಕುತ್ತಿದ್ದರು. ಪ್ರೇಕ್ಷಕರಿಗೆ ಕೊಂಚ ದೊರದಲ್ಲಿ ಪ್ರತ್ಯೇಕ ಸ್ಥಳವಿರುತ್ತಿತ್ತು. ಪರಿಭದ್ರಕ ಕಟ್ಟಿಗೆಯಿಂದ ತಯಾರಿಸಿದ ಚೆಂಡು ಮತ್ತು ಗೆದ್ದಿಕಾ (ಉದ್ದನೆಯ ಬ್ಯಾಟ್) ಬಹುದೂರದಿಂದ ಕಾಣುವಂತೆ ಕೆಂಪು ಚರ್ಮದ ಹೊದಿಕೆ ಪಡೆದಿರುತ್ತಿದ್ದವು.

ಆಟಗಾರರು ಕುದುರೆಗಳ ಓಟಕ್ಕೆ ಗಾಳಿಯಿಂದ ಅಡೆ-ತಡೆ ಆಗದಂತೆ, ಮೈಗಂಟುವ, ಕೋಟು ಮತ್ತು ಸೊಂಟಪಟ್ಟಿ ಧರಿಸುತ್ತಿದ್ದರು ಎರಡೂ ಪಕ್ಷಗಳಲ್ಲಿ ಎಂಟೆಂಟು ಆಟಗಾರರಿದ್ದು ಕೈಯಲ್ಲಿ ಗೆದ್ದಿಕಾ ಹಿಡಿದು ಕುದುರೆಯನ್ನು ನಾಗಲೋಟದಿಂದ ಓಡಿಸುತ್ತಾ ನೆಲದ ಮೇಲಿದ್ದ ಚೆಂಡನ್ನು ತಮ್ಮ ವಶಕ್ಕೆ ಪಡೆದು ಗೋಲು ಹೊಡೆಯಲು ಯತ್ನಿಸುತ್ತಿದ್ದರು. ಇದರಿಂದ ಚೆಂಡು ಎರಡೂ ಗೋಲುಗಂಬಗಳ ನಡುವೆ ಓಡಾಡುವಂತೆ ಆಗುತ್ತಿತ್ತು. ನಿರ್ದಿಷ್ಟ ಅವಧಿಯಲ್ಲಿ ಹೆಚ್ಚಿನ ಗೋಲು ಹೊಡೆದವರು ವಿಜಯಿಗಳೆಂದು ಘೋಷಿಸಲಾಗುತ್ತಿತ್ತು[೮]. ಅದೇ ರೀತಿ ರಿಪೂ ನೃಪತಿ ಶಿರಃ ಕಂದುಕ ಕ್ರೀಡಿತರ್ಂ ಚೆಂಡಾಟದಲ್ಲಿ ನಿಪುಣರಾದವರಿಗೆ ಬಿರುದನ್ನು ನೀಡಲಾಗುತ್ತಿತ್ತು. ಬಿರುದು ನೀಡಿದ ಸಂದರ್ಭದಲ್ಲಿ ಬರೆಸಿದ ಒಂದು ಶಾಸನ ಹೀಗಿದೆ. 'ಭಟ್ಟಜನ ಬಾಂಧವ ಬೊಪ್ಪನಂ ಕಾಕರ ಕಂದುಕ ನೀ ರಣರಂಗ ಸಿಂಗ ವೆಡೆಯವೆಡಂಗ'[೧೦] ನಿರೂಪಿಸುವ ಇಂಥದ್ದೆ ಮತ್ತೊಂದು ಸಂದರ್ಭ ನಿರೂಪಿಸುವ ಸೊರಬದ ಶಾಸನ

ಮಾಸಾಮಾನ್ತ ಚಲ್ಲದ್ವಜರಣದುತ್ತರಜ್ಞನನ್ತು ಮೊಳಿದಂ
ಕನ್ದುಕಮಾಳದ ಧಳಕೆ ದೊರೆಯ್ಗಂ ವೈರಿ ಕಾಳನಳಂ
ಚಣ್ಣ ಮೊತ್ತಣ್ಣಂ ಸರಯಕಾ ಸೂದ್ರಕ ಶ್ರೀಕೇ(ಲಿ) ವಿಟ್ಟರಸರ್[೧೧]

ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಪೊಡೆಸೆಂಡು, ಉಳಿಸೆಂಡು, ಉಲ್ಲೇಖಗಳಿವೆ. ಅಂದರೆ ಚೆಂಡಾಟದಲ್ಲಿ ನಾನಾ ಬಗೆಗಳಿರುವುದನ್ನು ಇವು ದೃಢೀಕರಿಸುತ್ತವೆ. ಚೆಂಡನ್ನು ಬಚ್ಚಿಟ್ಟು ಆಡುವ ಆಟವೇ ಉಳಿಸೆಂಡು. ಈ ಆಟದ ಮೊದಲ ಪ್ರಸ್ತಾಪ ಶಿವಕೊಟ್ಯಾಚಾರ್ಯನ ವಡ್ಡಾರಾಧನೆಯಲ್ಲಿ ಬಂದಿದೆ. ನಂದನ ವನದೊಳಿರ್ವರು ಮುಳಿಸೆಂ(ಡನಾ)ಡುತ್ತ (ರ) ಲೋಕ (ನ) ವಿದ್ಯೆಯ ನೀತ ಕಲ್ತನಪ್ಪುದರೆಂದಲ್ಲಿಯುಳಿದೊಡಂ[೧೨]. ಇಲ್ಲಿ ಉಳಿಸೆಂಡನ್ನು ಇಬ್ಬರೂ ಕೂಡಿ ಆಡುವ ಸಂಗತಿ ಮಾತ್ರ ಇದೆ. ಬಾಕಿ ವಿವರವಿಲ್ಲ.

ಅಂದಿನ ಕವಿಗಳು ಸಾಮಾನ್ಯವಾಗಿ ಬಾಲ ಲೀಲಿಗಳನ್ನು ವರ್ಣಿಸುವಾಗ ಜನಪ್ರಿಯ ಆಟಗಳನ್ನು ವರ್ಣಿಸುವುದು ರೂಢಿ. ಆದಿ ಕವಿ ಪಂಪನು ಆ ಮೇಲ್ಪಂಕ್ತಿಯನ್ನು ಅನುಸರಿಸಿದ್ದಾನೆ.

ಒಡನಾಡಿಯು ಮೊಡನೋದಿಯು
ಮೊಡವಳೆದುಂ ಗುಳ್ಳಗೊಟ್ಟು ಬಟ್ಟುಳಿಸೆಂಡು
ಪೊಡೆಸೆಂಡೆಂಬವ ನಾಡು
ತ್ತುಡವಳೆದರ್ ತಮ್ಮೋಳೆಳಸ ತಂತುಗಡೆಗಳ[೧೩]
ಅಂಗ ಜಾತನ ಕಂತುಕಂಗಳ...[೧೪]

ಪಂಪನ ಕಾಲದಲ್ಲಿ ಉಳಿಸೆಂಡು ಬಟ್ಟು, ಪೊಡೆಸೆಂಡಿನಾಟಗಳು ಅತ್ಯಂತ ಜನಪ್ರಿಯವಾಗಿದ್ದುದಕ್ಕೆ ಈ ಮೇಲಿನ ಪದ್ಯವೇ ಸಾಕ್ಷಿ.

ವಿಜಯನಗರ ಕಾಲದಲ್ಲಿ ಅನೇಕ ಬಗೆಯ ಚೆಂಡಾಟಗಳಿದ್ದವು. ನಂಜುಂಡ ಕವಿಯು ಶೂಲದ ಹಬ್ಬದ ಸಂದರ್ಭದಲ್ಲಿ ಕುಮಾರ ರಾಮನು ಅವನ ಸಂಗಡಿಗರು ಆಡಿದ ಚೆಂಡಾಟ ವರ್ಣಿಸಲು ಚೆಂಡಾಟ ಎಂಬ ಒಂದು ಇಡೀ ಪ್ರಕರಣ ಮಿಸಲಾಗಿರಿಸಿದ್ದಾನೆ. ಈ ಪ್ರಕರಣದಲ್ಲಿ ಚೆಂಡಾಟದ ವಿಧಗಳು, ಆಟದ ವಿವರ ಇತ್ಯಾದಿಗಳ ಉಲ್ಲೇಖವಿದೆ.

ಹೊತ್ತು ಹೋಗದು ಚೆಂಡಿನಾಡಬೇಕೆನುತಲಿ
ಮತ್ತೆ ಮಾನ್ಯರ ಕರೆಸಿದನು.[೧೫]

ಇದರಲ್ಲಿ ಬೇಸರವಾದಾಗ ಸಮಯ ಕಳೆಯಲು ಚೆಂಡಾಟವಾಡುತ್ತಿದ್ದರು ಎಂದು ಸ್ಪಷ್ಟ ಹಾಗೂ ಆಟವನ್ನಾಡಲು ಹಲವು ಸಂಗಡಿಗರನ್ನು ಕರೆಸಿದ ಪ್ರಸ್ತಾಪವಿದೆ.

ಚೆಂಡಿಗೆ ಆಳನು ಹಂಚೆಂದು ರಾಮಯ್ಯ
ಮುಂಡಲೇಶ್ವರ ಕಾಟನೊಡನೆ
ತಂಡ ತಂಡದ ಪರಿವಾರ ಕರೆಸೆಂದು
ಗಂಡುಗಲಿಯು ರಾಮ ನುಡಿದ.[೧೬]

ಅಂದರೆ ಚೆಂಡಾಟದಲ್ಲಿ ಎರಡು ತಂಡಗಳಿರಬೇಕು. ಅದರಲ್ಲಿ ಯಾರು ಯಾರು ಇರಬೇಕು, ಅವರ ನಾಯಕ ಯಾರು ಆಟದ ಮೊದಲೇ ನಿರ್ದರಿಸುತ್ತಿದ್ದರು. ಹಾಗೂ ಮಂಡಲೇಶ್ವರರು ಸಹ ಈ ಆಟದಲ್ಲಿ ಪಾಲ್ಗೂಳ್ಳುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ರಾಜಬೀದಿಯೋಳು ಲಗ್ಗೆಯನಾಡಬೇಡೆಂದು ವಾಜಿಯ ಮಗನಿಗ್ಗೇಳಿದಳು[೧೭] ಅಂದರೆ ಇಲ್ಲಿ ಲಗ್ಗೆಯಾಟ ಎಂದಿದೆ. ಲಗೋರಿ ಆಟವನ್ನು ಆ ರೀತಿ ಉಲ್ಲೇಖಿಸಲಾಗಿದೆ. ಇದನ್ನು ಪ್ರಮುಖ ಬೀದಿಯಲ್ಲೇ ಆಡುತ್ತಿದ್ದುದು ತಿಳಿಯುತ್ತದೆ. ಇಂದು ಸಹ ಬೀದಿ ಬೀದಿಗಳಲ್ಲಿ ಆಡುವುದನ್ನು ಕಾಣಬಹುದು. ಪರನಾರಿಯರೆಲ್ಲ ಇರದೆ ಉಪ್ಪರಿಗೇರಿ ಹರುಷದಿ ನಿನ್ನ ನೋಡುವುದು ಸ್ತ್ರೀ-ಪುರುಷರೆಲ್ಲರೂ ಈ ಆಟವನ್ನು ನೋಡಲು ಮನೆಗಳ ಮೇಲೇರಿ ನೋಡುತ್ತಿದ್ದರು. ಕಟ್ಟುತ ರವುಡೆ ಜಾಗಟೆಯಿಂದ ಬಾರಿಸೆ ಸೃಷ್ಠಿವಾದಕರ ಗಂಡನೆಂದು ಆಟವನ್ನು ಆಟಗಾರರನ್ನ ಉರಿದುಂಬಿಸಲು ಹಲವು ವಾದ್ಯಗಳನ್ನು ಬಾರಿಸುತ್ತಾ ಕುಣಿಯುತ್ತಾ ವೀಕ್ಷೀಸುತ್ತಿದ್ದರು.

ಹಟ್ಟಿಕಾಕರು ಹಳ್ಳಿಕಾರರು ಕೆಂದಲಿ
ದಿಟ್ಟ ಗಾಣಿಗ ಬೊಮ್ಮನವರು
ಕಟ್ವಾಳು ಕುಂಬಾರ ಸೋಮನು ವಿರೂಪನು[೧೮]
ಒಕ್ಕಲಿಗರ ಮುದ್ದ, ಅಕ್ಕಸಾಲೆರ ಚಿಕ್ಕ
ಮಿಕ್ಕ ಮೀನಿಗ ಬೋಮ್ಮ[೧೯]
ಜಟ್ಟಿಗಳಂತೆ ಒದಗಿದರು.

ಈ ಕ್ರೀಡೆಯು ಪ್ರಮುಖವಾಗಿ ಗ್ರಾಮೀಣ ಪ್ರದೇಶದ್ದಾಗಿತ್ತು. ಅಲ್ಲಿನ ಎಲ್ಲಾ ಕಸುಬುದಾರರು ಇದರಲ್ಲಿ ಪಾಲ್ಗೊಳ್ಳುತ್ತಿದ್ದರು. ಅಂದರೆ ಒಂದೇ ಸಮುದಾಯದವರಲ್ಲದೆ ಎಲ್ಲರೂ ಸಾಮರಸ್ಯದಿಂದ ಜೀವನ ನಡೆಸುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಅಂದು ವಿರಾಮದ ವೇಳೆಯನ್ನು ಕ್ರೀಡೆಯಲ್ಲಿ ಪಾಲ್ಗೊಂಡು ಹೇಗೆ ವಿನಿಯೋಗಿಸಿಕೊಂಡು ಹೋಗುತ್ತಿದ್ದರು ಎಂಬುದು ತಿಳಿಯುವುದು.

ಬೊಬ್ಬೆಯ ಅಬ್ಬರ ಹಬ್ಬ ಕುಮ್ಮಟದೊಳು
ಇಬ್ಬಗೆಯಾಗಿ ಪಟ್ಟಣವು!
ಗುಬ್ಬಿ ರಾಮನ ಚೆಂಡಿನಾಟವ ಜನರೆಲ್ಲ
ನಿಬ್ಬೆರಗಾಗಿ ನೋಡಿದರು.[೨೦]

ಅಂದರೆ ಒಂದೊಂದು ತಂಡಕ್ಕೆ ಒಂದೊಂದು ಗುಂಪಿನವರು ಪ್ರೋತ್ಸಾಹಿಸುತ್ತಾ ಇಡಿ ಗ್ರಾಮವೇ ಎರಡು ತಂಡಗಳಾಗುತ್ತಿತ್ತು. ಹಬ್ಬದ ದಿನದಂದು ಕ್ರೀಡೆಯನ್ನು ವಿಶೇಷವಾಗಿ ಆಡುತ್ತಿದ್ದರು. ಹಾಗೂ ಈ ಆಟ ನೋಡಲು ಸುತ್ತ ಮುತ್ತಲಿನ ಗ್ರಾಮಗಳ ಸ್ತ್ರೀ-ಪುರುಷ ಮಕ್ಕಳಾದಿಯಾಗಿ ಎಲ್ಲರೂ ಸೇರಿ ಸಂಭ್ರಮದಿಂದ ಪಾಲ್ಗೊಳ್ಳುತ್ತಿದ್ದರು. ಲಗ್ಗೆಯಾಟವು ರಾಜಪುತ್ರರಿಗೆ ಬಗೆಯ ಉಚಿತವೆ ಕೇಳಿದ ಪಗೆರಾಯರು ನಗರೆ... ಚೆಂಡಾಟವೆಂಬುದು ತುರುಗಾಯಿ ಮಕ್ಕಳ ತಂಡಕ್ಕಲ್ಲದೆ ನೃಪಸುತರ ಮಂಡಳಿಗುಚಿತವೆ ಸಲ್ಲದು ಗಂಡರ ಗಂಡ ಬೇಡಿ ಚೆಂಡಾಟ[೨೧] ಆಕೆಯ ಮಾತಿನ ಅರ್ಥ ಹೀಗೆ ಗ್ರಹಿಸಬಹುದು. ಚೆಂಡಾಟ ಸಾಮಾನ್ಯವಾಗಿ ಹಳ್ಳಿ ನಗರಗಳಲ್ಲಿ ಜನ ಸಾಮಾನ್ಯರು ಆಡುವ ಕ್ರೀಡೆ, ರಾಜಮನೆತನದವರು ಅದನ್ನು ಅಷ್ಟಾಗಿ ಆಡತಕ್ಕದಲ್ಲ ತನ್ನ ಮಗ ಚೆಂಡಾಟದಲ್ಲಿ ತೊಡಗುವುದನ್ನು ತಪ್ಪಿಸಲು ಹರಿಯಲಾದೇವಿ ಈ ನೆಪ ಒಡ್ಡಿರಬೇಕು ಹೊರತು ಅಂತಸ್ತಿನ ಪ್ರಶ್ನೆ ಬಂದಿರಲಾರದು. ಅಂದರೆ ಪ್ರೀತಿಯ ಮಗನಿಗೆ ಈ ಕ್ರೀಡೆ ಆಡಬೇಕಾದರೆ ಏನಾದರೂ ಅಪಾಯ ಆಗಬಹುದು ಎಂಬ ಆತಂಕದಿಂದ ಹೇಳಿರಬೇಕು ಅವಳ ಆತಂಕವನ್ನು ಕೆಳಗಿನ ಪದ್ಯ ಸ್ಪಷ್ಟಪಡಿಸುತ್ತದೆ.

ಚೆಂಡುಗಳನು ಆಡಿ ಕೈಕಾಲು ನೊಂದರೆ
ಕೊಂಡೇರು ತುರುಕರಿಗುಸುರೆ!
ದಂಡಂತಿ ಬಾರದ ಬಿಡುವರೆ ರಾಮಯ್ಯ
ಚೆಂಡಿನಾಟವು ಬೇಡ ಮಗನೆ![೨೨]

ಅಂದರೆ ಚೆಂಡಾಟವಾಡಬೇಕಾದರೆ ರಾಜ ಪುತ್ರ ಕೈ-ಕಾಲುಗಳನ್ನು ನೋಯಿಸಿಕೊಂಡರೆ ಪಕ್ಕದ ಮುಸ್ಲಿಂ ಸಾಮ್ರಾಜ್ಯದವರು ಇದನ್ನೇ ನೆಪ ಮಾಡಕೊಂಡು ದಂಡೆತ್ತಿ ಬರುತ್ತಾರೆ. ಹಾಗಾಗಿ ಚೆಂಡಾಟ ಬೇಡ ಇದು ಸಾಮಾನ್ಯ ಮಕ್ಕಳಾಡುವ ಕ್ರೀಡೆ ಎಂದು ಹೇಳಿರಬಹುದು.

ಲಗ್ಗೆ ವಲ್ಲೆಗಳ ತಂದಿಳುಪಲು ಇದ್ದ ಊಳಿಗದ ಬೋಳಿಕರು[೨೩] (ಸೇವಕರು). ಚೆಂಡಾಟವಾಡಬೇಕಾದರೆ ಚೆಂಡು ದೂರ ಹೋದಾಗ ಅದನ್ನು ತಂದು ಕೊಡಲು ಸೇವಕರು ಇರುತ್ತಿದ್ದರು. ಇಂದು ಸಹ ನಾವು ಕೆಲವು ಚೆಂಡಾಟಗಳಲ್ಲಿ ಈ ರೀತಿಯ ಸೇವಕರಿರುವುದನ್ನು ನೊಡಬಹುದು.

ಲಗ್ಗೆಯಾಟದ ವಿವರ

ಈ ಕ್ರೀಡೆಗೆ ಎರಡು ತಂಡಗಳಿದ್ದು ಪ್ರತಿಯೊಂದರಲ್ಲಿ ಆರರಿಂದ ಎಂಟು ಹತ್ತು ಜನರಿರಬೇಕು. ಒಂದು ಚೆಂಡು ಮತ್ತು ಒಂದು ಅಡಿ ಉದ್ದದ ಕಲ್ಲು ಅಥವಾ ಚಪ್ಪಟೆಯಾಕಾರದ ೫-೬ ಚಿಕ್ಕ ಕಲ್ಲು ಚಪ್ಪಡಿಗಳಿರಬೇಕು. ಕಲ್ಲುಗಳನ್ನು ಒಂದು ವೃತ್ತ ಬರೆದು ಅದರೊಳಗಡೆ ನಿಲ್ಲಿಸುತ್ತಾರೆ. ಆಟ ಆಡುವ ಗುಂಪಿನವರು ಒಂದು ಚೆಂಡು ತೆಗೆದುಕೊಂಡು ದೂರದಲ್ಲಿ ಹಾಕಿರುವ ಗೆರೆಯ ಹಿಂದೆ ನಿಲ್ಲುತ್ತಾರೆ. ಇನ್ನೊಂದು ಗುಂಪಿನವರು ಲಗ್ಗೆ ಕಲ್ಲಿನ ಎರಡೂ ಪಕ್ಕದಲ್ಲೂ ನಿಲ್ಲುತ್ತಾರೆ. ಆಟ ಆಡುವ ಗುಂಪಿನ ಒಬ್ಬ ಆಟಗಾರ ಚೆಂಡಿನಿಂದ ಕಲ್ಲುಗಳಿಗೆ ಹೊಡೆಯುತ್ತಾನೆ. ಚೆಂಡು ಕಲ್ಲಿಗೆ ತಾಗದಿದ್ದರೆ ಮತ್ತೆ ಹೊಡೆಯಬೇಕು. ಒಬ್ಬೊಬ್ಬರಿಗೆ ಮೂರುಸಾರಿ ಚೆಂಡು ಎಸೆಯುವ ಅವಕಾಶ ಇರುತ್ತದೆ. ಯಾರೇ ಚೆಂಡು ಹೊಡೆಯಲಿ ಆ ಚೆಂಡು ಕಲ್ಲಿಗೆ

ತಾಗಬೇಕು. ಕಲ್ಲುಗಳ ಕೆಳಕ್ಕೆ ಬಿದ್ದಾಗ ಚೆಂಡು ಹೊಡೆದ ಗುಂಪಿನವರು ದೂರ ಓಡಿ ಹೋಗುವರು. ಎದುರು ಗುಂಪಿನವರು ಆ ಚೆಂಡು ಎತ್ತಿಕೊಳ್ಳುತ್ತಾರೆ. ಚೆಂಡು ಎಸೆದಾಗ ಎದುರು ಗುಂಪಿನವರು ಹಿಡಿದರೆ ಎಸೆದವನು ಆಟದಿಂದ ದೂರ ಉಳಿಯಬೇಕು. ಎದುರು ಗುಂಪಿನವರು ಚೆಂಡ ಬಚ್ಚಿಟ್ಟುಕೊಳ್ಳುತ್ತಾರೆ, ಯಾರ ಬಳಿ ಚೆಂಡಿದೆ ಎಂದು ಹೇಳುವಂತಿಲ್ಲ, ಎಲ್ಲ ಆಟಗಾರರು ಅಂಗಿಯ ಒಳಗಡೆ ಎರಡೂ ಕೈಗಳನ್ನು ಇಟ್ಟುಕೊಂಡು ತಮ್ಮ ಬಳಿ ಚೆಂಡು ಇರುವಂತೆ ನಾಟಕ ಆಡುತ್ತಾರೆ. ಚೆಂಡು ಹೊಡೆದ ಗುಂಪಿನವರು ಕಲ್ಲನ್ನು ನೆಟ್ಟಗೆ ನಿಲ್ಲಿಸಲು ಪ್ರಯತ್ನಿಸುತ್ತಾರೆ. ಕಲ್ಲುಗಳನ್ನು ನೆಟ್ಟಗೆ ನಿಲ್ಲಿಸುವಾಗ ಎದುರು ಗುಂಪಿನವರು ಚೆಂಡಿನಿಂದ ಹೊಡೆದರೆ ಸೂತಂತೆ, ಚೆಂಡು ಹೊಡೆಯಲು ಎಲ್ಲರೂ ಹತ್ತಿರ ಬರುತ್ತಾರೆ. ಆಗ ಒಬ್ಬ ಆಟಗಾರನನ್ನು ಚೆಂಡು ಎಸೆದ ಗುಂಪಿನವರು ಮುಟ್ಟಿದರೆ ಅವರು ಗೆದ್ದಂತೆ, ಅವನ ಬಳಿ ಚೆಂಡಿದ್ದರೆ ಸೋತಂತೆ ಚೆಂಡಿನಿಂದ ಹೊಡೆಯುತ್ತಾನೆ. ಚೆಂಡು ಇಲ್ಲದಿದ್ದರೆ ಸೊತಂತೆ ಇಲ್ಲಿಗೆ ಒಂದಾಟ. ಇಷ್ಟು ಆಟ ಆಡಿದರೆ ಗೆದ್ದಂತೆ ಅಂಕಗಳನ್ನು ಮೊದಲೇ ಮಾತನಾಡಿಕೊಂಡಿರುವರು. ಅದರಂತೆ ಯಾವ ತಂಡ ಹೆಚ್ಚಿಗೆ ಆಟ ಗೆಲ್ಲುವರೂ ಅವರು ಗೆದ್ದಂತೆ ಈ ಕ್ರೀಡೆಯ ಸೂಕ್ಷ್ಮತೆಯನ್ನು ಗಮನಿಸಿದರೆ ಯುದ್ಧಕ್ಕೆ ಸೈನಿಕರನ್ನು ಅಣಿಗೊಳಿಸುವ ಹಿನ್ನೆಲೆಯಲ್ಲಿ ಇದನ್ನು ಪ್ರಾರಂಭಿಸಿರಬೇಕು. ಎರಡು ತಂಡಗಳು ಅಂದರೆ ಎರಡೂ ಕಡೆಯ ಸೈನಿಕರು ಚೆಂಡು ಒಂದು ಆಯುಧ ಅದರಿಂದ ಹೊಡೆಯಲು ಬರುವಾಗ ತಪ್ಪಿಸಿಕೊಳ್ಳುವ ಹಾಗೂ ಅವನು ಬಚ್ಚಿಟ್ಟುಕೊಂಡು ಬರುವಾಗ ಇವನ ಬಳಿ ಆಯುಧ ಇದೆಯೋ ಇಲ್ಲವೋ ಎಂಬ ಸೂಕ್ಷ್ಮತೆಯನ್ನು ಗಮನಿಸಬಹುದು. ಅದೇ ರೀತಿ ಕಲ್ಲುಗಳನ್ನು ನೆಟ್ಟಗೆ ನಿಲ್ಲಿಸುವುದು ಅಂದರೆ ಕೋಟೆಯನ್ನು ಕೆಡವಲು ಬಂದಾಗ ಅದನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬ ತಂತ್ರಗಾರಿಕೆ ತಿಳಿಯುತ್ತದೆ. ಹಾಗೂ ಲಗ್ಗೆಗಳಿಗೆ ಚೆಂಡಿನಿಂದ ಹೊಡೆಯಲು ಇದು ಗುರಿಯಿಟ್ಟು ಹೊಡೆಯುವ ಚಾಣಾಕ್ಷತೆ ಬರುತ್ತದೆ. ಒಟ್ಟಿನಲ್ಲಿ ಈ ಕ್ರೀಡೆ ಒಂದು ಯುದ್ಧದಲ್ಲಿ ಸೈನಿಕರನ್ನು ಅಣಿಗೊಳಿಸಲು, ಮಕ್ಕಳಲ್ಲಿ ಯುದ್ಧಾಸಕ್ತಿ ಮೂಡಿಸಲು ಅಂದಿನ ಹಿರಿಯರು ಈ ಕ್ರೀಡೆ ಹಾಗೂ ಕ್ರೀಡೆಯ ನಿಯಮಾವಳಿಗಳನ್ನು ನಿರೂಪಿಸುತ್ತಾರೆ. ಪ್ರತಿಯೊಬ್ಬ ಮಕ್ಕಳನ್ನು ಸೈನಿಕರನ್ನಾಗಿ ತಯಾರಿಸಲು ಈ ಕ್ರೀಡೆ ಅತ್ಯಂತ ಉಪಯುಕ್ತಕಾರಿಯಾಗಿದೆ.

ಯುದ್ಧ ಮತ್ತು ಚೆಂಡಾಟ ನಿಯಮದ ಸಮನ್ವಯ

೧. ಯುದ್ಧ ಪ್ರಾರಂಭಿಸಬೇಕಾದರೆ ಆಯಾ ಪಕ್ಷದ ರಾಜರಿಬ್ಬರೂ ಕೈಬೀಸಿ ಸೂಚನೆ ಕೊಡುತ್ತಿದ್ದರು.[೨೪] ಚೆಂಡಾಟದಲ್ಲಿ ಆಟ ಪ್ರಾರಂಭವಾಗುವ ಮುನ್ನ ಆಟದ ನಾಯಕರು ಕೂಗುತ್ತಾರೆ.

೨. ಯುದ್ಧವನ್ನು ನಿಲ್ಲಿಸಲು ಅಪಾರ ತೊರ್ಯ ಎಂಬ ವಾದ್ಯವನ್ನು ಬಾರಿಸುತ್ತಿದ್ದರು[೨೫] ಯುದ್ಧ ಮುಗಿಯಿತು ಎಂಬಂತೆ ಲಗ್ಗೆಯಾಟದಲ್ಲಿ ಲಗ್ಗೆ ಇಟ್ಟಾಗ ಲಗ್ಗ್ಯೂ ಲಗ್ಗ್ಯೂ ಎಂದು ಕೂಗುತ್ತಾರೆ.

೩. ಯುದ್ಧದಲ್ಲಿ ಏಕಾಏಕಿಯಾಗಿ ಮೈ ಮೇಲೆ ಬೀಳುವುದು ನಿಷೇಧ. ಬೆನ್ನ ಚೆಂಡಾಟ, ಲಗ್ಗೆ ಆಟಗಳಲ್ಲಿ ಓಡಿ ಬಂದು ಹೊಡೆಯುವ ಹಾಗಿಲ್ಲ.

೪. ಮೊರೆಹೊಕ್ಕವರನ್ನು ಕಾಯುವುದು ಅವರಿಗೆ ಜೀವಧಾನ ನೀಡುವುದು[೨೬] ಬೆನ್ನ ಚೆಂಡಾಟದಲ್ಲಿ ಚೆಂಡಿನಿಂದ ಹೊಡೆಯುವ ವ್ಯಕ್ತಿಗೆ ಹೊಡೆಸಿಕೊಳ್ಳುವವನು ಅವನ ಬೆನ್ನ ಮುಟ್ಟಿದರೆ ಹೊಡೆಯುವ ಹಾಗಿಲ್ಲ.[೨೭] ಚೆಂಡಿದ್ದ ವ್ಯಕ್ತಿ ಚೆಂಡನ್ನು ಮೇಲಕ್ಕೆ ತೂರಿ ಹಿಡಿಯುತ್ತಾನೆ. ಅಷ್ಟರಲ್ಲಿಯೇ ಬೆನ್ನ ಬಿದ್ದವ ಓಡಿಹೋಗಬೇಕು ಎನ್ನುವ ನಿಯಮ ಇದೆ. ಇನ್ನು ಕೆಲವು ಕಡೆ ಮೂರು ಬಾರಿ ತೂರಿ ಹಿಡಿಯುವವರೆಗೂ ಓಡಿ ಹೋಗಲು ಅವಕಾಶ ಕೊಡುತ್ತಾರೆ.

೫. ಶಾಸನವಿರುವ ಕಲ್ಲನ್ನು ಯಾರು ಮೊರೆ ಹೋಗುವರೊ ಅವರನ್ನು ಕೊಲ್ಲಲಾಗದು[೨೮] ಲಿಂಗ ಅಪ್ಪಿದವರು, ಹುತ್ತ ಹತ್ತಿದವರನ್ನು ಕೊಲ್ಲಲಾಗದು.[೨೯] ಮಲವನ್ನು ತುಳಿದು ಬಂದ ವ್ಯಕ್ತಿ ಕಂಡರೆ ಚುರಗಾಲ ಚಪ್ಪರಗಾಲ ಎಂದು ಕಾಲು ಪರಚಿಕೊಳ್ಳುತ್ತ ಕಲ್ಲ ಮೇಲೆ ನಿಂತರೆ ಅವನಿಗೆ ಮುಟ್ಟಲಾಗದು. ನೆಲದ ಮೇಲೆ ಇದ್ದಾಗ ಮಾತ್ರ ಮುಟ್ಟಬೇಕು.[೩೦] ಇದು ಅನೇಕ ಆಟಗಳಲ್ಲಿದೆ.

ಯುದ್ಧ ಮೂಲದಿಂದ ಈ ಕ್ರೀಡೆಯಲ್ಲಿ ಕೇವಲ ನಿಯಮಗಳಷ್ಟೇ ಆಮದು ಆಗಿಲ್ಲ, ಅಲ್ಲಿಂದ ಯಥಾವತ್ತಾಗಿ ಯುದ್ಧದ ದೃಶ್ಯಗಳೇ ಚೆಂಡಾಟದ ಕ್ರೀಡೆಯಾಗಿ ಪರಿವರ್ತನೆಯಾಗಿದೆ. ಚೆಂಡಾಟಗಳಲ್ಲಿ ಉದಾಹರಣೆಯಾಗಿ ಸಮನ್ವಯಗೊಳಿಸಲಾಗಿದೆ.

ಕೋಟೆಕಾಳಗದ ಅವಶ್ಯಕತೆಯನ್ನು ವಿಜಯನಗರದರಸರು ಸ್ಪಷ್ಟವಾಗಿ ತಿಳಿದಿದ್ದರು. ಭದ್ರವಾದ ಕೋಟೆ ಇಲ್ಲದ ರಾಜನು ಬಿರುಗಾಳಿ ಮುಂದಿನ ಮೋಡದ ತುಂಡುಗಳಿಗೆ ಸಮಾನನೆಂದು ಹೇಳಲಾಗಿದೆ.[೩೧] ಇದರಿಂದ ಸಾಮ್ರಾಜ್ಯದ ರಕ್ಷಣೆಗೆ ಕೋಟೆಯ ಮಹತ್ವ ಎಷ್ಟಿತ್ತು ಎಂಬುದು ತಿಳಿಯುತ್ತದೆ. ಕೋಟೆಯು ಅಂದಿನ ರಾಜಕೀಯ ವ್ಯವಸ್ಥೆಯ ಅಳಿವು–ಉಳಿವನ್ನು ನಿರ್ಧಾರ ಮಾಡುತ್ತಿತ್ತು.[೩೨] ಆಕ್ರಮಣಕಾರರು ಕೋಟೆಯ ಸಂರಕ್ಷಕರನ್ನು ತಂತ್ರಗಳಿಂದ ಸೋಲಿಸುತ್ತಿದ್ದರು. ಅದೇ ರೀತಿ ಕ್ರೀಡೆಯಲ್ಲಿಯೂ ಗೆಲ್ಲಬೇಕಾದರೆ ತಂತ್ರಗಳಿರಬೇಕು. ಯುದ್ಧ ತಂತ್ರ ಕೋಟೆಯ ಕಾಳಗದ ಚಿತ್ರಣವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದರೆ ಈ ಲಗ್ಗೆಯಾಟ ಯುದ್ಧ ತಂತ್ರದ ತದ್ರೂಪವೆನಿಸಿದೆ. ಈ ಆಟದಲ್ಲಿ ಬಳಸುವ ಕಲ್ಲು ಕೋಟೆಯ ಆಕಾರಕ್ಕೆ ಹೋಲುತ್ತದೆ. ಲಗ್ಗೆಯ ಸುತ್ತಲೂ ಹಾಕುವ ವೃತ್ತಾಕಾರದ ಗೆರೆಯನ್ನು ಕೋಟೆ ಎಂದೇ ಪರಿಗಣಿಸಬೇಕಾಗುತ್ತದೆ. ಯುದ್ಧದಲ್ಲಿ ಕೊಟೆ ಸಂರಕ್ಷಕರು ಮತ್ತು ಆಕ್ರಮಣಕಾರರು ಎಂದು ಎರಡು ಗುಂಪುಗಳಿರುವಂತೆ ಲಗ್ಗೆಯಾಟದಲ್ಲಿ ಎರಡು ತಂಡಗಳು ಕೋಟೆಗೋಡೆ ಮಧ್ಯಮಾಡಿಕೊಂಡು ನಿಂತಂತೆಯೇ ಈ ಮದ್ದುಗುಂಡು ಬಳಸಲಾಗುತ್ತದೆ. ಕೋಟೆಗೋಡೆ ಕೆಡವಿ ಅಥವಾ ಕಿಂಡಿ ಮಾಡಿ ಒಳಗೆ ಹೋದಾಗಲೇ ಯುದ್ಧ ಪ್ರಾರಂಭವಾದರೆ, ಲಗ್ಗೆಯಾಟ ಲಗ್ಗೆ ಬಿದ್ದ ಮೇಲೆ ಆಟ ಪ್ರಾರಂಭವಾಗುತ್ತದೆ. ಕೋಟೆ ಗೋಡೆ ಬಿದ್ದಾಗ ವೀರರು ಕೂಗುತ್ತಾ ಚೀರುತ್ತಾ ರಕ್ಷಣೆಗೆ ನಿಲ್ಲುವರು. ಅದೇ ರೀತಿ ಲಗ್ಗೆಯಲ್ಲಿ ಇದನ್ನು ಹೊಂದಿಸುವುದೆಂದರೆ ಕೋಟೆಯ ರಕ್ಷಣೆಗೆ ಕೋಟೆ ಕಟ್ಟಿದಂತೆಯೇ. ಯುದ್ಧ ಗೆದ್ದಾಗ ಕೇಕೆ ಹಾಕುತ್ತಿದ್ದರು ಇಲ್ಲಿ ಲಗ್ಗೆ ಲಗ್ಯು ಎಂದು ಕೂಗುವರು. ಲಗ್ಗೆ ಎಂದರೆ ಮುತ್ತಿಗೆ ದಾಳಿ ಕೋಟೆ ಏರುವುದು

ಎಂದರ್ಥ. ಆಟದಲ್ಲಿಯೂ ಇದೇ ಬಳಕೆಯಾಗಿದ್ದು ಇದರ ಮೇಲಿಂದಲೇ ಆಟಕ್ಕೆ ಲಗ್ಗೆಯಾಟ ಎಂದು ಹೆಸರು ಬಂದಿದೆ.[೩೩]

ಕೋಟೆಯನ್ನು ಆಕ್ರಮಣ ಮಾಡುವವರು ಮೂರು ಕಡೆಗಳಿಂದ ಸುತ್ತುವರೆದು ಮುತ್ತಿಗೆ ಹಾಕುತ್ತಿದ್ದರು ಎಂದು ತಿಳಿದುಬರುತ್ತದೆ.[೩೪] ಈ ತಂತ್ರದ ಮೇಲಿಂದಲೇ ಚೆಂಡನ್ನು ಲಗ್ಗೆಗೆ ಹೊಡೆಯಲು ಮೂರು ಬಾರಿ ಅವಕಾಶ ಕೊಡುತ್ತಿರಬೇಕು. ಈ ರೀತಿಯಾಗಿ ಲಗ್ಗೆಯಾಟ ಸಂಪೂರ್ಣವಾಗಿ ಯುದ್ಧತಂತ್ರ ಒಳಗೊಂಡ ಕ್ರೀಡೆಯಾಗಿದೆ.

ಕುಸ್ತಿ:

ಯಾವ ಬಗೆಯ ಆಯುಧಗಳ ಸಹಾಯವೂ ಇಲ್ಲದೆ ಕೇವಲ ದೈಹಿಕ ಶಕ್ತಿ ಮತ್ತು ಯುಕ್ತಿಯಿಂದ ಒಬ್ಬ ಮತ್ತೊಬ್ಬನೊಡನೆ ಸೆಣಸಾಡುವ ಕ್ರೀಡೆಯೇ ಕುಸ್ತಿ ಅಥವಾ ಮಲ್ಲಯುದ್ಧ. ಪ್ರಾದೇಶಿಕವಾಗಿ ನಾನಾ ವಿಧಗಳಲ್ಲಿ ಆಡಲಾಗುತ್ತದೆ. ವಿಜಯನಗರ ಕಾಲದಲ್ಲಿ ಉತ್ತುಂಗದ ಸ್ಥಿತಿಯಲ್ಲಿದ್ದ ಇದನ್ನು ಹಬ್ಬ ಹರಿದಿನಗಳಲ್ಲಿ ನಡೆಸಲಾಗುತ್ತಿತ್ತು. ಕುಸ್ತಿಗಳಲ್ಲಿ ನಾನಾ ಬಗೆಗಳಿದ್ದವು ಆಗಿನ ಜನರ ಶಕ್ತಿ ಪ್ರದರ್ಶನಕ್ಕೆ ಇದು ವೇದಿಕೆಯಾಗಿದ್ದಿತು. ದ್ವಂದ್ವಯುದ್ಧ, ಜಟ್ಟಿಕಾಳಗ, ಮಲ್ಲಯುದ್ಧ ಇವು ಮುಖ್ಯ ಸಾಧನಗಳಾಗಿದ್ದವು.[೩೫] ಅಲ್ಲದೆ ಇವು ಸಾಮಾನ್ಯ ಜನರನ್ನು ಆಕರ್ಷಿಸಿ ವಿನೋದಾವಳಿಗೂ ನೆರವಾಗಿದ್ದವು. ಸ್ವತಃ ರಾಜರೇ ಪ್ರದರ್ಶನಗಳಲ್ಲಿ ಭಾಗಿಗಳಾಗಿ ಮಾರ್ಗದರ್ಶಕರಾಗಿರುತ್ತಿದ್ದರು.[೩೬] ಕುಸ್ತಿಯಾಡುವವರು ದೇಹಶಕ್ತಿಯ ಪ್ರಾಬಲ್ಯದಿಂದ ಪ್ರಬಲರಾದರು. ಮುಂದೆ ಸಮುದಾಯಗಳಾಗಿ ಅವುಗಳಿಗೆ ನಾಯಕರಾಗಿ ಜನತೆಯ ರಕ್ಷಕರಾಗಿ ಪರಿವರ್ತನೆಗೊಂಡರು, ಜಟ್ಟಿಗರನ್ನು ಅನೇಕ ಅರ್ಥ ಪರಿಕಲ್ಪನೆಗಳಿಂದ ಗುರುತಿಸುತ್ತಾರೆ.

ಉದಾ:ಜಟ್ಟಿಗ>ಜಟ್ಟಂಗಿ>ಜಟಗ>ಜಟುಗ>ಜೇಟಿಗ>ಜಟ್ಟಂಗ>ಜೋಂಟಿಗಾ>ಝಟ್ಟಿಂಗ>ಝೊಟ್ಟಿಂಗ್ ಹೆಸರುಗಳಿಂದ ಕರೆಯುವರು. ಇವರನ್ನು ಊರಿನ ರಕ್ಷಣಾ ದೇವತೆಗಳೆಂದು ಕರೆಯುತ್ತಾರೆ.[೩೭] ಕುಸ್ತಿಯನ್ನು ಆಡಿಸುವ ಸ್ಥಳಕ್ಕೆ ಗರಡಿ ಮನೆ ಎನ್ನುತ್ತೇವೆ. ಇದರ ಉಲ್ಲೇಖಗಳು ಪ್ರಾಚೀನ ಕಾಲದಿಂದಲೂ ದೊರೆಯುತ್ತವೆ. ರಾಮಾಯಣ, ಮಹಾಭಾರತಗಳಲ್ಲಿ ಮಲ್ಲಯುದ್ಧಗಳ ಉಲ್ಲೇಖವಿದೆ. ಗರುಡ ಎಂದರೆ ಅಂಗ ರಕ್ಷಕ. ಅಂಗರಕ್ಷಕನಿಗೆ ಮಲ್ಲವಿದ್ಯೆಯ ಜ್ಞಾನ ಅವಶ್ಯ, ಅದನ್ನು ರೂಢಿ ಮಾಡುವ ಸ್ಥಳ ಗರಡಿಮನೆ. ಪುರಾಣ ಕಥೆಗಳಲ್ಲಿ ಆಂಜನೇಯ, ವಾಲಿ, ಸುಗ್ರೀವ, ಕಿಚಕ, ಜರಾಸಂಧ, ದುರ್ಯೋಧನ, ಭೀಮ ಮೊದಲಾದವರು ಖ್ಯಾತ ಕುಸ್ತಿ ಪಟುಗಳು. ಆಂಜನೇಯ ಕುಸ್ತಿಪಟುಗಳ ಆರಾಧ್ಯ ದೈವ. ಉತ್ತಮವಾದ ಗರಡಿ ಅಥವಾ ಅಖಾಡಕ್ಕೆ ಜರಾಸಂಧ ಅಖಾಡ ಎಂಬ ಗೌರವದ ಹೆಸರು ನಮ್ಮ ದೇಶದಲ್ಲಿ ರೂಢಿಯಲ್ಲಿದೆ.[೩೮]

ಗರಡಿ ಮನೆ

ಮನೆಯ ಒಳಗೆ ಕುಸ್ತಿ ಕಲಿಯುವ ಸ್ಥಳಕ್ಕೆ ಮಟ್ಟಿ ಎಂದು, ಸ್ಪರ್ಧೆಯಲ್ಲಿ ಭಾಗವಹಿಸಿ ಕುಸ್ತಿ ಮಾಡುವ ಸ್ಥಳಕ್ಕೆ ಅಖಾಡ ಎಂದು ಕರೆಯುತ್ತಾರೆ. ಗರಡಿ ಮಾಡುವುದು ಎಂದರೆ ಸಾಧನೆ, ವ್ಯಾಯಾಮ ಮಾಡುವುದು ಎಂದರ್ಥ. ಗರಡಿ ಮನೆಯ ಪ್ರಧಾನ ಭಾಗವೇ ಮಟ್ಟಿ. ಅಂದರೆ ಏಕಕಾಲಕ್ಕೆ ಎರಡು ಜೊತೆ ಜಟ್ಟಿಗಳು ಕುಸ್ತಿಯಾಡುವ ಸ್ಥಳ. ಗರಡಿ ಮನೆ

ಹೇಗಿರಬೇಕೆಂದು ಮಾನಸೋಲ್ಲಾಸದಲ್ಲಿರುವ ಚಿತ್ರಣ ನೋಡುವುದಾದರೆ ಹದಿನಾರು ಕಂಬಗಳನ್ನುಳ್ಳ ಚಚ್ಚೌಕವಾದ ಗರಡಿ ಮನೆಯನ್ನು ಸಿದ್ಧಪಡಿಸಿ, ಅದರ ಪಶ್ಚಿಮ ಭಾಗದಲ್ಲಿ ಚತುಷ್ಕೋನದ ವಿಸ್ತ್ರತವಾದ ಒಂದೊವರೆ ಹಸ್ತ ಎತ್ತರವಾದ ವೇದಿಕೆಯನ್ನು ಮಾಡಬೇಕು. ವೇದಿಕೆಯ ಆಗ್ನೇಯ ಮೂಲೆಯಲ್ಲಿ ಶ್ರೀ ಕೃಷ್ಣ ಮಂಟಪವನ್ನು ಕಟ್ಟಿಸಬೇಕು. ಮುಂಭಾಗದಲ್ಲಿ ಹತ್ತು ಹಸ್ತಗಳಷ್ಟು ವಿಸ್ತಾರವುಳ್ಳ, ಮೂವತ್ತು ಹಸ್ತ ವಿಶಾಲತೆಯುಳ್ಳ, ಎರಡು ಗೇಣು ಆಳವುಳ್ಳ ತಗ್ಗನ್ನು ತೋಡಬೇಕು. ಆನಂತರ ಆ ತಗ್ಗನ್ನು ಹಳೆಯ ಮಣ್ಣಿನಿಂದ ತುಂಬಬೇಕು. ಆ ಮಣ್ಣನ್ನು ನೀರಿನಿಂದ ನೆನಸಿ ಗುದ್ದಲಿಗಳಿಂದ ಚೆನ್ನಾಗಿ ಅಗೆಸಬೇಕು. ಜರಡಿಗಳಿಂದ ಮಣ್ಣನ್ನು ಚೆನ್ನಾಗಿ ಚಾಲಿಸಬೇಕು. ಮಣ್ಣಿನಲ್ಲಿರಬಹುದಾದ ಕಲ್ಲು ಮುಂತಾದವನ್ನು ಪೂರ್ಣವಾಗಿ ತೆಗೆದು ಹಾಕಬೇಕು. ನವುರಾಗಿರುವ ಮಣ್ಣನ್ನು ಸ್ವಲ್ಪ ಒದ್ದೆಯಾಗಿರುವಂತೆ ಪೂರ್ಣ ಶುದ್ಧವಾಗಿರುವಂತೆ ಮಾಡಿಸಬೇಕು.[೩೫] ಅದೇ ರೀತಿ ಮೈಸೂರು, ಹೊಸಪೇಟೆ, ಚಿತ್ರದುರ್ಗ, ತುಮಕೂರು ಇತ್ಯಾದಿ ಭಾಗಗಳಲ್ಲಿ ಗರಡಿ ಮನೆಗಳಿವೆ. ಗರಡಿಯಾಡುವ ಸ್ಥಳವನ್ನು ಹೇಗೆ ತಯಾರು ಮಾಡುತ್ತಾರೆಂದು ನೋಡುವುದಾದರೆ ಗರಡಿ ಮನೆಯ ಒಳಗೆ ಸುಮಾರು ಒಂದು ಅಡಿ ಆಳದವರೆಗೂ ಕೆಮ್ಮಣ್ಣನ್ನು ಜರಡಿ ಆಡಿಸಿ, ಹುಡಿಮಣ್ಣು ತುಂಬಲಾಗುತ್ತದೆ. ಅದಕ್ಕೆ ಜೆಕಿನ ಗೆಡ್ಡೆಯ ಪುಡಿ, ಕರ್ಪೂರ, ಕುಂಕುಮ, ಟಿಂಕ್ಚರ್, ದೇವದಾರು ಎಣ್ಣೆ, ಗಂಧದ ಪುಡಿ, ಅತ್ತರು, ಎಳ್ಳೆಣ್ಣೆಯನ್ನು ಬೆರಸಿದ ಮಣ್ಣು ಶ್ರೇಷ್ಠ ಎಂಬ ಅಭಿಮತವಿದೆ. ಇಂತಹ ಮಣ್ಣಿನಲ್ಲಿ ಮೈಮುಚ್ಚಿ ಮಲಗಿದರೆ ದೇಹದ ಕಾವು ಆರಿ ಹೋಗುತ್ತದೆ, ಕಾಂತಿ ಮೂಡುತ್ತದೆ. ಎಂದು ಹೇಳುತ್ತಾರೆ. ಗಾಯದ ಮೇಲೆ ಮಣ್ಣನ್ನು ಮೆತ್ತುವ ಪರಿಪಾಠವೂ ಇದೆ.

ನಂಜುಂಡ ಕವಿಯು ಹೊಸಮಲೆದುರ್ಗವನ್ನು ವರ್ಣಿಸುವಾಗ ಪುರದ ಹೊರವಳೆಯದೊಳಗೆ ಎಂಟು ದಿಕ್ಕಿನಲ್ಲಿ ಗರಡಿಗಳಿದ್ದವೆಂದು ಅಲ್ಲಿ ಬಿರುದಿನ ಬಂಟರಿಗೆ ಪಾಡುಗಳನ್ನು ಭರಿಸುವ ಅಭ್ಯಾಸಿಗಳಿದ್ದರೆಂದು ಹೇಳುತ್ತಾನೆ.[೩೬] ಕುಸ್ತಿಪಟುಗಳು ಗರಡಿಯೊಳಗೆ ಕುಸ್ತಿಯ ಅಭ್ಯಾಸ ಮಾಡುತ್ತಿದ್ದರು ಎಂಬುದಕ್ಕೆ ದಾಖಲೆಯಾಗಿದೆ.

ಪುರದ ಬಹಿರ್ವಳೆಯದೊಳಣ್ದೆಸೆಯಾಳು
ಗರುಡಿಗಳಿಹವದರೊಳಗೆ
ಬಿರಿದಿನ ಬಂಟರ್ಗೆ, ಬಿಡದೆ ಪಾಡುಗಳೆನು
ಬಿರಿಸುವಭ್ಯಾಸಗಳಿಹರು[೩೭]

ವಿಜಯನಗರ ಮತ್ತು ಪಾಳೆಯಗಾರರ ಕಾಲದ ಗರಡಿಯ ಮನೆಗಳು ಚಿಕ್ಕದಾಗಿರುತ್ತಿದ್ದವು. ಗರಡಿಯ ಹೊರಗೋಡೆಗಳ ಮೇಲೆ ಕೆಮ್ಮಣ್ಣಿನ ಅಡ್ಡ ಹಾಗೂ ಉದ್ದುದ್ದವಾದ ಪಟ್ಟೆ ಹಾಕಿ, ಮುಂದೆ ದಪ್ಪಕಲ್ಲು ಗುಂಡುಗಳನ್ನು ಇಟ್ಟಿರುತ್ತಿದ್ದರು. ಬಾಗಿಲಿಗೆ ಗರುಡನ ಅಥವಾ ಹನುಮಂತನ ಚಿತ್ರಪಟ ಇರುತ್ತಿತ್ತು. ಎಲ್ಲೋ ಒಂದು ಸಣ್ಣ ಕಿಟಕಿ ಇರುತ್ತಿದ್ದರೆ ಅದೇ ಹೆಚ್ಚು. ಒಳಗಡೆ ಹೆಚ್ಚು ಗಾಳಿ ಬೆಳಕು ಇರುತ್ತಿರಲಿಲ್ಲ ಮುಂದೆ ಬೀಗ ಹಾಕಿಕೊಳ್ಳಲು ಚಿಲಕ ಇರುತ್ತಿರಲಿಲ್ಲ. ಒಳಗಡೆಯಿಂದ ಬಾಗಿಲು ಹಾಕಿಕೊಳ್ಳಲು ಅಗುಳಿ ಇರುತ್ತಿತ್ತು. ಹೆಸರಾಂತ ಕುಸ್ತಿಪಟುಗಳ ಹೆಸರನ್ನು ಆ ಮನೆಗಳಿಗೆ ಇಡುವ ಪರಿಪಾಠವಿತ್ತು. ಸ್ತ್ರೀಯರು ಗರಡಿಮನೆ ಒಳಗೆ ಪ್ರವೇಶಿಸಬಾರದೆಂಬ

ನಿಯಮವಿತ್ತು. ಪ್ರವೇಶಿಸಿದರೆ ಅವರ ತಲೆಕೊದಲು ಉದುರಿ ಹೋಗುತ್ತದೆಂಬ ನಂಬಿಕೆಯಿತ್ತು. ಸಾಧನೆ ಮಾಡುವ ಪೈಲ್ವಾನನಿಗೆ ಹೆಂಗಸಿನ ದೃಷ್ಠಿ ತಗುಲಬಾರದು ಆಕೆಯ ಬಲೆಗೆ ಈತ ಬೀಳಬಾರದು ಎಂಬುದು ಈ ಕಟ್ಟಳೆಯ ಉದ್ದೇಶವಿರಬಹುದು.

ಕೃಷ್ಣದೇವರಾಯನ ಕಾಲದಲ್ಲಿ ಅಹಮದ್ ನಗರ, ವಿಜಯಪುರ,ಂ ಗೋಲಕೊಂಡ ರಾಜ್ಯಗಳಲ್ಲಿ ಕುಸ್ತಿ ಮತ್ತು ಗರಡಿಮನೆಗಳ ಸಂಗತಿಗಳು ನಮಗೆ ರಾಯವಾಚಕದಲ್ಲಿ ದೊರೆಯುತ್ತದೆ. ಪಟ್ಟಣಕ್ಕೆ ಹೋಗಿ ಗಜಪತಿ ಅವರ ಅರಮನೆಗಳನ್ನು ಷೋಡಶ ಪಾತ್ರರ ನಿವಾಸಗಳನ್ನು ಅವರ ಗರಡಿ ಮನೆಗಳನ್ನು ಅಲ್ಲಿ ಅಂಗಸಾಧನೆ ಮಾಡುವವರನ್ನು ನೋಡಿದೆವು, ಅವರು ಮಾಡುವ ದುಸ್ತರ ಅಂಗಸಾಧನೆಗಳನ್ನು ದೇವಾನಂದರೂ ಮಾಡಲಾರರು. ದೇಶಾಂತರದ ಜಗ ಜಟ್ಟಿಗಳು ಹಾಕುವ ವರಸೆಗಳನ್ನು ನೋಡಿರಬಹುದು. ಇವರು ಭಾರಗಳನ್ನು ಎತ್ತಬೇಕು. ಅವುಗಳನ್ನು ಎತ್ತುವುದಿರಲಿ ಅಡ್ಡಡ್ಡ ಎತ್ತುತ್ತಾರೆ. ಒಂಬತ್ತು ಮಣ ಭಾರದ ಚೀಲವನ್ನು ಕೈಯೆತ್ತುವೆತ್ತರಕ್ಕೆ ಎತ್ತುವರು. ಅದನ್ನು ಮೇಲೆ ಹಾಕಿಕೊಂಡು ತೊಡೆಗಳ ನಡುವೆ ನಿಲ್ಲಿಸಿಕೊಂಡು ಅಡ್ಡತೊಲೆಯಂತೆ ತೂಗಾಡುವರು. ಸಮರದಲ್ಲಿ ರಾವುತ, ರಾವುತರ ಬಗಲಿಗೆ ಕೈ ಹಾಕಿ ಅನಾಮತ್ತಾಗಿ ಕುಕ್ಕಿ ಹೋದಂತೆ ಕುದುರೆಗಳನ್ನು ಬಿಡದೇ ಸೆಣಸಾಟ ಅಸಾಧ್ಯವೆಂದು ಅವನ್ನು ಬಿಡುವರು. ಸಮಸಮ ಯೋಧರಲ್ಲಿ ಘಟಾಘಟಿ ಹೋರಾಟವಾದರೂ ಬಗ್ಗರು. ಅಂತಹ ರಾವುತರನ್ನು ಕುಂಕುಳಲ್ಲಿ ಹೊತ್ತುಕೊಂಡು ಹೋಗಲು ಹವಣಿಸುವರು. ಸಮಯಾವಧಾನದಿಂದ ಮೇಲುಗೈ ಸಾಧಿಸಲು ಈ ರೀತಿ ಮಾಡುವರು. ದೊಡ್ಡದಾದ ಮನುಷ್ಯನ ಶಿರಸ್ಸಿನ ಗಾತ್ರದ ರಕ್ತಖಂಡವನ್ನು ನೂರು ಆನೆಗಳ ಲೆಕ್ಕಿಸದೆ ಕಡಿಯುತ್ತಾರೆ. ಆ ಖಡ್ಗದಿಂದ ಹುಣಸೆ ಕಂಬ, ಬಾಳೆದಿಂಡುಗಳನ್ನು ಕಡಿದು ಬಿಸಾಡುತ್ತಾರೆ. ಗಡಾರಿಗಳನ್ನು ಜೊತೆ ಜೊತೆಯಾಗಿ ನಾಟಿದರೆ ಹುಲ್ಲುಕಡ್ಡಿಯಂತೆ ಕತ್ತರಿಸುವರು. ಕುದುರೆ ಲಾಳಗಳನ್ನು ಪುಟ್ಟಿಗೆ ತುಂಬಿ ತಂದರೆ, ನಾಲ್ಕು ನಾಲ್ಕು ಬಿಲ್ಲೆಗಳನ್ನು ಹಿಡಿದು ಜಜ್ಜುವರು. ಕಮ್ಮಾರರು, ಅವುಗಳನ್ನು ಬಿಡಿಸಲಾಗದೇ ಚಮ್ಮಟಿಗೆಯಿಂದ ಬೇರ್ಪಡಿಸಿ ಸರಿ ಮಾಡಿ ಮರುದಿನ ತರುವರು. ಮತ್ತಷ್ಟು ಕಬ್ಬಿಣದ ಗುಣಪುಗಳನ್ನು ಗುರಿಯಿಟ್ಟು ಬೀಸೆಂದ ಕಡೆ ಬೀಸುವರು. ಈ ಗರಡಿಗೆ ಬಂದು ನೋಡಿದ ಬಲಾತಿಬಲರು ಈ ಕೆಲಸ ನಮ್ಮಿಂದ ಸಾಧ್ಯವಿಲ್ಲ ಎನ್ನುವರು. ಈ ರೀತಿಯ ಬಲಾಢ್ಯರನ್ನು ಮತ್ತೆಲ್ಲಿಯೂ ನೋಡಲಿಲ್ಲ.[೩೮] ಇಲ್ಲಿ ವಿಜಯನಗರ ಕಾಲದಲ್ಲಿ ಕುಸ್ತಿಯನ್ನು ಹೇಗೆ ಅಭ್ಯಾಸ ಮಾಡುತ್ತಿದ್ದರು, ಅವರು ಎಷ್ಟು ಬಲಿಷ್ಠರಾಗಿದ್ದರು ಎಂದು ತಿಳಿಯುತ್ತದೆ.

ಮಲ್ಲರು ಸಾಧನೆ ಮಾಡುವ ಗರಡಿಮನೆ, ಅಲ್ಲಿನ ಮಲ್ಲಗಂಬ ಅವರು ಸಾಧನೆ ಮಾಡುತ್ತಿದ್ದ ರೀತಿ, ಅವರ ಉಡಿಗೆ ತೊಡಿಗೆ, ಇತ್ಯಾದಿಗಳ ಕುರಿತು ಸಾಹಿತ್ಯ ಕೃತಿಗಳ ವರ್ಣನೆಯು ಕುಸ್ತಿಯ, ಗರಡಿ ಮನೆಯ ಒಂದು ವಾಸ್ತವ ಚಿತ್ರವನ್ನು ಮೂಡಿಸಲು ಸಹಾಯಕವಾಗಿವೆ.

ರತ್ನಾಕರ, ಚಾರುವಿತಲ, ನಾರಾಣಪ್ಪ ಅವರುಗಳು ಮಾಡಿರುವ ಮಲ್ಲಯುದ್ಧ ವರ್ಣನೆಗಳಿವೆ.

ಚೆಲ್ಲಣ ಹೊನ್ನಡ್ಡಿಯಾಣ ಮೇಲ್ಬಗುಹಿನ ಕುಲ್ಲಾಯಿ ಕುಂಕುಮ ತಿಲಕಾ
ಗಲ್ಲದಿ ಪಿಡಿದ ತಾವಡೆಗೊಲ್ಲಗಳಿಂದ ಮಲ್ಲರೆದ್ದರು ಸಾಧನೆಗೆ ಮುಗಿದುಟ್ಟ

ಕಾಸೆ ಚೆಮ್ಮುರಿಬಟ್ಟ ಜಡೆ ಪಾದ ಸರಿವಿಟ್ಟ ಸಾದಿನ ಬೊಟ್ಟು ಕರದಲ್ಲಿ
ಸಾಣಖಂಡೆಯವೊಪ್ಪು ಕಲರು ಸಿಂಗರಿಸಿ ಸಾಧನೆಗೆದ್ದರವರು.[೫೮]

ಇಲ್ಲಿ ಮಲ್ಲರು ಯಾವ ರೀತಿಯ ವಸ್ತ್ರ ಧರಿಸಿರುತ್ತಿದ್ದರು ಎಂದು ವರ್ಣಿಸಲಾಗಿದೆ ಹಾಗೆ ಅವರು ಕೇಲವೂಂದು ನಿಯಮಗಳನ್ನು ಪಾಲಿಸಬೇಕಿತ್ತು 'ಆ ಪಿಡಿದುದೆ ಕತ್ತರಂ ಸೆರವಣೆ ಹತ್ತೆಡೊಕ್ಕರಂ... ಮುಡಂದಣುವಟ್ಟಿ ಎಂದು ಮಲ್ಲಮಾತು ಮಾಡಿ' [೫೯] ಇಲ್ಲಿ ಮಲ್ಲ ಮಾತಂ ಮಾಡಿ ಎನ್ನುವುದು ಗಮನಾರ್ಹ. ಇದು ಬುಶಃ ಮಲ್ಲಯುದ್ಧದ ನಿಯಮವನ್ನು ಪಾರಿಭಾಷಿಕ ಶಬ್ದಗಳಲ್ಲಿ ಹೇಳಿದಂತಿದೆ.

ಕುಸ್ತಿಪಟುಗಳ ಆಹಾರ ಮತ್ತು ಆಭ್ಯಾಸ

ಕುಸ್ತಿ ಪಟುಗಳು ದೈಹಿಕವಾಗಿ ಸದೃಢವಾಗಿರಬೇಕು. ಅವರು ಹಾಗೆ ಇರಬೇಕಾದರೆ ಸರಿಯಾದ ಪೌಷ್ಟಿಕಾಂಶದ ಆಹಾರ ಸೇವಿಸಬೇಕು. ಅವರು ಉದ್ದು, ಮಾಂಸ, ಮೊಸರು, ಹಾಲು ಕಲೆಸಿದ ಹಿಟ್ಟು, ತುಪ್ಪ, ಸಕ್ಕರೆ, ಉದಾರೀ ಮೂಲಿಕಾ ವಿಶೇಷ, ಅಶ್ವಗಂಧಾ ಮತ್ತು ತುಪ್ಪದಲ್ಲಿ ಕರಿದ ಸಕ್ಕರೆ ಬೆರೆಸಿದ ಬೂದುಕುಂಬಳದ ಹೋಳುಗಳನ್ನು ಕೊಟ್ಟು ಮಲ್ಲರ ಪೋಷಿಸಬೇಕು. ಹೆಂಗಸರ ದರ್ಶನ, ಸ್ಪರ್ಶ, ಮಾತುಕತೆ, ಸಹವಾಸಗಳಿಂದ ಮಲ್ಲರನ್ನ ಪ್ರಯತ್ನಪಟ್ಟು ರಕ್ಷಿಸಬೇಕು. ಭವಿಷ್ಟು (ಚಿಕ್ಕವಯಸ್ಸಿನವರು)ಗಳನ್ನಂತೂ ವಿಶೇಷವಾಗಿ ಕಾಪಾಡಬೇಕು.[೬೦]

ಮಲ್ಲರು ಉಳಿದವರಿಗಿಂತ ಭಿನ್ನವಾಗಿರುತ್ತಿದ್ದು ಪ್ರತಿದಿನ ಮುಂಜಾವಿನಲ್ಲಿ ವ್ಯಾಯಾಮ ಮಾಡುತ್ತಿದ್ದರು. ಭಾರಾಶ್ರಮ ಅಂದರೆ ಭಾರ, ಕೋಶ ಅಂದರೆ ಮೂರು ಮೈಲಿಯ ದೀರ್ಘ ನಡಿಗೆಯನ್ನು ಮಾಡಬೇಕಿತ್ತು, ಈಜನ್ನು ಅಭ್ಯಾಸ ಮಾಡುತ್ತಿದ್ದರು. ಸಂಜೆ ವೇಳೆ ಪಟುಗಳು ಭಾಹುಪಲ್ಲಣಕೆ ಶ್ರಮ ಅಂದರೆ ಕೈಗಳನ್ನು ಕೊಂಡಿಗಳಂತೆ ಬಿಗಿ ಹಿಡಿದು ಎತ್ತಿಳಿಸುವುದನ್ನು ಅಭ್ಯಾಸ ಮಾಡುತ್ತಿದ್ದರು. ಸ್ತಂಭಾಶ್ರಮ ಎನ್ನುವ ಮಲ್ಲಕಂಭ ವ್ಯಾಯಾಮವನ್ನು ಮಾಡುತ್ತಿದ್ದರು. ಈ ಪಟುಗಳ ಮಲ್ಲಾಧ್ಯಕ್ಷ ಎಂಬ ಮೇಲ್ವಿಚಾರಕನ ಸಲಹೆಯಂತೆ ಮಾಡುತ್ತಿದ್ದರು. ಮಾನಸೋಲ್ಲಾಸದಲ್ಲಿ ಪಾಳೆಯ ದಿನ ಕುಸ್ತಿಯಲ್ಲಿ ಜಯಾಪಜಯಗಳ ನಿರ್ಣಯಕ್ಕಾಗಿ ನಡೆಸುವ ಪಂದ್ಯ ಅಥವಾ ಸ್ಪರ್ಧೆಗೆ ಪಾಲೀ (ಪಾಳಿ) ಎಂಬ ಹೆಸರಿದ್ದಂತೆ ತೊರುತ್ತದೆ.[೬೧] ಕುಸ್ತಿಪಟುಗಳು ಹೇಗೆ ಅಭ್ಯಾಸ ಮಾಡಬೇಕೆಂದು ಹೇಳಿದೆ. ಅಂದು ಬೆಳಿಗ್ಗೆ ಮಲ್ಲನು ಮರಳು ತುಂಬಿದ ಗೋಣಿ ಚೀಲಗಳನ್ನು ಎರಡೂ ಕೈಗಳಿಂದ ಎತ್ತಿ ಎಸೆಯಬೇಕು. ಶಕ್ತಿ ಉಪಯೋಗಿಸಿ ಎರಡು ಪಾದಗಳಿಂದಲೂ ಅಂಥ ಚೀಲಗಳನ್ನು ತಳ್ಳಲು ಅಭ್ಯಾಸ ಮಾಡಿಕೊಳ್ಳಬೇಕು, ಭಾರ ಎತ್ತಿ ಸಹಿಸುವ ರೂಢಿಯಾಗಲೆಂದು ವಿಶೇಷವಾಗಿ ಹಿರಿಯ ಮಲ್ಲರು ಹೀಗೆ ಮಾಡಬೇಕು. ಇದು ಶರೀರ ಮತ್ತು ಪ್ರಾಣದ ಶಕ್ತಿ ಬೆಳೆಸುವ ಭಾರಾಶ್ರಮ ಎಂದು ಹೇಳುವರು. ಆನಂತರ ಊರಿನಿಂದ ಹೊರಗೆ ಒಂದು ಕ್ರೋಶದಷ್ಟು ದೂರ ನಡೆದು ಹೋಗಬೇಕು. ಆನಂತರ ಬೇಗನೆ ಹಾಗೇ ನಡೆದುಕೊಂಡು ಹಿಂದಿರುಗಬೇಕು. ಇದನ್ನು ಭ್ರಮಣಶ್ರಮ ಎಂದು ಹೇಳುತ್ತಾರೆ. ಪುಷ್ಕರಣಿಯ ಅಥವಾ ಕೆರೆಯ ನೀರಿನೊಳಗೆ ಪ್ರವೇಶಿಸಬೇಕು. ಆಮೇಲೆ ಕತ್ತಿನ ಮಟ್ಟದ ನೀರಿನಲ್ಲಿಳಿದು ಕೈಗಳಿಂದ ನೀರನ್ನು ಜೋರಾಗಿ ಕಲಕಬೇಕು. ಇವುಗಳಲ್ಲಿ ಮೊದಲನೆಯದು

ಕಾಲಿಗೆ ಬಲವನ್ನು ತಂದುಕೊಡುತ್ತದೆ. ಇದಕ್ಕೆ ಭ್ರಮಣಶ್ರಮ ಎನ್ನುವರು. ಎರಡನೆಯದು ಕೈಗಳ ಬಲವನ್ನು ಹೆಚ್ಚಿಸುತ್ತದೆ. ಇದಕ್ಕೆ ಸಲಿಲಶ್ರಮ ಎಂದು ಹೆಸರು. ಇಬ್ಬರು ಮಲ್ಲರು ನಿಂತುಕೊಂಡು ಪರಸ್ಪರ ಕೈಗಳಿಂದ ತೋಳುಗಳನ್ನು ಘಟ್ಟಿಸಬೇಕು. ಇದು ಸಾಯಂಕಾಲ ಮಾಡಬೇಕಾದ ಬಾಹುಪೇಲ್ಲಕಣ ಎಂಬ ಶ್ರಮ ತಬ್ಬುವುದಕ್ಕೆ ಯೋಗ್ಯವಾದ ಆಕಾರವುಳ್ಳ, ನುಣುಪಾದ ಕೈ ಎತ್ತಿ ನಿಂತರೆ ಎಟುಕುವಷ್ಟು ಎತ್ತರವಾಗಿರುವ ದೃಢವಾಗಿ ಭೂಮಿಯಲ್ಲಿ ಹೂಳಲ್ಪಟ್ಟಿರುವ, ಚೆಂದನ ಮುಂತಾದ ದ್ರವ್ಯಗಳನ್ನು ಲೇಪಿಸಿರುವ ಕಂಬವನ್ನು ನೆಗೆದು ಹಿಡಿದು, ತೊಡೆಗಳಿಂದ ಭದ್ರವಾಗಿ ಆಕ್ರಮಿಸಿ ಎರಡೂ ಕೈಗಳಿಂದಲೂ ಎದೆಯಿಂದಲೂ ದೃಢವಾಗಿ ತಬ್ಬಿ ಹಿಡಿದು ಕೈಗಳನ್ನು ತೊಡೆಗಳನು ತಿರುಗಿಸುವುದರಿಂದ ಆವರ್ತನ, ವಿವರ್ತನಗಳನ್ನು ಮಾಡಿ ಮೇಲೆ ಕೆಳಗೆ ತಿರುಗುತ್ತ, ಸ್ತಂಭಶ್ರಮವನ್ನು ಮಾಡಬೇಕು[೪೨] ಹೀಗೆ ಶ್ರಮಗಳನ್ನು ಮಾಡಿ ಕುಸ್ತಿಗೆ ತಯಾರಾಗುತ್ತಿದ್ದರು.

ವಿವಿಧ ಬಗೆಯ ಮಲ್ಲರು

ಕುಸ್ತಿಪಟುಗಳ ವಯಸ್ಸು, ದೇಹದಾರ್ಢ್ಯತೆ ಅವರ ಸಾಮರ್ಥ್ಯ ಇತ್ಯಾದಿಗಳನ್ನು ಪರಿಗಣಿಸಿ ಕುಸ್ತಿಪಟುಗಳಿಗೆ ಹಲವು ಹೆಸರುಗಳಿನ್ನಿಡುವ ಪರಿಪಾಠವಿತ್ತು.

ದೊಡ್ಡ ಶಾರೀರವುಳ್ಳ ಮಲ್ಲ ಭಾರೀ ಎಂದು, ಬಲ ಸಾಮರ್ಥ್ಯ ಒಳ್ಳೆಯ ತರಬೇತಿಗಳನ್ನುಳ್ಳ ಮಲ್ಲ ಬಲಾಡ್ಯ, ಸರಿಯಾದ ಪಟ್ಟು ಹಾಕಿ ಒಳ್ಳೆಯ ಭಂಗಿಯಲ್ಲಿ ನಿಲ್ಲುವವನನ್ನು ಸಂಸ್ಥಾನ ನಿರತ, ಎಷ್ಟು ಹೋರಾಡಿದರೂ ಯಾವನಿಗೆ ಆಯಾಸವೇ ಆಗುವುದಿಲ್ಲವೋ ಅವನಿಗೆ ಬಹುಯೋಧಿ, ಪಟ್ಟುಗಳನ್ನು ಹಾಕಿ ಹಿಡಿದಾಗ ಯಾವನು ಬಿಡಿಸಿಕೊಳ್ಳುತ್ತಾನೊ, ಮಾತನಾಡದೆ ಇರುವನೋ ಕೆಳಗೆ ಬಿದ್ದರೂ ಕೈಯಿಂದ ಮೈಯನ್ನು ತಟ್ಟಿಕೊಳ್ಳುವುದಿಲ್ಲವೋ ಅವನು ಸಂಬದ್ಧ. ಯಾವನು ಮೈಕೈಗಳನ್ನು ತಿರುಗಿಸಿದರೂ ಸಹಿಸಿಕೊಳ್ಳುತ್ತಾನೋ ಅವನ ವಲನೇಸಹ, ಯಾರು ತನ್ನ ತಂತ್ರ ರಕ್ಷಿಸಿಕೊಳ್ಳುತ್ತಾನೊ ಅವನು ರಕ್ಷಣ. ತಂತ್ರ ಪಟ್ಟು ಅತೀ ಶೀಘ್ರವಾಗಿ ಪ್ರಯೋಗಿಸಲ್ಪಟ್ಟಾಗ ಅಷ್ಟೇ ಶೀಘ್ರವಾಗಿ ಅದರಿಂದ ತಪ್ಪಿಸಿಕೊಳ್ಳುವನೋ ಢಕಣ, ಶೀಘ್ರವಾಗಿ ಹೊಸ ತಂತ್ರಗಳನ್ನು ಪ್ರಯೋಗಿಸಬಲ್ಲವನು ಧನ್ಯ, ಪ್ರತಿಮಲ್ಲನು ಪ್ರಯೋಗಿಸಿದ ತಂತ್ರಗಳನ್ನು ಅವನ ದುರ್ಬಲ ಅಂಶಗಳನ್ನು ತಿಳಿದುಕೊಳ್ಳಬಲ್ಲನೋ ಅವನು ದರ್ಶನ ಎಂಬ ಮಲ್ಲನೆನಿಸುತ್ತಾನೆ, ಯಾರು ಕುಪ್ಪಳಿಸಿ ಪ್ರತಿಮಲ್ಲನ ಕುತ್ತಿಗೆಯನ್ನು ಹಿಡಿಯುತ್ತಾನೋ ಅ ಮಲ್ಲ ಲಗನ, ಹೋರಾಟದಲ್ಲಿ ಮರ್ಯಾದೆಯನ್ನು ನಿಯಮಗಳನ್ನೂ ಸರಿಯಾಗಿ ಪಾಲಿಸುವನನ್ನು ನಿಯತ ಎನ್ನುವರು.[೪೩]

ಮಲ್ಲರ ಪಟ್ಟುಗಳು ಅಥವಾ ಸ್ಥಾನಕಗಳು

ಮಲ್ಲರು ವಿವಿಧ ತಂತ್ರ, ಪಟ್ಟುಗಳ ಮೂಲಕ ಕುಸ್ತಿಯಾಡುತ್ತಿದ್ದರು ಎಂಬುದಕ್ಕೆ ಅನೇಕ ದಾಖಲೆಗಳಿವೆ. ಶಿಲ್ಪ, ಸಾಹಿತ್ಯ ಕೃತಿಗಳ, ಕ್ಷೇತ್ರಕಾರ್ಯದ ಮೂಲಕ ಗಮನಿಸಿ ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಕುಮಾರವ್ಯಾಸನು ಭೀಮ ಜರಾಸಂಧರ ಮಲ್ಲಯುದ್ಧ, ವರ್ಣನೆಯಲ್ಲಿ ಹಲವು ಪಟ್ಟುಗಳನ್ನು ಹೇಳಿದ್ದಾನೆ.

ಅಗಡಿಯಲಿ ಲೋಟಿಸಿ ನಿರಂತರ
ಲಗಡಿಯಲಿ ಲಾಗಿಸಿ ನಿಬಂಧದ
ಬಿಗುಹುಗಳ ಕುಮ್ಮರಿಯ ಕುಹರದ ನಾಗಬಂಧಗಳ
ತೆಗುಹುಗಳ ತೊಡುಕುಗಳ ತುಳುಕಿನ
ಜಗುಳುಗಳ ಜೊಡಣಿಯ ನಿಡುಸು
ಮಲ್ಲಗಳ ಸೌರಂಭದ ಸಗಾಢರು ಹೊಕ್ಕು ಹೆಣಗಿದರು[೪೪]

ಅಂದಿನ ಕುಸ್ತಿಪಟುಗಳು ತಮ್ಮ ಕೈಕಾಲುಗಳ ಚಳಕ, ತಂತ್ರಗಾರಿಕೆಯಿಂದ ಹೇಗೆ ಹೋರಾಡುತ್ತಾ ಎದುರಾಳಿಗಳನ್ನು ಶರಣಾಗುವಂತೆ ಮಾಡುತ್ತಿದ್ದರು ಎಂಬುದರ ನೈಜ ಚಿತ್ರಣ ಮೇಲಿನ ಪದ್ಯವು ಕೊಡುತ್ತದೆ. ಮಾನಸೋಲ್ಲಾಸದಲ್ಲಿಯು ಹಲವು ರೀತಿಯ ಪಟ್ಟುಗಳ ಉಲ್ಲೇಖವಿರುವುದನ್ನು ನೋಡಬಹುದು. ಮಲ್ಲರ ಪಟ್ಟುಗಳ ಅಥವಾ ಸ್ಥಾನಿಕಗಳು ಬಹುಲಾಕೆಯೊಳತಿ ಮಧುಮಾಗೆ ಕರ್ತನಿ ಕರ್ತರಿಪಟ್ಟಿ ಸಮಗರ್ತರಿಯರ್ಧಗರ್ತರಿ ತುಡುಕಿ ಪಿಡಿದು ತೊಡೆಗಳಿಂದ ಡೊಕ್ಕರಿಸಿ[೪೫] ನಡುವಂ ಡೊಕ್ಕರಿಸಿ[೪೬] ಬಾಹುದಣಿ ಖಮ್ಮರಿ ಕತ್ತರಿ ಖೋಡವಂಕುಶಸಿಕುವೆನಿಪ್ಪ ಜಟ್ಟಿಗನನಚ್ಚಿನ ಬಿನ್ನಣಮೊಪ್ಪೆಕಾದಿದರ್[೪೭] ಬಾಹುಗತ್ತರಿಯಿಂಗಳ ಮನೊತ್ತುವುದುಂ ಕೆಳಮುಖವಾಗಿ ಬಿದ್ದಿರುವ ಮಲ್ಲನ ಎರಡು ಕಂಕುಳಗಳನ್ನು ಹಿಡಿದೆತ್ತಿ, ಅವನ ಕಪೋಲವು ತನ್ನ ಪಕ್ಕಕ್ಕ ಉಜ್ಜುವಂತೆ ಒತ್ತಿ ಹಿಡಿಯುವ ಪಟ್ಟು ಅರ್ಧಾಂಗಕ. ಮೇಲೆ ಹೇಳಿದಂತೆ ಕೆಳಮುಖವಾಗಿ ಬಿದ್ದಿರುವ ಮಲ್ಲನು ಕಂಕುಳನ್ನು ಮೇಲೆತ್ತಿಕೊಂಡು, ತಲೆಯಲ್ಲಿ ಕೂರ್ಮಾಸನವನ್ನು ಹಾಕಿ ನಿಂತುಕೊಂಡರೆ ಆ ಪಟ್ಟು ಏಕ ಪಾದಕ. ಮೇಲ್ಮುಖವಾಗಿರುವ ಪ್ರತಿಸ್ಪರ್ಧಿ ಮಲ್ಲನ ಎರಡೂ ಕಾಲುಗಳನ್ನು ತಪ್ಪಿಸಿಕೊಂಡು, ಅವನ ಹೊಟ್ಟೆಯ ಮೇಲೆ ಕುಳಿತುಕೊಳ್ಳುವ ಪಟ್ಟು ಕರವಲ ಮಲ್ಲನು ತಾನೇ ಮೇಲ್ಮುಖವಾಗಿ ಬಿದ್ದಾಗ, ತನ್ನ ಹೊಟ್ಟೆಯ ಮೇಲೆ ಬಂದು ಕುಳಿತುಕೊಳ್ಳಲು ಯತ್ನಿಸುವ ಪ್ರತಿಮಲ್ಲನನ್ನು ಎರಡೂ ಕಾಲುಗಳ ಮಧ್ಯ ಸಿಕ್ಕಿಸಿಕೊಂಡು ಒತ್ತಿ ಹಿಡಿದರೆ ಆ ಪಟ್ಟ ಜಠರಸ್ಥಾನಿಕ. ಪ್ರತಸ್ಪರ್ಧಿ ಮಲ್ಲನು ಪರಾ ಙ್ಮುಖನಾಗಿದ್ದಾಗ (ಆಚೆಕಡೆ ಮುಖ ತಿರುಗಿಸಿ ಸಿಕ್ಕಿಬಿದ್ದಾಗ) ಅವನು ನಿಂತಿರಲಿ ಅಥವಾ ಕೆಳಗೆ ಬಿದ್ದಿರಲಿ, ಅವನ ಕಂಕುಳವನ್ನು ಎರಡೂ ಕಡೆಯಿಂದ ಆಕ್ರಮಿಸಿ ಹಿಡಿದ ಪಟ್ಟು ಪೃಷ್ಠ ಸ್ಥಾನಿಕ[೪೮] ಹೀಗೆ ಮೇಲೆ ಹೇಳಿದ ಪಟ್ಟಿಗಳಷ್ಟು ಹಾಕಿದ ಮೇಲೆ ಅದಕ್ಕೆ ಪ್ರತಿ ತಂತ್ರವಾಗಿ ಹೇಗೆ ತಪ್ಪಿಸಿಕೊಳ್ಳಬೇಕು ಎಂಬ ವಿವರಣೆಯನ್ನು ಮಾನಸೋಲ್ಲಾಸದಲ್ಲಿ ಕೊಡಲಾಗಿದೆ. ಆ ಪಟ್ಟಿಗಳ ಸ್ವರೂಪ, ಹೆಸರುಗಳನ್ನು ವಿಸ್ತಾರವಾಗಿ ನೋಡುವುದಾದರೆ ಶಿರಸ್ಥಾನಿಕ ಪಟ್ಟಿ ಅರ್ಧಾಂಗಕವೆಂಬ ಪಟ್ಟು ಹಾಕಿದ ಸ್ಥೂಲದೇಹವುಳ್ಳ ಮಲ್ಲನು ಪ್ರತಿಮಲ್ಲನ ಮುಖಕ್ಕೆ ಹಿಂಸೆಯಾಗುವಂತೆ ಒತ್ತಿ ಹಿಡಿದರೆ ಅದಕ್ಕೆ ಮುಖದೇಶ ವಿಜ್ಞಾನ ಎನ್ನುವರು.[೪೯] ಅರ್ಧಾಂಗಕವೆಂಬ ಪಟ್ಟು ಹಾಕಿ ಪ್ರತಿಮಲ್ಲ ಕಾಲನ್ನು ಹೊರಗೆಳೆಯುವಂತೆ ಮಾಡಿ ಹಿಂಸಿಸಿದರೆ ಅದು ಬಹಿಃ (ಬಹಿಪದ?) ಪಾದ ಮೋಟನ, ಶಿರಃಸ್ಥಾನಕವೆಂಬ ಪಟ್ಟನ್ನು ಹಾಕಿ, ಒಂದು ಕೈಯಿಂದ ಪ್ರತಿಮಲ್ಲನ ತಲೆಯನ್ನು ಬಿಗಿಯಾಗಿ ಹಿಡಿದು, ಇನ್ನೊಂದು ಕೈಯನ್ನು ಅವನ ಕೈಕೆಳಗೆ ಹಾಕಿ ಹಿಡಿದು, ಅದನ್ನು ಹೊರಭಾಗಕ್ಕೆ ತಿರುಗಿಸಿದರೆ ಅದು ಬಾಹು ಮೋಟವ, ಅದೇ ಕೈ ಮೇಲಕ್ಕೆ ಎತ್ತಿ ಬಗ್ಗಿಸಿದರೆ ಅದಕ್ಕೆ

ಬಾಹುಸೀ ಎನ್ನುತ್ತಾರೆ. ಕಾಲುಗಳಿಂದ ಭುಜಗಳನ್ನು ಒತ್ತಿ ಹಿಡಿದು ತಲೆಯ ಮಧ್ಯ ಸಿಕ್ಕಿಸಿ ಕುಕುಳ ಭುಜ ಸಹಿತವಾಗಿ ಕುತ್ತಿಗೆಯನ್ನು ಕಾಲಿನಿಂದ ಒತ್ತಿ ಹಿಡಿದು ಇನ್ನೊಂದು ಕಾಲಿನ ಮುಂಡಿಯಿಂದ ಅದನ್ನು ಮಧ್ಯೆ ಸಿಕ್ಕಿಸಿಕೊಂಡು ಪ್ರತಿಮಲ್ಲನನ್ನು ಮಣಿಸುವುದು 'ಉತ್ತರಘೋಂಕರ'

ತಲೆಯ ಮೇಲೆ ಕುಳಿತ ಮಲ್ಲನು ಪ್ರತಿಮಲ್ಲನನ್ನು ತಳ್ಳಲು ಕಾಲನ್ನು ಎತ್ತಿದಾಗ, ಆ ಕಾಲನ್ನು ಹಿಡಿದು ತನ್ನ ತೊಡೆಗಳ ಮಧ್ಯೆ ಸಿಕ್ಕಿಸಿಕೊಂಡು ತಿರುಚಿ, ಅವನ ಕಾಲಿನ ಹಿಮ್ಮಡಿಯನ್ನು ತನ್ನ ಕಂಕುಳಲ್ಲಿ ಹಿಡಿದು ಅವನ ಮಂಡಿಯನ್ನು ತನ್ನ ಸೊಂಟದ ಅದುಮುವಿಕೆಯಿಂದ ಪೀಡಿಸಿದರೆ ಅದು ಪಟ್ಟಿಶ. ಇದು ಪ್ರತಿಸ್ಪರ್ಧಿಯ ಮೊಳಕಾಲಿಗೆ ಹೆಚ್ಚಿನ ನೋವನ್ನು ಕೊಡುವುದರಿಂದ ಜಾನುಸಂಧಿ ಪ್ರಭಂಜನ ಎನ್ನಿಸುತ್ತದೆ. ಇದೇ ಪ್ರಕಾರದಿಂದ ಕೈಗಳ ಕೀಲನ್ನು ಒತ್ತಿ ಮಾಡುವ ಪೀಡೆಗೆ ಛಡುಕೀ ಎಂದು, ಪ್ರತಿಮಲ್ಲನ ಕತ್ತಿನ ಹಿಂಭಾಗವನ್ನು ಕಂಕುಳಲ್ಲಿ ಸಿಕ್ಕಿಸಿಕೊಂಡು ಕತ್ತನ್ನು ಮಣಿ ಬಂಧದಿಂದ ಒತ್ತಿ ಆ ಕೈಯನ್ನೂ ಇನ್ನೊಂದು ಕೈಯನ್ನೂ ಬಿಗಿಯಾಗಿ ಹಿಡಿದು ಎರಡೂ ತೊಡೆಗಳ ಮಧ್ಯೆ ಪ್ರತಿಸ್ಪರ್ಧಿಯ ಹೊಟ್ಟೆಯನ್ನು ಅದುಮಿದರೆ ಅದು ಪ್ರಾಣಘಾತಕವಾದ ಘೊಂಕರ. ಅರ್ಧಂಗ ಸ್ಥಾನಕವೆಂಬ ಪಟ್ಟು ಹಾಕಿ ನಿಂತು, ಎರಡು ತೋಳುಗಳಿಂದ ಸೊಂಟವನ್ನು ಎತ್ತಿ ಹಿಡಿದು ಪಕ್ಕೆಯಿಂದ ಕತ್ತನ್ನೂ ಕಂಕುಳ ಮತ್ತು ತೊಡೆಯನ್ನು ತನ್ನ ಕಾಲಿನಿಂದ ಒತ್ತಿದರೆ ಅದು ಸೊಂಟವನ್ನು ಮುರಿಯುವ ತುರ್ಯಷ್ಟಿ ಇವು ಹನ್ನೊಂದು ಶಿರಸ್ಥಾನಕ ಪಟ್ಟುಗಳು[೫೦] ಕರವಲ ಎಂಬ ಸ್ಥಾನಿಕಪಟ್ಟು ಹಾಕಿ ಪ್ರತಿಮಲ್ಲನ ಬಾಯಿಗೆ ತನ್ನ ಹೊಟ್ಟೆಯನ್ನೊತ್ತಿ ಅವನ ಶ್ವಾಸವೇ ನಿಲ್ಲುವ ಹಾಗೆ ಪೀಡಿಸಿದರೆ ಅದು ಉದ್ದವಡ. ಹಿಂದಿನಿಂದ ಹಾಗೆ ಮಾಡಿ ಎದೆಯಿಂದ ಒತ್ತಿ ಹಿಡಿದರೆ ಅದು ಮುಖಪಟ್ಟಿಕೆ. ಎರಡೂ ಕೈಗಳಿಂದ ಪ್ರತಿಮಲ್ಲನ ಬಾಯಿ ಮುಚ್ಚಿ ಒತ್ತಿ ಹಿಡಿಯುವುದು ಮುಸ್ತಿಕಾ. ಕರವಲವೆಂಬ ಪಟ್ಟು ಹಾಕಿ ನಿಂತು, ಪ್ರತಿಸ್ಪರ್ಧಿಯ ಮಣಿಬಂಧ ಮುರಿಯುವಂತೆ ಬಗ್ಗಿಸಿದರೆ ಅದು ಕೈ ಮುರಿಯುವಂಥ ಕುಟ್ಟಾನ. ಎರಡೂ ಕೈಗಳಿಂದ ಸೊಂಟ ಹಿಡಿದು ಪ್ರತಿಸ್ಪರ್ಧಿಯ ಕಾಲನ್ನು ತನ್ನ ಕಾಲಿನಿಂದ ಒಂದು ಕೈಯನ್ನು ಹಾಕಿ ಎರಡೂ ಕಾಲುಗಳಿಂದ ಅವನ ತೊಡೆಯನ್ನು ಒತ್ತಿ ಹಿಡಿದು ಲೋಲಪಾದಕ ಮಾಡಬೇಕು. ಜಠರ ಸ್ಥಾನಕವೆಂಬ ಪಟ್ಟು ಹಾಕಿ, ತನ್ನ ಕೈಗಳನ್ನು ಇಕ್ಕಳದಂತೆ ಮಾಡಿ, ಅವುಗಳಿಂದ ಪ್ರತಿಸ್ಪರ್ಧಿಯ ತೋಳನ್ನು ಬಗ್ಗಿಸಿ ನೋಯಿಸಿದರೆ ಅದಕ್ಕೆ ಸಂದೇಶ. ಕಾಲನ್ನು ಪ್ರತಿಸ್ಪರ್ಧಿಯ ಹಿಂಗತ್ತಿನ ಮೇಲಿಟ್ಟು ಮೊಳಕಾಲಿನಿಂದ ಒತ್ತಿ ಹಿಡಿದು ಜುಟ್ಟನ್ನು ಅಥವಾ ಕಂಕುಳನಿಂದ ಪೂರ್ವಭಾಗವನ್ನು ಎಳೆದು ಘೊಂಕಾರವನ್ನು ಮಾಡಬೇಕು. ಎರಡೂ ತೊಡೆಗಳಿಂದ ಪ್ರತಿಮಲ್ಲನ ಸೊಂಟವನ್ನು ಒತ್ತಿ ಹಿಡಿದು, ತನ್ನ ಎರಡು ಕಾಲುಗಳನ್ನು ಅವನ ಕಂಕುಳಗಳಲ್ಲಿ ಇಟ್ಟು ಕೈಗಳಿಂದ ಅವನ ಕಾಲುಗಳನ್ನು ಎಳೆದು ಪೀಡಿಸುವುದು ಜವಲ. ಶಂಖಕ ಜವಲ ಶಂಖದ ಹೋಲಿಕೆಯಲ್ಲೇ ಒಂದು ಕಾಲನ್ನು ಮಾತ್ರ ಎಳೆದು ಪೀಡಿಸಿದರೆ, ಅದು ಕಾಲನ್ನೇ ಮುರಿಯುವಂಥ ಕಕ್ಷವಡೆ. ಸೊಂಟ ಆಕ್ರಮಿಸಿ ನಿಂತಿರುವವನು ಎಲ್ಲ ಅಂಗಗಳನ್ನು ಪೀಡಿಸಿ ಕುಗ್ಗಿಸಿ ಅಂಗಗಳನ್ನು ಶ್ರಮಪಡಿಸಿದರೆ ಅದು ಸುಮಖೀ. ಎರಡು ತೊಡೆಗಳಿಂದ ಪ್ರತಿಸ್ಪರ್ಧಿಯ ಸೊಂಟ ಒತ್ತಿ ಅವನ ಕತ್ತಿನ ಹಿಂಭಾಗವನ್ನು ಕಂಕುಳ ಸಂಧಿಯಲ್ಲಿ ಸಿಕ್ಕಿಸಿಕೊಂಡು ಅದುಮಿ, ಕತ್ತು ಮುರಿಯುವಂತೆ ಪಿಡಿಸಿದರೆ ಅದು

ಗೂಢಾಂಗುಲಿ. ಪೃಷ್ಠಿಸ್ಥಾನಕವೆಂಬ ಪಟ್ಟು ಹಾಕಿ ತನ್ನ ಎರಡು ಕೈಗಳನ್ನು ಪ್ರತಿಮಲ್ಲನ ಕಂಕುಳಗಳೊಳಗೆ ತೂರಿಸಿ, ಅವನ ಹಿಂಗತ್ತಿನಲ್ಲಿ ಅವೆರಡನ್ನೂ ಜೋಡಿಸಿ ಪ್ರತಿಮಲ್ಲನ ತಲೆಯನ್ನು ಕೆಳಮುಖವಾಗಿ ಮಾಡಿ ಹಿಂಗತ್ತನ್ನೂ ಬಲವಾಗಿ ಒತ್ತಿ, ತೊಡೆಗಳಿಂದ ಅವನ ಸೊಂಟವನ್ನು ಅದುಮಿ ಗರುಡಪಕ್ಷಿವನ್ನು ಮಾಡಬೇಕು. ಕೆಳಮುಖನಾಗಿ ಬಿದ್ದ ಪ್ರತಿಮಲ್ಲನ ಮೊಳಕಾಲಿನ ಸಂಧಿಮಲ್ಲ ತನ್ನ ಕಾಲನ್ನು ಹಾಕಿ ಎದೆಯಿಂದ ಅವನ ಪಾದವನ್ನು ಅದುಮಿ ಪೀಡಿಸಿದರೆ ಅದು ಅಂಗವಲನ ತನ್ನ ಒಂದು ಕೈಯನ್ನು ಪ್ರತಿಮಲ್ಲನ ಕೈಗೆ ಜೋಡಿಸಿ ಹಿಡಿದು ಇನ್ನೊಂದು ಕೈಯಿಂದ ತಲೆಯ ಮೇಲು ಭಾಗವನ್ನು ಒತ್ತಿಹಿಡಿದು ಹಿಂದಕ್ಕೆ ಅದುಮುವುದಕ್ಕೆ ವಧ ವಿಜ್ಞಾನ. ಪ್ರತಿಮಲ್ಲನ ಕಾಲುಗಳು, ಕೈಗಳು ಮತ್ತು ತಲೆಯನ್ನು ಕಾಲುಗಳಿಂದ ಸುತ್ತಿ ಹಿಡಿದು ಒತ್ತುವುದಕ್ಕೆ ಡೋಕ್ಕರ ಎನ್ನುವರು.[೩೧] ಈ ರೀತಿಯಾಗಿ ಕುಸ್ತಿ ಪಟುವು ಹಲವು ಪಟ್ಟುಗಳನ್ನು ಗುರುವಿನ ಮುಖಾಂತರ ಕಲಿತು ಕುಸ್ತಿಯಲ್ಲಿ ಪ್ರಯೋಗ ಮಾಡಿ ಎದುರಾಳಿಯೋಂದಿಗೆ ಕಾದಾಡುತ್ತಿದ್ದರು. ತಳಪಟ್ಟು[೩೨] ಅಂದರೆ ಕೆಳಗಿನಿಂದ ಹಿಡಿಯುವ ಒಂದು ಪಟ್ಟು. ಜಡೆಯೆಂಬುದುಗೊರವಂಗೆ ತಟ್ಟೆಂಬುದು ಸವಣಂಗೆ ತಳಪಟ್ಟೆಂಬುದು ಹೊಲ್ವಂಗಲ್ಲದೆ ಕೊಲ್ವಗೆಲ್ವಗಲಿಗಂ ಬಿರುದುಗಮೇವುದು[೩೩] ಹೀಗೆ ಹಲವು ಪಟ್ಟುಗಳ ಮುಖಾಂತರ ಕುಸ್ತಿಯಾಡುತ್ತಿದ್ದರು.

ಅದೇ ರೀತಿ ಕುಸ್ತಿಯಲ್ಲಿ ಹಲವು ವಂಚನೋಪಾಯಗಳಿವೆ ಅಂದರೆ ಕುಸ್ತಿಯಾಡಬೇಕಾದರೆ ಎದುರಾಳಿಯನ್ನು ವಂಚನೆಗೋಳಿಸಿ ಸೋಲಿಸುವುದು ಮಾನಸೋಲ್ಲಾಸದಲ್ಲಿ ತಿಳಿಸಿರುವಂತೆ ಅವುಗಳನ್ನು ಈ ರೀತಿಯಾಗಿ ವಿವೇಚಿಸಲಾಗಿದೆ. ಛುಡುಕಿ ಎಂಬ ವಿಜ್ಞಾನವನ್ನು ಪ್ರತಿಮಲ್ಲನು ಪ್ರಯೋಗಿಸಿದಾಗ ಸರ್ರನೆ ತಿರುಗಿ ಅದನ್ನು ನಿವಾರಿಸಿ ಕೊಳ್ಳಬೇಕು ಅಥವಾ ಪ್ರತಿಮಲ್ಲನ ಮುಖದ ಮೇಲೆ ತನ್ನ ಕಾಲನ್ನು ಒತ್ತಿ, ತಾನು ಹೊರಗೆ ಬರಬೇಕು. ಪಟ್ಟಶ ಎಂಬ ಪಟ್ಟ ಪ್ರಯೊಗಿಸಿ ಪ್ರತಿಮಲ್ಲನು ಕಾಲುಗಳನ್ನು ಹಿಡಿದರೆ ತ್ರಿವೃತ್ತಿಯಿಂದ ಅದನ್ನು ತಪ್ಪಿಸಿಕೊಳ್ಳಬೇಕು. ಬಾಹುಮೋಟನ ಕೈಗಳನ್ನು ಹಿಂದಕ್ಕೆ ಅದುಮಿಟ್ಟು ತಂತ್ರ ಉಪಯೋಗಿಸಿದರೆ ತನ್ನ ಕೈಗಳೆರಡನ್ನೂ ಜೋಡಿಸಿ ಹಿಡಿದು ಅದರಿಂದ ತಪ್ಪಿಸಿಕೊಳ್ಳಬೇಕು ಪ್ರತಿಮಲ್ಲನು ತಲೆಯ ಮೇಲೆ ಏರಿ ಪಟ್ಟುಗಳನ್ನು ಹಾಕಲು ಯತ್ನಿಸಿದಾಗ ಎರಡೂ ಕೈಗಳಿಂದ ಬಲವಾಗಿ ಎತ್ತಿ ಎಸೆಯಬೇಕು. ಕರವಲವೆಂಬ ಪಟ್ಟನ್ನು ಪ್ರತಿಮಲ್ಲನು ಹಾಕಿದರೆ, ಹಿಂದಿನಿಂದ ಅವನ ಕಂಕುಳ ಸಂಧಿಯಲ್ಲಿ ಕಾಲಿನ ಹೆಬ್ಬೆರಳನ್ನು ತೂರಿಸಿ ಅವನನ್ನು ಹಿಂದಕ್ಕೆ ತಳ್ಳಬೇಕು ಹಾಗೆ ಮಾಡಲು ಅಸಾಧ್ಯವಾದರೆ ಅವನ ತೊಡೆಯನ್ನು ತನ್ನ ಎರಡು ತೊಡೆಗಳ ಮಧ್ಯ ಸಿಕ್ಕಿಸಿಕೊಂಡು ಅದುಮಿ ಹಿಡಿದು ಅವನು ಮತ್ತೆ ಏನನ್ನು ಮಾಡಲು ಆಗದಿರುವ ಹಾಗೆ ನಿಲ್ಲಿಸಬೇಕು. ಜಠರಸ್ಥಾನಕವೆಂಬ ಪಟ್ಟನ್ನು ಹಾಕಿ ಹೊಟ್ಟೆಯ ಮೇಲೆ ಕುಳಿತರೆ ಅವನ ಕಚ್ಚೆಯನ್ನು ಹಿಡಿಯ ಹಿಂದಕ್ಕೆ ನೂಕಿ, ಎರಡು ಮೊಣಕೈಗಳಿಂದ ಅವನನ್ನು ಪೀಡಿಸಿ ಒತ್ತಿ ಅವನ ತೊಡೆಗಳ ಹಿಡಿತ ಶಿಥಿಲವಾಗುವಂತೆ, ಮಾಡಿ ತನ್ನನ್ನು ಆ ಪಟ್ಟಿನಿಂದ ಬಡಿಸಿಕೊಳ್ಳಬೇಕು.[೩೪] ಹೀಗೆ ಎದುರಾಳಿ ಮಲ್ಲನನ್ನು ವಂಚಿಸಿ ತಂತ್ರಗಾರಿಕೆಯಿಂದ ಸೋಲಿಸುತ್ತಿದ್ದರು. ಹಾಗೆ ಗೋಣಿ ಜಟ್ಟಿಕಾಳಗದಲ್ಲಿ ಇದು ಒಂದು ರೀತಿಯ ವರಸೆ ಸಂದ ಕ್ಕೊಕ್ಕಸಗುಂಡು ಗೋಣೆಯುವಿಂದೆ ಪಟ್ಟ ಸುಚೇಣ ಪಟ್ಟವೆಂದೆನಿಪ ವಿಂದಾಣದಲಿ ಕಾದಿದರು ಜಟ್ಟಿಗಳು.[೩೫]

ಮಲ್ಲ ಅಥವಾ ಜಟ್ಟಿ ಎಂಬ ಪದವು ಸಾಹಿತ್ಯ ಮತ್ತು ಶಾಸನಗಳಲ್ಲಿ ಮತ್ತೆ ಮತ್ತೆ ಬಂದಿರುವುದನ್ನು ಗಮನಿಸಿದರೆ ಕುಸ್ತಿಯು ರಾಜ ಪರಿವಾರಕ್ಕೆ ಮತ್ತು ಜನ ಸಾಮಾನ್ಯರಿಗೆ ಮೆಚ್ಚುಗೆಯಾಗಿದ್ದುದು ಸ್ಪಷ್ಟವಾಗುತ್ತದೆ. ಅರಸರು ಅಹವಮಲ್ಲ, ವೀರಮಲ್ಲ, ತ್ರಿಭುವನಮಲ್ಲ ಈ ರೀತಿಯ ಹೆಸರುಗಳಿಂದ ಬಿರುದಾಂಕಿತರಾಗುತ್ತಿದ್ದರು.[೫೬] ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ಮಲ್ಲ ಪದವು ಬಲಾಢ್ಯತೆಯ ಸೂಚಕವಾಗಿ ಕರೆಯುತ್ತಿದ್ದರು. ಆಹವಮಲ್ಲ; ಕದನದಲ್ಲಿ ಕುಸ್ತಿಪಟು, ಜಟ್ಟಿ, ಯುದ್ಧದ ವೀರಾಳು, ಕೆಚ್ಚೆದೆಯುಳ್ಳವನು[೫೭] ಎಂಬರ್ಥಗಳಿವೆ.

ಮಲ್ಲ ಎಂಬ ಪದವು ಕಾಲಾನಂತರದಲ್ಲಿ ಬಲಾಢ್ಯತೆಯ ಸೂಚಕವಾಗಿ ಬಳಕೆಗೆ ಬಂತು ಅಖ್ಯಾನುಕಮಣಿಕೋಶ ಮುಷ್ಟಿ ಯುದ್ಧವನ್ನು ಉಲ್ಲೇಖಿಸುತ್ತದೆ ಮತ್ತು ಕುಸ್ತಿಯನ್ನು ಮಲ್ಲಯುದ್ಧವೆಂಬುದಾಗಿ ಬಳಸಿದೆ.[೫೮]

ಕನಕದಾಸರ ಮೋಹನತರಂಗಿಣಿಯಲ್ಲಿ ಕುಸ್ತಿಗೆ ಮುಷ್ಟಿಯುದ್ಧ, ವಜ್ರಮುಷ್ಟಿ ಎಂಬುದಾಗಿ ಕರೆದ ಉಲ್ಲೇಖಗಳಿವೆ.

ನೂತನ ವಿದ್ಯೆ ಸಿದ್ಧಿಸಿತೆಂದು ಖಳಮುನ
ಕೇತುವ ಕೊಂಡಾಡಿದನು
ಚೇತನಗೆಡದೆ ಮುಷ್ಟಿಕನಾಗಿ ನಿಲ್ಲೆಂ
ದಾತನ ಕರೆದು ಬೊಜ್ಜರೆದು[೫೯]

ಅಂದರೆ ಮಲ್ಲರು ಹೊಸ ತಂತ್ರಗಳನ್ನು ಕಲಿತಾಗ ಮುಷ್ಟಿಯುದ್ಧಕ್ಕೆ ತಯಾರಾಗಿದ್ದೇವೆ ಎಂದು ಕೂಗುತ್ತಿದ್ದರು.

ಪೆಟ್ಟಿಗೆ ಮೆಯ್ಗುಡದೆಡೆಗೆಯ್ಯಾಳೆಣೆದು ಬೊ
ಬ್ಬಟ್ಟಿದಿರಾಂತು ರಕ್ಕಸನೆ
ದಿಟ್ಟವಾಳಿಕೆಯ ವಂಚಿಸಿ ನೊಸಲೊಡೆವಂತೆ
ಹಟ್ಟಿದ ವಜ್ರಮುಷ್ಟಿಯಲ್ಲಿ[೬೦]

ಅಂದರೆ ಕುಸ್ತಿಯಾಡಬೇಕಾದರೆ ತಮ್ಮ ಮುಷ್ಟಿಯನ್ನು ಗಟ್ಟಿಯಾಗಿ ಮಾಡಿಕೊಂಡು ವಜ್ರಮುಷ್ಟಿಯಲ್ಲಿ ಎದುರಾಳಿಯನ್ನು ಹೇಗೆ ಬಂಧಿಸುತ್ತಿದ್ದರು ಎಂಬ ವಿವರವಿದೆ. ವಿಜಯನಗರ ಕಾಲದಲ್ಲಿ ಅರಸರು ಕುಸ್ತಿಪಟುಗಳಾಗಿದ್ದರು ಎಂಬುದಕ್ಕೆ ಪಾಯೇಸ್ ಕೊಡುವ ವರ್ಣನೆ ಹೀಗಿದೆ

ಕೃಷ್ಣದೇವರಾಯನ ಬೆಳಗಿನ ವ್ಯಾಯಾಮವನ್ನು ಕುರಿತು ರಾಜನು ನಿತ್ಯವೂ ಬೆಳಕು ಹರಿಯುವ ಮುನ್ನ ಸ್ವಲ್ಪ ಎಳ್ಳೆಣ್ಣೆಯನ್ನು ಕುಡಿದು ಮೈಗೂ ತಿಕ್ಕಿಕೊಳ್ಳುತ್ತಾನೆ. ಬಟ್ಟೆ ಬರೆಗಳನ್ನು ತೆಗೆದು ಬರೀ ಚಡ್ಡಿ ಹಾಕಿಕೊಂಡು ಬಹಳ ತೂಕದ ಮಣ್ಣಿನ ಗುಂಡುಗಳನ್ನು ಕೈಯಲ್ಲಿ ಎತ್ತಿ ಆಡಿಸಿ ಕಸರತ್ತು ಮಾಡುತ್ತಾನೆ. ಕತ್ತಿವರಸೆ ಮಾಡುತ್ತಾನೆ. ತನ್ನ ಜಟ್ಟಿಗಳಲ್ಲಿ ಒಬ್ಬನೊಡನೆ ಕುಸ್ತಿ ಮಾಡುತ್ತಾನೆ. ಈ ರೀತಿ ತಿಕ್ಕಿದ ಎಣ್ಣೆಯೆಲ್ಲಾ ಬೆವರಾಗಿ ಹೊರಗೆ ಬರುವವರೆಗೂ ಕಸರತ್ತು ಮಾಡುತ್ತಾನೆ. ನಂತರ ಮೈದಾನದಲ್ಲಿ ಬೆಳಕು ಹರಿಯುವರೆಗೂ ಕುದುರೆ ಸವಾರಿ ಮಾಡುತ್ತಾನೆ. ಆ ಮೇಲೆ ಸ್ನಾನ ಮಾಡುತ್ತಾನೆ.[೬೧] ಕುಸ್ತಿ ಕಸರತ್ತು ಮಾಡಬೇಕಾದರೆ ಬಳಸುವ ಪರಿಕರಗಳು

ಹಂಪಿಯ ಬಳಿಯಿರುವ ಕಮಲಾಪುರ ಮ್ಯೂಸಿಯಂನಲ್ಲಿ ಇರುವುದನ್ನು ಗಮನಿಸಬಹುದು .ಹಾಗೆಯೇ ಹೊಸಪೇಟೆ, ಚಿತ್ರದುರ್ಗ ಇತ್ಯಾದಿಗಳಲ್ಲಿ ಇಂದಿಗೂ ಗರಡಿಮನೆಗಳಿವೆ.

ಅಂದು ಪ್ರಸಿದ್ಧಿ ಪಡೆದ ಹಬ್ಬಗಳಲ್ಲಿ ಮಹಾನವಮಿ ಉತ್ಸವವೂ ಒಂದು. ಇಂಥ ಉತ್ಸವದ ಪ್ರಮುಖ ಆಕರ್ಷಣೆಯಾಗಿ ಕುಸ್ತಿ ಪಂದ್ಯಗಳು ಏರ್ಪಡುತ್ತಿದ್ದವು. ಆ ಉತ್ಸವದಲ್ಲಿ ಎಂಥ ವಿಚಿತ್ರವಾದ ಕುಸ್ತಿ ಪಂದ್ಯಗಳೂ ಏರ್ಪಡುತ್ತಿದ್ದವು ಎಂಬುದಕ್ಕೆ ವಿದೇಶಿ ಪ್ರವಾಸಿಕೊಡುವ ವರ್ಣನೆ ಹೀಗಿದೆ. ಅವರ ಕುಸ್ತಿ ನಮ್ಮದರಂತೆ ತೋರುವುದಿಲ್ಲ ಅಂದರೆ ಹಲ್ಲು ಮುರಿಯುವಂಥ, ಕಣ್ಣು ಕೀಳುವಂಥ, ಮುಖ ವಿಕಾರಗೊಳಿಸುವಂಥ ಬಲವಾದ ಏಟುಗಳನ್ನು ಕೊಡಲಾಗುತ್ತದೆ. ಅವು ಎಷ್ಟು ತೀವ್ರವಾಗಿರುತ್ತವೆಂದರೆ ಆಗೊಮ್ಮೆ, ಈಗೊಮ್ಮೆ ಮಾತು ಕಟ್ಟಿ ಹೋದ ಕೆಲವರನ್ನು ಅವರ ಮಿತ್ರರು ಹೊತ್ತೊಯ್ಯುತ್ತಾರೆ. ಅವರು ಒಬ್ಬರನ್ನೊಬ್ಬರು ಒಗೆಯುತ್ತಾರೆ, ಅವರಿಗೆ ತಮ್ಮ ಮುಖಂಡರು ತೀರ್ಪುಗಾರರಿರುತ್ತಾರೆ. ಅವರು ಕಣದಲ್ಲಿ ಎಲ್ಲರನ್ನು ಒಂದೇ ಸಮನಾಗಿ ನೋಡಿಕೊಳ್ಳುತ್ತಾರೆ ಮತ್ತು ಗೆದ್ದವರನ್ನು ಸತ್ಕರಿಸುತ್ತಾರೆ.[೬೨] ಅಂದರೆ ಇವರ ಕುಸ್ತಿ ಎಷ್ಟು ಕಠೋರವಾಗಿರುತ್ತಿತ್ತು ಎಂಬುದು ಅಂದಿನ ಶಿಲ್ಪಗಳಲ್ಲಿ ವ್ಯಕ್ತವಾಗಿದೆ. ಮಹಾನವಮಿ ದಿಬ್ಬ, ಹಜಾರರಾಮಚಂದ್ರ ದೇವಾಲಯದ ಉತ್ತರದ ಭಿತ್ತಿಯಲ್ಲಿ. ಹಿಂದಿನ ಭಿತ್ತಿಯಲ್ಲಿ, ಅಕ್ಕ ತಂಗಿ ಗುಂಡಿನ ಹಿಂದಿರುವ ಆವರಣದಲ್ಲಿಯ ಶಿಲ್ಪಗಳನ್ನು ಗಮನಿಸಬಹುದು. ಅಂದು ಯಾವ ರೀತಿಯಲ್ಲಿ ಕುಸ್ತಿಯನ್ನಾಡುತ್ತಿದ್ದರು ಎಂದು ಸಾಹಿತ್ಯ ಕೃತಿಗಳ ಉಲ್ಲೇಖ ನೋಡುವುದಾದರೆ. ಅವರ ಹೋರಾಟದ ವೈಖರಿ ಹೀಗಿದೆ: ಜಟ್ಟಿಗಳುಬ್ಬಿ ಭೋಯಿದಾಯ್ದು (ಪಾರಾಂತರ–ಕೋಯಿದಾಲ್ದು) ಖೋಯಂದಾರ್ದು(?) ಭುಜಗಳ ತಟ್ಟಕೊಂಡಡೆಯ ಜೀಯೆಂದು ಥಟಪಟ್ಟನೆ ತಿವಿದರೊಬ್ಬರು ತೆಗೆದಿಟ್ಟಾಡಿ ಕಡೆದರತ್ತಿತ್ತೆ.[೬೩] ಅದೇ ರೀತಿ ಚಾಟು ವಿಠಲನಾಥ ಕೊಡುವ ಮಲ್ಲಯುದ್ಧದ ವರ್ಣನೆ ತಳವ ತಳದಲ್ಲಿ ಹೊಯ್ದು ಭುಜಮಂಡಲವನಾಸ್ಫೋಟಿಸಿ ಪರಸ್ಪರ ಲಲಿತಕರಜಾನೂರು ಪಾದದ್ವಿತೆಯ ಬದ್ಧದಲಿ ತಳಸಿ ತೊಡರವ ಬೀಸಿ ಬಿಸುಡುವ ನಿಲುವ ನಿಂದಡಿಯಿಂದ ಬಲಿಸುವ ಹಲವು ಪರಿಯಲಿ ಹಳ ತಿವಿದಾಡಿದರು ಪಟುಭಟರು.[೬೪]

ಕತ್ತಿವರಸೆ ಮತ್ತು ದ್ವಂದ್ವ ಯುದ್ಧ ವಿಜಯನಗರ ಕಾಲದಲ್ಲಿ ದೊಡ್ಡ ಮಟ್ಟದಲ್ಲಿ ನಡೆಯುತ್ತಿದ್ದವು. ತನ್ನ ಹಿಸ್ಟರಿ ಆಫ್ ಪೋರ್ಚ್‌ಗಲ್ ಕೃತಿಯಲ್ಲಿ ಕಾಸ್ಟನ್ ಹೆಡಾನು ಅಂದಿನ ದ್ವಂದ್ವ ಯುದ್ಧದ ಬಗ್ಗೆ ಹೇಳಿದ್ದಾನೆ. ಅವನು ಹೀಗೆ ಬರೆಯುತ್ತಾನೆ. ಹೆಂಗಳೆಯರ ಮೇಲಿನ ಪ್ರೀತಿಯ ಕಾರಣಕ್ಕೆ ಹಲವು ಬಾರಿ ದ್ವಂದ್ವ ಯುದ್ಧಗಳು ನಡೆದು ಹಲವರು ಜೀವ ಕಳೆದುಕೊಳ್ಳುತ್ತಿದ್ದರು. ಕಾದಾಡುವವರು ರಾಜನ ಬಳಿ ಕಾದಾಟದ ಜಾಗಕ್ಕಾಗಿ ವಿನಂತಿಸಿಕೊಳ್ಳುತ್ತಿದ್ದರು. ಅದನ್ನು ರಾಜ ಅನುಮತಿಯನ್ನು ಸಹಾಯಕರೊಂದಿಗೆ ಕೊಡುತ್ತಿದ್ದ. ಅವರು ಮೇಲುಸ್ಥಾನದವರಾಗಿದ್ದರೆ ರಾಜನೂ ನೋಡಲು ಹೋಗುತ್ತಿದ್ದ, ಮೈದಾನದ ಸುತ್ತ ಮೆಟ್ಟಿಲುಗಳಿದ್ದು ಅವನ್ನು ಇಳಿದು ಟೂಂಕವಸ್ತ್ರ ಹೊರತುಪಡಿಸಿ ಅರೆ ಬೆತ್ತಲೆಯಾಗಿ ಬರಿಗಾಲಲ್ಲಿ ಕಾದಾಡುತ್ತಿದ್ದರು. ಸಹಾಯಕರು ಮತ್ತು ತೀರ್ಪುಗಾರರಿರುತ್ತಿದ್ದರು. ಕಾದಾಟದಲ್ಲಿ ಯಾರು ಅದ್ಭುತ ಪ್ರದರ್ಶನ ತೋರಿ ಗಂಡುಗಲಿಯಾಗಿರುತ್ತಿದ್ದನೋ ಅವನಿಗೆ ರಾಜನು ಮೆಚ್ಚುಗೆಯಿಂದ ಬಂಗಾರದ ಕಡಗವನ್ನು ಬಲ ತೋಳುಗಳಿಗೆ ಕಟ್ಟಿಕೊಳ್ಳಲು ಆಜ್ಞಾಪಿಸುತ್ತಾನೆ, ಅದು ಅವನು

ಅತಿ ಬಲಿಷ್ಠ ಎಂಬುದರ ಕುರುಹಾಗಿರುತ್ತಿತ್ತು. ಯಾರೇ ಆ ರೀತಿಯ ಸನ್ಮಾನವನ್ನು ಬಯಸಿ ಬಂದರೂ ಅವನನ್ನು ಸೋಲಿಸಬೇಕಿತ್ತು, ಗೆದ್ದವನು ಅದನ್ನು ತನ್ನಲ್ಲೆ ಉಳಿಸಿಕೊಳ್ಳಬೇಕೆಂದರೆ ಕಾದಾಡಬೇಕಿತ್ತು.[೬೫]

ಕಾಸ್ಟನ್ ಹೆಡಾನ ಮೇಲಿನ ವಿಚಾರಗಳೊಂದಿಗೆ ಭಟ್ಕಳದ ಘಟನೆಗಳ ಬಗೆಗಿನ ಬಾರ್ಬೊಸಾನ ವಿವರಗಳನ್ನು ಹೋಲಿಸಬಹುದು. ಮಾತೆತ್ತಿದರೆ ಒಬ್ಬರಿಗೊಬ್ಬರು ಸವಾಲು ಹಾಕುತ್ತಾರೆ. ಆಗ ರಾಜ ಅವರನ್ನು ದ್ವಂದ್ವ ಯುದ್ಧಕ್ಕೆ ಒಡ್ಡುತ್ತಾನೆ. ಅವರಿಗೆ ಸಹಾಯಕರಾಗಿ ದ್ವಿತೀಯರೂ ಇರುತ್ತಾರೆ. ನಿರ್ಧಾರವಾದ ದಿನ ಹೋರಾಳುಗಳೂ ಚೆಡ್ಡಿ ಧರಿಸಿ ನಗು ಮುಖದಿಂದ ಅಖಾಡಕ್ಕೆ ಇಳಿಯುತ್ತಾರೆ. ರಾಜರೂ ಅವನ ಪರಿವಾರವೂ ಈ ಯುದ್ಧವನ್ನು ನೋಡಲು ನೆರೆಯುತ್ತಾರೆ. ಹೋರಾಳುಗಳೂ ತಮ್ಮ ಇಷ್ಟ ದೇವರನ್ನು ಪ್ರಾರ್ಥಿಸಿದ ಮೇಲೆ ಕುಸ್ತಿ ಪ್ರಾರಂಭಿಸುತ್ತಾನೆ. ಅವರು ಬರೀ ಮೈಯಲ್ಲಿರುವುದರಿಂದ ಕೆಲವು ಏಟುಗಳಲ್ಲಿ ಕದನ ಮುಕ್ತಯವಾಗುತ್ತದೆ. ಅಲ್ಲಿ ದ್ವಿತೀಯನನ್ನು ಬಿಟ್ಟರೆ ಯಾರೂ ಮಾತನಾಡುವ ಹಾಗಿಲ್ಲ ಅವರು ಮಾತ್ರ ಕುಸ್ತಿಪಟುಗಳನ್ನು ಹುರಿದುಂಬಿಸುತ್ತಿರುತ್ತಾರೆ. ಅವರಿಗೆ ಇದು ಸಾಮಾನ್ಯವಾಗಿದ್ದು ನಿತ್ಯವೂ ಈ ರೀತಿಯ ಕದನ ನಡೆಯುತ್ತವೆ.[೬೬]

ವಿಜಯನಗರ ಕಾಲದಲ್ಲಿ ಈ ರೀತಿಯ ದ್ವಂದ್ವಯುದ್ಧ ಪ್ರಖ್ಯಾತಿಯನ್ನು ಪಡೆದಿತ್ತು ಎಂಬುದಕ್ಕೆ ಮತ್ತೊಂದು ಸಾಹಿತ್ಯಿಕ ದಾಖಲೆ ನೋಡುವುದಾದರೆ ಮಾನಸೋಲ್ಲಾಸದಲ್ಲಿ ಈ ಬಗೆಯ ಕುಸ್ತಿಗೆ ಯಾವ ರೀತಿಯ ಮಲ್ಲರನ್ನು ಯೋಜಿಸಬೇಕು ಇತ್ಯಾದಿ ವಿವರಗಳಿವೆ.

ರಾಜನು ಸಮನಾದ ಶರೀರ, ವಯಸ್ಕರಿಗೆ ಹಾಗೂ ಬಲವುಳ್ಳವರನ್ನು ದ್ವಂದ್ವಯುದ್ಧಕ್ಕೆ ನಿಯೋಜಿಸಬೇಕು. ಅವರು ಭುಜಗಳನ್ನು ಕೈಗಳಿಂದ ತಟ್ಟಿಕೊಂಡು ತಮ್ಮ ತಮ್ಮ ಪ್ರತಿಜ್ಞೆಗಳನ್ನು ಹೇಳುತ್ತಾರೆ. ದೇವ ಒಂದೇ ಘಳಿಗೆಯೊಳಗೆ ಪ್ರತಿಸ್ಪರ್ಧಿಯನ್ನು ಬಗ್ಗಿಸುತ್ತೇನೆ. ಒಟ್ಟಿಗೆ ಇಬ್ಬರು ಮಲ್ಲರನ್ನು ಬೀಳಿಸುತ್ತೇನೆ. ಮೂರು ಜನ ಮಲ್ಲರನ್ನು ಪುಡಿಗಟ್ಟುತ್ತೇನೆ ಒಂದೇ ತಂತ್ರ ಬಳಸಿ ಬೀಳಿಸುತ್ತೇನೆ. ಇತ್ಯಾದಿಯಾಗಿ ಪ್ರತಿಜ್ಞೆ ಮಾಡುತ್ತಾರೆ. ಅಂದರೆ ಅಂದು ಒಬ್ಬ ಕುಸ್ತಿಪಟು ಇಬ್ಬರು ಮೂವರೊಂದಿಗೆ ಕುಸ್ತಿಯಾಡುತ್ತಿದ್ದ ಶಿಲ್ಪಗಳಿವೆ. ಗೊರಂಟ್ಲದ ಮಾದವರಾಯ ದೇವಸ್ಥಾನಾದ ಮುಖ ಮಂಟಪದ ಒಂದನೆಯ ಕಂಬದ ದಕ್ಷಿಣಾಭಿಮುಖವಾಗಿ ಮಧ್ಯಪಟ್ಟಿಕೆಯಲ್ಲಿ ಕುಸ್ತಿಯ ಶಿಲ್ಪವಿದೆ. ಇದರಲ್ಲಿ ಒಬ್ಬ ಜಟ್ಟಿ ಮೂವರು ಚಟ್ಟಿಗಳನ್ನು ಎಡಗೈ, ಬಲಗೈ, ಕಾಲುಗಳ ಸಂಧಿಯಿಂದ ಬಿಗಿಪಟ್ಟುವಿನಲ್ಲಿ ಹಿಡಿದಿರುವನು ಮೂವರು ಜಟ್ಟಿಗಳ ಮೇಲೆ ಒಬ್ಬ ಕುಸ್ತಿಯಾಡುತ್ತಿದ್ದಾನೆ. ಅಂದು ಕುಸ್ತಿಯು ನಾನಾವಿಧಗಳಲ್ಲಿ ನಡೆಯುತ್ತಿತ್ತು ಎಂಬುದಕ್ಕೆ ದಾಖಲೆಯಾಗಿದೆ. ಸಾಮ್ಯಾನವಾಗಿ ಕುಸ್ತಿಯನ್ನು ಇಬ್ಬರ ನಡುವೆ ನಡೆಸಲಾಗುತ್ತದೆ. ವಿಜಯನಗರ ಕಾಲದಲ್ಲಿ ಕುಸ್ತಿಯನ್ನು ಮೂವರು ನಾಲ್ಕು ಜಟ್ಟಿಗಳೊಂದಿಗೆ ಆಡುತ್ತಿದ್ದರು ಇದರಿಂದ ತಿಳಿಯುತ್ತದೆ. ಕುಸ್ತಿಪಟುಗಳು ಸಾಮಾನ್ಯವಾಗಿ ಲಗೋಟಿಯನ್ನು ಮಾತ್ರಧರಿಸಿರುವರು ಆದರೆ ಇಲ್ಲಿ ತೋಳಬಂದಿಹಾಕಿರುವುದು ವಿಶೇಷವಾಗಿದೆ.

ಅಂದು ಮಹಿಳೆಗೆ ತನ್ನದೆ ಆದ ಸ್ಥಾನಮಾನಗಳಿದ್ದವು ಸ್ತ್ರೀಯರು ಕುಸ್ತಿಯಲ್ಲಿ ಪಾಲ್ಗೊಳ್ಳುತ್ತಿದ್ದರು ಹಾಗೂ ಪುರುಷರ ಜೊತೆ ಕುಸ್ತಿಯಾಡುತ್ತಿದ್ದಳು ಎಂಬುದಕ್ಕೆ ದಾಖಲೆಗಳಿವೆ. ಅಂದು ಅತ್ಯಂತ ಜನಪ್ರೀಯ ಕ್ರೀಡೆ ಕುಸ್ತಿ. ಶ್ರೀಕೃಷ್ಣದೇವರಾಯನ ಕಾಲದಲ್ಲಿ ಮಹಿಳಾ ಕುಸ್ತಿಪಟುಗಳಿದ್ದರು ಎಂಬುದು ಸೋಜಿಗದ ಸಂಗತಿ. ಶ್ರೀ ಕೃಷ್ಣದೇವರಾಯನಿಗಿಂತ ಮೊದಲೇ ಮಹಿಳಾ ಕುಸ್ತಿ ಪಟುಗಳಿದ್ದ ದಾಖಲೆಗಳು ಕ್ರಿ.ಶ. ೧೪೪೬ಕ್ಕೆ ಸೇರಿದ ಶಾಸನದಲ್ಲಿ ನಾಗನಗೌಡ ನ ಮಗ ಮಾದಿಗೌಡ ಕುಸ್ತಿಯಾಡುತ್ತಲೆ ಮರಣ ಹೊಂದಿದ. ಆತನ ಮಗಳು ಹರಿಯಕ್ಕ ತನ್ನ ತಂದೆಯನ್ನು ಕೊಂದ ಕುಸ್ತಿಪಟುವಿನ ಜೊತೆ ಸ್ವತಃ ತಾನೆ ಕುಸ್ತಿಗೆ ನಿಂತು ಸೇಡು ತೀರಿಸಿಕೊಳ್ಳಲು ಬಯಸಿದಳು. ಕುಸ್ತಿಯಾಡುವಾಗ ಆಕೆಯೂ ಮರಣ ಹೊಂದಿದಳು. ಈ ಘಟನೆಗೆ ಸಂಬಂಧಿಸಿದ ವೀರಗಲ್ಲನ್ನು ಅವರ ಚಿಕ್ಕಪ್ಪ ಚೆನ್ನ ಕೆತ್ತಿಸಿ ನಿಲ್ಲಿಸಿದ. ಇದರಲ್ಲಿ ಹರಿಯಕ್ಕ ಒಬ್ಬ ಕುಸ್ತಿಪಟುವಿನ ಜುಟ್ಟು ಹಿಡಿದು ಬಲಗೈಲಿ ಆತನನ್ನು ಇರಿಯುವಂತೆ ಕೆತ್ತಲಾಗಿದೆ.[೬೬] ಇದರಿಂದ ಹರಿಯಕ್ಕ ಆಗಿನ ಕಾಲದ ಖ್ಯಾತ ಮಹಿಳಾ ಕುಸ್ತಿ ಪಟು ಮಹಿಳೆ ಆಗಿದ್ದಳು ಎಂದು ಹೇಳಬಹುದು. ಪ್ರಸಂಗ ದುರಂತಮಯವಾಗಿದ್ದರೂ ಇದು ವಿಜಯನಗರ ಕಾಲದಲ್ಲಿ ಮಹಿಳೆಯರಿಗೆ ಸಿಕ್ಕ ಮಾನ್ಯತೆ ಹಾಗೂ ಪ್ರಾಶಸ್ತ್ಯಗಳ ಕುರುಹು ಆಗಿದೆ. ಅದೇ ರೀತಿ ಅನೇಕ ಶಿಲ್ಪಗಳಲ್ಲಿ ಸ್ತ್ರೀಯರು ಕುಸ್ತಿಯಾಡಿದ ಕುರುಹುಗಳಿವೆ. ಪೂರ್ವಭಿಮುಖವಾಗಿರುವ ಪೆನುಗೊಂಡದ ರಾಮಭದ್ರ ದೇವಾಲಯದ ಮುಂಭಾಗದ ಎಡಬಿತ್ತಿಯಲ್ಲಿ ಸ್ತ್ರೀ ಕುಸ್ತಿಯ ಶಿಲ್ಪವಿದೆ. ಶಿಲ್ಪದಲ್ಲಿ ಇಬ್ಬರು ಸ್ತ್ರೀ ಜಟ್ಟಿಗಳು ಇಬ್ಬರು ಪುರುಷರೊಂದಿಗೆ ಸೆಣೆಸಾಡುವಂತಿದೆ. ಮತ್ತೊಬ್ಬ ಜಟ್ಟಿ ಅದನ್ನು ವೀಕ್ಷಿಸುತ್ತಿದ್ದಾನೆ. ಮತ್ತೊಂದು ಶಿಲ್ಪದಲ್ಲಿ ಸ್ತ್ರೀಯು ಪುರುಷನ ತಲೆಯನ್ನು ಹಿಡಿದು ಕೆಳಗೆ ಬಾಗಿಸಿರುವಂತಿದೆ. ಮತ್ತೊಂದರಲ್ಲಿ ಸ್ತ್ರೀಯು ಪುರುಷನ ತಲೆಯನ್ನು ಹಿಡಿದು ಕೆಳಗೆ ಬಾಗಿಸಿರುವಂತಿದೆ. ಮತ್ತೊಂದರಲ್ಲಿ ಸ್ತ್ರೀಯು ತನ್ನ ಬಲ ತೋಳತೆಕ್ಕೆಯಲ್ಲಿ ಪುರುಷನನ್ನು ಬಂಧಿಸಿ ಎಡಗೈಯಿಂದ ತಿವಿಯುತ್ತಿದ್ದಾಳೆ. ಪುರುಷ ಜಟ್ಟಿಗಳು ಲಂಗೋಟಿಯನ್ನು ಮಾತ್ರ ತೊಟ್ಟಿರುವು. ಸ್ತ್ರೀ ಜಟ್ಟಿಗಳು ಉದ್ದನೆಯ ಕೂದಲು ಬಿಟ್ಟುಕೊಂಡು ಕಿವಿಯೊಲೆ, ಕೈಬಳೆ, ಕೊರಳಹಾರ, ಕಟಿಸೂತ್ರವನ್ನು ಹಾಕಿ ಮೊಳಕಾಲವರೆಗೆ ನೆರಿಗೆಯುಳ್ಳ ವಸ್ತ್ರವನ್ನುಟ್ಟಿರುವರು. ತಾಡಪತ್ರಿಯ ಚಿಂತಾಲವೆಂಕಟರಮಣ ದೇವಾಲಯದ ಬಲಬಿತ್ತಿಯಲ್ಲಿ ಸ್ತ್ರೀ ಕುಸ್ತಿಪಟುಗಳು ಕುಸ್ತಿಯಾಡುತ್ತಿರುವ ಶಿಲ್ಪವಿದೆ. ಇದರಲ್ಲಿ ಇಬ್ಬರು ಸ್ತ್ರೀ ಜಟ್ಟಿಗಳಲ್ಲಿ ಒಬ್ಬಳು ಇನ್ನೊಬ್ಬಳ ಕತ್ತನ್ನು ತನ್ನ ಬಲಗೈಯಿಂದ ಹಿಡಿದು ಕೊಂಡಿರುವಳು. ಮತ್ತೊಬ್ಬಳು ಅವಳ ನಡುವನ್ನು ಹಿಡಿದಿದ್ದಾಳೆ. ಅವರು ಭುಜಬಂಧಿ, ತೊಳಬಂದಿ, ಕೈಕಡಗಗಳನ್ನು ಧರಿಸಿರುವರು. ಇಂದು ವಿವಿಧ ಭಾಗಗಳಲ್ಲಿ ನಾಡ (ಮಣ್ಣಲ್ಲಿ ಆಡುವುದು) ಕುಸ್ತಿಯಲ್ಲಿ ಪುರುಷರನ್ನು ಪುರಷನೊಂದಿಗೆ ಮಾತ್ರ ಆಡಿಸಲಾಗುತ್ತದೆ. ಪಾಯಿಂಟ್ ಕುಸ್ತಿಯಲ್ಲಿ ಸ್ತ್ರಿಯನ್ನು ಸ್ತ್ರೀಯೊಂದಿಗೆ ಮಾತ್ರ ಆಡಿಸಲಾಗುತ್ತದೆ. ವಿಜಯನಗರ ಅವಧಿಯಲ್ಲಿ ಸ್ತ್ರೀಯು ಪುರುಷನೊಂದಿಗೆ ಕುಸ್ತಿಯಾಡಿದ ಉದಾಹರಣೆ ಶಾಸನ, ಶಿಲ್ಪಗಳಿಂದ ದೃಢಪಡಿಸಬಹುದು.

ಹಾಗೆ ಇವರು ಅರಮನೆಯ ಕೆಲಸದಲ್ಲಿಯೆ ಇರುತ್ತಿದ್ದರು ಎಂಬುದು ಅರಮನೆಯ ಒಳಗಡೆ ಹನ್ನೆರಡು ಸಾವಿರ ಸ್ತ್ರೀಯರಿದ್ದಾರೆ. ಅಲ್ಲಿ ಕತ್ತಿ ಗುರಾಣಿ ಹಿಡಿಯುವ, ಕುಸ್ತಿ,

ಆಡುವವರು ಇದ್ದಾರೆ.[೬೮] ಈ ಎಲ್ಲಾ ಅಂಶಗಳಿಂದ ಅಂದು ಸ್ತ್ರೀಯು ಪ್ರತಿಯೊಂದು ರಂಗದಲ್ಲಿ ತನ್ನ ಛಾಪನ್ನು ಮೂಡಿಸಿದ್ದಳು ಎಂದು ತಿಳಿಯಬಹುದು.

ವಜ್ರಮುಷ್ಠಿ ಕಾಳಗ

ಈ ರೀತಿಯ ಕುಸ್ತಿಯನ್ನು ನಾವು ವಿಜಯನಗರ ಕಾಲದಲ್ಲಿ ದ್ವಂದ್ವ ಯುದ್ಧ ಎಂದು ಉಲ್ಲೇಖಿಸಿದೆ. ಇದು ಕುಸ್ತಿಗೆ ಸಾಮಿಪ್ಯವೆನಿಸುತ್ತಿದೆ. ವಜ್ರಮುಷ್ಠಿ ಕಾಳಗದಲ್ಲಿ ದೇಹದ ಶಕ್ತಿಯ ಸಮರ್ಪಕ ಬಳಕೆ ಮತ್ತು ಸೂಕ್ಷ್ಮ ತಂತ್ರಗಳೇ ಈ ಕಾಳಗದ ಜೀವಾಳ ಇಲ್ಲಿ ವಜ್ರನಖ ಎಂಬ ಚೂಪಾದ ಆಯುಧವನ್ನು ಮುಷ್ಠಿಗೆ ಕಟ್ಟಕೊಂಡು ಸೆಣಸಾಡುತ್ತಾರೆ. ಹುರಿಗಟ್ಟಿದ ದೇಹದ ಈ ಜಟ್ಟಿಗಳು ನುಣ್ಣಗೆ ತಲೆಯನ್ನು ಬೋಳಿಸಿಕೊಂಡಿರುತ್ತಾರೆ. ಹೂವು ಹಾಕಿ ಪೂಜಿಸಿದ ಮಟ್ಟಿಯ ಮೇಲೆ ಇದು ನಡೆಯುತ್ತದೆ. ಇವರು ಆಡುವ ಕುಸ್ತಿಯು ಮಾಮೂಲಿನಂತೆ ಇರುವುದಿಲ್ಲ. ಇಲ್ಲಿ ಇವರು ಪರಸ್ಪರ ಕಾದಾಡುವ ರೀತಿ ಅತ್ಯಂತ ಭೀಕರ, ಮುಷ್ಠಿ ಪ್ರಹಾರಗಳು ಶಕ್ತಿಶಾಲಿಯಾಗಿರುತ್ತವೆ. ಮುಖದ ಆಕಾರ ಬದಲಿಸಿ ಬಿಡುವಷ್ಟು ಬಲಯುತವಾಗಿರುತ್ತವೆ, ದವಡೆ, ಕಣ್ಣು ಮೂಗುಗಳೂ ಉದುರಿ ಬೀಳುವಂತೆ ಕಾದಾಡುತ್ತಾರೆ. ಫಲಿತಾಂಶದ ನಂತರ ಪರಸ್ಪರರನ್ನು ಗೌರವದಿಂದಲೇ ಅಭಿನಂದಿಸುತ್ತಾರೆ ಎಂದು ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದ ಪೋರ್ಚಗೀಸ್ ಪ್ರವಾಸಿಗ ಡೊಮಿಂಗೊ ಪಾಯೇಸ್ ವಜ್ರಮುಷ್ಠಿ ಕಾಳಗವನ್ನು ವ್ಯಾಖ್ಯಾನಿಸಿರುವ ಪರಿ ಇದು.[೬೯]

ವಜ್ರಮುಷ್ಠಿ ಕಾಳಗದಲ್ಲಿ ಜಟ್ಟಿಗಳು ಧರಿಸುವ ವಜ್ರನಖಗಳೂ ವಿಶಿಷ್ಟ, ಅವುಗಳನ್ನು ಆನೆ ದಂತದಿಂದ ತಯಾರಿಸುತ್ತಿದ್ದರು. ಮುಷ್ಠಿಯ ನಾಲ್ಕು ಬೆರಳುಗಳಿಗೆ ಹಾಕುವಂತೆ ತಯಾರಿಸಲಾಗುತ್ತಿತ್ತು. ನಂತರ ಅವುಗಳನ್ನು ಕಬ್ಬಿಣದಲ್ಲಿ ತಯಾರಿಸುತ್ತಿದ್ದರು. ಪ್ರಾಣಿಗಳ ಕೊಂಬಿನಿಂದ ಸಹ ತಯಾರು ಮಾಡುತ್ತಾರೆ. ಅಭ್ಯಾಸ ಮಾಡುವಾಗ ಮಾತ್ರ ಮರದಿಂದ ತಯಾರಿಸಿದ ನಖಗಳನ್ನು ಧರಿಸಿರುತ್ತಾರೆ. ಇದರ ಮುಂದಿನ ತುದಿಗಳು ಉಗುರಿನಂತೆ ಚೂಪಾಗಿರುತ್ತವೆ. ಪ್ರದರ್ಶನ ಪಂದ್ಯಗಳಲ್ಲಿ ಈ ನಖಕ್ಕೆ ಇರುವ ರಂಧ್ರಗಳಲ್ಲಿ ಹಸಿನೊಲು ಪೋಣಿಸಲಾಗುತ್ತದೆ. ಬೆರಳುಗಳ ಸ್ನಾಯುಗಳನ್ನು ಎಳೆದು ನೂಲುಗಳಿಂದ ಬಿಗಿಯಾಗಿ ಕಟ್ಟಲಾಗುತ್ತದೆ. ಇದರಿಂದ ನಿರ್ಧಿಷ್ಟ ಪ್ರಮಾಣದ ಪ್ರಹಾರವನ್ನು ಮಾತ್ರ ಮಾಡಲು ಅವಕಾಶ ಸಿಕ್ಕಂತಾಗುತ್ತದೆ. ಅವಶ್ಯಕತೆಗಿಂತ ಹೆಚ್ಚಿನ ಶಕ್ತಿಯುತ ಪ್ರಹಾರ ಮಾಡಿ ಮಾರಣಾಂತಿಕ ಗಾಯಗೊಳಿಸುವುದನ್ನು ತಡೆಗಟ್ಟಬಹುದು. ಶಿವಾಜಿ ಮಹಾರಾಜ ತನ್ನ ಶತ್ರುಗಳನ್ನು ಕೊಲ್ಲಲು ಬಳಸುತ್ತಿದ್ದ ವ್ಯಾಘ್ರನಖ (ಹುಲಿ ಉಗುರುಗಳ ಆಯುಧ) ತೊಟ ಇದೇ ಮಾದರಿಯಲ್ಲಿತ್ತು ಎನ್ನುವ ಉಲ್ಲೇಖ ಮರಾಠಿ ಗ್ರಂಥಗಳಲ್ಲಿವೆ.[೭೦]

ಮೈಸೂರು ಒಡೆಯರ ಕಾಲದಲ್ಲಿ ಈ ರೀತಿಯ ವಜ್ರಮುಷ್ಠಿ ಕಾಳಗ ನಡೆಯುತ್ತಿತ್ತು ಇಂದಿಗೂ ಇದನ್ನು ದಸರಾ ಉತ್ಸವದಲ್ಲಿ ಸಾಂಕೇತಿಕವಾಗಿ ಇದನ್ನು ಆಚರಿಸಲಾಗುತ್ತಿದೆ. ಇದೆಲ್ಲವನ್ನು ಗಮನಿಸಿದರೆ ವಿಜಯನಗರ ಕಾಲದಲ್ಲಿ ಈ ಕುಸ್ತಿಯ ಅತ್ಯುನ್ನತ ಮಟ್ಟದಲ್ಲಿತ್ತು. ಎಂಬುದು ಅಲ್ಲಿನ ಶಿಲ್ಪ ಐತಿಹಾಸಿಕ ದಾಖಲೆಗಳು ದೃಢಪಡಿಸುತ್ತವೆ. ರಾಜ ಪ್ರಾಂಗಣದಲ್ಲಿ

ಪಶ್ಚಿಮಾಭಿಮುಖವಾಗಿ ನಿರ್ಮಿಸಲ್ಪಟ್ಟಿರುವ ಮೂರು ಸ್ತರದ ಉನ್ನತವಾದ ಮಹಾನವಮಿ ದಿಬ್ಬವು ಸುಮಾರು ಎಂಟು ಮೀಟರ್ ಎತ್ತರವಾಗಿದ್ದು ಮೂವತ್ತೈದು ಚ.ಮೀ.ಗಳಲ್ಲಿ ನಿರ್ಮಾಣ ಮಾಡಲ್ಪಟ್ಟಿದೆ. ಇದು ವಿಜಯನಗರದಲ್ಲಿ ನಡೆಯುತ್ತಿದ್ದ ಕ್ರೀಡೆ ಮತ್ತು ವಿನೋದಾವಳಿಯ ಚಟುವಟಿಕೆಯ ಕೇಂದ್ರವಾಗಿತ್ತು ಎಂದು ಹೇಳಲು ಅದರ ಮೇಲಿರುವ ಶಿಲ್ಪಗಳು ದಾಖಲೆಯಾಗಿ ನಿಲ್ಲುತ್ತವೆ. ಮೊದಲ ಸ್ತರದ ಎಡ ಬದಿಯಲ್ಲಿ ಇಬ್ಬರು ಜಟ್ಟಿಗಳು ಕುಸ್ತಿಯಾಡುತ್ತಿದ್ದಾರೆ. ಉಳಿದ ಜಟ್ಟಿಗಳು ಅದನ್ನು ನೋಡುತ್ತಾ ಕಸರತ್ತು ಮಾಡುತ್ತಾ ನಿಂತಿದ್ದಾರೆ. ಅದೇ ರೀತಿ ಹಜಾರಾರಾಮಚಂದ್ರ ದೇವಾಲಯದ ಹತ್ತನೆಯ ಕಂಬದ ಕೆಳಗಿನ ಪಟ್ಟಿಕೆಯಲ್ಲಿ ಕುಸ್ತಿಯಾಡುವ ಶಿಲ್ಪಗಳಿವೆ. ಹಾಗೆ ಅಕ್ಕ ತಂಗಿ ಗುಂಡಿನ ಹಿಂದಿನ ಕೋಟೆ ಆವರಣದ ಪ್ರದೇಶದಲ್ಲಿ ವಿಶೇಷವಾದ ಕುಸ್ತಿಪಟುಗಳ ಶಿಲ್ಪಗಳಿವೆ. ಲೇಪಾಕ್ಷಿಯ ವೀರಭದ್ರ, ತಾಡಪತ್ರಿಯ ಬುಗ್ಗರಾಮಲಿಂಗೇಶ್ವರ ಶಿಲ್ಪಗಳಲ್ಲಿ ಅನೇಕ ಕುಸ್ತಿಪಟುಗಳ ಶಿಲ್ಪಗಳಿವೆ. ಹೀಗೆ ಅಸಂಖ್ಯೆ ರೀತಿಯಲ್ಲಿ ಕುಸ್ತಿಪಟುಗಳ ಶಿಲ್ಪಗಳನ್ನು ಗಮನಿಸಿದರೆ ವಿಜಯನಗರದಲ್ಲಿ ಕುಸ್ತಿಯು ಒಂದು ಪ್ರಖ್ಯಾತ ಕ್ರೀಡೆಯಾಗಿತ್ತು ಎಂಬುದು ತಿಳಿಯುತ್ತದೆ. ಮೇಲಿನ ಶಾಸನ, ಶಿಲ್ಪ, ಸಾಹಿತ್ಯ ದಾಖಲೆಗಳಿಂದ ಪ್ರಮುಖವಾಗಿ ದೃಢಪಡುವ ಅಂಶವೆಂದರೆ ವಿಜಯನಗರ ಕಾಲದಿಂದಲೂ ಪ್ರಸ್ತುತ ದಿನದವರೆಗೆ ತನ್ನ ಕುಸ್ತಿಯು ಅಸ್ತಿತ್ವವನ್ನು ಉಳಿಸಿಕೊಂಡಿದೆ.

ಕತ್ತಿವರಸೆ

ಶೌರ್ಯಸಾಹಸ ಪ್ರದರ್ಶನಗಳಲ್ಲಿ ಮಲ್ಲಯುದ್ಧದಂತೆ ಕತ್ತಿವರಸೆಯ ಪ್ರದರ್ಶನವೂ ಒಂದು. ಕತ್ತಿವರಸೆ ಪ್ರದರ್ಶನದಲ್ಲಿ ವಿಕ್ರಮವನ್ನು ಮೆರೆದ ಕಠಾರಿವೀರರ ವೃತ್ತಾಂತ ಇತಿಹಾಸದುದ್ದಕ್ಕೂ ದೊರೆಯುತ್ತದೆ. ರಾಜಸಭೆಗೆ ಬರುತ್ತಿದ್ದ ವಿವಿಧ ಕಸುಬಿನವರಲ್ಲಿ ಮಲ್ಲರು, ಕಠಾರಿವೀರರೂ ಇರುತ್ತಿದ್ದರೆಂದು, ಅವರ ಕೇರಿಯೇ ಇರುತ್ತಿತ್ತೆಂದು ಅಂದಿನ ಕವಿಗಳ ರಾಜ ಸಭೆಯ ವರ್ಣನೆಗಳಿಂದ ತಿಳಿದುಬರುತ್ತದೆ.[೨೧] ರಾಜಸಭೆಗಳ ಮುಂದೆ ಹಾಗೂ ಸಾರ್ವಜನಿಕವಾಗಿ ಮಲ್ಲಪ್ರದರ್ಶನಗಳು ನಡೆದ ವಿಚಾರವನ್ನು ಈ ಹಿಂದೆ ಚರ್ಚಿಸಲಾಗಿದೆ. ಆದರೆ ಕತ್ತಿವರಸೆ ಪ್ರದರ್ಶನಗಳು ಅಷ್ಟಾಗಿ ಕಂಡುಬರುವುದಿಲ್ಲ. ಆದರೂ ಅಲ್ಲೊಮ್ಮೆ ಇಲ್ಲೊಮ್ಮೆ ಒಂದರೆಡು ಚಿತ್ರಗಳು ಕಾಣುತ್ತವೆ. ನಾರಣಪ್ಪ ಅವರ ಆದಿಪರ್ವದಲ್ಲಿ ಕೌರವ ಪಾಂಡವರ ಶಸ್ತ್ರವಿದ್ಯಾ ಪ್ರದರ್ಶನದ ವೈಭವದ ವರ್ಣನೆಯನ್ನು ಕೊಡುವಾಗ ಕೌರವನ ಕತ್ತಿವರಸೆ ಪ್ರದರ್ಶನವನ್ನು ಹೀಗೆ ಬಣ್ಣಿಸುತ್ತಾನೆ.

'ಬವರಿಯಲಿ ಪಯಪಾಡಿನಲಿಮ್ಮೈ! ಲವಣೆಯಲಿ ಬಿನ್ನಾಣದಲಿಭಾ! ರವಣಿಯಲಿ ದೆಖ್ಖಾಳದಲಿ ವೇಗ್ಲಾಯರೇಖೆಯಲಿ! ತಿವಿವನೆಯೊಂದರಲಿನೂರಂ! ಗಮನುತೋರ್ಪ ವಿಭೇದದಲಿ ಕೌ! ರವಮಹೀಪತಿತೋರಿದನು ಶ್ರಮವನು ಕಠಾರಿಯಲಿ'[೨೨] ಕುರುಪಾಂಡವರ ಶಸ್ತ್ರವಿದ್ಯಾ ಪ್ರದರ್ಶನವನ್ನು ವರ್ಣಿಸುವಾಗ ನಾರಣಪ್ಪ ನವೀನತೆಯನ್ನು ತೋರಿದ್ದಾನೆ.

ಲಿಂಗಣ್ಣ ಕವಿಯ ಕೆಳದಿ ನೃಪವಿಜಯದ ಮೂರನೇ ಆಶ್ವಾಸದಲ್ಲಿ ಕತ್ತಿವರಸೆಯ ಒಂದು ಸೊಗಸಾದ ಚಿತ್ರಣವಿದೆ. ಅಲ್ಲಿ ಬರುವ ವೀರೋಚಿತ ಪ್ರಸಂಗದಿಂದ ಆಗಿನ ಕಾಲಕ್ಕೆ

ದೇಶದ ನಾನಾ ಕಡೆಗಳಲ್ಲಿ ಕಠಾರಿ ವೀರರಿದ್ದು, ತಮ್ಮ ಅಸೀಮ ಸಾಧನೆ ಸಹಾಸಗಳಿಂದ ಖ್ಯಾತಿಗಳಿಸಿ, ಆಗಾಗ ತಮ್ಮ ಶಕ್ತಿಸಾಹಸ ಪ್ರದರ್ಶನಗಳ ಪರೀಕ್ಷೆಗೆ ಸವಾಲೊಡಡ್ಡುತ್ತಿದ್ದರೆಂಬ ಅಂಶ ವಿಧಿತವಾಗುತ್ತದೆ.

ಸದಾಶಿವನಾಯಕನ ಮಗ ದೊಡ್ಡಸಂಕಣ್ಣನಾಯಕ ದೇಶಾಟನೆ ಕೈಗೊಂಡು ದೆಹಲಿಯ ಬಳಿ ಬಂದಾಗ ರಾಜದ್ವಾರದ ಮುಂದೆ ಬಿರುದುಸಹಿತವಾಗಿ ಕಟ್ಟಿದ ಹರಿತವಾದ ಖಡ್ಗವನ್ನು ನೋಡಿ ತಲೆದೂಗಿ ವಿಸ್ಮಯಗೊಂಡನು. ಅಂಕುಶಖಾನನೆಂಬ ಪರಾಕ್ರಮಶಾಲಿಯಾದ ಒಬ್ಬ ಮಂತ್ರಿಶ್ರೇಷ್ಠನಿದ್ದಾನೆ. ಅವನು ಒಂಟಿಗತ್ತಿ ಕಾಳಗದಲ್ಲಿ ನನ್ನನ್ನು ಎದುರಿಸಿ ನಿಲ್ಲತಕ್ಕವರು ಯಾರೂ ಇಲ್ಲ. ನನ್ನ ಮೇಲೆ ಯುದ್ಧಕ್ಕೆ ನಿಲ್ಲುವ ಸಮರ್ಥರಿದ್ದರೆ ಈ ಖಡ್ಗವನ್ನು ಬಿಚ್ಚಲಿ ಎಂದು ಸೂಚಿಸಿ ಆ ಖಡ್ಗವನ್ನು ಕಟ್ಟಿಸಿದನು. 'ಅಂಕುಶಖಾನನೆಂಬ ಪರಾಕ್ರಮಶಾಲಿ ವಜೀರವರ್ಯನಾರುಂ! ಕರಮೊಂಟಿಗಳ್ತಿಯ ಸಮೀಕದೊಳೆನ್ನೊಳಿದಿರ್ಚಿನಿಲ್ವರ್! ಲ್ಲಂಕದೊಳಾಂತು ನಿಲ್ವದಟನುಳ್ಳೊಡೆ ಬಾಳನಿದುಂ ಕಳಲ್ಚಲೆಂ! ದಂಕಿತಗೈದು ಕಟ್ಟಿಹನ್.....'[೨೩]

ವೀರಸಂಕಣ್ಣನಾಯಕ ಆ ಕತ್ತಿಯನ್ನು ಕಳಚಿ ತೆಗೆಸಿ, ಮುಂದೆ ಅಂಕುಶಖಾನನನ್ನು ಎದುರಿಸಿ ಖಾಡಾ ಖಾಡಿಯಾಗಿ ಹೋರಾಡಿ ನೆರೆದವರನ್ನೆಲ್ಲ ವಿಸ್ಮಯಗೊಳಿಸುವ ರೀತಿಯಲ್ಲಿ ಖಾನನನ್ನು ಖಡ್ಗದಿಂದ ಇರಿದು ಕೊಂದನು. ಲಿಂಗಣ್ಣ ಕವಿ ಈ ವಿಷಯವನ್ನು ಬಹು ಕತೂಹಲಕರವಾಗಿ ವರ್ಣಿಸಿದ್ದಾನೆ. ಹೀಗೆ ವಿಜಯನಗರಲ್ಲಿ ಕತ್ತಿವರಸೆ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಅವರ ಸ್ಮಾರಕಗಳ ಮೇಲಿನ ಶಿಲ್ಪಗಳು ಈ ಆಂಶವನ್ನು ದೃಢೀಕರಿಸುತ್ತವೆ. ಮಹಾನವಮಿದಿಬ್ಬ, ಹಜಾರರಾಮಚಂದ್ರ, ಪೆನುಗೊಂಡೆಯಲ್ಲಿನ ಕತ್ತಿವರಸೆ ಶಿಲ್ಪಗಳನ್ನು ಗಮನಿಸಿದರೆ ಅಂದು ಕತ್ತಿ ವರಸೆ ಎಷ್ಟು ಪ್ರಸಿದ್ಧಿ ಪಡೆದಿತ್ತು ಎಂದು ವಿಧಿತವಾಗುವುದು. ಹಂಪಿಯ ಹಜಾರಾರಾಮಚಂದ್ರ ದೇವಾಲಯದ ಹೊರಭಿತ್ತಿಯಲ್ಲಿ ಪಶ್ಚಿಮಾಭಿಮುಖವಾಗಿ ಕತ್ತಿವರಸೆ ಶಿಲ್ಪವಿದೆ. ಅದೇ ರೀತಿ ಸುಗ್ರೀವಗುಹೆಯ ಆಗ್ನೇಯದಲ್ಲಿರುವ ಪಾಳದೇವಾಲಯದ ಭಿತ್ತಿಯಲ್ಲಿ, ಕಮಲಮಹಲ್‌ನಿಂದ ಆನೆಲಾಯಕ್ಕೆ ಹೋಗುವಾಗ ಇರುವ ಎಡ ಭಿತ್ತಿಯಲ್ಲಿ ಇವೆ. ಗೊರಂಟ್ಲದ ಮಾಧವರಾಯ ದೇವಸ್ಥಾನದ ನಾಲ್ಕನೆಯ ಕಂಬದ ಮಧ್ಯ ಪಶ್ಚಿಮಾಭಿಮುಖವಾಗಿ ಒಂದು ಶಿಲ್ಪವಿದೆ. ಅದರಲ್ಲಿ ಇಬ್ಬರು ವ್ಯಕ್ತಿಗಳು ಬಲಗೈಲಿ ಕತ್ತಿ ಎಡಗೈಲಿ ಗುರಾಣಿಗಳನ್ನಿಡಿದಿದ್ದಾರೆ. ಹೀಗೆ ಅನೇಕ ಕಡೆ ಕತ್ತಿವರಸೆ ಶಿಲ್ಪಗಳಿವೆ. ಈ ಎಲ್ಲ ಶಿಲ್ಪಗಳಿಂದ ಅಂದು ಕತ್ತಿವರಸೆಯು ಒಂದು ಕ್ರೀಡೆಯಾಗಿ, ನೋಡುಗರಿಗೆ ಮನರಂಜನೆಯಾಗಿ, ಯುದ್ಧಕಲೆಯಾಗಿ ಅಂದು ಬೆಳೆದುಬಂದಿತ್ತು.

ಕೋಲು ವರಸೆ

ಈ ಕ್ರೀಡೆಯನ್ನು ಪುರುಷರು ಮಾತ್ರ ಆಡುವರು. ಇದನ್ನು ಬಹಳ ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಇದಕ್ಕೆ ಎರಡು ಗಟ್ಟಿಯಾದ ಬಿದಿರಿನ ೫-೬ ಆಡಿ ಉದ್ದದ ಕೋಲುಗಳು ಬೇಕು. ಮೊದಲು ಕೋಲಿಗೆ ಪೂಜೆ ಮಾಡಿ ಆಟ ಪ್ರಾರಂಭಿಸುವರು. ಹೆಜ್ಜೆ ಕಟ್ಟಿಕೊಂಡು ಕೋಲು ತಿರುಗಿಸಬೇಕು. ಮೂರು ಸುತ್ತಿಗೆ ಏಳು ಹೆಜ್ಜೆ ಬಂದರೆ, ಉಳಿದ

ಮೂವತ್ತೆರಡು ಹೆಜ್ಜೆ ಬಂದಂತೆ. ಈ ಕ್ರೀಡೆಯನ್ನು ಕುಂತು, ನಿಂತು, ನೆಗೆಯುತ್ತಾ ವಿವಿಧ ಭಂಗಿಯಲ್ಲಿ ಆಡುವರು. ಹಿಂದಕ್ಕೆ ಹೋಗುವುದು, ಮುಂದಕ್ಕೆ ಬರುವುದು ಮತ್ತು ತಲೆಯ ಮೇಲೆ ಕೋಲು ತಿರುಗಿಸುವುದು ಮಾಡುವರು.

ಕೋಲು ವರಸೆಯನ್ನು ಒಂದು, ಎರಡು ಕೋಲುಗಳಿಂದ ಆಡುವರು. ಎರಡು ಕೈಯಲ್ಲೂ ಎರಡು ಕೋಲು ಹಿಡಿದುಕೋಂಡು ತಿರುಗಿಸುವಾಗ ಒಂದಕ್ಕೊಂದು ತಗುಲಬಾರದು. ಕೋಲು ವರಸೆಯಲ್ಲಿ ಲೆಕ್ಕದ ಏಟು, ಅಂದರೆ ಹೆಜ್ಜೆ ಕಟ್ಟಿಕೋಂಡು ಕೋಲು ತಿರುಗಿಸಿ ಹೊಡೆಯುವುದು. ಉಲ್ಟಾ ಏಟು ಅಂದರೆ ಸ್ಪರ್ಧೆಯಲ್ಲಿ ಏಟು ಮೈಗೆ ತಗುಲದಂತೆ ರಕ್ಷಣೆಗಾಗಿ ಹೊಡೆಯುವುದು.

ಚೂಟ್ ಮಾಡು ಅಂದರೆ ಆಟ ಮುಗಿಸು ಎಂದರ್ಥ. ಕೋಲು ವರಸೆಯಲ್ಲಿ ಆಟಮುಗಿದಾಗ ಕೋಲು ತಿರುಗಿಸುತ್ತಾ ಹೆಜ್ಜೆ ಕಟ್ಟಿಕೊಂಡು ಆಟವಾಡುತ್ತಾ ಕೋಲನ್ನು ಕಂಕುಳಿಗೆ ಹಾಕಿಕೊಳ್ಳಬೇಕು ಇಲ್ಲಿಗೆ ಆಟ ಮುಗಿದಂತೆ. ಈ ಕೋಲು ವರಸೆಯಲ್ಲಿ ವಿವಿಧ ರೀತಿಯಲ್ಲಿ ಆಡುವರು. ಕೋಲು ವರಸೆಯಾಡುವಾಗ ಕೋಲು ನೆಲಕ್ಕೆ, ಮೈಗೆ ತಗುಲಬಾರದು. ಇದು ಕತ್ತಿವರಸೆಗೆ ಪೂರ್ವಭಾವಿಯಾಗಿ ಕಲಿಯುವ ಕ್ರೀಡೆಯಾಗಿದೆ. ಇಲ್ಲಿ ಯುದ್ಧ ತಂತ್ರದ ಭಾಗವಾಗಿ ಈ ಕ್ರೀಡೆ ಜನಿಸಿದೆ. ವಿಜಯನಗರ ಕಾಲದಲ್ಲಿ ಇದು ಯಥೇಚ್ಛವಾಗಿತ್ತು ಎಂದು ಅಂದಿನ ಶಿಲ್ಪಗಳು ದೃಢಪಡಿಸುತ್ತವೆ. ಹಜಾರರಾಮಚಂದ್ರ ದೇವಾಲಯದ ಹೊರ ಭಿತ್ತಿ, ಆಂಧ್ರದ ಪೆನುಗೊಂಡೆಯ ದೇವಾಲಯದ ಶಿಲ್ಪಗಳಲ್ಲಿ ಈ ಕ್ರೀಡೆಯ ಶಿಲ್ಪಗಳನ್ನು ಗಮನಿಸಬಹುದು. ಆಂಧ್ರದ ಕಾಶಿವಿಶ್ವೇಶ್ವರಾಲಯಂ ದೇವಾಲಯದ ಪ್ರವೇಶದ್ವಾರದ ಬಲ ಭಿತ್ತಿಯಲ್ಲಿ ಕೋಲುವರಸೆಯ ಶಿಲ್ಪವಿದೆ. ಅಲ್ಲಿ ಇಬ್ಬರು ವ್ಯಕ್ತಿಗಳು ಉದ್ದನೆಯ ಕೋಲುಗಳನ್ನು ಹಿಡಿದು ವರಸೆ ಮಾಡುತ್ತಿದ್ದರು ಇವರು ತಲೆಗೆ ರುಮಾಲು, ತೋಳಬಂಧಿ, ಕೈಕಡಗ, ಕಾಲುಕಡಗಗಳನ್ನು ಹಾಕಿ ಲಂಗೋಟಿಯನ್ನು ತೊಟ್ಟಿರುವರು. ಇದೇ ರೀತಿಯ ಶಿಲ್ಪಗಳು ಮಹಾನವಮಿ ದಿಬ್ಬ, ಹಜಾರರಾಮಚಂದ್ರ ದೇವಾಲಯದ ಭಿತ್ತಿಯಲ್ಲಿವೆ. ಇದು ಕತ್ತಿವರಸೆಯ ಹಾಗೆ ಆಡುವ ಕ್ರೀಡೆಯಾಗಿದೆ. ಇದರಲ್ಲಿ ಕತ್ತಿಗೆ ಬದಲು ಕೋಲುಗಳನ್ನು ಬಳಸಿಕೊಂಡು ಆಡುವರು.

ತೆಂಗಿನಕಾಯಿ, ಬಾಳೆಹಣ್ಣು, ಕಬ್ಬಿನಾಟಗಳು

ಕನಕದಾಸರ ಮೋಹನತರಂಗಿಣಿಯಲ್ಲಿ ನಾನಾ ವಿಧವಾದ ದೈಹಿಕ ಕಸರತ್ತಿನ ಒಂದು ಸುರಮ್ಯ ಚಿತ್ರ ದೊರೆಯುತ್ತದೆ. ವಿಜಯನಗರದಲ್ಲಿ ಬಳಕೆಯಿದ್ದ ಬಾಳೆಹಣ್ಣು, ತೆಂಗಿನಕಾಯಿ, ಬೆಲ್ಲ, ಕಬ್ಬು ಇತ್ಯಾದಿಗಳನ್ನು ಬಳಸಿಕೊಂಡು ಕ್ರೀಡೆಯಾಡಿದ ಬಾಣಾಸುರನ ಶೋಣಿತಪುರ ವರ್ಣನೆಯ ಸಂದರ್ಭದಲ್ಲಿ ಬಂದಿದೆ.

ಭಂಗ ಬಾಣನ ಕೊಡ ಸೆಣಸಿರ್ದಗಲ್ಲದೆ
ಭಂಗ ಬಾಣನ ಪುರಕಹುದೆ
ಭಂಗ ಬಾಳೆಯ ಹಣ್ಣು ತೆಗೆಯೆಂದು ಸಂಭದೋ
ತುಂಗ ಭೇದಿನದ ಜೂದಿನಲ್ಲಿ[೨೪]

ಅಂದರೆ ಅಂದು ಬಾಳೆಹಣ್ಣನ್ನು ಉಪಯೋಗಿಸಿಕೊಂಡು ಯಾವ ರೀತಿ ತಮ್ಮ ಕಸರತ್ತುಗಳನ್ನು ಪ್ರದರ್ಶಿಸುತ್ತಿದ್ದರು ಎಂಬ ವಿವರವಿದೆ. ಖಡ್ಗದಿಂದ ಯಾರು ಅತಿ ಹೆಚ್ಚು ಬಾಳೆಹಣ್ಣನ್ನು ಛೇದಿಸುವರೂ ಅವರು ಗೆದ್ದಂತೆ, ಇವರ ಆಟವನ್ನು ನೊಡಲು ಸಾಕಷ್ಟು ಜನ ಸೇರಿ ಯಾರು ಗೆಲ್ಲುತ್ತಾರೆ ಎಂದು ಜೂಜುಗಳನ್ನು ಕಟ್ಟಿಕೊಂಡು ಮನರಂಜನೆಯನ್ನು ಪಡೆಯುತ್ತಿದ್ದರು. ಬಲಶಾಲಿಯಾದವನು ಅತಿ ಹೆಚ್ಚು ಬಾಳೆಯ ಹಣ್ಣನ್ನು ಛೇದಿಸಿ ಜಯಶಾಲಿಯಾಗುತ್ತಿದ್ದ ಅದೇ ರೀತಿ

ಬಾಳಕ್ಷನ ರೂಹು ನಿನಗೇಕೆನುತ
ನಾರಿಕೇಳಫಲವ ಕಟ್ಟಿ ತೂಗಿ
ಬೀಕಾಲಿರಿದು ಕೊಲವಂತೆ ತೆಂಗಿನ ಕಾಯಿ
ಹೋಳು ಮಾಡಿದರು[೭೫]

ಅಂದು ತೆಂಗಿನ ಕಾಯಿ ಹೊಡೆಯುವ ಸ್ಪರ್ಧೆಯಿತ್ತು. ಯಾರು ಅತಿಹೆಚ್ಚು ತೆಂಗಿನ ಕಾಯಿಗಳನ್ನು ಬರಿಕೈಯಿಂದ ಹೋಳು ಮಾಡುವರೊ ಅವರು ಗೆದ್ದಂತೆ, ಇಲ್ಲಿ ಕ್ರೀಡಾಪಟುವು ತನ್ನ ದೈಹಿಕ ಬಲವನ್ನು ಪ್ರದರ್ಶಿಸಬೇಕಿತ್ತು.

ನಳೀನೇತ್ರ ಯರೊಳು ನೆಹಗಲಹವಾಂತು
ಮುಳಿದರೆ ಸ್ಮರ ತಮ್ಮದಿಸಲು
ಬರೆಯ ಕಬ್ಬುಗಳು ಬಿಲ್ಲಹವೆಂದು ಮಸೆದು
ಕುದರೆಯಿಂದ ಕಿಡಿದ ಜೂದಿನಲ್ಲಿ[೭೬]

ಅಂದು ಕೃಷಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟಿದ್ದರು. ನೀರಾವರಿ ಸಮೃದ್ಧವಾಗಿತ್ತು. ಅಲ್ಲಿ ಅತಿ ಹೆಚ್ಚು ಕಬ್ಬನ್ನು ಬೆಳೆಯುತ್ತಿದ್ದರು. ಅದರಲ್ಲಿ ಮನರಂಜನೆ ಪಡೆಯಲು ಹಾಗೂ ತಮ್ಮ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸಲು ವೇದಿಕೆಯನ್ನು ಮಾಡಿಕೊಂಡಿದ್ದರು. ಯಾರು ಅತಿ ಹೆಚ್ಚು ಕಬ್ಬುಗಳನ್ನು ಕಡಿಯುತ್ತಾರೊ ಅವರು ಗೆದ್ದಂತೆ. ಈ ರೀತಿಯಾಗಿ ಅಂದಿನ ಜನಗಳು ತಮ್ಮ ದೈಹಿಕ ಕಸರತ್ತಿನಿಂದ ಕ್ರೀಡಾ ಪ್ರದರ್ಶನವನ್ನು ತೋರ್ಪಡಿಸುತ್ತಿದ್ದರು. ಕಬ್ಬಿನಿಂದ ಬೆಲ್ಲ ಮಾಡುವುದು ಅವರಿಗೆ ಗೊತ್ತಿತ್ತು ಅಂದಿನ ಬೆಲ್ಲವು ಗಟ್ಟಿಯಾಗಿರುತ್ತಿತ್ತು, ಅದನ್ನು ಒಡೆಯುವುದು ಒಂದು ಸ್ಪರ್ಧೆಯಾಗಿ ಮಾಡಿಕೊಂಡಿದ್ದರು.

ಬೆಲ್ಲವ ನೀ ಮುದ್ದುಮೆಗಳ ಮೃದುವಾಯ
ಬೆಲ್ಲವಾಗಿರದೆ ಬಂದಿಲ್ಲ
ಹೊಲ್ಲೆಹನೊಣನ ಮುತ್ತಿನ ಕೊಳಬೇಡೆಂದು
ಬೆಲ್ಲವನೊಡೆಯ ಗುದ್ದಿದನು.[೭೭]

ಮೇಲಿನ ಈ ಕ್ರೀಡೆಗಳನ್ನು ಜೂಜುಕಟ್ಟಿಕೊಂಡು ಆಡುತ್ತಿದ್ದುದು ವಿಶೇಷ. ಬಲಶಾಲಿಯಾದ ಕ್ರೀಡಾಪಟುವು ವಿಜಯಶಾಲಿಯಾಗುತ್ತಿದ್ದ ಈ ಕ್ರೀಡೆಗಳನ್ನು ನೋಡಲು ನಾನಾ ದೇಶಗಳಿಂದ ಜನರು ಆಗಮಿಸಿ ಅವರೂ ಇದೇ ಕ್ರೀಡಾ ಪಟುಗಳು ಗೆಲ್ಲುತ್ತಾರೆಂದು ಪಂಥ ಕಟ್ಟಿಕೊಳ್ಳುತ್ತಿದ್ದರು.

ಕುಂದಣನ ನವರತ್ನ ಖಚಿತ ಬೌಭಾರಿಯ
ಮುಂದುಣ ನಾಲ್ವೆಸೆಗಳಲಿ
ಸಂದಣಿನದರು ಛಪ್ಪನ್ನ ದೇಶದ ಜನ[೭೮]
ಜೂಜಾಟಕ್ಕೆ ಯಾರೆಲ್ಲ ಭಾಗವಹಿಸುತ್ತಿದ್ದರು ಎಂಬುದಕ್ಕೆ
ಜೂಜಾಟಕ್ಕೆ ಸೊಳೆಬಂಟಕೆ ರಂಣದ
ಸಂವಾದ ಪರ್ಗುಡಿಗಳ ಚರ್ಚೆ
ರಾಜವೀದಿಯಾಳರದಾಡುವ ಸಂದಣ
ಮಾಜರು ನಿತ್ಯ ಕೃತ್ಯದಲಿ[೭೯]

ಅಂದರೆ ಸೂಳೆಯರು, ಸಾಲಗಾರರು, ಕುಡುಕರು ಈ ಕ್ರೀಡೆಗಳಲ್ಲಿ ಭಾಗವಹಿಸಿ ಜೂಜು ಕಟ್ಟುತ್ತಿದ್ದರು. ಗುಡಿಗಳಲ್ಲಿ ಇದೇ ಕ್ರೀಡಾಪಟುಗಳು ಗೆಲ್ಲುತ್ತಾರೆ ಎಂದು ಚರ್ಚೆಮಾಡುತ್ತಿದ್ದರು. ಈ ರೀತಿಯ ಕ್ರೀಡೆಗಳ ಪ್ರತಿನಿತ್ಯವೂ ರಾಜಬೀದಿಗಳಲ್ಲಿ ಸಾಮಾನ್ಯವಾಗಿದ್ದವು. ಅಂದು ಬಾಳೆಹಣ್ಣು, ಕಬ್ಬು, ಬೆಲ್ಲ ತೆಂಗಿನಕಾಯಿಗಳ ಮೇಲೆ ಕ್ರೀಡೆಗಳನ್ನು ಆಡುತ್ತಿದ್ದರು ಎಂದರೆ ಅವುಗಳನ್ನು ಯಥೇಚ್ಚವಾಗಿ ಬೆಳೆಯುತ್ತಿದ್ದರು ಎಂದರ್ಥ. ಸಾಮಾನ್ಯವಾಗಿ ಅತಿ ಹೆಚ್ಚು ಯಾವ ವಸ್ತುಗಳು ಇರುತ್ತವೊ ಅವುಗಳನ್ನು ದಿನನಿತ್ಯ ಬಳಸುತ್ತಿದ್ದರು. ಈ ಎಲ್ಲಾ ವಸ್ತುಗಳ ಕೃಷಿ ಸರಕುಗಳಾಗಿರುವುದರಿಂದ ಅಂದು ಕೃಷಿಗೆ ಸಾಕಷ್ಟು ಪ್ರಾಧಾನ್ಯತೆಯಿತ್ತು.

ಭಾರ ಎತ್ತುವ ಆಟಗಳು

ಅಂದು ಒಬ್ಬ ವ್ಯಕ್ತಿಯ ಶಕ್ತಿ ಸಾಮರ್ಥ್ಯ ಅಳೆಯಬೇಕಾದರೆ ಭಾರ ಎತ್ತಿ ಇಲ್ಲವೆ ಬಲಿಷ್ಠರೊಂದಿಗೆ ಸೆಣಸಾಡಿ ತಿಳಿದುಕೊಳ್ಳುತ್ತಿದ್ದರು. ಈಗಾಗಲೆ ಕುಸ್ತಿಯನ್ನು ನೋಡಿದ್ದೆವೆ. ಭಾರ ಎತ್ತವ ಕ್ರೀಡೆಗಳು ಅಂದು ಹಬ್ಬ ಹರಿದಿನ, ಜಾತ್ರೆ, ಉತ್ಸವಗಳಲ್ಲಿ ನಡೆಯುತ್ತಿದ್ದವು. ಭಾರ ಎತ್ತುವುದರಲ್ಲಿ ಹಲವು ಬಗೆಗಳಿದ್ದವು, ಬಳಕೆಯಾಗುವ ಉಪಕರಣಗಳಾದ ಧಾನ್ಯ ತುಂಬಿದ, ಚೀಲಗಳು, ತುಂಬಿದ ಕೊಡಪಾನ, ಗುಂಡು, ಚಕ್ಕಡಿ ಎಳೆಯುವುದು, ಚಕ್ಕಡಿಗಾಲಿ ತಿರುಗಿಸುವುದು ಹೀಗೆ ಹತ್ತಾರು ಬಗೆಯಿದ್ದವು.

ಚೀಲಗಳನ್ನು ಎತ್ತುವುದು ಚೀಲಗಳಲ್ಲಿ ಅತೀ ಭಾರವಾದ ಚೀಲವೆಂದರೆ ಮರಳಿನ ಚೀಲ, ಅದೇ ರೀತಿ, ಬೋಳ, ಹುರುಳಿ, ಚೀಲಗಳನ್ನು ಎತ್ತುವುದು ಇತ್ತು. ಈ ಚೀಲಗಳನ್ನು ಎತ್ತುವುದರಲ್ಲಿ ಹಲವಾರು ಬಗೆಗಳಿದ್ದವು. ಒಂದು ಕೈಬಳಸಿ, ಎರಡು ಕೈಬಳಸಿ, ಕೈಗಳನ್ನು ಹಿಂದೆ ಕಟ್ಟಿಕೊಂಡು ಬರಿ ಎದೆಯಿಂದ ನೂಕುವುದು ಇತ್ಯಾದಿ ಬಗೆಯಿದ್ದವು.

ಚೀಲಗಳನ್ನು ಹೊತ್ತು ನಡೆಯುವುದು, ಇದ್ದಂತೆ ಎಳೆದು ತೋರಿಸುವ ಬಗೆಗಳಿದ್ದವು, ಎರಡರಿಂದ ಐದರವರೆಗಿನ ಉಸುಕಿನ ಚೀಲಗಳನ್ನು ಹಗ್ಗ ಕಟ್ಟಿ ಒಂದು ಎರಡು ಕೈಯಿಂದ ಎಳೆಯುವುದು ಸಾಮಾನ್ಯ. ಕೈಯಿಂದ ಎಳೆದಂತೆ ಹಗ್ಗವನ್ನು ತೊಡೆಗಳಿಗೆ ಕಟ್ಟಿಕೊಂಡು ಎಳೆಯುವುದು ಇನ್ನೂ ಶಕ್ತರಾದವರು ಎರಡೆರಡು ಉಸುಕಿನ ಚೀಲ, ಒಂದೊಂದು ತೊಡೆಗೆ ಕಟ್ಟಿಕೊಂಡು ಮತ್ತೆ ಹೆಗಲ ಮೇಲೂಂದು ಚೀಲ ಹೊತ್ತು ಎಳೆಯುವುದು ಹೀಗೆ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ತೋರಿಸುವ ಕ್ರೀಡೆಗಳನ್ನಾಡುತ್ತಿದ್ದರು.

ತುಂಬಿದ ಕೊಡಗಳನ್ನು ಎತ್ತುವುದು.

ಭಾರ ಎತ್ತುವುದಕ್ಕಾಗಿ ಕಂಚಿನ ಕೊಡಪಾನಗಳನ್ನು ಪ್ರತ್ಯೇಕವಾಗಿ ಹೇಳಿ ಮಾಡಿಸಿರುತ್ತಿದ್ದರು. ಇವು ಐದು ಆರು ಕೊಡಗಳಷ್ಟು ದೊಡ್ಡದಾಗಿರುತ್ತಿದ್ದವು. ನೀರು ಹಾಕಿ ಎತ್ತುವುದು, ನೀರಿನಲ್ಲಿ ಉಸುಕು ಅಥವಾ ಕಬ್ಬಿಣದ ವಸ್ತುಹಾಕಿ ಎತ್ತುವುದು ಹೀಗೆ ಹಲವು ವೈವಿಧ್ಯಮಯವಾದ ಆಟಗಳಿದ್ದವು. ಇಂಥ ಕ್ರೀಡೆಗಳನ್ನು ಹಬ್ಬ, ಜಾತ್ರೆ, ಉತ್ಸವಗಳಂಥ ಸಮಯದಲ್ಲಿ ಆಡುತ್ತಿದ್ದರು.

ಗುಂಡು ಎತ್ತುವುದು

ಚೀಲ, ಕೊಡಪಾನಗಳನ್ನು ಎತ್ತುವ ಬಗೆಯಲ್ಲಿಯೆ ದುಂಡಾದ ಕಲ್ಲಿನ ಗುಂಡನ್ನು ಒಂದೇ ಕೈಯಲ್ಲಿ ಎತ್ತುವುದು, ಎರಡೂ ಕೈಯಲ್ಲಿ ಎತ್ತಿ ತಲೆ ಹಿಂದಿನಿಂದ ಹಾಕುವುದು, ಹೀಗೆ ಹಲವು ವೈವಿಧ್ಯಮಯ ಆಟಗಳನ್ನು ಆಡುತ್ತಿದ್ದರು. ಬಂಡಿ ಎಳೆಯುವುದು, ಬಂಡಿ ಗಾಲಿ ತಿರುಗಿಸುವುದು, ಎತ್ತಿನ ಬಂಡಿಯನ್ನು ಎಷ್ಟು ದೂರ ಎಷ್ಟು ಸಮಯ ಎಂದು ನಿಗದಿ ಮಾಡಿ ಎಳೆಯುವುದು ಬಂಡಿ ಗಾಲಿಗಳನ್ನು ತಿರುಗಿಸುವುದು ಭಾರವಾದ ಕೊರಡನ್ನು ಎತ್ತುವುದು ಹೀಗೆ ಹಲವು ಕ್ರೀಡೆಗಳಿದ್ದವು ಈ ಎಲ್ಲಾ ಕ್ರೀಡೆಗಳನ್ನು ಸಾಮಾನ್ಯವಾಗಿ ಪುರುಷರು ಆಡುತ್ತಿದ್ದರು ಹಬ್ಬ, ಜಾತ್ರೆ, ಉತ್ಸವಗಳ ಸಮಯದಲ್ಲಿ ಈ ಎಲ್ಲಾ ರೀತಿಯ ಪ್ರದರ್ಶನಗಳಿರುತ್ತಿದ್ದವು.

ಚಿನ್ನಿಕೋಲಾಟ

ಹುಡುಗರಾಡುವ ಈ ಕ್ರೀಡಯು ಸಾಮಾನ್ಯವಾಗಿ ಮಳೆಗಾಲದಲ್ಲಿ ಆಡುವರು. ಆಗ ನೆಲವು ತಂಪಾಗಿದ್ದು ಪತ್ತ (ಗುಂಡಿ) ತೋಡಲು ಸುಲಭವಾಗುವುದು. ಈ ಆಟವನ್ನು ವಿಜಯನಗರ ಕಾಲದಲ್ಲಿ ಆಡುತ್ತಿದ್ದ ಬಗೆಗೆ ಸಾಕಷ್ಟು ಸಾಹಿತ್ಯ ದಾಖಲೆಗಳಿವೆ. ಜನಸಾಮಾನ್ಯರ ಮಕ್ಕಳು ಬೀದಿಯಲ್ಲಿ ಆಡುವ ಕ್ರೀಡೆಯಾಗಿದೆ. ಚೆಣ್ಣಿಪೊಂಬಗೆರ್ಚೆಂಡು ಗುಸುಗುಸು ಕುದುಹಬ್ಬೆ[೮೦] ಹಾಗೆ ಚೆಣ್ಣಗೋಲುಗಳಾಡುತ್ತ ಪುಂಡರಿಕನು ಭಕುತಿಗೊಲಿದು ಬಂದುನಿಂದ[೮೧] ಹೀಗೆ ಅನೇಕ ಸಾಹಿತ್ಯ ದಾಖಲೆಗಳಿವೆ ಈ ಆಟಕ್ಕೆ ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಆಟಗಾರರಿರಬೇಕು ಬೇಕಾದ ವಸ್ತುಗಳು ಮೊಳಕೈ ಉದ್ದದ ಒಂದು ದಾಂಡು, ಗೇಣುದ್ದದ ಒಂದು ಚಿನ್ನಿ ಜಾಲಿ ಇತ್ಯಾದಿ ಮರಗಳಿಂದ ಮಾಡಿದ ಇವುಗಳನ್ನು ಮುಂದೆ ಚೂಪಾಗಿ ಕೆತ್ತಿರುತ್ತಾರೆ. ಸ್ವಲ್ಪ ನೆಲ ಕೆದರಿ ಚಿನ್ನಿಯನ್ನಿಟ್ಟು ದಂಡದಿಂದ ಅದನ್ನು ಮೇಲೆಬ್ಬಿಸಿ ಹೊಡೆಯಬೇಕು. ಇದಕ್ಕೆ ಸ್ವಲ್ಪ ದೈಹಿಕ ಬಲಬೇಕು, ಎಷ್ಟು ಬಲದಿಂದ ಹೊಡೆಯುತ್ತಾನೆ ಅಷ್ಟು ದೂರ ಹೋಗುತ್ತದೆ. ಅದನ್ನು ಹಿಡಿದರೆ ಆಟಗಾರ ಆಟ ಬಿಡಬೇಕು. ಹೀಗೆ ಈ ಆಟವನ್ನು ಪ್ರಾದೇಶಿಕವಾಗಿ ಭಿನ್ನ ಭಿನ್ನವಾಗಿ ಆಡುತ್ತಾರೆ. ಎರಡು ಗುಂಪುಗಳಾಗಿ ಆಡುವ ಈ ಆಟ ಒಂದು ತಂಡ ಗೆಲ್ಲುತ್ತದೆ ಗೆದ್ದ ತಂಡದವರು ಚಿನ್ನಿಯನ್ನು ಒಬ್ಬಬ್ಬರು ಇಂತಿಷ್ಟು ಹೊಡೆತ ಎಂದು ದೂರಕ್ಕೆ ಹೊಡೆಯುತ್ತಾರೆ. ಸೋತವರು ಅಲ್ಲಿಂದ ಪತ್ತದವರೆಗೆ ಕುಂಟುತ್ತಾ ಬರಬೇಕು. ಹೀಗೆ ಒಂದೊಂದು ಕಡೆ ಒಂದು ಆಟದ ನಿಯಮಗಳನ್ನು ಮಾಡಿಕೊಂಡು ಆಡುವರು. ಒಟ್ಟಿನಲ್ಲಿ ಇದೊಂದು ಗ್ರಾಮೀಣ ಕ್ರೀಡೆ. ಈ ಕ್ರೀಡೆಯು ಸ್ವಲ್ಪ ಇಂದಿನ ಕ್ರಿಕೆಟನ್ನು ಹೋಲುತ್ತದೆ. ಈ ಆಟದಿಂದ ಗುರಿ ಇಟ್ಟು ಹೊಡೆಯುವ ತಂತ್ರ ಅಂದರೆ ಚಿನ್ನಿಯನ್ನು ಮೇಲೆಬ್ಬಿಸಿ ಅವರ ದಾಂಡದಿಂದ ನಿಖರವಾಗಿ ಹೊಡೆಯಬೇಕು. ಇದರಿಂದ ಹೊಡೆಯುವ ಕೌಶಲ್ಯ ಬೆಳೆಯುತ್ತದೆ.

ದೊಂಬರಾಟ

ಡೊಂಬ ಅಥವಾ ದೊಂಬನು ದೈಹಿಕವಾದ ಆಟಗಳ ಮೂಲಕ ವಿಸ್ಮಯವನ್ನುಂಟು ಮಾಡಿ ಜನರನ್ನು ರಂಜಿಸುವರು. ಇವರು ಜನರಂಜನೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡು ಜೀವಿಸಬೇಕಾಗಿದ್ದರಿಂದ ಅವರು ಒಂದೇ ಊರಿನಲ್ಲಿ ಉಳಿಯಲು ಸಾಧ್ಯವಾಗುತ್ತಿರಲಿಲ್ಲ, ಆದ್ದರಿಂದ ಊರಿಂದೂರಿಗೆ ಹೋಗಿ ಜನರಿಗೆ ಬೇಸರ ಪರಿಹಾರ ಮಾಡುತ್ತಾ ಅಲೆಮಾರಿ ಜನಾಂಗದವರಾಗಿದ್ದರು. ದೊಂಬರು ಮದ್ರಾಸ್ ಪ್ರಾಂತ್ಯದ ನೆಲ್ಲೂರು ಜಿಲ್ಲೆಯಲ್ಲಿ ಹೆಚ್ಚು ಕಾಣಸಿಗುತ್ತಾರೆ. ಅವರು ತಮ್ಮ ಮೂಲ ಸ್ಥಾನವೆಂದು ಡೊಂಬರ ಮುದ್ದಲಾಪುರಂ ಎಂಬ ತೆಲುಗು ಗ್ರಾಮವೊಂದನ್ನು ಗುರುತಿಸುತ್ತಾರೆ.[೮೨] ವಿಜಯನಗರ ಸಾಮ್ರಾಜ್ಯದ ಆಸ್ಥಾನದಲ್ಲಿ ಇವರು ಆಸ್ಥಾನದ ದೊಂಬರಾಟದವರಾಗಿದ್ದರಲ್ಲದೆ ರಾಜನಿಂದ ವಿಶೇಷವಾದ ಇನಾಮುಗಳನ್ನು ಪಡೆಯುತ್ತಿದ್ದರು. ಈಗಲೂ ಜಮ್ಮಲ ಮಡಗು, ತಾಡಪತ್ರಿ, ಪೆದ್ದಟ್ಟೂರು, ಮತ್ತು ಗುಡೆ ಮಚೇರ್ಲ ಗ್ರಾಮಗಳನ್ನು ದೊಂಬರು ಇನಾಮಾಗಿಯೇ ಪಡೆದಿದ್ದೇವೆಂದು ಹೇಳುತ್ತಾರೆ.[೮೩] ಕರ್ನಾಟಕ ಭಾಗದಲ್ಲಿ ಪ್ರಸ್ತುತ ಇವರು ತುಮಕೂರು, ಗೌರಿಬಿದನೂರು, ಮಾಚೇನಹಳ್ಳಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ವಾಸಿಸುತ್ತಿದ್ದಾರೆ. ಇವರು ವಿವಿಧ ದೈಹಿಕ ಕಸರತ್ತುಗಳನ್ನು ಪ್ರದರ್ಶಿಸುತ್ತ ಜನರನ್ನು ರಂಜಿಸುತ್ತಿದ್ದರು. ಅಲ್ಲದೆ ಅಲೆಮಾರಿಗಳಾಗಿದ್ದರು ಎಂಬುದನ್ನು ವಚನಗಳಲ್ಲಿ ಸಾಕಷ್ಟು ದಾಖಲೆಗಳಿವೆ ಗಳೆಯಾಟ, ಮೀಣಿಯಾಟಗಳನ್ನು ದೊಂಬರು ತೋರಿಸುತ್ತಾರೆಂದು ವಚನಗಳು ಸ್ಪಷ್ಟಪಡಿಸುತ್ತವೆ. ದೊಂಬರು ಗಣೆಮಿಣಿಗಳಲ್ಲಿ ಕುಣಿದಾಡುತ್ತಿದ್ದರೆ ನೋಡುತ್ತಿದ್ದವರಿಗೆ ಅಶ್ವರ್ಯವುಂಟಾಗುತ್ತಿತ್ತು. ಗಣೆಯ ಮೇಲೆ ಆಟಗಳನ್ನು ತೋರಿಸುತ್ತಿದ್ದವನು ವಡ್ಡಾರಾಧನೆಯಲ್ಲಿ 'ಲಂಗಿಗ (ಪ್ರ) ಲಂಖಿಗ< ಲಂಖಿಕ (ಸಂ) ಎಂದು ಕರೆದಿದೆ.[೮೪] ದೊಂಬರಾಟವಾಡುವಾಗ ಒಬ್ಬನು ಆಟಗಳನ್ನು ಪ್ರದರ್ಶಿಸುತ್ತಾನೆ, ಮತ್ತೊಬ್ಬನು ಆಟದ ಗಮನ ಸಳೆಯುವುದಕ್ಕೆ ಆಟಕ್ಕೆ ಹಿನ್ನೆಲೆಯನ್ನೊದಗಿಸುವ ಕಾರಣದಿಂದಲೋ ಡೊಳ್ಳನ್ನು ಬಾರಿಸುತ್ತಿದ್ದ.[೮೫] ಡೊಂಬರು ತೋರಿಸುತ್ತಿದ್ದ ಮತ್ತೊಂದು ಆಟವೆಂದರೆ ತಾನು ಅಂಗಾತ ಮಲಗಿಕೊಂಡು ತನ್ನ ಎದೆಯ ಮೇಲೆ ದೊಡ್ಡ ಬಂಡೆಯನ್ನು ಹಾಕಿಸಿಕೊಂಡು ಬಾರ ಸಹಿಸುತ್ತಿದ್ದ.[೮೬] ಕೋಲಿನ ತುದಿಯ ಮೇಲೆ ಆಡುವ ಕೊಡಗನ ಚಿತ್ರವನ್ನು ಅಕ್ಕಮಹಾದೇವಿ ಕೊಡುತ್ತಾಳೆ.

ಗಣೆಯ ತುದಿಯಲ್ಲಿ ಶಸ್ತ್ರವನಿಟ್ಟು ವುಂಗುಟದ!
ಕೊನೆಯೂರಿ ವುಟವೆದ್ದು ಲಾಗುಲವಣೆಯ ಕೊಂಡು!
ಮಿಣಿಯ ಹುರಿಗಳ ಮೇಲೆ ಮರಗಾಲಕಟ್ಟಿ ದುವ್ವಾಳಿಸುತ ಡೊಂಬತಿಯರು!
ಮೆಣಿದು ಹಿಂಗರಣಮನೆ ಕೊಂಡು ವೊರೆಯುಗಿದಲಗ!
ತ್ರಿಣಯನಾಪರ ರೂಪನೇ ನೋಡು ನೋಡುದು ಡೋಳು ಬಡಿದರು ಹೊಂಬರು![೮೭]

ಅಂದರೆ ಒಂದು ಕೋಲಿನ ಮೇಲೆ ಸ್ತ್ರೀಯು ನಡೆದಾಡುತ್ತಿದ್ದರೆ ಕೆಳಗಿದ್ದ ಮತ್ತೊಬ್ಬನು ಡೊಳ್ಳು ಬಾರಿಸುತ್ತಾ ಹುರಿದುಂಬಿಸುತ್ತಿದ್ದ.

ಇವರು ಒಂದೇ ಸ್ಥಳದಲ್ಲಿ ನೆಲೆನಿಲ್ಲುತ್ತಿರಲಿಲ್ಲ, ಅಲೆಮಾರಿಗಳಾಗಿದ್ದರು. ಇವರ ಅಲೆಮಾರಿತನಕ್ಕೆ ಹಲವು ಉಲ್ಲೇಖಗಳು ದೊರೆಯುತ್ತವೆ. ಡಂಭಕಕ್ಕೆ ಡೊಂಬಂತೆ ತಿರುಗುವವ ಜಂಗಮನಲ್ಲ[೮೮] ಕುಂಭಿನಿಯ ತಿರುಗಿ ಕೋಟಿತೀರ್ಥನ ಮಿಂದಡೇನು, ಕುಂಭಿನಿಯ ತಿರುಗಿದ ಡೊಂಬನಂತೆ[೮೯] ಇವರು ಸಂತೆ, ಜಾತ್ರೆ, ಹಬ್ಬ, ಉತ್ಸವಗಳ ಸಮಯದಲ್ಲಿ ಜನರು ಒಂದೆಡೆ ಸೇರುವ ಕಡೆ ಪ್ರದರ್ಶನ ಕೊಡುತ್ತಿದ್ದರು.

ವಿಜಯನಗರ ಕಾಲದಲ್ಲಿ ದೊಂಬರು ಕೆಲವು ವೇಳೆ ಬಿದಿರಿನ ಗಣೆಯ ಮೇಲೆ ನಿಂತು ಅಥವಾ ಸೆಳೆದ ಹಗ್ಗದ ಮೇಲೆ ತೂಗಾಡುತ್ತಾ ಚೆಂಡುಗಳಿಂದ ಆಟವಾಡುತ್ತಾರೆ.[೯೦] ಹೀಗೆ ದೊಂಬರು ವಿಶೇಷವಾಗಿ ಮಹಾನವಮಿ ಹಬ್ಬದಂದು ವಿಶೇಷ ಪ್ರದರ್ಶನ ಕೊಟ್ಟ ರಾಜನಿಂದ ಇನಾಮು ಪಡೆಯುತ್ತಿದ್ದರು.

ದೊಂಬರಲ್ಲಿ ಆಟಗಳನ್ನು ಪ್ರದಶಿಸಲು ಹಲವಾರು ಸಾಧನಗಳಿರುತ್ತಿದ್ದವು. ಸುಮಾರು ಹದಿನೈದು ಅಡಿ ಅಂತರದಲ್ಲಿ ಸುಮಾರು ಹತ್ತು ಅಡಿ ಉದ್ದಕ್ಕೆ ಎರಡು ಬಲವಾದ ಬಿದಿರ ಕಂಬಗಳ ತುದಿಯಲ್ಲಿ ಕಿರು ಬೆರಳ ಗಾತ್ರದ ತಂತಿ ಅಥವಾ ಹಗ್ಗವನ್ನು ಬಿಗಿಯಾಗಿ ಕಟ್ಟಿ ಅದರ ಮೇಲೆ ಮಹಿಳೆಯರು ನಡೆದುಹೋಗುತ್ತಿದ್ದರು. ಸಮತೋಲನ ಕಾಪಾಡಿಕೊಳ್ಳಲು ಕೈಯಲ್ಲಿ ಒಂದು ದೊಡ್ಡ ಕೊಲನ್ನು ಅಡ್ಡಲಾಗಿ ಹಿಡಿದಿರುತ್ತಿದ್ದರು. ತಂತಿ ಅಥವಾ ಹಗ್ಗದ ಮೇಲೆ ನಡೆಯುವುದನ್ನು ಜನರು ಮೂಕವಿಸ್ಮಿತರಾಗಿ ನೋಡುತ್ತಾ ವಿನೋದ ಪಡೆಯುತ್ತಿದ್ದರು.

ಮತ್ತೊಂದು ಸಾಧನೆಯೆಂದರೆ ಮೂರು ಅಡಿಗಳ ಅಂತರದಲ್ಲಿ ಹನ್ನೆರಡು ಅಡಿ ಎತ್ತರದ ಎರಡು ಕಂಬಗಳನ್ನು ನಿಲ್ಲಿಸಿ ಮೂರು ದಿಕ್ಕುಗಳಲ್ಲಿ ತಂತಿಯ ಮೂಲಕ ಬಿಗಿಯಾಗಿ ಕಟ್ಟುತ್ತಿದ್ದರು. ಈ ಕಂಬಗಳ ಎಂಟು ಅಡಿ ಎತ್ತರದಲ್ಲಿ ಒಂದು ಕಬ್ಬಿಣದ ಕೊಳವೆ ಅಡ್ಡಲಾಗಿ ಕಟ್ಟುತ್ತಿದ್ದರು, ಅಡ್ಡಲಾಗಿ ಕಟ್ಟಿದ ಕಬ್ಬಿಣದ ಕೊಳವೆ ಮೇಲೆ ಗಂಡಸು ಎರಡು ಪಾದವಿಟ್ಟು ನಿಂತರೆ ಭದ್ರವಾಗಿ ಬಟ್ಟೆಯಿಂದ ಕಟ್ಟುತ್ತಿದ್ದರು. ಆಗ ಅವನು ಎರಡೂ ಕೈಗಳನ್ನು ಬೆನ್ನಿಂದೆ ಕಟ್ಟಿಕೊಂಡು ಗರಗರನೆ ತಿರುಗುತ್ತಾ ಜನರನ್ನು ರಂಜಿಸುತ್ತಿದ್ದರು. ಹೀಗೆ ಇದೆ ಕಂಬದ ಮೇಲೆ ಅನೇಕ ಚಮತ್ಕಾರದ ಆಟಗಳನ್ನು ಮಾಡುತ್ತಿದ್ದರು. ಪಕ್ಕನೆ ಮೇಲಕ್ಕೆ ಚಿಮ್ಮುವುದು, ಎರಡೆರಡು, ಮೂರು ಸಾರಿ ಲಾಗ ಹಾಕುವುದು, ಕತ್ತಿ ತಿರುಗಿಸುವುದು, ಕಬ್ಬಿಣದ ಗುಂಡೆಸೆದು ಹಿಡಿಯುವುದು, ಗಾತ್ರದ ಮರದ ದಿಮ್ಮಿಗೆ ನಡುವೆ ಹಗ್ಗ ಕಟ್ಟಿ ಅದನ್ನು ಹಲ್ಲಿನಿಂದಲೇ ಮೇಲಕ್ಕೆತ್ತುವುದು, ತಮ್ಮ ಉದ್ದವಾದ ಕೂದಲಿಗೆ ತುಂಬಿದ ಕೊಡ ಕಟ್ಟಿ ಅನಾಮತ್ತಾಗಿ ಮೇಲೆಳುವುದು, ಎತ್ತಿನ ಬಂಡಿ ಎಳೆಯುವುದು, ಬಂಡಿ ಚಕ್ರ ತಿರುಗಿಸುವುದು, ವೃತ್ತಾಕಾರದ ಬಳೆಯ ಸುತ್ತಾ ಪಂಜುಗಳನ್ನು ಕಟ್ಟಿ ಅದರೊಳಗಿಂದ ಜಗಿಯುವುದು ಇತ್ಯಾದಿ ಸಾಹಸದಾಟಗಳನ್ನು ಪ್ರದರ್ಶಿಸುತ್ತಿದ್ದರು. ಮಹಿಳೆಯರು ಅನೇಕ ಸಾಹಸ ಮಾಡುತ್ತಿದ್ದರು. ಒಂದು ಅಡಿ ವ್ಯಾಸವುಳ್ಳ ಕಬ್ಬಿಣದ ಬಳೆಯಲ್ಲಿ ಇಬ್ಬರು ಯುವತಿಯರು ಏಕಕಾಲದಲ್ಲಿ ನುಸುಳುವುದು, ಯುವತಿ ಅಥವಾ ಮಕ್ಕಳನ್ನು ಮಲಗಿಸಿ ಚಪ್ಪಟೆಯಾದ ಕಲ್ಲನ್ನಿಟ್ಟು ಸುತ್ತಿಗೆಯಿಂದ ಒಡೆಯುವುದು ಹೀಗೆ ಅನೇಕ ಕಸರತ್ತುಗಳ ಮೂಲಕ ಜನಸಮೂಹವನ್ನು ರಂಜಿಸುತ್ತಿದ್ದರು.

ಇಷ್ಟೇ ಅಲ್ಲದೆ ಜಾದು, ಮಾಟ, ಮಂತ್ರ, ಕುಣಿತ ಮಾಡುತ್ತಿದ್ದರು. ಆಟದ ಆರಂಭದಿಂದ ಮುಗಿಯುವವರೆಗೆ ಒಬ್ಬರಲ್ಲಿ ಒಬ್ಬರು ಡೋಲು ಬಾರಿಸುತ್ತಾ ಇರುತ್ತಾರೆ. ಕೆಲವು ಪ್ರಾಣಾಂತಿಕ ಆಟಗಳ ಪ್ರದರ್ಶನ ನಡೆಯುವ ಸಂದರ್ಭದಲ್ಲಿ ತಂಡದ ಮುಖ್ಯಸ್ಥ ಸಾರ್ವಜನಿಕರನ್ನು ಉದ್ದೇಶಿಸಿ ದಯಮಾಡಿ ಯಾರೂ ಕೈಕಟ್ಟ ಬೇಡಿ ಎಲ್ಲರೂ ಚಪ್ಪಾಳೆ ಹೊಡೆಯಿರಿ ಎಂದು ಹೇಳುತ್ತಿರುತ್ತಾರೆ. ಈ ಬಗ್ಗೆ ಜನರಲ್ಲಿ ಒಂದು ನಂಬಿಕೆಯಿದೆ. ಅದೇನೆಂದರೆ ಯಾರಾದರೂ ತಂತ್ರ, ಮಂತ್ರ ತಿಳಿದವರು ಆಟಕ್ಕೆ ತೊಂದರೆ ಮಾಡಬಹುದು ಆ ಕಾರಣಕ್ಕೆ ಎಲ್ಲರ ಗಮನವನ್ನು ತಮ್ಮ ಕಡೆ ಸಳೆಯುವರು ಹಾಗೂ ಕೈಚಪ್ಪಾಳೆ ಒಡೆಯಲು ಹೇಳುವುದರಿಂದ ಯಾರು ಏನೂ ಕೈಚಳಕ ಮಾಡದಂತೆ ತಡೆಯುವ ಉದ್ದೇಶವಿದೆ ಎನ್ನುತ್ತಾರೆ.[೯೧]

ಹೆಂಗಸರು ಯಾವ ರೀತಿಯ ದೈಹಿಕ ಕಸರತ್ತು ಮಾಡುತ್ತಿದ್ದರು ಎಂಬುದಕ್ಕೆ ಕೃದಾಭಿರಾಂ ಕೃತಿಯು ವಿವರಣೆ ನೀಡುವಂತೆ ಒಬ್ಬ ಯುವತಿಯು ಹಿಂದಕ್ಕೆ ಬಾಗಿ ಒಂದು ನೀರಿನ ತೊಟ್ಟಿಯ ಕೆಳಗೆ ಇಡಲಾಗಿದ್ದ ಮೂಗಿನಾಭರಣ ಎತ್ತಿಕೊಂಡಳು ತಕ್ಷಣವೇ ಅದನ್ನು ಮೂಗಿಗೆ ಧರಿಸಿದಳು,[೯೨] ನಂತರ ಒಂದು ದಾರಕ್ಕೆ ಬಹಳ ಜೋರಾಗಿ ಗಾಜಿನ ಮಣಿಗಳನ್ನು ಪೋಣಿಸಿದಳು. ಈ ರೀತಿಯಾಗಿ ತಮ್ಮ ನೈಪುಣ್ಯತೆಯನ್ನು ಪ್ರದರ್ಶಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಇವರಿಗೆ ಪ್ರಮುಖ ಸ್ಥಾನಮಾನವಿತ್ತು. ಮಹಾನವಮಿ ಉತ್ಸವಕ್ಕೆ ರಾಜಧಾನಿಯಲ್ಲಿ ನೆರೆದ ಗಣ್ಯರು ಮತ್ತು ಜನಸಾಮಾನ್ಯರಿಗೆ ದೊಂಬರು ತುಂಬು ರಂಜನೆಯನ್ನು ನೀಡುತ್ತಿದ್ದರು.[೯೩] ಇವರು ತಮ್ಮ ಆಟವನ್ನು ಪ್ರದರ್ಶಿಸುವುದಾಗಿ ಕ್ರಿ.ಶ. ೧೫೩೭ರಲ್ಲಿ ಒಪ್ಪಂದ ಮಾಡಿಕೊಂಡರು. ಇವರ ಪ್ರಯೋಜನಕ್ಕಾಗಿ ದೊಂಬರಿಪನ್ನು ಎಂಬ ಕಾಣಿಕೆಯನ್ನು ಆಗಾಗ ಸರಕಾರವು ಸಂಗ್ರಹಿಸುತ್ತಿದ್ದುಂಟು.[೯೪] ವಿಜಯನಗರ ಶಾಸನದಲ್ಲಿ ಸದಾಶಿವರಾಯನ ಆಳ್ವಿಕೆ ಕಾಲದಲ್ಲಿ ದೊಂಬರು ಚೌಡಿನಾಯಕರ ಮಗ ತಿಮ್ಮರಾಜನು ತಮ್ಮ ಕುಲಕ್ಕೆ ಹಾಗೂ ರಾಮರಾಜಯ್ಯ ಕೊಂಡ ರಾಜ ಅಯ್ಯನವರಿಗೆ ಪುಣ್ಯವಾಗಲಿ ಎಂದು ದೇವರಿಗೆ ಸೇವೆಗಾಗಿ ದತ್ತಿಯನ್ನು ಕೊಟ್ಟಿದ್ದು ದಾಖಲಿಸಿದೆ.[೯೫]

ಹಾಗೆ ಗಣೆಯ ಮೇಲೆ ಪ್ರದರ್ಶನ ನಡೆಸುತ್ತಿದ್ದ ಯಲ್ಲಕ್ಕನೆಂಬ ಡೊಂಬತಿ ಬಿದ್ದು ಪ್ರಾಣತ್ಯಾಗ ಮಾಡಿದ್ದರಿಂದ ಅವಳ ಹೆಸರಲ್ಲಿ ಒಂದು ವೀರ ಸ್ಮಾರಕವನ್ನು ನಿರ್ಮಿಸಲಾಯಿತು.[೯೬] ರತ್ನಾಕರನು ಕೊಡುವ ನಾನಾ ಕ್ರೀಡೆಗಳ ವರ್ಣನೆಯಲ್ಲಿ ದೊಂಬರಾಟವೂ ಒಂದು. ರಾಜನ ಮುಖಕಮಲವನ್ನು ನೋಡುತ್ತಾ ಗಣೆಯನೇರಿದ ಡೊಂಬರು ಆ ಎತ್ತರದಿಂದಲೇ ಅವನ ಕಣ್ಣ ಸೂಚನೆಯನ್ನು ಕಾಯುತ್ತ ತಟಪನುಬ್ಬಿ ತಮ್ಮ ಚಮತ್ಕಾರಗಳನ್ನು ತೋರಿದರು ಎಂದು ಕವಿ ವರ್ಣಿಸುತ್ತಾನೆ.

ಅಂಬರ ತುಡುಕೆಗಳೆಯನೇರಿ ನೃಪನುಮುಖಾಬುಜವನೆ ನೋಡುತಿರ್ದು
ಕಂಬೆಳಗೊಲೆಯಲೊಡನೆ ತಟಪಟನುಬ್ಬಿಡೊಂಬರು ಲಾಗುದೋರುವರು.[೯೭]

ದಾಸಸಾಹಿತ್ಯದಲ್ಲಿ ದೊಂಬಾರಾಟ ಪ್ರಸ್ತಾಪವಿದೆ. ಇಂಥ ದೊಂಬರಾದಾಟದಲ್ಲಿ ಕಲಿತೆಯೇ ರಂಗ[೯೮]

ಡಂಭ ಭಕ್ತಿಗೆ ಮೆಚ್ಚಿಕೊಂಡನು ಕೃಷ್ಣ
ಡೊಂಬಲಾಗವ ಹಾಕಿ ಡೊಂ ಡೊಂಡೆ ಹೊರಳಿದರಿಲ್ಲ್''

ಇಲ್ಲಿ ಕೃಷ್ಣ ಮತ್ತು ಭಕ್ತ ಇಬ್ಬರ ವ್ಯಕ್ತಿತ್ವದ ನೆಲೆಯನ್ನು ದೊಂಬರ ಲಾಗಕ್ಕೆ ಹೋಲಿಸಲಾಗಿದೆ. ಕೃಷ್ಣನ ವಿಶಿಷ್ಟ ಗುಣಗಳ ಹಿನ್ನೆಲೆಯಲ್ಲಿ ಇದನ್ನು ಹೇಳಲಾಗಿದೆ. ಭಕ್ತನ ಡಂಭಾಚಾರದ ಭಕ್ತಿಯನ್ನು ದೊಂಬರಾಟಕ್ಕೆ ಹೋಲಿಸಿದ್ದಾರೆ. ಪೂರ್ವಾಭಿಮುಖವಾಗಿರುವ ಚಂಡಿಕೇಶ್ವರ ದೇವಾಲಯವು ಕಮಲಾಪುರದಿಂದ ಹಂಪಿಗೆ ಹೋಗುವ ದಾರಿಯ ಎಡಭಾಗದಲ್ಲಿದೆ. ಮುಖಮಂಟಪದ ಏಳನೆಯ ಕಂಬದ ದಕ್ಷಿಣ ಭಾಗದಲ್ಲಿ ದೊಂಬರಾಟದ ವಿಶಿಷ್ಟ ಶಿಲ್ಪವಿದೆ. ಅಂದಿನ ದೊಂಬರು ಯಾವ ರೀತಿಯ ಕಸರತ್ತುಗಳನ್ನು ಪ್ರದರ್ಶಿಸುತ್ತಿದ್ದರು. ಎಂಬುದಕ್ಕೆ ಈ ಶಿಲ್ಪದ ಭಂಗಿಯಿಂದ ತಿಳುಯುತ್ತದೆ. ಇದರಲ್ಲಿ ಒಬ್ಬ ಸ್ತ್ರೀಯು ಹಿಂದಕ್ಕೆ ಬಾಗಿ ಕೆಳಗೆ ಇಟ್ಟಿರುವ ವಸ್ತುವನ್ನು ಬಾಯಿಯಿಂದ ತೆಗೆಯುವಂತಿದೆ. ಸ್ತ್ರೀಯು ತಲೆಗೆ ಪೇಟವನ್ನು ತೊಟ್ಟಿದ್ದಾಳೆ. ಎದೆ ಮತ್ತು ಸೊಂಟಕ್ಕೆ ಮಾತ್ರೆ ಬಟ್ಟೆಯನ್ನು ಧರಿಸಿರುವಳು. ಇದೇ ರೀತಿಯ ಶಿಲ್ಪ ಮಾಲ್ಯವಂತ ರಘುನಾಥ ದೇವಾಲಯದ ಉತ್ತರಕ್ಕೆ ಇರುವ ಲಕ್ಷ್ಮೀ ದೇವಾಲಯದಲ್ಲಿ ಎಡಗಡೆಯಿಂದ ನಾಲ್ಕನೇ ಕಂಬದ ಕೆಳಭಾಗದ ಉತ್ತರಕ್ಕೆ ಕೆಳಭಾಗದಲ್ಲಿದೆ. ಈ ರೀತಿಯ ಶಿಲ್ಪಗಳು ವಿಜಯನಗರದ ಸ್ಮಾರಕಗಳ ಮೇಲೆ ಅಪರೂಪಕ್ಕೆಂಬಂತೆ ಕಾಣಸಿಗುತ್ತವೆ. ಗೊರಂಟ್ಲದ ಮಾಧವರಾಯ ದೇವಸ್ಥಾನದ ಹದಿನಾರನೆಯ ಕಂಬ, ಪಟ್ಟಾಭಿರಾಮದೇವಾಲಯದ ರಂಗಮಂಟಪದ ಇಪ್ಪತ್ತನೆಯ ಕಂಬದ ಪಶ್ಚಿಮಾಭಿಮುಖವಾಗಿ ಕೆಳಭಾಗ, ಇಪ್ಪತ್ತೊಂದನೆಯ ಕಂಬದ ದಕ್ಷಿಣಾಭಿಮುಖವಾಗಿ ಮಧ್ಯ, ಅಚ್ಯುತದೇವಾಲಯದ ಮುಂದಿನ ಮಂಟಪದ ಇಪ್ಪತ್ತೋಂಬತ್ತನೆಯ ಕಂಬ, ಸುಗ್ರೀವ ಗುಹೆಯ ಪಾಳುದೇವಾಲಯದಲ್ಲಿನ ಭಿತ್ತಿಯಲ್ಲಿ ಹೀಗೆ ವಿಜಯನಗರದ ಸ್ಮಾರಕಗಳ ಮೇಲೆ ಸಾಮಾನ್ಯವಾಗಿ ದೊಂಬರಾಟದ ಶಿಲ್ಪಗಳಿವೆ. ಮೇಲಿನ ಶಾಸನ, ಸಾಹಿತ್ಯ ಕೃತಿ ಶಿಲ್ಪಗಳಿಂದ ದೃಢಪಡುವ ಪ್ರಮುಖ ಅಂಶವೆಂದರೆ ಅಂದು ದೊಂಬರಾಟವು ನಡೆಯುತ್ತಿತ್ತು. ಅದರಿಂದ ಸಾಮಾನ್ಯರಾಧಿಯಾಗಿ ಅರಸರು ವಿನೋದವನ್ನು ಪಡೆಯುತ್ತಿದ್ದರು.

೩..೨.ಬೌದ್ಧಿಕ ಕ್ರೀಡೆಗಳು

ಬೌದ್ಧಿಕ ಅಂದರೆ ಬುದ್ಧಿವಂತಿಕೆ, ಜ್ಞಾನ, ತಿಳುವಳಿಕೆ, ಕಸರತ್ತು ಅಂದರೆ ಸಾಮರ್ಥ್ಯ ಕ್ರಿಯೇ ಎಂಬುದಾಗಿ ಹೇಳಬಹುದು. ಬೌದ್ಧಿಕ ಕಸರತ್ತಿನ ಕ್ರೀಡೆಗಳಲ್ಲಿ ತನ್ನ ಚಾಣಾಕ್ಷತೆ ಕುಶಾಗ್ರಮತಿಯಿಂದ ನಡೆದುಕೊಳ್ಳಬೇಕಾಗುವುದು. ಇವುಗಳನ್ನು ಬೌದ್ಧಿಕ ಕಸರತ್ತಿನ ಕ್ರೀಡೆಗಳು ಎನ್ನಬಹುದು. ಸಾಮಾನ್ಯವಾಗಿ ಎಲ್ಲಾ ಕ್ರೀಡೆಗಳಲ್ಲಿಯು ಬುದ್ಧಿ ಪ್ರಧಾನವಾಗಿರುತ್ತದೆ. ಆದರೆ ಕೆಲವು ಕ್ರೀಡೆಗಳು ಅತಿ ಹೆಚ್ಚು ಚಾಣಾಕ್ಷ ನಡೆಯ ಮುಖಾಂತರ ಆಡಬೇಕಾಗುತ್ತದೆ. ಅಂತಹ ಕ್ರೀಡೆಗಳನ್ನು ಬೌದ್ಧಿಕ ಕಸರತ್ತಿನ ಕ್ರೀಡೆ ಎಂದು ಕರೆಯಬಹುದು.

ಉದಾ; ಚದುರಂಗ, ಪಗಡೆ, ಚೌಕಾಬಾರ ಇತ್ಯಾದಿಗಳನ್ನು ಬೌದ್ಧಿಕ ಕಸರತ್ತಿನ ಕ್ರೀಡೆಗಳೆಂದು ವಿಭಾಗಿಸಿ ಅಧ್ಯಯನಕೊಳಪಡಿಸಿ ವಿಶ್ಲೇಷಿಸಲಾಗಿದೆ.

ಚದುರಂಗ

ಚದುರಂಗ ಅದೃಷ್ಟ ಅವಲಂಬಿಸಿದ ಕ್ರೀಡೆಯಲ್ಲ. ಶುದ್ಧವಾಗಿ ಆಟಗಾರರ ಆಲೋಚನೆ, ಯೋಚನಾ ಸಾಮರ್ಥ್ಯ ಮತ್ತು ಮುಂದಾಲೋಚನೆ ಅವಲಂಬಿಸಿದ ಕ್ರೀಡೆ, ಹಾಗಿದ್ದು ಇದು ಎಷ್ಟು ಕ್ಲಿಷ್ಟವಾಗಿರಬಲ್ಲುದೆಂದರೆ ಒಂದು ಪಂದ್ಯದಲ್ಲಿ ಒಟ್ಟು ನಡೆಗಳ ಸಂಖ್ಯೆ ವಿಶ್ವದಲ್ಲಿರುವ ಎಲ್ಲಾ ಪರಮಾಣುಗಳ ಸಂಖ್ಯೆಗಿಂತಲೂ ಹೆಚ್ಚು ಎಂದು ಲೆಕ್ಕ ಹಾಕಲಾಗಿದೆ.[೧೦೦] ಚದುರಂಗ ಪ್ರಪಂಚದ ಅತ್ಯಂತ ಜನಪ್ರಿಯ ಕ್ರೀಡೆಗಳಲ್ಲೊಂದು. ಕೆಲವರ ವರ್ಣನೆಯಂತೆ ಇದು ಕೇವಲ ಕ್ರೀಡೆಯಾಗಿರದೆ ಇದೊಂದು ಕಲೆ, ವಿಜ್ಞಾನ, ಯುದ್ಧ ಕಲೆ ಮತ್ತು ಮಾನಸಿಕ ವ್ಯಾಯಾಮ ಎಂದು ವರ್ಣಿಸಿದವರೂ ಉಂಟು.

ಮನರಂಜನೆ ಹಾಗೂ ಸ್ಪರ್ಧಾತ್ಮಕವಾಗಿ ಪ್ರಪಂಚದಾದ್ಯಂತ ಈ ಕ್ರೀಡೆಯನ್ನು ಆಡಲಾಗುತ್ತಿದೆ. ಚದುರಂಗವು ಎಷ್ಟು ಪ್ರಾಚೀನವೆಂದರೆ ಪುರಾತನ ರಾಷ್ಟ್ರಗಳು ಅದರ ಜನ್ಮ ಸ್ಥಳ ತಮ್ಮದೆ ಎಂದು ಹೇಳುತ್ತವೆ. ಸಾಮಾನ್ಯವಾಗಿ ಪ್ರಾಕ್ತನ ಶಾಸ್ತ್ರಜ್ಞರು ಅಂಗೀಕರಿಸಿದ ದೃಷ್ಟಿಕೋನದಂತೆ ಇದು ಭಾರತದಲ್ಲಿ ಉಗಮವಾಯಿತು. ಲೋಥಾಲದಲ್ಲಿಯ ಆಟದ ಕಾಯಿಗಳು, ಸುಟ್ಟಮಣ್ಣು, ಶಂಖ, ಮೂಳೆ, ದಂತ ಮತ್ತು ಕಲ್ಲುಗಳಿಂದ ದುರ್ಗದಾಕಾರದ (castle shaped) ಆಟದ ಕಾಯಿಗಳು ಮೂಲತಃ ರಾಜನನ್ನು ಮತ್ತು ಅವನ ಮಂತ್ರಿಗಳನ್ನು ಸೂಚಿಸುತ್ತಿದ್ದವು. ದಪ್ಪ ಹಾಗೂ ಗಿಡ್ಡದ ದುರ್ಗಾಕೃತಿಯ ಮೇಲೆ ಹಾಗೂ ಕೆಳಗೆ ಚಕ್ರದಂತಿದ್ದು ಇಂದಿನ ಆನೆಯನ್ನು ಹೋಲುತ್ತವೆ. ಎತ್ತರವಾದ ಶಂಕುವಿನಾಕಾರದ ಮತ್ತು ಗುಬುಟಿನ ತಲೆಯ ವಸ್ತು ರಥ ರಂಧ್ರವಿರುವ ಅಥವಾ ಇಲ್ಲದ ಸಣ್ಣ ಚತುರ್ಮುಖಗಳು ಪಾದಾತಿ ಈ ಆಟದ ಕಾಯಿಗಳು ವಿವಿಧ ಗಾತ್ರಗಳು ಬೇರೆ ಬೇರೆ ಮೌಲ್ಯಗಳನ್ನು ತೋರಿಸುತ್ತಿದ್ದವೋ, ಇಲ್ಲವೆ ಬೇರೆ ಬೇರೆ ಆಟದ ಕಾಯಿಗಳ ಜೊತೆಗಳೂ(gambliny set)ತಿಳಿದಿಲ್ಲ. ಲೋಥಾಲದಲ್ಲಿ ಸಿಕ್ಕಿರುವ ಚಪ್ಪಟೆಯಾದ ತಳವುಳ್ಳ ಮತ್ತು ನಾಯಿ, ಕುದುರೆ, ಗೂಳಿಗಳನ್ನು ಹೋಲುವ ಪ್ರಾಣಿ ತಲೆಗಳುಳ್ಳ ಮಣ್ಣಿನ ಪ್ರಾಣಿಯಾಕಾರದ ವಿಗ್ರಹಗಳನ್ನು ಇಲ್ಲಿ ಉಲ್ಲೇಖಿಸಬಹುದು. ಬಹುಶಃ ಅವುಗಳಲ್ಲೊಂದು ಭಾರತೀಯ ಚದುರಂಗದ ಕುದುರೆಯನ್ನು ಪ್ರತಿನಿಧಿಸುತ್ತದೆ. ಹರಪ್ಪಾದ ಹಾಗೂ ಇಂದಿನ ಚದುರಂಗದ ಕಾಯಿಗಳನ್ನು ಆಧುನಿಕ ಚದುರಂಗದ ಮಣಿಯ ಮೇಲೆ ಅಕ್ಕಪಕ್ಕದಲ್ಲಿಟ್ಟು ಅವುಗಳಲ್ಲಿ ನಿಕಟವಾದ ಸಾಮ್ಯವನ್ನು ತೋರಿಸಲಾಗಿದೆ.[೧೦೧]

ಈ ಕ್ರೀಡೆಯು ಭಾರತದಲ್ಲಿಯೇ ಉಗಮವಾಯಿತು ಎಂಬುದಕ್ಕೆ ಭಾರತೀಯರು ಒಂದು ದಂತಕತೆ ಹೇಳುತ್ತಾರೆ. ನಮ್ಮ ಯುಗದ ಐದನೆಯ ಶತಮಾನದ ಆರಂಭದಲ್ಲಿ ಒಬ್ಬ ಹಿಂದೂ ರಾಜನು ತನ್ನ ಬ್ರಾಹ್ಮಣ ಮತ್ತು ಕ್ಷತ್ರಿಯ ಅಭಿಮಾನಿಗಳನ್ನು ಅವರ ಮಂತ್ರಾಲೋಚನೆಗಳನ್ನು ನಿರ್ಲಕ್ಷಿಸುವ ಮೂಲಕ ನೋಯಿಸಿದ. ಪ್ರಜೆಗಳ ಪ್ರೀತಿಯೇ ಸಿಂಹಾಸನಕ್ಕೆ ಸಿಗುವ ಖಚಿತವಾದ ಬೆಂಬಲ ಎನ್ನುವುದನ್ನು ಮರೆತ. ಸೀಸ್ಸ ಎಂಬ ಒಬ್ಬ ಬ್ರಾಹ್ಮಣ ತರುಣ ರಾಜನ ಕಣ್ತೆರೆಸುವ ಛಲ ಕೈಗೊಂಡು ಅವನು ಒಂದು ಆಟವನ್ನು ಸೃಷ್ಟಿಸಿದ. ಅದರಲ್ಲಿ ರಾಜನನ್ನು ಪ್ರತಿನಿಧಿಸುವ ಪಾನು ಘನತೆ ಮತ್ತು ಮೌಲ್ಯದಲ್ಲಿ ಅತ್ಯುನ್ನತವಾದರೂ ಏಕಾಂಗಿಯಾಗಿ

ಬಹುತೇಕ ನಿಸ್ಸಹಾಕವಾಗಿತ್ತು. ರಾಜನು ಈ ಆಟವನ್ನು ಮೆಚ್ಚಿಕೊಂಡ ಸಿಸ್ಸನಿಗೆ ಏನು ಬಹುಮಾನ ಬೇಕೆಂದು ಕೇಳಿದ. ಸಿಸ್ಸನು ವಿನಮ್ರವಾಗಿ ಕೆಲವು ಅಕ್ಕಿ ಕಾಳು ಕೊಟ್ಟರೆ ಸಾಕೆಂದು ಹೇಳಿದ. ಚತುರಂಗದ ಮಣಿಯ ಅರವತ್ನಾಲ್ಕು ಮನೆಗಳಲ್ಲಿ ಮೊದಲನೆಯ ಮನೆಯಲ್ಲಿ ಒಂದು ಕಾಳು ಮುಂದಿನ ಮನೆಗಳಲ್ಲಿ ದುಪ್ಪಟ್ಟು ಮಾಡಿಕೊಳ್ಳುತ್ತಾ ಹೋಗಬೇಕು. ಈ ರೀತಿಯಲ್ಲಿ ಧಾನ್ಯದ ಪ್ರಮಾಣವನ್ನು ನಿರ್ಧರಿಸಬೇಕು ಎಂದು ಸಿಸ್ಸ ಹೇಳಿದ. ರಾಜನು ಇದಕ್ಕೆ ಕೂಡಲೇ ಒಪ್ಪಿಕೊಂಡ ಆದರೆ ಅಲ್ಪ ಕಾಲದಲ್ಲಿಯೇ ತನ್ನ ಸಾಮ್ರಾಜ್ಯವನ್ನೇ ಉಡುಗೊರೆಯಾಗಿ ಕೊಟ್ಟು ಬಿಡಬೇಕಾಗುತ್ತದೆ. ಎಂದು ತಿಳಿದು ಆಶ್ವರ್ಯಚಕಿತನಾದ ಆಗ ಸಿಸ್ಸನು ಈ ಅವಕಾಶವನ್ನು ಉಪಯೋಗಿಸಿಕೊಂಡು ಒಬ್ಬ ರಾಜನು ತನ್ನ ಮಂತ್ರಾಲೋಚಕರನ್ನು ಕಡೆಗಣಿಸಿದರೆ ಎಷ್ಟು ಸುಲಭವಾಗಿ ದಾರಿ ತಪ್ಪಿಸಬಹುದು ಎಂದು ತನ್ನ ರಾಜನಿಗೆ ಮನವರಿಕೆ ಮಾಡಿಕೊಟ್ಟ.[೧೦೨] ಕ್ರಿ.ಶ. ೬ನೆಯ ಶತಮಾನದಲ್ಲಿ ಪರ್ಶಿಯನ್ನರು ಈ ಕ್ರೀಡೆಯನ್ನು ಕಲಿತುಕೊಂಡರು. ಅರಬರು ಪರ್ಶಿಯಾವನ್ನು ಸೋಲಿಸಿದ ಮೇಲೆ ಇದು ಬೇಗನೆ ಮಧ್ಯಪ್ರಾಚ್ಯದಲ್ಲೆಲ್ಲ ಹರಡಿತು. ಚತುರಂಗದ ಪರ್ಶಿಯನ್ ವಿರೂಪ ಶತರಂಜ ಎಂಬ ಹೆಸರು ಪಡೆದುಕೊಂಡಿತು.

ಇದು ಇಬ್ಬರು ಆಡುವ ಕ್ರೀಡೆಯಾಗಿ ಬೆಳೆಯಿತು. ಪ್ರತಿಯೊಬ್ಬರು ಎರಡೂ ಪಡೆಗಳನ್ನು ಮುನ್ನಡೆಸುತ್ತಿದ್ದರು. ಒಂದು ಪಡೆಯ ರಾಜ ಇನ್ನೊಂದರ ಸೇನಾಧಿಪತಿ ಅಥವಾ ಮಂತ್ರಿಯಾದ ದಾಳ ಬಿಳಿಸಿ ಮುನ್ನಡೆಸುವುದನ್ನು ನಿಲ್ಲಿಸಲಾಯಿತು. ಈ ಸುಧಾರಣೆಗಳನ್ನು ಭಾರತದಲ್ಲಿ ಮಾಡಲಾಯಿತೊ ಅಥವಾ ಪರ್ಶಿಯಾದಲ್ಲೇ ಎಂಬುದು ಖಚಿತವಾಗಿ ತಿಳಿಯದು. ಆದರೆ ಪರ್ಶಿಯಾದಲ್ಲಿ ಮಾಡಿರಬಹುದಾದ ಸಾಧ್ಯತೆ ಹೆಚ್ಚಾಗಿದೆ.[೧೦೩] ಪ್ರಾಚೀನ ಕಾಲದಲ್ಲಿ ಈ ಕ್ರೀಡೆಯನ್ನು ಚತುರಂಗವೆನ್ನುತ್ತಿದ್ದರು.[೧೦೪] ಜಾಣತನದ ಆಟವಾದ ಇದನ್ನು ಸಾಮಾನ್ಯವಾಗಿ ಪಂಡಿತರು, ಶ್ರೀಮಂತರು, ಅರಸರು ಆಡುತ್ತಿದ್ದರು. ಪಟ್ಟದ ಕಲ್ಲಿನ ಮಲ್ಲಿಕಾರ್ಜುನ ಗುಡಿಯ ಸಭಾಮಂಟಪದ ಕಂಬವೊಂದರಲ್ಲಿ ಅರಸ ಅರಸಿಯರಿಬ್ಬರೂ ಕ್ರೀಡೆಯನ್ನಾಡುವ ದೃಶ್ಯವನ್ನು ಕೆತ್ತಲಾಗಿದೆ. ಹಾಸುಮಣಿ ಮತ್ತು ಕಾಯಿಗಳು ಸ್ಪಷ್ಟವಾಗಿ ಚಿತ್ರಿತವಾಗಿವೆ. ಚಾಲುಕ್ಯೋತ್ತರ ಕಾಲದಲ್ಲಿ ಸೋಮೇಶ್ವರನು ತನ್ನ ಕೃತಿಯಲ್ಲಿ ಚತುರಂಗ ಕ್ರೀಡೆಯನ್ನು ಉಲ್ಲೇಖಿಸಿದ್ದಾನೆ.[೧೦೫] ೨ನೇಹೊಯ್ಸಳ ಬಲ್ಲಾಳನ ಒಂದು ಶಾಸನದಲ್ಲಿ ಈ ಕ್ರೀಡೆಯ ಉಲ್ಲೇಖವಿದೆ. ತಿರಿಚ್ಯ ದಿವಾಕರಾದೀ (ನ್) ನುಂಬನಮ್ರನಿರ್ಮಳುರಂಚಃಕಿಮು ತಾರಿವರ್ಗ್ಗಂ ಅಗ್ರೇಯಸ್ಯ. ಚ ವಿಗ್ರಹೇಣುರು ಟಿತತ್ಯಾಕ್ತ ಚಲೂೀನಿಶ್ಚಲಂ ಪಾಂಡ್ಯಸ್ತಾಂಡುವ ಶಾಲಿನಂ, ಚತುಂಗಂ ತ್ಯಾಕ್ತ್ಯ ವಿವಿಕ್ತಾಸನಃ ಬಿಭ್ಯತ್ಯಾನನ ಮಧ್ಯವೇತ್ಯವಿವಶ(ಃ) ಸ್ತತ್ರಾಪಿ ಭಯೋಭಯಾನ್ ಮಾತ್ಯುದ್ಬುತ ವಿಕ್ರಮೋ ವಿಜಯತೇ ಬಲ್ಲಾಳ ಭೂಪಾಳಕಃ!![೧೦೬]

ಈ ಶಾಸನ ಬಲ್ಲಾಳನ ಕಾಲದಲ್ಲಿ ಚತುರಂಗವನ್ನು ಅರಸರು ಆಡುತ್ತಿದ್ದರು ಎಂಬುದು ತಿಳಿಯುತ್ತದೆ. ವಿಜಯನಗರ ಕಾಲದಲ್ಲಿ ಈ ಕ್ರೀಡೆ ತುಂಬಾ ಪ್ರವರ್ಧಮಾನದಲ್ಲಿತ್ತು ಎಂಬುದಕ್ಕೆ ಅಂದಿನ ಸಾಹಿತ್ಯ ಕೃತಿಗಳ ಉಲ್ಲೇಖ, ಉತ್ಪನನದ ವೇಳೆ ದೊರೆತ ಮಾಹಿತಿಗಳಿಂದ ದೇವಾಲಯಗಳ ಮುಂದೆ, ಕಲ್ಲಿನ ಹಾಸುಪಟದ ನಕಾಶೆಯಲ್ಲಿ ತಿಳಿಯುತ್ತದೆ.

ನಂಜುಂಡ ಕವಿ ರಾಮನಾಥ ಚರಿತೆಯಲ್ಲಿ ಚದುರಂಗದಾಟದ ಉಲ್ಲೇಖವಿದೆ.

ಚಿತ್ತ ಸಂಭವ ರತಿಯಾಡ ನಿರದಾಡುವ
ನೆತ್ತದ ಹಲಗೆಯಂದದಲಿ
ಚಿತ್ತವನಿರದ ವಶೀಕರಿಸುವ ಬೆನ್ನಿ
ಸುತ್ತಮ ಪುರಷನಾರಿವನು[೧೦೭]

ದೊಡ್ಡಜಾಣೆಯಾಳಾದ ನುಡಿದರೆ ಸತಿ ಸರಿ! ಯಾಡ್ಡದೆ ಕುಸಿದು ನುಡಿದಳು ಅದರಿಂದ ಜಾಣಜಾಣೆಯಾರಾಟವೆಂಬುದು! ಚದುರಂಗದಾಟದಂತಿಹುದು.[೧೦೮]

ಧಾರಣಿಗೆ ಲೋಕಾನುಸಾರಿಯೆ
ಸಾರಿಯೊಗಲು ನೆತ್ತದಲ್ಲಿ ಪರಿ
ಪೂರಿತೋದಾತ್ತ ಪ್ರಾಸಾದಾನುಭವದವಧಾನ
ಸಾರಮತಿ ಪದಿನೈದು ತನ್ನಯ
ನಾರಿ ಪದಿನೈದುಂ ಚದುರಿನ ವಿ
ಚಾರನಿರ್ಣಯವೆಂಬ ಹಲಗೆಯ, ಮೇಲೆಯಂತಿರಿಸಿ[೧೦೯]

ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ
ಅಚ್ಚಪಳದಿಯ ಕಾಯ ಜೋಡ ಮೇಲೊತ್ತದೊಡೆ
ನಚ್ಚಿರ್ದ ಕೈಯ ಕರಿದಿನ ಹಿಂಡ ಹಿಡಿಯದೊಡೆ
ಮೆಚ್ಚಿನಾಟಕೆ ಮೀರಿ ಬಂದ ಕೆಂಪಿನ ಹಣ್ಣ ನಂಡಲೆಂದು ಬಿಡದಿರ್ದೊಡೆ
ಬಚ್ಚನಾಲಗೆಯ ಬೀಳೆಂದು ಹಾಸಂಗಿಯಂ
ಪಚ್ಚೆಯ ವಿದೂಷಕನುರುಚ್ಚಿದಂ ಬಾಲೆಯರ
ಮೆಚ್ಚಿಸುವ ಕಟಕಿವಾತುಗಳ ಜಾಣ್ಣಿಗಳಿಂದ ಪಗಡೆಯೊಡುವ ನೆವರೂಳ[೧೧೦]

ಸಾಮಾನ್ಯವಾಗಿ ಅಂದು ಅರಸ, ಶ್ರೀಮಂತ ಪ್ರಜೆಗಳು ಮಾತ್ರ ಈ ಕ್ರೀಡೆಯನ್ನು ಆಡುತ್ತಿದ್ದಿರಬೇಕು. ಇದು ಒಂದು ಒಳಾಗಂಣ ಕ್ರೀಡೆಯಾಗಿದ್ದು ಅರಮನೆಯ, ಮನೆಯ ಒಳಗಡೆ ಮಾತ್ರ ಆಡುತ್ತಿದ್ದರು. ಇಮ್ಮಡಿ ದೇವರಾಯನಿಗೆ ಚದುರಂಗದಾಟವೆಂದರೆ ಬಹಳ ಪ್ರೀತಿ. ಒಂದು ಸಂದರ್ಭದಲ್ಲಿ ಈ ಆಟವನ್ನು ಉತ್ತಮ ನಂಬಿಯೊಡನೆ ಆಡಿದ್ದುಂಟು.[೧೧೧] ದೈರ್ಯಶಾಲಿಯಾದ ಬೊಡ್ಡಚರ್ಲ್ಲಿ ತಿಮ್ಮನ್ನನು ಕೃಷ್ಣದೇವರಾಯನೊಡನೆ ಚದುರಂಗದಾಟವಾಡಿ ಗೆಲ್ಲುತ್ತಿದ್ದನಂತೆ.[೧೧೨] ಕೃಷ್ಣದೇವರಾಯನ ಮಗಳು ಮೊಹನಾಂಗಿ ಎಂಬ ಉಪನಾಮವುಳ್ಳ ತಿರುಮಲಾಂಬೆಯೊಂದಿಗೆ ಚದುಂರಗವನ್ನಾಡುತ್ತಿದ್ದನಂತೆ, ಹೊನ್ನಮ್ಮಳು ಈ ಕ್ರೀಡೆಯಲ್ಲಿ ಬಹಳ ಹೆಸರುವಾಸಿಯಾಗಿದ್ದಳು.[೧೧೩] ಇವಳು ಅಚ್ಯುತರಾಯನ ಕಾಲದಲ್ಲಿ ಜೀವಿಸಿದ್ದಳು.[೧೧೪]

ಹೀಗೆ ವಿಜಯನಗರ ಕಾಲದಲ್ಲಿ ಚದುರಂಗದಾಟವು ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು ಎಂಬುದನ್ನು ಮೇಲಿನ ಉಲ್ಲೇಖಗಳು ದೃಢೀಕರಿಸುತ್ತವೆ. ಅದರೆ ಈ ಕ್ರೀಡೆ ಅಂದು ಕೇವಲ ಅರಸು ಶ್ರೀಮಂತ ವರ್ಗಕ್ಕೆ ಸೀಮಿತವಾಗಿರಲ್ಲಿಲ್ಲ ಜನಸಾಮಾನ್ಯರೂ ಬಿಡುವಿನ ವೇಳೆಯಲ್ಲಿ ಆಡುತ್ತಿದ್ದರು. ಎಂಬುದಕ್ಕೆ ಹೇಮಕೋಟದಲ್ಲಿ ಕಲ್ಲಿನ ಮೇಲೆ ದೊರೆಯುವ ಹಾಸುಪಟವೇ ಸಾಕ್ಷಿ. ಈ ಕ್ರೀಡೆಯು ಬರೀ ಮನರಂಜನೆ, ಸಮಯ ವ್ಯರ್ಥಕ್ಕೆ ಸೀಮಿತವಾಗಿರಲಿಲ್ಲ ಇದೊಂದು

ಸಮರ ಕ್ರೀಡೆಯಾಗಿದೆ. ಇದರಲ್ಲಿ ಯುದ್ಧ ನಿಯಮಗಳಷ್ಟೆ ಆಮದಾಗಿರದೆ, ಯುದ್ಧದ ದೃಷ್ಯಶ್ಯಗಳೇ ಯಥಾವತ್ತಾಗಿ ಕ್ರೀಡೆಯಾಗಿ ಪರಿವರ್ತನೆಗೊಂಡಿದೆ. ಇದರಲ್ಲಿ ಆಡಳಿತ ವ್ಯವಸ್ಥೆಯ ಪ್ರತಿರೂಪವಾದ ರಾಜ, ರಾಣಿ, ಆನೆ, ಕುದುರೆ, ಸೈನಿಕ, ಇವುಗಳನ್ನು ಮುನ್ನಡೆಸುವ ರೀತಿಯ ಒಂದು ರಾಜ್ಯವನ್ನು ಮುನ್ನೆಡೆಸಿದ ಅನುಭವವಾಗುತ್ತದೆ.

ಪಗಡೆಯಾಟ

ಭಾರತದಲ್ಲಿ ಬಹುಕಾಲದಿಂದಲೂ ಅತೀವ ಜನಪ್ರೀಯತೆ ಉಳಿಸಿಕೊಂಡಿರುವ ಕ್ರೀಡೆ ಪಗಡೆಯಾಟ. ಅರಸನ ಮನೆಯಿಂದ ಆಳಿನ ಮನೆಯವರೆಗೂ ಹಬ್ಬಿರುವ ಖ್ಯಾತಿ ಅದರದ್ದು, ಪಗಡೆಯಾಟಕ್ಕೆ ಈ ಅಮರತ್ವದ ಪಟ್ಟ ದೊರಕಿದ್ದು ಮಹಾಭಾರತದಿಂದ, ಅಲ್ಲಿನ ಧರ್ಮರಾಯನಿಂದ. ಈ ಆಟದ ಮೂಲಕ ಆತ ತನ್ನ ಸರ್ವಸ್ವವನ್ನೂ ಸೋತಿದ್ದರಿಂದ 'ಪಗಡೆಯಾಡಿ ಪಾಂಡವರು ಕೆಟ್ಟರು' ಎಂಬ ಗಾದೆಯ ಮಾತಿದೆ. ಇದರಿಂದ ಮಹಾಭಾರತ ಕಾಲಕ್ಕೂ ಹಿಂದೆಯೇ ಈ ಕ್ರೀಡೆ ಜನಪ್ರಿಯವಾಗಿತ್ತು ಎಂದು ತಿಳಿದುಬರುತ್ತದೆ. ಋಗ್ವೇದದಲ್ಲಿ ಪಗಡೆಯಾಟದ ಉಲ್ಲೇಖವಿರುವುದು ಗಮನಾರ್ಹ. ೧೦ನೆಯ ಮಂಡಲದ ೩೪ನೆಯ ಸೂಕ್ತದಲ್ಲಿದೆ. ಕನ್ನಡ ನಾಡನ್ನಾಳಿದ ಅನೇಕ ಅರಸು ಮನೆತನಗಳಲ್ಲಿ ಈ ಕ್ರೀಡೆ ತುಂಬಾ ಜನಪ್ರಿಯವಾಗಿದ್ದುದಕ್ಕೆ ಅಂದಿನ ಸಾಹಿತ್ಯ ಕೃತಿಗಳಲ್ಲಿನ ಉಲ್ಲೇಖಗಳು ಸಾಕ್ಷ್ಯಗಳಾಗಿವೆ.

ಪಂಪ ರನ್ನರಲ್ಲಿ ಪಗಡೆಯಾಟದ ಪ್ರಸ್ತಾಪವಿದೆ. ಆದಿ ಕವಿ ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಪಗಡೆಯಾಟದ ಉಲ್ಲೇಖ ಮಾಡಿದ್ದಾನೆ.

ನೇತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲ ಮನೀವುದೆಂದು ಕಾಡುತ್ತಿರೆ
ಲಂಬಣಂಪರೆಯೇ ಮುತ್ತಿನ ಕೇಡನೆ ನೋಡಿ ನೋಡಿ ಬಳ್ಳುತ್ತಿರ[೧೧೫]

ಇಲ್ಲಿ ಇದನ್ನು ನೆತ್ತದಾಟ ಎಂದು ಕರೆದಿರುವರು. ಇದು ಮನೆಯೊಳಗಿನ ಕ್ರೀಡೆಯಾಗಿದ್ದು ಸ್ತ್ರಿ-ಪುರುಷರಿಬ್ಬರೂ ಆಡುವ ಕ್ರೀಡೆಯಾಗಿತ್ತು. ಬೇಸರ ನೀಗಿಸಿಕೊಳ್ಳುವುದಕ್ಕಾಗಿ ಇದನ್ನು ಹೆಚ್ಚಾಗಿ ಆಡುತ್ತಿದ್ದರು.

ರನ್ನ ಕವಿಯ ಅಜಿತ ತೀರ್ಥಂಕರ ಪುರಾಣ ತಿಲಕಂ ಕಾವ್ಯದಲ್ಲಿ ನೆತ್ತದಾಟದ ಪ್ರಸ್ತಾಪವಿದೆ.

ತ್ರಿದಶಕುಮಾರರ್ ನೆತ್ತದ
ಚದುರಂಗದ ಮುಟ್ಟನೆರೆಯಂ ಮರವಟ್ಟಂ
ಪದೆ ಮೊದೆ ವಸಗ್ಗ ದಿಂತಂ
ದು ಕೆಲಗೆಲ ದೊಳಾಡುವರ್ ಜನಪತಿಯ

ಭೀಮಕವಿಯ ಬಸವ ಪುರಾಣದಲ್ಲಿ ನೆತ್ತದಲ್ಲಿ ಪರಿಪೂರಿತೋದಾತ್ತ ಪ್ರಸಾದನು ಭವದವಧನ[೧೧೬]ಜೈಮಿನಿ ಭಾರತದಲ್ಲಿ ಬಚ್ಚ ನಾಲಗೆಯ ಬೀಳೆಂದು ಹಾಸಂಗಿಯಂ ಪಚ್ಚೆಯ ವಿದೂಷಕನುರುಳ್ಚಿದಂ[೧೧೭] ರಾಮನಾಥ ಚರಿತದಲ್ಲಿ ನೆತ್ತದ ಹಲಗೆಯಂದದಲಿ[೧೧೮] ಹೀಗೆ ಕನ್ನಡದ ಅನೇಕ ಕವಿಗಳ ಕೃತಿಗಳಲ್ಲಿ ಈ ಪಗಡೆಯಾಟದ ಉಲ್ಲೇಖವಿರುವುದನ್ನು ನೋಡಿದರೆ ಈ ಕ್ರೀಡೆಯ ವೈಶಾಲ್ಯತೆ ಕಂಡುಬರುತ್ತದೆ. ಪಗಡೆ, ಚದುರಂಗದಾಟಗಳು ಬಹಳ ಹಿಂದಿನಿಂದ

ಬಂದ ಜನಪ್ರಿಯ ಕ್ರೀಡೆಗಳಾದರೂ ಅವು ಒಂದು ರೀತಿಯಲ್ಲಿ ಜನರ ವ್ಯರ್ಥ ಕಾಲಹರಣಕ್ಕೆ ವಿತ್ತನಾಶಕ್ಕೆ ಎಡಗೊಟ್ಟು ಜೂಜಿನ ಮಟ್ಟಕ್ಕೆ ಒಯ್ದು ಅವರನ್ನು ಹಾಳು ಮಾಡುತ್ತಿದ್ದವು ಎಂಬ ಭಾವನೆಗಳು ವ್ಯಕ್ತವಾಗಿವೆ.

'ಲೆತ್ತ ಪಗಡೆ ಚದುರಂಗದಾಟದೊಳ ಹೊತ್ತುಗಳೆಯುತ್ತಿದ್ದ ನಿತ್ಯ ನಿತ್ಯ ಈ ಪರಿ ಆಯುಷ್ಯವ ವ್ಯರ್ಥ ಕಳೆಯುತಲಿದ್ದ ರೂಣ್ಯ'[೧೯೯]

ನೆತ್ತ ಚದುರಂಗ ಪಗಡೆಂಯು ಚಿತ್ತಾಂಯುಂ ಓಂಯ್ದುದಾಂಯು ಬಿಡಿವಲ್ ಸೋಗಳಿಯುತ್ತಮರಾಡರು, ಅಡಲ್ಬೆತ್ತಲೆಯಹ ಭಂಗಬಪ್ಪನೆಂಬದು.[೨೦೦] ನನ್ನ ಕಾಯನು ಹಣ್ಣು ಮಾಡಿ ಮಲಗಿಸಿದನೊ ಎಂಬ ಪ್ರಯೋಗ ಪಗಡೆಯಾಟದಲ್ಲಿ ಇಂದಿಗೂ ಉಳಿದಿರುವ ಪರಿಭಾಷೆಯನ್ನು ಸೂಚಿಸುತ್ತದೆ. ಹಾಗೆಯೇ ಪಗಡೆಯಾಟಕ್ಕೆ ಸಂಬಂಧಿಸಿದಂತೆ ಆಟಗಾರರು ತಮಗೆ ಗೆಲವು ದೊರೆಯಲೆಂದು ಹಲವಾರು ದೇವತೆಗಳಿಗೆ ಮಾಡಿಕೊಳ್ಳುವ ಹರಕೆ[೨೦೧] ಆಟ ನಡೆಯುತ್ತಿರುವಾಗ ಸ್ಫೂರ್ತಿಗೊಂಡು ದುಗನ ಹಾಯಿಕು ತನಗೆ ಹಾಯ್ಕಿತ್ತಿಗನವೆಂಬಬ್ಬರದ ಹಾಸುಗಿಳಬೊಬ್ಬೆಯ ಸಾರಿಗಳು[೨೦೨] ಪಗಡೆಯಾಟದಲ್ಲಿ ಬರುವ ಚೌಕ, ದುಚ್ಚೌಕ, ಚೌಕಾದಾಯ, ಚೌಕದಂಗ, ಚೌಪಂಚಿ ಎಂಬ ಪಾರಿಭಾಷಿಕ ಶಬ್ದಗಳನ್ನು ಕನ್ನಡ ಕಾವ್ಯಗಳಲ್ಲಿ ಗುರುತಿಸಬಹುದು. ಕೆಲವು ಶಬ್ದಗಳು ಪಗಡೆಯಾಟದ ವರ್ಣನೆಯ ಸಂದರ್ಭದಲ್ಲಿ ಬಂದಿದ್ದರೆ ಮತ್ತೆ ಕೆಲವು ಪ್ರಾಸಂಗಿಕವಾಗಿ ಬಂದಿವೆ. ಬೇಡ ಚೌಕದ ಮಾತು ನಿನಗೆಂದಾಡುವಂದಾ ಚೌಕಾದಾಯವನಾಡುವನು[೨೦೩] ತಾಂ ಚೌಕದುಗವಂ ಚೌಕದು ಗಕಿಕ್ಕಿ[೨೦೪] ಈ ವರ್ಣನೆಗಳು ಪಗಡೆಯಾಟದ ಚಿತ್ರಣವನ್ನು ನೀಡಿದ್ದಾರೆ. ಸಾರಿಗಳು ಪರಾಕರಿಸಿ ಸುಂಕಿಗನಂತಿರಹೊಡಿ ರೇಖೆಯಂ ಚೌಕದುಗ ನಿದುಗ ನಿದ್ದುಗ ನಿತ್ತಿಗನೆಂಬ ದಾಯಂ ಪೋರಿಸಿ ಬೇಡಿದದಾಳ ಮಳವಟ್ಟರೆ[೨೦೫] ಆಟಗಾರರು ಆಡುತ್ತಿರುವಾಗ ಆಟದಲ್ಲಿ ಗೆಲ್ಲಲು ಒಂದು ಚೌಕವೋ, ಚೌಪಂಚಿಯೋ ಬೇಕಾಗಿರುತ್ತದೆ. ಆಗ ಕೈಲಿ ದಾಳ ಹಿಡಿದು ಮನದಲ್ಲಿ ತಾವು ಅಪೇಕ್ಷಿಸಿದ್ದೇ ಬೀಳಲೆಂದು ಬಾಯಲ್ಲಿ ಮತ್ತೆ ಮತ್ತೆ ಹೇಳಿಕೊಳ್ಳುತ್ತಾ ದಾಳವನ್ನು ಉರುಳಿಸುತ್ತಿರುತ್ತಾರೆ. ಅಂತಹ ಒಂದು ನವುರಾದ ಚಿತ್ರವೊಂದು ಇಲ್ಲಿದೆ. ಇರ್ದುಗಮುಂಮ ಚೌಪಂಚಿಯಿರ್ಪಂ ಚಿಯಿತ್ತಿಗೆದೊಳದ್ರಿಕೆ ಕಚ್ಚೆ ಚೌಕದುಗಮಂ ಚೌಪಂಚಿಯಾಯೆಂದು ಕರೆಯುತ್ತ ಲೆತ್ತಮನಲಂಪಬೆತ್ತು ತಾವಾಡಿದರ್[೨೦೬] ದಶಕುಮಾರ ಚರಿತೆಯಲ್ಲಿ ಹತ್ತು ವಿಧವಾದ ನೆತ್ತವನಾಡುವನೆಯ ಕೆರಳಿಸಿದ ಪ್ರಸಂಗ ಬರುತ್ತದೆ. ಆರಿದಿರಾದೊಡಾಡಿದ ಪೆನೆಕ್ಕಡಿಯುಪಡೆ ಪಂಚ ಬಾಯಮಂ ವೀರ ವಿಳಾಸಮಂ ತಗರಸನ್ನೆಯನ್ನೈದರಡಂ ನೆಗರ್ವ ಚೌಸಾರಿಯನಾರು ಪನ್ನೆರಡನೊಪ್ಪುವ ರಾಜಕುಮಾರನಂ ಮಹೋದಾರಾವನೊಡ್ಡಿ ದೊಡ್ಡನೆನುತೆನ್ನ ನವಂ ಕಡುಪಿಂ ಕೆರಳಿದಂ ಇವು ಮೊದಲಾಗಿ ಪತ್ತು ವಿಧದ ನೆತ್ತವನಾಡುವೆನೆಂದನ್ನಂ ಕೆರಳ್ವಲ್[೨೦೭] ಈ ಕ್ರೀಡೆಯಲ್ಲಿ ಯಾವುದು ಮೇಲು ಯಾವುದು ಕೀಳು ಎಂಬುದನ್ನು ಅಳೆಯುವುದು ಕಷ್ಟವಾದರೂ ರತ್ನಾಕರನು "ಚದುರಂಗ-ಪಗಡೆಯೊಟಗಳನ್ನು ತನ್ನದೆ ಆದ ರೀತಿಯಲ್ಲಿ ವಿಮರ್ಶಿಸಿದ್ದಾನೆ. ಲೆತ್ತಪಗಡೆಯ ಬಲುಬೊದಿನಿಂದ-ಪುತ್ತುಗಳೆದನಾ ರಾಜಕುಮಾರ[೨೦೮] ಎಂದು ಕುಮಾರ ರಾಮನಾಥನು ಹೊತ್ತು ಕಳೆಯುತ್ತಿದ್ದ ನಾನಾ ರೀತಿಯನ್ನು ಕವಿ ವರ್ಣಿಸಿದ್ದಾನೆ.

ಪಗಡೆಯಾಟವು ಅಂದು ಸಾಮಾಜಿಕ ಜೀವನದಲ್ಲಿ ಹಾಸುಹೊಕ್ಕಾಗಿದ್ದಿತು. ಎಂಬುದು ಕಾವ್ಯಗಳ ಉಲ್ಲೇಖದಿಂದ ತಿಳಿಯುತ್ತದೆ. ಅಲ್ಲದೆ ನಮಗೆ ಶಿಲ್ಪ, ದೇವಾಲಯಗಳ ಚಾವಡಿಗಳಲ್ಲಿ ದೊರೆಯುವ ಕುರುಹುಗಳಿಂದಲೂ ಈ ಕ್ರೀಡೆ ಹೆಚ್ಚು ಜನಪ್ರಿಯವಾಗಿತ್ತು. ಚಾಲುಕ್ಯರ ಶಿಲ್ಪಗಳಲ್ಲಿ ಈ ಆಟದ ಸನ್ನಿವೇಶಗಳನ್ನು ಕಾಣಬಹುದು. ಪಟ್ಟದ ಕಲ್ಲಿನ ಮಲ್ಲಿಕಾರ್ಜುನ ಗುಡಿ ಕಂಬವೊಂದರಲ್ಲಿ ಮೇಲಿನ ಶಿವಪಾರ್ವತಿಯರು ಪಗಡೆಯಾಡುವ ದೃಶ್ಯವನ್ನು ಕೆತ್ತಲಾಗಿದೆ. ಅವರಿಬ್ಬರ ನಡುವೆ ಪಗಡೆಯ ಹಾಸು ಇದೆ. ಅದೇ ಗುಡಿಯ ಇನ್ನೊಂದು ಕಂಬದ ಮೇಲೆ ಕೌರವರು ಪಾಂಡವರು ಪಗಡೆಯಾಡುವ ದೃಶ್ಯವಿದೆ. ಐಹೊಳೆ ಜ್ಯೋತಿರ್ಲಿಂಗ ಗುಡಿ ಗುಂಪಿನ ಗುಡಿಯೊಂದರ ಪಶ್ಚಿಮಗೋಡೆಯ ಮೇಲೆ ಮಾಳಿಗೆ ಹಂಚಿನ ಹತ್ತಿರ ಶಿವ ಪಾರ್ವತಿಯರು ಪಗಡೆಯಾಡುವ ಸನ್ನಿವೇಶವನ್ನು ಕೊರೆಯಲಾಗಿದೆ. ವಿಜಯನಗರದ ದೇವಾಲಯದ ಮುಂದಿನ ಕಟ್ಟೆಗಳ ಮೇಲೆ ಬಂಡೆಗಳ ಮೇಲೆ ಸಾಕಷ್ಟು ಪಗಡೆಯಾಟದ ಚಿತ್ರಗಳಿರುವುದನ್ನು ಕಾಣಬಹುದು. ಹೇಮಕೂಟ, ಜಿನಾಲಯ, ವಿಜಯವಿಠಲ ದೇವಾಲಯ, ಪಟ್ಟಾಭಿರಾಮ ದೇವಾಲಯ ಜಗಲಿಗಳ ಮೇಲೆ ಈ ಕ್ರೀಡೆಯ ಹಾಸುಪಟಗಳಿವೆ.

ಈ ಕ್ರೀಡೆಯಲ್ಲಿ ಯುದ್ಧತಂತ್ರದ ಹಿನ್ನೆಲೆ ಮತ್ತು ಹುಟ್ಟು ಸಾವಿನ ಕಲ್ಪನೆ ಕಾಣುಬಹುದು. ಇದರಲ್ಲಿ ಎರಡು ಗುಂಪಿನ ಆಟಗಾರರು ತಮ್ಮ ಕಾಯಿಗಳನ್ನು ಮುನ್ನೆಡೆಸುತ್ತಿರುತ್ತಾರೆ. ಒಂದು ಗುಂಪಿನವರ ಕಾಯಿಯನ್ನು ಮತ್ತೊಂದು ಗುಂಪಿನವರು ಕಡಿಯಬೇಕು. ಅಂದರೆ ಮುಂದೆ ಹೋಗದಂತೆ ತಡೆಯಬೇಕು. ಎಲ್ಲಾ ಹಂತ ದಾಟಿಹೋದರೆ ಅವನು ಜಯಶಾಲಿಯಾದಂತೆ, ವಿರೋಧಿ ಮನೆಯ ಮುಂದಿನ ಕಟ್ಟೆ ಮನೆ ಸೇರಿದರೆ ಆ ಮನೆ ಅವನದೆ. ಈ ರೀತಿಯಾಗಿ ಕಟ್ಟೆ ಮನೆಗಳನ್ನು ವಶಪಡಿಸಿಕೊಳ್ಳುತ್ತಾ ಮುಂದೆ ಮುಂದೆ ಸಾಗಿ ಹಣ್ಣಿನ ಮನೆ ಸೇರಿದರೆ ಅವನು ಜಯಶಾಲಿಯಾದಂತೆ. ಈ ರೀತಿ ಎಲ್ಲಾ ಕಾಯಿಗಳನ್ನು ಹಣ್ಣು ಮಾಡಿದರೆ ಗೆದ್ದಂತೆ. ಈ ಕ್ರೀಡೆಯಲ್ಲಿ ನಾವು ಹುಟ್ಟು-ಸಾವಿನ ಪರಿಕಲ್ಪನೆ ನೋಡಬಹುದು. ಇಲ್ಲಿ ಜನನಕ್ಕಿಂತ ಮರಣದ ವಿವಿಧ ಮುಖಗಳನ್ನು ಅರ್ಥವತ್ತಾಗಿ ಮುಂದಿಡುತ್ತದೆ. ಒಂದು ಕಾಯಿ ಜನನವಾಗಿ ಎಲ್ಲಾ ಹಂತ ದಾಟಿ ಕೊನೆಗೆ ಹಣ್ಣಾದರೆ ಸ್ವರ್ಗಕ್ಕೆ ಹೋದಂತೆ. ವಿರೋಧಿ ಬಳಗದಿಂದ ಕಡಿಸಿಕೊಂಡರೆ ಮತ್ತೆ ಪುನರ್‌ಜನ್ಮದ ಅವಕಾಶ, ಅಂದರೆ ಮತ್ತೊಮ್ಮೆ ಹುಟ್ಟಬರಲು ಅವಕಾಶವಿದೆ.

ಒಟ್ಟಾರೆ ಇಲ್ಲಿ ಯುದ್ಧತಂತ್ರ, ಹುಟ್ಟು ಸಾವು, ಸ್ವರ್ಗ, ನರಕ, ಪುನರ್ಜನ್ಮ ವಿವಿಧ ಮುಖಗಳೊಂದಿಗೆ ಚಾಣಾಕ್ಷತೆ ಮತ್ತು ಅದೃಷ್ಟ ಎರಡನ್ನೊ ಅರ್ಥವತ್ತಾಗಿ ಈ ಕ್ರೀಡೆಯಲ್ಲಿ ಅಂದಿನ ಜನರು ಅಳವಡಿಸಿಕೊಂಡಿದ್ದಾರೆ. ಪಗಡೆಯಾಟದ ಕುರುಹುಗಳು ಹಜಾರಾರಾಮಚಂದ್ರ, ವಿಜಯವಿಠಲ, ಮಾಲ್ಯವಂತ ರಘುನಾಥ, ಅನಂತಶಯನ ಗುಡಿ, ಹೇಮಕೂಟ, ಆಂಧ್ರದ ತಾಡಪತ್ರಿ, ಗೊರಂಟ್ಲ, ಲೇಪಾಕ್ಷಿ ದೇವಾಲಯಗಳ ಮುಂದಿನ ಜಗುಲಿಯ ಮೇಲೆ ಕೊರೆಯಲಾಗಿದೆ. ಅಂದಿನ ಜನರ ವಿರಾಮದ ವೇಳೆಯನ್ನು ಕಳೆಯಲು ಈ ಆಟದ ಮೊರೆ ಹೋಗಿದ್ದರು ಎನ್ನುವುದು ಈ ಎಲ್ಲಾ ದಾಖಲೆಗಳಿಂದ ದೃಢಪಡಿಸಬಹುದು.

ಚೆನ್ನೆಮಣೆಯಾಟ

ಒಬ್ಬರು, ಇಬ್ಬರು ಆಡಬಹುದಾದ ಈ ಆಟಕ್ಕೆ ಮಣೆಪತ್, ಅಟ್ಟುಗುಳಿಯಾಟ, ಅಟ್ಟುಗೋಳಾಟ, ಹಳಗುಮಣೆಯಾಟ, ವಾಮನಗುಂಟಲು ಇತ್ಯಾದಿ ಹೆಸರುಗಳಿವೆ.[೧೯]

ಚೆನ್ನೆ ಒಂದು ವಿಶಿಷ್ಟವಾದ ಶಬ್ದವಾಗಿದೆ. ವ್ಯಕ್ತಿಗಳ ಹೆಸರುಗಳಲ್ಲಿ ಚೆನ್ನ, ಚೆನ್ನಿ, ಚೆನ್ನಪ್ಪ, ಚೆನ್ನಮ್ಮ ಇತ್ಯಾದಿಗಳು ಕಂಡುಬರುತ್ತವೆ. ಇದರಿಂದ ಚೆನ್ನ ಎಂಬ ಹೆಸರಿನ ನಿಷ್ಪತ್ತಿಯನ್ನು ಹುಡುಕುವುದು ಕಷ್ಟವಾಗುತ್ತದೆ. ಕನ್ನಡದಲ್ಲಿ ಚೆನ್ನ ಮತ್ತು ಚೆನ್ನೆ ಪದಗಳಿಗೆ ಸುಂದರ–ಸುಂದರಿ ಎಂಬರ್ಥಗಳಿವೆ. ಇದರಿಂದ ಚೆನ್ನ ಪದಕ್ಕೆ ಆಟದ ಸ್ವರೂಪದಲ್ಲಿ ನಿಷ್ಪತ್ತಿಯನ್ನು ಸೂಚಿಸುವ ಅಗತ್ಯವಿದೆ. ಪೀಟರ್ ಜೆ. ಕ್ಲಾಸ್ ತಮ್ಮ ತುಳುವ ಪುರಾಣ ಮತ್ತು ಆರಾಧನಾ ಸಂಪ್ರದಾಯಗಳೆಲ್ಲ ಚೆನ್ನ ಎಂಬ ಪ್ರಬಂಧದಲ್ಲಿ ಚೆನ್ನ ಶಬ್ದಕ್ಕೆ ಸುಂದರ ಮನೋಹರ ಆಕರ್ಷಕ ಮೊದಲಾದ ಅರ್ಥ ನೀಡುತ್ತಾರೆ.[೨೦] ಆದರೆ ಈ ಅರ್ಥಗಳು ಆಟದೊಂದಿಗಾಗಲಿ, ಮಣೆಯೊಂದಿಗಾಗಲಿ ಯಾವುದೇ ಸಂಬಂಧ ಹೊಂದಿಲ್ಲವೆಂಬುದು ಸೂಚಿಸುತ್ತದೆ. ಹಿಂದಿನ ಕಾಲದಲ್ಲಿ ಲೋಹದ ಚೆನ್ನೆ ಮಣಿಗಳು ಬಳಕೆಯಾಗುತ್ತಿದ್ದು ಸುಂದರ ಆಕಾರಗಳಿಂದಾಗಿ ಈ ಶಬ್ದ ಬಂದಿರಬೇಕು. ಪಾಡ್ದನಗಳಲ್ಲಿ ಬೆಳ್ಳಿಯ ಮಣಿ ಮತ್ತು ಬಂಗಾರದ ಕಾಯಿಗಳ ಉಲ್ಲೇಖ ಬರುತ್ತದೆ. ಕನ್ನಡ ಪ್ರದೇಶಗಳಲ್ಲಿ ಈ ಆಟವನ್ನು ಚೆನ್ನೆಮಣೆ ಆಟವೆಂದು ಕರೆಯುತ್ತಾರೆ. ಚೆನ್ನ ಎಂಬ ಪದಕ್ಕೆ ಸುಂದರ ಎಂಬ ಆಕರ್ಷಕ ಹೆಸರು ದ್ರಾವಿಡ ಮೂಲದಿಂದ ಬಂದಿರಬಹುದು.[೨೧]

ಕನ್ನಡ ಸಾಹಿತ್ಯ ಕೃತಿಗಳಲ್ಲಿ ಈ ಆಟದ ಉಲ್ಲೇಖವಿದೆ. ಹದಿನಾಲ್ಕು ಗುಳಿಗಳುಳ್ಳ ಮಣೆಯನ್ನಿಟ್ಟುಕೊಂಡು ಆ ಗುಳಿಗಳಲ್ಲಿ ಹುಣಸೆ ಬೀಜ, ಕವಡೆ, ಮೊದಲಾದವನ್ನು ತುಂಬಿ ಆ ಕಾಳುಗಳನ್ನು ಒಂದೊಂದಾಗಿ ಮುಂದಿನ ಗುಳಿಗಳಲ್ಲಿ ಹಾಕುತ್ತಾ ಆಡುವ ಆಟ ಇದನ್ನು ಕೆಲವು ಕವಿಗಳು ಅಟ್ಟುಗುಳಿಯಾಟ, ಗೊಟ್ಟುಗೊಳಿಯಾಟ, ಗುಳ್ಳಗೊಟ್ಟಯಾಟ ಎಂದು ಪ್ರಯೋಗ ಮಾಡಿದ್ದಾರೆ.

ಇದು ಪ್ರಮುಖವಾಗಿ ಸ್ತ್ರೀಯರಾಡುವ ಆಟ ಎಂಬುದಕ್ಕೆ ಏಣಾಕ್ಷಿಯೋರ್ವಳಾಡುವ ಗೊಟ್ಟುಗುಳಿಯು...?[೨೨] ಎಂಬ ಕಾವ್ಯ ಪ್ರಯೋಗದಲ್ಲಿ ಸ್ತ್ರೀಯರಾಡುವ ಆಟ ಎಂಬುದರ ಸುಳಿವು ಇದೆ. ಈ ಕ್ರೀಡೆಯನ್ನು ಹರಳು ಗುಣಿ ಮಣೆ ಆಟ ಎಂದು ದಕ್ಷಿಣ ಕನ್ನಡದಲ್ಲೂ ಚೆನ್ನಾಮಣೆ ಆಟ ಎಂದು ಕರಾವಳಿ ಪ್ರದೇಶದಲ್ಲೂ ಕರೆಯುತ್ತಾರೆ.[೨೩] ಚೆನ್ನಮಣೆ ಆಟ ಎಂಬುದು ಹಳೇ ಮೈಸೂರು ಪ್ರದೇಶಗಳಾದ ಹಾಸನ, ತುಮಕೂರು, ಮುಂತಾದ ಕಡೆ ಇದೆ. ಈ ಕ್ರೀಡೆಯನ್ನು ಪ್ರಾದೇಶಿಕವಾಗಿ ವಿಭಿನ್ನ ಪ್ರಕಾರಗಳಲ್ಲಿ ಆಡುವುದಿದೆ. ತುಳುನಾಡಿನ ಪ್ರದೇಶಗಳು ಅರಸಾಟ, ಮಂತ್ರಿಯಾಟ, ಮಠ, ಕೋಡಿಲ್ಲ ಕಟ್ಟೆ, ಎರಟಿ ಕಟ್ಟೆ, ಎರಡೆ ಮುಕ್ಕೆ, ಕತ್ತರಿ, ಅಜ್ಜಿ, ಎಕ್ಕಡಿ ಸೀತೆಯಾಟ, ಸೂಳೆಯಾಟ, ಕೊಂಡಲ ಚೆನ್ನ, ಎಂಚಿಲ್, ಬಚಿಲ್ ಎಂಬಿತ್ಯಾದಿ ಹೆಸರುಗಳೊಂದಿಗೆ ವಿಭಿನ್ನ ಪ್ರಕಾರವಾಗಿ ಆಡುವರು.[೨೪] ಈ ಕ್ರೀಡೆ ಹಲವು ನಂಬಿಕೆ, ಐತಿಹ್ಯಗಳಿಂದ ಕೂಡಿದೆ. ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ.

ಈ ಕ್ರೀಡೆಯನ್ನು ಆಷಾಡ, ಜುಲೈ-ಆಗಸ್ಟ್ ತಿಂಗಳಲ್ಲಿ ಮಾತ್ರ ಆಡಬೇಕು ಇದೇ ಅವಧಿಯಲ್ಲಿ ಮಣಿ ಅಟ್ಟದಿಂದ ತೆಗೆಯಬೇಕು. ಸೆಪ್ಟಂಬರ್‌ವರೆಗೆ ಮಾತ್ರ ಆಡಬೇಕು. ಅಂದರೆ ಬೆಳೆನೆಟ್ಟು ವ್ಯವಸಾಯ ಮುಗಿದ ದಿನ ಮಣಿಯನ್ನು ಅಟ್ಟದಿಂದ ತೆಗೆದು ಕೊಯ್ಲು ಆರಂಭವಾಗುವ ದಿನ ಅಟ್ಟಕ್ಕೆ ಏರಿಸಬೇಕು. ಈ ರೀತಿಯ ನಂಬಿಕೆಗಳಿಗೆ ಎರಡು ಕಾರಣಗಳಿವೆ.

ಆಷಾಡ ತಿಂಗಳಲ್ಲಿ ಬಿರುಮಳೆಯಲ್ಲಿ ಹೊರಗೆ ಯಾವುದೇ ಚಟುವಟಿಕೆ ನಡೆಸಲು ಸಾಧ್ಯವಿಲ್ಲ. ಇದರಿಂದಲೇ ಜುಲೈ-ಸೆಪ್ಟಂಬರ್‌ವರೆಗೆ ಯಾವುದೇ ಚಟುವಟಿಕೆಗಳು ಸಾಧ್ಯವಾಗುವುದಿಲ್ಲ. ಆಷಾಡ ಅನಿಷ್ಟದ ತಿಂಗಳು. ಯಾವುದೇ ರೀತಿಯ ಶುಭ ಕಾರ್ಯಗಳು ನಡೆಯಬಾರದೆಂಬ ನಂಬಿಕೆಯಿದೆ. ಮಳೆಗಾಲದ ಈ ತಿಂಗಳುಗಳಲ್ಲಿ ಬೇರೆ ಕೆಲಸ ಕಾರ್ಯಗಳು ಇಲ್ಲದಿರುವುದರಿಂದ, ಸಂಸ್ಕೃತಿಯ ಕಲಿಕೆಗೆ ಈ ಕಾಲವನ್ನು ಆಯ್ಕೆ ಮಾಡಿರುವುದು ಸಮಂಜಸವಾಗಿದೆ. ಇದು ಭಾವನಾತ್ಮಕ ಕ್ರೀಡೆಯಾಗಿದೆ. ಆಟಗಾರರನ್ನು ಆಕರ್ಷಿಸಿ ಆಟದೊಂದಿಗೆ ಹಿಡಿದಿಟ್ಟುಕೊಳ್ಳುವ ಗುಣ ಹೊಂದಿದೆ. ಆದ್ದರಿಂದ ಬೇರೆ ಕಾಲದಲ್ಲಿ ಇದನ್ನು ಆಡಿದರೆ ಬದುಕಿನ ಇತರೆ ಚಟುವಟಿಕೆಗಳಿಗೆ ತೊಂದರೆಯಾಗುವುದರಿಂದ ಇದೇ ಕಾಲ ಆಯ್ಕೆ ಮಾಡಿ ಬೇರೆ ತಿಂಗಳುಗಳಲ್ಲಿ ಆಡುವುದನ್ನು ನಿಷೇಧಿಸಿರಬಹುದು.

ನಂಬಿಕೆಗಳು

ಈ ಕ್ರೀಡೆಯ ಕುರಿತು ಕೆಲವು ನಂಬಿಕೆಗಳಿವೆ. ಅಮಂಗಳಕರವೆಂದು ಪರಿಗಣಿಸಲ್ಪಟ್ಟ ಆಷಾಢ ತಿಂಗಳಲ್ಲಿ ಇದನ್ನು ಆಡಬೇಕು ಬೇರೆಕಾಲದಲ್ಲಿ ಆಡಿದರೆ ಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆ. ಅಕ್ಕ ತಂಗಿಯರು, ಗಂಡ ಹೆಂಡತಿ, ಒಂದೇ ತಾಯಿ ಮಕ್ಕಳು ಇದನ್ನು ಆಡಬಾರದು. ಸಾಯಂಕಾಲ ದನಗಳು ಹಟ್ಟಿಗೆ ಸೇರಿಸಿದ ನಂತರ ಮತ್ತು ಜೂಜೂ ಇಟ್ಟು ಇದನ್ನು ಆಡಬಾರದು.

ಐತಿಹ್ಯಗಳು

ಸಿರಿ ಪಾಡ್ದನದ ಒಂದು ಭಾಗವಾದ ಅಬ್ಬಗ-ದಾರಗ ಪಾಡ್ದನದಲ್ಲಿ ಚೆನ್ನೆಯಾಟದ ವಿವರವಿದೆ. ಪಾಡ್ದನ ಮತ್ತು ಐತಿಹ್ಯದ ಸಂಕ್ಷಿಪ್ತ ಕಥೆ ಈ ರೀತಿಯಿದೆ. ಸಿರಿಯ ಮಗಳು ಸೊನ್ನೆಗೆ ಪ್ರಾಯ ತುಂಬಿದರೂ ಮೈನೆರೆಯುವುದಿಲ್ಲ, ಆಗ ಸೊನ್ನೆಯನ್ನು ಸಾಕಿದ ಚೆಂದವಣ್ಣ ಪೆರ್ಗಡೆಯವರು ಸೊನ್ನೆ ಮೈನೆರೆದು ಸಂತತಿಯಾದರೆ ಮಕ್ಕಳಿಗೆ ಹೆಸರಿಡುವ ಮೊದಲು ಬ್ರಹ್ಮಲಿಂಗೇಶ್ವರನಿಗೆ ಅಂಕಣದ ಕೆರೆ ಕಟ್ಟಿಸುತ್ತೇನೆ ಎಂದು ಹರಕೆ ಹೊರತ್ತಾಳೆ. ಈ ಹರಕೆಯಿಂದ ಸೂನ್ನೆಗೆ ಮೈ ನೆರೆದು ಮದುವೆಯಾಗುತ್ತದೆ. ಅವಳಿಗೆ ಅಬ್ಬಗ-ದಾರಗ ಎಂಬ ಹೆಣ್ಣು ಮಕ್ಕಳು ಹುಟ್ಟುತ್ತಾರೆ. ಅವರು ಬೆಳೆದು ದೊಡ್ಡವರಾದಾಗ ಹಿರಿಯರು ಅವರಿಗೆ ಮದುವೆ ಮಾಡಲು ನಿಶ್ಚಯಿಸಿ ಗಂಡು ನೋಡಲು ಹೋಗುತ್ತಾರೆ. ಸೊನ್ನೆಗೆ ಮೈನೆರೆಯುವ ಸಂದರ್ಭದಲ್ಲಿ ಮಾಡಿದ ಹರಕೆ ಸಲ್ಲಿಸದಿದ್ದರಿಂದ ನಾಗಬೆರ್ಮರಿಗೆ ಸಿಟ್ಟು ಬಂದು ಬ್ರಾಹ್ಮಣ ವೇಷದಲ್ಲಿ ಬಂದು ಸೊನ್ನೆಯನ್ನು ಎಚ್ಚರಿಸುತ್ತಾರೆ.

ಸೊನ್ನೆ ಅವರ ಎಚ್ಚರಿಕೆಯನ್ನು ನಿರ್ಲಕ್ಷಿಸುತ್ತಾಳೆ. ಆಗ ಬ್ರಾಹ್ಮಣ ವೇಷದಲ್ಲಿ ಬಂದ ನಾಗಬೇರ್ಮರು ಅಬ್ಬಗ-ದಾರಗ ಇದ್ದ ಉರ್ಕಿದೊಟ್ಟು ಅರಮನೆಗೆ ಹೋಗಿ ಮಕ್ಕಳನ್ನು ಚೆನ್ನೆಯಾಡಲು ಉತ್ತೇಜಿಸುತ್ತಾರೆ. ಅವರ ಮಾತಿನಂತೆ ಅಬ್ಬಗ-ದಾರಗ ಚೆನ್ನೆಯಾಡುತ್ತಾರೆ. ಆಟದಲ್ಲಿ ಸೋತ ಅಕ್ಕನನ್ನು ತಂಗಿ ತಮಾಷೆ ಮಾಡಿದಾಗ ಸಿಟ್ಟುಗೊಂಡು ಅಬ್ಬಗ ತಂಗಿಯನ್ನು ಚೆನ್ನೆಮಣೆಯಿಂದ ಹೊಡೆಯುತ್ತಾಳೆ. ತಂಗಿ ಸತ್ತಾಗ ಹೆದರಿದ ಅಬ್ಬ ತಂಗಿಯ ಹೆಣವನ್ನು ಬಾವಿಗೆ ಹಾಕಿ ತಾನೂ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಪಾಡ್ದನದಲ್ಲಿ ಈ ಕುರಿತು ವಿಸ್ತಾರವಾದ ವಿವರಗಳು ದೊರೆಯುತ್ತವೆ. ಇದರಿಂದ ಚೆನ್ನೆಯಾಟವನ್ನು ಅಕ್ಕ-ತಂಗಿಯರು ಆಡಬಾರದೆಂಬ ನಿಷೇಧ ವ್ಯಾಪಕವಾಗಿದೆ. ಮತ್ತೊಂದು ಐತಿಹ್ಯವೆಂದರೆ ಗಂಡ ಹೆಂಡತಿಗೆ ಸಂಬಂಧಿಸಿದ್ದು. ಬೂಡಿನ (ಅರಮನೆಯ) ಬಲ್ಲಾಳನು ತನ್ನ ಹೆಂಡತಿ ಮಾಣಿಯನ್ನು ಚೆನ್ನೆಯಾಟಕ್ಕೆ ಕರೆಯುತ್ತಾರೆ. ಗಂಡ ಹೆಂಡತಿ ಚೆನ್ನೆಯಾಡುತ್ತಾರೆ. ಗಂಡ ಬಲ್ಲಾಳರು ಸೋಲುತ್ತಾರೆ. ಮಾಣಿಯನ್ನು ನೀರು ತರಲು ಕಳುಹಿಸಿದ ಬಲ್ಲಾಳರು ಅವಳನ್ನು ಹೊಡೆಯುತ್ತಾರೆ. ಅವಳು ಮನೆ ಬಿಟ್ಟುಹೋಗುತ್ತಾಳೆ, ಮತ್ತೆ ಮರಳಿ ಬಂದರೂ ಜಮಾದಿ ಭೂತಕ್ಕೆ ಹರಕೆ ಹೇಳಿದ ಕಾರಣದಿಂದ ಅವಳು ಸಾಯುತ್ತಾಳೆ. ಅದಕ್ಕಾಗಿ ಈ ಆಟವನ್ನು ಗಂಡ ಹೆಂಡತಿ ಆಡಬಾರದೆಂಬ ನಂಬಿಕೆಯಿದೆ.[೧೩೫]

ಈ ಆಟಕ್ಕೆ ಮನುಷ್ಯನ ಜೀವನದ ಒಂದು ಭಾಗವಾಗಿ ಸಂಬಂಧವನ್ನು ಕಲ್ಪಿಸಲಾಗಿದೆ. ಇದರಲ್ಲಿ ಎರಡು ಸಾಲಿನಲ್ಲಿ ಏಳು ಮನೆ ಒಟ್ಟು ಹದಿನಾಲ್ಕು ಮನೆಗಳಿದ್ದವು. ಅದರಲ್ಲಿ ಏಳನೇ ಮನೆಯೆ ಪ್ರಧಾನವಾಗುತ್ತದೆ. ಏಳರ ಸಂಖ್ಯೆ ನಂಬಿಕೆಗಳೊಂದಿಗೆ ನಿಕಟವಾದ ಸಂಬಂಧವನ್ನು ಪಡೆದುಕೊಂಡಿದೆ. ಹೆಣ್ಣು ಮಕ್ಕಳಾಡಿದರೆ ಬೇಗ ಮದುವೆಯಾಗುತ್ತದೆ. ಮಣೆಯನ್ನು ದಾಟಬಾರದು ಇತ್ಯಾದಿಗಳಿವೆ. ಮದುವೆ ಮತ್ತು ಏಳರ ಸಂಖ್ಯೆ ಎಂದಾಗ ಸಪ್ತಪದಿಯ ನೆನಪಾಗುತ್ತದೆ. ಸಪ್ತಪದಿ ಮದುವೆಯ ಸಂದರ್ಭದಲ್ಲಿ ನವದಂಪತಿಗಳು ಏಳು ಹೆಜ್ಜೆಗಳು ಅಥವಾ ಅಗ್ನಿ ಕುಂಡಕ್ಕೆ ಏಳು ಬಾರಿ ಪ್ರದಕ್ಷಿಣೆ ಹಾಕುವುದು ಎಂದರ್ಥ. ಈ ಆಟದಲ್ಲಿ ಬರುವ ಏಳರ ಸಂಖ್ಯೆಯನ್ನು ಎರಡು ಅರ್ಥಗಳಲ್ಲಿ ಗ್ರಹಿಸಿಕೊಳ್ಳಬಹುದು. ಚೆನ್ನೆ ಆಡುವುದು ಎಂದರೆ ಸಪ್ತಲೋಕಗಳನ್ನ ಸುತ್ತುವುದು ಈ ಸಪ್ತ ಲೋಕಗಳಲ್ಲಿ ಭೂಲೋಕ, ಭುವಲೋಕ, ಸ್ವರ್ಗಲೋಕ, ಜನಲೋಕ, ತಪೋಲೋಕ ಮತ್ತು ಸತ್ಯಲೋಕ.[೧೩೬]

ಚೆನ್ನೆ ಮಣೆಯನ್ನು ೩೪ ರೀತಿಗಳಲ್ಲಿ ಆಡಲಾಗುತ್ತದೆ.[೧೩೭] ಇದರಲ್ಲಿ ರಾಜ ಪ್ರತಿನಿಧಿಯಾಗಿ ಆಡುವ ಆಟಗಳೂ ಇವೆ. ಈ ಆಟದ ಸಂದರ್ಭದಲ್ಲಿ ಯುದ್ಧದ ಸಪ್ತಾಂಗಗಳನ್ನು ಪ್ರತಿನಿಧಿಸುತ್ತವೆ. ಇದಲ್ಲದೆ ಒಬ್ಬರೆ ಆಡಬಹುದಾದ ಆಟವೂ ಇದೆ. ಕಥನ ಗೀತೆಗಳಲ್ಲಿ ಪಾರ್ವತಿ ಒಬ್ಬಳೇ ಆಡಿದ ಕುರಿತ ಉಲ್ಲೇಖಗಳು ಬರುತ್ತವೆ. ಶಕ್ತಿ ಸ್ವರೂಪಿಣಿಯಾದ ಪಾರ್ವತಿಗೆ ಏಳು ಅವತಾರಗಳಿದ್ದು ಒಂದೊಂದು ಮನೆ (ಗುಳಿ) ಒಂದೊಂದು ಬಗೆಯ ಶಕ್ತಿ ಇದೆ ಎಂದು ನಂಬಲಾಗುತ್ತದೆ.[೧೩೮] ಚೌಕಾಬಾರ ಸಮಾಜದ ಬಾಹ್ಯಾಂಗದ ಬದಲಾಣೆ ಬಿಂಬಿಸಿದರೆ ಚೆನ್ನೆಮಣೆಯಾಟ ಅಂತರಂಗದ ಗೃಹಕೃತ್ಯ ಬಿಚ್ಚಿ ತೋರಿಸುತ್ತದೆ. ಈ ಆಟದಲ್ಲಿ ಒಂದು ಮನೆಗೆ ೫ ಕಾಯಿಯಂತೆ ಎಪ್ಪತ್ತು ಬೀಜಗಳಿರುತ್ತವೆ. ಏಳರ ಸಂಖ್ಯೆಯನ್ನು ಗ್ರಾಮೀಣರು

ಲೆಕ್ಕಹಾಕುವಾಗ, ರಾಶಿ ಅಳೆಯುವಾಗ ಬಾಯಿಬಿಟ್ಟು ಹೇಳುವುದಿಲ್ಲ ಆರು ಮತ್ತೊಂದು ಎಂಟು ಎನ್ನುತ್ತಾರೆ. ಮೇಲು ವರ್ಗದವರ ಸಪ್ತಪದಿ ಮತ್ತು ಯಜ್ಞವಿಧಿಗಳು ದ್ರಾವಿಡ ಸಂಸ್ಕೃತಿಗೆ ನಿಷಿದ್ಧ ಕರ್ಮ ಸಿದ್ಧಾಂತದ ಪ್ರಕಾರ, ೧, ೭, ಮತ್ತು ೧೧ ಅನಿಷ್ಟ ಸಂಖ್ಯೆಗಳು ಚೆನ್ನಮಣೆಯನ್ನು ಈ ಕಾರಣದಿಂದ ಗ್ರಾಮೀಣ ಜನಾಂಗ ಅಷ್ಟಾಗಿ ಸ್ವೀಕರಿಸಿದಂತಿಲ್ಲ. ಸ್ವಲ್ಪ ಮುಂದುವರೆದ ಬ್ರಾಹ್ಮಣೀಕರಣಕ್ಕೊಳಗಾದ ಜನಾಂಗಗಳು ಈ ಮಣೆಯನ್ನು ವಧುವಿಗೆ ಬಳುವಳಿಯಾಗಿ ಕೊಡುವುದುಂಟು. ಹೆಣ್ಣು ಅದನ್ನು ದಾಟಬಾರದು ಎಂಬ ಪವಿತ್ರ ಭಾವನೆಯಿದೆ. ಇದನ್ನು ಗಮನಿಸಿದರೆ ಗ್ರಾಮೀಣ ಕ್ರೀಡೆಯಲ್ಲೂ ಸಂಘರ್ಷಣೆ ನಡೆದಿರುವುದನ್ನು ವಿಭಜಿಸಿ ನೋಡಬಹುದು.

ಚೆನ್ನಮಣೆಯಾಟದಲ್ಲಿ ಆಲಿವಾಣದ ಬೀಜ ಪ್ರಾಧಾನ್ಯ, ಚೌಕಾಬಾರದಲ್ಲಿ ಹುಣಸೆ ಬೀಜ ಪ್ರಾಧಾನ್ಯ. ಆಲಿವಣದ ಬೀಜಕ್ಕಿಂತ ಹುಣಸೆ ಬೀಜಕ್ಕೆ ಮಹತ್ವ ಹೆಚ್ಚು ಹುಳಿಗೆ ಹುಣಸೆ ಬೇಕು, ಸತ್ತಾಗ ಹುಳಿ ಮುಟ್ಟಬೇಕು, ಸತ್ತವರು ಹುಟ್ಟಿ ಬರುತ್ತಾರೆಂಬ ಶಿಷ್ಟ ಮೂಲದ ನಂಬಿಕೆಯಿದೆ. ಬಯಲು ನಾಡಿನ ಬದುಕಿನಲ್ಲಿ ಹುಣಸೆ ದಿನಾಲೂ ಬೇಕಾಗುವ ಹಣ್ಣು. ಅದರ ಬೀಜ ಆಟಕ್ಕೆ ಒಂದು ಸಾಂಸ್ಕೃತಿಕ ಕೊಂಡಿ ಇದರ ಮೂಲ ಭಾರತದಲ್ಲಿ ಅದರಲ್ಲೂ ದಕ್ಷಿಣ ಭಾರತದ ದ್ರಾವಿಡ ಮೂಲದ ಬಯಲು ಸೀಮೆಯದ್ದು. ಆಲಿವಣಕ್ಕೆ ಮಲೆನಾಡಿನಲ್ಲಿ ಆಸರೆ ಹೆಚ್ಚು. ಸರ್ವವ್ಯಾಪಿಯಾಗಿ ಬದುಕಿನಲ್ಲಿ ಆಗಮಿಸಿರುವ ದಾಖಲೆ ಇಲ್ಲ, ಹೀಗೆ ಈ ಆಟದಲ್ಲಿ ಕೃಷಿ ಮೂಲ ಸಮಾಜವು ಬಳಸುವ ಪ್ರತಿಯೊಂದು ಅಂಶವು ಸ್ವಾರಸ್ಯಕರವಾದುದು. ಎಲ್ಲವೂ ಸಾಂಸ್ಕೃತಿಕ ಗಂಟುಗಳನ್ನು ಹೂಡಿ ಕೊಂಡಿರುವಂತಹದು. ಚೆನ್ನೆ ಮಣೆಯಾಟವು ಹೆಚ್ಚಾಗಿ ಹೆಣ್ಣಿಗೆ ಸೀಮಿತ, ಏಕೆಂದರೆ ಸೀತೆ ಅಶೋಕ ವನದಲ್ಲಿ ಆಡಿದ್ದಳಂತೆ. ಅದಕ್ಕೆ ಸೀತೆಯಾಟ ಎನ್ನುವುದೂ ಇದೆ. ಈ ಆಟವನ್ನು ವೈದಿಕ ಮೂಲಕ್ಕೆ ಕೊಂಡೊಯ್ಯಲಾಗಿದೆ.[೧೫] ಚೆನ್ನೆಮಣೆಯಾಟ ವಿಜಯನಗರ ಕಾಲದಲ್ಲಿ ಪ್ರಧಾನವಾಗಿರುವುದನ್ನು ಕಾಣಬಹುದು. ಅಂದು ಈ ಆಟ ಜನಸಾಮಾನ್ಯರಲ್ಲಿ ಹೆಚ್ಚು ಬಳಕೆಯಲ್ಲಿತ್ತು ಎಂಬುದನ್ನು ದೇವಾಲಯಗಳಲ್ಲಿರುವ ನಕಾಶೆಗಳಿಂದ ತಿಳಿದುಬರುತ್ತದೆ. ಅಂದು ಮಣೆಯನ್ನು ಬಳಸಿ ಈ ಆಟವನ್ನು ಆಡುತ್ತಿರಲಿಲ್ಲ ಕಲ್ಲಿನ ಮೇಲೆ ಮನೆಗಳನ್ನು ಕೊರೆದು ಕೊಂಡು ಆಡಿದ ಕುರುಹುಗಳು ಹಂಪಿಯ ಮೂಲ ವಿರೂಪಾಕ್ಷ ಗುಡಿ, ಹೇಮಕೂಟಗಳಲ್ಲಿ ಇವೆ.

ಚೌಕಾಬಾರ

ಈ ಕ್ರೀಡೆಗೆ ಚಾವೆ, ಕವಡೆ, ಚೌಕಾಬಾರ ಇತ್ಯಾದಿ ಹೆಸರುಗಳಿಂದ ಕರೆಯುವರು. ಇಬ್ಬರಿಂದ ಆರು ಜನರವರೆಗೆ ಆಡಬಹುದು. ಈ ಕ್ರೀಡೆಯ ಹಾಸು ಚೌಕಾಕಾರವಾಗಿರುವುದರಿಂದ ಚೌಕಾಬಾರ ಎಂದು ಕರೆಯುವರು. ೨೫ ಮನೆಗಳಿಂದ ೪೯ ಮನೆಗಳವರೆಗೂ ಆಡಬಹುದು. ಈ ಕ್ರೀಡೆಗೆ ಹುಣಸೆ ಬೀಜ ಅಥವಾ ಕವಡೆಗಳನ್ನು ಬಳಸುವರು. ಪ್ರತಿಯೊಬ್ಬ ಗುಂಪಿನ ಆಟಗಾರರು ವಿವಿಧ ಬಗೆಯ ಕಾಯಿಗಳನ್ನು ಬಳಸಬೇಕು. ಚಿಕ್ಕಕಲ್ಲು, ಬಳೆಚೂರು, ಬಳಪದ ತುಂಡು ಇತ್ಯಾದಿಗಳನ್ನು ಬಳಸುವರು. ಒಬ್ಬರ ಕಾಯಿ ಇನ್ನೊಬ್ಬರಂತೆ ಇರಬಾರದು. ಇದನ್ನು

ಸ್ತ್ರೀ ಪುರುಷ ಮಕ್ಕಳಾದಿಯಾಗಿ ಆಡಬಹುದಾದ ಕ್ರೀಡೆಯಾಗಿದೆ. ೨೫ ಮನೆಯ ಆಟದಲ್ಲಿ ನಾಲ್ಕು ಸುರಕ್ಷಿತ ಕಟ್ಟೆ ಮನೆಗಳಿರುತ್ತವೆ. ಆಟ ತಮ್ಮ ಕಟ್ಟೆ ಮನೆಯಿಂದ ಪ್ರಾರಂಭಿಸುವರು. ನಡುವಿನ ಹಣ್ಣು ಮನೆಗೆ ಗಂಗೆ ಪೆಟ್ಟಿಗೆ ಎನ್ನುವರು. ಕಾಯಿಗಳು ಗಂಗೆ ಪೆಟ್ಟಿಗೆಗೆ ಮೀಯಲು ಹೋಗುತ್ತವೆ ಎನ್ನುವರು.[೧೮೦] ಆಟದ ಕಟ್ಟಿಮನೆಗಳಲ್ಲಿ ಎಲ್ಲರ ಕಾಯಿಗಳು ಸುರಕ್ಷಿತ, ಅಲ್ಲಿ ಯಾರ ಕಾಯಿಯನ್ನು ಕೊಲ್ಲಲಾಗದು. ಪ್ರತಿಯೊಬ್ಬರು ಆಡುವ ಮೊದಲು ಒಂದು ಅವಕಾಶ ಪಡೆದು ತಾವು ನಡೆಸಬೇಕಾದ ಮನೆಗಳೆಷ್ಟೆಂಬುದನ್ನು ಕವಡೆ ಚೆಲ್ಲಿ ಕಂಡುಕೊಳ್ಳುವರು. ಆರು ಕವಡೆಗಳು ಮೇಲ್ಮುಖ ಬಿದ್ದರೆ ಆರು ಅಂಕ, ನಾಲ್ಕು ಇದ್ದಾಗ ನಾಲ್ಕು, ಆರು ಕವಡೆಗಳ ಕೆಳಮುಖವಾಗಿ ಬಿದ್ದರೆ ಹನ್ನೆರಡು ಅಂಕ, ನಾಲ್ಕು ಇದ್ದಲ್ಲಿ ಎಂಟು ಅಂಕ, ಕೆಲವು ಕೆಳಮುಖ ಕೆಲವು ಮೇಲುಮ್ಮುಖ ಬಿದ್ದರೆ ಕವಡೆಗೂ ಒಂದು ಅಂಕ. ಮೊದಲು ಆಡಿದ ಪ್ರತಿಯೊಬ್ಬರ ಎಲ್ಲಾ ಕವಡೆಗಳು ಮೇಲ್ಮುಖ ಆಥವಾ ಕೆಳಮುಖ ಬಿಳಲೇಬೇಕು. ಇಲ್ಲವಾದರೆ ಆಟ ಬಿಡಬೇಕು ಈ ರೀತಿಯ ನಿಯಮ ಕೇಲವು ಪ್ರದೇಶಗಲ್ಲಿ ಇದೆ. ಕೆಲವು ಕಡೆ ಇಲ್ಲ ಎಂದು ಕಾಯಿಯಿಟ್ಟು ಆಡುವವರು ಪ್ರತಿಸಾರಿ ಎರಡು ಅವಕಾಶ ಪಡೆದು ಮೇಲ್ಮುಖ ಬಿದ್ದ ಕವಡೆಗಳ ಮೊತ್ತದಷ್ಟು ಮನೆ ನಡೆಸುತ್ತಾರೆ. ನಾಲ್ಕು ಕಾಯಿ ನಡೆಸುವವರಾಗಲಿ, ಕಾಯಿ ನಡೆಸುವವರಾಗಲಿ ಎಲ್ಲಾ ಕವಡೆಗಳು ಮೇಲ್ಮುಖ ಅಥವಾ ಕೆಳಮುಖ ಬಿಳಿಸಿದಾಗ ಅವರಿಗೆ ಇನ್ನೊಂದು ಅವಕಾಶವಿದೆ. ಕಾಯಿ ಕೊಂದವರಿಗೆ ಮತ್ತೊಂದು ಅವಕಾಶವಿದೆ.

ಒಂದು ಆಟದಲ್ಲಿ ಎಂಟು ಮತ್ತು ಹನ್ನೆರಡು ಅಂಕ ಪಡೆದರೂ ಅವರಿಗೆ ಒಂದೇ ಅವಕಾಶ. ಹೀಗೆ ಯಾರಿಗೂ ಮೂರು ಅವಕಾಶಕ್ಕಿಂತ ಹೆಚ್ಚಿಗೆ ಕೊಡುವುದಿಲ್ಲ. ನಾಲ್ಕು ಕವಡೆ ಆಡುವಾಗ ಕೆಲವರು ಮೂರು ಕವಡೆ ಕೆಳಮುಖಬಿದ್ದರೆ ಮುಕ್ಕಿ ಎಂದು ಹೇಳಿ ಆಟ ಬಿಡುವರು. ನಾಲ್ಕು ಕವಡೆಯಿಂದ ಆಡುವಾಗ ಎರಡು ಮೇಲ್ಮುಖ ಬಿದ್ದರೆ ಲೆಕ್ಕದಂತೆ ಎರಡು ಅಂಕ ದೊರೆಯಬೇಕು. ಆದರೆ ಅದನ್ನು ಜೋಡಿಗೆ ಹೊಡೆದು ಗೆಲ್ಲಬೇಕಾಗುತ್ತದೆ. ಸಾಮಾನ್ಯವಾಗಿ ಒಂದು ಕಾಯಿಯಿಂದ ಇನ್ನೊಂದು ಕಾಯಿ ಹೊಡೆಯುತ್ತಾ ತಮ್ಮ ರಕ್ಷಣೆ ಮಾಡಿಕೊಳ್ಳುತ್ತಾ, ಹಣ್ಣಿನ ಮನೆಗೆ ಬರುತ್ತಾರೆ. ಎರಡು ಕಾಯಿ ಜೊಡಿಯಿಂದ ಇನ್ನೊಂದು ಜೋಡಿ ಕೊಲ್ಲುವ ಅವಕಾಶವು ಇದೆ. ಪ್ರಾರಂಭದಿಂದ ಹನ್ನೆರಡು ಮನೆ ದಾಟಿದ ಮೇಲೆಯೇ ಜೋಡಿ ಹೊಡೆಯುವ ಅವಕಾಶವಿದೆ. ಅದು ಒಳಮನೆಯಲ್ಲಿ ಮಾತ್ರ ಸಾಧ್ಯ. ಸಮ ಸಂಖ್ಯೆಯಲ್ಲಿ ಅಂಕ ದೊರೆತಾಗ ಮಾತ್ರ ಜೋಡಿ ಮಾಡಬೇಕು. ಜೋಡಿ ಬಿಡಿಸಬೇಕು. ಜೋಡಿ ನಡೆಸುವಾಗ ಎರಡು ಅಂಕ ದೊರೆತರೆ ಒಂದು ಮನೆ, ನಾಲ್ಕು ಅಂಕ ದೊರೆತರೆ ಎರಡು ಮನೆ ನಡೆಸಬಹುದು. ಮೂರು ಅಂಕ ದೊರೆತರೆ ಒಂಟಿ ಮನೆ ನಡೆಸಬಹುದು. ಜೋಡಿಯನ್ನು ಕಟ್ಟಿಯಲ್ಲಿ ನೊಡಬೇಕು. ಒಳಗಿನ ಮನೆಯ ಕಟ್ಟಿಯಲ್ಲಿ ಜೋಡಿ ಮಾಡಿದರೆ ಅದನ್ನು ಬಿಡಿಸುವಂತಿಲ್ಲ ಕೊನೆಯವರೆಗೂ ಅದನ್ನು ಜೋಡಿಯಾಗಿಯೇ ಚಲಿಸಿದ ನಂತರ ಬಿಡಿಸಬಹುದು. ನಡುಮನೆ ಮುಟ್ಟಿದ ಸಮೀಪವಿದ್ದಾಗ ಅದನ್ನು ಮುಟ್ಟಲು ಬೇಕಾಗುವ ಅಂಕಕ್ಕಿಂತ ಒಂದು ಹೆಚ್ಚು ಅಂಕ ದೊರಕಬೇಕು. ಯಾರು ಮೊದಲು ಎಲ್ಲಾ ಕಾಯಿಗಳನ್ನು ಹಣ್ಣು ಮಾಡುವರೂ ಅವರು ಆಟದಲ್ಲಿ ಗೆದ್ದಂತೆ

ಈ ಕ್ರೀಡೆಯಲ್ಲಿ ನಾವು ಹುಟ್ಟುಸಾವಿನ, ಪುನರ್ ಜನ್ಮದ ಪರಿಕಲ್ಪನೆಯನ್ನು ನೋಡುತ್ತೇವೆ. ಒಂದು ಕಾಯಿಯನ್ನು ಸಾಯಿಸಬಹುದು. ಸತ್ತಕಾಯಿ ಮತ್ತೆ ಹುಟ್ಟಿ ಬರುತ್ತದೆ. ಇಲ್ಲಿ ಸೈನಿಕ ತಂತ್ರಗಾರಿಕೆ ಇದೆ. ಅಂದರೆ ಎದುರಾಳಿಯ ಮನೆಯನ್ನು ಯಾವ ರೀತಿ ಆಕ್ರಮಿಸಬೇಕು ನಂತರ ಹೇಗೆ ಮುಂದೆ ಹೋಗಿ ಸುರಕ್ಷಿತ ಸ್ಥಳ ಸೇರಬೇಕು– ಹೀಗೆ ಹಲವು ಯುದ್ಧ ತಂತ್ರಗಾರಿಕೆಗೆ ತರಬೇತಿಯಂತಿದೆ. ಇದು ಸಹ ಒಂದು ಜೂಜಿನಾಟವೇ. ಈ ರೀತಿ ಈ ಆಟವು ಬೌದ್ಧಿಕ ಕಸರತ್ತಿಗೆ ಅನುಕೂಲ ಹಾಗೂ ಅದೃಷ್ಟವು ಜೊತೆಗಿದ್ದರೆ ಮಾತ್ರ ಗೆಲುವು ಸಾಧ್ಯ. ವಿಜಯನಗರ ಕಾಲದಲ್ಲಿ ಬೌದ್ಧಿಕ ಕಸರತ್ತಿಗೆ ತುಂಬಾ ಪ್ರಾಮುಖ್ಯತೆ ಕೊಟ್ಟಿದ್ದರು ಹಾಗೂ ಬೇಸರವನ್ನು ನೀಗಿಸಿಕೊಳ್ಳಲು ಈ ಕ್ರೀಡೆಯ ಮೊರೆಹೋಗಿದ್ದರು ಎಂಬುದಕ್ಕೆ ಅವರು ಕೋಟೆದ್ವಾರ ಬಾಗಿಲು ಬಳಿ, ದೇವಸ್ಥಾನದ ಕಟ್ಟೆಗಳ ಮೇಲೆ ಬಯಲು ಪ್ರದೇಶದ ಬಂಡೆಗಳ ಮೇಲೆ ಕೊರೆದ ಹಾಸುಪಟವೆ ಸಾಕ್ಷಿ.

ಈ ಕ್ರೀಡೆಯನ್ನು ಬೇಸಿಗೆ ಸಮಯದಲ್ಲಿ ಎಲ್ಲಾ ಕೃಷಿ ಚಟುವಟಿಕೆಗಳೂ ಮುಗಿದ ಮೇಲೆ ದೇವಸ್ಥಾನದ ಮುಂದೆ, ಮನೆಯೊಳಗೆ, ಊರ ಮುಂದಿನ ಕಟ್ಟೆಗಳ ಮೇಲೆ ಆಡುವುದಿದೆ. ವಿಜಯನಗರ ಕಾಲದಲ್ಲಿ ಈ ಕ್ರೀಡೆಯನ್ನು ಯಥೇಚ್ಛವಾಗಿ ಆಡುತ್ತಿದ್ದರು. ಸಾಮಾನ್ಯವಾಗಿ ಪುರುಷರು ಈ ಕ್ರೀಡೆಯಲ್ಲಿ ಹೆಚ್ಚು ಭಾಗವಹಿಸುತ್ತಿದ್ದರು ಎಂಬುದಕ್ಕೆ ಬಯಲು ಪ್ರದೇಶದಲ್ಲಿ ಈ ಆಟದ ಕುರುಹುಗಳಿವೆ. ದೇವಸ್ಥಾನದ ಮುಂದೆ ಕೋಟೆಯ ದ್ವಾರಭಾಗಿಲ ಬಳಿ ವಿಶಾಲವಾದ ಬಂಡೆಯ ಮೇಲಿನ ಕುರುಹುಗಳನ್ನು ಗಮನಿಸಿದರೆ ಪುರುಷರು ಹೆಚ್ಚಾಗಿ ಭಾಗವಹಿಸಿ ಈ ಕ್ರೀಡೆಯಲ್ಲಿ ತೊಡಗಿದ್ದನ್ನು ಗುರುತಿಸಬಹುದು.

ಗೆರೆಯಾಟಗಳು

ಈ ಕ್ರೀಡೆಗಳು ದಾಳಗಳ ಮೇಲೆ ಅವಲಂಬಿಸಿದೆ. ಕಾಯಿಗಳ ಚಲನೆಯ ಹಾಗೂ ಕಾಯಿಗಳೊಂದಿಗೆ ಹೊರಾಡುವ ಅವುಗಳು ಮುಂದಕ್ಕೆ ಹೋಗದಂತೆ ತಡೆಯುವ ಶಕ್ತಿ ಪಡೆದುಕೊಂಡಿವೆ. ಈ ಕ್ರೀಡೆಗಳಲ್ಲಿ ಒಬ್ಬ ದೊಡ್ಡ ಕಾಯಿ (ಹರಳು) ಬಳಸಿದರೆ ಮತ್ತೊಬ್ಬ ಚಿಕ್ಕ ಕಾಯಿ ಅಥವಾ ಬೇರೆ ರೀತಿಯ ಕಾಯಿ ಬಳಸಿ ಆಡುವರು. ಈ ಕ್ರೀಡೆಯು ಮಾನವನ ಬೌದ್ಧಿಕತೆ ವಿಕಾಸಗೊಳಿಸಿ ಚುರುಕುಗೊಳಿಸಲು ಸಹಕಾರಿಯಾಗಿದೆ. ಒಳಾಂಗಣ ಗುಂಪಿಗೆ ಸೇರುವ ಈ ಕ್ರೀಡೆಯನ್ನು ಸ್ತ್ರೀ–ಪುರುಷ ಮಕ್ಕಳಾದಿಯಾಗಿ ಆಡುವ ಆಟವಾಗಿದೆ. ಮಳೆಗಾಲದಲ್ಲಿ ಜಡಿಮಳೆ ಅಥವಾ ಬೇಸಿಗೆ ಕಾಲದ ಮಧ್ಯಾಹ್ನದ ಬಿಸಿಲು ತಾಳಲಾರದೆ ಒಂದೆಡೆ ಇಬ್ಬರು ಎದುರು ಬದುರಾಗಿ ಕುಳಿತು ಆಡುವ ಕ್ರೀಡೆಯಾಗಿದೆ.

ಇದಕ್ಕೆ ಆನೆಘಟ್ಟದಾಟ, ಹುಲಿಕವಿಲೆ ಮನೆಯಾಟ, ಹುಲಿ ಮೇಕೆ ಆಟ ಎಂದು ಪ್ರಾದೇಶಿಕವಾಗಿ ವಿಭಿನ್ನ ಹೆಸರುಗಳಿಂದ ಕರೆಯುವರು. ವಿಜಯನಗರ ಕಾಲದಲ್ಲಿ ಈ ಕ್ರೀಡೆಯ ಕುರುಹುಗಳು ದೇವಸ್ಥಾನದ ಜಗುಲಿಮೇಲೆ, ಬಯಲು ಬಂಡೆಗಳ ಮೇಲಿನ ಹಾಸುಪಟಗಳಿಂದ ಅಧ್ಯಯನ ಮಾಡಬಹುದು.

ಬೇಕಾದ ವಸ್ತುಗಳು

ಈ ಕ್ರೀಡೆಗೆ ಬಳಸುವ ವಸ್ತುಗಳು ಸರಳವಾಗಿರುತ್ತವೆ. ಇದಕ್ಕೆ ಅಂಗಳ ಹಾಸುಪಟ ಬರೆಯಲು ಒಂದು ಸಮತಟ್ಟಾದ ಬಂಡೆ, ನೆಲ, ಇದ್ದಿಲು, ಬಳಪದ ಚೂರು, ನಾಲ್ಕು ದೊಡ್ಡ ಹರಳು ಚಿಕ್ಕಹರಳುಗಳು ಇದ್ದರೆ ಸಾಕು. ಅಂದು ಬಂಡೆಯ ಮೇಲೆ ಕೊರೆದು ಆಡುತ್ತಿದ್ದ ಹಾಸು ಪಟದ ಚಿತ್ರಗಳಿವೆ.

ಅಂಗಳದ ರಚನೆ

ಒಂದುವರೆ ಅಡಿ ಜಾಗದಲ್ಲಿ ಒಂದು ದೊಡ್ಡ ತ್ರೀಕೋನ ರಚಿಸಿ ಅದರ ಮಧ್ಯಕ್ಕೆ ಗೆರೆಯೊಂದು ಎಳೆದು ಎರಡು ಲಂಬಕೋನ ತ್ರಿಕೋನಗಳನ್ನು ರಚಿಸುತ್ತಾರೆ. ಮೇಲಿನಿಂದ ಮೂರಂಗುಲ ಮತ್ತು ಕೆಳಗಿನಿಂದ ಮೂರಂಗುಲದಷ್ಟು ಜಾಗ ಬಿಟ್ಟು ಆ ತ್ರಿಕೋನಗಳಿಗೆ ಅಡ್ಡ ಗೆರೆಗಳನ್ನೆಳೆಯುತ್ತಾರೆ. ಸಮನಾಂತರವಾಗಿ ಎಳೆದ ಆ ಎರಡು ಗೆರೆಗಳನ್ನು ಛೇದಿಸುವಂತೆ ತ್ರಿಕೋನಗಳಿಂದ ಉದ್ದಗೆರೆಗಳೆರಡರಲ್ಲೂ ಉದ್ದವಾಗಿದ್ದು ಮೊದಲು ತ್ರಿಕೋನಗಳ ಹೊರಗಿದ್ದು ಮೂರು ಅಂಗುಲ ಮತ್ತು ಹೊರಗಿನರುವಂತೆ ಅದನ್ನು ಸೇರಿಸಿ ಎರಡೂ ಬದಿಗಳಲ್ಲಿ ಎರಡೆರಡೂ ಬರುವಂತೆ ಚಿಕ್ಕ ಲಂಬಕೋನ ತ್ರಿಕೋನ ರಚಿಸಿದರೆ ಒಂದು ಗೆರೆಯಾಟ ಅಂಗಳ ಸಿದ್ದವಾದಂತೆ, ಈ ರೀತಿಯಾಗಿ ಆ ಕ್ರೀಡೆಯ ನಿಯಮಗಳಿಗೆ ಅನುಗುಣವಾಗಿ ವಿವಿಧ ರೀತಿಯ ಗೆರೆಯಾಟಗಳು ನಕಾಶೆಯನ್ನು ಸಿದ್ಧಪಡಿಸಿ ಆಡಿದ ದಾಖಲೆಗಳಿವೆ.

ಆಟದ ವಿವರ

ಆಟದ ಅಂಗಳ ಮತ್ತು ಕಾಯಿ ಹೊಂದಿಸಿಕೊಂಡ ಮೇಲೆ ಕಾಯಿಗಳನ್ನು ನಡೆಸುವರು. ವಿಭಾಗ ಮಾಡಿಕೊಂಡು ಆನೆ ನಡೆಸುವರಾರು, ಅದನ್ನು ಕಟ್ಟುವರಾರು ಎಂದು ನಿರ್ಧರಿಸಿಕೊಳ್ಳುತ್ತಾರೆ. ಹಾಸುಪಟದ ಎರಡೂ ಕಡೆ ಕುಳಿತು ತಮ್ಮ ಆನೆಗಳನ್ನು ಎರಡೂ ಗೆರೆಗಳು ಕೂಡುವ ಜಾಗದಲ್ಲಿ ಇಡಬೇಕು ಹಾಗೆ ಎರಡೂ ಗೆರೆಗಳು ಕೂಡುವ ಇಪ್ಪತ್ತೊಂದು ಮನೆಗಳಿರುತ್ತವೆ. ನಂತರ ಕುರಿ ನಡೆಸುವವರು ಸಾಧ್ಯವಾದಷ್ಟು ದೂರವಿರುವಂತೆ ಕುರಿಗಳನ್ನು ಒಂದೊಂದೆ, ಇಡುತ್ತಿರುತ್ತಾರೆ. ಆನೆಯಿರುವ ಪಕ್ಕದ ಮನೆಯಲ್ಲಿ ಕುರಿಯಿದ್ದು ಮುಂದಿನ ಮನೆ ಖಾಲಿಯಿದ್ದರೆ, ಆನೆ ಕುರಿಯನ್ನು ತುಳಿದು ಸಾಯಿಸಿತು ಎಂದು ಆನೆ ನಡೆಸುವವನು ತನ್ನ ಬಳಿ ಆ ಕಾಯಿಗಳನ್ನು ಎತ್ತಿಟ್ಟುಕೊಳ್ಳುತ್ತಾನೆ. ಆನೆ ಚಲಿಸದಂತೆ ಎರಡೂ ಮನೆಗಳಲ್ಲಿ ಯಾವ ಆ ಕಾಯಿಗಳಿದ್ದರೆ ಆನೆ ಮುಂದೆ ಚಲಿಸದಂತೆ ಕಟ್ಟಲಾಗುತ್ತದೆ. ಅಲ್ಲಿಗೆ ಒಂದು ಆನೆಯ ಆಟ ಸಂಪೂರ್ಣವಾಗಿ ಸ್ತಗಿತಗೊಳ್ಳುತ್ತದೆ. ತನ್ನಲ್ಲಿರುವ ಹದಿನಾರು ಕಾಯಿಗಳಿಂದ ಆನೆಗಳನ್ನು ಕಟ್ಟಿ ಹಾಕಲು ಸಾಧ್ಯವಾದಷ್ಟು ಯೊಚಿಸಿ ಕಾಯಿಗಳನ್ನು ಇಡುತ್ತಿರುತ್ತಾನೆ. ಹದಿನಾರು ಕಾಯಿಗಳಲ್ಲಿ ನಾಲ್ಕು ಆನೆಗಳನ್ನು ಕಟ್ಟಿ ಹಾಕುವ ಬುದ್ಧಿವಂತಿಕೆ ಬೇಕು. ಕಾಯಿಗಳನ್ನಿಡುತ್ತಿದ್ದಂತೆಯೇ ಎಲ್ಲವನ್ನು ಆನೆಯಿಂದ ಸಾಯಿಸಿಬಿಡುವ ಚಾಣಾಕ್ಷರಿದ್ದಾರೆ. ನಾಲ್ಕು ಆನೆಗಳನ್ನು ಕಟ್ಟಿಹಾಕಿ ಅಥವಾ ಕುರಿಗಳನ್ನೆಲ್ಲಾ ಕೊಂದು ಹಾಕಿ ಕ್ರೀಡೆಯನ್ನು ಮುಗಿಸಬಹುದು. ಇಲ್ಲಿ ಆನೆ ನಡೆಸುವವರಿಗಿಂತ ಕುರಿಕಾಯಿಗಳನ್ನು ನಡೆಸುವವನು ಚುರುಕುತನದಿಂದ ಇರಬೇಕು.

ಆಟದ ನಿಯಮ

ಆನೆಗಳನ್ನು ಮೊದಲು ಘಟ್ಟದ ಮೇಲೆ ಇಡಬೇಕು. ಆನೆ ನಡೆಸುವವನು ಅಂಗಳದ ಅಗಲ ಭಾಗದ ಕಡೆಗೆ ಕುಳಿತು ಆನೆಗಳನ್ನಿಟ್ಟಿರಬೇಕು. ಆನೆ ನಡೆಸುವಾಗ ಆನೆಯಿರುವ ಮನೆಯಿಂದ ಎಡ-ಬಲ-ಮೇಲೆ-ಕೆಳಗೆ-ಯಾವ ದಿಕ್ಕಿಗಾದರೂ ಗೆರೆಯ ಮೂಲಕವೇ ಖಾಲಿಯಿರುವ ಕಡೆಗೆ ಒಂದೇ ಮನೆಯಷ್ಟು ಮಾತ್ರ ಜಾರಿಸಬೇಕು. ನಡೆಸುವಾಗ ಆನೆಯನ್ನು ಎತ್ತಿಡಬಾರದು ಮಧ್ಯದಲ್ಲಿ ಕುರಿಕಾಯಿದ್ದರೆ ಮಾತ್ರ ಎತ್ತಿಟ್ಟು ಕುರಿ ತಿಂದೆ ಅಥವಾ ಕೊಂದೆ ಎಂದು ಆ ಕಾಯಿಯನ್ನು ಎತ್ತಿಟ್ಟುಕೊಳ್ಳಬಹುದು.

ಈ ಕ್ರೀಡೆಯಲ್ಲಿ ನಿಗದಿತವಾದ ಹಾಸುಪಟವಿದ್ದು ಒಂದಕ್ಕೊಂದು ಗೆರೆಗಳು ಛೇದಿಸಿದ ಸ್ಥಳಗಳಿಗೆ ಮನೆ ಎಂದು ಕರೆಯಲಾಗುತ್ತದೆ. ಚಿಕ್ಕ ಕಾಯಿ ಕುರಿಗಳಲ್ಲಿ ಸೇರಿ ಆನೆಯನ್ನು ಕಟ್ಟಹಾಕಬೇಕು ಅಂದರೆ ಚಲಿಸದ ಹಾಗೆ ಮಾಡಬೇಕು. ಈ ರೀತಿಯ ಗೆರೆಯಾಟದಲ್ಲಿ ಹಲವು ಮನೆಗಳ ಆಟದ ಬಗೆಗಳಿವೆ.

ಇಪ್ಪತ್ತು ಮನೆಯ ಗೆರೆಯಾಟ ಇಲ್ಲಿ ಇಪ್ಪತ್ತು ಮನೆಗಳಿದ್ದು ೧೪ ಚಿಕ್ಕಕಾಯಿ ೩ ದೊಡ್ಡಕಾಯಿಗಳು ಬಳಸಿ ಆಡಬೇಕು. ಈ ಕ್ರೀಡೆಗೆ ದುಂಡಮನಿ ಗೆರೆಯಾಟ ಎನ್ನುವರು. ಹತ್ತೊಂಬತ್ತು ಮನೆಯಾಟ ಈ ಕ್ರೀಡೆಗೆ ಹುಲಿಕವಿಲೆ ಮನೆಯಾಟ ಎನ್ನುವರು ಇಪ್ಪತ್ತೆರಡು ಮನೆಯಾಟ ಇಪ್ಪತ್ತೈದು ಮನೆಯಾಟ ಮೂವತ್ತೇಳು ಮನೆಯಾಟ ನಲವತ್ತೊಂಬತ್ತು ಮನೆಯಾಟ

ಈ ರೀತಿಯ ಗೆರೆಯಾಟಗಳು ಪ್ರಾದೇಶಿಕವಾಗಿ ವಿಭಿನ್ನವಾಗಿದ್ದು ಆಟದ ನಿಯಮಗಳಲ್ಲಿಯೂ ವ್ಯತ್ಯಾಸಗಳಿರುತ್ತವೆ. ಈ ಗೆರೆಯಾಟಗಳಲ್ಲಿ ಹುಲಿಕುರಿ, ಮೇಕೆ, ಆನೆಘಟ್ಟಾ ಎಂದು ಪ್ರಬಲ ಪ್ರಾಣಿ ಹಾಗೂ ದುರ್ಬಲ ಪ್ರಾಣಿಗಳ ಹೆಸರಿನೊಂದಿಗೆ ಸೇರಿಸಿ ಆಡಲಾಗುತ್ತದೆ. ಈ ಆಟದ ಕೊನೆಯಲ್ಲಿ ಪ್ರಬಲ ಪ್ರಾಣಿಗಳೊಂದಿಗೆ ದುರ್ಬಲ ವರ್ಗದ ಪ್ರಾಣಿಗಳು ಹೇಗೆ ಹೋರಾಟ ಮಾಡಿ ಬದುಕುವವು ಎಂದು ಹೇಳಬಹುದು.

ಈ ಕ್ರೀಡೆಯು ಚದುರಂಗದಾಟಕ್ಕೆ ತೀರಾ ಹತ್ತಿರವೆನಿಸುತ್ತದೆ. ಚದುರಂಗದಾಟ ಕೇವಲ ಅರಸ ಶ್ರೀಮಂತ ವರ್ಗದವರಾಡುತ್ತಿದ್ದರೆ ಅದಕ್ಕೆ ಪೂರಕವಾಗಿ ಅದೇ ರೀತಿಯ ಆಟವನ್ನು ಸಾಮಾನ್ಯ ವರ್ಗದವರು ಹುಟ್ಟು ಹಾಕಿರಬಹುದು.

೩.೩. ಮನರಂಜನಾತ್ಮಕ ಕ್ರೀಡೆಗಳು

ಮನರಂಜನಾತ್ಮಕ ಕ್ರೀಡೆ ಅಂದರೆ ಹೆಸರೇ ಸೂಚಿಸುವಂತೆ ಮನಸ್ಸಿಗೆ ಮುದ ನೀಡುವ ಕ್ರೀಡೆ. ಇಲ್ಲಿ ಯಾವುದೇ ಸ್ಪರ್ಧೆ, ಪೈಪೋಟಿಗಳಿರುವುದಿಲ್ಲ. ಕೇವಲ ಮನರಂಜನೆಯ ದೃಷ್ಟಿಯಿಂದ ಆಡಲಾಗುತ್ತದೆ. ಸಾಮಾನ್ಯವಾಗಿ ಮಕ್ಕಳಾದಿಯಾಗಿ ಸ್ತ್ರೀ-ಪುರುಷರು ಈ ಕ್ರೀಡೆಯಲ್ಲಿ ಭಾಗವಹಿಸುವರು. ಕೆಲವೊಂದು ಸಂದರ್ಭದಲ್ಲಿ ಹಬ್ಬ, ಉತ್ಸವ, ಜಾತ್ರೆಗಳ ಸಮಯದಲ್ಲಿ ನೆಂಟರಿಷ್ಟರು ಒಂದಡೇ ಸೇರಿದಾಗ ಇಂತಹ ಕ್ರೀಡೆಯನ್ನು ಆಡುವರು. ಪುರುಷರಿಗೆ, ದೂಡ್ಡವರಿಗೆ ದೈಹಿಕ, ಬೌದ್ಧಿಕ ಕಸರತ್ತಿನ ಕ್ರೀಡೆಗಳಿದ್ದ ಹಾಗೆ ಮಕ್ಕಳಿಗೆ, ಸ್ತ್ರೀಯರಿಗೆ ಈ ಮನರಂಜನಾತ್ಮಕ

ಕ್ರೀಡೆಗಳಲ್ಲಿ ಒಲವು ಜಾಸ್ತಿ. ಹಾಗಾಗಿ ಇಲ್ಲಿ ಮನರಂಜನಾತ್ಮಕ ಕ್ರೀಡೆಗಳು ಎಂದು ವಿಭಾಗಿಸಿಕೊಂಡು ವಿವೇಚಿಸಲು ಪ್ರಯತ್ನಿಸಿದ್ದೇನೆ.

ಬೇಟೆ

ಬೇಟೆ ಜನರ ವಿನೋದಾವಳಿಯ ಮಾಧ್ಯಮವಾಗಿ, ಹವ್ಯಾಸವಾಗಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಆಹಾರ ಸಂಪಾದನೆಗೆಂದು ಆರಂಭವಾದ ಈ ತಂತ್ರ ಕ್ರಮೇಣ ಮೋಜು, ರಂಜನೆ, ವ್ಯಾಪಾರವಾಗಿ ಬೆಳೆಯಿತು. ಜನರು ಕಾಡು ತೊರೆದು ಬಯಲಲ್ಲಿ ಬೇಸಾಯ ಕಲಿತು ಸ್ವಾವಲಂಬಿಗಳಾದ ಮೇಲೂ ಸಾಹಸದ ಅಭಿವ್ಯಕ್ತಿಗಾಗಿ ಬೇಟೆಯನ್ನೇ ನೆಚ್ಚಿಕೊಂಡರು, ಅವರ ಮುಕ್ತ ಬದುಕಿನಲ್ಲಿ ಕ್ರೂರ ಪ್ರಾಣಿಗಳನ್ನು ವಿವಿಧ ತಂತ್ರಗಳಲ್ಲಿ ಓಡಿಸಿ ದಂಡಿಸಿ ಹಿಡಿಯುವುದು ಕೊಲ್ಲುವುದು ವಿನೋದದ ವಿಷಯವಾಯಿತು. ಇದು ಬುಡಕಟ್ಟು ಜನರ ಜೀವನ ನಿರ್ವಹಣೆ, ಉದ್ಯೋಗವಾಗಿ ಶ್ರೀಮಂತರಿಗೆ, ಅರಸರಿಗೆ ಆನಂದದಿಂದ ಕಾಲ ಕಳೆಯುವ ಮಾರ್ಗವಾಯಿತು. ರಾಜ ಮಹಾರಾಜರು ವಿನೋದಕ್ಕಾಗಿ ಬೇಟೆಯಾಡಿದ ಸಂಗತಿಗಳು ಪುರಾಣ ಇತಿಹಾಸಗಳಲ್ಲಿ ಶಾಸನ, ಶಿಲ್ಪ, ಸಾಹಿತ್ಯ ಕೃತಿ, ವಿದೇಶಿ ಪ್ರವಾಸಿಗರ ವರದಿಗಳಲ್ಲಿ ಪ್ರಾಸಂಗಿಕವಾಗಿ ಬಂದಿವೆ. ಬುಡಕಟ್ಟು ಜನ ಪ್ರಾಣಿ, ಪಕ್ಷಿ ಜಲಚರಗಳನ್ನು ವಿವಿಧ ಪರಿಕರ, ಸೂಕ್ಷ್ಮ ತಂತ್ರಗಳಿಂದ ಹೊಡೆದು ಕೊಲ್ಲುವುದೇ ಬೇಟೆ. ಶಿಷ್ಟ ಸಾಹಿತ್ಯದಲ್ಲಿ ಈ ವಿಧಾನಕ್ಕೆ ಮೃಗೆಯೇ, ಅಚ್ಚೋದನ, ಮೃಗವ್ಯ, ಅಚ್ಚೋಟನ, ಅಖೇಟಿಕೆ, ಪಾಪರ್ದಿ ಶಿಕಾರಿ ಎಂಬ ಹೆಸರಿವೆ.[೧೪೧] ಮತ್ತು ಶ್ಯೇನಾಪಾತ[೧೪೨] ಎಂಬ ಪದವು ಇದೇ ಅರ್ಥದಲ್ಲಿ ಬಳಸಲಾಗುತ್ತದೆ. ಬೇಟೆಯಾಡಬೇಕಾದರೆ ಮೃಗಯುವಿಗೆ ನಿರ್ದೇಶನ ನೀಡುವವನಿರುತ್ತಿದ್ದ ಅವನಿಗೆ ಬೋಂಟ್ರೆ ಎನ್ನುವರು.[೧೪೩] ಬೇಟೆಯನ್ನು ಕಸುಬಾಗಿಸಿಕೊಂಡು ಜೀವನ ಸಾಗಿಸುವ ಸಮುದಾಯವೇ ಬೇಡರು. ಬೇಟೆಯು ಒಂದು ಪುರಾತನ ವೃತ್ತಿ, ಇದು ಆಹಾರ ಮಾಧ್ಯಮ ಒದಗಿಸುವ ಪ್ರಕ್ರಿಯೆ, ಪ್ರಾಣಿಯನ್ನು ತಿನ್ನುವ ಹಾಗೂ ಪಳಗಿಸುವ ಚಟುವಟಿಕೆಗೆ ಬೇಟೆ ಎನ್ನುವರು.[೧೪೪]

ಬೇಟೆಯ ಪ್ರಾಚೀನತೆ

ನಾಗರೀಕತೆಯ ಆರಂಭದ ಕಾಲದಿಂದಲೂ ಬೇಟೆಯು ಒಂದು ಮೆಚ್ಚಿನ ಮನೋರಂಜನೆಯಾಗಿ ಬಳಕೆಯಲ್ಲಿತ್ತು. ಮಾನವನಿಗೆ ವ್ಯವಸಾಯವು ಜೀವನೋಪಾಯವಾಗುವ ಮೊದಲು ಬೇಟೆ ಅವನ ಆಹಾರಾನ್ವೇಷಣೆಯ ಮುಖ್ಯ ಮಾರ್ಗವಾಗಿತ್ತು. ಮನುಷ್ಯ ಪ್ರಾಣಿ ಪಕ್ಷಿಗಳನ್ನು ಹಿಡಿದು ಕೊಲ್ಲುವುದರ ಮೂಲಕ ಅದರ ಮಾಂಸ ತಿಂದು ಜೀವನ ನಡೆಸುತ್ತಿದ್ದನು. ನಂತರದ ಕಾಲದಲ್ಲಿ ಶ್ರೀಮಂತರಿಗೂ, ಆಳುವ ಅರಸರಿಗೂ ಇದು ಆನಂದದಿಂದ ಕಾಲ ಕಳೆಯುವ ಮಾರ್ಗವಾಯಿತು. ಪ್ರಾಗೈತಿಹಾಸಿಕ ಕಾಲದಿಂದಲೂ ನಾವು ಬೇಟೆ ದೃಶ್ಯಗಳ ಹಲವು ದಾಖಲೆ ಕಾಣುತ್ತೇವೆ.

ಋಗ್ವೇದದ ಸೂಕ್ತಗಳಲ್ಲಿ ಬೇಟೆಗೆ ಸಂಬಂಧಿಸಿದ ವಿವರಗಳಿವೆ. ಅಲ್ಲಿ ಸೂಕ್ತಕಾರರು, ನಿಷಾದರನ್ನು ಉಲ್ಲೇಖಿಸುತ್ತಿದ್ದು ಈ ನಿಷಾದರೆಂದರೆ ನುರಿತ ಬೇಟೆಗಾರರಾಗಿದ್ದು ಬೇಟೆಯೇ ಅವರ ಉದ್ಯೋಗವಾಗಿತ್ತು. ಅಂದಿನ ಬೇಟೆಯು ರಾಜನ ವಿನೋದವಾಗಿತ್ತು. ಈ ವಿನೋದವನ್ನು

ವಿಶೇಷ ಸಂದರ್ಭಗಳಲ್ಲಿ ಪ್ರದರ್ಶಿಸುತ್ತಿದ್ದರೆಂದು ಮೇಗಾಸ್ತನಿಸ್ ಮತ್ತಿತರರು ತಿಳಿಸುತ್ತಾರೆ.[೧೪೫] ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದುದೇ ಬೇಟೆಯ ಮೂಲಕ ಹಕ್ಕ-ಬುಕ್ಕ (ಹರಿಹರ-ಬುಕ್ಕರಾಯ) ಎಂಬುವರು ಈ ಪ್ರದೇಶದಲ್ಲಿ ಬೇಟೆಯಾಡುತ್ತಾ ಬರುವಾಗ ಇವರ ಬೇಟೆ ನಾಯಿಗಳನ್ನು ಮೊಲಗಳು ಅಟ್ಟಿಸಿಕೊಂಡು ಹೋದವಂತೆ. ಇದನ್ನು ಕಣ್ಣಾರೆ ಕಂಡ ಹಕ್ಕ-ಬುಕ್ಕರ ಗುರುಗಳಾದ ವಿದ್ಯಾರಣ್ಯರು ತಿಳಿಸಿದಂತೆ ಸಾಮ್ರಾಜ್ಯ ಸ್ಥಾಪಿಸಿದರು. ಈ ಸ್ಥಾಪನೆಯ ಕಾಲಕ್ಕೂ ಮತ್ತು ವಿದ್ಯಾರಣ್ಯರ ಕಾಲಕ್ಕೂ ವ್ಯತ್ಯಾಸವಿದೆ. ಅದರಂತೆ ಈ ರಾಜರಿಬ್ಬರೂ ಈ ನೆಲದಲ್ಲಿ ರಾಜ್ಯ ಸ್ಥಾಪನೆಯ ಬಗೆಗೆ ನೀಡುವ ಒಂದು ಹೇಳಿಕೆ ಆಗಿದೆ.[೧೪೬] ಕುಂಜರಕೋಣ ಅಥವಾ ಕುಂಜರ ಕೋಣ ಪುರಿಯು ಆನೆಗೊಂದಿ ನಗರದ ಇನ್ನೊಂದು ಹೆಸರಾಗಿತ್ತೆಂಬುದು ಶಾಸನಗಳಿಂದಲೇ ಸ್ಪಷ್ಟಪಡುತ್ತದೆ. ಅವುಗಳಲ್ಲಿ ಹರಿಹರನು ಕುಂಜರಕೋಣ ನಗರದಿಂದ ಇಡೀ ಪೃಥ್ವಿಯನ್ನು ಆಳುತ್ತಿದ್ದನು ಎಂದು ಹೇಳಲಾಗಿದೆ ಮತ್ತು ಅವನು ಬೇಟೆಗೆ ಹೋದಾಗ ತುಂಗಭದ್ರೆಯನ್ನು ದಾಟಿದನು ಮತ್ತು ಭಾವೀ ವಿಜಯನಗರದ ನಿವೇಶನದಲ್ಲಿದ್ದ ಮೊಲದ ಅದ್ಭುತ ಘಟನೆಯನ್ನು ಕಂಡನು.[೧೪೭]

ವಿಜಯನಗರ ಕಾಲದರಸರು ಬೇಟೆಯನ್ನು ಮನೋರಂಜನೆಯ ದೃಷ್ಟಿಯಿಂದ ಆಡುತ್ತಿದ್ದರು. ಅಂದಿನ ರಾಜರು ಬೇಟೆಯಲ್ಲಿ ಎಂಥ ಪ್ರವೀಣರೆಂಬುದಕ್ಕೆ ಅವರಿಗಿದ್ದ ಬಿರುದುಗಳೇ ಸಾಕ್ಷಿ ಅಂದಿನ ಬೇಟೆಯ ಕುರಿತು ಶಾಸನ, ಸಾಹಿತ್ಯ, ಶಿಲ್ಪ ವಿದೇಶಿ ಪ್ರವಾಸಿಗರ ಬರಹಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಸ್ಪಷ್ಟವಾಗುತ್ತದೆ. ಬೇಟೆಯಾಡುವುದು ಒಂದು ವಿನೋದ ಈ ಕಲೆಗಾರಿಕೆಗೆ ಮೃಗಾಯ ವಿನೋದವೆಂದು ಕರೆಯುತ್ತಿದ್ದರಲ್ಲದೆ ಅದು ಕ್ಷತ್ರಿಯ ಧರ್ಮವೂ ಆಗಿತ್ತೆಂದು ಹೇಳಬಹುದು. ಪ್ರಾಚೀನ ಮಾನವನ ನಂತರ ಅರಸೊತ್ತಿಗೆಗಳ ಕಾಲದಲ್ಲಿ ಇದು ಒಂದು ರಕ್ಷಣೇಗಾಗಿ, ವಿನೋದ ಚಟುವಟಿಕೆಯಾಗಿ ಬೆಳೆಯಿತು. ಕಾಡಿನಲ್ಲಿ ಮೃಗಗಳ ಹಾವಳಿ ತೀವ್ರವಾದಾಗ ಬೇಡರು ರಾಜನ ಬಳಿ ಬಂದು ರಕ್ಷಣೆಗಾಗಿ ಬೇಟೆ ಅನಿವಾರ್ಯವೆಂದು ಕೋರಿದಾಗ ರಾಜ ಒಪ್ಪಿ ಅವರೊಂದಿಗೆ ಬೇಟೆಗೆ ಹೋರಾಡುತ್ತಾನೆ.

ಉದಾ: ಇಕ್ಕಿ ಹಣಿಗೆ ರಾಯಗೆ ಲೀಲೆ ಮುಕ್ಕು ಭಿನ್ನಪೆಸಿದನಿಂತು ಲೆಕ್ಕವಿಲ್ಲದ ಮೃಗತತಿ ಬಂದು ತಳಿಯೊಳ (ಳು) (ಬೇಲಿ-ಪಾಳೆಯ) ಪೊಕ್ಕುದು ಚಿತ್ತೈಸೆಂದ ಲೀಲೆಯಿಂದುಡು ಗೋರತೆ ಗೊಟ್ಟವನಿಗೆ ಭೂಪಾಲ ಪೂಯ್ಯಲು ಭೇರಿಯನು[೧೪೮] ಎಂಬ ಕಾವ್ಯದ ನಿದರ್ಶನದಂತೆ ಅಂದು ಅರಸರ ಬೇಟೆಗಾಗಿ ಕೆಲವು ಕಾಡುಗಳನ್ನು ಪ್ರತ್ಯೇಕಿಸಿ ಕಾಯ್ದಿರಿಸುತ್ತಿದ್ದರು. ಈ ಪ್ರಯತ್ನ ಕಾಡು ಪ್ರಾಣಿಗಳನ್ನು ಉತ್ಕೃಷ್ಟವಾಗಿ ಬೆಳೆಸಿ ಅರಸನನ್ನು ಬೇಟೆಗೆ ಹುರಿದುಂಬಿಸಿ ಕೊಲ್ಲಿಸುವ ಪ್ರವೃತ್ತಿ ರಾಜನ ಗುಣ, ಶೌರ್ಯ ಹೆಚ್ಚಿಸುವುದಾಗಿತ್ತು. ವಿಜಯನಗರ ಕಾಲದ ಸಂಸ್ಕೃತಿಯ ಬಗ್ಗೆ ರಾಧ ಕೃಷ್ಣಮೂರ್ತಿ ಅವರು ಹೇಳುವ ಕೆಲವು ವಿವರಗಳಲ್ಲಿ ರಾಜನಾದವನಿಗೆ ತಿಳುವಳಿಕೆ ಇರಲೇಬೇಕಾದ ಕೆಲವು ಕ್ಷೇತ್ರಗಳ ಉಲ್ಲೇಖವಿದೆ. ಪ್ರಸ್ತುತ ಗ್ರಂಥದಲ್ಲಿ ಬೇಟೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ಅಧ್ಯಾಯ ಇದೆ. ರಾಜನು ಬೇಟೆಯ ಅಭ್ಯಾಸ ಮಾಡಬೇಕೆಂದು ಮತ್ತು ನಗರ ಹಾಗೂ ಪಟ್ಟಣಗಳಲ್ಲಿನ ಕ್ರೂರ ಮೃಗಗಳ ಹಾವಳಿಯಿಂದ ರಕ್ಷಿಸಲು ಆಗಿಂದಾಗ್ಗೆ ಬೇಟೆಗೆ ಹೊರಡುತ್ತಿರಬೇಕೆಂದು, ಇದರಿಂದ ಆತನ ಶಕ್ತಿ ಹೆಚ್ಚುತ್ತದಲ್ಲದೆ ಬೇರೆ ದೇಶದಲ್ಲಿ

ಪ್ರಖ್ಯಾತಿಯನ್ನು ಪಡೆಯಬಹುದಾದ ಸಲಹೆ ಸೂಚನೆಗಳನ್ನು ಈ ಅಧ್ಯಾಯದಲ್ಲಿ ರಾಜನಿಗೆ ಉಪದೇಶಿಸಲಾಗಿದೆ. ಬೇಟೆಯ ಬಗೆಗೆ ಕುತೂಹಲಕಾರಿ ವರ್ಣನೆಗಳಿವೆ. ಇಲ್ಲಿ ಕೇವಲ ಕಾಲಹರಣಕ್ಕಾಗಿ ಬೇಟೆಯ ಶಿಫಾರಸ್ಸು ಮಾಡಿಲ್ಲ. ಅದು ಒಂದು ರೀತಿಯ ಅವಶ್ಯಕ ಕಲೆ, ಇದರಿಂದ ಯುದ್ಧ ವಿಜ್ಞಾನ ಹಾಗೂ ರಾಜನೀತಿ ವಿಜ್ಞಾನದ ಜ್ಞಾನ ಉಂಟಾಗುತ್ತದೆ.[೧೪೯] ಬೇಟೆಯು ತುಳುನಾಡಿನಲ್ಲಿ ಒಂದು ಜನಪ್ರಿಯ ಮಾಧ್ಯಮವಾಗಿತ್ತು. ಎಂದು ಅಲ್ಲಿನ ಪಾಡ್ದನಗಳಿಂದ ತಿಳಿದುಬರುತ್ತದೆ. ಈಶ್ವರ ಪಾರ್ವತಿ ಪಾಡ್ದನದಲ್ಲಿ ಬೇಟೆಯ ಉಲ್ಲೇಖಗಳಿವೆ. ಎಕನ ಸಾಲೆರ್ ಸಂಧಿಯಲ್ಲಿ ಬೇಟೆಯ ಸುಂದರ ವರ್ಣನೆಯಿದೆ. ಜೇವು-ಕೇವಗೆ, ಕೋಟಿ ಚನ್ನಯ್ಯ, ವಜ್ರದ ಕುಮಾರ, ಮೊದಲಾದ ಪಾಡ್ದನಗಳಲ್ಲಿ ಬೇಟೆಯ ಉಲ್ಲೇಖಗಳಿವೆ. ಪಂಜುರ್ಲಿ ಪಾಡ್ದನದಲ್ಲಿ ದೇವರು ಹಂದಿಯ ಬೇಟೆಯಾಡಿ ಮುಂದೆ ಅದು ಆರಾಧನೆಗೆ ಕಾರಣವಾಗುವ ಕಥಾನಕವಿದೆ.[೧೫೦] ಅಂದಿನ ಅರಸರ ಬೇಟೆ ಬಗೆಗೆ ಕಾವ್ಯ ಹುಟ್ಟಿಕೊಂಡರೆ ಜನಸಾಮಾನ್ಯರ ಬೇಟೆ ಬಗೆಗೆ ವೀರಗಲ್ಲುಗಳು ಹುಟ್ಟಿ, ಮೌಖಿಕ ಕಾವ್ಯಗಳು ನಿರ್ಮಾಣಗೊಂಡವು. ಈ ಅವಧಿಯಲ್ಲಿ ಗಾಳಿ, ಮಳೆ, ಬಿಸಿಲು ಎನ್ನದೆ ರಾಜ ಯಾವಾಗಲೂ ಬೇಟೆಯಲ್ಲಿ ಕಾಲ ಕಳೆಯುತ್ತಿದ್ದ. ಅರಸ ಬೇಟೆಗೆಂದು ಹೊರಗೆ ಹೊರಡುತ್ತಾನೆಂದರೆ ಸೈನ್ಯವು ಹಾದು ಹೋಗುವ ಪ್ರದೇಶದಲ್ಲಿ ಬೇಟೆಯ ಕಾವಲುಗಾರರು ಎಲ್ಲೆಲ್ಲಿ ಒಳ್ಳೆಯ ಬೇಟೆ ಇದೆ, ಬೇಟೆಯ ಮಹಾಭಕ್ತಿಗಳಿಗೆ ತಿಳಿಸಬೇಕಾಗಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ಬೇಟೆಗಾರರಿಗೆ ರಾಜ ಮನ್ನಣೆಯಿತ್ತು. ಸಂಗಮ ವಂಶದ ಅರಸ ಹರಿಹರ ಬೇಟೆಗಾರರಿಗೆ ಪ್ರೋತ್ಸಾಹ ನೀಡಿದ್ದ ಬೇಟೆಕಾರ ಹೆಬ್ಬಾಗಿಲು ಇವರ ವಾಸಸ್ಥಾನವಾಗಿತ್ತು.[೧೫೧]

ವಿಜಯನಗರದರಸರು ಬೇಟೆಯಲ್ಲಿ ಎಂಥ ಪ್ರವೀಣರೆಂಬುದಕ್ಕೆ ಅವರಿಗಿದ್ದ ಬಿರುದುಗಳೇ ಸಾಕ್ಷಿ. ಇಮ್ಮಡಿ ದೇವರಾಯ ಆನೆ ಬೇಟೆಯಲ್ಲಿ ಹೆಚ್ಚು ಪ್ರೀತಿಯುಳ್ಳವನಾಗಿದ್ದ ಮತ್ತು ಗಜಬೇಂಟೆಕಾರ ಎನ್ನುವ ಬಿರುದು ಸಂಪಾದಿಸಿದ್ದ. ಇವನು ಬೇಟೆಯಾಡುವ ಸಲುವಾಗಿ ಮಾಚನಹಳ್ಳಿಗೆ ಬಂದಾಗ ಸಮೀಪದ ಜಟಂಗೀರಾಮೇಶ್ವರ ದೇವರ ದರ್ಶನ ಪಡೆದು ಆ ದೇವರಿಗೆ ರಾಯದುರ್ಗಕ್ಕೆ ಸಲ್ಲುವ ಅಮೃತಪಡಿ ಕಟ್ಟಳೆಯ ಇಪ್ಪತ್ತು ವರಹದ ಆದಾಯವಿರುವ ಗ್ರಾಮವನ್ನು ದಾನವಾಗಿ ಬಿಡುತ್ತಾನೆ.[೧೫೨] ಹಲವಾರು ಶಾಸನ ಕಾವ್ಯಗಳಲ್ಲಿ ಅವನ ಬಿರುದು ಉಲ್ಲೇಖಗೊಂಡಿದೆ. 'ಗಜವೇಟ್ಟೈಕಂಡುರುಳಿಯ' ಎಂಬ ಅವನ ಇನ್ನೊಂದು ಬಿರುದು ಆನೆಗಳ ಬೇಟೆಯನ್ನು ಕೂಡ ಅವನು ಬಹಳ ಆಸಕ್ತಿಯಿಂದ ನೋಡುತ್ತಿದ್ದನೆಂದು ತಿಳಿಸುತ್ತದೆ.[೧೫೩] ಅದೇ ರೀತಿ ಆನೇ ಬೇಟೆಯ ಕುರಿತ ಉಲ್ಲೇಖಗಳು ಇವೆ.

ಅಚ್ಯುತರಾಯ[೧೫೪] ವಿರೂಪಾಕ್ಷ[೧೫೫] ಉಮ್ಮತ್ತೂರಿನ ನಂಜರಾಯ[೧೫೬] ರವರು ಸಹ ಆನೆ ಬೇಟೆಯಾಡಿದ ಉಲ್ಲೇಖಗಳಿವೆ. ವಿಜಯನಗರ ಕಾಲದಲ್ಲಿ ರಚನೆಯಾದ ಸಾಹಿತ್ಯ ಕೃತಿಯಲ್ಲಿ ಆನೆ ಬೇಟೆಯ ಅನೇಕ ಪ್ರಸಂಗಗಳಿವೆ.

ಕಂಬಾರೆ ದೀಪದ್ರಾಕ್ಷೇತನ ತೋರ
ಸೀಬಾಂತ ಬಿದಿರ್ವೆತ್ತಗಳ
ಲೋಬಾನ ಚಂದನ ಗಾಡಿನೊಳ್ವಂದಿ ಮ
ತ್ತಂಭಗಳಿರೆ ಕಂಡರವರು.[೧೫೭]

ಅಂದು ಯಥೇಚ್ಚವಾದ ಕಾಡು ಇತ್ತು. ಅವರಲ್ಲಿ ಕಾಡುಬಾಳೆ, ದ್ರಾಕ್ಷಿ, ಬಿದಿರು, ಬೆತ್ತದ ಮರಗಳ ನಡುವೆ ಬೇಡರು ಕಾಡನೆಗಳನ್ನು ಕಂಡರು. ಆನೆ ಬೇಟೆಗೆ ಹೋದಾಗ ಕಾಡಿನಲ್ಲಿ ಕಂಡಂತಹ ಆನೆಗಳನ್ನು ನೋಡಿ

ಸೊಕ್ಕಾನೆಗಳಿದಿರ್ವಂದೊಡೆ ತಲೆಗಳ
ಚಕ್ಕನೆ ಕಡಿದು ಲುಬ್ಧಕನು
ಹೆಕ್ಕಳದಿಂದೆ ಹೊತ್ತನು ವಿಘ್ನರಾಜನ
ಮಕ್ಕಳ ಬಳಗವೆಂಬಂತೆ[೧೫೮]

ಅಂದರೆ ಎದಿರು ಬಂದ ಮದ್ದಾನೆಗಳ ತಲೆ ಕಡಿದು ಅವುಗಳನ್ನು ಗಣಪತಿಯ ಬಳಗವೆಂಬಂತೆ ಸಂಭ್ರಮದಿಂದ ಕುಣಿದಾಡುತ್ತಿದ್ದರು.

ಸೊಂಡಿಲೋಳು ಕೊನವೆತ್ತ ಮದಹಸ್ತಿಗಳ ಕಚಿ
ಕೊಂಡಿರ್ದ ಕೇಸರಿಗಳನು
ತುಂಡದೊಳೆರಡು ಕಾಲ್ಗೂಳರಡಾಂತ ಗಂಡ ಬೇ
ರುಂಡನ ಮುರಿಯಲಿಕ್ಕಿದನು.[೧೫೯]

ಆನೆಯು ಕಾಡಿನಲ್ಲಿ ಬೇಟೆಯಾಡಬೇಕಾದರೆ ಸೊಂಡಿಲಲ್ಲಿ ರೆಂಬೆಗಳನ್ನ ಹೊತ್ತಿದ್ದ ಆನೆಯನ್ನು ಮುರಿದು ಬೀಳಿಸಿದನು. ಆ ಆನೆ ಬಿದ್ದ ರಭಸ ಹೇಗಿತ್ತು ಅಂದರೆ

ಬಿದ್ದುದ್ದು ವೃಕ್ಷ ವೃಕ್ಷದ ಮೇಲೆ ಮದಹಸ್ತಿ
ಬಿದ್ದುದು ಕೇಸರಿಯೊಡನೆ
ಬಿದ್ದುದು ವಿಹಗೇ ಬೀರುವ ನೆಲದ ನಿಂ
ದಿರ್ದ ಕಿರಾತರೋಡಿದರು[೧೬೦]

ಆನೆಯು ಬಿದ್ದ ರಭಸಕ್ಕೆ ಪಕ್ಕದಲ್ಲಿದ್ದ ಬೇಡರೆಲ್ಲ ದಿಕ್ಕಾಪಾಲಾಗಿ ಹಿಂದೆ ಸರಿದರು.

ಹಾಗೆ ನಂಜುಂಡ ಕವಿಯ ರಾಮನಾಥ ಚರಿತೆಯಲ್ಲಿ ಇದರ ಉಲ್ಲೇಖವಿದೆ. ಹಾಗೂ ಆನೆ ಬೇಟೆಯ ಕುರಿತು ಅದನ್ನು ಪಳಗಿಸುವ ಬಗ್ಗೆ ಅನೇಕ ಶಿಲ್ಪಗಳನ್ನು ನೋಡಬಹುದು.

ವಿಜಯನಗರಕ್ಕೆ ಭೇಟಿನೀಡಿದ ವಿದೇಶಿ ಪ್ರವಾಸಿಗರು ಆನೆ ಬೇಟೆಯ ಕುರಿತು ದಾಖಲೆ ನೀಡಿದ್ದಾರೆ. ಅಬ್ದುಲ್ ರಜಾಕ್ ಹೇಳಿಕೆಯಂತೆ ಹಿಂದೂಸ್ಥಾನದ ರಾಜರುಗಳು ಕೂಡ ಆನೆಯ ಬೇಟೆಯಲ್ಲಿ ಭಾಗವಹಿಸುತ್ತಾರೆ. ತಿಂಗಳುಗಟ್ಟಲೆ ಕಾಡಿನಲ್ಲಿದ್ದುಕೊಂಡು ಆನೆಗಳನ್ನು ಹಿಡಿದು ತಮಗೆ ಬೇಕಾದ ಆನೆ ಸಿಕ್ಕಾಗ ಹೆಮ್ಮೆ ಪಡುತ್ತಾರೆ. ಅಪರಾಧಿಗಳನ್ನು ಶಿಕ್ಷಿಸಲು ಒಮ್ಮೊಮ್ಮೆ ಅವರನ್ನು ಆನೆಯ ಕಾಲಕೆಳಕ್ಕೆ ಎಸೆಯುತ್ತಾರೆ. ಆನೆ ಅವರನ್ನು ಕಾಲಿನಿಂದ ಒಸಗಿ ಸೊಂಡಿಲಿನಿಂದ ಹರಿದು ಚಿಂದಿ ಚಿಂದಿ ಮಾಡಿಬಿಡುತ್ತದೆ.[೧೬೧] ಅಂದರೆ ಆನೆ ಬೇಟೆ ಹೋಗುವ ಮುಖ್ಯ ಉದ್ದೇಶ ತಮಗೆ ಬೇಕಾದ ಆನೆಗಳನ್ನು ಜೀವಂತ ಹಿಡಿದು ಅವನ್ನು ತಮಗೆ ಬೇಕಾದ ರೀತಿಯಲ್ಲಿ ಪಳಗಿಸಿ, ಯುದ್ಧಕ್ಕೆ, ಇನ್ನಿತರ ಕಾರ್ಯಗಳಿಗೆ ಬಳಸುತ್ತಿದ್ದುದು ಸ್ಪಷ್ಟ. ವಿಜಯನಗರದ ಶಿಲ್ಪಗಳನ್ನು ನೋಡಿದರೆ ಅಲ್ಲಿರುವ ಆನೆಯ ಸಾಲುಗಳಲ್ಲಿಯ ಇದು ಸ್ಪಷ್ಟವಾಗುತ್ತದೆ. ಅಂದು ಆನೆ ಬೇಟೆಯನ್ನಲ್ಲದೆ ಹಂದಿ, ನರಿ, ಹುಲಿ, ಗೀಜಗ, ಮೊಲ, ಕರಡಿ, ಕಾಡೆಮ್ಮೆ ವಿವಿಧ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುತ್ತಿದ್ದರು.

ಹಂದಿ ಬೇಟೆಯ ಕುರಿತು.

ಚಂದಿರ ದೊರೆ ಬಾಣದಿಂದೊಬ್ಬ ಕೊಬ್ಬಿದ
ಹಂದಿಯನದರ ಕೋಡುಡಿದು
ಮುಂದುರುಳಿದವು ವರಹಾ ಬೆಳ್ಳಿಯ ಕೋಳ
ಬಂದಿಯನುರ್ಚಿ ಕೊಂಡಂತ್ರೆ[೧೬೨]

ಹಂದಿಯನ್ನು ಹೊಡೆಯಲು ಯಾವ ರೀತಿಯ ತಂತ್ರವನ್ನು ಹೆಣೆಯುತ್ತಿದ್ದರು ಎಂಬುದನ್ನು ಹಾಗೂ ಅವನ್ನ ಹೊಡೆಯಲು ಭರ್ಚಿಯನ್ನು ಬಳಸುತ್ತಿದ್ದುದು ತಿಳಿಯುತ್ತದೆ.

ಹುಲಿಬೇಟೆ

ಪ್ರಾಣಿ ಪ್ರಪಂಚದಲ್ಲಿ ಹುಲಿ ಬಲಿಷ್ಠ ಹಾಗೂ ಚುರುಕಾದ ಪ್ರಾಣಿ. ಇದನ್ನು ಬೇಟೆಯಾಡುವುದೆಂದರೆ ನಿಜವಾಗಿಯೂ ಸಾಹಸದ ಕಾರ್ಯವೇ. ಹುಲಿಯೊಂದಿಗೆ ಹೋರಾಡಿ ಮಡಿದ ವಿಷಯವನ್ನು ತಿಳಿಸುವ ವೀರಗಲ್ಲುಗಳು, ಕರ್ನಾಟಕದಾದ್ಯಂತ ಅನೇಕ ಸ್ಥಳಗಳಲ್ಲಿ ದೊರೆತಿವೆ. ಅವುಗಳಲ್ಲಿ ಯಮ್ಮಿಗನೂರು, ಮಂಡಿಕಲ್ಲು, ದ್ಯಾಂಪುರ, ಬೆಂಡಿಕೇರಿ, ಕುಪ್ಪಟೂರು, ಬಾಗಳಿ, ಬಳ್ಳಿಗಾವೆ, ಬೂದಿಗುಪ್ಪೆ, ನಿಜಗಲ್ಲು, ಕೆಂಪೋಹಳ್ಳ, ಹಳದಿಪುರ, ಹಾವೇರಿ ಜಿಲ್ಲೆಯ ಹಿರೇಕೇರೂರಿನ ಅಣಜಿ, ಅಂಬಳೆ, ಕೊಪ್ಪಳ ಜಿಲ್ಲೆಯ ಹಲ್ಗೇರಿ, ಕಂಪ್ಲಿ, ಚಿತ್ರದುರ್ಗ ಜಿಲ್ಲೆ ಹೀಗೆ ನಾನಾಕಡೆ ಹುಲಿ ಬೇಟೆಯೊಂದಿಗೆ ಹೊರಾಡಿ ಮಡಿದ ವೀರಗಲ್ಲುಗಳು ಅನೇಕ ಇವೆ. ಗದಗ ಜಿಲ್ಲೆ ತಾಲ್ಲೂಕಿನ ಹೊಸುರ ಗ್ರಾಮದ ಈಶ್ವರ ಗುಡಿ ಎದುರಿಗೆ ಮೂರು ಹಂತಗಳಲ್ಲಿರುವ ಹುಲಿಬೇಟೆಯ ಶಾಸನೋಕ್ತ ವೀರಗಲ್ಲಿದೆ. ಇದರಲ್ಲಿ ಎರಡು ನಾಯಿಗಳು ಹುಲಿಯನ್ನು ಎದುರಿಸುತ್ತಿರುವ ಹಾಗೂ ವೀರನು ನಾಯಿಗಳಿಗೆ ಕಟ್ಟಿದ ಹಗ್ಗವನ್ನು ಕೈಯಲ್ಲಿ ಹಿಡಿದಿರುವುದು ಸ್ಪಷ್ಟವಾಗಿ ಕಾಣುತ್ತದೆ. ವೀರಗಲ್ಲಿನಲ್ಲಿ ನಾಲ್ಕು ಸಾಲಿನ ಶಾಸನವಿದ್ದು ಅದರಲ್ಲಿ ಮಲ್ಲದೇವಣ್ಣನ ಮೊಮ್ಮಕ್ಕಳಾದ ಬೊಮ್ಮಯ್ಯ, ಮಲ್ಲಯ್ಯ ಇನ್ನೂ ಎರಡು ಹೆಸರು ಅಳಿಸಿವೆ. ಜೊತೆಗೂಡಿ ಕಾಡಿನಲ್ಲಿ ಹುಲಿಯೊಂದಿಗೆ ಹೋರಾಡುವರು.[೧೬೩]

ಹಾಗೆ ಹುಲಿಬೇಟೆಯ ಚಿತ್ರಣ ಮಹಾನವಮಿ ದಿಬ್ಬದ ಬಲಗಡೆ ಕೆಳಗೆ, ಗೊರಂಟ್ಲದ ಮಾದವರಾಯ ದೇವಸ್ಥಾನದ ಹದಿಮೂರನೆಯ ಕಂಬದ ಪೂರ್ವಾಭಿಮುಖವಾಗಿ ಕೆಳಗಡೆ. ಚಿಂತಾಲವೆಂಕಟರಮಣ ದೇವಾಸ್ಥಾನದ ಬಲಗಡೆ ವಿಜಯವಿಠಲ ದೇವಾಲಯದ ಬಲಗಡೆ ಮಂಟಪ ಇತ್ಯಾದಿ ಕಡೆಯಲ್ಲಿ ಹುಲಿಬೇಟೆಯ ಶಿಲ್ಪಗಳಿವೆ.

ಇದೇ ರೀತಿ ಕರಡಿ, ಕಾಡುಕೋಣ, ಜಿಂಕೆ ಇತ್ಯಾದಿ ಪ್ರಾಣಿಗಳನ್ನು ಬೇಟೆಯಾಡಿದ ಚಿತ್ರಣಗಳಿವೆ.

ಕುಂತಳಮಯವಾಗಿರ್ದ ಪೆರ್ಗರಡಿಯ
ಕೊಂತದಿ ಕಡಿದ ಪೆರ್ದಲೆಯ
ಸಂತಸ ಬಿಡದೆ ಹೊತ್ತಿರ್ದರು[೧೬೪]

ಕೊದಲದಿಂದ ಮುಚ್ಚಿಹೋದ ಭಯಂಕರವಾದ ಕರಡಿಯ ತಲೆಯನ್ನು ಕೊಂತದಿಂದ ಕತ್ತರಿಸಿ ಉತ್ಸಾಹದಿಂದ ಹೊತ್ತಿದ್ದರು.

ಬಾಸುರವಡೆದ ಕಾಡುಕೋಣನ ತಲೆಗಡಿ
ದೋಸರಿಸದೆ ಹೊತ್ತುಕೊಂಡು ಬೇಸರದ್ಯೆತರ್ಪ ಬೇಡರಿರ್ದರು.[೧೬೫]

ಭಯವಿಲ್ಲದೆ ಭೀಕರವಾದ ಕಾಡುಕೋಣದ ತಲೆ ಕಡಿದು ಹೊತ್ತುಕೊಂಡು ಬಳಲುತ್ತ ಬೇಡರು ಬಂದರು. ಹೀಗೆ ಅನೇಕ ರೀತಿಯ ಕಾಡು ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು.

ನರಿ, ಮರಿಹುಲಿ, ಹುಲ್ಲೆ, ಕಡವ, ಕಾಳ್ಬಿಕು ಮುಂ
ಗುರಿ, ಮುಚ್ಚು ಮೊಲ ತುರುವೆಂಗಿ, ಕರಡಿ, ಕಾಡೆಮ್ಮೆಗಳನು ಹೊತ್ತು ನಾಡುಗ
ಳಿರದೆಯ್ದಿ ನಡೆದನಾರಾಯ[೧೬೬]
ಗಿಳಿ, ಗಿಜಗ, ಸೋಗೆ, ನವಿಲು, ಸಾರಿಗೆ, ಹಾವು
ದಲೆಗೆ, ಹರಡಿ ಹಂಗ ಹಸುಬ,
ಕೊಳರ್ವಕ್ಕೆ ಕಾಡೆ, ಕನ್ನವಿಲ್ಲುಗಳ ಹೊರೆ ಮುಂದೆ
ತಳರ ತಡೆಯದೆಯ್ದಿದನು[೧೬೭]

ಮೇಲಿನ ಚಿತ್ರಣಗಳಿಂದ ಪ್ರಾಣಿ ಯಾವ ಯಾವ ಪ್ರಾಣಿ ಪಕ್ಷಿಗಳನ್ನು ಅಂದು ಬೇಡರು ಬೇಟೆಯಾಡುತ್ತಿದ್ದರು, ಕಂಪಿಲರಾಯ ಮತ್ತು ಅವನ ಬೇಡ ಪಡೆಯು ಬೇಟೆಯಾಡಿದ ಪ್ರಾಣಿ ಪಕ್ಷಿಗಳ ವಿವರವಿದೆ. ಬೇಡರು ಧೈರ್ಯಶಾಲಿಗಳಾಗಿದ್ದರು, ಹಾಗಾಗಿಯೇ ಅರಸರು ಬೇಡರ ಪಡೆಯನ್ನಿಟ್ಟುಕೊಂಡು ಬೇಟೆಗಾಗಿ ತೆರಳುತ್ತಿದ್ದರು. ಅವರು ಎಷ್ಟು ಶೌರ್ಯವಂತರಾಗಿದ್ದರು ಎಂದರೆ ಪುಲಿ ಗರ್ಜಿಸುತ್ತಿದಿರಾಗೆ ಬೆದರು ಬೇಡ[೧೬೮] ಕಡುಪಿಂದ ಕಾಳ್ಗೋಣನೆತ್ತಲದನ ಬೆನ್ನ ನಡೆರ್ದೋವ ಶಬರನೆಸೆದನ[೧೬೯] ಪಂದಿಯ ಪಣಿಯ ನೆಸಲ್ಗೋರ್ವನದು ಕಡುನೊಂದು ತಿರುಗಲಾ ಬಾಣ ಕೊಂದುದವನ ತಟ್ಟುರ್ಚಿ[೧೭೦] ಅಂದರೆ ಬೇಟೆಯಾಡುವಾಗ ಎಂಥ ವಿಷಮ ಪರಿಸ್ಥಿತಿಯ ಸಂದರ್ಭದಲ್ಲಿ ಹೆದರುತ್ತಿರಲಿಲ್ಲ. ಹುಲಿ, ಕಾಡುಕೊಣ ಹಂದಿ ಮೊದಲಾದ ಪ್ರಾಣಿಗಳ ಜೊತೆ ಹೇಗೆ ನೇರವಾಗಿ ಧೈರ್ಯ ಸಾಹಸಗಳಿಂದ ಹೋರಾಡುತ್ತಿದ್ದರೆಂಬ ಮೇಲಿನ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ. ಬೇಡರಲ್ಲಿ ತುಂಬಾ ಪರಿಣತಿ ಪಡೆದ ಕೆಲವು ಬೇಡರಿರುತ್ತಿದ್ದರು ಅವರ ಪರಿಣತಿಗೆ ದಾಖಲೆಯಾಗಿ

ಇದೆ ಮರೆ ಹಿಕ್ಕೆಯನಿಕ್ಕಿದ ತಾಣ ಎಂ
ತಿದೆ ಪಂದಿಯುತ್ತೆಡೆ ಹುಲೆ
ಬೆದರು ಹೋದೆಡೆಯಿದೆಯನಂತ ಬೇಡರ ಬಲ
ಮೊದವಿತಂದಾ ಪಳುವಿನೊಳು[೧೭೧]

ಕನಕದಾಸರ ಮೋಹನತರಂಗಿಣಿಯಲ್ಲಿ ಮೀನು ಬೇಟೆ ಕುರಿತು ತಿಳಿಸಿದ್ದಾರೆ. ಜಲಗಾರರು, ಮೀನು ಈ ಸಂಬಂಧ ಇನ್ನೂ ಅನೇಕ ಸಂಗತಿಗಳನ್ನು ಮನೋಜ್ಞವಾಗಿ ಮೇಲುಕು ಹಾಕಿದ್ದಾರೆ. ಇವನ ಕಾಲಕ್ಕೆ ಈ ಕಸುಬು ಲೋಕ ಸೃಷ್ಟಿಯಿಂದ ಮಾನ್ಯವಾದಂತೆ ಕನಕದಾಸ ಒಬ್ಬ ನಿಪುಣ ಬೇಟೆಗಾರನಂತೆ ಕಂಡುಬರುವುದು ಆತನ ಕಾವ್ಯದ ಮೂಲಕ

ಮಾಣಿಕ ಮಯ್ವಣ್ಣದ ಚಾಯ ಮೀನಕಂ
ಡಾಣಿಕಾರಿಕೆ ನಾಸ್ಥಾನಕ್ಕೆ ತಂದು ಕೈಗಾಣಿಕೆ ಕೊಟ್ಟ ಶಬರಗೆ ಮತ್ತೊಂದು ಪದ್ಯ
ಮೀನ ತಂದವಗೆ ವಸ್ತುಗಳ ಕೊಟ್ಟು ಭೂನಾಥ ತಾತ್ವರಿಯಲ್ಲಿ ತಾನೊರ್ವ ಹೆಗ್ಗಡತಿಯು

ಕೈ ಯಕಳುಹಿದ ಬೇನದ ಮನೆಗೀವುದನುತ ಮೀನು ತಂದವರಿಗೆ ಹಣ ಬದಲಿಗೆ ಇಷ್ಟವಾದ ವಸ್ತುಗಳ ಮೂಲಕ ವಿನಿಮಯ ಮಾಡಿಕೊಳ್ಳುತ್ತಿದ್ದರು.[೧೨]

ಮುಚ್ಚಿದೆರೆಲೆ ತನ್ನಿಯಳನೆಸಲು ಕಾಣು
ತೆ ಚ್ಚಂಬಿ ಗೊಡಲನೊಪ್ಪಸಲು
ಮೆಚ್ಚುತದರು ಮೋಹಕೆಡೆಯಾಳು ಬಾಣವ
ನೆಚ್ಚು ಕಡಿದವನೋರ್ವ ಶಬರ[೧೩]

ಅರಸನು ನಾಡಿನ ಸಂರಕ್ಷಣೆಗೆ ಸೈನ್ಯ ಪಡೆಯನ್ನು ಹೊಂದಿರುತ್ತಿದ್ದಂತೆ ಕಾಡು ಪ್ರಾಣಿಯ ಹಾವಳಿ ತಡೆಯುವುದಕ್ಕೆ ಸಾಹಸಮಯ ಬೇಡ ಪಡೆ ಹೊಂದಿರುತ್ತಿದ್ದ. ಅವರಲ್ಲಿ ಕೆಲವರು ಪರಿಣಿತರಿರುತ್ತಿದ್ದರು, ಅವರು ಎಷ್ಟು ಸೂಕ್ಷ್ಮಮತಿಗಳಾಗಿರುತ್ತಿದ್ದರು ಎಂದರೆ ಪ್ರಾಣಿಗಳ ಹಿಕ್ಕೆ, ಅವು ನೆಲ ಕೆದರಿದ ರೀತಿ, ಹೆಜ್ಜೆಯ ಗುರುತು, ಬಿದ್ದ ಬಾಯಿನೊರೆ, ಹೊರಳಾಡಿದ ಕೆಸರು, ಕೆಡವಿದ ಹುತ್ತ, ಮೊದಲಾದ ಗುರುತುಗಳ ಮೂಲಕ ಬೇರೆ ಬೇರೆ ಪ್ರಾಣಿಗಳ ಸುಳಿವನ್ನು ತಿಳಿಯುವ ಚಾಣಕ್ಷತನ ಮತ್ತು ಪರಿಣಿತಿ ಬೇಡರಲ್ಲಿತ್ತು. ಅವರು ಹಿಕ್ಕೆಯ ಅವಶೇಷಗಳಿಂದ ಹಾಗೂ ತಿಂದು ಬಿದ್ದ ಅರ್ಧ ಸೊಪ್ಪಿನಿಂದ ಜಿಂಕೆಗಳ ಸುಳಿವು, ನೊರೆ, ಕೆದರಿದ ನೆಲ, ಹೊರಳಾಡಿದ ಕೆಸರಿನಿಂದ ಹಂದಿಯ ಸುಳಿವು, ಹೆಜ್ಜೆಯ ಗುರುತು ಹಾಗೂ ಹುತ್ತ ಕೆಡವಿದ ಕ್ರಮಗಳಿಂದ ಕರಡಿಗಳ ಸುಳಿವು ತಿಳಿಯುತ್ತಿದ್ದರು. ಹೀಗೆ ಗುರುತುಗಳ ಮೂಲಕ ಪ್ರಾಣಿಗಳ ಚಲನವಲನ ತಿಳಿದು ಕಾಡಿನಲ್ಲಿ ಬೇಟೆಯ ನೆಲೆ ಗುರುತಿಸುತ್ತಿದ್ದರು. ಜೊತೆಗೆ ಕೊಂಡೊಯ್ದ ಬಗೆ ಬಗೆಯ ಆಯುಧ, ವಾದ್ಯ, ಬಲೆ, ದೀಹಗಳನ್ನು ಸಂದರ್ಭನುಸಾರವಾಗಿ ಉಪಯೋಗಿಸುವ ಚಾಕಚಕ್ಯತೆ ಹೊಂದಿರುತ್ತಿದ್ದರು.

ಬೇಟೆಗೆ ಮುನ್ನ ಬೇಡರು ಯಾವ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಿದ್ದರೆಂದರೆ

ಹೊಗರಲದಾರ ಜಿಹ್ವೆಗೆ ಸಾಧ್ಯ ಗ್ರಾಮ ಸಿಂ
ಹಗಳ ಕಂಥರ ಪಾಶವಿಡಿದು
ನಿಗಳುವ ತಾಳ್ದ ಕಾಲ್ವೇಂಟೆಕಾರರು ಕೂಡಿ
ಮೃಗ ಯಾತ್ರೆಗೆ ತೆರಳಿದರು[೧೪]
ತೆರಳ ಕಾಂತರ ವಾದ್ಯರವದಿ[೧೫]
ಎಡಬಲದಲ್ಲಿ ಹೊಂಗಟ್ಟಿನ ಭಿಲ್ಲರ
ಗಡಣ ಚಾಮರ ಛತ್ರವೆರಸಿ
ಕಡೆಯ ಪೆಂಡೆಯ ಸರಪಳಿ ಗಂಟೆಯಲು ಹಿಂದೆ
ನಡೆದರು ಮುಂದೆ ಬೊಬ್ಬಿಡುತ[೧೬]
ಕೆಂಬಟ್ಟೆ ಪೊಂಬಾಸಿನ ನೇಣ ಚತುಷ್ಪಾದಿಗಳ[೧೭]
ಕಾಲುವೇಗದಿ ಶುನಿವಿಡಿದು ಕಿರಾತರು ಸಾಲಿಟ್ಟು ನಡೆದೊಗ್ಗಿನಲ್ಲಿ[೧೮]

ಹೀಗೆ ಬೇಟೆಗೆ ಹೊರಡುವ ಮುನ್ನ ಆಯುಧ, ಬಲೆ, ನಾಯಿಗಳ ಸಿದ್ಧತೆ ಮಾಡಿಕೊಂಡು, ಕೇಕೆ ಹಾಕುತ್ತಾ ಹೋಗುತ್ತಿದ್ದರು. ಬೇಟೆಗಾಗಿ ನಾಯಿಯನ್ನು ವಿಜಯನಗರ ಕಾಲದಲ್ಲಿ ವಿಶೇಷವಾಗಿ ಬಳಸುತ್ತಿದ್ದರು. ಅದಕ್ಕೂ ಪೂರ್ವದಲ್ಲಿ ಬಳಸಿದ ಉದಾಹರಣೆಗಳಾಗಿ ನೊಳಂಬ

ಪಲ್ಲವ ದೊರೆ ನೊಳಂಬಾಧಿರಾಜನ ಆಳ್ವಿಕೆಯನ್ನು ಹೇಳಿದ ಶಾಸನದಲ್ಲಿ ಹಂದಿಯೊಂದಿಗೆ ಹೋರಾಡಿ ಅದನ್ನು ಕೊಂದು ತಾನು ಸತ್ತ ಪೋಣಿಗೆ ಎಂಬ ಬೇಟೆ ನಾಯಿಯ ಸ್ಮಾರಕವಾಗಿ ಈ ಕಂಬವನ್ನು ನಿಲ್ಲಿಸಲಾಗಿದೆ. ತಣ್ಣೂರು ಮತ್ತು ಚೋರಗಿರಿಯನ್ನು ಆಳುತ್ತಿದ್ದ ನಾಯಕನೊಬ್ಬನ (ಹೆಸರು ಆಳಾಗಿದ) ಹೇಳುವಂತೆ ತೋರುತ್ತದೆ.[೧೭೮]

ಹಕ್ಕಿಯ ಹೆಜ್ಜೆಯ ಹೆಜ್ಜೆಯಿರುವ ಮೊಲಗಳ ಹೆಣಿ
ಹಕ್ಕೆಯನರಸೆ ತೊಳಲುವ
ಎಕ್ಕಲಗಳ ಕಂಡು ಕಡು ವೇಗದಿಂ ಮೇ
ಲಿಕ್ಕುವ ನಾಯ್ಗಳೆಸದವು[೧೭೯]

ಬೇಟೆ ನಾಯಿಗಳಲ್ಲಿ ಹಕ್ಕಿಯ ಹೆಜ್ಜೆಯನರಿವ ಮತ್ತು ಮೊಲಗಳ ಹಣಿ ಹಿಕ್ಕೆಯನರಸಿ ತೊಳಲುವ ಸೂಕ್ಷ್ಮತೆ ಎಕ್ಕೆಲಗಳ ಕಂಡು ಕಡು ವೇಗದಿಂದ ಮೇಲಿಕ್ಕುವ ಧೈರ್ಯ ಸಹಾಸ ಇವುಗಳಲ್ಲಿತ್ತು.

ತುಡುಕಿ ಪಿಡಿದು ಪಂದಿಗಳ ಜಾಯಿಲಗಳು
ತಡೆದು ನಿಲ್ಲಿಸಲು ಕಲಿಗಳು
ಬಿಡದೆಯ್ತಂದಿಟ್ಟ ಪಂದಿ ಪೊಟ್ಟುಗಳಿಂದ
ಕಡಿಕೆಯ್ದಿರುದಾಲಿದರು[೧೮೦]

ವಾಸನೆಯ ಮೂಲಕವೆ ಬೇಟೆಯ ಸುಳಿವನ್ನು ತಿಳಿಯುವಷ್ಟು ಅವು ಚುರುಕಾಗಿದ್ದವು. ಅವುಗಳ ಬೇಟೆಯನ್ನು ಬೆನ್ನಟ್ಟಿ, ಅಡ್ಡಗಟ್ಟಿ, ನಿಲ್ಲಿಸಿ ಹಂದಿಗಳನ್ನು ತಡೆದು ನಿಲ್ಲಿಸಿ ಬೇಟೆಗಾರನಿಗೆ ಸುಲಭವಾಗಿ ಸಿಗುವಂತೆ ಮಾಡುತ್ತಿದ್ದವು.

ಚಿನ್ನದ ಬೆಳ್ಳಿಯ ಹಾಸದ ಬಿರುದಿನ
ಕುನ್ನಿಗಳನ್ನು ಬೋಳುಕರು
ಮನ್ನೆಯ ಮೀಗವೇಟೆಕಾರ ಕಂಪಿಲನ ಕೈ
ಸನ್ನೆಯರದು ನಿಲಿಸಿದರು[೧೮೧]

ನಾಯಿಗಳಿಗೆ ಚಿನ್ನ, ಬೆಳ್ಳಿಯ ಸರಪಳಿಗಳನ್ನು ಕಟ್ಟಿ ಪ್ರೀತಿಯ ಹೆಸರಿಡುವಲ್ಲಿ ಇದನ್ನು ಗಮನಿಸಬಹುದು. ಬೇಟೆ ನಾಯಿಗಳಿಗೆ ಬಿರುದುಗಳನ್ನು ಕೊಡುತ್ತಿದ್ದ ಅಪರೂಪದ ಉಲ್ಲೇಖವೂ ಇದೆ. ಯುದ್ಧದಲ್ಲಿ ಪರಾಕ್ರಮದಿಂದ ಹೋರಾಡಿದ ವೀರನಿಗೆ ಪ್ರೀತಿಪೂರ್ವಕವಾಗಿ ಮತ್ತು ಪ್ರೋತ್ಸಾಹದಾಯಕವಾಗಿ ಬಿರುದುಗಳನ್ನು ನೀಡುತ್ತಿದ್ದಂತೆ ನಾಯಿಗಳನ್ನು ಸಹ ಪ್ರೀತಿಯಿಂದ ಕರೆಯುತ್ತಿದ್ದರು.

ಕಂತ್ರಿ ನಾಯಿಗಳು ಪ್ರಾಚೀನ ಭಾರತದಲ್ಲಿಯೂ ಈಗಿನಷ್ಟೆ ಸಾಮಾನ್ಯವಾಗಿದ್ದವು. ಅವುಗಳನ್ನು ಬೇಟೆಯಾಡುವುದಕ್ಕೆ ಉಪಯೋಗಿಸುತ್ತಿದ್ದರು. ಗುಡ್ಡಗಾಡುಗಳಲ್ಲಿ ಬಹುಶಃ ಆಧುನಿಕ ಟಿಬೇಟಿನ ಮ್ಯಾಸ್ಟಿಫ್ ಅನ್ನು ಹೋಲುವ ಒಂದು ವಿಶೇಷ ಜಾತಿಯ ದೊಡ್ಡ ನಾಯಿ ಭಾರತದ ಆಚೆಗೂ ಪ್ರಸಿದ್ಧವಾಗಿತ್ತು. ಪರ್ಶಿಯಾದ ಸಾಮ್ರಾಟ ೧ನೆಯ ಅರ್ತಾಕ್ಸೆರ್ಸೆಸ್ (ಕ್ರಿ.ಪೂ. ೪೬೫–೪೨೪) ಭಾರತೀಯ ನಾಯಿಗಳನ್ನು ಯುದ್ಧ ಮತ್ತು ಬೇಟೆಯಾಡುವುದಕ್ಕಾಗಿ ಸಾಕಿ ತರಬೇತಿಗೊಳಿಸುವುದಕ್ಕೆ ಪ್ರತಿಯಾಗಿ ಬ್ಯಾಬಿಲೋನಿಯಾದ ನಾಲ್ಕು ಹಳ್ಳಿಗಳ ನಿವಾಸಿಗಳನ್ನು

ಕರೆದಿಂದ ವಿಮುಕ್ತಿಗೊಳಿಸಿದ್ದನೆಂದು ಹೆರೊಡೋಟಸ್ ಹೇಳುತ್ತಾನೆ.[೧೮೨] ಇದರಿಂದ ಪ್ರಾಚೀನ ಕಾಲದಿಂದಲೂ ನಾಯಿಗಳನ್ನು ಬೇಟೆಗಾಗಿ ಬಳಸುತ್ತಿದ್ದರು ಎಂಬುದು ಸ್ಪಷ್ಟ. ಮನುಷ್ಯ ಮೊದಲು ಪಳಗಿಸಿದ ಪ್ರಾಣಿಯೆಂದರೆ ನಾಯಿ.

ದೀಹಗಳು

ಬೇಟೆಯಾಡುವಾಗ ಬೇಟೆಯ ಪ್ರಾಣಿ–ಪಕ್ಷಿಗಳನ್ನು ಆಕರ್ಷಿಸುವುದಕ್ಕಾಗಿ ಬಳಸುವ ಪ್ರಾಣಿ ಪಕ್ಷಿಗಳಿಗೆ ದೀಹ ಎನ್ನುವರು. ದೀಹ ಪದ ಪ್ರಾಕೃತದ ದೀವಿ ಎಂಬುದರಿಂದಲೋ ಅಥವಾ ಅದೇ ಸಂಸ್ಕೃತದಲ್ಲಿ ದೀಪಕ ಎಂಬುದಾಗಿ ಆ ಮೂಲಕ ಕನ್ನಡಕ್ಕೆ ಬಂದಿರಬೇಕು. ದೀವಿ ಆ>ದೀವಾ>ದೀವ>ದೀಹ ಎಂಬ ರೂಪವೇ ಸಂಭಾವ್ಯ ದೀಹಗಳನ್ನು ಬಳಸಿ ಬೇಟೆಯಾಡುವುದು ಒಂದು ವಿಶಿಷ್ಟ ತಂತ್ರ.[೧೮೩] ದೀಹಗಳಾಗಿ ಗಿಡುಗ, ಡೆಗೆಗಳನ್ನು, ಹುಲಿ, ಆನೆ, ಕೋಣ ಜಿಂಕೆಗಳನ್ನು ಬಳಸುತ್ತಿದ್ದರು ಎಂಬ ಉಲ್ಲೇಖಗಳು ರಾಮನಾಥ ಚರಿತೆಯಲ್ಲಿದೆ. ಬೇಟೆಯ ಕಡುಗಲಿಗಳು ಇವುಗಳ ಸಮೂಹವನ್ನೆ ಹೊತ್ತು ತಂದರು ಎಂಬ ಮಾತು ಅಲ್ಲಿದೆ.

ಭಂಡಿಯನಿಳಪಿ ಮೈದಡವಿ ಹಾಸವನುರ್ಚಿ
ಮಂಡಿಯನೆಗ ಪಿ ತೋರಿಸಲು
ಕಂಡರಲೆಗಳ ದೀಹದ ಹುಲಿಗಳು ಮುಂ
ಕೊಂಡು ಕೊಂದವು ಕೋಪದಿಂದ[೧೮೪]

ಇಲ್ಲಿ ಬಂಡಿಯ ಮೇಲೆ ಹೊತ್ತು ತಂದ ದೀಹದ ಹುಲಿಯು ಯಾವ ರೀತಿ ಪ್ರಾಣಿಗಳನ್ನು ಕೊಂದು ಹಾಕಿದ ವಿವರವಿದೆ.

ನೆಲದೊಳಡಗಿದ ಮೆಯಿ ಬಸಿರೊಳಪೂಕ್ಕ ಬೆ
ನ್ನೊಲೆಯ ದಿಟ್ಟ ಸುವ ಕೆಂಗಣ್ಣು
ಅಲುಗುವ ಬಾಲವೆಸೆಯಲಂದು ದೀವದ
ಹುಲಿಗಳು ಕೊಂದವರಲೆಯ[೧೮೫]
ಕಾಣುತ ಕಣ್ಗೆಟ್ಟು ಕಡುವೇಗದೊಳೋಡು
ವೇಣುಗಳನು ಕಂಡದೊವಿ
ಗೋಣ ಮುರಿದು ಕೆಡಹಿದವು ಹುಲಿಗಳಾ ಕ್ಷೋಣೀಶ್ವರನ ಮುಂದೆಂದು[೧೮೬]

ಅಂದರೆ ದೀಹಗಳಾಗಿ ಬಳಸಿಕೊಂಡ ಹುಲಿಗಳು ಜಿಂಕೆ ಇತ್ಯಾದಿ ಪ್ರಾಣಿಗಳನ್ನು ಎಲ್ಲೆ ಅಡಗಿದ್ದರೂ ಅವುಗಳನ್ನು ಕೋಪದಿಂದ ಕೊಂದು ಹಿಡಿಯುತ್ತಿದ್ದವು. ಇಲ್ಲಿ ಹುಲಿಗಳನ್ನು ಮೊದಲೆ ಪಳಗಿಸಿ ಇಟ್ಟುಕೊಂಡಿರುತ್ತಿದ್ದರು. ಅದೇ ರೀತಿ ಗಿಡುಗಗಳನ್ನು ನಾಯಿ, ಚಿರತೆಗಳನ್ನು ಬೇಟೆಯಾಡಲು ದೀಹಗಳಾಗಿ ಬಳಸುತ್ತಿದ್ದ ಉಲ್ಲೇಖಗಳಿವೆ. ವಿದೇಶಿ ಪ್ರವಾಸಿ ದು ಆರ್ತೆ ಬಾರ್ಬೊಸಾ ಹೇಳಿರುವಂತೆ ಸುತ್ತಮುತ್ತಣ ಗುಡ್ಡಗಾಡಿನಲ್ಲಿ ಜಿಂಕೆ ಮುಂತಾದ ಬೇಟೆಯ ಮೃಗಗಳ ಹಾರುವ ಹಕ್ಕಿಗಳು ಇವೆ. ಇವನ್ನು ಬೇಟೆಯಾಡಲು ಗಿಡುಗ, ಬೇಟೆ ನಾಯಿ ಮತ್ತು ಪಳಗಿದ ಚಿರತೆಯನ್ನು ಸಾಕಿದ್ದಾರೆ. ಗಿಡಗವನ್ನು ಬಳಸಿ ಯಾವ ರೀತಿ ಪಕ್ಷಿಗಳನ್ನು ಬೇಟೆಯಾಡುತ್ತಿದ್ದರು ಎಂದು ರಾಮನಾಥ ಚರಿತೆಯಲ್ಲಿ ಉಲ್ಲೇಖವಿದೆ. ನಾಯಿಯಂತೆ

ಹುಲಿಯನ್ನು ಸಾಕಿ ಬೇಟೆಯಾಡಲು ಹುಲಿಯನ್ನು ಪಳಗಿಸಲಾಗುತ್ತಿತ್ತು. ಕಂಪಿಲರಾಯನ ಬೇಟೆ ವರ್ಣನೆ ಪ್ರಸಂಗದಲ್ಲಿ ಬೇಟೆಗಾರರ ಪರಿವಾರವು ಬೇಟೆಯ ನಾಯಿಗಳ ಜೊತೆಗೆ ದೀಹದ ಹುಲಿಗಳನ್ನು ಅಡವಿಗೆ ಕೊಂಡೊಯ್ದು ವಿಚಾರ ಪ್ರಸ್ತಾಪಿತವಾಗಿದೆ. ಈ ದೀಹದ ಹುಲಿಗಳನ್ನು ಬಂಡಿಯಲ್ಲಿ ಸಾಗಿಸಿಕೊಂಡು ಹೋಗಲಾಗುತ್ತಿತ್ತು. ಕಟ್ಟಿದ ಹಗ್ಗಗಳನ್ನು ಬಿಚ್ಚಿ ಎರಲೆಯ ಹಿಂದು ಹಾಗೂ ಏಣು (ಹೆಣ್ಣು ಜಿಂಕೆ, ಗಂಡು ಜಿಂಕೆ) ಬೆನ್ನಟ್ಟಿ ಕೊಡವಿ ಕೊಂದು ಬೇಟೆಗಾರರಿಗೆ ನೆರವಾದ ವಿವರವಿದೆ.

ಹೀಗೆ ಹುಲಿಗಳನ್ನು ಎರಲೆಯ ಬೇಟೆಗೆ ಬಳಸಿಕೊಳ್ಳುವುದು ಬಹುಶಃ ಸಾಮಾನ್ಯ ಸಂಗತಿಯಾಗಿರಲಿಕ್ಕಿಲ್ಲ. ಎಲ್ಲಾ ರೀತಿಯ ಅನುಕೂಲತೆ ಹೊಂದಿರುತ್ತಿದ್ದ ಅರಸ, ಮೊದಲಾದ ಅನುಕೂಲಸ್ಥರು ಮಾತ್ರ ಇಂಥ ವ್ಯವಸ್ಥೆ ಮಾಡಿಕೊಂಡಿರುತ್ತಿದ್ದರೆಂದು ತೋರುತ್ತದೆ.

ಗರಿಗಳ ನೋವಿ ಮಯ್ದಡವಿ ಟೂಪ್ಪಿಗೆಯನು
ತೆರೆದು ಸಾಳುವನನೇಳಿಸಲು
ಕರೆದುದಂಬರ ವಕ್ಕಿ ವಳಯನೆಂಬಂತೆ ಮ
ಯ್ಮರುದುರುಳ್ದವು ಖಗ ನಿಕರ[೧೮೭]
ಕಾಗೆ ಕನ್ನವಿಲು ಕಕ್ಕರ ಕಾಡೆ ಪಾರಿವ
ಗೊಗೆ ಗಿಡುಗ ಗಿಳಿ ಗೌಜು[೧೮೮]
ಸೊಗೆ ಸೆರಲೆ ಹಂಗೆ ಹಸುಬಗಳನು ಸಾಳ್ವ
ನಾಗಳಿರದೆ ಕೆಡವಿದರು
ಪೊಡೆದು ಕೆಲವ ಹೊಡೆಕರಿಸಿ ಕೆಲವ ಕರ್ಚಿ
ಕೊಡಹಿ ಕೆಲವನಾಗಳಳೆಗೆ
ಕಡವಿತು ಭರದಿಂದ ಪಕ್ಕಿಗಳನು ಸಾಳ್ವ
ನೋಡನೆತಿವೇಗದಿಂದಾಗ[೧೮೯]

ಸುಲಭವಾಗಿ ಬೇಟೆಯಾಡಲು ಗಿಡುಗವನ್ನು ದೀಹವಾಗಿ ಬಳಸಿಕೊಳ್ಳುತ್ತಿದ್ದಂತೆ ತಿಳಿಯುತ್ತದೆ. ಇದನ್ನು ಒಂದು ಪಂಜರದಲ್ಲಿಟ್ಟುಕೊಂಡು ಕಾಡಿಗೆ ಕೊಂಡೊಯ್ಯಲಾಗುತ್ತಿತ್ತು. ಪಕ್ಷಿಗಳು ಹಿಂಡುಗಟ್ಟಿಕೊಂಡು ಇರುತ್ತಿದ್ದ ಸ್ಥಳದಲ್ಲಿ ಪಂಜರದಿಂದ ಇದನ್ನು ಹೊರಗೆ ತೆಗೆದು ಅದರ ಗರಿಗಳನ್ನು ನೀವಿ ಮೈ ದಡವಿ ಬೇಟೆಯಾಡಲು ಬಿಡುತ್ತಿದ್ದಂತೆ ತಿಳಿಯುತ್ತದೆ. ಸಾಳ್ವ, ಕಾಗೆ, ಕನ್ನವಿಲು, ಕಕ್ಕ, ಕಾಡೆ, ಪಾರಿವಾಳ, ಗೊಗ, ಗಿಡುಗ, ಗಿಳಿ, ಗೌಜ, ಸೊಗೆ ಸಲೆ, ಹಂಗ, ಹಸಬಗಳನ್ನು ಹೊಡೆದು ಕಚ್ಚಿ ರೆಕ್ಕೆಗಳಿಂದ ಬಡಿದು ನೆಲಕ್ಕೆ ಕೆಡವಿ ಬಿಡುತ್ತಿತ್ತು. ಪ್ರಾಣಿ ಪಕ್ಷಿಗಳ ಸ್ವಭಾವವನ್ನು ಅನುಲಕ್ಷಿಸಿ ಆಕರ್ಷಣೆ ಅಥವಾ ಅಕ್ರಮಣ ತಂತ್ರಗಳಿಗೆ ಅವುಗಳನ್ನು ಬಳಸಿಕೊಳ್ಳುವುದರಲ್ಲಿ ಬೇಟೆಗಾಗಿ ತೋರಿದ ವಿವೇಚನೆ ಇಲ್ಲಿ ಗಮನಾರ್ಹ.

ಬಲೆ ಮತ್ತು ಆಯುಧಗಳು.

ಪ್ರಾಣಿಗಳ ಮೇಲೆ ಆಕ್ರಮಣ ಮಾಡಲು ಮತ್ತು ಪ್ರತಿ ಆಕ್ರಮಣ ಮಾಡಬಂದ ಪ್ರಾಣಿಗಳಿಂದ ರಕ್ಷಣೆ ಪಡೆಯಲು ಬೇಟೆಗಾರನಿಗೆ ಆಯುಧಗಳು ಅವಶ್ಯಕ. ಅಂದಿನ ಬೇಟೆಗಾರರು

ಯಾವ ರೀತಿಯ ಆಯುಧ, ಬಲೆಗಳನ್ನು ಬಳಸುತ್ತಿದ್ದರು ಎಂದು ಸಾಹಿತ್ಯ ಕೃತಿಗಳ ಉಲ್ಲೇಖದ ಮೊರೆ ಹೋಗಬೇಕಾಗುತ್ತದೆ.

ಕುಡಗೋಲ್ಕತ್ತಿ ಕೊಡಲಿ ಮಚ್ಚು ಪೇರಿಟ್ಟ
ಬಡಿಗೋಲಿಡು ಕೈದುಗಳ
ಪಿಡಿದೆಯ್ದಿ ಬಂದು ಕೂಡಿತು ಬೇಟೆಯ ಪಡೆ
ಪೊಡೆವೀಶನೋಲಗದೊಳಗ್[೧೦]

ಪ್ರಸ್ತುತ ಪದ್ಯದಲ್ಲಿ ಕುಡುಗೋಲು, ಕತ್ತಿ, ಕೊಡಲಿ, ಮಚ್ಚು, ಪೇರಿಟ್ಟ, ಬಡಿಗೋಲು ಇಡುಕೈದು ಮೊದಲಾದ ಆಯುಧಗಳನ್ನು ಅಣಿಗೊಳಿಸಿಕೊಂಡು ಕಂಪಿಲರಾಯ ಬೇಟೆಗೆ ತೆರಳಿದ ವಿವರವಿದೆ. ಈ ಆಯುಧಗಳಲ್ಲಿ ಕೆಲವು ಮರದಿಂದ ಮಾಡಿದವುಗಳಾದರೆ ಕೆಲವು ಮರ ಮತ್ತು ಲೋಹಗಳನ್ನು ಬಳಸಿ ಮಾಡಿದವುಗಳಾಗಿದ್ದವು. ಸಾಮಾನ್ಯವಾಗಿ ಬಲೆಗಳನ್ನು ಬೇಟೆ ಪ್ರಾಣಿಗಳಿಗೆ ಕಾಣದಂತೆ ಒಡ್ಡಿ ಹಿಡಿಯುವ ಸಾಧನಗಳು. ಬೆಳ್ಳಾರ ಬಲೆಗಳು ಹರವಿ ಸೊಪ್ಪಿನ ತೋಹಿನಲ್ಲಿ ಸಿಲುಕಿಸಿದರಾ ಮೃಗವ[೧೧] ಎಂಬ ಕುಮಾರ ವ್ಯಾಸ ಭಾತರದ ಪ್ರಯೋಗ ಮೇಲಿನ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ. ಬಲೆಗಳ ಉಲ್ಲೇಖ ಹೆಚ್ಚಾಗಿ ಸಾಹಿತ್ಯ ಕೃತಿಗಳಲ್ಲಿದೆ. ಕಂಪಿಲರಾಯ ಬೇಟೆಗೆ ಹೊರಟ ಸಂದರ್ಭದಲ್ಲಿ ಬಲೆಗಳ ಹೊರೆಗಳನ್ನು ಹೊತ್ತು ನಡೆದ ಬೇಡರ ಚಿತ್ರವೊಂದು ಕಾವ್ಯದಲ್ಲಿ ಬರುತ್ತದೆ.

ಹೆಬ್ಬಲೆ ತೆರೆಸೀರೆ ಕಾಲ್ಕಣ್ಣಿ ಬೆಳ್ಳಾರ
ಹಬ್ಬಗೆ ವಲೆಗಳ ಹೊರೆಯ
ಒಬ್ಬರೊಬ್ಬರು ಬೈವುತ ಹೊತ್ತು ನಡೆದರಂ
ದಬ್ಬರ ಮಸೆಗೆ ಶಬರರು[೧೨]

ಮೇಲೆ ಉಲ್ಲೇಖಗೊಂಡಿರುವ ಹೆಬ್ಬಲೆ, ಕಾಲ್ಕಣ್ಣಿವಲೆ, ಹೇಬ್ಬಗವಲೆಗಳು ವೈವಿಧ್ಯಮಯ ಬಲೆಗಳಾಗಿವೆ. ಇವುಗಳಲ್ಲಿ ಹೆಬ್ಬಲೆ ಹೆಸರೇ ಸೂಚಿಸುವಂತೆ ದೊಡ್ಡ ಬಲೆ ಅಥವಾ ಮಾರಿಬಲೆ, ದೊಡ್ಡ ದೊಡ್ಡ ಪ್ರಾಣಿಗಳನ್ನು ಹಿಡಿಯಲು ಪ್ರಾಯಶಃ ಬಳಸುತ್ತಿದ್ದ ಬಲೆ. ಕಾಲ್ಕಣ್ಣಿ ಬಲೆ ಹಗ್ಗದಿಂದ ಮಾಡಿದ ಬಲೆ ಇದನ್ನು ಕಲ್ವಲೆ, ಕಣ್ಣಿವಲೆ ಎಂದು ವಿಭಜಿಸಿದರೆ ಇಲ್ಲಿ ಎರಡು ಬಗೆಯ ಬಲೆಗಳಿರುವುದು ತಿಳಿಯುತ್ತದೆ. ಹರಿಶ್ಚಂದ್ರ ಕಾವ್ಯದಲ್ಲಿ ಕಣ್ಣಿವಲೆ, ಕಾಲುವಲೆ ಎಂಬ ಎರಡು ಪ್ರತ್ಯೇಕ ಬಲೆಗಳ ಸೂಚನೆಯೇ ಇದೆ.

ಕಾಲ್ಗಣ್ಣಿವಲೆ ಎಂಬ ಒಂದೇ ಶಬ್ದ ಗ್ರಹಿಸಿದರೆ ಆಗ ಪ್ರಾಣಿಗಳನ್ನು ಬೇಟೆಯಾಡಲು ಅವುಗಳ ಕಾಲಿಗೆ ಹಾಕಿ ಹಿಡಿಯಲು ಬಳಸುತ್ತಿದ್ದ ಬಲೆ, ಬೆಳ್ಳಾರವಲೆ ಎಂಬುದು ಪಕ್ಷಿಗಳನ್ನು ಹಿಡಿಯಲು ಬಳಸುತ್ತಿದ್ದ ಒಂದು ಬಗೆಯ ಬಲೆ. ಈ ಕಾವ್ಯದಲ್ಲಿ ಪ್ರಸ್ತಾಪಿತವಾಗಿರುವ ತೆರೆಸೀರೆ ಮಾತ್ರ ಬಲೆಗಳಿಗಿಂತ ಭಿನ್ನವಾದ ತಂತ್ರಾಂಶವಾಗಿದೆ. ತೆರೆಸೀರೆ ಬೇಟೆಯಲ್ಲಿ ಪ್ರಾಣಿಗಳನ್ನು ಹಿಡಿಯಲು ಉಪಯೋಗಿಸುವ ಒಂದು ಬಗೆಯ ಬಟ್ಟೆ ಎಂಬ ಅರ್ಥವು[೧೩] ತೆರೆ ಎಂಬ ಪದಕ್ಕೆ A cloth for concealing one self ased also by huntsmen(ಕಿಟ್ಟಲ್ ಕನ್ನಡ ನಿಘಂಟು) ಎಂಬ ಅರ್ಥವಿದೆ. ಇದನ್ನು ಗಮನಿಸಿದರೆ ಬಟ್ಟೆಯನ್ನು ಮರೆಯಾಗಿಸಿಕೊಂಡು

ತಾವು ಪ್ರಾಣಿಗಳಿಗೆ ಕಾಣದಂತೆ ನಿಂತು ಬೇಟೆ ಆಡುತ್ತಿದ್ದಂತೆ ತೋರುವುದು. ಕನಕದಾಸರ ಮೋಹನ ತರಂಗಿಣಿಯಲ್ಲಿ ಅನೇಕ ಬಲೆಗಳ ಉಲ್ಲೇಖವಿದೆ.

ಪಿಡಿವಲೆ, ಸೆರೆವಲೆ, ಕಾಲ್ವಲೆ ಕೂರಲ್ವಲೆ
ಸಿಡಿವಲೆ ಪಾಚಿ ಬೆಳ್ಳಾರ
ಬಡಿವಲೆ ಬಲುವಲೆಗಾರರು ಕೊಗಿ ಬೊ[೧೯೪]
ಬ್ಬಿಡುತಲೈದಿದರು ಮುಂಗಡೆಯ
ಚೆಲ್ಲಿದ ಕರುಳು ಕಾಲ್ವಲೆಗೆ
ಬಿಲ್ಲಿದ ಚಮರಿಯ ಮಿಗ ಸಿಕ್ಕಿ ಕೊಂಡಂತೆ
ಝುಲ್ಲಿಯ ಕುದುರೆ ಬಿದ್ದಿಹವು.[೧೯೫]

ಹೀಗೆ ಪ್ರಾಣಿ, ಪಕ್ಷಿಗಳನ್ನು ಬೇಟೆಯಾಡಲು ಅನೇಕ ರೀತಿಯ ಬಲೆಗಳನ್ನು ಬಳಸಿದ ಉಲ್ಲೇಖಗಳಿವೆ. ಇಲ್ಲಿ ಕೊರವುಲೆ ಕೊರಳಿಗೆ ಹಾಕಿ ಹಿಡಿಯ ಬಲೆ, ಕಾಲುಬಲೆ ಇತ್ಯಾದಿ ಬಲೆ ಬಳಸಿ ಬೇಟೆಯಾಡಿದ ಪ್ರಸಂಗಗಳಿವೆ. ಬೇಟೆಗೆ ಹೋದಾಗ ಅಡಗಿಕೊಂಡು ಪ್ರಾಣಿಗಳನ್ನು ಓಡಿಸಲು, ಬೇಟಗಾರರನ್ನು ಹುರಿದುಂಬಿಸಲು ವಾದ್ಯಗಳನ್ನು ಬಳಸುತ್ತಿದ್ದರು.

ಕೊಂಬು ಕಹಳೆ ಡೌಡೆ ಚೆಂಬಕವರು ಡೋಲು
ತಂಬಟಗಳ ಬಿರುದನಿಗೆ
ಅಂಬುಧಿ ತುಳ್ಕಾಡಲಂದಾ ನೃಪನಾ
ಡಂಬರದಿಂ ತೆರಳಿದನು.

ಬೇಟೆಯಲ್ಲಿ ವಾದ್ಯಗಳದ್ದು ಪ್ರಮುಖ ಪಾತ್ರವಿತ್ತು. ಯುದ್ಧ ಸಂದರ್ಭದಲ್ಲಿ ಶುಭ ಸೂಚಕವಾಗಿ, ಸೈನಿಕರಲ್ಲಿ ಈ ಉತ್ಸಾಹ ಪ್ರಚೋದನೆ, ಯುದ್ಧ ಘೋಷಣೆಗೆ ಸಂಗೀತ, ನೃತ್ಯ ಇತ್ಯಾದಿ ಸಂದರ್ಭದಲ್ಲಿ ವಿವಿಧ ವಾದ್ಯಗಳನ್ನು ಬಳಸಲಾಗುತ್ತಿತ್ತು. ಬೇಟೆಯಲ್ಲಿ ಅವಿತ ಪ್ರಾಣಿಗಳನ್ನು ಹೊರಗೆ ಬರುವಂತೆ ಮಾಡಲು, ಬೇಟೆಗಾರರಿಗೆ ಉತ್ಸಾಹ ಭರಿಸಲು ನುಡಿಸುತ್ತಿದ್ದರು. ಜೊತೆಗೆ ಪ್ರಾಣಿಗಳಲ್ಲಿ ಭಯ ಮೂಡಿಸಲು ಈ ಮೇಲಿನ ವಾದ್ಯಗಳನ್ನು ಬಳಕೆ ಇತ್ತು

ಅಂದು ಪುರುಷರಷ್ಟೇ ಬೇಟೆಯಾಡುತ್ತಿರಲಿಲ್ಲ, ಸ್ತ್ರೀ ಬೇಟೆಗಾರ್ತಿಯರೂ ಇದ್ದರು ಸಾಹಿತ್ಯ, ಶಿಲ್ಪಗಳ ಅಧ್ಯಯನ ಮಾಡಿದರೆ ಸಾಕಷ್ಟು ಉಲ್ಲೇಖಗಳಿವೆ.

ಹಸಿವು ನೀರಡಕೆ ಸಂತಾಪವ ನೆರೆ ವಾ
ರಿನಿಕೊಂಡು ಬಲಗೂಡಿ ತೆರಳ್ದು
ರಸಿಕ ರಾಜೇಂದ್ರ ಮುಂಬನದಲ್ಲಿ ಕಂಡುರ
ಂಜಸುವ ಚಂಚಿತಿಯರಾಟಗಳು[೧೯೬]

ಬೇಡ ಬೇಟೆಗಾರ್ತಿಂಯರು ಕಾಡಿನಲ್ಲಿ ವಿವಿಧ ಆಟಗಳನ್ನು ಆಡುತ್ತಾ ಬೇಟೆಯಾಡುತ್ತಿರುವುದನ್ನು ಕಂಡ ವಿವರವಿದೆ.

ಹಗಲು ಮಿರುಳುಂ ಚೆಂಚಿತಿಯರೂಡ
ನೆಗೆಲದೆಯಾಡುತ್ತಾ ಬಂದಿ
ಲ್ಲಿಗೆ ವಿಹರಿಸುತಮಿಪ[೧೯೭]

ವಿಜಯನಗರ ಕಾಲದಲ್ಲಿ ಪುರುಷರಂತೆ ಸ್ತ್ರೀಯು ಸಹ ಬೇಟೆಗಾಗಿ ಆಯುಧಗಳನ್ನು ಹಿಡಿದು ಹೊರಾಡುತ್ತಿದ್ದಳು. ಇವರ ಆಯುಧಗಳು ಬಿಲ್ಲು, ಖಡ್ಗ, ಕೊಡಲಿ ಕೋವಿ, ಬಲೆ, ಭರ್ಚಿ, ಜಿಂಕೆ, ಕ್ರೇಪಣ ಇತ್ಯಾದಿಗಳು.[೧೯೮] ಅಂದು ಬೇಟೆಯು ಸಾಕಷ್ಟು ಪ್ರಮಾಣದಲ್ಲಿತ್ತು. ಕಾಡು ಪ್ರಾಣಿಗಳು ಯೆಥೇಚ್ಚವಾಗಿದ್ದವು ಹಾಗೆಯೇ ಕಾಡು ಸಹ ಇತ್ತು. ಈ ಕಾಡಿನ ವರ್ಣನೆಯ ಉಲ್ಲೇಖ ರಾಮನಾಥ ಚರಿತೆಯಲ್ಲಿದೆ.

ನೆಲ್ಲಿ ನೇರಿಲು ತರಿತಾಡು ಕೆಡುವಕೆ
ನ್ನೆಲ್ಲ ಹಲಸು ಹಾಲೆಯರಳಿ
ಚಿಲ್ಲ ಚೆನ್ನಿಗೆ ತೇಗು ತುಂಬರ ಮರಗಳಿಂ
ನಿಲ್ಲದೆ ಮೆರದಂದಾ ವಿಷಿನ್[೧೯೯]

ಆ ಕಾಡು ಯಾವ ರೀತಿಯ ಮರಗಳಿಂದ ಕೂಡಿತ್ತೆಂದರೆ ನೆಲ್ಲಿ ನೇರಿಲ, ತರಿ, ತಾರು, ಕಡವ, ಕನ್ನೆಲ್ಲ, ಹಾಲೆ, ಅರಳಿ, ಚಿಲವತ್ತ, ಚೆನ್ನಿಗ ತೇಗ, ಬೇವು ಇತ್ಯಾದಿ ಮರಗಳಿಂದ ತುಂಬಿತ್ತು ಎಂಬ ಚಿತ್ರಣ ದೊರೆಯುತ್ತದೆ.

ಇಷ್ಟು ದಟ್ಟವಾದ ಕಾಡಿರಬೇಕಾದರೆ ಕಾಡಂಚಿನ ಜನಗಳಿಗೆ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿರುತ್ತಿತ್ತು. ಹಾಗಾಗಿ ಅವರು ಅರಸನಲ್ಲಿಗೆ ದೂರು ಕೊಂಡೊಯ್ಯತ್ತಿದ್ದರು. ರಾಜನಿಗೆ ಮನರಂಜನೆಗಾಗಿ, ಸೈನ್ಯಕ್ಕಾಗಿ ಬೇಟೆ ಅವಶ್ಯಕವಾಗಿತ್ತು. ಪ್ರಜಾರಕ್ಷಣೆ ರಾಜನ ಕರ್ತವ್ಯವಾಗಿತ್ತು. ಅದಕ್ಕಾಗಿ ಬೇಟೆಯಾಡುತ್ತಾ ಜನಗಳನ್ನು ರಕ್ಷಿಸುತ್ತಾ ತಾನು ಮನರಂಜನೆಯಲ್ಲಿ ಕಾಲ ಕಳೆಯುತ್ತಿದ್ದ. ಬೇಟೆಯಾಡಲು ಪ್ರತ್ಯೇಕ ಬೇಡರ ಪಡೆ ಹೊಂದಿರುತ್ತಿದ್ದ. ಯಾರಾದರೂ ಆಸ್ಥಾನಕ್ಕೆ ಪ್ರಾಣಿಗಳ ಹಾವಳಿ ಇದೆ ಎಂದು ದೂರು ತಂದಾಗ

ಕರೆ ಕರೆಯೆಂದು ಬೇಟೆಯ ಬೇಡರನಾ
ಧರಣೇಶ್ವರ ಕರೆಯಿಸಲು
ನೆರೆದುದು ಕೈ ಕಾಲೊಗೆದು ಕಾರ್ಮುಗಿಲ ಮೆಯ್
ಸಿರಿಯಂತವರು ಬೇಗದಿಂದ[೨೦೦]

ಹೀಗೆ ಬೇಡ ಪಡೆ ಕರೆಸಿ ಸಮಸ್ಯೆ ಪರಿಹರಿಸುತ್ತಿದ್ದ. ಅಂದು ಬೇಟೆಯು ಒಂದು ವಿನೋದಾವಳಿಯಾಗಿರದೆ. ಕೆಲವು ಜನಗಳ ಆಹಾರ ಪದ್ಧತಿಯಾಗಿತ್ತು. ಬೇಟೆಯಿಂದ ವ್ಯಾಪಾರ ಮಾಡುತ್ತಿದ್ದರು. ತಾವು ಬೇಟೆಯಾಡಿದ ಪ್ರಾಣಿ, ಪಕ್ಷಿಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ಜೀವನ ನಡೆಸುತ್ತಿದ್ದರು. ಡೋಮಿಂಗೋ ಪಾಯೆಸ್ ಹೇಳಿಕೆಯಂತೆ ಮೊಲಗಳಿಂದಲೂ ಎಲ್ಲಾ ಜಾತಿಯ ಕಾಡು ಪಕ್ಷಿಗಳಿಂದಲೂ ಮತ್ತು ಸರೋವರಗಳಲ್ಲಿರುವ ಗೀಜಗನಂತೆ ಕಾಣುವ ಇತರ ಹಕ್ಕಿಗಳಿಂದಲೂ ಮಾರುಕಟ್ಟೆಗಳು ತುಂಬಿರುತ್ತವೆ. ಇವೆಲ್ಲಾ ಪಕ್ಷಿಗಳು ಮತ್ತು ಬೇಟೆ ಪ್ರಾಣಿಗಳನ್ನು ಅವರು ಜೀವಂತ ಮಾರುತ್ತಾರೆ ಮತ್ತು ಅವು ಬಹಳ ಅಗ್ಗವಿರುತ್ತವೆ. ಏಕೆಂದರೆ ಅವರು ಒಂದು ವಿಂಟಿಮ್‌ಗೆ ಆರು ಅಥವಾ ಎಂಟು ಕವುಜಗ ಹಕ್ಕಿಗಳನ್ನು ಕೊಡುತ್ತಾರೆ. ಮೊಲಗಳನ್ನು ಎರಡು ಕೆಲವೊಮ್ಮೆ ಒಂದು ಕೊಡುತ್ತಾರೆ.[೨೦೧] ಅಬ್ದುಲ್ ರಜ್ಜಾಕ್‌ನ ಹೇಳಿಕೆಯಂತೆ ಆನೆಯ ವ್ಯಾಪಾರದಲ್ಲಿ ನಿರತನಾದ ವರ್ತಕರು ಸೆರೆನ್‌ದಿಬ್‌ಗೆ

ಹೋಗಿ ಅಲ್ಲಿ ಆನೆಗಳನ್ನು ಕಂಡು ನಾನಾ ದೇಶಗಳಿಗೆ ಮಾರುತ್ತಾರೆ. ಆನೆಗೆ ಇಷ್ಟು ಎಂದು ಬೆಲೆಕಟ್ಟುತ್ತಾರೆ.[೨೦೨]

ವಿಜಯನಗರ ಕಾಲದಲ್ಲಿ ಆನೆಯ ಬೇಟೆ ಸಾಕಷ್ಟು ಪ್ರಮಾಣದಲ್ಲಿತ್ತು ಅರಸು ಸ್ವತಃ ಕಾಡಿಗೆ ಹೋಗಿ ಆನೆಯನ್ನು ಹಿಡಿದು ಪಳಗಿಸಿ ತಮ್ಮ ಸೈನ್ಯಕ್ಕೆ ಬಳಸಿಕೊಳ್ಳುತ್ತಿದ್ದರು. ವಿಜಯನಗರ ಕಾಲದ ದೇವಾಲಯಗಳ ಮೇಲಿನ ಆನೆಯ ಶಿಲ್ಪಗಳನ್ನು ಗಮನಿಸಿದರೆ ಅಂದು ಆನೆಗಳು ಎಷ್ಟು ಪ್ರಮಾಣದಲ್ಲಿ ಬಳಕೆಯಾಗುತ್ತಿದ್ದವು ಎಂಬುದು ತಿಳಿಯುತ್ತದೆ. ಬೇಡರ ಆಹಾರ ಪದ್ಧತಿ ಸಾಮಾನ್ಯವಾಗಿ ಮಾಂಸಾಹಾರವಾಗಿತ್ತು ಅವರು ಬೇಟೆಯಾಡಿದ ಪ್ರಾಣಿಗಳನ್ನು ಕಾಡಿನಲ್ಲಿ ತಿನ್ನುತ್ತಿದ್ದರು.

ಕಡಿದು ಕೊರೆದು ಒಗಿದುಗಿದು ವಿಗಗಳ
ಪೇರಡೂಲಗನು ತೆಗೆತೆಗೆದು
ಆಡುವ ಸುಡುವ ಬೇಟೆಕಾರದಿಂದಾ ರಾತ್ರಿ
ಪಡೆದುದು ಗರ್ವನಂದಲ್ಲಿ[೨೦೩]

ಬೇಟೆಯಾಡಲು ಕಾಡಿಗೆ ಹೋದಾಗ ತಮಗೆ ಬೇಕಾದ ಪ್ರಾಣಿಗಳು ಸಿಗುವುದು ತುಂಬಾ ದಿನಗಳಾಗುತ್ತಿದ್ದವು. ಹಾಗಾಗಿ ಸಣ್ಣ ಪುಟ್ಟ ಪ್ರಾಣಿಗಳು ಸಿಕ್ಕರೆ ಅವುಗಳನ್ನು ಅಲ್ಲೆ ಸುಟ್ಟು ಬೇಯಿಸಿ ತಿನ್ನುತ್ತಿದ್ದ ಚಿತ್ರಣವಿದೆ. ಹೀಗೆ ವಿಜಯನಗರ ಕಾಲದಲ್ಲಿ ಬೇಟೆಯು ವಿನೋದಾವಳಿಯಾಗಿ ತುಂಬಾ ಪ್ರಸಿದ್ಧಿ ಪಡೆದಿತ್ತು. ಇದು ಆಳರಸರು, ಶ್ರೀಮಂತರಿಗೆ ಕಾಲಕಳೆಯಲು ಬಹು ಉಪಯೋಗವಾಗಿತ್ತು. ಅದೇ ರೀತಿ ಇದರಲ್ಲಿ ಸಾಮಾನ್ಯ ಜನ, ಬೇಡರು ಪಾಲ್ಗೊಂಡು ಮನರಂಜನೆಯನ್ನು ಪಡೆಯುತ್ತಿದ್ದರು. ಇವರು ಬೇಟೆಗೆ ಹೊರಡುವ ರೀತಿ ಸಿದ್ಧತೆ ಬೇಟೆಯಾಡುವ ಬಗೆ ಎಲ್ಲವನ್ನು ಗಮನಿಸಿದಂತೆ ಬೇಟೆಯಿಂದ ಎಷ್ಟು ಮನರಂಜನೆಯನ್ನು ಪಡೆಯುತ್ತಿದ್ದರು ಎಂಬುದು ತಿಳಿಯುತ್ತದೆ.

ಪ್ರಾಣಿ ಕಾಳಗಗಳು

ಪ್ರಾಣಿ–ಪ್ರಾಣಿಗಳ ಮಧ್ಯೆ ನಡೆಯುವ ಕಾದಾಟ ಅಥವಾ ಸೆಣಸಾಟಕ್ಕೆ ಪ್ರಾಣಿ ಕಾಳಗ ಎನ್ನುವರು. ಈ ರೀತಿಯ ಪಂದ್ಯಗಳು ವಿಜಯನಗರದಲ್ಲಿ ನಡೆಯುತ್ತಿದ್ದವು. ಪ್ರಾಣಿಗಳನ್ನು ಪಳಗಿಸಿ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಮಾಡುತ್ತಾರೆ. ಪ್ರಾಣಿಗಳ ಸೆಣಸಾಟವನ್ನು ವಿನೋದದ ಚಟುವಟಿಕೆಗಳನ್ನಾಗಿ ಮಾಡಿಕೊಂಡಿರುವರು. ಟಗರು, ಆನೆ, ಗೂಳಿ, ಕೋಳಿ ಹೀಗೆ ಸಾಕು ಪ್ರಾಣಿಗಳಿಗೆ ವಿಶೇಷ ತರಬೇತಿಯನ್ನು ಕೊಟ್ಟು ಕ್ರೀಡಾ ಸಾಧನಗಳನ್ನಾಗಿ ಮಾಡಿಕೊಂಡಿದ್ದಾನೆ, ಇವುಗಳ ಮೂಲಕ ಪಂದ್ಯ ಏರ್ಪಡಿಸಿ ವಿನೋದ ಪಡೆಯುತ್ತಿದ್ದನು.

ವಿದೇಶಿ ಪ್ರವಾಸಿ ವಿಜಯನಗರಕ್ಕೆ ಭೇಟಿನೀಡಿದ ಡೊಮಿಂಗೊ ಪಾಯೇಸ್ ಮೃಗಗಳ ಕಾದಾಟಕ್ಕೆ ಮಾಡಿದ ಅಖಾಡವನ್ನು ನೋಡಿದನು.[೨೦೪] ವಿಜಯನಗರ ಕಾಲದಲ್ಲಿ ಮೃಗಗಳ ಕಾದಾಟಕ್ಕೆ ಪ್ರತ್ಯೇಕ ಅಖಾಡವಿರುತ್ತಿತ್ತು. ಚೂರಿ ಕಟ್ಟಿ ಕಾದಾಡಲು ಬಿಡುತ್ತಿದ್ದರು. ಇನ್ನು ಕೆಲವು ಪ್ರಾಣಿಗಳನ್ನು ಹಾಗೆ ಕಾದಾಡಲು ಬಿಡುತ್ತಿದ್ದರು. ಅಂದು ಈ ರೀತಿಯ ಪಂದ್ಯಗಳು

ನಡೆಯುತ್ತಿದ್ದುದಕ್ಕೆ ಐತಿಹಾಸಿಕ ದಾಖಲೆಗಳಿವೆ. ಕ್ರಿ.ಶ. ೧೪೩೪ರ ಶಾಸನದಲ್ಲಿ ಬರುವಂತೆ ಬಲ್ಲಾಳರಾಯನ ಕಾಲದಲ್ಲಿ ತೇಕಳ ಎಂಬಲ್ಲಿ ನಿರ್ಮಾಣವಾಗಿದ್ದ ಕೋಟೆಯ ಭಾಗಗಳು ಕುಸಿದು ನಾಶವಾಗಿದ್ದವು. ಹೊರ ಮತ್ತು ಒಳಕೋಟೆಗಳನ್ನು ಪುನಃ ಕಟ್ಟಲು ಗೋಪರಾಜನು ಮಂತ್ರಿಗೆ ನಿರ್ದೇಶಿಸಿದ. ಈ ಕೋಟೆಯ ನಿರ್ಮಾಣ ಮುಗಿದಾಗ ಇದನ್ನು ರಾಜಗಂಭಿರ ಎಂದು ಕರೆಯಲಾಯಿತು. ಬೇಟೆಯಾಡಿ ತಂದ ಹುಲಿಗಳನ್ನು ಗೋಪರಾಜ ಮತ್ತು ಇವನ ಮಗ ತಿಪ್ಪಯ್ಯರು ನಾಯಿಗಳ ಜೊತೆಗೆ ಕಾದಾಟಕ್ಕೆ ಬಿಡುತ್ತಿದ್ದರು. ಬೇಟೆಯ ನಾಯಿಯು ತನ್ನ ಶೌರ್ಯವನ್ನು ಹುಲಿಯ ಮೇಲೆ ತೋರಿಸಿತು. ಈ ಶಾಸನದಲ್ಲಿ ನಾಯಿಯು ಹುಲಿಯ ಗಂಟಲಿಗೆ ಬಾಯಿ ಹಾಕಿದಂತೆ ಚಿತ್ರವಿದೆ. ಈ ಬೇಟೆ ನಾಯಿ ಸಂಪಿಗೆಯು ಹುಲಿಯ ಬಾಲಗಳನ್ನು ಕಚ್ಚಿ ಎಳೆದಾಡುವ ಮೂಲಕ ಅದನ್ನು ಬೆದರಿಸುತ್ತಿತ್ತು. ಎಂದು ಶಾಸನದಲ್ಲಿ ಹೇಳಲಾಗಿದೆ.[೨೦೫] ಈ ರೀತಿಯ ಶಿಲ್ಪಗಳು ನಮಗೆ ವಿಜಯನಗರದ ಸ್ಮಾರಕಗಳಲ್ಲಿ ದೂರೆಯುತ್ತವೆ.

ದ ಅಕೌಂಟ್ ಅಫ್ ದ ತಿರುಮಲೈ-ನಾಚಿಯಾರ್ ಅಂಡ್ ಆಫ್ ಇನ್ ಪಬ್ಲಿಷಿಂಗ್ ಕೃತಿಯಲ್ಲಿ ತಿಳಿಸಿರುವಂತೆ ಪ್ರಾಣಿಗಳ ಕಾಳಗಕ್ಕಾಗಿ ಮಧುರೈನ್ ತಿರುಮಲ ನಾಯಕನ ಅರಮನೆಯ ಎತ್ತರಕ್ಕೆ ಅಖಾಡವಿತ್ತು. ಅಲ್ಲಿ ಹಲವು ಬಗೆಯ ಪ್ರಾಣಿಗಳನ್ನು ಇರಿಸಲಾಗಿತ್ತು. ಅಂದರೆ ಅಂದು ಪ್ರಾಣಿಗಳ ಕಾಳಗ ನಡೆಸಲು ಪ್ರತ್ಯೇಕವಾದ ಮೈದಾನ ಉಪಯೋಗಿಸುತ್ತಿದ್ದರು ಎಂದು ತಿಳಿಯುತ್ತದೆ. ಅದನ್ನು ನೋಡಲು ಸುತ್ತಲೂ ಜನಗಳಿಗೆ ಅವಕಾಶವಿತ್ತು ಈ ರೀತಿಯ ಪಂದ್ಯ ಏರ್ಪಡಿಸಿ ವಿನೋದ ಪಡೆಯುತ್ತಿದ್ದರು.

ಟಗರು ಕಾಳಗ

ಸ್ವಭಾವತಃ ಟಗರುಗಳು ಕಾದಾಡುವ ಪ್ರಾಣಿಗಳು. ಇವುಗಳನ್ನು ಬಳಸಿಕೊಂಡು ಅಂದು ಮನರಂಜನೆ ಪಡೆಯುತ್ತಿದ್ದರು. ವಿಜಯನಗರ ಕಾಲದಲ್ಲಿ ಟಗರು ಕಾಳಗದ ಕುರಿತು ಸಾಕಷ್ಟು ಮಾಹಿತಿಯನ್ನು ಸಾಹಿತ್ಯ ಕೃತಿ, ಶಿಲ್ಪಗಳ ಮೂಲಕ ದೃಢಪಡಿಸಬಹುದು. ಚಾರಣಕವಿ ಶೃಂಗೇರಿ ಪಟ್ಟಣದ ಸೂಳೆಗಿರಿಯ ವರ್ಣನೆ ನೀಡುತ್ತಾ ಅನೇಕ ಸೊಗಸುಗಾರರು, ತಗರು, ಸಿಪತಿ, ಕೋಳಿಕಾಳಗದ ನೇಪದಿಂದಲೂ ಪಗಡೆ ಜೂಜಾಟಗಳ ನೆಪದಿಂದಲೂ ತಿರುಗುತ್ತಿದ್ದರು[೨೦೬] ಎಂದು ಹೇಳುವುದು ಗಮನಿಸಿದರೆ ಅಂದು ಟಗರು ಕಾಳಗ ಮನರಂಜನೆಯ ಮಾಧ್ಯಮವಾಗಿತ್ತು ಹಾಗೂ ಅದರ ಮೂಲಕ ಜೂಜಾಟವೂ ನಡೆಯುತ್ತಿತ್ತು ಎಂದು ತಿಳಿಯುತ್ತದೆ. ಟಗರುಗಳನ್ನು ಅಂದಿನ ಜನ ವಿನೋದಕ್ಕಾಗಿ ಬಳಸಿಕೊಂಡು ಸಂಭ್ರಮಿಸುತ್ತಿದ್ದರು. ಅವನ್ನು ಕಾದಾಟಕ್ಕೆ ಬಿಡುವ ಪೂರ್ವದಲ್ಲಿ ಅವು ಮದವೇರಲೆಂದು ರಾಜರ ಮಕ್ಕಳು ಅವುಗಳ ತಲೆಗೆ ಜಂಬೀರ (ನಿಂಬೆ) ದ ಪುಳಿಯಿಟ್ಟು ವಿಗೆ ನೆಸೆಯೇರಿಸಿ ನಗುತ ಜಗಳವ ಕಾದಿಸುತಿಹರು ಇತ್ತರದೊಳು ಜೂದುಗಾರರು ಕವಳಿದ ತುತ್ತಿ ನಿಂಬೆಯ ಪಣ್ಣುಳಿಯನು ನೆತ್ತಿಗೊರಸಿ ಖೇಯಂದಾರಿ ತಗರಿನ ಮೊತ್ತವನಲ್ಲಿ ಕಾದಿಪರು.[೨೦೭] ಭರತೇಶ ವೈಭವದಲ್ಲಿ ಟಗರು ಕಾಳಗದ ಉಲ್ಲೇಖವನ್ನು ಸಂಧಿ ೩ ಪದ್ಯ ೩೭ರಲ್ಲಿ ಕಾಣಬಹುದು.

ಸುತ್ತ ಪದ್ಮವ್ಯೂಹಮಮಂ ರಚಿಸಿ ನಡುವೆ ನರ

ನುತ್ತಮ ಸುರಂಗಮಂ ಕಟ್ಟಿ ಕಾಳಗಕ್ಕೆ ಭಟ ರೊತ್ತಾಗಿ ನಿಂದರರಿವೇರರಂ ಬರಹೇಳನೆಂತ್ತರ ಸನಾಜ್ಞಾಯಿಂದ[೨೦೮] ಮಾನಸೋಲ್ಲಾಸದಲ್ಲಿ ಇದನ್ನು ಪಣಂಪೂರ್ವಂ ಅಂದರೆ ಬಾಜಿಯ ಮೇಲೆ ಏರ್ಪಡಿಸಲಾಗುತ್ತಿತ್ತು ಎಂದಿದೆ. ಅಲ್ಲಿ ಟಗರುಗಳ ವಿಧ, ಅವುಗಳ ಆರೈಕೆ ಇತ್ಯಾದಿ ವಿವರ ನೀಡಲಾಗಿದೆ. ಟಗರುಗಳಲ್ಲಿ ಮೂರು ವಿಧಗಳಿವೆ, ಜೋಲಿಕ, ಕಟಲ, ಶೋಣವರ್ಣ,[೨೦೯] ಇನ್ನೂ ಅನೇಕ ರೀತಿಯ ಟಗರುಗಳ ಭೂಮಿಯ ಮೇಲಿವೆ. ಯಾವ ಟಗರಿನ ಹುಬ್ಬುಗಳು, ಪಾದಗಳು, ಬಾಲ, ಮುಖ ಮತ್ತು ಕಿವಿಗಳು ಕಪ್ಪಾಗಿರುವವೂ ಅದು ಚೋಲಿಕ, ಹಾಗೆ ಮೇಲೆ ಹೇಳಿದ ಯಾವುದೇ ಬಣ್ಣವಿರಲಿ, ಯಾವ ಟಗರಿನ ಮೈಯಲ್ಲಿ ಎಲ್ಲಾ ಕಡೆಯು ಮೃದವೂ ನುಣುಪು, ಒತ್ತಾಗಿರುವುದೊ ಉಣ್ಣೆಯು ಇರುವುದೂ ಆ ಆ ಟಗರು ಜಟಲ. ಸುಂದರವಾದ ಹೆಗಲು ಹೊಂದಿದ, ದಪ್ಪವಾದ ಕೊಂಬುಗಳಿರುವ, ಶರೀರದ ಎಲ್ಲಾ ಭಾಗಗಳಲ್ಲಿ ಮೋಟಾದ ದಪ್ಪ ಕೂದಲಿರುವುದೂ, ಬಣ್ಣ ನಸುಗೆಂಪಾಗಿರುವುದೂ ಅದು ಸೋಣವರ್ಣ. ಹೀಗೆ ಟಗರುಗಳ ವಿಧಗಳನ್ನು ಗುರುತು ಮಾಡಿ ಕಾಳಗಕ್ಕೆ ಆಯ್ಕೆ ಮಾಡುತ್ತಿದ್ದರು. ಪ್ರಸವ ಕಾಲದಲ್ಲಿ ಹಿಂದೆ ಮುಖಮಾಡಿ ಹುಟ್ಟಿದ ಟಗರು ಯುದ್ಧದಲ್ಲಿ ಸೋಲು ಅನುಭವಿಸುವುದಿಲ್ಲ ಎಂಬ ನಂಬಿಕೆಯಿದೆ.[೨೧೦] ಹೀಗೆ ಟಗರುಗಳನ್ನು ಆಯ್ಕೆ ಮಾಡಿಕೊಂಡ ಮೇಲೆ ಅವುಗಳ ಆರೈಕೆಯು ಸಹ ಇತ್ತು ಅಂದರೆ ಟಗರುಗಳಿಗೆ ಸೋಪು, ಜಳಕ ಇತ್ಯಾದಿಗಳಿಂದ ಪೋಷಣಿ ಮಾಡಬೇಕು. ಎಣ್ಣಿ ಮಿಶ್ರಿತವಾದ ಗಂಜಿಯಿಂದ, ಗರಿಕೆ, ಹಸಿಶುಂಟಿ, ತುಪ್ಪದಿಂದ ಕೂಡಿದ ಸೈಂಧವಲವಣವನ್ನು ಏಳನೆಯ ದಿನದಲ್ಲಿ ಕೊಡಬೇಕು. ಸಾಯಂಕಾಲ ಮೆಲ್ಲಗೆ ನಡೆದಾಡಿಸಬೇಕು. ನಂತರ ನೀರು ಕುಡಿಸಬೇಕು. ಕತ್ತಲಲ್ಲಿ ನಿಲ್ಲಿಸಿ ಬೆಳ್ಳುಳ್ಳಿ ತಿನ್ನಿಸಬೇಕು. ಅದಕ್ಕೆ ಮದ ಬರಲೆಂದು ಮದ್ಯ ಕುಡಿಸಬೇಕು. ಸಿಟ್ಟು ಬರುವುದಕ್ಕಾಗಿ ಅದರ ಬಾಯಲ್ಲಿ ಬೂರ್ಜದ ಎಲೆ ಹಾಕಬೇಕು. ಆಗ ಅದು ನಿಷ್ಟುರವಾಗಿ ಕಾಳಗವನ್ನಾಡುತ್ತದೆ.[೨೧೧] ಟಗರು ಕಾಳಗಕ್ಕೆ ಬಿಡುವಾಗ ಎರಡು ಟಗರುಗಳನ್ನು ಎದರು ಬದುರು ನಿಲ್ಲಿಸಿ ಹಿಂದಕ್ಕೆ ಎಳೆದು ಬಿಡಬೇಕು ಆಗ ಅವು ವೇಗವಾಗಿ ಒಂದಕ್ಕೊಂದು ಡಿಕ್ಕಿ ಹೊಡೆಯುತ್ತವೆ.

ಪಿಡಿದು ಟಗರನು ಎಳೆದು ತರಲಿಕೆ
ಕೆಡಹಿ ಅವರನು ಬಯಲವಾಗಲು
ಮೃಡನ ಮೂರುತಿ ಅದರೊಡನೆ ತಾ ಬಯಲು ಕೂಡಿದನು

ಪ್ರೌಢದೇವರಾಯನ ಕಾಲದಲ್ಲಿ ಟಗರ ಕಾಳಗದ ಪ್ರಭುದೇವ ಈತ ಟಗರು ಕಾದಾಟ ಮಾಡಿಸುವಲ್ಲಿ ಪ್ರಸಿದ್ಧಿ ಪಡೆದಿದ್ದನು.[೨೧೨] ಪ್ರೌಢದೇವರಾಯನು ಅರಮನೆಯ ಟಗರಿನೊಡನೆ ಪ್ರಭುದೇವನ ಟಗರನ್ನು ಕಾದಾಡಿಸಲು ಕರೆದಾಗ, ಪ್ರಭುದೇವ ನಾವು ಬಡವರು, ನೀವು ರಾಜರು ನಿಮ್ಮ ಟಗರಿನೊಂದಿಗೆ ಹೋರಾಟ ಬೇಡವೆಂದನು. ಆದರೂ ದೊರೆ ಕೇಳಲಿಲ್ಲ. ಟಗರು ಕಾದಾಟ ಆರಂಭವಾಯಿತು. ಪ್ರಭುದೇವನ ಒಂದು ಟಗರು ರಾಜನ ಸಾಕಿದ ನೂರು ಟಗರುಗಳನ್ನು ಮಣ್ಣು ಮುಕ್ಕಿಸಿತು. ರಾಜನು ಪ್ರಭುದೇವನ ಟಗರನ್ನು ನೋಡಿ ಸಂತೋಷಗೊಂಡು ಅದನ್ನು ಕೊಟ್ಟರೆ ತನ್ನ ಅರಮನೆಯನ್ನೇ ಕೊಡುವುದಾಗಿ ಹೇಳಿದನು. ಆದರೆ ಪ್ರಭುದೇವ

ಸಮ್ಮತಿಸಲಿಲ್ಲ. ನನ್ನ ಪ್ರಾಣವೇ ನನ್ನ ಟಗರಾಗಿದೆ ಎಂದ. ಅದರ ತೂಕ ಬಂಗಾರ ಕೊಡುವುದಾಗಿ ಹೇಳಿದಾಗಲೂ ಪ್ರಭುದೇವ ಮನ್ನಿಸಲಿಲ್ಲ. ಕೋಪದಿಂದ ರಾಜ ಅವನ ಟಗರನ್ನು ಭಟರಿಂದ ಹಿಡಿದು ತರಿಸಲೆತ್ನಿಸಿದಾಗಲೇ ಟಗರು ಅವರನ್ನು ಕೊಡಹಿ ಬಯಲ ಕೂಡಿತು. ಟಗರಿನೊಡನೆ ಪ್ರಭುದೇವನೂ ಬಯಲಾದನು.

ಟಗರುಗಳನ್ನು ಕಾಳಗಕ್ಕೆ ಬಿಡುವ ಮುನ್ನ ಎಂಥವುಗಳನ್ನು ಆಯ್ಕೆಮಾಡುತ್ತಿದ್ದರು, ಯಾವ ರೀತಿ ಶೃಂಗರಿಸುತ್ತಿದ್ದರು ಎಂಬುದಕ್ಕೆ ಅದಕ್ಕೂ ಮುನ್ನ ಒಳ್ಳೆಯ ತಳಿಯ ಟಗರುಗಳನ್ನು ಕಾಳಕ್ಕೆ ತರಿಸುತ್ತಿದ್ದರು ಎಂದು

ಗಂಭೀರವುಳ್ಳಂಥ ಟಗರ ತರಿಸಿ ನೇಮಿ
ಸಂಭ್ರಮದಲ್ಲಿ ತನ್ನ ಪೆಸರ!
ಹೆಂಬೇಡಿಯಾದ ಟಗರ ತರಸಿ ನೇಮಿ
ತುಂಬಿ ರಾಮನ ಹೆಸರಿಟು[೨೧೩]

ಹಾಗೆ ಟಗರುಗಳನ್ನು ಯಾವ ರೀತಿ ಶೃಂಗರಿಸುತ್ತಿದ್ದರು ಎಂಬುದಕ್ಕೆ

ತನ್ನಯ ಪೆಸರಿನ ಟಗರಿಗೆ ಬಂದಿತು
ಉನ್ನತ ಮುತ್ತಿನ ದಂಡೆ!
ಮನ್ನೆಯ ರಾಮನ ಪೆಸರಿಗೆ ಟಗರಿಗೆ
ಬಣ್ಣದ ಹೂವಿನ ದಂಡೆ
ಕಡಗಲಿ ನೇಮಿಯ ಪೆಸರಿನ ಟಗರಿಗೆ[೨೧೪]
ಹಿಡಿಯೆ ಮುತ್ತಿನ ಸತ್ತಿಗೆಯು!
ಬಡವನು ಎಂದೆ ರಾಮಯ್ಯನ ಟಗರಿಗೆ
ಕೊಡೆಯ ಸತ್ತಿ ಪಿಡಿಸಿದನು![೨೧೫]

ಹಾಗೆ ಟಗರು ಕಾಳಗಕ್ಕೆ ಬಿಡುವ ಮುನ್ನ ಅವುಗಳನ್ನು ಹೇಗೆ ಹುರಿದುಂಬಿಸುತ್ತಿದ್ದರು ಹಾಗೂ ಅವುಗಳು ಹೇಗೆ ಕಾದಾಡುತ್ತಿದ್ದವು ಎಂಬುದು

ಬೊಬ್ಬಿಡುತಲಿ ಟಗರಿನ ಕಿವಿಯೊಳಗಾಗ
ಅಬ್ಬರಿಸುತೆ ಹೋಗಬಿಡಲು!
ನಿಬ್ಬರದಲಿ ಸನ್ನೆದೆಗದವು ಹಿಂದಕ್ಕೆ
ಹಬ್ಬಗೆಯಲಿ ತಾಕಿದವು[೨೧೬]

ಅಂದರೆ ಅವು ಹಿಂದಕ್ಕೆ ಹೋಗಿ ಒಂದಕ್ಕೊಂದು ಹಣೆಗೆ ಡಿಕ್ಕಿ ಹೊಡೆಯುತ್ತಾ ಕಾದಾಡುತ್ತಿದ್ದವು ಎಂದಿದೆ.

ನಾಲ್ಕು ಸನ್ನೆಗೆ ನೇಮಿಯ ಟಗರೋಡಿತು
ತಾಕಿತು ತಲೆಮುರಿವಂತೆ!
ನೊಕಿ ತಿವಿಯೆ ಗುಂಡಿಗೆಯನು ಒಡೆಹಾಯೇ
ಸಾಕೆಂದು ನೇಮಿ ನಿಲ್ಲಿಸಿದ![೨೧೭]

ಅಂದರೆ ಟಗರು ಸೋಲುತ್ತದೆ ಎಂದು ಖಚಿತವಾದ ಮೇಲೆ ಅಲ್ಲಿಗೆ ನಿಲ್ಲಿಸುತ್ತಾರೆ. ಹಿಂದಿನಿಂದ ಒಂದು ಒಂದಕ್ಕೊಂದು ತಲೆಗೆ ತಲೆ, ಡಿಕ್ಕಿ ಹೊಡೆಯುತ್ತವೆ. ಹೀಗೆ ಹಲವು

ಸುತ್ತುಗಳನ್ನಾಡುತ್ತವೆ. ಕೆಳಗೆ ಬಿದ್ದ ಟಗರು ಹಿಡಿದುಕೊಳ್ಳುತ್ತಾರೆ. ಹೀಗೆ ಟಗರು ಕಾಳಗವನ್ನು ಅತಿ ಉತ್ಸುಕತೆಯಿಂದ ಜನರು ನೋಡಿ ಸಂಭ್ರಮಿಸುತ್ತಾರೆ. ಯಾವ ಟಗರು ಗೆಲ್ಲುತ್ತದೆಂದು ಬಾಜಿ ಕಟ್ಟುತ್ತಾರೆ. ಒಟ್ಟಾರೆ ಟಗರು ಕಾಳಗವನ್ನಾಡುವ ಟಗರಿಗೆ ಅದು ಹುಟ್ಟಿದಾಗಿನಿಂದ ಹಿಡಿದು ಬೆಳೆದು ದೊಡ್ಡದಾಗುವ ತನಕ ಆರೈಕೆ ಮಾಡಿ ಕಾಳಗಕ್ಕೆ ಸಿದ್ಧಗೊಳಿಸುತ್ತಿದ್ದರು ಈ ರೀತಿಯ ಪಂದ್ಯ ವಿಜಯನಗರ ಕಾಲದಲ್ಲಿ ಹಬ್ಬ ಉತ್ಸವಗಳ ಸಮಯದಲ್ಲಿ ಜನರು ನೆರೆದ ಪ್ರದೇಶಗಳಲ್ಲಿ ಏರ್ಪಡಿಸಿ ಸಂತೋಷವನ್ನು ಪಡೆಯುತ್ತಿದ್ದರು. ಟಗರು ಕಾಳಗ ಇಂದು ಸಹ ನಡೆಯುವುದನ್ನು ಕಾಣಬಹುದು.

ಕೋಳಿ ಕಾಳಗ

ಕೋಳಿ ಕಾಳಗಕ್ಕೆ ತುಂಬಾ ಪ್ರಾಚೀನತೆಯಿದೆ. ಗ್ರೀಕ್ ದೊರೆ ಥೆಮಿಸ್ಟೊಕ್ಲೀಸ್ (ಕ್ರಿ.ಶ. ೫೧೪–೪೪೯) ಒಮ್ಮೆ ಪರ್ಶಿಯನ್ನರ ಮೇಲೆ ದಂಡೆತ್ತಿ ಹೊರಟ ಅವನು ತನ್ನ ಸೈನ್ಯದೊಂದಿಗೆ ಸಾಗುತ್ತಿದ್ದಾಗ ಮಧ್ಯೆ ರಸ್ತೆಯಲ್ಲಿ ಎರಡು ಕೋಳಿಗಳು ವೀರಾವೇಶದಿಂದ ಹೋರಾಡುತ್ತಿದ್ದವು. ಅವುಗಳ ಸುತ್ತಲೂ ಜನರು ನೆರೆದು ಉತ್ಸುಕತೆಯಿಂದ ನೋಡುತ್ತಿದ್ದರು. ದೊರೆಯೂ ಸೈನಿಕರು ಆ ಗರಿವೀರರ ಸಾಹಸ ನೋಡಿ ಮೆಚ್ಚಿದರು. ಪರ್ಶಿಯನ್ನರ ಮೇಲೆ ಸಾಧಿಸಿದ ವಿಜಯದ ಸ್ಮರಣಾರ್ಥವಾಗಿ ಮುಂದೆ ಪ್ರತಿವರ್ಷವೂ ಅಥೆನ್ಸ್ ನಗರದಲ್ಲಿ ಆ ದೊರೆ ಕೋಳಿ ಕಾಳಗವನ್ನು ಏರ್ಪಡಿಸಿದ.[೨೧೮] ಭಾರತ, ಚೀನ, ಪರ್ಶಿಯಾ ದೇಶಗಳಲ್ಲಿ ಪ್ರಾಚೀನ ಕಾಲದಿಂದಲೂ ಕೋಳಿ ಕಾಳಗ ಅಥವಾ ಕೋಳಿ ಅಂಕ ರೂಢಿಯಲ್ಲಿದೆ. ಕ್ರಿ.ಶ. ಪೂ ೫ನೆಯ ಶತಮಾನದಲ್ಲಿ ಏಷ್ಯಾ ಮೈನರ್, ಸಿಸಲಿ, ದೇಶಗಳಲ್ಲಿ ಇದು ಪ್ರಸಿದ್ಧವಾಗಿತ್ತು. ಪ್ರಾಚೀನ ಗ್ರೀಸ್, ರೋಮ್ ದೇಶಗಳಲ್ಲೂ ಇದು ಜನರ ಮೆಚ್ಚಿನ ಕ್ರೀಡೆಯಾಗಿತ್ತು. ಕೋಳಿ ಅಂಕದ ಬಗೆಗೆ ಸದ್ಯ ಭಾರತದಲ್ಲಿ ನಮಗೆ ದೊರಕುವ ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಕ್ರಿಸ್ತಶಕದ ಸುಮಾರಿಗೆ ರಚಿತವಾದ ವಾತ್ಸ್ಯಾಯನನ ಕಾಮಸೂತ್ರದಲ್ಲಿ ಬಂದಿರುವ ಮಾತುಗಳು. ಕಾಮಸೂತ್ರದ ನಾಗರಿಕ ವೃತ್ತದಲ್ಲಿನ ಉದ್ಯಾನ ಗಮನ ಎಂಬ ಭಾಗದಲ್ಲಿ ಈ ಕೆಳಗಿನ ಮಾತುಗಳು ಬರುತ್ತವೆ. ನಾಗರಿಕರು ಕಾಲಕಾಲಕ್ಕೆ ಸಮೀಪದ ಅರಣ್ಯ ಪ್ರದೇಶ ಅಥವಾ ತೋಟಗಳಿಗೆ ಹೋಗಿ ಬರುವ ಕಾರ್ಯಕ್ರಮಗಳನ್ನಿಟ್ಟುಕೊಳ್ಳಬೇಕು, ಪೂರ್ವ ನಿಶ್ಚಿತ ಸ್ಥಳಕ್ಕೆ ಮಿತ್ರರು ಮತ್ತು ವಾರಾಂಗನೆಯರೊಂದಿಗೆ ಅಶ್ವಾರೂಢರಾಗಿ ಬೆಳಿಗ್ಗೆಯೇ ಹೋಗಬೇಕು. ಅಲ್ಲಿ ಬೇಟೆ ಅಥವಾ ಕೋಳಿಕಾಳಗ ಮೊದಲಾದ ಮನರಂಜನೆಯಲ್ಲಿ ತೊಡಗಬೇಕು.[೨೧೯] ಈ ಉಲ್ಲೇಖದ ಪ್ರಕಾರ ಕ್ರಿಸ್ತಶಕದ ಅರಂಭದ ದಶಕಗಳು ಕೋಳಿ ಅಂಕವು ಅಸ್ತಿತ್ವದಲ್ಲಿತ್ತು ಮತ್ತು ಅದು ಮನರಂಜನೆಯ ಸಾಧನವಾಗಿತ್ತು ಎಂದು ತಿಳಿಯಬಹುದು.

ಕನ್ನಡ ಕಾವ್ಯಗಳಲ್ಲಿ ಕೋಳಿ ಅಂಕದ ಬಗೆಗೆ ಮೊದಲು ವಿವರ ನೀಡಿದವರೆಂದರೆ ಹತ್ತನೆಯ ಶತಮಾನದ ಕವಿ ಪೊನ್ನ ಈತನು ತನ್ನ ಶಾಂತಿನಾಥ ಪುರಾಣದ ಒಂಭತ್ತನೆಯ ಅಧ್ಯಾಯದಲ್ಲಿ ಕೋಳಿ ಅಂಕದ ವಿವರಣೆ ನೀಡುತ್ತಾನೆ. ಘನರಥ ಮಹಾರಾಜನು ಮೇಘ ರಥ ಕುಮಾರನೊಂದಿಗೆ ಬೀದಿಯಲ್ಲಿ ಸಂಚರಿಸುತ್ತಿದ್ದಾಗ ಕೋಳಿಗಳು ಕಾದಾಡುವುದನ್ನು ನೋಡುತ್ತಾನೆ. ಕವಿ ಪೊನ್ನ ಈ ಕಾಳಗದ ಕುರಿತು

ಕಿಡಿಗುಟ್ಟಿದ ತೆರೆದಿಂ ಕಡಿ
ಗಡಿಯಾಗಿರೆ ಪೋರ್ವವೆರಡು ಕೋಳೀಗಳೂ ಕಂ
ಡೆಡೆಯಿಂ ಭವಮಂ ಭೂಪತಿ
ನಡೆ ನೋಡಿ ತದೀಯ ಕೋಪ ಹೇತು ವನರಿದುಂ[೨೨೦]

ಪೊನ್ನನ ಈ ವರ್ಣನೆಯಲ್ಲಿ ಕೋಳಿಕಾಳಗದ ರಭಸ ಮತ್ತು ತೀಕ್ಷ್ಣತೆ ಚೆನ್ನಾಗಿ ಪ್ರಕಟವಾಗಿದೆ. ವಿಜಯನಗರ ಕಾಲದಲ್ಲಿ ಈ ಕ್ರೀಡೆ ಇತ್ತು ಎಂಬುದಕ್ಕೆ ಸಾಕಷ್ಟು ದಾಖಲೆಳಿಗವೆ. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಕೋಳಿ ಕೋಳಿಯನ್ನು ಬಯಸುವವಲ್ಲದೆ ನೋಳಿದು ರಾಜಹಂಸಯಂನೋಲ್ಪುದೆ? ಎಂಬ ಗಾದೆಯಂತಹ ಮಾತು ಬಂದಿದೆ. ಕೋಳಿ ಕೋಳಿಯನ್ನು ಬಯಸುತ್ತದೆ ಎಂಬ ಪ್ರಯೋಗದ ಹಿಂದೆ ಕೋಳಿಗಳು ಕಾದಾಡುವ ನೆನಪುಗಳು ಇದ್ದಂತಿದೆ.

ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಈ ಕಾಳಗದ ವರ್ಣನೆ ನಿಡಿದ್ದಾನೆ.

ತಗರ್ವೆಣಗಿಸುವ ಸಿಪಿಲೆಗಚ್ಚಿಸುವ ಕೊಳಿ ಗಾ
ಳೆಳವ ಕಾದಿಸುವ[೨೨೧]

ಹಾಗೆ ಮೊಹನತರಂಗಿಣಿಯಲ್ಲಿ ಪಿಕ್ಕಳದ್ವತಯಲಾವುಗೆ ತೋರೆಗೆರುಜೆಯು
ಕುಕ್ಕಟ ತಗರ ಕೊಣಗಳ[೨೨೨]

ಕುಮಾರ ರಾಮನ ಚರಿತ್ರೆಯಲ್ಲಿ ಕೊಳಿಕಾಳಗದ ವಿವರವಿದೆ.

ಕೊಳಿಯ ಹುಂಜನ ತರ ಹೇಳಿ ನೇಮಿಯು
ಆಳ ಹರಿಯಬಿಡಲಾಗ!
ಊಳಿಗದವರು ತಂದಿರಿಸಲು ನಿಮಿಷಕೆ
ಕಾಳಗ ಮಾಡಹೇಳಿದನು[೨೨೩]
ಬಲ್ಲೆಹ ಹುಂಜನ ತರಿಸಿ ನೇಮಿಯಖಾನ
ಅಲ್ಲಿ ರಾಮನ ಪೆಸರಿಡಿಸಿ[೨೨೪]
ಹೊಸ ಸಾಣೆಯ ಹಿಡಿಸಿದ ಕತ್ತಿಯ ತನ್ನ ಹೆಸರ
ಹುಂಜಕೆ ಕಟ್ಟಿಸಿದನು!
ಮಸೆಯದ ಮೊಂಡಗತ್ತಿಯ ತಂದು ರಾಮನ
ಹೆಸರ ಹುಂಜಿಕೆ ಕಟ್ಟಿಸಿದನು[೨೨೫]

ಅಂದರೆ ಕೋಳಿ ಕಾಳಗಕ್ಕೆ ಬಿಡುವ ಮುನ್ನ ಅದರ ಕಾಲುಗಳಿಗೆ ಚೂಪಾದ ಕತ್ತಿ ಕಟ್ಟುತ್ತಾರೆ. ಅದರ ವಿವರಣೆಯಿದೆ.

ಎರಡೂ ಹುಂಜಗಳ ಹೇಗೆ ಹೋರಾಡುತ್ತಿದ್ದವು ಎಂದು
ಎರಡು ಹುಂಜನ ಕಾಣದಟ್ಟಿಸಿ ಮುಖದೊಳು
ಬರವಣಿಸಿಯೆ ಹೋಗಬಿಡಲು!
ಒಂದು ಬಾರಿಗೆ ನೇಮಿಯ ಹುಂಜನನೊಳಪೊಕ್ಕು
ಸಂದು ಹರಿಯಲೊದೆವಾಗ
ನಿಂದಿರ್ದ ಖಾನರು ನೋಡಿ ಬೆರಗಾದರು
ನೊಂದು ಮೂಗಿಗೆ ಬೆರಳಿಟ್ಟು

ಕಾಲಿಗೆ ಕತ್ತಿ ಕಟ್ಟಿದ ಹುಂಜ ಎದುರಾಳಿಯ ಹುಂಜನ ಎದೆಗೆ ಗಾಯ ಮಾಡುತ್ತದೆ. ಹೀಗೆ ಹುಂಜ ಹೋರಾಟದ ಚಿತ್ರಣ ಕಾಣಬಹುದು. ಅದೇ ರೀತಿ ಭೀಮಕವಿಯ ಬಸವ ಪುರಾಣದಲ್ಲಿ

ಕರಿ ಮಹಿಷ ಗೋ ಮೇಷಮುಖರುಂ
ಹರಣ ಕುಕ್ಕಟ ಕೇಶಮುಖರುಂ[೨೨೬]

ಅದೇ ರೀತಿ ಭಾರತಕ್ಕೆ ಪ್ರವಾಸ ಬಂದ ಅನೇಕ ವಿದೇಶಿ ಯಾತ್ರಿಕರ ದಾಖಲೆಗಳಲ್ಲಿ ಕೋಳಿ ಕಾಳಗ ವಿವರವಿದೆ. ನಿಕೊಲೊ-ದೆ-ಕೊಂತಿ ಮಧ್ಯ ಇಂಡಿಯಾದಲ್ಲಿ ಪ್ರಪಂಚದ ಕೊನೆಗೆ ಎರಡು ದ್ವೀಪಗಳಿವೆ. ಇಲ್ಲಿ ಜನಗಳಲ್ಲಿ ಬಹಳ ಮನರಂಜನೆಯ ಆಟವೆಂದರೆ ಕೋಳಿಯ ಕಾಳಗ. ಅನೇಕ ಜನರು ತಮ್ಮ ಹುಂಜಗಳನ್ನು ತಯಾರು ಮಾಡಿ ಕಾಳಗಕ್ಕೆ ಬಿಟ್ಟು ಹುರಿದುಂಬಿಸುತ್ತಾರೆ. ನೋಡಲು ಬಂದವರು ಹುಂಜಗಳ ಮೇಲೆ ಪಂಥ ಕಟ್ಟುತ್ತಾರೆ.[೨೨೭] ಮೇಲಿನ ಎಲ್ಲಾ ಅಂಶಗಳನ್ನು ನೋಡಿದರೆ ಈ ಕಾಳಗದಿಂದ ಜನರು ಎಂಥ ವಿನೋದ ಪಡೆಯುತ್ತಿದ್ದರು ಎಂದು ತಿಳಿಯುತ್ತದೆ. ಮಾನಸೋಲ್ಲಾಸದಲ್ಲಿ ನಮಗೆ ಇದರ ಕುರಿತು ಸಂಪೂರ್ಣ ವಿವರ ನೋಡಬಹುದು. ಅವುಗಳ ಜಾತಿ, ಸಾಕುವ, ಆಹಾರದ ಕ್ರಮ, ಕಾಳಗಕ್ಕೆ ಹೇಗೆ ತಯಾರು ಮಾಡಬೇಕು ಇತ್ಯಾದಿ ವಿವರ ನೊಡಬಹುದು.

ಕೋಳಿಗಳಲ್ಲಿ ಶಂಖ, ಗುರು, ಅಂಶು, ನರ, ಗೃಧ್ರ, ಅತೇಗೋ ಶ್ರೋಣಿ, ಸರ್ಪ, ಕೂರ್ಮ, ಜಾತಿಯ ಹುಂಜಗಳಿವೆ.[೨೨೮] ಮೇಲೆ ಹೇಳಿದ ಜಾತಿಗಳ ಹುಂಜಗಳಲ್ಲಿ ಅತ್ಯುತ್ತಮವಾದುದನ್ನು ಆಯ್ಕೆ ಮಾಡಿ ಗೂಡುಗಳಲ್ಲಿಟ್ಟು ಸಾಕಿ ತಜ್ಞರಿಂದ ಅವುಗಳನ್ನು ಪೋಷಿಸಬೇಕು. ತುಪ್ಪ-ಮೊಸರುಗಳನ್ನು ಬೆರಸಿದ ರಸವತ್ತಾದ ಅನ್ನ ಆ ಹುಂಜಗಳಿಗೆ ತಿನ್ನಿಸಬೇಕು. ಹಾಗೆ ತಿನ್ನಿಸುವಾಗ ಹೆಬ್ಬೆರಳು ಮತ್ತು ತರ್ಜನೀಬೆರಳುಗಳಿಂದ ಹುಂಜದ ಜುಟ್ಟನ್ನು ದೃಢವಾಗಿ ಹಿಡಿದುಕೊಳ್ಳಬೇಕು. ಉಳಿದ ಮೂರು ಬೆರಳುಗಳ ತುದಿಯಿಂದ ಹುಂಜದ ಕೊಕ್ಕನ್ನು ಅಗಲವಾಗಿ ತೆಗೆದು ಅನ್ನ ತಿನ್ನಿಸಬೇಕು. ತಂಪಾದ ನೀರು ಹುಂಜಕ್ಕೆ ಕುಡಿಸಬೇಕು. ಬಿಸಿನೀರಿನಿಂದ ಸ್ನಾನ ಮಾಡಿಸಬೇಕು. ಉಪ್ಪು ಬೆರೆಸಿದ ಮಣ್ಣನ್ನು ತುರಾಯಿಗೂ ತಲೆಗೂ ಮೆತ್ತಬೇಕು. ನಂತರ ಮೆಲ್ಲಗೆ ನಡೆದಾಡಿಸಬೇಕು.[೨೨೯] ಹೀಗೆ ಅದರ ಆರೈಕೆಯ ಅನೇಕ ಅಂಶಗಳಿವೆ. ಹೀಗೆ ಈ ಕೃತಿಯಲ್ಲಿ ಕೋಳಿಕಾಳಗದ ಸಂಪೂರ್ಣ ವಿವರ ನೊಡಬಹುದು. ಅಂದರೆ ವಿಜಯನಗರ ಅವಧಿಯಲ್ಲಿ ಈ ರೀತಿಯ ಪಂದ್ಯಗಳು ಹಬ್ಬ ಜಾತ್ರೆಗಳ ಮೇಳ ಸಾಕಷ್ಟು ನಡೆಯುತ್ತಿದ್ದವು. ಇದೇ ಕೋಳಿ ಗೆಲ್ಲುತ್ತದೆ ಎಂದು ಕೇಲವರು ಜೂಜಾಡುತ್ತಿದ್ದರು, ಕೆಲವರು ವಿನೋದ ಪಡೆಯುತ್ತಿದ್ದರು. ಈ ಕ್ರೀಡೆಯು ವಿಜಯನಗರ ಕಾಲದಲ್ಲಿ ವಿನೋದಾವಳಿಯ ಪ್ರಮುಖ ಅಂಶಗಳಲ್ಲಿ ಒಂದಾಗಿತ್ತು ಎಂದು ಹೇಳಬಹುದು.

ಕೋಣ ಕಾಳಗ

ವಿಜಯನಗರ ಕಾಲದಲ್ಲಿ ಈ ಕಾಳಗ ಇತ್ತು ಎಂಬುದಕ್ಕೆ ಸಾಕಷ್ಟು ದಾಖಲೆಗಳಿವೆ. ಅಂದು ಈ ಕ್ರೀಡೆಯನ್ನು ಹೇಗೆ ಆಡುತ್ತಿದ್ದರು ಇತ್ಯಾದಿ ವಿವರರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಕೊಡುಗಳಿಗೆ ಸೊನಗಿಗಳ ಸೇರಿಸಿ ಮಾಡಿಸಿ ಪಣೆಗೆ ಕೊರಲಗ
ಕೊಡ ಕಾದಿಸುವರು ಕೋಣಗಳನ್ನು ಜೂ
ದಾಡೆ ಪುಲಿಗಳಡನಲಿ[೨೩೦]

ಟಗರು, ಕೋಣ, ಗೂಳಿ, ಕಾಳಗಗಳೆಲ್ಲ ಒಂದೆ ಬಗೆಯವು. ಟಗರಿನ ಕಾದಾಟದ ಕುರಿತು ಹೇಳಿದ ವಿಷಯ ಇದಕ್ಕೆ ಅನ್ವಯವಾಗುತ್ತದೆ. ಕೋಣಗಳನ್ನು ಕಾದಾಟಕ್ಕೆ ಬಿಡುವ ಮುನ್ನ ಕತ್ತಲು ಕೋಣೆಯಲ್ಲಿ ಕಟ್ಟಿ ಮೇಯಿಸುವದು ಮತ್ತು ಇವುಗಳಿಗೆ ತರಬೇತಿ ನೀಡಲಾಗುತ್ತಿತ್ತು[೨೩೧] ವಿಜಯನಗರ ಕಾಲದಲ್ಲಿ ಈ ಆಟವು ತುಂಬಾ ಜನಪ್ರಿಯವಾಗಿತ್ತು. ವಿದರ್ಭ, ಕರಹಾಟ, ಜಾಲಂಧರ, ಸೌರಾಷ್ಟ್ರ ಮತ್ತು ಮಧ್ಯ ಪ್ರದೇಶಗಳ ಮಹಿಷಗಳು ಯುದ್ಧ ಮಾಡಲು ತಿಳಿದಿರುವವು.[೨೩೨] ಈ ಕೋಣಗಳೂ ದಪ್ಪ ಹೆಗಲು, ದೊಡ್ಡ ಶರೀರ, ಅಗಲವಾದ ಎದೆ, ಸ್ವಲ್ಪ ಕುಳ್ಳಾದ ಮುಂದಿನ ಕಾಲುಗಳು ಅರಗಿನಂತೆ ಪಿಂಗಳ ಬಣ್ಣದ ಕಣ್ಣುಗಳು, ಸ್ವಲ್ಪ ಕಡಿಮೆಯಿರುವ ಹಿಂಭಾಗ, ಹಿಂದಕ್ಕೆ ಬಗ್ಗಿದ ಬೆನ್ನು, ಸಮವಾದ ಹೊಟ್ಟೆ ಸಡಿಲವಲ್ಲದ ಜನನಾಂಗ, ಬಗ್ಗಿದ ಚಿಕ್ಕ ಕೊಂಬುಗಳು, ಕಪ್ಪು ಬಿಳಿಬಣ್ಣ, ಹಣೆಯಲ್ಲಿ ನಾಮ, ಬಿಳಿ ಬಣ್ಣದ ಕಾಲು ಮತ್ತು ಬಾಲ ಈ ಲಕ್ಷಣಗಳುಳ್ಳ ಮಹಿಷಗಳು ಕಾಳಗ ಮಾಡಲು ಪ್ರಶಸ್ತವಾಗಿರುವವು.[೨೩೩]

ಆಹಾರ

ಕಾಳಗ ಮಾಡುವಂತಹ ಕೋಣಗಳನ್ನು ಕರುವಾಗಿದ್ದಾಗಿಂದಲೇ ಸಾಕಬೇಕಾಗುತ್ತದೆ. ಅವುಗಳ ಬೆಳವಣಿಗೆಗೆ ಯಾವ ರೀತಿಯ ಆಹಾರ ಕೊಡಬೇಕು ಎಂದು ಮಾನಸೋಲ್ಲಾಸ ಕೃತಿಯಲ್ಲಿ ಸ್ಪಷ್ಟವಾದ ಉಲ್ಲೇಖವಿದೆ.

ಇವುಗಳು ಎಳೆ ಕರುಗಳಾಗಿದ್ದಾಗ ನವಣೆಯ ಹಿಟ್ಟನ್ನು ತಿನ್ನಿಸಿ ಪೋಷಿಸಬೇಕು. ಉದ್ದಿನ ಹಿಟ್ಟು ಕಲೆಸಿದ ಮೊಸರಿನಿಂದ ತಿನ್ನಿಸಿ ಪ್ರಯತ್ನಪೂರ್ವಕವಾಗಿ ಕೊಬ್ಬಿಸಬೇಕು. ಒಂದು ವರ್ಷ ವಯಸ್ಸಾದ ಮೇಲೆ ಅವುಗಳಿಗೆ ಮೂಗು ಚುಚ್ಚಿಸಬೇಕು. ಸರಿಯಾಗಿ ಹಿಡಿದು ಹತೋಟಿಯಲಿಡುವ ಉದ್ದೇಶದಿಂದ ಅದರ ಮೂಗಿನಲ್ಲಿ ಗಟ್ಟಿಯಾದ ಹಗ್ಗವನ್ನು ಪೋಣಿಸಬೇಕು. ಹಲಸಂದೆಯ ಹಿಂಡಿ, ಕಡಲೆಬೇಳೆ, ಉಪ್ಪುಬೆರಸಿದ ಮಜ್ಜಿಗೆ, ಕೈಸರ ಎಂದರೆ ಎಳ್ಳು ಮತ್ತು ಅಕ್ಕಿಯನ್ನು ಒಟ್ಟಿಗೆ ಬೇಯಿಸಿದ ಅನ್ನ, ಆಯಾಕಾಲದಲ್ಲಿ ಹುಟ್ಟುವ ಹಸಿರುಲ್ಲು ಕೊಟ್ಟು ನೀರಿನಲ್ಲಿ ಮುಳುಗಾಟ ಮಾಡಿಸಬೇಕು. ಐದು ವರ್ಷ ವಯಸ್ಸಾದ ಮೇಲೆ ಆ ಮಹಿಷಗಳಿಗೆ ಬಲವೂ ದರ್ಪವೂ ಬೆಳೆಯುತ್ತವೆ. ಶರೀರ ದೊಡ್ಡದಾಗಿ, ಅಂಗಗಳೆಲ್ಲ ಸ್ಪುಟವಾಗಿ ಕಾಣುವಾಗ ಅವು ಕಾಳಗಕ್ಕೆ ಯೋಗ್ಯವಾಗಿರುತ್ತವೆ. ಕರೆತಂದಾಗ ಅವುಗಳನ್ನು ಸಾಕಿರುವವರು ಜೊತೆ ಇರಬೇಕು ಅವರ ಚಪ್ಪಾಳೆಗಳಿಂದ, ಸಿಂಹನಾದಗಳಿಂದ, ಆ ಕೋಣಗಳೆರಡು ಉತ್ಸಾಹ ತುಂಬಿಕೊಂಡು ಮುಖವನ್ನು ಮೇಲೆತ್ತಿ ಒಂದನ್ನೊಂದು ನೋಡುತ್ತಿರುತ್ತವೆ. ಅಂತಹ ಸಮಯದಲ್ಲಿ ಅವುಗಳಿಗೆ ಆನೆಗಳಂತೆ ತಡೆಯಲು ಅಸಾಧ್ಯವಾಗಿರುವ ಬಲ ಬರುತ್ತದೆ. ಅಂಥ ಎರಡು ಕೋಣಗಳನ್ನು ಕಾದಾಡಲು ಬಿಡಬೇಕು. ಅವು ಪರಸ್ಪರ ಕೊಂಬುಗಳಿಂದ ತಿವಿದುಕೊಳ್ಳುತ್ತವೆ. ಕೋಪದಿಂದ ತಲೆಯನ್ನೆತ್ತಿ ಜೋರಾಗಿ ಉಸಿರು ಬಿಡುತ್ತಾ ಕಟಲಾವಾಯಿಗಳಿಂದ ನೊರೆ ಸುರಿಸುತ್ತಾ ಹೋರಾಡುತ್ತವೆ. ಆ ಕೋಣಗಳು ಗುಟುರು ಹಾಕುತ್ತಾ ಹಿಂದಕ್ಕೆ ಸರಿದು

ಭೂಮಿಯ ಮೇಲೆ ಮೊಳಕಾಲುಗಳನ್ನಿಟ್ಟು, ಬಾಲಗಳನ್ನು ಮೇಲೆ ನಿಮಿರಿಸಿ ಕೋಪದಿಂದ ಬುಸುಗುಡುತ್ತ ನೊರೆಯನ್ನು ಕಕ್ಕುತ್ತ, ರಕ್ತದಿಂದ ತೊಯ್ದು ಶರೀರವುಳ್ಳವಾಗಿ ಕೋಪದಿಂದ ಕಣ್ಣುಗಳನ್ನು ಕೆಂಪು ಮಾಡಿಕೊಂಡು ಕಾದಾಡುವವು. ಈ ಕಾದಾಟವನ್ನು ಸುತ್ತ ನೆರೆದ ಜನ ಉಲ್ಲಾಸದಿಂದ ಕೂಗುತ್ತಾ ಸಂಭ್ರಮಿಸುವರು. ಕೋಣಗಳನ್ನು ಸಾಕಿದ ಯಜಮಾನ ಅವುಗಳಿಗೆ ಕಾದಾಡಲು ಪ್ರೋತ್ಸಾಹ ಕೊಡುತ್ತಿರುತ್ತಾನೆ. ಕಾದಾಡುವ ಕೋಣಗಳಲ್ಲಿ ಬಲಿಷ್ಠವಾದುದು ತನಗಿಂತ ಬಲಿಷ್ಠವಾದ ಕೋಣದಿಂದ ಪೀಡೆಯನ್ನನುಭವಿಸಿ ದಣಿಯುತ್ತದೆ. ಕೊಂಬಿನ ತುದಿಯಿಂದ ತಿವಿಸಿಕೊಂಡು ಓಡಿಹೋಗುತ್ತದೆ. ಬಲಿಷ್ಠ ಕೋಣವು ತನ್ನ ಮೈದಾನದಿಂದ ಕೋಡುಗಳಿಂದ ಓಡುವ ಕೋಣದ ಹಿಂಬದಿಯನ್ನು ತಿವಿಯುತ್ತ ಅಟ್ಟಿಸಿಕೊಂಡು ಹೋಗುತ್ತದೆ. ಬಲಿಷ್ಠವಾದ ಕೋಣವು ವಿಜಯದಿಂದ ಮೆರೆಯುತ್ತ ಕೋಪದಿಂದ ಪ್ರೇಕ್ಷಕರ ಕಡೆಗೂ ನುಗ್ಗುತ್ತದೆ. ಆಗ ನೆರೆದ ಸುತ್ತಲಿನ ಜನ ಚಲ್ಲಾಪಿಲ್ಲಿಯಾಗಿ ಓಡುತ್ತಾ ರಕ್ಷಣೆ ಮಾಡಿಕೊಳ್ಳುತ್ತಾರೆ.[೨೩೪]

ಈ ರೀತಿಯ ಕೊಣಗಳ ಕಾದಾಟಗಳಿಗೆ ಪ್ರತ್ಯೇಕವಾದ ಮೈದಾನ ಮಾಡಿ ಕಾದಾಟ ಮಾಡಲು ಬಿಡುತ್ತಿದ್ದಿರಬೇಕು. ಹೀಗೆ ಅಂದಿನ ಜನ ಮನರಂಜನೆಗಾಗಿ ಈ ರೀತಿಯ ಬಲಿಷ್ಠವಾಗಿ ಬೆಳಸಿದ ಪ್ರಾಣಿಗಳನ್ನು ಉಪಯೋಗಿಸಿಕೊಂಡು ವಿನೋದ ಚಟುವಟಿಕೆಗಳಲ್ಲಿ ಸಮಯಹರಣ ಮಾಡುತ್ತಿದ್ದರು.

ಗೂಳಿಕಾಳಗ

ಧೂಳಿಯ ನೆಲದೊಳು ಕೇಳಿಯ ಚಾಕವ ಮಾಡಿ ಕಾಳಗಗಳನ್ನು ನಡೆಸುತ್ತಿದ್ದ ಬಗ್ಗೆ ಕಂಠೀರವ ನರಸರಾಜ ವಿಜಯದಿಂದ ತಿಳಿದುಬರುತ್ತದೆ.[೨೩೫] ಅಂದಿನ ಅರಸರು ಈ ರೀತಿಯ ಕಾಳಗಗಳಲ್ಲಿ ಆಸಕ್ತಿ ಹೊಂದಿರುತ್ತಿದ್ದರು. ಈ ಗೂಳಿ ಕಾಳಗದ ಕ್ರೀಡೆಗೆ ಪ್ರಾಚೀನ ಇತಿಹಾಸವಿದೆ. ಗೋವಾಕ್ಕೆ ಬಂದ (೧೬೨೮) ಪೀಟರ್ ಮುಂಡಿ ಕೋಣಕಾಳಗ ನೋಡಿ ಸ್ಪೈನ್‌ದಲ್ಲಿ ನಡೆಯುತ್ತಿದ್ದ ಕಾಳಗದ ಬಗ್ಗೆ ಹೇಳುತ್ತಾನೆ.[೨೩೬] ಇವನಿಗಿಂತ ಪೂರ್ವದಲ್ಲಿ ಬಂದ ಈಟಿಯನ್ (ಕ್ರಿ.ಶ. ೧೭೦-೨೩೫) ಇದೆ ಕಾಳಗದ ಕುರಿತು ಹೇಳಿರುವುದು ಗಮನಾರ್ಹವಾದುದು.[೨೩೭] ಗೂಳಿಕಾಳಗ ಮೆಕ್ಸಿಕೋ ಮತ್ತು ಸ್ಪೇಯನ್‌ನಲ್ಲಿ ಅತಿ ಪ್ರಾಚೀನ ಕಾಲದಿಂದಲೂ ಇದೆ. ಇದಕ್ಕೆ ೫ನೆಯ ಶತಮಾನದಿಂದ ಪುರಾವೆಗಳು ಸಿಗುತ್ತವೆ. ಅಲ್ಲಿ ಕಾಳಗದಲ್ಲಿ ಜಯಶಾಲಿಯಾದ ಯೋಧನಿಗೆ ಸತ್ತ ಗೂಳಿಯ ಎರಡು ಕಿವಿ ಮತ್ತು ಬಾಲವನ್ನು ಪಾರಿತೋಷಕವಾಗಿ ಕೊಡುತ್ತಿದ್ದರಲ್ಲದೆ. ಇದು ಅಲ್ಲಿಯ ರಾಷ್ಟ್ರೀಯ ಕ್ರೀಡೆಯಾದ್ದರಿಂದ ಗೆದ್ದ ವೀರನಿಗೆ ರಾಷ್ಟ್ರೀಯ ವೀರನೆಂದು ಗೌರವಿಸಲಾಗುತ್ತಿತ್ತು.[೨೩೮] ವಿಜಯನಗರ ಕಾಲದಲ್ಲಿ ಈ ರೀತಿಯ ಕ್ರೀಡೆಗಳು ಸಾಕಷ್ಟು ಜರುಗುತ್ತಿದ್ದವು. ಗೂಳಿ ಗೂಳಿಗಳ ಮಧ್ಯ ಕಾಳಗವನ್ನು ಏರ್ಪಡಿಸಿ ಮನರಂಜನೆಯನ್ನು ಪಡೆಯುತ್ತಿದ್ದರು. ಅಲ್ಲದೆ ಕಾರ ಹುಣ್ಣಿಮೆಯ ಸಂದರ್ಭದಲ್ಲಿ ಎತ್ತುಗಳೊಂದಿಗೆ ಸ್ಪರ್ಧೆಗಳನ್ನು ಏರ್ಪಡಿಸಿ ಎಲ್ಲ ಜನರು ಒಂದೆಡೆ ಸೇರಿ ಸಂಭ್ರಮಿಸುತ್ತಿದ್ದರು.

ಆನೆ ಕಾಳಗ

ಸೊಕ್ಕಾನೆಗಳ ಕಾದಿಸುತಿರ್ದ ದೊರೆಗಳ ಮಕ್ಕಳಕೂಡೆ ಬೀದಿಯಲಿ[೨೩೯]

ಸಾಮಾನ್ಯವಾಗಿ ಗೂಳಿ, ಆನೆಯ ಕಾಳಗಗಳು ರಾಜಾಶ್ರಯವನ್ನು ಪಡೆದುಕೊಂಡಿದ್ದವು. ಸಾಮಾನ್ಯರಿಗೆ ಈ ರೀತಿಯ ಕ್ರೀಡೆಗಳನ್ನು ನಡೆಸಿಕೊಂಡು ಹೋಗಲು ಆಗುತ್ತಿರಲಿಲ್ಲ. ಕೇವಲ ಪ್ರೇಕ್ಷಕರಾಗಿ ವಿನೋದ ಪಡೆಯುತ್ತಾ ಇದೇ ಪ್ರಾಣಿ ಗೆಲ್ಲುತ್ತದೆ, ಸೋಲುತ್ತದೆ ಎಂದು ಜೂಜು ಕಟ್ಟಿಕೊಂಡು ಸಂಭ್ರಮಿಸುತ್ತಿದ್ದರು. ವಡ್ಡಾರಾಧನೆಯ ಸುಕೌಶಳ ಸ್ವಾಮಿಯ ಕಥೆಯ ಸಂದರ್ಭದಲ್ಲಿ ಮೂವತ್ತೆರಡು ಬಗೆಯ ಗಜಕ್ರೀಡೆಗಳಿದ್ದ ಬಗ್ಗೆ ಅಂಕಿಯನ್ನು ಕೊಡುತ್ತಾನೆ.[೨೬೦] ಮದದ ಎರಡು ಆನೆಗಳ ಮಧ್ಯ ಮೂರು ನಾಲ್ಕು ಅಡಿ ಅಗಲವಾದ ಮಣ್ಣಿನ ಗೋಡೆ ಒಂದೊಂದು ಆನೆಯ ಮೇಲೆ ನಾಲ್ಕು ಜನ ಮಾವುತರು ಕುಳಿತಿದ್ದು ಬೈಯುತ್ತಾ, ಕಾಲಿನಿಂದ ತಿವಿಯುತ್ತಾ ಆನೆಯನ್ನು ರೊಚ್ಚಿಗೇಳಿಸಿ ಸೊಂಡಿಲು ಮತ್ತು ಹಣೆಯಿಂದ ಸೆಣಸಾಡುವುದಕ್ಕೆ ಮುಂದು ಮಾಡುತ್ತಾರೆ. ಹಣೆಪಟ್ಟಿ ಒಡೆದರೂ ಕೋರೆಯಿಂದ ಚುಚ್ಚಿ, ರಕ್ತ ಚಿಮ್ಮುತ್ತಿದ್ದರೂ ಪರಿವಿಲ್ಲದೆ ಹೋರಾಡುತ್ತಿರುತ್ತವೆ. ಬಲಹೀನವಾದ ಆನೆ ಹಿಮ್ಮೆಟ್ಟಿದರೆ ಗೋಡೆ ಬಳಸಿ ಬಲಯುಕ್ತ ಆನೆ ಬೆನ್ನಟ್ಟಿ ನೆಲಕ್ಕೆ ಬೀಳುವವರೆಗೂ ಬಿಡುವುದಿಲ್ಲ. ಇಂಥ ಸಂದರ್ಭದಲ್ಲಿ ಪಟಾಕಿ ಸಿಡಿಸಿ ಅವುಗಳನ್ನು ಬಿಡಿಸುತ್ತಿದ್ದರು.[೨೬೧] ಕಾಳಗ ನಡೆದಾಗ ಎದುರಾನೆಯ ಕಣ್ಣು ಮಾವುತನ ಮೇಲೆ ಇರುತ್ತಿದ್ದು, ಸಮಯ ಸಾಧಿಸಿ ಅವನನ್ನು ಸೊಂಡಿಲಿನಿಂದ ನೆಲಕ್ಕೆ ಅಪ್ಪಳಿಸಿ ಬಿಡುತ್ತದೆ. ಹೀಗಾಗಿ ಮಾವುತರು ಮೊದಲೇ ಮನೆಯಲ್ಲಿ ಹೇಳಿ ಸಂಬಂಧ ಕಡಿದುಕೊಂಡು ಬಂದಿರುತ್ತಾರೆ. ಸಾವಿಗೆ ಗುರಿಯಾದ ಮಾವುತನ ಸಂಬಳ ಅವನ ಮಡದಿ ಮಕ್ಕಳಿಗೆ ಹೋಗುತ್ತದೆ. ಕಾಳಗದಲ್ಲಿ ಸಾಯದೆ ಬದುಕಿ ಉಳಿದರೆ ಸಂಬಳ ಹೆಚ್ಚಿಸುವುದು ಈ ರೀತಿಯ ಮುಂತಾದ ವಿವರದೊಂದಿಗೆ ಈ ಕಾಳಗದ ಕುರಿತು ಪ್ರವಾಸಿ ಪ್ರಾನ್‌ಸ್ಕಾಸ್ ಬೇರಾನ್ಯ ಸಚಿತ್ರವಾಗಿ ಹೇಳಿದ್ದಾರೆ.[೨೬೨] ವರ್ಷದಲ್ಲಿ ಒಂದು ಬಾರಿ ನಡೆಯುತ್ತಿತ್ತು ಎನ್ನಲಾಗುವ ಈ ಕಾಳಗದಲ್ಲಿ ಗೆದ್ದ ಮತ್ತು ಸೋತ ಎರಡೂ ಆನೆಗಳು ಸಾಯುತ್ತವೆ.[೨೬೩] ಸಾಯದೆ ಇದ್ದ ಆನೆಗಳನ್ನು ಇಟ್ಟುಕೊಳ್ಳುವ ಬದಲು ಸಾಯಿಸುವುದೇ ಒಳ್ಳೆಯದೆಂದು ನದಿಗೆ ನೂಕಲಾಗುತ್ತಿತ್ತು.[೨೬೪] ಈ ರೀತಿಯ ಕ್ರೀಡೆಯನ್ನು ಒಂದು ಪ್ರಬಲವಾದ ಗೋಡೆಯ ಮಧ್ಯೆ ನೆರವೇರಿಸುತ್ತಿದ್ದರು. ಇದನ್ನು ವೀಕ್ಷಿಸಲು ಅರಸರಾದಿಯಾಗಿ ಜನಸಾಮಾನ್ಯರು ಆಗಮಿಸುತ್ತಿದ್ದರು. ಆನೆ ಆನೆಗಳ ಮಧ್ಯ ನಡೆಯುವ ಹೋರಾಟವನ್ನು ನೋಡಿ ಸಂಭ್ರಮದಿಂದ ಕೇಕೆ, ಚಪ್ಪಾಳೆಗಳ ಮುಖಾಂತರ ಮಾವುತರನ್ನು ಪ್ರೋತ್ಸಾಹಿಸುತ್ತಿದ್ದರು. ಈ ಕ್ರೀಡೆಗೆ ರಾಜ ಮನ್ನಣೆಯಿತ್ತು.

ಕೊತ್ತಲ ಆನೆಕಾಳಗ

ಆನೆ ಮತ್ತು ಕ್ರೀಡಾ ಪಟುಗಳ ಮಧ್ಯ ನಡೆಯುವಂತಹದು. ಮದವೇರಿದ ಆನೆಯನ್ನು ಕೆರಳಿಸಿ ಅದನ್ನು ಬಂಧಿಸುವುದು ಮುಖ್ಯಗುರಿ. ಕ್ರೀಡಾಪಟುಗಳು ಕುದುರೆ ಮೇಲೆ ಸವಾರಿ ಮಾಡುತ್ತಾ ಆನೆಯ ಬಾಲಹಿಡಿದು ಜಗ್ಗುವುದು, ಕೆರಳಿಸುವುದು, ಬೆನ್ನಟ್ಟಿದಾಗ ಅದರ ಹಿಂದೆಯೇ ತಿರುಗುವುದು ಮಾಡುತ್ತಾರೆ. ಗಂಡಾಂತರ ಪರಿಸ್ಥಿತಿ ಬಂದಾಗ ಕೊತ್ತಲದ ಬಾಗಿಲ ಒಳಗೆ ಹೊಕ್ಕುಬಿಡುತ್ತಾರೆ. ಅಂದರೆ ಈ ಕ್ರೀಡೆಯು ಕೋಟೆಯ ಕೊತ್ತಲದೊಳಗೆ ನಡೆಯುವುದರಿಂದ ಕೊತ್ತಲ ಆನೆ ಕಾಳಗ ಎನ್ನುವರು.[೨೬೫] ಎರಡು ಕೊತ್ತಲಗಳಿಂದ ಕೊಡಿದ ಈ ಕ್ರೀಡೆ ಒಂದು ಕೊತ್ತಲದಲ್ಲಿ ಅಧಿಕಾರಿ ವರ್ಗದವರು ಕುಳಿತು ನೋಡುತ್ತಿದ್ದರು. ಮೊಗಲ

ಚಕ್ರವರ್ತಿ ಜಹಾಂಗೀರನಿಗೆ ಮತ್ತು ಅಕ್ಬರನಿಗೆ ಬಲುಪ್ರಿಯವಾದ ಕ್ರೀಡೆಯಾಗಿತ್ತು. ಅಕ್ಬರ್ ಫತೇಪುರದಲ್ಲಿ ಕಮಾನುಗಳ ಮೇಲೆ ಕಟ್ಟಡ ಕಟ್ಟಿಸಿ ಇದರ ಸುತ್ತಲೂ ವಿಶಾಲವಾದ ಅಂಗಳ ನಿರ್ಮಿಸಿ ಅದರಲ್ಲಿ ಹಲವಾರು ಬಗೆಯ ಆನೆ, ಕುದುರೆಯ ಪಂದ್ಯಗಳನ್ನು ನಡೆಸುತ್ತಿದ್ದ.[೨೪೬] ಈ ಕ್ರೀಡೆಯು ಹಲವು ತಾಸುಗಳವರೆಗೆ ನಡೆಯುತ್ತಿತ್ತು. ಈ ಪಂದ್ಯಗಳನ್ನು ಅರಸರು ಕುಳಿತು ನೋಡುತ್ತಿದ್ದರಂತೆ.[೨೪೭] ಹೀಗೆ ಆನೆ ಕಾಳಗಗಳು ವಿವಿಧ ಬಗೆಯಲ್ಲಿ ಜರುಗುತ್ತಿದ್ದವು ಇವುಗಳಿಂದ ಜನಗಳು ಸಾಕಷ್ಟು ವಿನೋದ ಪಡೆಯುತ್ತಿದ್ದನು. ವಿಜನಗರದಲ್ಲಿತ್ತು ಎಂಬುದಕ್ಕೆ ಮಹಾನವಮಿದಿಬ್ಬ, ಹಜಾರರಾಮಚಂದ್ರ ದೇವಾಲಯದ ಭಿತ್ತಿ ಹೀಗೆ ವಿಜಯನಗರ ಸ್ಮಾರಕಗಳ ಮೇಲಿನ ಉಬ್ಬು ಕೇತ್ತನೆಗಳು ಇದಕ್ಕೆ ಇಂಬು ನೀಡಿವೆ.

ಎತ್ತಿನ ಪಂದ್ಯ

ಗ್ರಾಮೀಣ ಭಾಗದಲ್ಲಿ ಎತ್ತುಗಳನ್ನು ಓಡಿಸುವುದು ಒಂದು ಸಂಪ್ರದಾಯ. ಅದು ಕ್ರೀಡೆಯಾಗಿ ಬೆಳೆದಿದೆ. ಕಾರಹುಣ್ಣಿಮೆಯ ದಿನ ವಿಶೇಷವಾಗಿ ಈ ಕ್ರೀಡೆಯನ್ನು ಆಯೋಜಿಸುತ್ತಿದ್ದರು. ವರ್ಷಪೂರ್ತಿ ದುಡಿಯುವ ಎತ್ತುಗಳಿಗೆ ಈ ದಿನ ವಿಶೇಷವಾಗಿ ಪಾದ, ಗ್ವಾದಲಿ ಪೂಜೆ ಮಾಡಿ ಅವುಗಳ ಕೊರಳಿಗೆ ಘಂಟೆಸರ, ಕೋಡುಗಳಿಗೆ ಗೆಜ್ಜೆ, ಕೋಡಣಸು ಬೆನ್ನ ಮೇಲೆ ಅಲಂಕಾರಯುತ ವಸ್ತ್ರಗಳನ್ನಾಗಿ ಹಾಕಿ ವಿಜೃಂಭಣೆಯಿಂದ ದೇವಸ್ಥಾನಗಳನ್ನು ಸುತ್ತಿಸುತ್ತಿದ್ದರು, ನಂತರ ಎತ್ತುಗಳನ್ನು ಸಮ ನೆಲ, ಗುಡ್ಡಗಾಡುಗಳಲ್ಲಿ ಓಡಿಸುವುದು, ಬಂಡಿಗೆ ಕಟ್ಟಿ, ಅದರ ಮೇಲೆ ಭಾರ ಹಾಕಿ ಭಾರವಾದ ಕಲ್ಲಿಗೆ ಹಗ್ಗ ಕಟ್ಟಿ ಜಗ್ಗಿಸುವುದು ಇತ್ಯಾದಿ ಪಂದ್ಯಗಳನ್ನಾಡುತ್ತಾ ವಿಜೃಂಭಣೆಯಿಂದ ಸಂಭ್ರಮಪಡುತ್ತಿದ್ದರು. ಈಲಿಯನ್ ತಾನು ಕಂಡ ಎತ್ತಿನ ಪಂದ್ಯವನ್ನು ಸ್ವಾರಸ್ಯಕರವಾಗಿ ವರ್ಣಿಸಿದ್ದಾನೆ. ರಾಜನೂ, ಶ್ರೀಮಂತರು ಎತ್ತುಗಳನ್ನು ಸಾಕಿ ಪಂದ್ಯ ಬಿಡುತ್ತಾರೆ. ಪಂದ್ಯದಲ್ಲಿ ಚಿನ್ನ, ಬೆಳ್ಳಿ, ಮುಂತಾದ ಬೆಲೆಯುಳ್ಳ ವಸ್ತುಗಳನ್ನು ಪಣವಿಡುತ್ತಾರೆ. ರಾಜನು ಜೂಜು ಕಟ್ಟಿದ ಪಕ್ಷದಲ್ಲಿ ತನ್ನ ಎತ್ತುಗಳು ಗೆಲ್ಲಬೇಕು ಎಂಬ ಉತ್ಸಾಹದಿಂದ ತಾನೊಂದು ರಥದಲ್ಲಿ ಕುಳಿತು ತನ್ನ ಎತ್ತುಗಳು ಗೆಲ್ಲಬೇಕು ಎಂದು ಎತ್ತುಗಳನ್ನು ಕಟ್ಟಿರುವ ರಥದ ಸಾರಥಿಯನ್ನು ಜೋರಾಗಿ ಹೊಡೆಯಬೇಕು ಎಂದು ಪ್ರೋತ್ಸಾಹಿಸುತ್ತಾ ಹೋಗುತ್ತಾನೆ. ಆ ಚುಚ್ಚಿಗೆ ಕುದುರೆಗಳ ಮೈಯಿಂದ ರಕ್ತ ಧಾರಾಕಾರವಾಗಿ ಹರಿಯುತ್ತದೆ. ಆದರೆ ಅವನು ಎತ್ತುಗಳ ಮೇಲೆ ಕೈ ಇಡುವುದಿಲ್ಲ. ಏಕೆಂದರೆ ಅವು ಚುಚ್ಚು ಗೋಲಿಲ್ಲದೆಯೇ ಓಡುತ್ತವೆ. ಈ ಪಂದ್ಯ ಎಷ್ಟು ಉತ್ಸಾಹವನ್ನು ಮುಟ್ಟುತ್ತದೆಂದರೆ ಶ್ರೀಮಂತರೂ, ಎತ್ತುಗಳ ಮಾಲಿಕರು ಜೂಜು ಕಟ್ಟಿಕೊಳ್ಳುವುದಲ್ಲದೆ ನೋಡುಗರು ತಮ್ಮ ತಮ್ಮಲ್ಲೆ ಜೂಜು ಕಟ್ಟಿಕೊಳ್ಳುತ್ತಾರೆ.[೨೪೮] ಈ ರೀತಿಯಾಗಿ ಅಂದು ಎತ್ತಿನ ಓಟಗಳ ಸ್ಪರ್ಧೆ ವರ್ಷದಲ್ಲಿ ಒಮ್ಮೆ ವಿಜೃಂಭಣೆಯಿಂದ ಏರ್ಪಡಿಸುತ್ತಿದ್ದರು. ಸುತ್ತಮುತ್ತಲಿನ ಜನಗಳೆಲ್ಲರೂ ಸೇರಿ ಸಂಭ್ರಮದಿಂದ ಕಾಲ ಕಳೆಯುತ್ತಿದ್ದರು.

ಉಯ್ಯಾಲೆ

ಸ್ತ್ರೀಯರ ಹಬ್ಬವೆಂದೇ ಪ್ರಸಿದ್ಧಿ ಪಡೆದ ನಾಗರಪಂಚಮಿ ವಿಶೇಷವಾಗಿ ಉಯ್ಯಾಲೆಯಾಟಕ್ಕೆ ಹೆಸರುವಾಸಿಯಾಗಿದೆ. ಶ್ರಾವಣ ಮಾಸದಲ್ಲಿ ಬರುವ ಈ ಹಬ್ಬದಲ್ಲಿ ರೈತರು ಕೃಷಿ ಕೆಲಸದಿಂದ

ಬಿಡುವು ಪಡೆದಿರುತ್ತಾರೆ. ಈ ಸಮಯದಲ್ಲಿ ಒಂದು ತಿಂಗಳು ಮಕ್ಕಳಾದಿಯಾಗಿ ದೊಡ್ಡವರು ಉಯ್ಯಾಲೆಯಾಡುತ್ತಾ ಸಂಭ್ರಮಿಸುವರು. ವಿಜಯನಗರ ಕಾಲದಲ್ಲಿ ಈ ಆಟ ನಡೆಯುತ್ತಿತ್ತು ಎಂಬುದನ್ನು ಐತಿಹಾಸಿಕ ದಾಖಲೆಗಳು ದೃಢಪಡಿಸುತ್ತವೆ.

ಸಿಂಗಾರವಡೆದ ರಾಟಳಿದುಯ್ಯಾಲೆಯ

ಮಂಗಳವಿಭವದಿನಡೆರ್ದು

ಅಂಗಜಚಕ್ರದಿಗ್ವನಿತೆಯರೆಂಬಂತೆ ತುಂಗಯೌವನೆಯರಾಡಿದರು[೨೪೯] ಅಂದರೆ ಅಲಂಕಾರ ಮಾಡಿದ ಉಯ್ಯಾಲೆಯಲ್ಲಿ ಯುವತಿಯರು ಹೇಗೆ ಆಡುತ್ತಿದ್ದರು ಎಂಬ ವಿವರವಿದೆ.

ಸರೆಮಿಂಡಿವೆಣ್ಗಳ ಕೊರಲಹಾರದ ಮುತ್ತು

ಪರೆದುರಿದು ಮಣಿನಿಚಯ

ಬಿರುವರೆಯೊಳು ಬೀಳ್ವ ವಾರಿಕಲ್ಲುಗಳಂತೆ

ತುರುಗಿರ್ದುಮಯ್ಯಾಲೆಯಾಡಿಯಾ[೨೫೦] ಇಲ್ಲಿ ಉಯ್ಯಾಲೆ ಹೇಗೆ ತಿರುಗುತ್ತಿತ್ತು, ಅದರಲ್ಲಿ ಕುಳಿತು ಹೇಗೆ ಸಂಭ್ರಮಿಸುತ್ತಿದ್ದರು ಎಂದಿದೆ.

ನೋಟ ವಿಷಯದಿಂದೊಳಗಾದ ಪುರುಷರ

ಕೋಟಿಲೆಗೊಳಿಸಿ ಸುತ್ತಿಸುತ

ಆಟವಿದೆಂಬಂತೆ ತಿರುಗಿಸುತಿರ್ದರು

ರಾಟಳದುಯ್ಯಾಲೆಗಳನು.[೨೫೧] ಅಂದರೆ ಯುವತಿಯರನ್ನು ಪುರುಷರು ಅವರು ಸಾಕು ಅನ್ನುವರೆಗೆ ತೂಗುತ್ತಿದ್ದರು ಹಾಗೆ ಕೀಟಲೆ ಮಾಡುತ್ತಾ ಆನಂದಪಡುತ್ತಿದ್ದರು.

ಬಾಲೆಯರುಗಳ ಕಣ್ಣನ ಕೆ ರಾಟಣದು

ಯ್ಯೊಲೆ ನಾಲ್ದೆಸೆಯೊಲೊಪ್ಪಿದವು[೨೫೨]

ಅಂದರೆ ಅಂದು ಸ್ತ್ರೀಯರು ಈ ಹಬ್ಬದ ಸಮಯದಲ್ಲಿ ಉಯ್ಯಾಲೆಗಳನ್ನು ಆಡುತ್ತಿದ್ದರು ಅವುಗಳನ್ನು ಪುರುಷರು ತೂಗುತ್ತಿದ್ದರು ಎಂದು ತಿಳಿಯುತ್ತದೆ.

ಹಗ್ಗ, ಬಟ್ಟೆ ಸೀರೆಗಳನ್ನು ಮರದ ಕೊಂಬೆ, ಮನೆಯ ತೊಲೆಗಳಿಗೆ ಕಟ್ಟಿಕೊಂಡು ಆಡುತ್ತಿದ್ದರು, ವಿದೇಶಿ ಪ್ರವಾಸಿಗರ ವರದಿಯಲ್ಲಿಯೂ ನಮಗೆ ಉಯ್ಯಾಲೆ ಆಡಿದ ದಾಖಲೆಗಳು ದೊರೆಯುತ್ತವೆ. ಡೊಮಿಂಗೋ ಪಾಯೆಸ್‌ನ ಹೇಳಿಕೆಯಂತೆ ಈ ಮನೆಯನ್ನು ಬಿಟ್ಟ ಕೂಡಲೇ ನಾವು ಪ್ರಾಣಿ ಕಾಳಗಗಳ ಕಣಗಳಷ್ಟು ದೊಡ್ಡ ಅಂಗಳವನ್ನು ಪ್ರವೇಶಿಸಿದೆವು ಅದು ಚೆನ್ನಾಗಿ ಗಿಲಾಯಿ ಮಾಡಲಾಗಿದ್ದ ಅದರ ಮಧ್ಯದ ಸುಮಾರಿಗೆ ಕೆಲವು ಕಟ್ಟಿಗೆಯ ಕಂಬಗಳ ಜೊತೆಗೆ ಪೂರ್ತಿ ತಾಮ್ರದ ಗೀಲಿಟಿನಿಂದ ಹೊದಿಸಿದ ತೊಲೆ ಮೇಲ್ಗಡೆ ಇದೆ. ಮಧ್ಯದಲ್ಲಿ ಒಂದರೊಳಗೊಂದು ಜೋಡಿಸಿದ ಕೊಂಡಿಗಳುಳ್ಳ ಬೆಳ್ಳಿಯ ನಾಲ್ಕು ಸರಪಳಿಗಳಿವೆ. ಅವು ರಾಜನ ಪತ್ನಿಯರಿಗಾಗಿ ಜೋಕಾಲಿಯಾಗಿ ಬಳಸಲ್ಪಡುವವು[೨೫೩] ಅಲ್ಲಿ ನಾವು ರಾಣಿವಾಸದವರ ಉಯ್ಯಾಲೆಗಳನ್ನು ನೋಡಿದೆವು.[೨೫೪] ಅಂದರೆ ಅಂದು ಅರಸಮನೆತನದವರು ಅರಮನೆಯಲ್ಲಿಯೇ ಉಯ್ಯಾಲೆಗಳನ್ನು ಆಡುತ್ತಿದ್ದರು. ಜನ ಸಾಮಾನ್ಯರು ಮನೆ, ಮರಗಳಿಗೆ ಕಟ್ಟಿಕೊಂಡು ಆಡುತ್ತಿದ್ದರು. ಹಗ್ಗ, ಬಟ್ಟೆ, ಸೀರೆಗಳನ್ನು ಮರದ ಕೊಂಬೆ, ಮನೆಯತೊಲೆಗಳಿಗೆ ಕಟ್ಟಿಕೊಂಡು ಉಯ್ಯಾಲೆಗಳನ್ನು ಆಡುತ್ತಿದ್ದರು. ಅದರಲ್ಲಿ ಹಲವು ವಿಧಗಳಿವೆ.

ಮೀಣಿ ಉಯ್ಯಾಲೆ

ಹಗ್ಗದಿಂದ ಸಾಮಾನ್ಯವಾಗಿ ಮರದ ಕೊಂಬೆಗೆ ಕಟ್ಟಿದ ಉಯ್ಯಾಲೆ. ಇದು ಹಗ್ಗದಿಂದ ಕಟ್ಟಿದರೆ ಹಗ್ಗದ, ಸರಪಳಿಯಿಂದ ಕಟ್ಟಿದರೆ ಸರಪಳಿ ಉಯ್ಯಾಲೆ, ಎನ್ನುವರು. ಹೆಣ್ಣು ಮಕ್ಕಳು ಹೆಚ್ಚು ಆಡುವರು. ಗಂಡು ಮಕ್ಕಳು ಇದರಲ್ಲಿ ವಿಶಿಷ್ಟವಾದ ಕಸರತ್ತಿನ ಸ್ಪರ್ಧೆಗೆ ಇಳಿಯುವರು, ಉಯ್ಯಾಲೆಯಾಡುತ್ತಾ ಮರದ ತಪ್ಪಲುಗಳನ್ನು ಬಾಯಿಂದ ಕಚ್ಚಿ ತರುವುದು, ಹೆಣ್ಣು ಮಕ್ಕಳು ಸಾಕು ಎನ್ನುವವರೆಗೆ ತೂಗುವುದು ಜೋಡಿಯಾಗಿ ಜೀಕುವುದು ಹೀಗೆ ವೈವಿಧ್ಯಮಯವಾದ ಆಟಗಳಿವೆ. ಪ್ರಾಚೀನ ಕಾಲದಲ್ಲಿ ಉಯ್ಯಾಲೆಗಳನ್ನು ಯುದ್ಧ ತಂತ್ರಗಳಾಗಿ ಬಳಸುತ್ತಿದ್ದರು. ಎರಡು ಎತ್ತರವಾದ ಕಂಬ ನೆಟ್ಟು ಅದರಲ್ಲಿ ಉಯ್ಯಾಲೆ ಕಟ್ಟಿ ಉಯ್ಯಾಲೆಯಾಡುತ್ತಾ ಕೋಟೆಯ ಒಳಗೆ ಪ್ರವೇಶಿಸುತ್ತಿದ್ದರು, ಸಾಮಾನ್ಯವಾಗಿ ಕೋಟೆ ಏರುವಾಗ, ಜಲದುರ್ಗ ದಾಟುವಾಗ ಇದನ್ನು ಬಳಸುತ್ತಿದ್ದರು. ಪ್ರಾಚೀನ ಕಾವ್ಯಗಳಲ್ಲಿ ಏಣಿಯ ಪ್ರಸ್ತಾಪಗಳು ಬರುತ್ತವೆ. ರಾಟಳುದುಯ್ಯಾಲೆ ರಾವಳ ಸೂತ್ರ, ನೊಲೇಣಿ[೨೫೫] ಹೆಸರುಗಳು ಪ್ರಮುಖವಾದವು, ಜನಪದರಲ್ಲಿ ಬಳಕೆಯಲ್ಲಿರುವ ಉಯ್ಯಾಲೆ, ನೋಲೇಣಿ ಎನ್ನುವುದು ನೊಲಿನಿಂದ ತಯಾರಿಸಿದ್ದಾಗಿದೆ, ರಾವಳದುಯ್ಯಾಲೆ ರಾಟೆಯಂತೆ ತಿರುಗುವುದರಿಂದ ಈ ಹೆಸರಿನಿಂದ ಕರೆದಿರಬಹುದು. ಡಂಬಿನ ಉಯ್ಯಾಲೆಯೇ ರವಳದುಯ್ಯಾಲೆಯ ಇನ್ನೊಂದು ಹೆಸರಾಗಿರಬೇಕು. ದೊಣ್ಣೆ ಹಗ್ಗಗಳಿಂದ ಅಣಿಗೊಳಿಸುವಂತಹ ಹಂದರದ ಸೇತುವೆಯೇ ಇದಾಗಿದೆ ಎಂದು ಹೇಳಲಾಗುತ್ತದೆ.[೨೫೬] ಅಂದಿನ ಸೈನ್ಯ ಪದ್ಧತಿಯಲ್ಲಿಯೂ ಈ ರೀತಿಯ ಉಯ್ಯಾಲೆಗಳನ್ನು ಬಳಸುತ್ತಿದ್ದಿರಬೇಕು. ಒಬ್ಬನ ಶಕ್ತಿಯಿಂದ ಎಳೆದು ಏರುವ ಉಯ್ಯಾಲೆಗಳ ಸೈನ್ಯ ಪದ್ಧತಿಯಲ್ಲಿ ರೂಢಿಯಲ್ಲಿವೆ, ಇವೇ ನೋಲೆಣಿಗಳಾಗಿರಬಹುದು.

ಈ ರೀತಿ ಉಯ್ಯಾಲೆಗಳು ಜನಸಾಮಾನ್ಯರ ವಿನೋದದ ಮಾಧ್ಯಮವಾಗಿ ಅರಸರಿಗೆ ಸೈನ್ಯದ ತಂತ್ರವಾಗಿ ವಿವಿಧ ದೃಷ್ಟಿ ಕೋನಗಳಲ್ಲಿ ಈ ಉಯ್ಯಾಲೆಗಳನ್ನು ಅಂದು ಬಳಸಿರುವುದು ವಿಶೇಷವಾಗಿದೆ. ಯಾವುದೇ ಒಂದು ಕ್ರೀಡೆಯ ಹುಟ್ಟಿನ ಹಿಂದೆ ಒಂದು ತಂತ್ರ ಅಡಗಿರುತ್ತದೆ. ಎನ್ನವುದಕ್ಕೆ ಈ ಉಯ್ಯಾಲೆಯು ಉತ್ತಮ ಉದಾಹರಣೆಯಾಗಿದೆ.

ಗಾಳಿಪಟ

ಗಾಳಿಪಟ ಕಾಗದ, ಕಡ್ಡಿ, ದಾರಗಳಿಂದ ಮಾಡಿ ಗಾಳಿಯಲ್ಲಿ ಹಾರಿಸುವ ಒಂದು ಕ್ರೀಡೆ. ಇದನ್ನು ಆಷಾಡ ಮಾಸ ಮೊದಲ ಏಕಾದಶಿಯ ದಿನ ಗಾಳಿಪಟಗಳನ್ನು ಹಾರಿಸಿ ಆಚರಿಸುವ ಒಂದು ಹಬ್ಬವಾಗಿದೆ.[೨೫೭] ಗಾಳಿಪಟ ಹಾರಿಸುವುದು ಒಂದು ಕ್ರೀಡೆಯಾಗಿ, ವಿನೋದದ ಮಾಧ್ಯಮವಾಗಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ ಆಷಾಡ ಮಾಸ ಬಂತೆಂದರೆ ಸಾಕು ಮಕ್ಕಳಾದಿಯಾಗಿ ದೊಡ್ಡವರೂ ಈ ಕ್ರೀಡೆಯಲ್ಲಿ ಭಾಗವಹಿಸಿ ಸಂಭ್ರಮಿಸುತ್ತಾರೆ.

ಗಾಳಿಪಟದ ಹುಟ್ಟು ಮತ್ತು ಬೆಳವಣಿಗೆ

ಗಾಳಿಪಟದ ಇತಿಹಾಸ ಸಾವಿರಾರು ವರ್ಷಗಳಷ್ಟು ಹಳೆಯದು. ಭಾರತ, ಚೀನಾ ರಾಷ್ಟ್ರಗಳಲ್ಲಿ ಮನರಂಜನೆಯ ಸಾಧನವಾಗಿದ್ದರೆ. ಕೋರಿಯಾದಲ್ಲಿ ದುರ್ಭಾಗ್ಯ ಹಾಗೂ

ದುಷ್ಟಶಕ್ತಿಗಳು ಹೊಡೆದೊಡಿಸುವುದಕ್ಕಾಗಿ ಗಾಳಿಪಟವನ್ನು ಬಳಸಿಕೊಳ್ಳುತ್ತಿದ್ದರಂತೆ.[೨೫೮] ಕ್ರಿ.ಪೂ. ೩ನೆಯ ಶತಮಾನದಲ್ಲಿ ಗ್ರೀಸ್‌ನ ಅಚಿಟಸ್ ಎಂಬುವವನು ಗಾಳಿಪಟ ರಚನೆಯನ್ನು ಕಂಡು ಹಿಡಿದನೆಂದು ಹಲವು ಚರಿತ್ರೆಕಾರರ ಅಭಿಪ್ರಾಯ. ಕ್ರಿ.ಪೂ. ೨೦೬ರಲ್ಲಿ ಹನಸಿನ್ ಎಂಬ ಸೇನಾಧಿಪತಿಯೊಬ್ಬನಿಂದ ಯುದ್ಧ ತಂತ್ರದಲ್ಲಿ ಬಳಕೆಗಾಗಿ ಕಂಡು ಹಿಡಿಯಲ್ಪಟ್ಟಿತು ಎಂದು ಚೀನಾದವರ ನಂಬಿಕೆ.[೨೫೯] ವಿಜಯನಗರ ಕಾಲದಲ್ಲಿ ಗಾಳಿಪಟದಾಟವು ಪ್ರಚಲಿತದಲ್ಲಿತ್ತು ಎಂದು ಹಲವು ದಾಖಲೆಗಳು ದೃಢಪಡಿಸುತ್ತವೆ. ಲಕ್ನೊ, ಕಾಶಿ, ಮುಂತಾದ ಸ್ಥಳಗಳಲ್ಲಿ ಬಹಳ ಹಿಂದಿನಿಂದಲೂ ಗಾಳಿಪಟ ಸ್ಪರ್ಧೆಯನ್ನು ಏರ್ಪಡಿಸುತ್ತಿದ್ದರು. ಔದ್‌ನ ನವಾಬರು ಇದನ್ನು ಪ್ರೋತ್ಸಾಹಿಸುತ್ತಿದ್ದರು. ಗಾಳಿಪಟವನ್ನು ಹಾರಿಸಲು ಭಾರತದಲ್ಲಿ ಉತ್ತಮ ಕಾಲಾವಧಿ ಎಂದರೆ, ಗುಜರಾತ್‌ನಲ್ಲಿ ಮಕರ ಸಂಕ್ರಮಣದಂದು, ಕರ್ನಾಟಕದ ಜುಲೈ–ಆಗಸ್ಟ್ ತಿಂಗಳುಗಳಲ್ಲಿ ಗಾಳಿಪಟವನ್ನು ವಿಶೇಷ ಉತ್ಸಹಾದಿಂದ ಹಾರಿಸುತ್ತಾರೆ. ಗಾಳಿಪಟ ಸ್ಪರ್ಧೆಗಳಲ್ಲಿ ಪಾಲ್ಗೊಂಡ ಆಟಗಾರರು ಗಾಳಿಪಟವನ್ನು ಹಾರಿಸಿ ತಮ್ಮ ಪಟದ ದಾರವನ್ನು ಎದುರಾಳಿ ಪಟದ ದಾರಕ್ಕೆ ಅಡ್ಡವಾಗಿಸಿ ದಾರಗಳನ್ನು ಕತ್ತರಿಸಲು ಪ್ರಯತ್ನಿಸುತ್ತಾರೆ.

ಶಿವಶರಣರ ವಚನಗಳಲ್ಲಿ ಗಾಳಿಪಟದ ಉಲ್ಲೇಖ ಕಂಡುಬರುತ್ತದೆ. ಮೆರೆ ಮಿಂಡಯ್ಯನ ವಚನಗಳಲ್ಲಿ ಗಾಳಿಪಟದ ಪ್ರಸ್ತಾಪವಿದೆ.

ವಾಯು ಪಟವಾಡುವಲ್ಲಿ
ಹಿಡಿದವನ ಕೈಯಲ್ಲಿ ನೂಲಸಿಕ್ಕ ಆಡುವಂತೆ
ತನ್ನಯ ಅರಿವು ಕುರುಹಿನಲ್ಲಿ ಸಿಕ್ಕಿ
ಎಡೆಬಿಡುವಿಲ್ಲ ದಾಡಬೇಕು[೨೬೦]

ಆಕಾಶದಲ್ಲಿ ಪಟವು ಆಟವಾಡಲು ಸಮತೋಲನವನ್ನುಂಟು ಮಾಡಲು ಬಾಲಂಗೋಸಿಯನ್ನು ಕಟ್ಟುತಿದ್ದರು ಇದಕ್ಕೆ ವಚನಗಳಲ್ಲಿ ಬಾಲಸರ ಎಂಬ ಹೆಸರಿದೆ.[೨೬೧] ಬಾಲಸರದಿಂದಲೇ ಗಾಳಿಯಲ್ಲಿ ಪಟವು ತೇಲಿದರೂ ಹಿಡಿದ ಸೂತ್ರ ತಪ್ಪಿದರೆ ಅದು ಆಡಲಾರದೆಂಬುದನ್ನು ವಚನದಲ್ಲಿ ವಿವರಿಸಲಾಗಿದೆ. ಗಾಳಿಪಟದ ನಿರ್ಮಾಣಕ್ಕೆ ಬೇಕಾಗುವ ವಸ್ತುಗಳ ಪ್ರಮುಖವಾಗಿ ಗಟ್ಟಿಯಾದ ದಾರ, ಕಾಗದ ತೆಗೆದುಕೊಂಡು ಸೂತ್ರದ ಮೂಲಕ ಗಾಳಿಪಟ ತಯಾರಿಸಬೇಕು ಸೂತ್ರ ತಪ್ಪಿದರೆ ಅದು ಅಡ್ಡಾದಿಡ್ಡಿ ಆಡುತ್ತದೆ. ಮೇಲೆ ಸರಿಯಾಗಿ ಏರುವುದಿಲ್ಲ. ಗಾಳಿಪಟವನ್ನು ಕೇವಲ ಮನರಂಜನೆಗಾಗಿ ಹಾರಿಸುತ್ತಿರಲಿಲ್ಲ ಪ್ರಾಚೀನ ಕಾಲದಲ್ಲಿ ಯುದ್ಧ ತಂತ್ರವಾಗಿಯೂ ಬಳಸಿಕೊಳ್ಳುತ್ತಿದ್ದರು ಗಿರಿದುರ್ಗಗಳನ್ನು ಏರಬೇಕಾದರೆ ಬಯಲಲ್ಲಿ ದೊಡ್ಡದಾದ ಗಾಳಿಪಟ ಮಾಡಿ ಒಬ್ಬ ವ್ಯಕ್ತಿ ಅದರಲ್ಲಿ ಹಾರಿಸುವಷ್ಟು ದೊಡ್ಡದು ಅದರ ಮೂಲಕ ಗಿರಿದುರ್ಗಗಳನ್ನು ಏರಿ ಸೈನಿಕರನ್ನು ಇಳಿಸುತ್ತಿದ್ದಿರಬಹುದು. ಗಾಳಿಪಟ ಹಾರಾಟಕ್ಕೆ ಪ್ರಾಚೀನ ಚೀನಾ ಪ್ರಖ್ಯಾತವಾಗಿತ್ತು ಅದು ಕೇವಲ ಮನರಂಜನೆಯಾಗಿರಲಿಲ್ಲ ನಿತ್ಯ ಜೀವನಕ್ಕೂ ಅವಶ್ಯಕವಾಗಿತ್ತು. ಗಾಳಿಪಟದಲ್ಲಿ ಪೆಟ್ಟಿಗೆ ಗಾಳಿಪಟಗಳ ಮೂಲಕ ದುರ್ಗಮ ಸ್ಥಳಗಳಿಗೆ ಆಹಾರ ಒದಗಿಸುತ್ತಿದ್ದರು ಹಾಗೂ ಇದರಲ್ಲಿ ಸೈನಿಕರನ್ನು ಮೇಲಕ್ಕೆ ಕಳುಹಿಸಿ ಅವರ ವೈರಿಯ ಕೋಟೆಯೊಳಕ್ಕೆ ಇಳಿಯುವಂತೆ ಮಾಡುತ್ತಿದ್ದರು.[೨೬೨]

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದರೆ ಗಾಳಿಪಟ ಕ್ರೀಡೆಯು ಕೇವಲ ವಿನೋದದ ಸಾಧನವಾಗಿರಲಿಲ್ಲ, ಅದು ನಿತ್ಯ ಜೀವನದಿಂದ ಯುದ್ಧ ತಂತ್ರದ ಪ್ರತಿರೂಪವಾಗಿ ಬೆಳೆದುಬಂದಿದೆ. ಮಕ್ಕಳಿಗೆ ಮನರಂಜನೆಯ ಸಾಧನವಾಗಿದೆ ಎಂಬುದನ್ನು ಗಮನಿಸಬಹುದು.

ನೀರಾಟ

ಸುತ್ತಮುತ್ತಣ ಪರಿಸರದ ಮೇಲೆ ತಮ್ಮ ಹಿಡಿತವನ್ನು ಸಾಧಿಸಲು ಒಡೆತನವನ್ನು ಸ್ಥಾಪಿಸಲು ಮಾನವ ನಡೆಸಿದ ನಿರಂತರ ಹೋರಾಟದಲ್ಲಿ ಸಂಘರ್ಷಕ್ಕೆ ಅಗತ್ಯವಾದ ಗುಣ ಕಲಿಕೆ ಅಗತ್ಯವಾಗಿದ್ದವು. ಈ ಹಂತದ ಮತ್ತೊಂದು ಗಮನಾರ್ಹ ಅಂಶವೆಂದರೆ ದಟ್ಟ ಪರಿಸರ, ಕಾಡು ಅಲ್ಲಿ ಹಿಂಡುಗಟ್ಟಿ ತಿರುಗುತ್ತಿದ್ದ ಕ್ರೂರ ಪಶು ಪ್ರಾಣಿಗಳು ಜಲಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ಕಾಲಾನಂತರದಲ್ಲಿ ಈಜು ಕಲಿತು ಮತ್ತು ಮೀನು ಹಿಡಿಯಲು ನೀರಿಗೆ ಇಳಿದು ಎಂಥ ರಭಸದ ಪ್ರವಾಹದಲ್ಲೂ ಈಜಿ ಪಾರಾಗಿ ಬರುವುದು. ಅಂಥ ಅನುಭವಗಳ ಹಿನ್ನೆಲೆಯಲ್ಲಿ ಈಜಾಟ ಮತ್ತು ಈಜಾಟಗಳ ಮೇಲಾಟವನ್ನು ಸಾಮಾನ್ಯವಾಗಿ ಕನ್ನಡದ ಅನೇಕ ಕವಿಗಳು ನೀರಾಟ, ಜಲಕ್ರೀಡೆಯ ಹತ್ತಾರು ಬಗೆಗಳ ಉಲ್ಲೇಖಗಳನ್ನು ದಾಖಲಿಸಿದ್ದಾರೆ.

ಅಂದಿನ ಜನ ಮೋಜು, ರಂಜನೆಗಾಗಿ ನೀರಾಟವಾಡಲಿಲ್ಲ ಆಗ ಅವರಿಗೆ ಬದುಕು ಎದುರಿಸುವ ಹೋರಾಡುತ್ತಾ ಜೀವನ ರೂಪಿಸುವುದೇ ಮುಖ್ಯವಾಗಿತ್ತು. ನದಿ, ಹಳ್ಳ, ಪ್ರವಾಹಗಳ ದಂಡೆಯಲ್ಲಿ ಹಟ್ಟಿ ಕಟ್ಟಿಕೊಂಡು ಬದುಕಬೇಕಾಗಿದ್ದ ಜನರಿಗೆ ಎಲ್ಲೆಂದರಲ್ಲಿ. ದುಮ್ಮಿಕ್ಕುತ್ತಿದ್ದ ಜಲಪಾತಗಳಿಂದ ರಕ್ಷಿಸಿಕೊಳ್ಳಲು ಮತ್ತು ಹೊಳೆ ಪ್ರವಾಹಗಳು, ಮುಳುಗಿ ಮೀನು ಸಂಗ್ರಹಿಸಲು ಈಜುವುದು ಕಡ್ಡಾಯವಾಗಿ ಕಲಿತು ಕೊಳ್ಳಬೇಕಾದ ಕ್ರಿಯೆಯಾಯಿತು. ಈ ರೀತಿ ದಿನ ಕಳೆದಂತೆ ನೀರಾಟ ಒಂದು ಮನರಂಜನೆಯ ಮಾಧ್ಯಮವಾಗಿ ಬೆಳೆಯಿತು. ವಿಜಯನಗರ ಕಾಲದಲ್ಲಿ ನೀರಾಟವನ್ನು ವ್ಯವಸ್ಥಿತವಾಗಿ ಆಡುತ್ತಿದ್ದ ಅನೇಕ ಪುರಾತತ್ವೀಯ ಮತ್ತು ಸಾಹಿತ್ಯಿಕ ದಾಖಲೆಗಳಿವೆ. ಕನಕದಾಸರ ಮೋಹನತರಂಗಿಣಿ, ಗಂಗಾದೇವಿಯ ಮಧುರಾ ವಿಜಯಂ ನಲ್ಲಿರುವಂತೆ

ಬನಬನದೆಡೆಯ ಭಾಸಿತಮಪ್ಪ ವನರಾಜ
ವನಗೊಳದೆಡೆಯ ಪೆರ್ದೊರೆಯ
ಮನಗೊಂಬ ನೀರಾಟದಿ ಹಸ್ತಿಹಯನರ
ಜನವಿದ್ದುದಿಳ ಪಡೆದಂತೆ[೨೩]

ಅಂದು ರಮ್ಯವಾದ ಕಾಡುಗಳ ಮಧ್ಯ ಆ ವನದದಲ್ಲಿ ಸರೋವರದಲ್ಲಿ ನೀರಾಟವಾಡುತ್ತಿದ್ದರು ಎಂದಿದೆ. ಇದು ಸಾಮಾನ್ಯ ಜನರ ನೀರಾಟವಾದರೆ. ವಿಜಯನಗರ ಅರಸರ ಕಾಲದಲ್ಲಿ ಅಂತಃಪುರದ ಅರಸ ಅರಸಿಯರ ನೀರಾಟದ ಕ್ರೀಡೆಯನ್ನು ಕಣ್ಣಾರೆ ಕಾಣುವ ಅವಕಾಶ ಜನಸಾಮಾನ್ಯರಿಗಿರಲಿಲ್ಲ. ಆದರೆ ಅಲ್ಲಿಯ ಕ್ರೀಡೆಕೊಳ ಮತ್ತು ವಿದೇಶಿ ಪ್ರವಾಸಿಗರ ವರದಿಗಳ ದಾಖಲೆಗಳಿಂದ ಅಂದು ನೀರಾಟದ ಕ್ರೀಡೆಯು ವಿನೋದದ ಸ್ಥಾನಗಳಲ್ಲಿ ಪ್ರಮುಖವಾಗಿತ್ತು ಎಂದು ತಿಳಿದುಬರುತ್ತದೆ. ಕಂಪಣನ ಅರಸಿ ಕವಯತ್ರಿ ಗಂಗಾದೇವಿಯ

ಮಧುರಾ ವಿಜಯಂನಲ್ಲಿ ಕೊಟ್ಟಿರುವ ನೀರಾಟದ ಕ್ರೀಡೆಯ ಚಿತ್ರವು ಅವಳು ಸ್ವತಃ ಅನುಭವದಿಂದ ಹೊರಹೊಮ್ಮಿದೆ. ಅಂದು ನೀರಾಟದ ಕ್ರೀಡೆಯನ್ನಾಡಲು ಪ್ರತ್ಯೇಕ ಕುಂಡ ನಿರ್ಮಿಸುತ್ತಿದ್ದರು.

ಕಮಲದಾದೋದ ಕಳಹಂಸಕುಲ ಕಳರವವು
ಕೈಗೆಯ್ದು ರನ್ನವಣಿ ಸೋಪಾನ ಪಂಕ್ತಿ
ಕೊಡಿರುವ ಕ್ರೀಡಾ ಸರೋವರಗಳಿತಿರುಮ್ಮ[೨೬೪]
ವಾಗಿದ್ದುವವು ವಿಜಯನಗರದಲ್ಲಿ
ಕ್ರೀಡಾ ಸರೋವರದಲವನಿಪತಿ ಕರತಲದಿ[೨೬೫]
ನೋಡಲು ಕಣ್ಗೆಸೆದವು ಚಂದ್ರಕಾಂತದ
ಕ್ರೀಡಾಕೂಳಗಳಲ್ಲಲ್ಲಿ
ಜೋಡಣೆಗೆಯ್ದು ಸುವರ್ಣ ಮಂಟಪದ ಕೈ
ವಾಡವನೇನ ಬಣ್ಣಿಪೇನು[೨೬೬]

ಈ ಎಲ್ಲಾ ದಾಖಲೆ ನೋಡಿದರೆ ಅಂದು ಅರಸ ಅರಸಿಯರಿಗಾಗಿ ಪ್ರತ್ಯೇಕವಾದ ಕ್ರೀಡಾ ಕೊಳಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು ಎಂಬುದು ಮನದಟ್ಟಾಗುವುದು.

ಹಂಪಿ ಪರಿಸರದಲ್ಲಿ ನೀರಾಟದ ಎರಡು ಪ್ರಭೇದಗಳನ್ನು ಸುಲಭವಾಗಿ ಗುರುತಿಸಬಹುದು. ಒಂದು ದೇವ ಪರಿವಾರಕ್ಕೆ ಸೇರಿದ್ದು, ಮತ್ತೊಂದು ರಾಜ ಪರಿವಾರಕ್ಕೆ ಸೇರಿದ್ದು ಕಲ್ಯಾಣಿ, ಕುಂಡ, ತೀರ್ಥ ಮೊದಲಾದವುಗಳಲ್ಲಿ ಮೊದಲನೆಯದನ್ನು ಆಚರಿಸಲಾಗುತ್ತಿತ್ತು. ಕೊಳ, ಕಟ್ಟೆ, ಸ್ನಾನಗೃಹ, ಕಾರಂಜಿ ಮಂಟಪ, ಜಲಮಹಲು ಮುಂತಾದವುಗಳಲ್ಲಿ ಎರಡನೆಯದನ್ನು ಆಡಲಾಗುತ್ತಿತ್ತು. ಇಲ್ಲಿ ಪ್ರಮುಖವಾಗಿ ಎರಡನೆಯ ಅಂಶವನ್ನು ಮಾತ್ರ ಪರಿಗಣನೆಗೆ ತೆಗೆದುಕೊಂಡು ಅಧ್ಯಯನ ಮಾಡಲಾಗಿದೆ.

ಕಲ್ಯಾಣಿ

ವಿರೂಪಾಕ್ಷ ದೇವಾಲಯದ ಮನ್ಮಥಕುಂಡವೆಂದು ಕರೆಯುವ ಕಲ್ಯಾಣಿಯನ್ನು ೫೩*೩೮ಮೀಟರ್ ವಿಸ್ತೀರ್ಣದಲ್ಲಿ ಕಟ್ಟಲಾಗಿದೆ. ಇದನ್ನು ಸರಿಗಟ್ಟುವ ಕಲ್ಯಾಣಿಗಳನ್ನು ಕೃಷ್ಣಾ ಮತ್ತು ಪಟ್ಟಾಭಿರಾಮ ದೇವಾಲಯಗಳ ರಥಬೀದಿಗಳಲ್ಲಿ ಕಾಣಬಹುದು. ವಿಜಯವಿಠಲ ರಥ ಬೀದಿಯ ಕಲ್ಯಾಣಿಯು ಇವೆಲ್ಲವುಗಳಿಗಿಂತ ದೊಡ್ಡದು ೬೦*೩೭ಮೀ. ಇದೆ. ತೆಪ್ಪೋತ್ಸವ, ದೀಪೋತ್ಸವ, ವಸಂತೋತ್ಸವ, ಕಲ್ಯಾಣೋತ್ಸವದಂತಹ ವಿಶೇಷ ಆಚರಣೆಗಳಲ್ಲಿ ಹಲವಾರು ವಿಧಿನಿಯಮಗಳನ್ನು ಇಲ್ಲಿ ಪೂರೈಸಿಕೊಳ್ಳಲಾಗುತ್ತಿತ್ತು. ತನ್ನ ಪರಿವಾರದೊಡಗೂಡಿ ಪ್ರಧಾನ ದೇವತೆಯು ಜಲವಿಹಾರ ಕೈಕೊಳ್ಳುವುದು ತೆಪ್ಪೋತ್ಸವದ ಪ್ರಧಾನ ಕಾರ್ಯವಾಗಿತ್ತು. ಅದರಂತೆ ಕಲ್ಯಾಣೋತ್ಸವದಲ್ಲಿ ದೇವತೆಗಳ ಸಂಭ್ರಮದ ಮದುವೆ, ವಸಂತೋತ್ಸವದಲ್ಲಿ ಓಕುಳಿ ಪ್ರಮುಖವಾಗಿದ್ದವು. ದೇವಕೊಳಗಳೆಂದೇ ಹೆಗ್ಗಳಿಕೆ ಪಡೆದಿದ್ದ ಈ ಜಲಕುಂಡಗಳ ಸುತ್ತ ಒಂದು ಬಗೆಯ ದೈವೀ ಪ್ರಭಾವಳಿ ಪಸರಿಸಿದ್ದು ನಿಜ. ಆದರೆ ಕಾಲಾನುಕ್ರಮದಲ್ಲಿ ಇವು ಆಯ್ದ ಕೆಲವು ವರ್ಗಗಳ ಸಾಮೂಹಿಕ ಇಲ್ಲವೆ ವ್ಯಕ್ತಿಗೆ ಸ್ನಾನಕೊಳಗಳಾಗಿ ಪರಿವರ್ತನೆಗೊಂಡವು ದೇವತೆಗಳ ಕಾರ್ಯಗಳನ್ನು ನೆರವೇರಿಸುವಾಗ ಅರಸರಾದಿಯಾಗಿ ಜನಸಾಮಾನ್ಯರೂ ಪಾಲ್ಗೊಂಡು

ವಿಜೃಂಭಣೆಯಿಂದ ಮೇಲಿನ ಎಲ್ಲಾ ವಿಧಿವಿಧಾನಗಳನ್ನು ಪೂರೈಸುತ್ತಿದ್ದರು. ವಿಶಿಷ್ಠ ವಿನ್ಯಾಸ ಹೊಂದಿರುವ ಅತ್ಯಂತ ಸುಂದರ ಪುಷ್ಕರಣಿಯೊಂದು ದರಬಾರು ಆವರಣದಲ್ಲಿದೆ. ಬಹುಕಾಲ ಭೂ ಗರ್ಭದಲ್ಲಿ ಅಡಗಿದ್ದ ಈ ಕೊಳವನ್ನು ೧೯೮೮ ರಲ್ಲಿ ಬೆಳಕಿಗೆ ತಂದು ಸ್ವಚ್ಛಗೊಳಿಸಿದ ನಂತರ ಅರಮನೆಯ ಆವರಣದ ಅವಶೇಷಗಳಲ್ಲಿ ಅದೊಂದು ವಿಶಿಷ್ಠ ಬಗೆಯಲ್ಲಿ ಕಂಗೊಳಿಸುತ್ತಿದೆ. ಇದರ ಸುತ್ತಮುತ್ತಲ ಕಟ್ಟಡಗಳೆಲ್ಲವೂ ಮರಳು ಶಿಲೆಯಲ್ಲಿದ್ದರೆ ಇದು ನಾರುಗಲ್ಲಿನ ಶಿಲೆಯಲ್ಲಿದೆ. ಇಲ್ಲಿಯ ಜಗಲಿಗಳು ಅರಸಿಯರ ಜಘನಾಸನಗಳಾಗಿದ್ದವು. ಅಂತಃಪುರದ ಅಪಾರ ಸಂಖ್ಯೆಯ ಸೊಗಸುಗಾರ್ತಿಯರೆಲ್ಲರಿಗೂ ಸಮಸ್ಥಾನ ದೊರಕಿಸಿ ಕೊಡಲು ಈ ವೇದಿಕೆಗಳು ಒಂದೇ ಬಗೆಯಲ್ಲಿ ಒಂದೇ ಎತ್ತರದಲ್ಲಿ ನಿರ್ಮಾಣ ಮಾಡಿದಂತೆ ತೋರುತ್ತದೆ. ನಾಲ್ಕು ದಿಕ್ಕಿನಲ್ಲಿರುವ ದೊಡ್ಡ ಪ್ರಮಾಣದ ಕೇಂದ್ರ ವೇದಿಕೆಗಳನ್ನು ಪಟ್ಟದರಸಿಯರು, ಪಿರಿಯರಸಿಯರು, ಪ್ರಾಣವಲ್ಲಭೆಯರಿಗಾಗಿ ರಚಿಸಿರಲು ಸಾಧ್ಯ. ಕೃಷ್ಣದೇವರಾಯ ತನ್ನ ಪ್ರಧಾನ ಅರಸಿಯರೆಲ್ಲರಿಗೂ ಸಮಾನ ಅಂತಸ್ತು, ಸಂಪತ್ತು ಒದಗಿಸಿಕೊಟ್ಟು ಅವರಲ್ಲಿ ಕೀಳರಿಮೆ ಉಂಟಾಗದಂತೆ ನೋಡಿಕೊಂಡಿದ್ದನೆಂಬ ವಿದೇಶಿಯಾತ್ರಿಕನ ಮಾತನ್ನು ನೆನಪಿಸಿಕೊಳ್ಳಬಹುದು. ಸ್ಥಾನ ಪ್ರಜ್ಞೆಯ ಬಗ್ಗೆ ಅತ್ಯಂತ ಜಾಗೃತರಾಗಿದ್ದ ಅಂತಃಪುರದ ಪರಿವಾರವನ್ನು ಗಮನದಲ್ಲಿಟ್ಟುಕೊಂಡು ಈ ಕುಂಡವನ್ನು ನಿರ್ಮಾಣ ಮಾಡಲಾಗಿದ್ದರೆ ಆಶ್ಚರ್ಯವೇನೂ ಇಲ್ಲ.[೨೭] ಏಳು ಮೀಟರ್ ಆಳದ ಈ ಕೊಳದ ಜಲ ಪ್ರಮಾಣವನ್ನು ಯಾವಾಗಲೂ ಒಂದೇ ಮಟ್ಟದಲ್ಲಿ ನಿರ್ಬಂಧಿಸಿಡಲು ಮುನ್ನೆಚ್ಚರಿಕೆ ಕೈಗೊಳ್ಳಲಾಗಿತ್ತು. ಈ ಆವರಣದ ಎಲ್ಲಾ ಜಲ ಸಂಗ್ರಹಗಳಿಗೆ ನೀರುಣಿಸುತ್ತಿದ್ದ ನಾಲೇಯೇ ಈ ಪುಷ್ಕರಣಿಗೂ ನೀರನ್ನು ಸರಬರಾಜು ಮಾಡುತ್ತಿತ್ತು.

ಈ ಕೊಳದಲ್ಲಿ ನಡೆಯುತ್ತಿದ್ದ ನೀರಾಟದ ಪ್ರತ್ಯಕ್ಷ ವರದಿಯು ನಮಗೆ ದೊರಕದೆ ಕಾರಣ ಊಹಿಸಿಕೊಳ್ಳಲು ಸಾಧ್ಯವಿದೆ. ಆವರಣದ ಒಳಗಿರುವ ಈ ಸುಂದರ ಹಾಗೂ ಸುಭದ್ರ ಕಟ್ಟೆ ಸಾಮಾನ್ಯರಿಗೆ ತೆರೆದಿರಲಿಲ್ಲ ಎಂಬುದನ್ನು ಸುಲಭವಾಗಿ ಗ್ರಹಿಸಬಹುದು. ಬಾರ್ಬೋಸ ಗಮನಿಸಿದಂತೆ ಇದು ಅರಸಿಯರ ಸ್ನಾನ ಕೊಳಗಳಲ್ಲಿ ಒಂದಾಗಿರಬೇಕು. ಇಲ್ಲಿಯ ಒಂದೊಂದು ಪೀಠದಲ್ಲಿ ಒಬ್ಬಳು ವಿಶ್ರಮಿಸಿ ನೂರಕ್ಕೂ ಹೆಚ್ಚು ಅರಸಿಯರು ಓಕುಳಿಯಾಡಲು ಅನುವು ದೊರಕುತ್ತಿತ್ತು. ನೂರಾರು ಅರಸಿಯರು ಒಂದೆಡೆ ಸೇರಿ ಕ್ರೀಡಿಸುವ ವಸಂತೋತ್ಸವದ ಓಕುಳಿಯ ಆಟಕ್ಕೆ ಇದು ಹೇಳಿ ಮಾಡಿಸಿದಂತಿದೆ. ಅಂದು ಅರಸರು ಅರಸಿಯರೊಡನೆ ನೀರಿನಾಟವಾಡಲು ಅತ್ಯಂತ ಉತ್ಸುಕನಾಗಿರುತ್ತಿದ್ದರು. ಒಂದಿಲ್ಲೊಂದು ನೆಪವೊಡ್ಡಿ ಅರಸನನ್ನು ಆಲಂಗಿಸುವ ತವಕ, ಹೇಗಾದರೂ ಮಾಡಿ ತಮ್ಮ ಸುಂದರ ದೇಹದೆಡೆ ಅವನ ಗಮನ ಸೆಳೆಯುವ ಆತುರ ಅರಸಿಯರಿಗಿರುತ್ತಿತ್ತು. ಇದನ್ನು ಸಾಧಿಸಲು ಅವರು ಬಳಸುತ್ತಿದ್ದ ತಂತ್ರಗಳಾದರೂ ತುಂಬಾ ವೈವಿಧ್ಯಮಯವಾಗಿದ್ದವು. ಅಂತಹ ಒಂದು ತಂತ್ರವನ್ನು ಇಲ್ಲಿ ನೋಡಬಹುದು.

ಸಲಿಲಾವಗಾಹದಲಿ ಲೀಲೆಯಿಂ ಪ್ರಣಯನಿಯ
ತೋರದೊಡೆ ಮೊದಲು ಮೆಲ್ಲಗೆ ನೀವಿದಾಗ
ಮೀನು ಕೆದುಕಿದುದೆಂದು ಭಯಗೊಂಡು ತಬ್ಬಿದಳು
ಪ್ರಿಯಕರನ ನೋಡುತಿರೆ ಸವತಿಯರ ಒಳಗೆ[೨೮]

ಕೊಳದಲ್ಲಿ ತನ್ನನ್ನು ಸುತ್ತವರಿದು ನಿಂತ ಅರಸಿಯರೆಡೆ ನೀರು ಚಿಮ್ಮುತ್ತಾ ತೆರೆಯ ಮರೆಯಲ್ಲಿ ಒಬ್ಬಳ ಮೇಲ್ದೊಡೆಯನ್ನು ಅರಸನು ಚಿವುಟಿದಾಗ ಅದು ಯಾರ ಉಗುರಾಟವೆಂಬುದನ್ನು ಅರಿತಿದ್ದರೂ ಮತ್ಸ್ಯಾಘಾತಕ್ಕೊಳಗಾದವಳಂತೆ ನಟಿಸಿ ಅಪಾಯದಿಂದ ಪಾರಾಗಲು ರಕ್ಷಣೆ ಬೇಡುವಳೇನೋ ಎಂಬಂತೆ ಅವಳು ಅರಸನೆಡೆ ನೆಗೆದು ಸುತ್ತಲಿದ್ದ ಅರಸಿಯರ ಕಿಸಿದ ಕಣ್ನೋಟವನ್ನು ಕಡೆಗಾಣಿಸಿ ತನ್ನ ಬಾಹುಬಂಧನದಲ್ಲಿ ಅವನನ್ನು ಬಿಗಿದಪ್ಪಿ ಗಾಢಆಲಿಂಗನದ ಸುಖವನ್ನು ಕ್ಷಣಕಾಲ ಸವಿಯುವ ಒಂದು ಚಿತ್ರವನ್ನು ಗಂಗಾದೇವಿ ಕೊಟ್ಟಿರುವಳು

ಮುಖಕೆ ನೀರೋತ್ತುವುದು ತಡೆಯಲಿವಸರದಿಂದ
ತನ್ನ ಕೂದಲ ಹರಡಿ ಮುಸುಕಿಟ್ಟಳು
ನೀಡು ನೋಟದಲಿ ನೃಪತಿ ಭಾವಿಸುತ ನೋಡಿದನು
ಮೀನು ಕೇತನ ಖಡ್ಗಫಲಕವೆಂದದನು[೧೧೯]

ಈ ಬಗೆಯ ಮಧುರ ಯಾತನೆಯನ್ನು ಅನುಭವಿಸಲು ಅರಸಿಯರು ಸ್ಪರ್ಧಿಸುತ್ತಿದ್ದರೆಂದು ತೋರುವುದು. ತನ್ನ ಕೇಶರಾಶಿಯ ಕಟ್ಟುಸಡಿಲಿಸಿ ಅರಸನ ಗಮನ ಸೆಳೆಯಲು ಹವಣಿಸಿದ ಮತ್ತೊಬ್ಬಳು ಜಲೋತ್ಸರ್ಜನಾ ಘಾತದಿಂದ ತಪ್ಪಿಸಿಕೊಳ್ಳಲೇನೊ ಎಂಬಂತೆ ತಲೆಯನ್ನು ಜಲಕ್ಕನೆ ಕೊಡುವುತ್ತಾ ಮುಡಿಯನ್ನು ಸಡಿಲಿಸಿ ತನ್ನ ಚೆಲುವನ್ನು ಮೆರೆದ ಚಿತ್ರಣ ಕವಯಿತ್ರಿ ಒದಗಿಸಿರುವಳು.

ಅರಮನೆಯ ಆವರಣದಲ್ಲಿ ಅನೇಕ ಜಲಕುಂಡಗಳಿದ್ದವು. ಆದರೆ ಈ ನೀರಾಟದ ಸೌಭಾಗ್ಯವು ಎಲ್ಲಾ ರಾಣಿಯರಿಗೂ ಲಭ್ಯವಾಗುತ್ತಿರಲಿಲ್ಲ. ಅಂತಹ ಅಪರೂಪದ ಅವಕಾಶ ದೊರೆತಾಗ ಅರಸನ ಗಮನವನ್ನು ಪೂರ್ಣ ಸೆಳೆದುಕೊಳ್ಳಲು ಅವರು ಪೈಪೋಟಿಗಿಳಿಯುವುದು ಅನಿವಾರ್ಯವಾಗಿತ್ತು. ಅರಸನ ಒಲವನ್ನು ಗಳಿಸಿಕೊಳ್ಳಲು ಅವರು ಅಷ್ಟೊಂದು ಮತ್ಸರದಿಂದ ಸ್ಪರ್ಧಿಸುತ್ತಿದ್ದರೆಂದರೆ ಹಲವರು ತಮ್ಮ ಸವತಿಯರನ್ನು ಕೊಲ್ಲಲು ಹೇಸುತ್ತಿರಲಿಲ್ಲ, ನಿರಾಶೆಗೊಂಡ ಇನ್ನೂ ಕೆಲವರು ಆತ್ಮಹತ್ಯೆ ಮಾಡಿಕೊಳ್ಳಲು ಹಿಂಜರಿಯುತ್ತಿರಲಿಲ್ಲ ಎಂದು ವಿದೇಶಿ ಯಾತ್ರಿಕ ಬಾರ್ಬೋಸಾ ಕೇಳಿ ತಿಳಿದಿದ್ದನು.[೧೨೦] ಅಂದು ಅರಸ ಅರಸಿಯರು ತುಂಬಾ ಸಂತೋಷ ಸಂಭ್ರಮದಿಂದ ನೀರಾಟವನ್ನಾಡುತ್ತಿದ್ದರೆ ಆ ಕೊಳಗಳಲ್ಲಿ ಬಣ್ಣಬಣ್ಣ ಓಕುಳಿ ಹೂಗಳನ್ನು ಹಾಕಿರುತ್ತಿದ್ದರು. ಹಿಮರುಚಿಕಾಂಸತ್ಕ್ರೀಡಾ ಕೊಳದಿ ಕುಂಕುಮದಲುರ್ತಳಿದೊಡಗಲಗೆ[೧೨೧] ಇದರಿಂದ ತಿಳಿಯುತ್ತದೆ ಅಂದಿನ ಕೊಳಗಳು ಯಾವ ರೀತಿ ರಾರಾಜಿಸುತ್ತಿದ್ದವು ಎಂದು ನೀರನ್ನು ಬಿಟ್ಟಿರಲಪ್ಪದೆ ಮತ್ಸ್ಯಾವತಾರ ನೀನೆಂದು ನೀರೆಯರು ರಾರಾಜಿಸುತಿಪ್ಪ ಕುಂಕುಮ ಜಲದೊಳು[೧೨೨] ಅಂದರೆ ಅರಸನನ್ನು ಮೀನಿಗೆ ಹೊಲಿಸಿ ಮೀನು ಯಾವ ರೀತಿ ನೀರನ್ನು ಬಿಟ್ಟಿರುವುದಿಲ್ಲವೋ ಅದೇ ರೀತಿ ನೀನು ಎಂದು ಅರಸನೊಂದಿಗೆ ಆ ಓಕುಳಿ ಕಲೆಸಿದ ಕುಂಡಲದಲ್ಲಿ ಸಂಭ್ರಮಿಸುತ್ತಿದ್ದರು.

ದರಬಾರು ಆವರಣದ ಪಶ್ಚಿಮ ಗೋಡೆಯಾಚೆ ಒಂದು ಅಷ್ಟಮುಖ ಕಾರಂಜಿ ಮಂಟಪವಿದೆ. ಪ್ರಮಾಣದಲ್ಲಿ ಚಿಕ್ಕದಾಗಿದ್ದು ಹೊರನೋಟಕ್ಕೆ ಸರಳವಾಗಿರುವ ಈ ಕಟ್ಟಡ

ಭದ್ರ ತಳಪಾಯ ಹೊಂದಿದ್ದು. ಪ್ರಸ್ತುತ ಅಲ್ಲಲ್ಲಿ ಛಿದ್ರಗೊಂಡಿದೆ. ಕುಂಡವನ್ನು ಸುತ್ತುವರಿದ ಗಚ್ಚುಗೋಡೆಯ ಎಂಟು ಕಮಾನುಗಳ ಚಾವಣಿಯಿದೆ. ತೊಟ್ಟಿಯ ಮೇಲೆ ಗುಮ್ಮಟವೂ ಇದೆ. ಕಾರಂಜಿಯನ್ನು ಕಲ್ಲಿನಲ್ಲಿ ಮಾಡಿದ್ದರೂ ಇಟ್ಟಿಗೆ ಹಾಗೂ ಗಚ್ಚನ್ನು ಬಳಸಲಾಗಿದೆ. ಸುಟ್ಟ ಮಣ್ಣಿನ ಕೊಳವೆಯ ಮೂಲಕ ದರಬಾರು ಆವರಣದಿಂದ ಇದಕ್ಕೆ ನೀರನ್ನು ತರಲಾಗುತ್ತಿತ್ತು. ಕಾರಂಜಿ ಕುಂಡದಲ್ಲಿ ಕುಳಿತು ಸರಸವಾಡಲು, ಓಕುಳಿ ಎರಚಲು, ಇದೊಂದು ತಕ್ಕ ಮಂಟಪವಾಗಿತ್ತು. ಇಲ್ಲಿರುವ ಕಮಾನು ಛಾವಣಿಯಲ್ಲಿ ವಿಶ್ರಮಿಸಿ ಅರಸಿಯರು ಅರಸನೊಡನೆ ವಿಲಾಸದ ರಸವಿಮಿಷಗಳನ್ನು ಹಂಚಿಕೊಳ್ಳುತ್ತಿದ್ದರೇನೋ ಎಂಬ ಭಾವನೆ ಬರುವುದು ಸ್ನಾನಕ್ಕಿಂತ ಮನರಂಜನೆಗೆ ಇಲ್ಲಿ ಹೆಚ್ಚು ಒತ್ತು ಕೊಟ್ಟಿರುವುದು ಸ್ಪಷ್ಟ.

ಹಂಪಿ ಪರಿಸರದಲ್ಲಿ ಜಲಸಂಗ್ರಹ ಕಟ್ಟಡಗಳಿಗಿಂತ ಭಿನ್ನವೂ, ವಿಶಿಷ್ಟವೂ ಆದ ಒಂದು ಜಲಮನೆ ಕಮಲ ಮಹಲ್ ಆವರಣದಲ್ಲಿದೆ. ಇಲ್ಲಿ ಒಂದು ಛಿದ್ರ ಆಯತಾಕಾರದ ಒಂದು ಬೃಹತ್ ಕೋಟೆಗೋಡೆ ಇವನ್ನೆಲ್ಲಾ ಸುತ್ತುವರೆದಿದೆ. ಹೀಗೆ ಅರಮನೆ ಹಾಗೂ ಕಮಲ ಮಹಲಿನ ಪರಿಸರದಲ್ಲಿರುವ ಜಲಮನೆಯ ಮಹತ್ವವನ್ನು ಸುಲಭವಾಗಿ ಗ್ರಹಿಸಬಹುದು. ಆವರಣದ ನೈರುತ್ಯ ಪ್ರದೇಶದಲ್ಲಿರುವ ಆಯತಾಕಾರದ ಜಲಮನೆ ಕಲ್ಲು, ಇಟ್ಟಿಗೆ, ಗಾರೆಯಿಂದ ನಿರ್ಮಿಸಲ್ಪಟ್ಟಿರುವ ಒಂದು ಸುಂದರ ಸೌಧ ಮಾಯವಾಗಿರುವ ಈ ಸೌಧದ ಅಡಿಪಾಯ ಮಾತ್ರ ನಮಗಿಂದು ಲಭ್ಯವಿರುವುದು ಕುಂಡದ ಮಧ್ಯದಲ್ಲಿರುವ ಈ ಮಹಲನ್ನು ಪ್ರವೇಶಿಸಲು ದಕ್ಷಿಣ ದಿಕ್ಕಿನಲ್ಲಿದ್ದ ಚಿಕ್ಕ ಸೇತುವೆಯೊಂದನ್ನು ಬಳಸಬೇಕಾಗುತ್ತಿತ್ತು. ನೆಲಮಟ್ಟದಿಂದ ಕುಂಡಕ್ಕಿಳಿಯಲು ಪೂರ್ವ ಹಾಗೂ ದಕ್ಷಿಣ ದಿಕ್ಕಿನ ಸೋಪಾನ ಮಾರ್ಗಗಳನ್ನು ಮತ್ತು ಮಹಲಿನಿಂದ ಕುಂಡಕ್ಕಿಳಿಯಲು ಪೂರ್ವ ದಿಕ್ಕಿನ ಸೋಪಾನ ಮಾರ್ಗವನ್ನು ಬಳಸಬೇಕಾಗುತ್ತಿತ್ತು. ಇದೊಂದು ಜಲಮಹಲಾಗಿತ್ತೆಂಬುದನ್ನ ಸ್ಪಷ್ಟಪಡಿಸಲೆಂಬಂತೆ ವೇದಿಕೆಯ ಹೊರ ಮೈಯಲ್ಲಿ ಜಲಚರ ಪ್ರಾಣಿಗಳ ಗಾರೆಯ ಚಿತ್ರಗಳಿವೆ. ಇದಕ್ಕೆ ದಕ್ಷಿಣದಲ್ಲಿರುವ ಬಾವಿಯ ನೀರು ಹರಿಸಿ ಕುಂಡವನ್ನು ತುಂಬಿಸಲಾಗುತ್ತಿತ್ತು. ಸೊಗಸಾದ ಅರಮನೆ, ಜಲಮನೆ, ಆರಾಮ ಮನೆಯ ಈ ಸಮುಚ್ಚಯವು ಅವಶ್ಯಕವಾಗಿ ಅಂತಃಪುರ ನಿವಾಸಿಗಳ ಪ್ರಧಾನ ಮನರಂಜನಾ ಕೇಂದ್ರವಾಗಿರಲು ಸಾಧ್ಯ. ಇದನ್ನು ಸುತ್ತುವರಿದು ಭದ್ರಕೋಟೆ ಪ್ರದೇಶವನ್ನು ನಿಯಂತ್ರಿಸುವ ಕಿರು ದ್ವಾರ ಮತ್ತು ಅತಿ ಎತ್ತರದ ಎರಡು ಕಾವಲು ಗೋಪುರಗಳನ್ನು ಗಮನಿಸಿದರೆ, ಇದು ಪಟ್ಟದರಸಿಯರ ಅಥವಾ ಪ್ರಿಯವಲ್ಲಭೆಯರ ವಿಶೇಷ ಮೈದಾನವೋ ವಿಹಾರದಂಗಳವೋ ಆಗಿರಬೇಕೆಂದಿನಿಸುವುದು. ಅರಮನೆ ಕುಂಡದಲ್ಲಿ ಕ್ರೀಡಿಸಿ ಆರಾಮ ಮಹಲಿನಲ್ಲಿ ವಿಶ್ರಮಿಸಿ ಆವರಣದಲ್ಲಿ ಹಾಡಿ, ಆಡಿ, ತಂಗಿ, ತಿಂದು ತಮ್ಮ ಅಂತಃಪುರಗಳಿಗೆ ಅರಸಿಯರೂ ಅವರ ಪರಿವಾರದವರೂ ತೆರಳುತ್ತಿರಬೇಕು. ಇದನ್ನು ನಂಬಬಹುದಾದರೆ ಈಗ ಶಸ್ತ್ರಗೃಹವೆಂದು ಗುರುತಿಸಲಾಗಿರುವ ಒಂದು ಸರಳ ಕಟ್ಟಡವು ಅಂದು ಪಾಕಶಾಲೆಯಾಗಿತ್ತೆನ್ನಲೂಬಹುದು. ಇಂತಹ ಸಂಕೀರ್ಣಗಳನ್ನು ಮಹಿಳಾದಳ ರಕ್ಷಿಸುತ್ತಿತ್ತೆಂಬ ಅಭಿಮತವಿದೆ.[೨೭] ರಕ್ಷಣೆಯ ಜೊತೆಗೆ, ಪಾನ, ಪಾಕ, ತಾಂಬೂಲ,

ಮುಂತಾದವುಗಳನ್ನು ಪೂರೈಸಿಕೊಡುತ್ತಿದ್ದ ಸ್ತ್ರೀ ಹೊರೆಯೊಳುಗಳೂ ಅಲ್ಲಿ ಇದ್ದಿರಲು ಸಾಧ್ಯ. ಇದು ಏನೇ ಇರಲಿ ಈ ನಿವೇಶನ ನೀರಾಟದ ಅದಮ್ಯ, ಅದ್ಭುತ ಕೇಂದ್ರವೂ ಅಪೂರ್ವ ಬಗೆಯ ಸುಖಸಂತಸ ಭೋಗದಂಗಳವೂ ಆಗಿತ್ತೆನ್ನವುದರಲ್ಲಿ ಅನುಮಾನವಿಲ್ಲ.

ಮತ್ತೊಂದು ಪ್ರಮುಖ ಜಲಕುಂಡ ರಾಣಿಯರ ಸ್ನಾನಗೃಹ. ಈ ಕಟ್ಟಡವು ರಾಣಿಯರ ಸ್ನಾನಗೃಹವಾಗಿತ್ತೆನ್ನಲು ದಾಖಲೆಗಳಿಲ್ಲವೆಂಬ ತಕರಾರಿದ್ದರೂ ಎಲ್ಲಾ ದೃಷ್ಟಿಯಿಂದಲೂ ಇದು ಅರಸಿಯರ ಒಂದು ನೀರಾಟದ ಸೌಧವಾಗಿತ್ತೆನ್ನಲು ವಾಸ್ತುಪ್ರಮಾಣಗಳು ಸಾಕ್ಷಿ ಒದಗಿಸುವವು. ಇದರ ಹೊರ ಪರಿಸರ ನಿರಾಶಾದಾಯಕವಾಗಿದೆ. ಆದರೆ ಒಳಾಂಗಣ ತನ್ನ ಮೂಲ ಭವ್ಯತೆಯನ್ನು ಸ್ಥೂಲವಾಗಿ ಉಳಿಸಿಕೊಂಡಿದೆ. ಆಳವಾದ ತೊಟ್ಟಿ ಮನಮೋಹಕವಾದ ಚಾಚುಪೀಠಗಳು, ಸುತ್ತುವರಿದ ಕಮಾನು ಛಾವಣಿ, ಮಾಳಿಗೆಗೆ ಕೊಂಡೊಯ್ಯುವ ಸೋಪಾನ ಮಾರ್ಗ ನಾಲ್ಕೂ ದಿಕ್ಕಿನಲ್ಲಿರುವ ಕಮಾನು ದ್ವಾರಗಳ ಲತಾ ಪುಷ್ಪಲಂಕಾರದ ಗಚ್ಚುಗಾರೆಯ ಅಚ್ಚೊತ್ತುಗಳು, ಆಳವಾದ ಛಾವಣಿಯ ಮೇಲ್ಛತ್ತು, ಮಟ್ಟಸಾಗಿ ಮಾಡಿದ ಚಾಚುಪೀಠದ ಕಮಾನು ಗೂಡುಗಳು ಈ ಕಟ್ಟಡದ ವಿಶೇಷತೆಗಳಾಗಿವೆ. ಪ್ರಾಣಾಲಿಯ ಮೂಲಕ ತೊಟ್ಟಿ ಸೇರುತ್ತಿದ್ದ ನೀರು ಮಲೀನಗೊಂಡಾಗ ದಕ್ಷಿಣದಿಕ್ಕಿನಲ್ಲಿಯ ಜಲಪ್ರತ್ತೇಯಗಳಿಂದ ಹೊರ ಹಾಕಲ್ಪಡುತ್ತಿತ್ತು. ಒಂದು ಪ್ರತ್ಯೇಕ ಕೊಳವೆಯಿಂದ ತಿಳಿನೀರು ತರಲು ಮತ್ತೊಂದು ಕೊಳವೆಯಿಂದ ರಾಡಿ ನೀರು ಹೊರಹಾಕಲು ಮಾಡಿದ ಏರ್ಪಾಟು ಇಲ್ಲಿ ಎದ್ದು ಕಾಣುವ ತಾಂತ್ರಿಕ ವಿಶೇಷತೆ. ನೀರಿನ ಒತ್ತಡದಿಂದ ತನ್ನಷ್ಟಕ್ಕೆ ತಾನೇ ಕೊಳವೆಯ ಬಾಯಿ ಮುಚ್ಚಿ ಕೊಳ್ಳುವಂತಿದ್ದ ವ್ಯವಸ್ಥೆ ಮತ್ತೊಂದು ವಿಶೇಷತೆ.

ಕಿರು ಕಾಲುವೆಯೊಂದು ಈ ಮಹಲನ್ನು ಸುತ್ತುವರೆದಿದೆ. ಸ್ನಾನ ಕುಂಡಕ್ಕೆ ನೀರು ಸರಬರಾಜು ಮಾಡಲು ಹಾಗೂ ಕಟ್ಟಡವನ್ನು ತಂಪಾಗಿಡಲು ಈ ಕಾಲುವೆ ಬಳಸಲಾಗುತ್ತಿತ್ತು. ಬಯಲಿನಿಂದ ಬೀಸಿನುಗ್ಗುವ ಬಿಸಿಗಾಳಿ ಇಪ್ಪತ್ತುನಾಲ್ಕು ಕಮಾನುಗಳ ಒಳಾಂಗಣವನ್ನು ದಾಟುವುದರೊಳಗಾಗಿ ಸಾಕಷ್ಟು ತಂಪನ್ನು ಸಂಪಾದಿಸಿಕೊಳ್ಳುತ್ತಿತ್ತೆಂದು ಕಾಣುವುದು. ಸ್ನಾನ ತೊಟ್ಟಿಯ ಭುವನೇಶ್ವರಿ ತೆರೆದುಕೊಂಡಿರುವುದರಿಂದ ಹಗಲಿನಲ್ಲಿ ರವಿರಶ್ಮಿ ಇರುಳಿನಲ್ಲಿ ಚಂದ್ರಚುಕ್ಕಿಗಳಲ್ಲಿ ತಂಪು ಕಿರಣ ಇದರೊಳಗೆ ಪ್ರವೇಶಿಸಲು ಸಾಧ್ಯವಾಗುತ್ತಿತ್ತು.

ಈ ಮೇಲಿನ ಎಲ್ಲಾ ವೈವಿಧ್ಯಮಯ ಜಲಕಟ್ಟಡಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇವುಗಳೆಲ್ಲ ಮನರಂಜನಾ ಕೇಂದ್ರಗಳಾಗಿ ಅರಸ-ಅರಸಿಯರನ್ನು ಆಕರ್ಷಿಸುವ ವಿಶೇಷ ಕುಂಡಗಳಾಗಿದ್ದವು.

ಈ ಎಲ್ಲಾ ಕಟ್ಟಡಗಳು ರಾಜಾಂಗಣದಲ್ಲಿದ್ದ ಕಣ್ಮನ ಸೆಳೆಯುವ ಕ್ರೀಡಾಕೊಳಗಳಾಗಿದ್ದವು ಇವು ಕೈಸಾಲೆ, ಮಂಟಪ, ಹಾಗೂ ಜಾರಣಗಳ ಮಧ್ಯ ಮಧ್ಯ ನಿರ್ಮಾಣಗೊಂಡಿದ್ದವು. ಇಂತಹ ಕೊಳಗಳನ್ನು ಅರಸಿಯರು ಹೊಕ್ಕಾಗ ಮನಸ್ಸು ಸೂರೆಗೊಂಡು ರಂಗಿನಾಟವಾಡಲು ಕೊಳಕ್ಕಿಳಿಯುತ್ತಿದ್ದರು. ಈ ವ್ಯವಸ್ಥೆ ಅರಸು ಮನತನದವರಿಗೆ ಮಾತ್ರ ಸೀಮಿತವಾಗಿತ್ತೆನಿಸುತ್ತದೆ. 'ಸಾಮಾನ್ಯರು ಈ ರೀತಿಯ ವ್ಯವಸ್ಥೆ ಪಡೆದಿರುತ್ತಿರಲಿಲ್ಲ

ಕುದುರೆ ಓಟ

ವಿಜಯನಗರ ಅವಧಿಯಲ್ಲಿ ಕುದುರೆ ಓಟದ ಪಂದ್ಯಗಳು ಸಾಕಷ್ಟು ನಡೆಯುತ್ತಿದ್ದವು. ಅದರ ಬಗ್ಗೆ ಅರಸರು ತುಂಬಾ ಆಸಕ್ತರಾಗಿದ್ದರು. ರಾಜಧಾನಿಯಲ್ಲಿ ಕುದುರೆ ಓಟಕ್ಕೆ ಹಾದಿ ನಿರ್ಮಿಸಿದ್ದರ ಬಗ್ಗೆ ದಾಖಲೆಯಿದೆ. ಈ ಹಾದಿಯನ್ನು ಸಂಪರ್ಕಿಸುವ ನಗರದ ಒಂದು ದ್ವಾರವನ್ನು ಹಸ್ತಿನಖ ಎಂದು ಕರೆಯಲಾಗುತ್ತಿತ್ತು.[೨೭೪] ಅಂದು ಅರಸರು ಸ್ವಂತ ಬಳಕೆಗೆ ವಿಶೇಷ ಕುದುರೆಯನ್ನು ಹೊಂದಿದ್ದರು. ಉತ್ತಮ ತಳಿಯ ಇದನ್ನು ಆಜ್ಞೆಯ[೨೭೫] ಎನ್ನಲಾಗುತ್ತಿದ್ದು ಅದರ ಬಾಯಿಗೆ ಬಂಗಾರದ ಕಡಿವಾಣ ತೊಡಿಸಲಾಗುತ್ತಿತ್ತು. ಅರಸರಾದಿಯಾಗಿ, ಯುವರಾಜ, ಮಾಂಡಲಿಕರು ಕುದುರೆ ಓಟದ ಪಂದ್ಯಗಳಲ್ಲಿ ಭಾಗವಹಿಸಿ ತಮ್ಮ ನೈಪುಣ್ಯತೆಯನ್ನು ಪ್ರದರ್ಶಿಸುತ್ತಿದ್ದರು. ಅವರು ಕುದುರೆಗಳನ್ನು ಮುರಲೆ, ಝುಂಪಿಕ್, ಜನ್ಯಲ್, ಫಲ್ಪಿಕ್, ಮುಂತಾದ ಭಂಗಿಗಳಲ್ಲಿ ಸುತ್ತಿಸುತ್ತಿದ್ದರು.[೨೭೬] ಅರಸನು ಉಳಿದವರ ಪ್ರವೀಣತೆಗಳನ್ನು ಮೆಚ್ಚುವುದರ ಜೊತೆಗೆ ತನ್ನ ಪ್ರತಿಭೆಯನ್ನು ತೋರುತ್ತಿದ್ದ. ಕೃಷ್ಣದೇವರಾಯನಿಗೆ ಕುದುರೆ ಸವಾರಿ ಅತಿ ಪ್ರಿಯವಾಗಿದ್ದು. ಮುಂಜಾನೆಗಳಲ್ಲಿ ಅಭ್ಯಾಸ ಮಾಡುತ್ತಿದ್ದ[೨೭೭] ಈ ಕುದುರೆ ಓಟವು ವಿನೋದಾವಳಿ ಮಾತ್ರವಾಗಿರದೆ ಯುದ್ಧ ತಂತ್ರವೂ ಆಗಿದ್ದಿತು. ಅಂದು ಅರಸರಾದಿಯಾಗಿ ಅನೇಕ ಸೈನಿಕರು ಕುದುರೆಗಳನ್ನು ಬಳಸಿ ಯುದ್ಧದಲ್ಲಿ ಭಾಗವಹಿಸುತ್ತಿದ್ದರು. ಅಲ್ಲಿ ಕುದುರೆಗಳ ಬಳಕೆ ಸಾಮಾನ್ಯವಾಗಿತ್ತು. ಅದನ್ನು ಓಡಿಸಲು ವಿಶೇಷ ಪರಿಣಿತಿ ಬೇಕು. ಹಾಗಾಗಿ ಮೊದಲಿನಿಂದಲೇ ಕುದುರೆ ಓಡಿಸುವ, ತಿರುಗಿಸುವ, ಕ್ರಮಗಳನ್ನು ಅಭ್ಯಾಸ ಮಾಡುತ್ತಿದ್ದರು ಜೊತೆಗೆ ವಿನೋದವನ್ನು ಪಡೆಯುತ್ತಿದ್ದರು. ವಿಜಯನಗರ ಕಾಲವು ನಿರಂತರ ಯುದ್ಧಗಳ ಕಾಲವಾದ್ದರಿಂದ ಅಂದಿನ ಅರಸರು ಕದನ ಕ್ರೀಡೆಗಳಲ್ಲಿ ಸಹಜವಾಗಿ ಆಸಕ್ತರಾಗಿದ್ದರು. ಹಾಗೂ ಇಂಥ ಕ್ರೀಡೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ಪ್ರಜೆಗಳಲ್ಲಿ ವೀರತ್ವದ ಗುಣ ಉತ್ತೇಜಿಸುತ್ತಿದ್ದರು. ಅರಸರೂ ತಮ್ಮ ದೈಹಿಕ ಬಲಾಢ್ಯತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ನಿರಂತರ ಕಠಿಣ ಅಭ್ಯಾಸದಲ್ಲಿ ತೊಡಗಿಕೊಂಡು ಸೈನಿಕರನ್ನು ತೊಡಗಿಸುತ್ತಿದ್ದರು.

ವಿಜಯನಗರ ಕಾಲದಲ್ಲಿ ಉತ್ತಮ ತಳಿಯ ಕುದುರೆಗಳನ್ನು ಹೊರ ದೇಶಗಳಿಂದ ತರಿಸಿಕೊಳ್ಳುತ್ತಿದ್ದರು ಎಂಬುದು ಈಗಾಗಲೇ ದೃಢಪಟ್ಟ ವಿಷಯ. ಈ ಕುದುರೆಗಳನ್ನು ಯುದ್ಧಕ್ಕೆ ಇನ್ನಿತರ ಉದ್ದೇಶಗಳಿಗೆ ಬಳಸುತ್ತಿದ್ದರು. ಹಾಗೆ ಇವುಗಳಿಂದ ವಿನೋದಾವಳಿಯನ್ನು ಪಡೆಯುತ್ತಿದ್ದರು. ಅಂದು ಕುದರೆ ಓಟದ ಸ್ಪರ್ಧೆಗಳಿದ್ದವು.

ಭೂಪತಿ ನುಡಿಮಾತುಗಳಿಗೆ ನಗುತಲಿ
ಕೋಪಗಳಿಲ್ಲದೆ ನೋಡೆಲೆ ಪ್ರೌಢನೆ
ಆ ಪರಬ್ರಹ್ಮದಿ ಕೂಡುವ ಕುದುರೆಯನೊರೆದ ಬಯಲೊಳಗೆ.[೨೭೮]

ಪ್ರೌಢ ರಾಜೇಂದ್ರನೊಮ್ಮೆ ವೈಹಾಳಿಗೆ ಹೊರಟಾಗ ಕುದುರೆಯ ಶಾಂತನೇಂಬ ವಿರಕ್ತನು ಎದುರು ಬರುತ್ತಾನೆ. ಆ ವಿರಕ್ತನ ಕುದುರೆಯನ್ನು ಕಂಡು ನೀನು ನನ್ನ ಕುದುರೆಯೊಡನೆ ಓಡಿಸು ಎನ್ನುತ್ತಾನೆ ದೊರೆ. ರಾಜನೇ ಬಡವನ ಕುದುರೆಯು ನಿಮ್ಮಯ ತೇಜಿಯ ಸಂಗಡ ಚಲಿಸಲು ಶಕ್ಯವೇ? ಎಂದು ಭೂಪತಿಗೆ ಹೇಳಿದರೂ ಭೂಪ ಕೇಳುವುದಿಲ್ಲ. ರಾಜನ

ಒತ್ತಾಯಕ್ಕೆ ಶಾಂತನು ತನ್ನ ಕುದುರೆಯನ್ನು ದೊರೆಯ ಕುದುರೆಯೊಂದಿಗೆ ಬಿಡುತ್ತಾನೆ. ವೈಹಾಳಿಗೆ ಬಂದ ಕುದುರೆಗಳು ಹಿಮ್ಮೆಟ್ಟಿ ಹೋಗುತ್ತವೆ. ರಾಜನ ಕುದುರೆ ದಿಕ್ಕೆಟ್ಟು ಓಡುತ್ತದೆ. ಶಾಂತನ ಕುದುರೆಯ ಬೆನ್ನು ಹತ್ತದೆಯೆ ಎಲ್ಲಾ ಕುದುರೆಗಳು ನಿಟ್ಟುಸಿರು ಬಿಡುತ್ತವೆ.[೨೫] ಹೀಗೆ ಅಂದು ಅರಸರಲ್ಲದೆ ಸಾಮಾನ್ಯರೂ ಕುದುರೆಯನ್ನು ಇಟ್ಟುಕೋಂಡಿದ್ದರು. ಅಲ್ಲದೆ ಅವರು ಸಹ ಕದುರೆ ಓಟದ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು ಎಂದು ತಿಳಿಯುತ್ತದೆ.

ಅಣ್ಣೆಕಲ್ಲಾಟ

ಸಾಮಾನ್ಯವಾಗಿ ಹೆಣ್ಣುಮಕ್ಕಳು ಆಡುವ ಈ ಕ್ರೀಡೆ ಕೆಲವೊಮ್ಮೆ ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳಿಬ್ಬರೂ ಕೂಡಿ ಆಡುವುದುಂಟು. ಇಬ್ಬರಾದರೆ ಎದುರು ಬದರು ಕುಳಿತು ಆಡುತ್ತಾರೆ. ಇಬ್ಬರಿಗಿಂತ ಹೆಚ್ಚು ಜನರಿದ್ದರೆ ವೃತ್ತಾಕಾರದಲ್ಲಿ ಕುಳಿತು ಆಡುವರು. ಸಾಮಾನ್ಯವಾಗಿ ಗಜ್ಜುಗ ಗಾತ್ರದ ಐದು ನುಣಪಾದ ಬೆಣಚು ಕಲ್ಲುಗಳನ್ನು ಈ ಕ್ರೀಡೆಗೆ ಬಳಸುತ್ತಾರೆ. ಅಣ್ಣಿಕಲ್ಲಾಟ ಆಡಿದರೆ ಮಳೆ ಬರುವುದಿಲ್ಲವೆಂಬುದು ಕೆಲಭಾಗದ ಜನಪದರ ನಂಬಿಕೆ ಅಣ್ಣಿಕಲ್ಲಾಡಿ ಮಳೆ ಅಟ್ಟ ಸೇರ್‍ಕೊತು ಎಂಬ ಜನಪ್ರಿಯ ಗಾದೆ ಮತು ಇದೆ.

ಆರಂಭದ ಆಟಗಾರರು ಆಯ್ಕೆಮಾಡಿಕೊಂಡ ಐದು ಕಲ್ಲುಗಳನ್ನು ಬೊಗಸೆಯಲ್ಲಿ ತುಂಬಿಕೊಂಡು ಒಂದೇ ಬಾರಿಗೆ ಮೇಲಕ್ಕೆ ಎಸೆದು ಬಲದ ಹಿಂಗೈ ಮೇಲೆ ಬೀಳುವಂತೆ ನೋಡಿಕೊಳ್ಳುತ್ತಾರೆ. ನಂತರ ಆಟದಲ್ಲಿ ಒಂದೇ ಕಲ್ಲು ಹಿಂಗೈ ಮೇಲೆ ಕುಳಿತಿರಬೇಕು. ಮೊದಲ ಆಟದಲ್ಲಿ ಒಂದಕ್ಕಿಂತ ಹೆಚ್ಚು ಕಲ್ಲುಗಳ ಹಿಂಗೈ ಮೇಲೆ ಉಳಿದಿದ್ದರೆ ಅವರ ಆಟ ಹೊದಂತೆ. ಅವರ ಬಲಪಕ್ಕೆದಲ್ಲಿರುವವರು ಆಟ ಮುಂದುವರೆಸುತ್ತಾರೆ. ಒಂದೇ ಕಲ್ಲು ಉಳಿದಿದ್ದರೆ ಆ ಕಲ್ಲನ್ನು ಮೇಲಕ್ಕೆಸೆದು ನೆಲದಲ್ಲಿರುವ ಕಲ್ಲುಗಳನ್ನು ಒಂದೊಂದರಂತೆ ಆಯ್ದುಕೊಂಡು ಎಸೆದ ಕಲ್ಲನ್ನು ಆರಿಸಿಕೊಂಡು ನೆಲದಿಂದ ಎತ್ತಿಕೊಂಡ ಕಲ್ಲನ್ನು ತಮ್ಮ ಬಳಿ ಇಟ್ಟುಕೊಳ್ಳುತ್ತಾರೆ. ಹಾಗೆ ಒಂದೊಂದೇ ಕಲ್ಲನ್ನು ನೆಲದಿಂದ ಎತ್ತಿಕೊಳ್ಳುವಾಗ ಪಕ್ಕದ ಇತರ ಕಲ್ಲುಗಳಿಗೆ ಕೈಯನ್ನು ತಾಕಿಸಿದರೆ ಆಟವನ್ನು ಮುಂದಿನವರಿಗೆ ಬಿಟ್ಟುಕೊಡಬೇಕು. ಕೈಯಲ್ಲಿರುವ ಕಲ್ಲನು ಮೇಲಕ್ಕೆ ಹಾರಿಸಿ ಕೆಳಗಿನ ಕಲ್ಲನ್ನು ಮಾತ್ರ ಎತ್ತಿಕೊಂಡು ಹಾರಿಸಿದ ಕಲ್ಲನ್ನು ಆರಿಸಿಕೊಳ್ಳಲು ವಿಫಲರಾದರೆ ಆಟ ಬಿಟ್ಟುಕೊಡಬೇಕು. ಹೀಗೆ ಎರಡನೆಯ ಆಟಕ್ಕೆ ಎರಡರಂತೆ, ಮೂರನೆಯ ಆಟಕ್ಕೆ ಮೂರು ಮತ್ತು ಒಂದು ಹಾಗೂ ನಾಲ್ಕನೆಯ ಆಟದಲ್ಲಿ ನಾಲ್ಕೂ ಕಲ್ಲುಗಳನ್ನು ಎತ್ತಿಕೊಳ್ಳಬೇಕು. ಇಲ್ಲಿ ಮೊದಲ ಆಟದ ನಿಯಮಗಳು ಇರುತ್ತವೆ. ಎರಡು ಕಲ್ಲುಗಳನ್ನು ಎತ್ತುವ ಆಟ ಮುಗಿದು ಮೂರು ಕಲ್ಲುಗಳನ್ನು ಎತ್ತುವ ಆಟದಲ್ಲಿ ವಿಫಲರಾದರೆ ಮುಂದಿನವರಿಗೆ ಕೊಟ್ಟು ತನ್ನ ಸರದಿ ಬಂದಾಗ ಮತ್ತೆ ಮೂರು ಕಲ್ಲುಗಳನ್ನು ಆಯ್ದುಕೊಳ್ಳುವ ಆಟದಿಂದ ಮುಂದುವರೆಸಬಹುದು. ಒಂದೊಂದು ಕಲ್ಲನ್ನು ಆಯ್ದುಕೊಳ್ಳುವಾಗ ಈ ಆಟದಲ್ಲಿ ಒಂದರಗಲ್ಲು, ಎರಡರಗಲ್ಲು, ಮೂಗಲ್ಲು, ನಾಗರಗಲ್ಲುಗಳೆಂದು ವೈವಿಧ್ಯ ಮೆರೆಯುತ್ತಾರೆ. ನಾಲ್ಕು ಕಲ್ಲನ್ನು ಆಯ್ದುಕೊಳ್ಳುವಾಗಲಂತೂ ವೈವಿಧ್ಯತೆ ಮೆರೆಯುತ್ತಾರೆ. ನಾಲ್ಕು ಕಲ್ಲುಗಳನ್ನು ಎತ್ತುವ ಆಟ ಮುಗಿದ ಮೇಲೆ ಮೊದಲು ಕೈಲಿದ್ದ ಕಲ್ಲನ್ನು ಮೆಲಕ್ಕೆಸೆದು ಅಂಗೈಯಿಂದ ಮೂರು ಸಾರಿ ಬಡಿದು ಮತ್ತೆ ಮೆಲಕ್ಕೆಸೆದು ಕಲ್ಲನ್ನು ಆರಿಸಿಕೊಳ್ಳಬೇಕು. ಅಲ್ಲಿ ವಿಫಲರಾದರೂ

ಕೂಡ ಆಟ ಹೊದಂತೆ. ಆಟ ಆಡುವಾಗ ಮೊದಲ ಆಟದಲ್ಲಿ ಕಲ್ಲುಗಳು ಚದುರಿ ಒಂದೊಂದೇ ಕಲ್ಲುಗಳು ಹತ್ತಿರ ಹತ್ತಿರ ಬೀಳುವಂತೆ ಎಸೆದಿರುತ್ತಾರೆ. ಹಾಗೆಯೇ ಎಲ್ಲಾ ಆಟಗಳಲ್ಲೂ ತಮಗೆ ಎತ್ತಿಕೊಳ್ಳಲು ಮತ್ತು ಮೇಲೆಸೆದ ಕಲ್ಲನ್ನು ಆರಿಸಕೊಳ್ಳಲು ಅನುಕೂಲವಾಗುವಂತೆ ಬೀಳಿಸಿಕೊಳ್ಳುವ ಚಾಕಚಕ್ಯತೆ ಮೆರೆಯುತ್ತಾರೆ. ನಾಲ್ಕು ಕಲ್ಲು ಎತ್ತಿಕೊಳ್ಳುವ ಆಟವಾಡಿ ಮುಗಿಸಿದರೆ ಆಟದ ಮೊದಲ ಘಟ್ಟ ಮುಗಿದಂತೆ. ಹೀಗೆ ಈ ಆಟದ ವೈವಿಧ್ಯಮಯ ಆಟಗಳ ಸ್ಥಳಗಳಿಗೆ, ಆಟಗಾರರ ಸಂಖ್ಯೆಗೆ ಅನುಗುಣವಾಗಿ ಆಡುವರು.

ಈ ಆಟದಿಂದ ಏಕಾಗ್ರತೆ ಬರುತ್ತದೆ. ಕಲ್ಲುಗಳನ್ನು ಮೇಲೆ ಎಸೆದು ಕೆಳಗಿನ ಕಲ್ಲುಗಳನ್ನು ಆರಿಸಿಕೊಳ್ಳಬೇಕಾದರೆ ಮೇಲೆ ಮತ್ತು ಕೆಳಗೆ ಎರಡೂ ಕಡೆ ಗಮನವಿರಬೇಕು. ಗಮನ ಬೇರೆ ಕಡೆ ಹೋದರೆ ಆಟದಲ್ಲಿ ವಿಫಲರಾಗುತ್ತಾರೆ. ಏಕಾಗ್ರತೆಯನ್ನು ಕ್ರೀಡೆ ಕಲಿಸಬಲ್ಲದು. ಇಷ್ಟೆಲ್ಲಾ ಗುಣಗಳನ್ನು ತಮ್ಮದಾಗಿಸಿಕೊಳ್ಳಲು ಅಂದಿನ ಜನ ಬಳಸುವುದು ಸರಳ ಸಾಧನಗಳನ್ನೇ, ಅಂದರೆ ಫಸಲು ಕಟಾವಿಗೆ ಬಂದು ಕೊಯ್ಲುಮುಗಿದು ಎಲ್ಲವನ್ನು ತೆಗೆದುಕೊಂಡು ನಂತರ ಅಕ್ಕಡಿ ಸಾಲುಗಳ ಮಧ್ಯೆ ಬಿದ್ದಿದ್ದ ಬೆಣಚುಕಲ್ಲುಗಳನ್ನು ಬಳಸುತ್ತಾರೆ. ಅಂದರೆ ಕೈಗೆ ತಾಕಿದರು ಊನವಾಗಬಾರದು ಎಂದು .

ವಿಜಯನಗರ ಕಾಲದಲ್ಲಿ ಈ ಕ್ರೀಡೆಯನ್ನು ಪ್ರಚಲಿತದಲ್ಲಿತ್ತೆಂದು ಅಂದಿನ ಸಾಹಿತ್ಯ ಕೃತಿಗಳು ದೃಢಪಡಿಸುತ್ತವೆ. ಅಂದು ಈ ಕ್ರೀಡೆಯನ್ನು ಮಕ್ಕಳಾದಿಯಾಗಿ ದೊಡ್ಡವರು ಆಡುತ್ತಿದ್ದರು. ಇದು ಜನಸಾಮಾನ್ಯರ ಕ್ರೀಡೆಯಾಗಿತ್ತು. ನಂಜುಂಡ ಕವಿ ಮತ್ತು ಲಕ್ಷ್ಮೀಶರು ತಮ್ಮ ರಚನೆಗಳಲ್ಲಿ ಉಲ್ಲೇಖಿಸಿರುವುದು ಗಮನಾರ್ಹ. ಸ್ತ್ರೀಯರು ಎದರು ಬದುರು ಕುಳಿತು ಆಡುವುದನ್ನು ಕವಿಯು ಹೆಣ್ಣು ಕಂಡರಿಯದರಣ್ಯ ವಾಸಿಗಳು ತಂದಣ್ಣಿ ಕಲ್ಲಾಡಿ ತೋರಿಸುವೇನು[೨೮೦] ದಣ್ಣಿಕಲ್ಲಾಡಿದರ್[೨೮೧] ಘನೋಪಲವೃಷ್ಟಿ (ಅಣ್ಣಿಕಲ್ಲಾಟದ) ಪ್ರಸ್ತಾಪವಿದೆ.

ಪ್ರಸನ್ನ ವೆಂಕಟದಾಸರ ಕೃತಿಗಳಲ್ಲಿ

ಚೆಣ್ಣಿ ಪೊಂಬಗರ್ಚೆಂಡು ಗುಸುಗುಸು ಕುದುಹಬ್ಬೆ

ಅಣ್ಣಿಕಲ್ಲು ಹಳ್ಳಿ ಗಜಗ ಫಲ್ಲೆ[೨೮೨]

ಈ ಕ್ರೀಡೆಯಲ್ಲಿ ಹಲವು ವಿಧಗಳಿವೆ, ಗಿಚ್ಚಿಯಾಟ, ಐದುಗಂಜಾಟ ಇತ್ಯಾದಿ ಹೀಗೆ ವಿಜಯನಗರ ಕಾಲದಲ್ಲಿ ಅಣ್ಣಿಕಲ್ಲಾಟವನ್ನು ಆಡುತ್ತಿದ್ದ ಬಗ್ಗೆಯನ್ನು ವಿಶ್ಲೇಷಿಸಲಾಗಿದೆ.

ಗಜ್ಜುಗದಾಟ

ಗಜ್ಜುಗದಾಟವು ಮಕ್ಕಳಾಡುವ ಕ್ರೀಡೆಗಳಲ್ಲಿ ಪ್ರಮುಖವಾದುದು. ಇದನ್ನು ಜನಸಾಮಾನ್ಯರ ಮಕ್ಕಳ ಬೀದಿಯಲ್ಲಿ ಆಡುತ್ತಿದ್ದ ಪ್ರಸಂಗಗಳನ್ನು ನಮ್ಮ ಕವಿಗಳ ಕೆಲವು ಪ್ರಾಸಂಗಿಕ ಅಂಶಗಳಲ್ಲಿ ಗುರುತಿಸಿದ್ದಾರೆ. ಈ ಗಜ್ಜುಗದಾಟದಲ್ಲಿ ಹಲವು ವಿಧಗಳಿದ್ದವು. ಇದನ್ನ ಬಾಲಕರು ಅಷ್ಟೆ ಆಡಬಹುದಾದ ಕ್ರೀಡೆಯಾಗಿತ್ತು. ಅಂದು ಇದು ತುಂಬಾ ಜನಪ್ರಿಯವಾಗಿದ್ದಿರಬಹುದು. ಬೆಳವ ಸಿರಿ ಮೊಳಕೆಯಲ್ಲಿ ಎಂಬಂತೆ ನಮ್ಮ ಪುರಾಣ ಐತಿಹ್ಯಗಳಲ್ಲಿ ಅನೇಕ ಮಹಾಪುರುಷರು ಬಾಲ್ಯದಲ್ಲಿ ಗಜ್ಜುಗದಾಟವಾಡಿದ ಉಲ್ಲೇಖಗಳಿವೆ. ಅಂದಿನ ಕವಿಗಳು ಕೃಷ್ಣನ ಬಾಲಲೀಲೆಗಳನ್ನು ವರ್ಣಿಸುತ್ತಾ ಪರಿಪರಿ ಗಜುಗದಾಟ ಮಕ್ಕಳ ಸಂಗಡ, ಗೆರೆಯ ದಾಟುವ ಆಟ ಎಂದು ಹೇಳಿ ಒಂದು ಸೊಗಸಾದ ವರ್ಣನೆಯನ್ನು ಕೊಡುತ್ತಾರೆ.

ಗಜುಗವನಾಡುತಲಿರ್ದನು ನಮ್ಮ ರಂಗ ಒಂದನ್ನೆ ಹಾರಿಸಿದ ವೇಗದಿ
ಮತ್ತೊಂದರಲಿ ತಾ ಒಡೆದ ಒಂದೇ ಬಾರಿಗೆ ಎಲ್ಲ ಗಜುಗವ ಗೆಲಿದನು
ಬಚ್ಚಿಟ್ಟ ಗಜುಗವ ಹುಡುಕುವ ಅಚ್ಯುತ ನಗತ ನಿಂದ ಮುಚ್ಚಿಟ್ಟ
ಗಜುಗವು ದೊರಕಲಿಲ್ಲವೊ ಒಂದು ಕಾಕಚ್ಚಿ ಕೊಂಡೋಯ್ತು ಎನುತಲಿ[೨೮೩]
ರಂಗ ಆಕಾಶವ ತೋರಿದ ಬೇಕಾದ ಗಜುಗವ ನಿಮಗೆ ತರುವೆನೆಂದ
ಪರಿಪರಿ ಗಜುಗದಾಟ ಮಕ್ಕಳ ಸಂಗಡ
ಗೆರೆಯ ದಾಟುವ ಆಟವು
ನೆರೆಹೊರೆ ಮಕ್ಕಳ ಕೂಡ ಸಂಭ್ರಮದ ಮಾತು[೨೮೪]

ಅಂದರೆ ಇಲ್ಲಿ ದಾಸರು ಗಜಗದಾಟದಲ್ಲಿ ನಾನಾ ವಿಧಗಳಿವೆ. ಎಂದು ಅಂದು ಮಕ್ಕಳ ಗಜ್ಜುಗದಾಟವಾಡುವ ರೀತಿ ಅವುಗಳನ್ನು ಬಚ್ಚಿಟ್ಟುಕೊಳ್ಳುವುದು, ಹೀಗೆ ವಿವಿಧ ಅಂಶಗಳನ್ನು ಬಿಚ್ಚಿಟ್ಟಿದ್ದಾರೆ.

ಪ್ರಾಚೀನ ಕಾಲದಿಂದಲೂ ಇರುವ ಈ ಕ್ರೀಡೆಯನ್ನು ಬೆಳಗ್ಗೆ ಸಂಜೆಯ ಅಥವಾ ವಿರಾಮದ ವೇಳೆಯಲ್ಲಿ ಆಡುವರು. ಇದು ಮಾನಸಿಕ ಬೌದ್ಧಿಕ ಜ್ಞಾನಕ್ಕೆ ಉತ್ತಮ ಕಸರತ್ತು ನೀಡುತ್ತದೆ. ಅಂದು ಗಜ್ಜುಗವನ್ನು ಎರೆಮಣ್ಣಿನ ಉಂಡೆಗಳು, ನಯವಾದ ಸಣ್ಣ ಗೋಲಾಕರದ ಕಲ್ಲುನ್ನು ಬಳಸುತ್ತಿದ್ದರು. ಈ ಕ್ರೀಡೆಯಲ್ಲಿ ಆಟಗಾರನಿಗೆ ಅರಿವಿಲ್ಲದೆಯೇ ಏಕಾಗ್ರತೆ ಕಾರ್ಯವೆಸಗುತ್ತದೆ.

ದ್ರೋಣಾಚಾರ್ಯರು ಧನುರ್ವಿದ್ಯೆಯನ್ನು ಪಾಂಡವರಿಗೆ ಕಲಿಸಿ ಕೊಡುವಾಗ ಮರದ ಮೇಲೆ ಕುಳಿತಿದ್ದ ಪಕ್ಷಿಯೊಂದರ ಕಣ್ಣಿಗೆ ಗುರಿಯಿಡಲು ಹೇಳಿ ಭೀಮನನ್ನು ಕೇಳುತ್ತಾರೆ. ನೀನಗೇನು ಕಾಣುತ್ತದೆ? ಎಂದು, ಅವನು ಮರ, ಎಲೆ, ಪಕ್ಷಿ ಎಲ್ಲವೂ ಕಾಣಿಸುತ್ತದೆಯೆಂದು ಉತ್ತರಿಸುತ್ತಾನೆ. ದುರ್ಯೋಧನಾದಿಗಳು ಕೂಡ ಅದೇ ಉತ್ತರವನ್ನು ಹೇಳುತ್ತಾರೆ. ಆದರೆ ಅರ್ಜುನನನ್ನು ಪ್ರಶ್ನಿಸಿದಾಗ ಪಕ್ಷಿಯ ಕಣ್ಣುಗಳು ಮಾತ್ರವೇ ಕಾಣುತ್ತವೆಯೆಂದು ಹೇಳುತ್ತಾನೆ. ಹಾಗೆ ಗಜುಗವಾಟವಾಡುವಾಗ ಗಜುಗವೊಂದರ ಮೇಲೆ ಗುರಿಯಿಟ್ಟವರಿಗೆ ಗಜಗ ವಿನಃ ಬೇರೆನೂ ಕಾಣುವುದಿಲ್ಲ, ದೂರದಲ್ಲಿರುವ ಗಜುಗವನ್ನು ತನ್ನ ಕೈ ಬೆರಳಿನಿಂದ ಹೊಡೆಯುವಾಗ ಬೇರೆಲ್ಲಾ ವಿಚಾರಗಳನ್ನು ಮರೆತು ಏಕ ಚಿತ್ತದಿಂದ ದೃಷ್ಟಿ ಹರಿಸುವಾಗ ಆಟಗಾರನ ಬೌದ್ಧಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ. ಹೀಗೆ ಅಂದು ಮಕ್ಕಳಿಗೆ ಏಕಗ್ರತೆ ಮೂಡಿಸಲು ಹಾಗೂ ಬೌದ್ಧಿಕತೆಗೆ ಕಸರತ್ತನ್ನು ಕೂಡಲು ಈ ಕ್ರೀಡೆಯ ಹುಟ್ಟಿಗೆ ಕಾರಣವಾಗಿದೆ. ಇದೊಂದು ಸಂಪೂರ್ಣ ಮನರಂಜನಾತ್ಮಕ ಕ್ರೀಡೆ, ಇದನ್ನು ವೈವಿಧ್ಯಮಯವಾಗಿ ಆಡುವರು.

ನಮ್ಮಮ್ಮನ ನೋಡಲಾರ್ದಂಗೆ ನಾನು ಬಂದು ಬಿಟ್ಟಿನಿ
ನನಗೊಂದು ಎರಡು ಗೋಲಿ ಕೊಡ್ತೀರ್ಯಾ
ಏತಮ್ಮ ಆ ಕುಣಿ ನಡುವೆ ಈ ಕುಣಿ ನಡುವೆ ಇಡು
ಕುಣ್ಯಾಗೆ ಮರೇಟಿಗ್ಯಲ್ಲ ಕುಣ್ಯಾಗೆ ಬೀಳ್ಸಿದರೆ
ನನ್ನ ಗೋಲಿನ ನಾವು ಗೆದ್ದಂಗೆ
ಮೂರು ಏಟಿಗೆ ನಾವು ತಪ್ಪಿರೆ ನಾವು ಇಡ್ತಿವ ನೀನು ಆಡುವಂತೆ ಅಂದ್ರ[೨೮೫]

ಹೀಗೆ ವಿಜಯನಗರ ಕಾಲದಲ್ಲಿ ಗಜ್ಜುಗದಾಟ ಜನಪ್ರೀಯವಾಗಿತ್ತು. ಪ್ರಸ್ತುತ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಈ ಕ್ರೀಡೆಯನ್ನು ಕಾಣಬಹುದು.

ಬುಗುರಿ

ಬುಗುರಿ ಆಟದಲ್ಲಿ ಪ್ರಧಾನವಾಗಿ ಕಾಣುವುದು ಮರದಿಂದ ಮಾಡಿದ ಒಂದು ಬುಗುರಿ ಚಾಟಿ. ಇದರಲ್ಲಿ ಅನೇಕ ವೈವಿಧ್ಯಮಯ ಆಟಗಳಿವೆ. ಬುಗುರಿ ಆಟವನ್ನು ಮಹಾಭಾರತದಲ್ಲಿ ಆಡುತ್ತಿದ್ದರು ಎಂಬುದಕ್ಕೆ ಪುರಾವೆಯಿದೆ. ೧೨ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಬುಗುರಿ ಆಟವನ್ನು ಚಳಿಗಾಲದಲ್ಲಿ ಆಡುತ್ತಿದ್ದರು. ಜಪಾನಿನಲ್ಲಿ ಕೋಮ ಅನೋವಿ ಎಂದು ಕರೆಯುವುದುಂಟು. ಪಾಟಾಕಿ ಎಂಬ ಬುಗುರಿಯನ್ನು ನ್ಯೂಜಿಲೆಂಡಿನ ಮಾವೂರಿ ಜನ ಆಡುತ್ತಿದ್ದರು. ಅಲ್ಲಿ ಬುಗುರಿ ಎರಡೂ ಕಡೆ ಚೂಪಾಗಿರುವುದು ವಿಶೇಷ. ಬುಗುರಿ ಆಟವನ್ನು ಸಾಮಾನ್ಯವಾಗಿ ಮಳೆಗಾಲದಲ್ಲಿ ಆಡುವರು. ಇದಕ್ಕೆ ಬೇಕಾಗಿರುವುದು ಮರದಿಂದ ಚೂಪಾಗಿ ಕೆತ್ತಿದ ಒಂದು ಬುಗುರಿ ತುದಿಗೆ ಮೊಳೆ ಹೊಡೆಯಬೇಕು. ಅದಕ್ಕೆ ಮೊಳೆ ಉದ್ದ ಚಾಟಿ ಮೊಳೆ ಸಮೇತ ಬುಗರಿಗೆ ಸುತ್ತಿ ನೆಲಕ್ಕೆ ಅಪ್ಪಳಿಸಬೇಕು. ಗರಗರ ಸುತ್ತುತ್ತದೆ. ವಿಜಯನಗರ ಕಾಲದಲ್ಲಿ ಈ ಬುಗುರಿ ಆಟ ಇತ್ತು ಎಂಬುದಕ್ಕೆ ಅನೇಕ ಸಾಹಿತ್ಯಿಕ ದಾಖಲೆಗಳಿವೆ.

ಚೆಂಡು ಬುಗುರಿ ಬೆಣ್ಣಗೋಲುಗಳುಡಾತ್ತ
ಪುಂಡರೀಕನು[೨೮೬]

ಈ ಆಟವನ್ನು ಸಾಮಾನ್ಯವಾಗಿ ಹುಡುಗರು ಮಳೆ ಬಂದಂತಹ ಸಂದರ್ಭದಲ್ಲಿ ಆಡುವರು ಈ ಆಟವು ಪ್ರಾದೇಶಿಕವಾಗಿ ವೈವಿದ್ಯಮಯ ರೀತಿಯಲ್ಲಿ ಆಡುವರು. ನೆಲಕ್ಕೆ ಬೀಳದಂತೆ ಕೈಯಲ್ಲೆ ತಿರುಗಿಸುವ ಚಾಕಚಕ್ಯತೆ ಕೆಲವರಲ್ಲಿರುತ್ತದೆ. ಕೆಲ ಹುಡುಗರು ಬುಗರಿಗೆ ಬಣ್ಣ ಹಚ್ಚಿ ತಿರುಗಿಸುವರು.

ನನ್ನಯ ಬುಗುರಿ ಬಣ್ಣದ ಬುಗರಿ
ಗುರುಗುರು ಸದ್ದನು ಮಾಡುವ ಬುಗುರಿ
ಕಾಮನ ಬಿಲ್ಲಿನ ಭೂಮಿಗೆ ಇಳಿಸಿ
ಗರಗರ ಸುತ್ತುವ ಬಣ್ಣದ ಬಗರಿ[೨೮೭]

ಇದು ಮಹಾಂತ ಪ್ರಿಯ ಕವಿಯ ಜನಪ್ರಿಯ ರಚನೆ

ಬುಗುರಿಯನ್ನು ಕಾರೆ, ಉಲುಚಿ, ಬಾಲ, ಬಾರೆ, ಇತ್ಯಾದಿ ಮರಗಳಿಂದ ನಾಜೂಕಾಗಿ ಕೆತ್ತಿ ತಯಾರಿಸಿದ ವರ್ತುಲಾಕಾರವಾಗಿ ವಜ್ರದ ರೀತಿಯಲ್ಲಿರಬೇಕು ಈ ಬುಗುರಿಯ ಗಾತ್ರಕ್ಕನುಗುಣವಾಗಿ ಚೂಪಾದ ಮೊಳೆ ಹೊಡೆಯಬೇಕು.

ಬುಗುರಿಗೆ ಮೊಳೆಯನ್ನು ಕೂಡು ತುಂಬಾ ಸೂಕ್ಷ್ಮತೆಯಿಂದ ಹೊಡೆಯಬೇಕು. ಓರೆಕೋರೆಯಾಗಿ ಹೊಡೆದರೆ ಕೊಟ್ರಕೊಟ್ರ ಆಡುತ್ತದೆ. ಮೊಳೆ ನೇರವಾಗಿ ಬುಗುರಿಯೊಳಗೆ ಹೋದರೆ ಶಬ್ದವೆ ಇಲ್ಲದೆ ಆಡುತ್ತದೆ ಆಗ ಹುಡುಗರು ನನ್ನ ಬುಗುರಿ ನಿದ್ದೆ ಮಾಡುತ್ತದೆ ಎಂದು ಸಂಭ್ರಮಿಸುವರು. ಆಗ ಮಕ್ಕಳು ಅದರಿಂದ ಹೊರಡುವ ಶಬ್ದವನ್ನು ಕೇಳಿ ಆನಂದಿಸುವರು ಆಡುವ ಬುಗುರಿಯನ್ನು ಕೈಯಲ್ಲಿ ಹಾಕಿಕೊಂಡು ಸಂಭ್ರಮಿಸುವರು. ಹೀಗೆ ಬುಗುರಿಯಾಟ ಸಂಪೂರ್ಣ ಮನರಂಜನಾತ್ಮಕವಾದ ಕ್ರೀಡೆಯಾಗಿದೆ.

ಮರಕೋತಿಯಾಟ

ಮರಕೋತಿಯಾಟ ಅಪ್ಪಟ ದೇಶಿಯ ಆಟ. ಒಂದು ದೊಡ್ಡ ಮರದಲ್ಲಿ ಕೊಂಬೆಯಿಂದ ಕೊಂಬೆಗೆ ಹತ್ತುತ್ತಾ ಆಡುತ್ತಾ ಆಡುವ ಆಟವಾಗಿದೆ. ಇದು ಪ್ರಾಚೀನ ಕಾಲದಲ್ಲಿಯೇ ಇತ್ತು ಎಂಬುದಕ್ಕೆ ಆದಿ ಕವಿ ಪಂಪನ ಕೃತಿಯಲ್ಲಿ ಈ ಕ್ರೀಡೆಯ ಪ್ರಸ್ತಾಪವಿದೆ. ಅಂತಾ ಕೂಸುಗಳ್ ಕೊಸಾಟವಾಡುತ್ತಿರ್ದೊಂದು ದಿವಸಂ ಮರಗೆರೆಸಿಯಾಡಲೆಂದು ಮುಂದೆ ತಮ್ಮ ಪುಗೆ ಪರ್ವುವಂತ ಪನ್ನಿರ್ಮತ್ತರ್ ಪರ್ವಿದಾಲದ ಮರದ ಮೊದಲ್ಗೆ ಒಂದು ಭೀಮನು ಮರೆ ಮಾಡಿ ಕೋಲನೀಡಾಡಿ ಪಲವು ಸೌಲ್‌ಕಾಡಿ.[೨೮೮] ಅಂದರೆ ಈ ಕ್ರೀಡೆಯನ್ನು ಆಡಬೇಕಾದರೆ ೪–೫ ಅಥವಾ ಅದಕ್ಕಿಂತ ಹೆಚ್ಚು ಹುಡುಗರಿರಬೇಕು ಅದರಲ್ಲಿ ಒಬ್ಬ ಕಳ್ಳನನ್ನು ಮಾಡಿ ಒಂದು ಕಟ್ಟಿಗೆಯನ್ನು ದೂರದಲ್ಲಿ ಎಸೆದು ಒಂದು ದೊಡ್ಡ ಮರಗಳನ್ನು ಏರುತ್ತಾರೆ. ಕಳ್ಳ ಆದವನು ಕೋಲನ್ನು ಒಂದು ನಿರ್ದಿಷ್ಟ ಸ್ಥಳದಲ್ಲಿ ತಂದು ಹಾಕಿ ಮರದಲ್ಲಿರುವವರನ್ನು ಒಬ್ಬನನ್ನು ಹಿಡಿಯಬೇಕು. ಹೀಗೆ ಆಟ ಮುಂದುವರೆಯುತ್ತದೆ.

ಈ ಕ್ರೀಡೆಯು ಯುದ್ಧ ತಂತ್ರದ ಹಿನ್ನೆಲೆಯಲ್ಲಿ ರೂಪುಗೊಂಡಿದೆ. ಅಂದರೆ ಮಕ್ಕಳು ಚಿಕ್ಕವರಿದ್ದಾಗ ಮರಕೋತಿಯಾಟದ ಮೂಲಕ ಮರವನ್ನು ಏರುವ ಅಭ್ಯಾಸ ಮಾಡಿದರೆ ಮುಂದೆ ಅವರು ದೊಡ್ಡವರಾದ ಮೇಲೆ ಸೈನ್ಯಕ್ಕೆ ಸೇರಿ ಕೋಟೆ ಏರಲು ಸುಲಭವಾಗಲು ಈ ಆಟ ಹುಟ್ಟಿಕೊಂಡರಬೇಕು. ಅಂದರೆ ಹಿಂದೆ ಯಾವುದೇ ಒಂದು ಕ್ರೀಡೆಯ ಹಿಂದೆ ಒಂದು ತಂತ್ರ ಅಡಗಿರುವುದರಲ್ಲಿ ಅನುಮಾನವಿಲ್ಲ.

ದಾಸರ ಕೀರ್ತನೆಗಳಲ್ಲಿ ಕೋತಿಯಾಟದ ಉಲ್ಲೇಖಗಳಿವೆ.

ಕೊಡಗನ ಕೊರವ ಆಡಿಸಿದಂತೆ ನೀ
ನಾಟ ವಿಜಯಂಗಳಿಗೆ ಓಡಿ ಆಡಿಸಿ[೨೮೯]

ಹೀಗೆ ಮರಕೋತಿಯಾಟದಿಂದ ಮಕ್ಕಳಿದ್ದಾಗಲೆ ಸೈನ್ಯಕ್ಕೆ ಅಣಿಗೂಳಿಸಲು ಅಂದಿನ ರಾಜರು, ತಂದೆ ತಾಯಿಗಳು ತರಬೇತಿ ನೀಡುವ ರೀತಿಯಲ್ಲಿ ಈ ಕ್ರೀಡೆಯ ಹುಟ್ಟಿಗೆ ಕಾರಣರಾಗಿದ್ದಾರೆ.

ಕಂಬದಾಟ (ಗಂಬದ ಗಡನೆ)

ಇದು ಹುಡುಗಿಯರ ಆಟವಾದರೂ ಹುಡುಗರೂ ಸೇರಿ ಈ ಆಟ ಆಡುವರು. ಈ ಆಟದ ಕುರಿತು ಅನೇಕ ಸಾಹಿತ್ಯಿಕ ದಾಖಲೆಗಳಿವೆ. ಇದನ್ನು ಗಂಬದಗಡನೆ ಎಂದು ಉಲ್ಲೇಖಿಸಿವೆ. ಈ ಆಟಕ್ಕೆ ಸಾಲಾಗಿ ಕಂಬಗಳಿರಬೇಕು. ಹಳ್ಳಿಯ ಹಟ್ಟಿಗಳ ಬೀದಿ ಬಾಗಿಲಲ್ಲಿ ಮತ್ತು ಮನೆಯ ಒಳಗಡೆ ಸಾಲಾಗಿ ಕಂಬಗಳಿರುತ್ತವೆ. ಆ ಕಂಬಗಳಲ್ಲಿ ಆಡುವರು. ಎಷ್ಟು ಕಂಬಗಳಿರುತ್ತವೊ ಅದಕ್ಕಿಂತ ಒಬ್ಬರು ಹೆಚ್ಚಿಗೆ ಆಟಗಾರರು ಬೇಕು. ಚಪ್ಪಾಳೆ ಹಾಕಿ ಯಾರು ಕಳ್ಳ ಎಂದು ನಿರ್ಧರಿಸುತ್ತಾರೆ. ನಂತರ ಒಬ್ಬಬ್ಬೊರು ಒಂದೊಂದು ಕಂಬದ ಹತ್ತಿರ ತೋಳಿನಿಂದ ಕಂಬ ಬಳಸಿ ನಿಲ್ಲುತ್ತಾರೆ. ಕಳ್ಳರಾದವರು ಎರಡೂ ಕೈಗಳನ್ನು ತಲೆಯ ಮೇಲೆ ಇಟ್ಟು ಕೊಂಡು ಒಂದನೇ ಕಂಬದಿಂದ ಕೊನೆಯ ಕಂಬದವರೆಗೆ ಹೋಗಬೇಕು ಅವರು ಒಂದೇ ಕಡೆ ನಿಲ್ಲುವ ಹಾಗಿಲ್ಲ, ಈ ಕಡೆಯಿಂದ ಆ ಕಡೆ, ಉಪ್ಪು ಬೇಕೆ ಎಂದು ಸಾರುತ್ತಾ ತಿರುಗುವರು.

ಆಟಗಾರರು ಕಂಬಗಳನ್ನು ಒಬ್ಬರಿಂದೊಬ್ಬರು ಬದಲಾಯಿಸುತ್ತಿರುತ್ತಾರೆ. ಆ ಸಂದರ್ಭವನ್ನು ನೋಡಿ ಕಳ್ಳರು ಖಾಲಿಯಾದ ಕಂಬವನ್ನು ಹಿಡಿದುಕೊಳ್ಳಬೇಕು ಯಾರು ಖಾಲಿ ಉಳಿಯುತ್ತಾರೋ ಅವರು ಮುಂದಿನಾಟಕ್ಕೆ ಕಳ್ಳರು

ಮೂಲೆಯಾಟ ಕಂಬಗಳಿಲ್ಲದಿದ್ದರೆ ಕೆಲವರು ಬೇರೆ ರೀತಿಯಾಗಿ ಆಡುತ್ತಾರೆ, ಇದನ್ನು ಮೂಲೆಯಾಟ ಎನ್ನುತ್ತಾರೆ. ಈ ಆಟಕ್ಕೆ ಐದು ಜನ ಆಟಗಾರರಿರಬೇಕು. ನಾಲ್ಕು ಜನ ನಾಲ್ಕು ಮೂಲೆ ಒಬ್ಬರು ಹೆಚ್ಚಿಗೆ ಉಳಿದವರು ಕಳ್ಳರಾಗುವರು ಇದು ಸಹ ಮೇಲೆ ಹೇಳಿದ ರೀತಿಯಲ್ಲಿಯೇ ಆಟ ನಡೆಯುವುದು ಇದೊಂದು ಸಂಪೂರ್ಣ ಮನರಂಜನಾತ್ಮಕ ಕ್ರೀಡೆಯಾಗಿದ್ದರೂ ಈ ಕ್ರೀಡೆಯ ಹಿಂದೆ ಒಂದು ಚುರುಕುತನ ಇದೆ. ಅಂದರೆ ಆಟಗಾರರು ಕಂಬ ಬದಲಾಯಿಸುವಾಗ ತಕ್ಷಣ ಆ ಕಂಬವನ್ನು ಹೋಗಿ ಹಿಡಿದುಕೊಳ್ಳುವುದು ಮಕ್ಕಳಿಗೆ ಇದೊಂದು ರೀತಿಯಲ್ಲಿ ವ್ಯಾಯಾಮವಾಗುತ್ತದೆ. ಹಾಗೂ ವ್ಯವಹಾರಿಕ ಜ್ಞಾನವೂ ಹೆಚ್ಚುತ್ತದೆ. ಅಂದರೆ ಮಾರಾಟಗಾರರಾಗಿ ಮನೆಮನೆಗೆ ಹೋಗುವುದು ವ್ಯವಹರಿಸುವುದು ಇದು ನಮ್ಮ ದಿನ ನಿತ್ಯ ಬದುಕಿನಲ್ಲಿ ನಡೆಯುವ ಚಟುವಟಿಕೆಗಳನ್ನು ಕ್ರೀಡಾ ಸರಕುಗಳನ್ನಾಗಿ ಮಾಡಿಕೊಂಡಿದ್ದಾರೆ ಈ ಆಟವನ್ನು ಸಹ ಪ್ರಾದೇಶಿಕವಾಗಿ ವಿಭಿನ್ನವಾಗಿ ಆಡುವರು.

ಸರಿಬೆಸ

ಅಟಗಾರರ ಮುಷ್ಠಿಯಲ್ಲಿ ಕಾಳು ಹುಣಸೆಬೀಜ, ಚಿಕ್ಕ ಕಲ್ಲು ಯಾವುದಾದರೂ ಆಗಿರಬಹುದು. ಈ ಕ್ರೀಡೆಯನ್ನು ಇಬ್ಬರು ಆಡುವರು. ಒಬ್ಬರು ಒಂದು ಕೈಯಲ್ಲಿ ಸ್ವಲ್ಪ ಕಾಳುಗಳನ್ನು ಹಿಡಿಯಬೇಕು, ಎದುರಾಳಿಯು ಅವನ ಕೈಯಲ್ಲಿ ಆ ಕಾಳುಗಳು ಸರಿ ಅಥವಾ ಬೇಸ ಸಂಖ್ಯೆಯಲ್ಲಿವೆಯೂ ಹೇಳಬೇಕು. ಈ ಕ್ರೀಡೆಯು ಆದಿಮಾನವನಷ್ಟೆ ಹಳೆಯದು[೨೯೦]

ವಿಜಯನಗರ ಕಾಲದಲ್ಲಿ ಈ ಕ್ರೀಡೆಯನ್ನು ಜೂಜು ಕಟ್ಟಿಕೊಂಡು ಆಡುತ್ತಿದ್ದರು ಎಂಬುದಕ್ಕೆ ಉದಾಹರಣೆ:

ಸರಿಬೇಸದಿ ವಿತ್ತ ವಿನಾಶವ
ಮಾಡುವ ಜೂದುಗಾರರ
ಮೊತ್ತವಿರ್ದುದು ಮನೆ ಮನೆಗೆ[೨೯೧]

ಅಂದರೆ ಪ್ರತಿ ಮನೆ ಮನೆಯಲ್ಲಿ ಜೂಜೂಗಾರರಿದ್ದರು ಎಂದು ತಿಳಿಯಬಹುದು. ಅಲ್ಲಿ ಅವರು ಯಾವುದೇ ಕ್ರೀಡೆಗಳು ಜರುಗಲಿ ಜೂಜೂ ಕಟ್ಟಿಕೊಂಡು ಆಡುತ್ತಿದ್ದರು.

ಕುಂಟಾಬಿಲ್ಲೆ

ವಿಶೇಷವಾಗಿ ಸ್ತ್ರೀಯರು, ಮಕ್ಕಳಾಡುವ ಈ ಕ್ರೀಡೆ ಗ್ರಾಮೀಣ ಭಾಗದಲ್ಲಿ ಆಡುವರು. ಮಣ್ಣಿನ ನೆಲದ ಮೇಲೆ ಗೆರೆಕೊರೆದು ಆಡುವ ಆಟವಾಗಿದೆ ಇದಕ್ಕೆ ಒಂದು ಬಿಲ್ಲೆ ಅಂದರೆ ಮಡಕೆಯ ಚೂರು ಅಥವಾ ಬಿಲ್ಲೆಯಾಕಾರದ ಕಲ್ಲಿನ ಚೂರು ಇದ್ದರೆ ಸಾಕು, ಇದರಲ್ಲಿ ಎರಡು ವಿಧ ಐದು ಮನೆಯಾಟ, ಹತ್ತುಮನೆಯಾಟ, ಮತ್ತು ಗೂಬೆ ಮನೆಯಾಟ. ಮೊದಲು ಮಣ್ಣಿನ ನೆಲದಮೇಲೆ ಕೈಯಿಂದ ಅಥವಾ ಕಡ್ಡಿಯಿಂದ ಗೆರೆಬರೆಯುತ್ತಾರೆ. ನಾಲ್ಕು ಮನೆ

ಬರೆಯಬೇಕು ಕೆಲವು ಕಡೆ ಐದು ಮನೆ ಬರೆಯುತ್ತಾರೆ. ನಾಲ್ಕನೇ ಅಥವಾ ಐದನೇ ಮನೆ, ಕಟ್ಟಿ ಮನೆ ಅದಕ್ಕೆ ಎಕ್ಸ್ ಗುರುತು ಮಾಡುವುದುಂಟು ಮೊದಲು ಯಾರು ಆಡಬೇಕು ಎನ್ನುವುದನ್ನು ಒಮ್ಮತದಿಂದ ತೀರ್ಮಾನಿಸುತ್ತಾರೆ. ಇಲ್ಲಾ ಅಂದರೆ ಟಾಸ್ ಅಥವಾ ಇಬ್ಬರಿಗಿಂತ ಹೆಚ್ಚಿನ ಆಟಗಾರರು ಇದ್ದರೆ ಕ್ಲಾಪ್ಸ್ ಹಾಕಿ ನಿರ್ಧರಿಸುತ್ತಾರೆ.

ಆಟವಾಡುವವರು ಮೂದಲು ಬಿಲ್ಲೆಗೆ ಮುತ್ತಿಟ್ಟು ಮನೆಗಳ ಮುಂದೆ ನಿಂತು ಎಡಗಡೆಯ ಮನೆಗೋ, ಬಲಗಡೆಯ ಮನೆಗೋ ಬಿಲ್ಲೆ ಎಸೆದು ಬಿಲ್ಲೆ ಹಾಕದೆ ಇರುವ ಕಡೆಯಿಂದ ಎಡಗಾಲನ್ನೋ, ಬಲಗಾಲನ್ನೋ ಸ್ವಲ್ಪ ಮೇಲಕ್ಕೆತ್ತಿ ಕುಂಟುತ್ತಾ ಮನೆಯಿಂದ ಮನೆಗೆ ನೆಗೆಯುತ್ತಾ ಬಂದು ಕಟ್ಟಿ ಮನೆಯಲ್ಲಿ ಕಾಲು ಬಿಡಬೇಕು. ಮತ್ತೆ ಅಲ್ಲಿಂದ ಬಿಲ್ಲೆ ಇರುವ ಒಂದನೇ ಮನೆ ತನಕ ಕುಂಟುತ್ತಾ ಹೋಗಿ ಬಿಲ್ಲೆ ಹಾಕಿರುವ ಮನೆಗೆ ಬಂದಾಗ ಮತ್ತೆ ಹಿಂತಿರುಗಿ ಕುಂಟುತ್ತಾ ಬಂದು ಕಟ್ಟೆ ಮನೆಯಲ್ಲಿ ಕಾಲು ಬಿಟ್ಟು ಮತ್ತೆ ಕುಂಟುತ್ತಾ ಒಂದನೇ ಮನೆಗೆ ಬಂದು ಅಲ್ಲಿಂದ ಬಿಲ್ಲೆ ಇರುವ ಸ್ಥಳಕ್ಕೆ ಹಾರಬೇಕು. ಬಿಲ್ಲೆ ದೂರದಲ್ಲಿ ಬಿದ್ದಿದ್ದರೆ ಹೆಜ್ಜೆ ಕೊಡು ಎನ್ನುತ್ತಾರೆ. ಆಗ ಬಿಲ್ಲೆ ಹತ್ತಿರ ಬಿದ್ದಿದರೆ ಒಂದು, ಎರಡು ಹೆಜ್ಜೆ ಕೊಡುತ್ತಾರೆ. ಹೆಜ್ಜೆ ಅಂದರೆ ಒಂದು ಗೆರೆ ಎಳೆಯುವುದು. ಆಟವಾಡುವವರು ಮೊದಲು ಆ ಗೆರೆ ಮೇಲೆ ನೆಗೆದು ಅಲ್ಲಿಂದ ಬಿಲ್ಲೆ ಮೇಲೆ ನೆಗೆಯಬೇಕು. ಹಾಗೆ ನೆಗೆದಾಗ ಬಿಲ್ಲೆ ಕಾಲಿಗೆ ಸೋಕಬೇಕು ಇಲ್ಲದಿದ್ದರೆ ಆಟ ಹೊಗುವುದು. ಹಿಗೆಯೇ ಮೂರು ಮನೆಗಳಿಗೂ ಬಿಲ್ಲೆ ಎಸೆದು ಆಡಿದ ನಂತರ ಇನ್ನೊಂದು ಪಕ್ಕದ ಮೂರು ಮನೆಗಳಿಗೂ ಬಿಲ್ಲೆ ಎಸೆದು ಆಡಬೇಕು.

ಆಟವಾಡುವಾಗ ಬಿಲ್ಲೆಯನ್ನು ನೆಟ್ಟಗೆ ನಿಂತು ಎಸೆಯಬೇಕು, ಬಗ್ಗಿ ಹಾಕುವಂತಿಲ್ಲ ಆ ಬಿಲ್ಲೆ ಮನೆ ಒಳಗಡೆ ಸರಿಯಾಗಿ ಬೀಳಬೇಕು, ಗೆರೆಯ ಮೇಲೆ ಬಿದ್ದರೆ ಆಟ ಹೋಗುವುದು. ಯಾವ ಮನೆಗೆ ಹಾಕುತ್ತೇವೆಯೇ ಅದೇ ಮನೆಗೆ ಬಿಲ್ಲೆ ಬೀಳಬೇಕು. ಬಿಲ್ಲೆಯನ್ನು ಮನೆಯಿಂದ ಒದ್ದಾಗ ಗೆರೆಯ ಮೇಲೆ ಬೀಳಕೂಡದು ಹೊರಬಂದರೆ ಆಟ ಹೋಗುವುದು.

ಇದರಲ್ಲಿ ಪಾಂಡಿ ಕಟ್ಟುವುದು ಇದೆ. ಹೇಗೆಂದರೆ ಪಾಂಡಿ ಕಟ್ಟುವವಳು ಒಂದನೇ ಮನೆಯ ಮುಂದೆ ಗೆರೆಯ ಹಿಂದೆ ನಿಂತು ಬಿಲ್ಲೆಯನ್ನು ಕಟ್ಟಿ ಮನೆಗಳಿಂದ ದೂರಕ್ಕೆ ಎಸೆಯಬೇಕು. ಎಸೆದಾಗ ಬಿಲ್ಲೆ ಯಾವ ಮನೆಯೊಳಗೆ ಬಿದ್ದರೂ ಆಟ ಹೋಗುವುದು. ಬಿಲ್ಲೆ ಕಟ್ಟಿ ಮನೆಯಿಂದ ಆಚೆ ಬಿದ್ದ ನಂತರ ಪಾಂಡಿ ಕಟ್ಟುವವಳು ಕಣ್ಣುಮುಚ್ಚಿ ತಲೆಯನ್ನು ಮೇಲಕ್ಕೆತ್ತಿ (ಮುಖ ಮೇಲೆಮಾಡಿ) ಒಂದೊಂದು ಮನೆಯನ್ನು ದಾಟಬೇಕು. ಮೊದಲು ಮೊದಲನೆ ಮನೆಗಳಿಗೆ ಎಡಕ್ಕೊಂದು ಬಲಕ್ಕೊಂದು ಕಾಲುಗಳನ್ನಿಟ್ಟು ಅಮ್ಮಟೆ ಎನ್ನಬೇಕು. ಗೆರೆ ತುಳಿಯುವ ಹಾಗಿಲ್ಲ. ಅವಳು ಕಾಲು ಸರಿಯಾಗಿ ಮನೆಯೊಳಗಿರುವುದರ ಇನ್ನೊಬ್ಬಳು ಹೂಂ (ಎಸ್) ಎನ್ನುತ್ತಾಳೆ. ಆ ನಂತರ ಎರಡನೇ ಮನೆಗಳಿಗೆ ಕಾಲಿಟ್ಟು ಅಮ್ಮಟೆ ಎನ್ನುತ್ತಾಳೆ. ಗೆರೆಯ ಮೇಲೆ ಕಾಲಿಟ್ಟಿದ್ದರೆ ಇನ್ನೊಬ್ಬಳು ಹೊಯ್ತು ಎನ್ನುತ್ತಾಳೆ. ಆಗ ಅವಳು ಕಣ್ಣು ಬಿಟ್ಟು ನೋಡಿ ಆಟ ಬಿಟ್ಟು ಕೊಡುತ್ತಾಳೆ ಗೆರೆಯ ಮೇಲೆ ಕಾಲಿಟ್ಟಿಲ್ಲದಿದ್ದರೆ ಎಲ್ಲಾ ಮನೆಗಳನ್ನು ದಾಟಿ ಕಟ್ಟೆ ಮನೆಗಳಿಗೆ ಒಂದು ಕಣ್ಣು ಬಿಡುತ್ತಾಳೆ. ಆಗ ಬಿಲ್ಲೆ ಎಲ್ಲಿರುವುದೂ ಅಲ್ಲಿಗೆ ನೆಗೆದು

ಬಿಲ್ಲೆ ಮೇಲೆ ತುಳಿಯುತ್ತಾಳೆ. ನೆಗೆಯಲಾಗದಿದ್ದರೆ ಹೆಜ್ಜೆ ಕೇಳುತ್ತಾಳೆ, ಅವಳು ಹೆಜ್ಜೆಕೊಟ್ಟ ನಂತರ ಅಲ್ಲಿಗೆ ನೆಗೆದು ಬಿಲ್ಲೆ ಮೇಲೆ ನೆಗೆಯುತ್ತಾಳೆ. ಆಗ ಬಿಲ್ಲೆ ಕಾಲಿಗೆ ತಗುಲಬೇಕು.

ಈ ರೀತಿಯಾಗಿ ಕುಂಟಾಬಿಲ್ಲೆಯು ಸಂಪೂರ್ಣವಾಗಿ ಮಕ್ಕಳಾಡುವ ಕ್ರೀಡೆ. ಇದೊಂದು ಮಕ್ಕಳಿಗೆ ದೈಹಿಕ ವ್ಯಾಯಾಮದ ಜೊತೆಗೆ ಆತ್ಮವಿಶ್ವಾಸ ಮೂಡಿಸುತ್ತದೆ. ಅಂದರೆ ಅವರು ಮುಖ ಮೇಲೆ ಮಾಡಿ ಗೇರೆ ದಾಟುವಾಗ ಬಿಲ್ಲೆ ಮೇಲೆ ನೆಗೆಯುವಾಗ, ಕುಂಟುತ್ತಾ ಮನೆಯಿಂದ ಮನೆಗೆ ಹಾರುವಾಗ ಈ ರೀತಿಯಾಗಿ ಈ ಕ್ರೀಡೆಯನ್ನು ಮಕ್ಕಳು ತಮಗೆ ಗೊತ್ತಿಲ್ಲದ ಹಾಗೆ ದೈಹಿಕವಾಗಿ ಸದೃಢರಾಗುತ್ತಾ ಮಾನಸಿಕವಾಗಿ ತಮ್ಮ ಬಲವನ್ನು ಬೆಳೆಸಿಕೊಳ್ಳುತ್ತಾರೆ. ಈ ಕ್ರೀಡೆಯಲ್ಲಿ ಪ್ರಾದೇಶಿಕವಾಗಿ ಕೆಲವು ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಆಡುವರರು.

ಒಟ್ಟಾರೆ ವಿಜಯನಗರ ಕಾಲದಲ್ಲಿನ ಕ್ರೀಡೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅಂದು ಅರಸರಾದಿಯಾಗಿ, ಮಾಂಡಲಿಕ, ಸಾಮನ್ಯವರ್ಗದವರು ಒಂದಿಲ್ಲೊಂದು ಕ್ರೀಡೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಮಕ್ಕಳಾದಿಯಾಗಿ, ಸ್ತ್ರೀಯರು ಭಾಗವಹಿಸಿದ ದಾಖಲೆಗಳಿವೆ. ಅಂದು ಕ್ರೀಡೆಗಳಿಗೆ ತುಂಬಾ ಪ್ರಾಮುಖ್ಯತೆಯನ್ನು ಕೊಟ್ಟು, ದೈಹಿಕವಾಗಿ ಸದೃಢರಾಗಿದ್ದರು. ಅಂದಿನ ಕ್ರೀಡೆಗಳಲ್ಲಿ ಬೌದ್ಧಿಕ ಮತ್ತು ದೈಹಿಕತೆಗೆ ಹೆಚ್ಚು ಒತ್ತು ಕೊಟ್ಟಿದ್ದರೂ ಮನರಂಜನಾತ್ಮಕತೆಗೆ ಕೊರತೆಯಿರಲಿಲ್ಲ. ಅಂದು ಯಾವುದೇ ಹಬ್ಬ, ಉತ್ಸವಗಳು ನಡೆದರೆ ಅಲ್ಲಿ ಪ್ರಾಣಿಕಾಳಗ, ಜೂಜಾಟ, ಕುಸ್ತಿ, ಕತ್ತಿವರಸೆ, ಕೊಲುವರಸೆ, ಇತ್ಯಾದಿ ಕ್ರೀಡೆಗಳನ್ನು ಆಯೋಜಿಸುತ್ತಿದ್ದರು. ವಿರಾಮದ ವೇಳೆಯಲ್ಲಿ ದೇವಸ್ಥಾನದ ಮುಂದೆ, ಕೋಟೆಯ ದ್ವಾರ ಬಾಗಿಲಬಳಿ, ಮನೆಯ ಮುಂದಿನ ಚಾವಡಿ, ಊರ ಮುಂದಿನ ಕಟ್ಟೆ ಹೀಗೆ ಎಲ್ಲಿ ಬಯಲು ಪ್ರದೇಶವಿರುತ್ತಿತ್ತೂ ಅಲ್ಲಿ ಗೆರೆಯಾಟಗಳನ್ನು ಆಡುವುದರ ಮೂಲಕ ಬೌದ್ಧಿಕತೆಗೆ ಕಸರತ್ತನ್ನು ಕೊಡುತ್ತಿದ್ದರು. ಮಕ್ಕಳು ಕಾಲಕ್ಕೆ ಅನುಗುಣವಾಗಿ ಚಿನ್ನಿಕೊಲು, ಬುಗುರಿ, ಗಜ್ಜುಗ, ಕುಂಟಾಬಿಲ್ಲೆ, ಮರಕೊತಿ, ಅಣ್ಣಿಕಲ್ಲಾಟಗಳನ್ನು ಆಡುತ್ತಿದ್ದರು. ಮಹಿಳೆಯರು ಮನೆಯಲ್ಲಿ ಬೇಸರವನ್ನು ನೀಗಿಸಿಕೊಳ್ಳಲು ಚೌಕಾಬಾರ, ಚನ್ನೆಮಣಿಯಾಟಗಳನ್ನು ಆಡುತ್ತಿದ್ದರು. ಹೀಗೆ ಅಂದು ಪ್ರತಿಯೋಂದು ವರ್ಗದವರು ಒಂದಿಲ್ಲೊಂದು ಕ್ರೀಡೆಯಲ್ಲಿ ತೊಡಗಿಕೊಂಡು ತಮ್ಮ ಕೌಶಲ್ಯವನ್ನು ಪ್ರದರ್ಶಿಸುತ್ತಿದ್ದರು.

ಟಿಪ್ಪಣಿಗಳು

೧. ಎರಡನೇ ನಾಗವರ್ಮನ ಪುಷ್ಪದಂತ ಪುರಾಣ., ೯-೮೨.
೨. ಕವಿರಾಜ ಮಾರ್ಗ., -೧-೯೮.
೩. ಪಂ.ಭಾ., ೬-೬೯ ವಚನ.
೪. ಚಂ.ಪು,೧೨-೧೨೪.
೫. ಎ.ಕ. ೨., ೧೬೨/೧೩೩ ೧೯೭೩, ಪು-೧೦೮.
೬. ವೆಂಕಟಾಚಲಶಾಸ್ತ್ರಿ, ಟಿ.ವಿ., ಕನ್ನಡ ಚಿತ್ರಕಾವ್ಯ, ಪು-೩೯೦.
೭. ಜ್ಯೋತ್ಸ್ನಾ ಕಾಮತ್, ಕರ್ನಾಟಕ ಶಿಕ್ಷಣ ಪರಂಪರೆ., ಪು-೭೭.
೮. ಶ್ರೀಗೊಂಡೇರ್‌ಕರ್, ಜಿ.ಕ.,(ಸಂ) ಮಾನಸೋಲ್ಲಾಸ ಆಫ್ ಕಿಂಗ್ ಸೋಮೇಶ್ವರ, ಸಂ.೨, ಪು.೩೪-೩೫.
೯. ಎ.ಕ. ೫, ಬೇಲೂರು, ಸಂ-೧೨೪-೪೦, ೧೧೩-೩.

೧೦. ಎಸ್.ಐ.ಐ. ೯.ಭಾಗ೧, ೩೪೩, ೨೩, ಕ್ರಿ.ಶ. ೧೨೨೬.
೧೧. ಎ.ಕ. ಸೂರಬ, ಸಂ-೮೮-೩, ಕ್ರಿ.ಶ. ೯೧೨.
೧೨. ನರಸಿಂಹಚಾರ್, ಡಿ.ಎಲ್.,(ಸಂ) ವಡ್ಡಾರಾಧನೆ, ಪು-೧೨೯-೫.
೧೩. ಪಂ.ಭಾ, ೨-೩೦.
೧೪. ಭೀ ಕ ಬ. ಪು ಸಂ-೪, ಪ.೧೭.
೧೫. ಹೊ.ಕು.ರಾ.ಸಾಂ. ಸಂ. ೬, ಪ. ೫೫.
೧೬. ಅದೇ. ಸಂ-೯. ಪ.೧೧೯
೧೭. ಅದೇ, ಸಂ-೯, ಪ. ೧೯೭.
೧೮. ಅದೇ, ಸಂ-೯, ಪ.-೧೪೯.
೧೯. ಅದೇ, ಸಂ-೯, ಪ.-೧೫೧.
೨೦. ಅದೇ, ಸಂ-೯, ಪ-೨೧೨.
೨೧. ರಾ.ಚ. ಸಂ-೩೦, ಪ-೧೭-೧೮.
೨೨. ಅದೇ, ಸಂ-೩೦, ಪ-೧೨೪.
೨೩. ರಾ.ಚ. ಸಂ-೩೧, ಪ-೬೭.
೨೪. ಪಂ. ಭಾ., ೧೦-೬೫.
೨೫. ಪಂ. ಭಾ., ೧೧-೨೪, ವ-೧೧.
೨೬. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಪು೧೬೬.
೨೭. ಸುಶಿಲೆ ಹೊನ್ನೆಗೌಡ, ಜನಪದ ಆಟಗಳು, ಪು-೫೬.
೨೮ ಎಮ್.ಎ.ಆರ್., ೧೯೨೮, ಪು-೪೫, ಕ್ರಿ.ಶ. ೯೦೦.
೨೯. ಗಧಾಯುದ್ಧ, ೧-೩೩.
೩೦. ಸುಶೀಲೆ ಹೊನ್ನೆಗೌಡ, ಪೂರ್ವೋಕ್ತ, ಪು-೩೪.
೩೧. ಸಾಲತೊರೆ ಬಿ.ಎ., ಸೋಷಿಯಲ್ ಅಂಡ ಪೊಲಿಟಿಕಲ್ ಲೈಪ್ ಇನ್ ವಿಜಯನಗರ ಎಂಪಾಯರ್, ಭಾಗ,-೨, ಪು-೪೦೮.
೩೨. ಅದೇ, ಪು೪೧೬.
೩೩. ಸಂಗಮೇಶ ಭಾ ಮಟೋಳಿ, ಕರ್ನಾಟಕದ ಕುಸ್ತಿ ಪೈಲವಾನರು. ಪು-
೩೪. ನಿರಂಜನ, (ಸಂ) ಕಿರಿಯರ ವಿಶ್ವಕೋಶ ಸಂ-೬, ಪು೨೪೩.
೩೫. ಕಲಬುರ್ಗಿ ಎಂ.ಎಂ., (ಪ್ರ.ಸಂ.) ಮಾನಸೋಲ್ಲಾಸ, ಸಂ೨, ಪು-೪೯೧.
೩೬. ಶ್ರೀಕಂಠಯ್ಯ ಕೆ., ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು.೪೮೪-೮೫.
೩೭. ರಾ.ಚ. ಪು-೬೮.
೩೮. ರಾಮಚಂದ್ರರಾವ್ ಸಿ.ವಿ.,(ಸಂ) ಗುರುಮೂರ್ತಿ ಪೆಂಡಕೂರು(ಕನ್ನಡಕ್ಕೆ) ರಾಯವಾಚಕಮು, ಪು೭೬.
೩೯. ಭ.ವೈ., ಸಂ-೬೩, ಪ-೧೩-೧೪.
೩೯. ಅನಂಪು, ೨-೨೭
೪೦. ಮಾನಸೋಲ್ಲಾಸ, ಪು-೪೮೨.
೪೧. ಅದೇ, ಪು-೪೮೮.
೪೨, ಅದೇ, ಪು-೪೮೯.
೪೩, ಅದೇ, ಪು-೪೯೦.
೪೪. ಗ. ಭಾ. ಸಭಾಪರ್ವ, ೨೯ರಿಂದ ೧೧೨ರವರೆಗಿನ ಪದ್ಯಗಳು.
೪೫. ನೇ.ಪು, ಅಶ್ವಾಸ, ೪, ವ-೫೫.
೪೬. ನೇ.ಪು, ಅಶ್ವಾಸ-೬, ವ-೭೬.
೪೭. ಚಂ. ಸಾ. ಪು. ೫-೭೮.
೪೮. ಮಾನಸೋಲ್ಲಾಸ, ಪು೪೮೭.
೪೯. ಅದೇ, ಅಂಕವಿನೋದ, ಪು-೪೮೪.
೫೦. ಅದೇ, ಪು-೪೮೪-೪೮೫.
೫೧. ಅದೇ, ಪು-೪೮೬-೪೮೭.

೫೨. ಕ ಕ ನಿ ಸಂ.೩. ಪು. ೩೩೭೪.
೫೩. ಅನಂಪು. ೨–೮೮ ವಚನ.
೫೪. ಅದೇ, ಪು–೪೮೭–೪೮೮.
೫೫. ಸಾಳ್ವ ಭಾರತ. ೨೨–೭೨.
೫೬. ಜ್ಯೋತ್ಸ್ನಾ ಕೆ.ಕಾಮತ್, ಸೋಷಿಯಲ್ ಲೈಫ್ ಇನ್ ಮಿಡವಲ್ ಕರ್ನಾಟಕ, ಪು–೭೦.
೫೭. ಸೋಮಶೇಖರ್ ಎಸ್.ವೈ., ಕರ್ನಾಟಕದ ಬಿರುದಾವಳಿಗಳು, ಪು–೪೬.
೫೮. ಮುನಿ ಪುಣ್ಯ ವಿಜಯಂ, (ಸಂ) ಅಖ್ಯಾನುಮಣಿಕೋಶ, ವಾರಣಾಸಿ, ಪು–೧೪.
೫೯. ಮೋ.ತ. ಸಂ–೧೨, ಪ–೭೪.
೬೦. ಅದೇ, ಸಂ–೧೨, ಪ–೭೫.
೬೧. ಪ್ರಾ, ಕಂ. ಇ, ಸಂ–೨. ಪು–೩೬೪.
೬೨. ಸೆವೆಲ್, ರಾಬರ್ಟ್,. (ಅನು: ಸದಾನಂದ ಕನವಳ್ಳಿ) ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು–೨೨೭.
೬೩. ಭ. ವೈ. ಸಂ–೨೦, ಪ–೩೮–೩೯.
೬೪. ನರಸಿಂಹಚಾರ್ ಆರ್., ಕರ್ನಾಟಕ ಕವಿಚರಿತೆ, ಭಾಗ–೨, ಪು–೨೩೪.
೬೫. ಸಾಲತೊರೆ ಬಿ.ಎ., ಪೂರ್ವೋಕ್ತ, ಪು–೬೦.
೬೬. ಪ್ರ. ಕಂ. ಇ. ಪು–೨೬೧.
೬೭. ಎ.ಕ. ೭, ಎಸ್.ಕೆ., ೨, ಸ–೩೯.
೬೮, ಸೆವೆಲ್, ರಾಬರ್ಟ್,. ಪೂರ್ವೂಕ್ತ, ಪು–೨೫೬.
೬೯. ಸುಧಾ, ಸಂಪುಟ–೪೯, ಸಂಚಿಕೆ–೪೦, ೩೦ ಅಕ್ಟೋಬರ್ ೩೧, ಪು–೪೭೨೮.
೭೦. ಅದೇ, ಪು–೨೮.
೭೧. ಗ.ಭಾ.ಉ. ೨–೨೭.
೭೨. ಅದೇ, ೭–೨೮.
೭೩. ಕೆಳದಿ ನೃಪವಿಜಯ,. ೩–೧೪.
೭೪. ಮೋ.ತ. ಸಂ–೨೦, ಪ–೨೧.
೭೫. ಅದೇ, ಸಂ–೨೦, ಪ–೨೨.
೭೬. ಅದೇ, ಸಂ–೨೦, ಪ–೨೩.
೭೭. ಅದೇ, ಸಂ೨೦, ಪ–೨೪.
೭೮. ಅದೇ ಸಂ೦೨, ಪ–೨೦.
೭೯. ಅದೇ, ಸಂ–೨೦ ಪ–೨೦.
೮೦. ಶ್ರೀ ಪ್ರಸನ್ನ ವೆಂಕಟದಾಸರು ಮತ್ತು ಅವರ ಕೃತಿಗಳು, ಪು–೧೪.
೮೧. ಸುನಂದಮ್ಮ ಆರ್., ದಾಸ ಸಾಹಿತ್ಯದಲ್ಲಿ ಜಾನಪದಿಯ ಅಂಶಗಳು, ಪು–೧೯೩.
೮೨. ನಂಜುಡಯ್ಯ, ಹೆಚ್.ಎಂ., (ಮೂಲ) ಪ್ರಭಕರ ಎ.ಎಸ್., (ಅನು) ಮೈಸೂರಿನ ಎತ್ನೊಗ್ರಾಫಿಕಲ್ ಪರ್ವ ಪ್ರಭಾಕರ್ ಎ.ಎಸ್. ಚಂದ್ರಕಾಂತ,ಟಿ.ಎನ್., ಡೊಂಬರು ಒಂದು ಚಾರಿತ್ರಿಕ ಅಧ್ಯಯನ, ಪು–೧೦.
೮೩. ಅದೇ, ಪು–೧೦.
೮೪. ನರಸಿಂಹಚಾರ್ ಡಿ.ಎಲ್., ವಡ್ಡಾರಾಧನೆ, ಪು–೮.
೮೫. ಸಣ್ಣಯ್ಯ ಬಿ.ಎಸ್., ಮಾಳಿಗೆ ಮಾರಯ್ಯನ ವಚನಗಳು, ಪು–೩೧.
೮೬. ಹಳಕಟ್ಟಿ ಪಿ.ಜಿ., ಹಡಪದಣ್ಣನ ವಚನಗಳು ಪು–೯.
೮೭. ಬಸವರಾಜು ಎಲ್., ಅಕ್ಕನವಚನಗಳು, ವಚನ–೨೦, ಪು–೧೬.
೮೮. ಹಳಕಟ್ಟಿ ಪಿ.ಜಿ., ವಚನಶಾಸ್ತ್ರ ಸಾರ ಭಾಗ–೧, ಪು–೧೬೩.
೮೯. ಬಸವರಾಜು ಎಲ್., ದೇವರದಾಸಿಮಯ್ಯನ ವಚನಗಳು, ವಚನ–೭೯, ಪು–೨೬.
೯೦. ಪ್ರಾ, ಕಂ. ಇ. ಸಂ–೧, ಪು–೩೬೧.
೯೧. ಕೇಶವನ್ ಪ್ರಸಾದ್, ಕೆ., ಮರಟ್ಟಿ ದೊಂಬರು, ಪ್ರಭಾಕರ ಎ.ಎಸ್., ಚಂದ್ರಕಾಂತ,ಟಿ.ಎಸ್. ಪು–೭೮ ೭೯.
೯೨. ಕೃದಾಭಿರಾಮ, ೫–೧೪೪, ಪು–೩೭೯.
೯೩. ಎಲಿಯಟ್ ಹಿಸ್ಟರಿ ಆಫ್ ಇಂಡಿಯಾ, ಸಂಪುಟ–೪, ಪು–೧೧೮–೧೧೯. ಲಿನಷಂಟನ್ ಪರಚೇಸ್ ಹಿಸ್ ಪಿಲಿಗ್ರಾಮ್ಸ ೧೦, ಗ್ಲಾಸ್ಗೊ, ಪು–೨೪೭–೮.

೯೪. ನಾಗರಾಜು ಹೆಚ್.ಎಂ., ವಿಜಯನಗರದ ಇಮ್ಮಡಿ ದೇವರಾಯ, ಪು–೧೯೫.
೯೫. ಎ.ಆರ್. ನಂ.ಬಿ., ೭೬೯ ಆಫ್ ೧೯೧೭,
೯೬. ಎಮ್.ಎ.ಆರ್., ೧೯೩೮ ಪು–೨೨೨.
೯೭. ಭ. ವೈ., ಪು–೨೦–೩೮.
೯೮. ಪುರಂದರ ಸಾಹಿತ್ಯ ದರ್ಶನ ಸಂಪುಟ–೪, ಪು–೬೦.
೯೯. ಪುರಂದರ ಸಾಹಿತ್ಯ ದರ್ಶನ ಸಂಪುಟ–೨, ಪು–೩೯೮.
೧೦೦. ಅಂತರ್‌ಜಾಲದಿಂದ
೧೦೧. ರಾವ್,ಎಸ್.ಆರ್.,(ಮೂಲ) ಗುರುರಾಜಚಾರ್, ಎಸ್.,(ಅನು) ಲೋಥಾಲ್ ಮತ್ತು ಸಿಂಧೂನಾಗರೀಕತೆ, ಪು–೧೧–೧೧೨.
೧೦೨. ಪ್ರಧಾನ ಗುರದತ್,(ಪ್ರಸಂ) ನಾಗರೀಕತೆಯ ಕತೆ, ನಮ್ಮ ಪ್ರಾಚ್ಯ ಪರಂಪರೆ ಪು–೪೮೩.
೧೦೩. ಬಾಶಮ್ ಎ.ಎಲ್., (ಇಂಗ್ಲೀಷ್ ಮೂಲ) ವಿರ್ಜಿ ಡಿ.ಆರ್., (ಕನ್ನಡಕ್ಕೆ) ಪ್ರಾಚೀನ ಭಾರತವೆಂಬ ಅದ್ಭುತ, ಪು–೩೦೦.
೧೦೪. ಶಿಲಾಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು–೮೪.
೧೦೫. ಅದೇ, ಪು–೮೪.
೧೦೬. ಎ.ಕ. ೬, ಚಿಕ್ಕಮಂಗಳೂರು, ಸಂ–೨೨, ಕ್ರಿಶ. ೧೧೦೦.
೧೦೭. ರಾ.ಚ. ಸಂ–೨೨, ಪ–೫೧.
೧೦೮. ಭ. ವೈ. ಸಂ–೧೦, ಪ–೧೮–೧೯.
೧೦೯. ಭೀಮಕವಿಯ ಬಸವ ಪುರಾಣ, ಸಂ–೪೨, ಪ–೩.
೧೧೦. ಜೈ. ಭಾ. ಸಂ–೬, ಪ–೩೧.
೧೧೧. ನೀಲಕಂಠಶಾಸ್ತ್ರಿ ಕೆ.ಎ., ವೆಂಕಟರಮಣಯ್ಯ ಎನ್., ಫರ್ದರ್ ಸೊರಸಸ್, ಪು–೫೧.
೧೧೨. ಅದೇ, ಪು–೫೧.
೧೧೩. ಸೀತಾರಾಮಯ್ಯ, ಎಂ.ವಿ,. ಕೃಷ್ಣದೇವರಾಯನ ದಿನಚರಿ, ಪು
೧೧೪. ಸರಸ್ವತಿ ಎನ್., ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಪು–೧೭೧.
೧೧೫. ಪಂ. ಭಾ, ೯–೬೯.
೧೧೬. ಭೀಮಕವಿಯ ಬಸವಪುರಾಣ, ಸಂ–೪೨, ಪ–೩.
೧೧೭. ಜೈ. ಭಾ, ಸಂ–೬, ಪ–೩೧.
೧೧೮. ರಾ.ಚ. ಸಂ–೨೭, ಪ–೫೧.
೧೧೯. ಜೈ. ಭಾ., ಸಂ–೬, ಪ–೩೯.
೧೨೦. ಶ್ರೀಕಂಠಯ್ಯ ಕೆ., ಕನ್ನಡ ಕವಿಗಳು ಕಂಡ ಕ್ರೀಡೆಗಳು, ಪು–೫೪.
೧೨೧. ನಳಚರಿತೆ, ೪–೨೯.
೧೨೨. ಅದೇ, ೪–೨೯.
೧೨೩. ಭೀ ಬ ಪು, ೪೩–೬.
೧೨೪. ಅದೇ, ೪೩–೬.
೧೨೫. ಶ್ರೀಕಂಠಯ್ಯ ಕೆ., ಪೂರ್ವೋಕ್ತ, ಪು–೧೦.
೧೨೬. ಅದೇ, ಪು–೧೧.
೧೨೭. ದ ಚ, ೮–೬೨.
೧೨೮. ರಾ.ಚ. ೨೮–೨.
೧೨೯. ವಸಂತ ರಂಗಾಚಾರ್, ಬೊರ್ಡಗೇಮ್ಸ್ ಪ್ರಮ್ ದ ಸಿಟಿ ಆಫ್ ವಿಜಯನಗರ, ಪು.೧
೧೩೦. ಗಣಗನಾಥ ಎಕ್ಕಾರು,. ತುಳುನಾಡಿನ ಜನಪದ ಆಟಗಳು, ಪು–೧೧೨.
೧೩೧. ಅದೇ, ಪು–೧೧೨.
೧೩೨. ಚಂ. ಸಾ. ೧೮–೧೯.
೧೩೩. ಶ್ರೀಕಂಠಯ್ಯ ಕೆ., ಪೂರ್ವೋಕ್ತ, ಪು–೮.
೧೩೪. ಗಣಗನಾಥ ಎಕ್ಕಾರು ಪೂರ್ವೋಕ್ತ, ಪು–೧೯.
೧೩೫. ಅದೇ, ಪು–೧೩೮.
೧೩೬. ಅರವಿಂದ ಮಾಲಗತ್ತಿ,. ಪುರಾಣ ಜಾನಪದ ಮತ್ತು ದೇಶಿವಾದ, ಪು–೨೪.
೧೩೭. ಅದೇ, ಪು–೨೪.

೧೩೮. ಅದೇ, ಪು-೨೫.
೧೩೯. ರಾಜೇಗೌಡ ಹೊಸಹಳ್ಳಿ,. ಕರ್ನಾಟಕ ಜಾನಪದ ಆಟಗಳು, ನಲ್ಲೂರು ಪ್ರಸಾದ್,(ಸಂ) ಜಾನಪದ ಭಾರತಿ, ಪು-೧೦೦.
೧೪೦. ನಾಯಕ ಎನ್.ಆರ್., ಶ್ರೀಮತಿ ನಾಯಕ,.(ಸಂ) ಕನ್ನಡ ಜಿಲ್ಲೆಯ ಜನಪದ ಆಟಗಳು, ಪು-೨೯೩೦.
೧೪೧. ನರೇಂದ್ರ ರೈದೇರ್ಲ,. ಕನ್ನಡ ಸಾಹಿತ್ಯದಲ್ಲಿ ಬೇಟೆ ಪು-೮.
೧೪೨. ರಾಥ ಕೃಷ್ಣಮೂರ್ತಿ,. ಸಂಸ್ಕೃತ ಕಾವ್ಯಗಳಲ್ಲಿ ರಾಜಮನೋರಂಜನೆಯಾಗಿ ಬೇಟೆ, ಇ.ದ. ಸಂ.೭, ಪು-೨೩೩.
೧೪೩. ನರೇಂದರ ರೈದೇರ್ಲ, ಪೂರ್ವೋಕ್ತ [ಇ-೮.
೧೪೪. ವಿರೂಪಾಕ್ಷಿ ಪೂಜಾರಹಳ್ಳಿ,. ವಿಜಯನಗರ ಕಾಲದ ಸಂಸ್ಕೃತಿ, ಪು-೪೫.
೧೪೫. ರಾಥ ಕೃಷ್ಣಮೂರ್ತಿ, ಪೂರ್ವೋಕ್ತ, ಪು-೨೩೩.
೧೪೬. ಪರಮೇಶ್ವರಪ್ಪ, (ಸಂ) ಹಂಪೆ ಪರಂಪರೆ, ಪು-೫೧.
೧೪೭. ಎ.ಕ. ೧೦, ಬಿ.ಜಿ. ಸಂ-೭೦. ಬಟರ್‌ವರ್ಥನೆಲ್ಲೂರು ಇನ್‌ಸ್ಕ್ರಿಪ್ಸ್‌ನ್ಸ್-೧.
೧೪೮. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು-೫೧.
೧೪೯. ಅದೇ, ಪು-೧೩೯.
೧೫೦. ಗಣಗನಾಥ ಎಕ್ಕಾರು, ಪೂರ್ವೋಕ್ತ, ಪು-೫೧.
೧೫೧. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು-೫೫.
೧೫೨. ಎ.ಕ. ೧೧, ಮೊಳಕಾಲ್ಮೂರು, ಸಂ-೩೨.
೧೫೩. ಮಹಾಲಿಂಗಂ ಟಿ.ವಿ., ಸೌತ್ ಇಂಡಿಯನ್ ಪಾಲಿಟಿ, ಪು-೭೦.
೧೫೪. ಎಂ.ಎ.ಆರ್., ೧೯೧೩, ಸಂ-೯೬೧, ಪು-೧೨೦.
೧೫೫. ಎ.ಕ. ೧೦, ಎಂ.ಬಿ., ೧೪೭.
೧೫೬. ಎ.ಕ. ೪, ಜಿ.ಎನ್., ೫.
೧೫೭. ಮೋ.ತ. ಸಂ-೧೯, ಪ-೨೧.
೧೫೮. ಅದೇ, ಸಂ-೧೯, ಪ-೨೭.
೧೫೯. ಅದೇ, ಸಂ-೧೯, ಪ-೩೬.
೧೬೦. ಅದೇ, ಸಂ-೧೯, ಪ-೩೭.
೧೬೧. ನಾಗೇಗೌಡ, ಹೆಚ್.ಎಲ್., ಪೂರ್ವೋಕ್ತ, ಪು-೧೪೬.
೧೬೨. ಮೋ.ತ. ಸಂ-೧೯ ಪ-೨೬.
೧೬೩. ನರೇಗಲ್ಲ ಎಂ.ಎಸ್., ಉತ್ತರ ಗದಗ ಜಿಲ್ಲೆಯ ಶಾಸನಗಳು ಒಂದು ಅಧ್ಯಯನ, ಪು-೨೨೫೨೬.
೧೬೪. ಮೋ.ತ. ಸಂ-೧೯, ಪ-೨೮.
೧೬೫. ಅದೇ, ಸಂ-೧೯, ಪ-೨೯.
೧೬೬. ರಾಚ. ಸಂ-೩೪, ಪ-೨.
೧೬೭. ಅದೇ, ಸಂ-೩೪, ಪ-೩.
೧೬೮. ಅದೇ, ಸಂ-೨೭, ಪ-೭೬.
೧೬೯. ಅದೇ, ಸಂ-೨೭, ಪ-೭೭.
೧೭೦. ಅದೇ, ಸಂ-೨೭, ಪ-೭೯.
೧೭೧. ಅದೇ, ಸಂ-೨೭, ಪ-೬೫.
೧೭೨. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು-೧೬೧.
೧೭೩. ರಾ.ಚ. ಸಂ-೨೭, ಪ-೬೬.
೧೭೪. ಮೋ.ತ. ಸಂ-೧೯, ಪ-೬.
೧೭೫. ಅದೇ, ಸಂ೧೯, ಪ-೭.
೧೭೬. ಅದೇ, ಸಂ-೯, ಪ-೮.
೧೭೭. ಅದೇ, ಸಂ-೧೯, ಪ-೧೦.
೧೭೮. ಎಸ್.ಐ.ಐ. ೯, ಭಾಗ-೧, ನ-೩೭, ಗಣೇಶ ಕೆ.ಆರ್., ಶೇಷಶಾಸ್ತ್ರಿ ಆರ್., (ಸಂ) ಕ.ವಿ.ವಿ.ಶಾ., ಸಂ-೫., ಪು-೮೫.
೧೭೯. ರಾ.ಚ. ಸಂ೨೭-, ಪ-೮೫.

೧೮೦. ಅದೇ, ಸಂ–೨೭, ಪ–೮೬.
೧೮೧. ಅದೇ, ಸಂ–೨೭, ಪ–೪೧.
೧೮೨. ಬಾಶಮ್ ಎ.ಎಲ್.,(ಮೂಲ) ಮಿಜಿ ಡಿ.ಆರ್.,(ಕನ್ನಡಕ್ಕೆ), ಪೂರ್ವೋಕ್ತ, ಪು–೨೮೨.
೧೮೩. ತಳವಾರ ಎನ್.ಎಂ., ನಂಜುಂಡ ಕವಿಯ ರಾಮನಾಥ ಚರಿತೆ, ಸಾಂಸ್ಕೃತಿಕ ಅಧ್ಯಯನ ಪು–೨೩೭.
೧೮೪. ರಾ.ಚ. ಸಂ–೨೭, ಪ–೮೧.
೧೮೫. ಅದೇ, ಸಂ–೨೭, ಪ–೮೨.
೧೮೬. ಅದೇ, ಸಂ–೨೭, ಪ–೮೩.
೧೮೭. ಅದೇ, ಸಂ–೨೭, ಪ–೮೪.
೧೮೮. ಅದೇ, ಸಂ–೨೭, ಪ–೮೫.
೧೮೯. ಅದೇ, ಸಂ–೨೭, ಪ–೮೬.
೧೯೦. ಅದೇ, ಸಂ–೨೭, ಪ–೪೫.
೧೯೧. ಅದೇ, ಸಂ–೨೩, ಪ–೧೦.
೧೯೨. ಅದೇ, ಸಂ೨೭, ಪ–೪೩.
೧೯೩. ಕ.ಸಾ.ಪ. ನಿಘಂಟು, ಸಂಪುಟ–೪, ಪು–೩೬೧೯.
೧೯೪. ಮೋ.ತ. ಸಂ–೧೯, ಪ–೧೬.
೧೯೫. ಅದೇ, ಸಂ–೧೯, ಪ–೬೮.
೧೯೬. ಅದೇ, ಸಂ–೧೯, ಪ–೬೯.
೧೯೭. ಭೀ ಕ ಬ ಪು, ಸಂ–೪೩, ಪ–೭.
೧೯೮. ರಾಬರ್ಟ್‌ಸೆವೆಲ್ ಫರಗಾಟನ್ ಎಂಪಾಯಿರ್, ಪು–೨೦೧.
೧೯೯. ರಾ.ಚ. ಸಂ–೨೭, ಪ–೫–೬.
೨೦೦. ರಾ.ಚ. ಸಂ೭೭, ಪ–೩೫.
೨೦೧. ಸೆವೆಲ್, ರಾಬರ್ಟ್, ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು–೨೩.
೨೦೨. ಪ್ರ.ಕಂ.ಇ.. ಸಂ.೨, ಪು–೧೪೬.
೨೦೩. ರಾ.ಚ. ಸಂ–೭೭, ಪ–೧೩೨.
೨೦೪. ಪ್ರ.ಕ.ಇ. ಸಂ–೨, ಪು–೩೫೪.
೨೦೫. ಸಾಲೆತೊರೆ ಬಿ.ಎ., ಪೂರ್ವೋಕ್ತ, ಪು–೪೨೧.
೨೦೬. ಬೆಟಗೇರಿ ಕೃಷ್ಣಶರ್ಮ, ಕರ್ನಾಟಕ ಜನಜೀವನ, ಪು–೧೫೮.
೨೦೭. ಮೋ.ತ. ಸಂ–೪, ಪ–೭೯.
೨೦೮. ಜೈ.ಭಾ. ಸಂ–೧೨, ಪ–೧೦.
೨೦೯. ಕಲಬುರ್ಗಿ ಎಂ.ಎಂ., (ಪ್ರಸಂ) ಮಾನಸೋಲ್ಲಾಸ, ಪು–೫೧೦.
೨೧೦. ಅದೇ, ಪು–೫೧೭.
೨೧೧. ಅದೇ, ಪು–೫೧೭.
೨೧೨. ಶಿವಾನಂದ ವಿರಕ್ತಮಠ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪು–೧೦೮.
೨೧೩. ರಾ.ಚ. ಸಂ–೨೦, ಪ–೫೫.
೨೧೪. ಅದೇ, ಸಂ–೨೦, ಪ–೫೬.
೨೧೫. ಅದೇ, ಸಂ–೨೦–ಪ–೫೭.
೨೧೬. ಅದೇ, ಸಂ–೨೦, ಪ–೫೮.
೨೧೭. ಅದೇ, ಸಂ–೨೦, ಪ–೫೯.
೨೧೮. ಕಿರಿಯರ ವಿಶ್ವಕೋಶ,. ಸಂಪುಟ–೬, ಪು–೨೩೫.
೨೧೯. ಶ್ರೀಧರ ಮೂರ್ತಿ, ವಾತ್ಸಾಯನ ಕಾಮಸೂತ್ರ, ಪು–೬೩.
೨೨೦. ಶಾ. ನಾ. ಪು. ೯–೪೫.
೨೨೧. ಜೈ.ಭಾ., ೬–೩೯.
೨೨೨. ಮೋ.ತ. ಸಂ–೧೭, ಪ–೮೨.
೨೨೩. ಕು.ರಾ.ಚ. ಸಂ–೨೦, ಪ–೬೦.
೨೨೪. ಅದೇ, ಸಂ–೨೦, ಪ–೬೧.
೨೨೫. ಅದೇ, ಸಂ–೨೦, ಪ–೬೨.

೨೨೬. ಭೀ ಬ ಷು, ಸಂ-೭, ಪ-೩೧.
೨೨೭. ಪ್ರ.ಕಂ.ಇ. ಸಂ-೨, ಪು-೧೨೦-೨೧.
೨೨೮. ಮಾನಸೋಲ್ಲಾಸ, ಪೂರ್ವೋಕ್ತ, ಪು-೪೯೪-೯೫.
೨೨೯. ಅದೇ, ಪು-೪೯೬.
೨೩೦. ಮೋ.ತ. ಸಂ-೪, ಪ-೭೮.
೨೩೧. ಅರವಿಂದ ಮಾಲಗತ್ತಿ, ಜನಪದ ಆಟಗಳು, ಪು-೨೬೦.
೨೩೨. ಮಾನಸೋಲ್ಲಾಸ, ಪೂವೋಕ್ತ, ಪು-೫೧೮.
೨೩೩. ಅದೇ, ಪು-೫೧೮.
೨೩೪. ಅದೇ, ಪು-೫೧೯.
೨೩೫. ಕಂ ನ ವಿ, ೭-೧೬.
೨೩೬. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಪು-೪೫.
೨೩೭. ಅದೇ, ಪು-೧೨೫.
೨೩೮. ಕಿರಿಯರ ವಿಶ್ವಕೋಶ, ಸಂ-೬, ಪು-೬೧.
೨೩೯. ಮೋ.ತ. ಸಂ-೧೭, ಪ-೮೨.
೨೪೦. ವಡ್ಡಾರಾಧನೆ, ೨-೧೪.
೨೪೧. ಅರವಿಂದ ಮಾಲಗತ್ತಿ, ಜನಪದ ಆಟಗಳು, ಪು-೨೬೧.
೨೪೨. ಪ್ರ ಕಂ. ಇ. ಸಂ-೫, ಪು-೧೯೫.
೨೪೩. ಪ್ರ ಕಂ. ಇ , ಸಂ-೧, ಪು-೧೨೫.
೨೪೪. ಪ್ರ ಕಂ. ಇ ಅದೇ, ಸಂ-೩, ಪು-೧೫೩.
೨೪೫. ಅರವಿಂದ ಮಾಲಗತ್ತಿ, ಪೂವೋಕ್ತ, ಪು-೨೬೨.
೨೪೬. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಸಂ-೩, ಪು-೨೦.
೨೪೭. ಅದೇ, ಪು-೧೫೪-೫೫.
೨೪೮. ಅದೇ, ಸಂ-೧, ಪು-೧೨೬.
೨೪೯. ಮೋ.ತ. ಸಂ-೧೪, ಪ-೮೮.
೨೫೦. ಅದೇ, ಸಂ-೧೪,ಪ-೯೦.
೨೫೧. ಅದೇ, ಸಂ-೧೪, ಪ-೮೯.
೨೫೨. ಅದೇ, ಸಂ-೧೪, ಪ-೩೨.
೨೫೩. ಸೆವೆಲ್, ರಾಬರ್ಟ್,. ಪೂವೋಕ್ತ, ಪು-೨೫೫-೫೬.
೨೫೪. ಪ್ರಾ ಕಂ. ಇ. ಸಂ-೨, ಪು-೩೫೪.
೨೫೫. ಕಂ ನ ವಿ, ೧೪-೨೬.
೨೫೬. ಬೆಟಗೇರಿ ಕೃಷ್ಣಶರ್ಮ, ಕರ್ನಾಟಕ ಜನಜೀವನ, ಪು-೫೯.
೨೫೭. ಕನ್ನಡ ನಿಘಂಟು, ಕ.ಸಾ.ಪ., ಸಂ-೩, ಪು-೨೪೯೨.
೨೫೮. ಹರಿಲಾಲ್ ಕೆ. ಪವಾರ್, ಗಾಳಿಪಟ, ನಾಗೇಗೌಡ ಹೆಚ್.ಎಲ್.,(ಸಂ) ಜಾನಪದ ಜಗತ್ತು, ಸಂಪುಟ-೯, ಸಂಚಿಕೆ-೪, ಪು-೨೪.
೨೫೯, ಅದೇ, ಪು-೨೪.
೨೬೦. ಸಣ್ಣಯ್ಯ ಬಿ.ಎಸ್., ಮೇರೆ ಮಿಂಡಯ್ಯನ ವಚನಗಳು, ಪು-೬೧.
೨೬೧. ಅದೇ, ಪು-೨೧.
೨೬೨. ಕಿರಿಯರ ವಿಶ್ವಕೋಶ, ಪು-೧೧.
೨೬೩. ಮೋ.ತ. ಸಂ-೪?, ಪ-೧೭.
೨೬೪. ಕುಶಾಲಪ್ಪಗೌಡ ಕೆ.,(ಅನು) ಗಂಗಾದೇವಿಯ ಮಧುರಾ ವಿಜಯಂ, ಸರ್ಗ-೬, ಪ.೪೭೪೯.
೨೬೫. ಅದೇ, ಸರ್ಗ-೬, ಪ-೫೭.
೨೬೬. ಮೋ.ತ. ಸಂ-೧೪, ಪ-೨೮.
೨೬೭. ಷೆಟ್ಟರ್. ಷ,. ವಿಜಯನಗರದ ಜಲಕುಂಡಗಳು, ವಸು ಎಂ.ವಿ., (ಸಂ) ಕನ್ನಡದೊಳ್ ಬಾವಿಸಿದ ಜನಪದಂ, ಪು-೫೯
೨೬೮. ಕುಶಾಲಪ್ಪಗೌಡ, ಪೂರ್ವೋಕ್ತ, ಸರ್ಗ-೬, ಪ-೫೮.
೨೬೯. ಅದೇ, ಸರ್ಗ-೬, ಪ-೫೯.
೨೭೦. ಷಟ್ಟರ್, ಷ,. ಪೂರ್ವೋಕ್ತ, ಪು-೩೪.

೨೭೧. ಮೋ. ತ. ಸಂ-೧೪, ಪ-೩೭.
೨೭೨. ಅದೇ, ಸಂ-೧೪, ಪ-೫೪.
೨೭೩. ಷಟ್ಟರ್. ಷ. ಪೂರ್ವೋಕ್ತ, ಪು-೪೩-೪೪.
೨೭೪. ಸೂರ್ಯಕಾಂತ,(ಅನು) ವರದಾಂಭಿಕ ಪರಿಣಯಂ ಆಫ್ ತಿರುಮಲಾಂಭ, ಪು-೭೦.
೨೭೫. ಮಧು ಪಿ.ಪಾಟೀಲ್, ಕೋರ್ಟ್‌ಲೈಫ್ ಅಂಡರ್ ದ ವಿಜಯನಗರ ರೂಲರ್ಸ್, ಪು-೧೫೫.
೨೭೬. ಸೂರ್ಯಕಾಂತ, (ಅನು) ಪೂರ್ವೋಕ್ತ, ಪು-೭೦.
೨೭೭. ರಾಬರ್ಟ್‌ಸೆವೆಲ್, ಫರ್ಗ್ಗಾಟನ್ ಎಂಪಾಯರ್, ಪು-೨೪೯.
೨೭೮.. ಪ್ರೌ. ದೇ. ಕಾ. ಸಂ-೪ ಪ- ೮೫-೯೧.
೨೭೯.. ವಿರಕ್ತಮಠ ಶಿವಾನಂದ,. ಪೂರ್ವೋಕ್ತ, ಪು- ೧೧೦.
೨೮೦. ರಾ.ಚ. ೨೪-೫೧.
೨೮೧. ಜೈ.ಭಾ., ೨೧-೧೨.
೨೮೨. ಭೀ ಬ ಮ, ೭-೬೦.
೨೮೩. ಸುನಂದಮ್ಮ ಆರ್., ಪೂರ್ವೋಕ್ತ, ಪು-೧೯೪.
೨೮೪. ಪುರಾಂದರ ದಾಸರ ಕೀರ್ತನೆಗಳು, ೨-೨೦-೨.
೨೮೫. ಮೈತ್ರಿ ಕೆ.ಎಂ.,(ಸಂ), ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಪು.೪೩೯-೪೦.
೨೮೬. ಶ್ರೀ ಗೋಪಾಲದಾಸರ ಕೃತಿಗಳು, ಪು-೧೫೬.
೨೮೭. ಬೈರೆಗೌಡ ಎಂ., ಜಾನಪದ ವೈವಿದ್ಯ, ಪು-೧೪೮.
೨೮೮. ಪಂ. ಭಾ., ದ್ವಿತೀಯ ಅಶ್ವಾಸ, ಪು-೪೫.
೨೮೯. ಗೋಪಾಲದಾಸರ ಕೃತಿಗಳು, ಪೂರ್ವೋಕ್ತ, ಪು-೧೦೪.
೨೯೦. ನಾಡಗೀರ್ ಕೆ. ಜಿ. ಶರೀರ ಶಿಕ್ಷಣ ಮತ್ತು ಕ್ರೀಡೆಗಳು, ಪು- ೯೬.
೨೯೧. ಮೋ.ತ., ೨೦-೨೫.

ಅಧ್ಯಾಯ ನಾಲ್ಕು

ಹಬ್ಬಗಳು

ಅಧ್ಯಾಯ ನಾಲ್ಕು

ಹಬ್ಬಗಳು

ಹಬ್ಬಗಳು ನಮ್ಮ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಹಾಸುಹೊಕ್ಕಾಗಿವೆ. ಹಬ್ಬಗಳು ಮನುಷ್ಯ ವರ್ಗಕ್ಕೆ ಸಹಜ ಪ್ರೀತಿಯ ಹಾಗೂ ಸಂತಸದ ವಿಷಯವಾಗಿವೆ. ಉತ್ಸವ ಪ್ರಿಯಾಃ ಖಲು ಮುನುಷ್ಯಾಃ ಎಂದು ಮಹಾಕವಿ ಕಾಳಿದಾಸನು ಈ ಸತ್ಯವನ್ನು ಗಮನಿಸಿದ್ದಾನೆ.[೧] ಹಬ್ಬಗಳು ಮಾನವನ ಜೀವನದಲ್ಲಿ ವಿಶೇಷವಾದ ಸಂತೋಷದ ಕ್ಷಣಗಳಾಗಿವೆ. ಬಂಧು ಬಳಗ, ಇಷ್ಟಮಿತ್ರರು ಮುಂತಾದವರು ಒಂದೆಡೆಯಲ್ಲಿ ಒಟ್ಟಾಗಿ ಸೇರುವುದು, ರುಚಿರುಚಿಯಾದ ತಿಂಡಿ ತಿನಿಸುಗಳನ್ನು ತಿಂದು ಆಡುವುದು, ಮನಸೋಇಚ್ಛೆ ಮಾತನಾಡುವುದು ಇತ್ಯಾದಿ ರೂಪಗಳಲ್ಲಿ ಇಂದ್ರಿಯಗಳ ಆನಂದವನ್ನು ಅನುಭವಿಸುತ್ತಾರೆ. ಜೀವನದಲ್ಲಿ ಕಷ್ಟಕಾರ್ಪಣ್ಯಗಳಿದ್ದರೆ ಅವುಗಳನ್ನು ಮರೆಯುವುದು. ಇದು ಸಾಮಾನ್ಯವಾಗಿ ಎಲ್ಲಾ ದೇಶ, ಜನಾಂಗ ಸಂಸ್ಕೃತಿಗಳಿಗೆ ಸೇರಿದ ಜನರು ಹಬ್ಬ ಆಚರಿಸುವ ವಿಧಾನವಾಗಿದೆ. ಪ್ರಾಚೀನ ಕಾಲದಿಂದಲೂ ಆಚರಿಸುತ್ತಿದ್ದರು ಎಂಬುದಕ್ಕೆ ಅನೇಕ ಪುರಾಣ, ಐತಿಹ್ಯಗಳೇ ದಾಖಲೆಗಳಾಗಿವೆ. ಪ್ರಾಚೀನ ಸಾಮ್ರಾಜ್ಯಗಳಲ್ಲಿ ಒಂದಾದ ವಿಜಯನಗರವು ಕೇವಲ ಸಾಮ್ರಾಜ್ಯ ವಿಸ್ತರಣೆ, ಯುದ್ಧಗಳಲ್ಲಿ ತೊಡಗಿಕೊಳ್ಳದೆ, ಬಿಡುವಿನ ವೇಳೆಯಲ್ಲಿ ಕಾಲಕಾಲಕ್ಕೆ ಅನುಗುಣವಾಗಿ ಹಬ್ಬಗಳನ್ನು ಆಚರಿಸುತ್ತಿದ್ದರು ಎಂಬುದನ್ನು ಶಾಸನ, ವಿದೇಶಿ ಪ್ರವಾಸಿಗರ ವರದಿ, ಸಾಹಿತ್ಯ ಕೃತಿಗಳು ಸಾರುತ್ತವೆ. ಅರಸರು, ಸಾಮಂತರು, ಸಾಮಾನ್ಯರು ಆಚರಿಸುತ್ತಿದ್ದ ಹಬ್ಬಗಳು ವೈದಿಕ ಸಂಸ್ಕೃತಿಯಲ್ಲಿ ಗಣನಿಯವಾದ ಸ್ಥಾನ ಪಡೆದಿವೆ. ಅವುಗಳಲ್ಲಿ ಮುಖ್ಯವಾದವು ಮಹಾನವಮಿ, ಯುಗಾದಿ, ದೀಪಾವಳಿ, ಶಿವರಾತ್ರಿ, ಮಕರಸಂಕ್ರಾತಿ, ವಸಂತೋತ್ಸವ, ಹೋಳಿ, ಗೋಕುಲಾಷ್ಟಮಿ ಇತ್ಯಾದಿ ಈ ಹಬ್ಬ, ಜಾತ್ರೆ, ಉತ್ಸವಗಳು ವಿಜಯನಗರದ ಧಾರ್ಮಿಕ ಜೀವನದಲ್ಲಿ ಅತಿ ಮಹತ್ವದ ಪಾತ್ರ ವಹಿಸುತ್ತಿದ್ದವು.[೨] ಇವರು ಹಬ್ಬಗಳನ್ನು ಭಕ್ತಿ ಮತ್ತು ಸಂತೋಷದಿಂದ ಆಚರಿಸುತ್ತಿದ್ದರು. ವಿಜಯನಗರ ಸಾಮ್ರಾಜ್ಯವು ಧಾರ್ಮಿಕ ಆಚರಣೆಗಳಿಗೆ ಹೆಚ್ಚು ಮಹತ್ವ ನೀಡಿರುವುದಲ್ಲದೆ, ಅಂತಹ ದೇವಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದರು. ಹಿಂದೂ ಸಂಸ್ಕೃತಿಯ ಅಭಿಮಾನದಿಂದ 'ಹಿಂದೂರಾಯ ಸುರತ್ರಾಣ' ಎಂಬ ಬಿರುದನ್ನು ವಿಜಯನಗರದ ರಾಯರು ಹೊಂದಿದ್ದರು.[೩] ಹೊಸ ದೇವಾಲಯಗಳ ನಿರ್ಮಾಣದ ಜೊತೆಗೆ ಹಳೆಯವನ್ನು ಪುನರುಜ್ಜೀವನಗೊಳಿಸಲಾಯಿತು.

ಅರಸರು, ಸಾಮಂತರು, ಶ್ರೀಮಂತ ಪ್ರಜೆಗಳು ದೇವಾಲಯಗಳಿಗೆ ಧಾರಾಳವಾಗಿ ಕಾಣಿಕೆ, ಭೂದತ್ತಿಗಳನ್ನು ಕೊಡುತ್ತಿದ್ದರು. ಆ ಕಾಲದ ಸಾಕ್ಷಿಯಾಗಿ ಅನೇಕ ಧರ್ಮಶಾಸನಗಳಲ್ಲಿ ಉಲ್ಲೇಖಗಳಿವೆ. ಅವುಗಳಲ್ಲಿ ಜನರು ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಸಾಮಾನ್ಯರಾದಿಯಾಗಿ ಅರಸ, ರಾಣಿ, ಸಾಮಂತರು ಮೇಲಿಂದ ಮೇಲೆ ಧಾರ್ಮಿಕ ಯಾತ್ರೆಯನ್ನು ಕೈಗೊಳ್ಳುತ್ತಿದ್ದರು. ಇಂತಹ ಸಮಯದಲ್ಲಿ ಅಲ್ಲಿರುವ ದೇವರಿಗೆ, ಸ್ಥಾನಾಚಾರ್ಯರಿಗೆ ಬಿಡುವಿಲ್ಲದೆ ಹಬ್ಬ, ಜಾತ್ರೆಗಳು ನಡೆದು ಬರಲಿ ಎಂದು ಪ್ರೋತ್ಸಾಹಿಸುತ್ತಿದ್ದರು. ಅಂದು ಮುಖ್ಯವಾಗಿ ಚಿದಂಬರಂ, ಕಂಚಿ, ಶ್ರೀರಂಗ, ತಿರುವಣ್ಣಾಮಲೈ, ಶ್ರೀಶೈಲ, ತಿರುಮಲ, ಗೋಕರ್ಣ, ರಾಮೇಶ್ವರ ಮುಂತಾದ ಪವಿತ್ರ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ಕೊಟ್ಟಿದ್ದರು.[೪] ಅಂತಹ ಸಮಯದಲ್ಲಿ ಅಲ್ಲಿ ನಡೆಯುವ ಉತ್ಸವಗಳಿಗೆ ದಾನ ಕೊಟ್ಟು ಪ್ರೋತ್ಸಾಹಿಸುತ್ತಿದ್ದರು. ವಿಜಯನಗರಕ್ಕೆ ಹಲವು ಪಾಶ್ಚಾತ್ಯ ಪ್ರವಾಸಿಗರು ಭೇಟಿ ನೀಡಿದ್ದಾರೆ. ಅವರು ಗುರುತಿಸಿರುವ ಮುಖ್ಯ ಹಬ್ಬ ಮತ್ತು ವಿನೋದಾವಳಿಗಳನ್ನು ಶಾಸನ ಮತ್ತು ಲಭ್ಯ ಸಾಹಿತ್ಯಗಳ ಸಹಾಯದಿಂದ ಪರಿಶೀಲಿಸಬಹುದಾಗಿದೆ. ರಥೋತ್ಸವ ಮತ್ತು ಮಹಾನವಮಿ ವೈಭವೋಪೇತ ಹಬ್ಬಗಳಾಗಿದ್ದವು. ಇವರ ಕಾಲದ ಇನ್ನೆರಡು ಪ್ರಮುಖ ಹಬ್ಬಗಳೆಂದರೆ ಹೋಳಿ ಮತ್ತು ಸಿಡಿಯಾಟ, ಇವುಗಳ ಸಾಂಕೇತಿಕ ತಾತ್ವಿಕ ಮಹತ್ವದೆಡೆಗೆ ಹೆಚ್ಚು ವಾಲದೆ ಅವುಗಳಲ್ಲಿನ ವಿನೋದಾವಳಿಗೆ ಪೂರಕವಾಗಿಯಷ್ಟೇ ಗಮನಿಸಲಾಗಿದೆ.

೪.೧ ರಥೋತ್ಸವ

ವಿಜಯನಗರ ಕಾಲದಲ್ಲಿ ಪಂಪಾಪತಿಯ ಅಥವಾ ವಿರೂಪಾಕ್ಷ ದೇವಾಲಯದ ಜಾತ್ರೆ ಬಹು ವಿಜೃಂಭಣೆಯಿಂದ ನಡೆಯುತ್ತಿತ್ತು. ಅಲ್ಲಿನ ರಥೋತ್ಸವದ ಬಗ್ಗೆ ವಿದೇಶಿ ಪ್ರವಾಸಿಗರ ವರದಿಗಳಲ್ಲಿ ಸಾಕಷ್ಟು ಮಾಹಿತಿ ದೊರೆಯುತ್ತದೆ. ರಥೋತ್ಸವ ಎಂದರೆ ದೇವರ ಜಾತ್ರೆಯ ಸಮಯದಲ್ಲಿ ಒಂದು ದೊಡ್ಡ ತೇರಿನಲ್ಲಿ ದೇವರ ಮೂರ್ತಿಯನ್ನಿಟ್ಟು ಒಂದು ಸ್ಥಳದಿಂದ ನಿರ್ದಿಷ್ಟ ಸ್ಥಳಕ್ಕೆ ಮೆರವಣಿಗೆಯ ಮೂಲಕ ಎಳೆಯುವುದು. ಅಂದು ಯಾವ ರೀತಿ ರಥೋತ್ಸವ ನಡೆಯುತ್ತಿತ್ತೆಂದರೆ ರಥೋತ್ಸವಕ್ಕಿಂತ ಮುಂಚೆ ದೇವರ ಪೂಜೆ, ಪ್ರಾರ್ಥನೆಯನ್ನು ಅರಸರು, ಹಲವು ಭಕ್ತರು ಭಕ್ತಿ ನಿಷ್ಠೆಯಿಂದ ಮಾಡಿ, ದೇವರ ಪೂಜೆಗೆ ನೈವೇದ್ಯ, ಫಲಪುಷ್ಪಗಳನ್ನು ಅರ್ಪಿಸುತ್ತಿದ್ದರು. ಆಗ ದೇವಾಲಯದಲ್ಲಿದ್ದ ಅರ್ಚಕನು ಅವುಗಳನ್ನು ಶಿವನ ಪಾದತಲದಲ್ಲಿ ಸಮರ್ಪಿಸಿ, ಆ ಮೇಲೆ ಫಲ ಪುಷ್ಪಗಳನ್ನು ಶಿವನ ಪ್ರಸಾದ ರೂಪವಾಗಿ ಮರಳಿ ಭಕ್ತರಿಗೆ ಕೊಡುವನು. ತದನಂತರ ಭಕ್ತರ ಅಪೇಕ್ಷೆಯ ಮೇರೆಗೆ ಅರ್ಚಕನು ಪುನಃ ಶಿವನ ವಿಗ್ರಹ ಪೂಜಿಸಿ ಅಲ್ಲಿ ಇದ್ದಂತಹ ಬ್ರಾಹ್ಮಣರಿಗೆ ಬುಡಸಹಿತವಾದ ಜಲ, ಜಣಕ ಮುಂತಾದವುಗಳನ್ನು ಕೊಟ್ಟು ಪುನಃ ಪರಮೇಶ್ವರನ ಪ್ರಸಾದ ಕೊಟ್ಟನು. ಆ ಮೇಲೆ ಶಿವಾರ್ಚಕನು ಶಿವಮೂರ್ತಿ ಹಿಡಿದು ಸಂಧಾನ ಎಂಬ ಸೂತ್ರವನ್ನು ತಾನು ಸಾಕ್ಷಾತ್ ಆಗಿ ಕೈಯಲ್ಲಿ ಹಿಡಿದನು ಎಂಬಂತೆ ಆ ರಥದ ಹಗ್ಗವನ್ನು ಹಿಡಿದು ನಿಧಾನವಾಗಿ ರಥವೇರಿದನು.[೫] ಆಗ ಅಲ್ಲಿಯ ಭಕ್ತ ವೃಂದವು ಅಂಜಲಿ ಬದ್ಧರಾಗಿ (ಕೈಮುಗಿದು) ಪರಮೇಶ್ವರನೇ ಈ ಲೋಕದ ಕಲ್ಯಾಣ ಮಾಡುವುದಕ್ಕಾಗಿ ರಥಾರೋಹಣ ಮಾಡು ಎಂದು ಪ್ರಾರ್ಥಿಸುತ್ತಿದ್ದವರಾಗಿ ದೇವರ ಸೇವೆ ಮಾಡಿದರೆ, ಅಂತಹ

ಸಮಯದಲ್ಲಿ ನೃತ್ಯ, ಸಂಗೀತ ಕಾರ್ಯಕ್ರಮಗಳ ವಿಜೃಂಭಣೆಯಿಂದ ನಡೆಯುತ್ತಿದ್ದವು. ಬಿಜನಗೇಲಿಯಾದಲ್ಲಿಯೂ (ವಿಜಯನಗರ) ಕೂಡ ವರ್ಷಕ್ಕೊಮ್ಮೆ ದೇವರ ವಿಗ್ರಹಗಳನ್ನು ಎರಡು ರಥಗಳ ಮಧ್ಯೆ ಇಟ್ಟು ಮೆರವಣಿಗೆ ಮಾಡುತ್ತಾರೆ. ವಿರೂಪಾಕ್ಷ ದೇವಾಲಯದಲ್ಲಿ ನಡೆಯುತ್ತಿದ್ದ ಹಬ್ಬಗಳಲ್ಲಿ ಉತ್ಸವ, ರಥೋತ್ಸವಗಳು ಆಚರಿಸುತ್ತಿದ್ದುದು ತಿಳಿದುಬರುತ್ತದೆ. ಹಂಪಿಯಲ್ಲಿನ ವಿರೂಪಾಕ್ಷ ಬಜಾರನ್ನು ವಿರೂಪಾಕ್ಷಪುರ, ಪಂಪಾರಥವೀದಿ, ಹಂಪೆ ಬಜಾರು, ತೇರುಬೀದಿ ಇತ್ಯಾದಿಯಾಗಿ ಕರೆಯಲಾಗಿದೆ. ಇಲ್ಲಿಯ ಬಜಾರು ಈ ದೇವಾಲಯದಷ್ಟೇ ಹಳೆಯದು. ಆದರೆ ಆರಂಭದಲ್ಲಿ ಇದು ಕಾರ್ಯ ನಿರ್ವಹಿಸುತ್ತಿದ್ದುದು ಕೇವಲ ತೇರು ಬೀದಿಯಾಗಿ ಮಾತ್ರ.[೬] ಈ ಬೀದಿಯನ್ನು ಯಾವ ಉದ್ದೇಶಕ್ಕಾಗಿ ನಿರ್ಮಿಸಲಾಯಿತೆಂದು ಸಾಹಿತ್ಯ ಕೃತಿಯಲ್ಲಿ ಉಲ್ಲೇಖವಿದೆ.

ಪಂಪಾಪತಿಯ ಮನೋರಥರೂಪ ತಾನಾದ
ಪೆಂಪಂ ಜಗಕ್ಕರುಪಿ ತೋರಿದನೋ ಎಂಬತೆ
ಸೋಂಪೇರಿ ಮೇರೆಸುವ ವಿರೂಪಾಕ್ಷನತುಳರಥ ಪಂಪಾಬಿಕರಥವನು
ಝುಂಪಳಿಪ ನಾನಾ ರಸದ ಗಣಾಧಿಪ ರಥವ
ಗುಂಪರಿವರಳವಲ್ಲವೆನೆ ರೂಡಿವಡಿಸಿದನ
ದೇಂ ಪ್ರತಾಪನೊ ದೇವರಾಜೇಂದ್ರನರುವವರ ಚರಣಾಂಬುಜಕ್ಕೆ ಶರಣು[೭]

ವಿರೂಪಾಕ್ಷ ದೇವರಿಗೆ ನಡೆಯುತ್ತಿದ್ದ ರಥೋತ್ಸವದ ಕುರಿತು ಹೇಳಲಾಗಿದೆ. ಇಲ್ಲಿ ವಿರೂಪಾಕ್ಷ, ಪಂಪಾಬಿಕ ಮತ್ತು ಗಣಾಧಿಪ(ಗಣೇಶ) ಮೂರು ರಥಗಳನ್ನು ಎಳೆಯುತ್ತಿದ್ದುದನ್ನು ಲಕ್ಕಣ್ಣದಂಡೇಶನು ಹೇಳಿದ್ದಾನೆ.[೮] ವಿದೇಶಿ ಪ್ರವಾಸಿಗನಾದ ವೆನಿಷಿಯಾದ ವರ್ತಕ ನಿಕೋಲೊ-ದೆ-ಕೊಂತಿ ರಥೋತ್ಸವದ ಬಗ್ಗೆ ಭ್ರಮಾರಾತ್ಮಕ ಚಿತ್ರವನ್ನು ಕೊಟ್ಟಿದ್ದಾನೆ. ಈ ರಥಗಳಲ್ಲಿ ಸರ್ವಾಲಂಕೃತವಾದ ಗಾಯಕಿಯರು, ದೇವರ ಭಜನೆ ಮಾಡುತ್ತಿರುತ್ತಾರೆ. ಜನಗಳ ಗುಂಪು ವಿಗ್ರಹವನ್ನು ಹಿಂಬಾಲಿಸಿ ಹೋಗುತ್ತಿರುತ್ತದೆ. ವಿಶೇಷ ಭಕ್ತಿ ಇರುವ ಅನೇಕರು ರಥದ ಚಕ್ರಕ್ಕೆ ಮೈ ಒಡ್ಡಿ ಪ್ರಾಣತ್ಯಾಗ ಮಾಡುತ್ತಾರೆ. ಮತ್ತೆ ಕೆಲವರು ತಮ್ಮ ಪಕ್ಕೆಯಲ್ಲಿ ತೂತುಮಾಡಿ ಅದರಲ್ಲಿ ಹಗ್ಗವನ್ನು ಪೋಣಿಸಿ ರಥಕ್ಕೆ ಅಲಂಕಾರಿಕವಾಗಿ ತೂಗುಹಾಕಿಕೊಳ್ಳುತ್ತಾರೆ. ಹೀಗೆ ತೂಗು ಹಾಕಿಕೊಂಡು ಮೆರವಣಿಗೆ ಹೋಗುತ್ತಾರೆ. ಈ ತರಹದ ಭಕ್ತಿ ಉತ್ಕೃಷ್ಟವೆಂದು ಇವರು ಭಾವಿಸುತ್ತಾರೆ.[೯]

ಸಾಮಾನ್ಯವಾಗಿ ತಿಳಿದಿರುವಂತೆ ಸರ್ವಾಲಂಕೃತವಾದ ಗಾಯಕಿಯರನ್ನು ರಥಗಳಲ್ಲಿ ಕರೆದೊಯ್ಯುವುದಿಲ್ಲ, ರಥಗಳ ಮುಂದೆ ಹಾಡುತ್ತಾ, ಕುಣಿಯುತ್ತಾ ಹೋಗುತ್ತಿರಬಹುದು. ಮತ್ತೊಂದು ವರ್ಣನೆ ರಥಕ್ಕೆ ಅಲಂಕಾರಿಕವಾಗಿ ತೂಗು ಹಾಕಿಕೊಳ್ಳುತ್ತಾರೆ ಎಂಬುದು ಅವನು ಪ್ರಸ್ತುತ ವಿವರಿಸಿದ ಹಬ್ಬಕ್ಕಿಂತ ಭಿನ್ನವಾದ ಆಚರಣೆಗೆ(ಸಿಡಿಯಾಟ) ಸಂಬಂಧಿಸಿದುದಾಗಿರಬಹುದು. ವಿಶೇಷ ಭಕ್ತಿ ಇರುವ ಅನೇಕರು ರಥದ ಚಕ್ರಕ್ಕೆ ಮೈ ಒಡ್ಡಿ ಪ್ರಾಣತ್ಯಾಗ ಮಾಡುತ್ತಾರೆ. ಇದನ್ನು ಒಪ್ಪಿಕೊಳ್ಳುವ ಮುನ್ನ ಯೋಚಿಸಬೇಕಾಗುತ್ತದೆ. ಪಾಯೇಸ್ ಈ ವಿಷಯದ ಮೇಲೆ ಹೆಚ್ಚಿನ ವಿವರಣೆ ನೀಡಿದ್ದಾನೆ. ಈ ಚರಿತ್ರೆಕಾರನ ಪ್ರಕಾರ ಈ ದೇವಾಲಯಗಳಿಗೆ ತೀರಾ ಹತ್ತಿರದಲ್ಲಿ ಕೆತ್ತನೆಯ ಕೆಲಸ ಮತ್ತು ಆಕೃತಿಗಳಿಂದ ತುಂಬಿದ

ವಿಜಯೋತ್ಸವ ರಥವಿದೆ. ಅದನ್ನು ಪ್ರತಿವರ್ಷ ಉತ್ಸವ ಕಾಲದಲ್ಲಿ ಅದು ಸಾಗಬಹುದಾದಂತಹ ಬೀದಿಗಳ ಮೂಲಕ ನಗರದಲ್ಲಿ ಎಳೆಯಲಾಗುತ್ತದೆ. ಅದು ದೊಡ್ಡದಿದ್ದು ತಿರುವುಗಳಲ್ಲಿ ಹಾಯದು. ಪಾಯೇಸ್ ತಾನು ಏನನ್ನು ನೋಡಿಲ್ಲವೋ ಅಂಥವನ್ನು ಸೇರಿಸಿಲ್ಲವೆಂಬುದಕ್ಕೆ ಅವನ ರಥ ಸಂಬಂಧವಾದ ಕೆಳಗಿನ ಪರಿವೀಕ್ಷಣೆ ಸಾಕ್ಷಿಯಾಗಿದೆ. ಯಾವುದಾದರೂ ಉತ್ಸವ ಜರುಗಿದಾಗ ಗಾಲಿಗಳ ಮೇಲೆ ಉರುಳುವ ವಿಜಯೋತ್ಸವ ರಥವನ್ನು ಎಳೆಯುತ್ತಾರೆ. ಬಹಳ ವೈಭವದೊಂದಿಗೆ ಹೇಳಲಾದ ಬೀದಿಗುಂಟ ವಿಗ್ರಹ ಒಯ್ಯಲಾಗುತ್ತದೆ. ಅದರೊಂದಿಗೆ ನರ್ತಕಿಯರು ಮತ್ತು ಸ್ತ್ರೀಯರು ಸಂಗೀತದೊಂದಿಗೆ ದೇವಾಲಯಕ್ಕೆ ಹೋಗುತ್ತಾರೆ. ಈ ರಥಗಳನ್ನು ಎಳೆಯುವ ರೀತಿಯ ಬಗೆಗೆ ನಾನು ಹೇಳುವುದಿಲ್ಲ. ಏಕೆಂದರೆ ಇಲ್ಲಿ ಈ ನಗರದಲ್ಲಿದ್ದ ಒಟ್ಟು ಅವಧಿಯಲ್ಲಿ ಯಾವುದನ್ನು ಎಳೆಯಲಿಲ್ಲ.[೧೦]

ಜನರು ರಥದ ಚಕ್ರಗಳಡಿ ಉರುಳುವ ಕುರಿತು ಕಥೆಗಳು ವಿದೇಶಿಯರ ನಡುವೆ ಜನಪ್ರಿಯವಾಗಿದ್ದಿರಬಹುದು. ಕೊಂತಿ ಹೇಳಿದ ಕತೆಯನ್ನು ಲಿನ್‌ಸ್ಕೊಟಿನ್ ಮುಂದುವರೆಸಿದರೂ ಅವನಿಗೆ ದೊರೆತಿದ್ದ ಮಾಹಿತಿಗಳ ಆಕಾರಕ್ಕೆ ಅನುಗುಣವಾಗಿ ಕೆಲವು ವಿವರಗಳು ಗಮನಾರ್ಹವಾಗಿವೆ. ಲಿನ್‌ಸ್ಕೊಟೀನ್ ಕ್ರಿ.ಶ. ೧೫೮೩ ರಲ್ಲಿ ಹೇಳುತ್ತಾನೆ. ನರಸಿಂಗ ಸಾಮ್ರಾಜ್ಯದ ಕೋರಮಂಡಲ ಕರಾವಳಿ ಪ್ರದೇಶದಲ್ಲಿ ಒಂದು ಪಗೊಡವಿದ್ದು. ಅದು ವೈಭವಯುತ ಹಾಗೂ ಯಾತ್ರಿಕ ಸ್ಥಳವಾಗಿದೆ. ಅಲ್ಲಿ ಪ್ರತಿವರ್ಷ ಜಾತ್ರೆ, ಹಬ್ಬ ಮೆರವಣಿಗೆಗಳು ನಡೆಯುತ್ತವೆ. ಅಲ್ಲಿ ದೊಡ್ಡ ಬಂಡಿ /ಗಾಡಿ (ರಥ)ವಿದೆ. ಅತೀ ದೊಡ್ಡದಾಗಿರುವ ಮತ್ತು ಭಾರವಿರುವ ಅದನ್ನು ಎಳೆಯಲು ೩,೪, ಆನೆಗಳಿಗೂ ಕಠಿಣ ಆದರೂ ಜಾತ್ರೆಗಳಿಗೆ ಅದನ್ನು ತರುತ್ತಿದ್ದರು. ಅದಕ್ಕೆ ಹಲವು ಹಗ್ಗಗಳನ್ನು ಕಟ್ಟಿ ಅದನ್ನು ಊರ ಜನರೆಲ್ಲರೂ ಭಕ್ತಿಯಿಂದ ಬಲವಾಗಿ ಎಳೆಯುತ್ತಿದ್ದರು. ಆ ರಥದ ಮೇಲೆ ಒಂದು ಪುಟ್ಟ ಗುಡಿಯಿದ್ದು ಅಲ್ಲಿ ದೇವರ ಮೂರ್ತಿಯಿರುತ್ತದೆ. ಅದರ ಬಳಿ ಕೆಳಗೆ ರಾಜನ ಪತ್ನಿಯರು ವಾದ್ಯಗಳನ್ನು ಮಧುರವಾಗಿ ನುಡಿಸುತ್ತಿದ್ದರು.[೧೧]

ಕೊಂತಿಯ ಕಥನವನ್ನು ಲಿನ್‌ಸ್ಕಾಟಿನ್ ಸ್ವಲ್ಪ ಮಟ್ಟಿಗೆ ಸುಧಾರಿಸಿದಂತೆ ತೋರುತ್ತದೆ. ಅಂದರೆ ಇವನೂ ಕೂಡ ಕೊಂತಿಯಂತೆ ಊರಿನ ಜನರೆಲ್ಲರೂ ಗಂಡು ಹೆಣ್ಣುಗಳು ರಥದ ಹಗ್ಗಗಳನ್ನು ಎಳೆದರು ಎಂದು ಹೇಳುತ್ತಾನೆ. ಆದರೆ ಕೊಂತಿ ಹೇಳಿದಂತೆ ರಥಕ್ಕೆ ಅಲಂಕಾರಿಕ ತೂಗುವುದನ್ನು ಆ ಜನ ಮಾಡಲಿಲ್ಲವೆಂಬುದು ಇವನ ಮೂಲಕ ಗೊತ್ತಾಗುತ್ತದೆ. ಆದಾಗ್ಯೂ ಲಿನ್‌ಸ್ಕಾಟಿನ್ ಸಂಗತಿಗಳನ್ನು ನಿಖರವಾಗಿ ನಿರೂಪಿಸಿದ್ದಾನೆ ಎನ್ನುವಂತಿಲ್ಲ. ಕಾರಣಗಳೆಂದರೆ ದೇವಮೂರ್ತಿಯ ಕೆಳಗೆ ರಥದ ಮೇಲೆ ರಾಜನ ಪತ್ನಿಯರು ವಾದ್ಯ ನುಡಿಸುತ್ತಿದ್ದರು, ಇದು ಲಿನ್‌ಸ್ಕಾಟಿನ್ ಅಭಿಪ್ರಾಯ. ಪಾಯೇಸ್ ಹೇಳುವಂತೆ ನರ್ತಕಿಯರು ರಥಗಳ ಮುಂದೆ ಹೋಗುತ್ತಿದ್ದರು. ಇದು ಅಲ್ಲಿನ ಸಂಪ್ರದಾಯವೆಂದಾದಲ್ಲಿ ಕೋರಮಂಡಲ ತೀರದ ದೇವಾಲಯದ ರಥದಲ್ಲಿ ಕುಳಿತಿದ್ದವರು ರಾಜನ ಪತ್ನಿಯಾಗಿರಲಾರರು. ಹಾಗೆಯೇ ಲಿನ್‌ಸ್ಕಾಟಿನ್ ಹೇಳುವ ರಥದ ಚಕ್ರಗಳಿಗೆ ಉರುಳಿ ದೇಹ ತ್ಯಾಗ ಮಾಡಿದವರನ್ನು ಹುತಾತ್ಮರೆಂದು ಕರೆದುದು ಇಂಥ ಭಿನ್ನ ಹೇಳಿಕೆಗಳನ್ನು ಪರಿಶೀಲಿಸಬೇಕಾಗುತ್ತದೆ.

ಹಾಗೇನಾದರೂ ಜನರು ರಥದ ಚಕ್ರಗಳಡಿ ಉರುಳುತ್ತಿದ್ದರೆಂಬುದು ನಿಜವಾಗಿದ್ದಲ್ಲಿ, ಉಳಿದ ವಿದೇಶಿಯರು ಅವನ್ನು ಅನುಲಕ್ಷಿಸದೆ ಇರುತ್ತಿರಲಿಲ್ಲ. ಈ ವಿಷಯವನ್ನು ಹೇಳದಿರುವವನು ಪಾಯೇಸ್‌ನಷ್ಟೆ ಅಲ್ಲ ಆ ಕಾಲದ ಕ್ರೈಸ್ತ ಮತಸ್ಥರೂ ಕೂಡ ಲಿನ್‌ಸ್ಕಾಟಿನ್ ಮತ್ತು ಕೊಂತಿ ಹೇಳುವಂತೆ ಹಿಂದೂಗಳ ಪಾಶಾವೀ ಮೌಢ್ಯಗಳ ಬಗ್ಗೆ ಕ್ರೈಸ್ತ ಮತಸ್ಥರೂ ಅಲ್ಲಲ್ಲಿ ಹೇಳುತ್ತಾರೆ. ಅವರಿಬ್ಬರು ಹೇಳಿದ ಇಂಥ ಭಯಂಕರ ಘಟನೆಯ ಬಗ್ಗೆ ಎಲ್ಲೂ ಉಲ್ಲೇಖಿಸಿಲ್ಲ.

ಮತ್ತೊಬ್ಬ ಕ್ರೈಸ್ತ ಮತಸ್ಥ ಎಮ್ಯುನ್ಯುಯಲ್-ಡಿ-ವೇಗಾ ತಾನು ಚಂದ್ರಗಿರಿಯಿಂದ ಬರೆದ ಪತ್ರದಲ್ಲಿ ಇದೇ ಕರಾವಳಿ ಭಾಗದಲ್ಲಿ ಹೇಗೆ ಮೌಢ್ಯಗಳು ಅವರ ಬಯಕೆಗಳೊಂದಿಗೆ ಸ್ಪರ್ಧೆಗಿಳಿದಿದ್ದವು ಎಂದು ಪ್ರಸ್ತಾಪಿಸಿದ್ದಾನೆ. ಚಂದ್ರಗಿರಿಯಿಂದ ಮೈಲಾಪುರದವರೆಗೆ ತನ್ನ ಯಾತ್ರೆ ಬಗ್ಗೆ ಬರೆದಿದ್ದಾನೆ. ಎರಡನೇ ರಾತ್ರಿಯಲ್ಲಿ ತ್ರಿವಳೂರಿನ ರಸ್ತೆಯಲ್ಲಿ ಸಿಂಹಾಸನ ಸಹಿತ ರಥದ ಮೇಲೆ ತಮ್ಮ ವಿಗ್ರಹಗಳನ್ನಿಟ್ಟು ಮೆರವಣಿಗೆ ಮಾಡಿದರು. ವಿಗ್ರಹ ಮೂರು ಗೇಣಿಗೂ ಉದ್ದವಿರಲಿಲ್ಲ. ಅವಕ್ಕೆ ಕೇಂಪು ರೇಷ್ಮೆಯ ಮೇಲುವಸ್ತ್ರ ಮತ್ತು ಒಳಗೆ ನಾರುಬಟ್ಟೆ ವಸ್ತ್ರ ತೋಡಿಸಲಾಗಿತ್ತು. ಈ ಮೇರವಣಿಗೆಯಲ್ಲಿ ಮುಂದೆ ದೇವರಿಗೆ ಮೀಸಲಾಗಿದ್ದ ಬೆನ್ನಿಗೆ ಬಿಳಿಧ್ವಜ ಹೊದ್ದ ಆನೆ ಹೋಯಿತು. ಅದರ ನಂತರ ವಾದ್ಯಗಾರರನ್ನು ಹೊತ್ತ ಮೂರು ದನಗಳು ಅವರ ಹಿಂದೆ ಕಹಳೆ, ಒಲಗದವರು, ಹಲವು ರೀತಿಯ ನೇರ, ಬಾಗಿದ, ದೊಡ್ಡ, ಸಣ್ಣ ವಾದ್ಯಗಳನ್ನು ಹಿಡಿದಿದ್ದರು. ಎಲ್ಲಾ ವಾದ್ಯಗಳನ್ನು ನುಡಿಸಲು ಅನುಕ್ರಮಣಿಕೆ ಮತ್ತು ಸಮಯದ ಅಂತರವಿರದಿದ್ದರಿಂದ ಅಸ್ತವ್ಯಸ್ತವಾದ ಧ್ವನಿ ಕೇಳುತ್ತಿತ್ತು. ಇವರ ನಂತರ ಮೂವತ್ತು ಮಹಿಳಾ ನರ್ತಕಿಯರು ಬಂದರು. ಈ ವಿಗ್ರಹಗಳ ಸೇವೆಗೆಂದು ಅರ್ಪಿಸಿಕೊಂಡವರು. ಅವಿವಾಹಿತ ವೇಶ್ಯೆಯರಾಗಿದ್ದವರು. ಸರ್ವಾಲಂಕೃತವಾಗಿ ಕೈಗಳಲ್ಲಿ ದೀಪ ಹಿಡಿದಿದ್ದರು. ನಂತರ ವಿಗ್ರಹ ಇದ್ದ ರಥ ಹಿಡಿದು ಕೆಲಸಗಾರರು ಮತ್ತು ದೇವಾಲಯದ ಆದಾಯದ ಮೇಲೆ ಅವಲಂಬಿತವಾಗಿದ್ದ ಅರ್ಚಕರು ಬಂದರು. ಸಾಮಾನ್ಯ ಜನ ದೀಪ ಹಿಡಿದು ರಥ ಹಿಂಬಾಲಿಸುತ್ತಿದ್ದರು. ನಾಲ್ಕು ಗಲ್ಲಿ ಸುತ್ತಿ ವಾಪಾಸಾಗಿ ನಾಲ್ಕು ಕಂಬಗಳ ನಡುವೆ ಕಲ್ಲಿನ ಛಾವಣಿಯಡಿಯಲ್ಲಿ ಅದನ್ನಿಟ್ಟು ಮೂರು ಸುತ್ತು ಹಾಕಿದರು. ಮತ್ತು ದೇವಾಲಯಕ್ಕೊಯ್ದು ಇಟ್ಟು ತಲೆಬಾಗಿ ನಮಸ್ಕರಿಸಿದರು. ನಾಲ್ಕು ಮಂದಿ ಬ್ರಾಹ್ಮಣರು ವಿಗ್ರಹವನ್ನು ಸುತ್ತಿಸಿದರು. ಅವರಲ್ಲೊಬ್ಬಾತ ತಲೆ ಮೇಲೆ ಬೇಯಿಸಿದ ಅನ್ನದ ಬುಟ್ಟಿಯನ್ನು ತಂದು ವಿಗ್ರಹದ ರಾತ್ರಿ ಊಟಕ್ಕಾಗಿ ಕ್ರಿಮಿಗಳನ್ನೋಡಿಸಲು ಬೀಸಣಿಗೆಯಿಂದ ಬೀಸಲಾಗುತ್ತಿತ್ತು. ಮಾಂಸವೂ ಸಿದ್ಧವಾದಾಗ ವಿಗ್ರಹದ ಮುಂದಿನ ಪರದೆ ಎಳೆದರು. ಏಕೆಂದರೆ ದೇವರು ಉಣ್ಣುವುದನ್ನು ನೋಡಬಾರದಾಗಿತ್ತು. ವಾದ್ಯಗಳು ಮೊಳಗಿದವು ಸ್ವಲ್ಪ ಹೊತ್ತು ಕಳೆದ ಮೇಲೆ ಪರದೆ ಮೇಲಕ್ಕೆಳೆದು ಅನ್ನ ತೆಗೆದರು ಮತ್ತೆ ದೈವಸ್ತುತಿ ಎಲ್ಲರೂ ದೇವಾಲಯದ ಒಳ ಹೋಗುತ್ತಾರೆ. ಹೀಗೆ ಈ ವಿಗ್ರಹದ ಪೂಜಾಚರಣೆಗೆ ನಾಲ್ಕು ಗಂಟೆ ಕಳೆಯಿತು. ಇದೇ ಪ್ರವಾಸಿ ಹೇಳಿದಂತೆ ಪೆರುಮಾಳ್ ದೇವರ ವಿವಾಹ ಮಹೋತ್ಸವದ ದಿನ ಅಪಾರ ಜನ ನೆರೆದಿದ್ದರು. ಅಂದು ೨೦೦೦ Ducats ಡ್ಯುಕ್ಯಾಟ್, ಮೊತ್ತದ ಕಾಣಿಕೆ ಸಂಗ್ರಹವಾಯಿತು. ಅಲ್ಲಿ ರಾಜ, ರಾಣಿ ಮತ್ತು ಅನುಚರರು ನೆರೆದಿದ್ದರು. ದೊಡ್ಡ ರಥದಲ್ಲಿ ವಿಗ್ರಹವಿಟ್ಟು ರಾತ್ರಿಯಲ್ಲಿ ಅದನ್ನು ಒಂದುವರೆ ಮೈಲಿಯಷ್ಟು

ದೂರ ಎಳೆದರು.[೧೨] ಅಂದರೆ ರಥೋತ್ಸವದ ವೇಳೆ ಯಾವ ರೀತಿ ಆಚರಣೆಗಳಿದ್ದವು, ಯಾರೇಲ್ಲಾ ಭಾಗವಹಿಸುತ್ತಿದ್ದರು ಇತ್ಯಾದಿ ಅಂಶಗಳನ್ನು ಇಲ್ಲಿ ಗಮನಿಸಬಹುದು. ಅದೇ ರೀತಿ ರಥ ಎಳೆಯಬೇಕಾದರೆ ಸಾಮಾನ್ಯರಾದಿಯಾಗಿ ಎಲ್ಲರೂ ಬಹು ಸಂಭ್ರಮದಿಂದ ಪಾಲ್ಗೊಳ್ಳುತ್ತಿದ್ದರು ಎಂದು ವೇದ್ಯವಾಗುತ್ತದೆ.

ಪಿಯಟ್ರೋಡೆಲ್ಲಾ ವಾಲೆ ಇಕ್ಕೇರಿಯಲ್ಲಿ ರಥೋತ್ಸವ ಕಂಡು ಹೀಗೆ ಬರೆದಿದ್ದಾನೆ, ದೇವಾಲಯದ ಎದುರುಗಡೆ ನಾನು ದೊಡ್ಡ ರಥವನ್ನು ನೋಡಿದೆ ಅದರಲ್ಲಿ ದೇವರ ವಿಗ್ರಹಗಳನ್ನಿಟ್ಟು ಹಬ್ಬಗಳ ಸಂದರ್ಭದಲ್ಲಿ ಮೆರವಣಿಗೆ ಮಾಡುತ್ತಾರೆ. ಅಲ್ಲಿ ಹಲವು ಜನ ಮತ್ತು ನರ್ತಕಿಯರಿದ್ದರು. ನರ್ತಕಿಯರು ಸಂಗೀತ ವಾದ್ಯಗಳನ್ನು ನುಡಿಸುತ್ತಾ, ಹಾಡುತ್ತಾ ನರ್ತಿಸುತ್ತಾರೆ. ನನ್ನ ಕೈಗೇಣಿನ ೧೪ ರಷ್ಟು ದೊಡ್ಡ ಚಕ್ರಗಳಿದ್ದವು. ಬದಿಗಳಲ್ಲಿನ ಹಲಗೆ ಒಂದು ಗೇಣು ದಪ್ಪವಿತ್ತು. ಇದರ ತುದಿಗೆ ಎರಡು ದೊಡ್ಡ ಮೂರ್ತಿಗಳಿದ್ದು ನೈಸರ್ಗಿಕ ಬಣ್ಣ ಬಳಿಯಲಾಗಿತ್ತು. ಒಂದು ಗಂಡು ಮತ್ತು ಒಂದು ಹೆಣ್ಣಿನ ಬೆತ್ತಲೆ ಭಂಗಿಯ ಮೂರ್ತಿಗಳಿದ್ದವು. ರಥದಲ್ಲಿ ಹಲವಾರು ಜನ ನಿಲ್ಲಲು ಜಾಗವಿತ್ತು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಇಂಥ ಅಪೂರ್ವ ದೊಡ್ಡ ರಥ ಚಲಿಸಬೇಕಾದರೆ ರೋಮ್‌ನ ಸಿರದಗಿಲಿಯಾ ಅಥವಾ ಬಾಬ್ಯುನೋದ ಅತಿ ಅಗಲದ ರಸ್ತೆಗಳು ಬೇಕಾಗುತ್ತವೆ.[೧೩] ಅಂದರೆ ಇಲ್ಲಿ ರಥ ಚಲಿಸಲು ದೊಡ್ಡದಾದ ಮತ್ತು ಅಗಲವಾದ ರಸ್ತೆಗಳನ್ನು ವಿಜಯನಗರ ಕಾಲದಲ್ಲಿ ನಿರ್ಮಿಸುತ್ತಿದ್ದರು ಎಂದು ತಿಳಿಯುತ್ತದೆ. ಹಾಗೆ ಹಂಪಿಯ ವಿಶಾಲವಾದ ಬಜಾರುಗಳನ್ನು ಗಮನಿಸಬಹುದು.

ರಥೋತ್ಸವದ ಕುರಿತು ಹಲವು ಶಾಸನಗಳು ಉಲ್ಲೇಖಿಸುತ್ತವೆ. ಕೆಲವೊಮ್ಮೆ ಇದು ಒಂಬತ್ತು ದಿನಗಳವರೆಗೆ ನಡೆಯುತ್ತಿತ್ತು. ಕ್ರಿ.ಶ. ೧೪೯೫ ರ ಮಹಾಮಂಡಳೇಶ್ವರ ತಿಮ್ಮಯ್ಯದೇವ ಮಹಾ ಅರಸನ ಮಗ ನರಸಯದೇವ ಮಹಾ ಅರಸನು ೨೮ ಗದ್ಯಾಣವನ್ನು ಸಿಹಟಿಯ ಭೈರವ ದೇವರ ಸೇವಾರ್ಥ ಮತ್ತು ೯ ದಿನದ ರಥೋತ್ಸವಕ್ಕಾಗಿ ನೀಡಿದ.[೧೪] ಈ ರಥೋತ್ಸವ ಕೆಲವೊಮ್ಮೆ ೧೫ ದಿನಗಳವರೆಗೆ ನಡೆಯುತ್ತಿತ್ತು. ಕ್ರಿ.ಶ. ೧೫೬೨ರ ದಾಖಲೆಯು ತಿಳಿಸುವಂತೆ ಕೃಷ್ಣಪ್ಪನಾಯಕನ ದಲ್ಲಾಳಿಯಾದ ಬೇಲೂರು ಕಾಳಪ್ಪನ ಮಗ ಮಾರ್ಗಸಹಾಯ ನಾಯಕನು ಗಂಗನರಸಿ ಹಳ್ಳಿಯನ್ನು ನವೀಕರಣಗೋಳಿಸಿ ದಾನ ಮಾಡಿದ ಮತ್ತು ಹರಿಹರದೇವರ ಆಲಯದಲ್ಲಿ ೧೫ ದಿನದ ಚೈತ ಶುದ್ಧ ರಥೋತ್ಸವಕ್ಕಾಗಿ ಅಗತ್ಯವಾದುದೆಲ್ಲವನ್ನೂ ಉಚಿತವಾಗಿ ಕೊಟ್ಟು ಎಲ್ಲಾ ಸುಂಕಗಳಿಂದ ಮುಕ್ತಗೋಳಿಸಿದ. ಇದೇ ಶಾಸನವು ಮಾರ್ಗಸಹಾಯ ನಾಯಕ ಈ ಹಳ್ಳಿಯ ದಾನ ಮಾಡಿದ್ದಕ್ಕೆ ಕಾರಣ ನೀಡಿದೆ. ಚದುಪರಾಳ ಕೊಂಡವು ರಾಜನ ಮಗ ಸೂರಪ್ಪಯ್ಯನು ಮಾರ್ಗ ಸಹಾಯ ನಾಯಕನನ್ನು ಗಂಗನರಸಿ ಹಳ್ಳಿಗಾಗಿ ರಥೋತ್ಸವಕ್ಕಾಗಿ, ವಿನಂತಿಸಿದ್ದ. ಆ ಮೂಲಕ ಈ ಹಳ್ಳಿಯ ನವೀಕರಣಕ್ಕೂ ಕಾರಣನಾದ.[೧೫] ಮತ್ತೊಂದು ಶಾಸನದಲ್ಲಿ ರಥೋತ್ಸವ ಕುರಿತು ರಥೋತ್ಸವ ಮತ್ತು ನಿತ್ಯ ಮುಂಜಾನೆ ಪೂಜೆಗಾಗಿ ಅವರಸರಂ ಅಣ್ಣಮರಸಯ್ಯನು ಶತಯಾಭರಣ ನಲ್ಲೂರು ಮತ್ತು ಸುಣ್ಣವೂರ್ ಹಳ್ಳಿಗಳಲ್ಲಿ ಸಂಗ್ರಹವಾದ ತೆರಿಗೆಯ ಮೊತ್ತವನ್ನು ದಕ್ಷಿಣ ಆರ್ಕಾಟ್ ಜಿಲ್ಲೆಯ ತಿರುವಡಿಯ ತಿರುವೀರ ವೃಣೇಶ್ವರ ದೇವಾಲಯಕ್ಕೆ ಕಾಣಿಕೆಯಾಗಿ ಕೊಟ್ಟ ಮಾಹಿತಿಯಿದೆ. ಇದು ಸಾಳುವ

ನರಸಿಂಹರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ್ದು.[೧೬] ಕೆಲವೊಮ್ಮೆ ಬಹಳ ಕಾಲ ನಿಂತುಹೋಗಿದ್ದ ರಥೋತ್ಸವವನ್ನು ಶ್ರೀಮಂತರು ಮುಂದುವರೆಸಿದ ಉದಾಹರಣೆಗಳಿವೆ.

ಕ್ರಿ.ಶ. ೧೫೧೮ರ ದಾಖಲೆ ಕೃಷ್ಣದೇವರಾಯನ ಕಾಲದಲ್ಲಿ ಎರ್ರಮಾಂಚಿ ತುಲುಕಣ್ಣ ನಾಯಕನು ಸಲೇಂ ಜಿಲ್ಲೆಯ ಅರ್ರಗಲ್‌ನ ರಾಮೇಶ್ವರ ದೇವಾಲಯಕ್ಕೆ ರಥ ನಿರ್ಮಿಸಿಕೊಟ್ಟ, ಪಾಂಡ್ಯರ ಆಳ್ವಿಕೆ ನಂತರ ಆಚರಣೆ ನಿಂತು ಹೋಗಿತ್ತು. ಅವನೇ ಶಿವಳ್ಳಿ ನಾಯಕನ ಹಬ್ಬ ಜಾರಿಗೆ ತಂದ ಮತ್ತು ಆ ದೇವರ ಮೆರವಣಿಗೆ ಕಾರ್ಯವ್ಯವಸ್ಥೆಗಾಗಿ ಖಾಸಗಿಯಾಗಿ ಒಬ್ಬನನ್ನು ನೇಮಿಸಿದ. ಇವನ ಬಿರುದುಗಳಲ್ಲೊಂದಾಗಿದ್ದ 'ನರಲೋಕಗಂಡನ್' ಎಂದು ಆ ರಥಕ್ಕೆ ಹೆಸರು ಕೊಡ ಇಡಲಾಗಿತ್ತು.[೧೭] ಅಂದು ಅರಸರು ಸಾಮಂತರಷ್ಟೆ ರಥೋತ್ಸವ ಆಚರಣೆ ನಿರ್ವಹಿಸುತ್ತಿರಲಿಲ್ಲ ವ್ಯಾಪಾರಿಗಳೂ ಕೂಡ ಆಚರಿಸಿದ ಉದಾಹರಣೆಗಳಿವೆ. ಕ್ರಿ.ಶ. ೧೫೫೭ ರ ಶಾಸನ ತಿನ್ನವೆಲ್ಲಿ ಜಿಲ್ಲೆಯ ಶ್ರೀ ವೈಕುಂಟಂ ತಾಲ್ಲೂಕಿನ ಕಕೋಳಿನಾಥ ದೇವಾಲಯದ ಪವಿತ್ರ ರಥವು ಹಾಳಾದ ಸ್ಥಿತಿಯಲ್ಲಿದ್ದಾಗ ಹೊಸ ರಥ ಹೈಯಾಟುಕ್ಕುಡಿಯ ವ್ಯಾಪಾರಿಗಳು ಮಾಡಿಸಿಕೊಟ್ಟರು ಮತ್ತು ಪೆರನಲ್ಲೂರಿನ ಹಳ್ಳಿಯ ಆದಾಯ ಅಂದರೆ ೫೦ ಪಣಂ ಮತ್ತು ಭತ್ತ ೫೦೦ ಕೊಳಗ ವಾರ್ಷಿಕ ರಥೋತ್ಸವ ಖರ್ಚು ನಿರ್ವಹಣೆಗೆ ನೀಡಿದರು.[೧೮] ಹೀಗೆ ನಿಂತುಹೋಗಿದ್ದ ಹಬ್ಬ, ರಥೋತ್ಸವಗಳನ್ನು ಪುನಃ ಜಾರಿಗೆ ತಂದವರನ್ನು ಅರಸನ ಸಮ್ಮುಖದಲ್ಲಿ ಪುರಸ್ಕರಿಸಲಾಗುತ್ತಿತ್ತು.

ಕುಹೈಯೂರ್‌ನ ಕೈಕೋಳರ್ ಆದ ಕಣ್ಣನ್‌ನು ಸೇಲಂ ಜಿಲ್ಲೆಯ ಆರಗಳೂರ್‌ನ ಕಾಮೇಶ್ವರ ದೇವಾಲಯದಲ್ಲಿ ರಥೋತ್ಸವ ಜಾರಿಗೆ ತಂದಾಗ ದೇವಾಲಯದ ನಿರ್ವಾಹಕರು ಸೋಪಾನ ಮಂಟಪದಲ್ಲಿ ಸೇರಿ ಅವನಿಗೆ ಅವನ ವಂಶಸ್ಥರಿಗೆ ಮನೆ, ಮಗ್ಗ, ಭೂಮಿ ಮತ್ತು ಇತರ ಸವಲತ್ತು ಕಾಣಿಕೆಯಾಗಿ ಕೊಡಲು ನಿರ್ಧರಿಸಿದರು.[೧೯] ರಥೋತ್ಸವಗಳ ಪ್ರಮುಖ ಲಕ್ಷಣಗಳಲ್ಲೊಂದು ಧ್ವಜಸೇವೆ. ಕ್ರಿ.ಶ. ೧೫೪೧ರ ಶಾಸನವೊಂದು ರಾಜ ಅಚ್ಯುತರಾಯನ ಆಜ್ಞೆಯಂತೆ ಮಂತ್ರಿ ರಾಮಭಟ್ಟನಹಳ್ಳಿ(ವೆಂಕಟಸಮುದ್ರ)ಯನ್ನು, ವಾಸುದೇವನ ಮಗ ಧ್ವಜ ತಿಮ್ಮಣದಾಸನಿಗೆ ಪ್ರತಿವರ್ಷ ಧ್ವಜ ಸೇವೆಗೆ ಮತ್ತು ತಿರುವೆಂಗಳನಾಥ ದೇವರ ಜಾತ್ರೆಗೆಂದು ನೀಡಿದ ಎಂದಿದೆ.[೨೦] ಅಂದು ಸಾಮಂತರು ಮತ್ತು ಶ್ರೀಮಂತರು ಈ ರಥೋತ್ಸವಕ್ಕೆ ದೇಣಿಗೆ ನೀಡುತ್ತಿದ್ದರು. ಕ್ರಿ.ಶ. ೧೫೪೫ರಲ್ಲಿ ರಾಜ ಮಹಾಮಂತ್ರಿಯು ವಾರಣಾಸಿಯ ವರದಪ್ಪಣ್ಣನಿಗೆ ಕಾರ್ಯನಿರ್ವಹಣೆಗೆ ಪ್ರತಿನಿಧಿಯಾಗಿದ್ದನು. ಅಚ್ಯುತರಾಯನ ಮಂತ್ರಿ ವರದಪ್ಪನ ಅವನ ಪ್ರತಿನಿಧಿ ಕಣ್ಣಪ್ಪನಾಯಕ ಇವನ ಮಗ ತಮ್ಮನಾಯಕನು ರಥ ಮಾಡಿಸಿದ. ವಹ್ನಿಪುರದ ದೇವಹನುಮಂತೇಶ್ವರ, ಉಮಾ ಸಂಕಂಡೇಶ್ವರ, ವಿಘ್ನೇಶ್ವರ ಮತ್ತು ಇತರ ಸಹ ದೇವರುಗಳಿಗಾಗಿ ೬೦೦ ಅಡಿಕೆ ಮರ ಮತ್ತು ಭತ್ತದ ಗದ್ದೆಗಳನ್ನು ದಾನಮಾಡಿದ ಈ ಶಾಸನ ಹೇಳುವಂತೆ ತಿಪ್ಪಮ್ಮ ಎಂಬಾಕೆ ದಾನಮಾಡಿದಳು.[೨೧] ಇದಲ್ಲದೆ ಪ್ರತಿವರ್ಷ ದೇವರಿಗೆ ಬರುತ್ತಿದ್ದ ಕಾಣಿಕೆಯ ಅರ್ಧ ಭಾಗವನ್ನು ತೆಗೆದುಕೊಂಡು ರಥೋತ್ಸವ ಆಚರಿಸುವಂತೆ ಹೇಳಲಾಯಿತು.

ಹಂಪಿಯ ಪ್ರಮುಖ ದೇವಾಲಯಗಳ ಮುಂದೆ ವಿಶಾಲವಾದ ಬೀದಿ ಇದ್ದು ಅವು ವಿಶೇಷವಾಗಿ ಆಗ ರಥ ಬೀದಿಗಳೇ ಆಗಿದ್ದವು. ಆ ಬೀದಿಗಳಿಗೆ ಆ ದೇವಾಲಯದ ದೇವರ

ಹೆಸರಿನ ರೂಪದಲ್ಲಿ ಕರೆಯುವುದನ್ನು ಸಾಹಿತ್ಯ ಕೃತಿ, ಈವರೆಗಿನ ಅಧ್ಯಯನಗಳಿಂದ ಸ್ಪಷ್ಟವಾಗಿದೆ. ವಿರೂಪಾಕ್ಷ ದೇವಾಲಯದ ಮುಂದೆ ಸುಪ್ರಸಿದ್ಧ ವಿರೂಪಾಕ್ಷ ಬಜಾರ ಇದೆ. ಇಲ್ಲಿ ಪಂಪಾ ವಿರೂಪಾಕ್ಷರನ್ನು ಹೊತ್ತ ರಥ ಮತ್ತು ವಿದ್ಯಾರಣ್ಯರ ಗುರುಗಳದೆಂದು ಹೇಳುವ ಚಂದ್ರಮೌಳೀಶ್ವರ ರಥ ನೆರವೇರುತ್ತವೆ. ಇದು ವರ್ಷಕ್ಕೊಂದು ಬಾರಿ ದವನದ ಹುಣ್ಣಿಮೆಯೆಂದೇ ಪ್ರಸಿದ್ಧವಾಗಿದೆ. ಅಂದರೆ ಈ ಬೀದಿಯು ನಿರ್ಮಾಣವಾದುದು ರಥೋತ್ಸವಗಳಿಗೆಂದೇ. ಹಿಂದೆ ಈ ಬೀದಿಯಲ್ಲಿ ರಥೋತ್ಸವಗಳ ಜೊತೆಗೆ ಹಬ್ಬದಾಚರಣೆಯ ಸಂದರ್ಭದಲ್ಲಿ ಇನ್ನಿತರ ಉತ್ಸವಗಳು, ಮೆರವಣಿಗೆಗಳು ನಡೆಯುತ್ತಿದ್ದವು.[೨೨] ರಾಜಧಾನಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಇದು ರಾಜಧಾನಿಯ ಮುಖ್ಯ ಆಕರ್ಷಣೆಗಳಲ್ಲಿ ಒಂದಾಗಿತ್ತು. ಈ ರಥ ಬೀದಿಯ ಕೊನೆಯಲ್ಲಿ ನಂದಿ ಮಂಟಪವಿದೆ. ಇದರಲ್ಲಿ ಬೃಹದಾಕಾರದ ನಂದಿಯ ಮೂರ್ತಿ ಇದೆ. ವಿರೂಪಾಕ್ಷನ ರಥೋತ್ಸವ ಸಮಯದಲ್ಲಿ ರಥವನ್ನು ನಂದಿ ಮಂಟಪದವರೆಗೂ ಎಳೆದು ತರುತ್ತಿದ್ದರು.[೨೩] ಈಗಲೂ ರಥವನ್ನು ಇದೇ ಬೀದಿಯಲ್ಲಿ ಎಳೆಯುವರು ಆದರೆ ನಂದಿಮಂಟಪದವರೆಗೆ ಎಳೆಯುವುದಿಲ್ಲ.

ಪ್ರೌಢದೇವರಾಯನು ತನ್ನ ಕಾಲಕ್ಕೆ ರಥ ಎಳೆಯುತ್ತಿದ್ದ ಮುಖ್ಯ ಬೀದಿಯನ್ನು ಇನ್ನಷ್ಟು ವಿಶಾಲವಾಗಿ ಮಾಡಿಸಿ ಅದನ್ನು ಸುವ್ಯವಸ್ಥೆಗೊಳಿಸಿ ರಥೋತ್ಸವದ ಕಾಲಕ್ಕೆ ಗಲಭೆ ಗದ್ದಲಗಳಾಗದಂತೆ ನೋಡಿಕೊಂಡನೆಂದು ಲಕ್ಕಣ ದಂಡೇಶ ತನ್ನ ಶಿವತತ್ವಚಿಂತಾಮಣಿಯಲ್ಲಿ ಹೇಳುತ್ತಾನೆ.[೨೪] ಅಂದು ಕೇವಲ ರಥೋತ್ಸವ ಆಚರಣೆಗೆ ಅಷ್ಟೇ ಅಲ್ಲದೆ, ದೇವಾಲಯದ ಅಭಿವೃದ್ಧಿಗೂ ದಾನ ನೀಡುತ್ತಿದ್ದರು. ಇದನ್ನು ತಮಗೆ, ತಮ್ಮ ಹಿರಿಯರಿಗೂ ಪುಣ್ಯ ದೊರೆಯಲಿ ಹಾಗೂ ಅಲ್ಲಿ ವಿಶೇಷ ಪೂಜೆ, ಉತ್ಸವಗಳು ಜರುಗಲಿ ಎಂದು ದಾನ ನೀಡಿದ ವಿವರ ಸಾಕಷ್ಟಿದೆ.

ಶ್ರೀ ಕೃಷ್ಣದೇವರಾಯನು ಬಾಲಕೃಷ್ಣ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸುವ ಕಾಲದಲ್ಲಿ ಕೃಷ್ಣದೇವರಿಗೆ ನವರತ್ನದಿಂದ ಮಾಡಿದ ಆಭರಣಗಳನ್ನು ದೇವರ ಪೂಜಾ ಕಾರ್ಯಕ್ಕೆ ಕೊಟ್ಟನು. ಅದರ ಜೊತೆಗೆ ದೀಪರಾಧನೆ, ಫಲಪುಷ್ಪ ನೈವೇದ್ಯಕ್ಕೆ ಮತ್ತು ರಥೋತ್ಸವಕ್ಕೆ ಅಲ್ಲಿ ವಾಸಿಸುವ ಬ್ರಾಹ್ಮಣ ನಿಯೋಗಕ್ಕೆ ಹೊಸೂರು, ಮುದಲಾಪುರ, ದೇವಲಾಪುರ, ಕಳಸಾಪುರ ಮುಂತಾದ ಗ್ರಾಮಗಳನ್ನು ಉಂಬಳಿಯಾಗಿ ಕೊಡಲಾಯಿತು.[೨೫] ಅದೇ ರೀತಿಯಾಗಿ ರಾಜಧಾನಿಯಲ್ಲಿರುವ ವಿಠಲೇಶ್ವರ ದೇವರಿಗೆ ಕೃಷ್ಣದೇವರಾಯನು ಅಮೃತಪಡಿ ನೈವೇದ್ಯ, ಅಂಗ-ರಂಗ ಭೋಗ, ಫಾಲ್ಗುಣ ಮಾಸದ ರಥೋತ್ಸವ, ವೈಶಾಖ ಮಾಸದ ರಥೋತ್ಸವ, ನಿತ್ಯೋತ್ಸವ, ಮಾಸೋತ್ಸವ, ಸಂವತ್ಸರ ಉತ್ಸವ ನಿತ್ಯ ದೀಪಾರಾಧನೆ ಮೊದಲಾದ ಪುಣ್ಯ ತಿಥಿಗಳ ಮಹಾಪೂಜೆ, ನೈವೇದ್ಯಕ್ಕೆ ಹರಿಹರಪುರ, ವಿರೂಪಾಪುರ, ಮುಂತಾದ ಹಳ್ಳಿಗಳನ್ನು ಉಂಬಳಿಯಾಗಿ ಕೊಟ್ಟನು.[೨೬]

ಕೃಷ್ಣದೇವರಾಯನ ಕಾಲದಲ್ಲಿ ರಾಯಸ ಅಯ್ಯಪ್ಪರಸಯ್ಯನವರು ಕಂಭದೂರ ಶ್ರೀ ಮಲ್ಲಿಕಾರ್ಜುನ ದೇವರಿಗೆ ನೈವೇದ್ಯ-ದೀಪಾರಾಧನೆ ಮತ್ತು ರಥೋತ್ಸವಕ್ಕೆ ರಾಯಸ ಕುಂದುರುವೆಯ ರಾಜ್ಯದ ಕಂಭದೂರ ಪಡುವಣದ ಸ್ಥಳ 'ಪಾಲುವಟಿ' ಎಂಬ ಗ್ರಾಮವನ್ನು ಕ್ರಿ.ಶ. ೧೫೨೫ ಅಕ್ಟೋಬರ್ ೨೮ ರಂದು ಉಂಬಳಿಯಾಗಿ ಕೊಡಲಾಯಿತು.[೨೭] ಹಾಗೆ ಲೇಪಾಕ್ಷಿಯ ನಂದಿಲಕಶೆಟ್ಟಿ

ಮುದ್ದಮಾಂಬಾವರ ಕುಮಾರನಾದ ಪೆನುಗೊಂಡೆಯ ವಿರುಪಣ್ಣಯ್ಯನವರ ತಮ್ಮಂದಿರೂ ವೀರಣ್ಣನಾಯಕರೂ ಈ ಪೆನುಗೊಂಡ ರಾಜ್ಯದಲ್ಲಿ ಬರುವ ಲಕ್ಕಣ್ಣಾಪುರದ ಮಹಾಲಕ್ಷ್ಮೀ ದೇವಾಲಯಕ್ಕೆ ಪ್ರತಿವರ್ಷ ಭಕ್ತರು ಕೊಡುವ ದೇವರ ಕಾಣಿಕೆಯಲ್ಲಿ ಅರ್ಧಭಾಗವನ್ನು ರಥೋತ್ಸವ ಆಚರಿಸಲು ಕೊಡಲಾಗುತ್ತಿತ್ತು. ಕೆಲವು ಸಲ ಬರಗಾಲ ಬಿದ್ದಾಗ ವಿಜಯನಗರ ಕಾಲದಲ್ಲಿ ಅನುಕಂಪದ ಮನೋಭಾವನೆಯಿಂದ ಕಂದಾಯವನ್ನು ರೈತರ ಹಿತದೃಷ್ಟಿಯಿಂದ ಕಡಿಮೆ ಮಾಡಿ ನಿಗದಿಗೊಳಿಸಲಾಗುತ್ತಿತ್ತು. ಇದರ ಬಗ್ಗೆ ಸದಾಶಿವರಾಯನ ಶಾಸನದಲ್ಲಿ ಉಲ್ಲೇಖವಿದೆ. ಕ್ರಿ.ಶ. ೧೫೪೫ ಅಕ್ಟೋಬರ್ ೧೫ರಂದು ನಂದ್ಯಾಲದ ಸಾಮಂತನಾದ ನರಸಿಂಗದೇವನು ಚೆಲುಪಿಳ್ಳೆರಾಯನ ತಿರುನಾಳ ರಥೋತ್ಸವಕ್ಕೆ ಈ ಶ್ರೀರಂಗಪಟ್ಟಣದ ಬಲ್ಲಾಳಪುರ ಮತ್ತು ಕನ್ನಂಬಾಡಿಯ ಒಂದು ಹಳ್ಳಿಯ ಕಂದಾಯ ದಾನ ಮಾಡಿದನು. ಹಳ್ಳಿಯ ಆದಾಯ ೨೦೦೦ ವರಹ ಇತ್ತು ಆದರೆ ಬರಗಾಲದ ದೃಷ್ಟಿಯಿಂದ ಅದನ್ನು ೧೨೦೦ ವರಹಕ್ಕೆ ನಿಗದಿಗೊಳಿಸಲಾಯಿತು.[೨೮]

ಅಂದು ರಥೋತ್ಸವದ ಸಮಯದಲ್ಲಿ ಸಾಮಂತರು, ಅಧಿಕಾರಿಗಳು, ಪ್ರಜೆಗಳು ಭಾವೈಕ್ಯದಿಂದ ಸುಖ, ಸಂತೋಷದಿಂದ ಕಾಲ ಕಳೆಯುತ್ತಿದ್ದರು ಎಂದು ಕ್ರಿ.ಶ. ೧೫೫೬ರ ಸದಾಶಿವರಾಯನ ಶಾಸನ ಉಲ್ಲೇಖಿಸುತ್ತದೆ.[೨೯] ಮಡಕಶಿರಾ ಜಿಲ್ಲೆಯಲ್ಲಿ ಬರುವ ಪೆಯಲುಬಂಡೆಯ ತಿರುವೆಂಗಳನಾಥ ದೇವರಿಗೆ ಮಂಡಲೇಶ್ವರರಾದ ರಾಮರಾಜು, ತಿರುಮಲರಾಜಯ್ಯದೇವ ಇವರ ಅನುಮತಿಯಿಂದ ಶ್ರೀ ಮಹಾನಾಯಕಾಚಾರ್ಯ ನಿಡುಗಲ್ಲು ತಿಮ್ಮಣ್ಣ ನಾಯಕನು ನಿಡುಗಲ್ಲು ಸೀಮೆಯ ಪ್ರಜೆಗಳು ಕೂಡಿ ನಿಡುಗಲ್ಲು ರಾಜ್ಯದೊಳಗೆ ಬರುವ ತೋಮನಕುಂಟೆ ಗ್ರಾಮದ ಸರ್ವ ಆದಾಯವನ್ನು ಗುತ್ತಿಯ ತಿರುಮಲ ರಾಜಯ್ಯನ ಮುಂದೆ ದೇವರ ಅಭಿಷೇಕ ನೈವೇದ್ಯ, ನಂದಾದೀಪ, ರಥೋತ್ಸವಕ್ಕೆ ದಾನ ನೀಡಿದರು ಹಾಗೂ ತರುಮ ರಾಜಯ್ಯ ಇವರಿಗೆ ಪುಣ್ಯ ಲಭಿಸಲೆಂದು ಕೂಡ ದಾನ ನೀಡಿದ್ದನ್ನು ಕ್ರಿ.ಶ. ೧೫೫೬ ಡಿಸೆಂಬರ ೧೦ರ ಈ ಶಾಸನ ಉಲ್ಲೇಖಿಸುತ್ತದೆ.[೩೦] ಆ ತೊಮನಕುಂಟೆ ರಥೋತ್ಸವ ಜರುಗಲು ವಿಶಾಲವಾದ ಬೀದಿಗಳಿದ್ದವು. ರಥಬೀದಿಯು ಸುಮಾರು ೧.೬ ಕಿ.ಮೀ ಉದ್ದ ಮತ್ತು ೫೦ ಅಡಿ ಅಗಲವಿದೆ. ರಥಬೀದಿಯ ಇಕ್ಕೆಲಗಳಲ್ಲಿ ಮಂಟಪಗಳಿದ್ದು ಅವುಗಳಲ್ಲಿ ಕೆಲವಕ್ಕೆ ಅಂತಸ್ತುಗಳಿವೆ. ಅಂದು ರಥೋತ್ಸವವು ತುಂಬಾ ವಿಜೃಂಭಣೆಯಿಂದ ಜರುಗುತ್ತಿತ್ತು.

ವಿಜಯನಗರ ಕಾಲದ ರಥೋತ್ಸವಗಳನ್ನು ಗಮನಿಸಿದರೆ ಯಾವುದೇ ಕೃಷಿ ಚಟುವಟಿಕೆಯ ಕಾರ್ಯಗಳು ಇಲ್ಲದ ವೇಳೆಯಲ್ಲಿ ನಡೆದವೆ. ಅಂದರೆ ಅಂದು ಕೃಷಿಗೆ ಪ್ರಾಧಾನ್ಯತೆ ನೀಡಲಾಗಿತ್ತು ಎಂದು ಸಂಶೋಧನೆಗಳಿಂದ ಈಗಾಗಲೇ ದೃಢಪಟ್ಟಿರುವ ಸಂಗತಿ. ಬೇಸಿಗೆ ಕಾಲದಲ್ಲಿ ಯಾವುದೇ ಕೃಷಿ ಚಟುವಟಿಕೆಗಳು ಇರುವುದಿಲ್ಲ. ಆಗ ರೈತಾಪಿ ವರ್ಗಕ್ಕೆ ಬಿಡುವಿನ ಸಮಯ ಬೇಸಿಗೆ ಕಾಲದಲ್ಲಿ ರೋಗಗಳು ಹರಡುತ್ತಿರುತ್ತವೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ಮಳೆಗಾಲದಲ್ಲಿ ಮಳೆ-ಬೆಳೆ ಸಮೃದ್ಧಿಯಾಗಿರಲಿ, ಜನ-ಜಾನುವಾರುಗಳಿಗೆ ಯಾವುದೇ ರೋಗಗಳು ಹರಡದಂತಿರಲಿ ಎಂದು ದೇವ-ದೇವತೆಗಳನ್ನು ಸಂತೃಪ್ತಿಗೊಳಿಸಲು ಜಾತ್ರೆಗಳ ಮೊರೆಹೊಗಿದ್ದನ್ನು ಕಾಣುತ್ತೇವೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದರೆ ಅಂದು ರಥೋತ್ಸವ ಕಾರ್ಯಕ್ರಮಕ್ಕೆ ಸಾಮಾನ್ಯರಾದಿಯಾಗಿ ಎಲ್ಲಾ ವರ್ಗದವರು ಭಾಗವಹಿಸಿದ್ದು ಕಂಡುಬರುತ್ತದೆ. ಆ ಸಮಯದಲ್ಲಿ ನಡೆಯುತ್ತಿದ್ದ ನೃತ್ಯ, ಸಂಗೀತ, ಕ್ರೀಡೆ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಇವು ಜರುಗುತ್ತಿದ್ದುದು ಕಾಣುತ್ತೇವೆ. ಇಂದಿಗೂ ರಥೋತ್ಸವಗಳ ಸಂದರ್ಭದಲ್ಲಿ ಅದೇ ರೀತಿಯ ಪರಿಪಾಠ ಮುಂದುವರೆದುಕೊಂಡು ಬಂದಿರುವುದನ್ನು ಕಾಣಬಹುದು ನಂದಿಕೋಲು ಕುಣಿತ, ಕೋಲಾಟ, ಗಾರುಡಿ ಕುಣಿತ, ಡೋಳ್ಳುಗಾರರು, ವಿವಿಧ ವೇಷಗಾರಿಂದ ಜನಸಾಮಾನ್ಯರು ಅನೇಕ ವಿಧಗಳಲ್ಲಿ ವಿನೋದವನ್ನು ಪಡೆಯುತ್ತಾರೆ.

ಮಹಾನವಮಿ–ನವರಾತ್ರಿ

ಸನಾತನ ಭಾರತೀಯರ ಹಬ್ಬಗಳ ಮಾಲೆಯಲ್ಲಿ ಅತ್ಯಂತ ಮುಖ್ಯವಾಗಿರುವ ಒಂದು ಹಬ್ಬ ಮಹಾನವಮಿ. ಅಶ್ವಯುಜ ಮಾಸದಲ್ಲಿ ಆಚರಿಸಲ್ಪಡುವ ಹಬ್ಬಗಳಲ್ಲಿ ಇದು ಮುಖ್ಯವಾದದ್ದು. ದೇಶದ ಎಲ್ಲಾ ಭಾಗಗಳಲ್ಲಿಯೂ, ಎಲ್ಲಾ ವರ್ಣಕ್ಕೆ ಸೇರಿದವರೂ ಇದನ್ನು ಸಂಭ್ರಮದಿಂದ ಆಚರಿಸುವರು. ವಿಜಯನಗರ ಕಾಲದಲ್ಲಿ ಈ ಹಬ್ಬದ ಆಚರಣೆಯು ಬಹು ವೈಭವದಿಂದ ಜರುಗುತ್ತಿತ್ತು ಎಂಬುದಕ್ಕೆ ಸಮಕಾಲಿನ ದಾಖಲೆಗಳಾದ, ವಿದೇಶಿ ಪ್ರವಾಸಿ ಬರಹ, ಸಾಹಿತ್ಯ ಕೃತಿ, ಶಿಲ್ಪಗಳು ಸಾಕ್ಷಿಯಾಗಿವೆ. ಪ್ರಮುಖವಾಗಿ ಉಳಿದುಕೊಂಡು ಬಂದಿರುವ ಮಹಾನವಮಿ ದಿಬ್ಬ ಜ್ವಲಂತವಾಗಿ ನಿಂತಿದೆ. ಈ ದಿಬ್ಬದ ಸುತ್ತಲೂ ಆನೆ, ಒಂಟೆ, ಕುದುರೆಗಳ ಮೇಲೆ ಕುಳಿತಿರುವ ವೀರರು, ಬೇಟೆ ಚಿತ್ರಣ, ಪ್ರಾಣಿ ಪಕ್ಷಿಗಳು, ಮಲ್ಲರ ಕುಸ್ತಿ, ನೃತ್ಯಭಂಗಿ, ಪೌರಾಣಿಕ, ಮೆರವಣಿಗೆ, ಹೋಳಿಹಬ್ಬದ ಚಿತ್ರಣ, ಕೋಲಾಟ ಹೀಗೆ ನಾನಾ ವಿಧವಾದ ಶಿಲ್ಪಗಳು ವಿನೋದಾವಳಿಗಳ ಅಧ್ಯಯನಕ್ಕೆ ಆಕರದ ಗಣಿಯೇ ಆಗಿದೆ. ಇದೊಂದು ಸಮಕಾಲಿನ ಜೀವನ ಮಹಾವೈಭವದ ಚಿತ್ರ ಎಂದು ಹೇಳಬಹುದು. ಈ ಮಹಾನವಮಿ ದಿಬ್ಬವನ್ನು ಶ್ರೀಕೃಷ್ಣದೇವರಾಯನು ಕ್ರಿ.ಶ. ೧೫೧೨ರಲ್ಲಿ ಒರಿಸ್ಸಾ (ಗಜಪತಿ) ರಾಜ್ಯವನ್ನು ಗೆದ್ದ ಮೇಲೆ ಅದರ ನೆನಪಿಗಾಗಿ ಈ ವೇದಿಕೆಯನ್ನು ನಿರ್ಮಿಸಿದನು. ಈ ದಿಬ್ಬವು ಪೂರ್ವ ಪಶ್ಚಿಮವಾಗಿ ೮೦ ಅಡಿ ಉದ್ದವಾಗಿಯೂ, ಉತ್ತರ ದಕ್ಷಿಣವಾಗಿ ೮೦ ಅಡಿ ಅಗಲವಾಗಿಯೂ, ೨೨ ಅಡಿ ಎತ್ತರವಾಗಿದ್ದು ಚೌಕಾಕಾರವಾಗಿದೆ.

ವಿಜಯನಗರ ಕಾಲದಲ್ಲಿ ಮಹಾನವಮಿ ಹಬ್ಬವನ್ನು ವಿಜೃಭಣೆಯಿಂದ ಆಚರಿಸುತ್ತಿದ್ದದ್ದು ದಾಖಲೆಗಳಿಂದ ದೃಢಪಟ್ಟಿರುವ ಅಂಶ. ಈ ಹಬ್ಬವನ್ನು ಬೇಳೆಯು ಸಮೃದ್ಧವಾಗಿ ಬೆಳೆದು ನಿಂತು ಕೊಯ್ಲಿಗೆ ತಯಾರಾಗಿರುತ್ತವೆ. ಅಂತಹ ಸಮಯದಲ್ಲಿ ಸಾಮ್ರಾಜ್ಯದ ಎಲ್ಲಾ ರೈತಾಪಿವರ್ಗ, ಅರಸ, ಮಾಂಡಲಿಕರಾದಿಯಾಗಿ ಸೇರಿಕೊಂಡು ಆಚರಿಸುತ್ತಿದ್ದರು. ಮುಖ್ಯವಾಗಿ ರೈತರು, ತಮ್ಮ ಬೆಳೆಗಳಿಗೆ ಯಾವುದೇ ರೋಗಗಳು ಬಾದಿಸದಿರಲಿ, ಫಸಲು ಕೈಗೆ ಸಿಗಲಿ ಎಂದು ತಮ್ಮ ಕೃಷಿ ಉಪಕರಣಗಳಿಗೆ ಪೂಜೆ ಮಾಡುತ್ತಾರೆ. ಅದರಂತೆ ಅರಸ ಮನೆತನದವರು ತಮ್ಮ ಆಯುಧಗಳಿಗೆ ಆಯುಧ ಪೂಜೆ ಮಾಡುತ್ತಾರೆ. ಈ ಹಬ್ಬವನ್ನು ಒಂದು ಸಮೃದ್ಧಿಯ ಸಂಕೇತವಾಗಿ ಆಚರಿಸಿದ್ದನ್ನು ಕಾಣಬಹುದು.

ವಿದೇಶಿ ಪ್ರವಾಸಿಗರ ಕಣ್ಮನ ಸೆಳೆದ ಅತಿದೊಡ್ಡ ಹಬ್ಬ ಮಹಾನವಮಿ. ಇದಕ್ಕಿರುವ ಧಾರ್ಮಿಕ ಆವರಣದ ಜೊತೆ ರಾಜಕೀಯ ಮಹತ್ವ ಇದೆ. ರಾವಣನ ಮೇಲೆ ರಾಮ ಯುದ್ಧ ಸಾರುವ ಸಂದರ್ಭವನ್ನು ನೆನಪಿಸುವ ವಾರ್ಷಿಕೋತ್ಸವ, ಮತ್ತೊಂದೆಡೆ ದುರ್ಗಾಪೂಜೆ ಮತ್ತು ಆಯುಧ ಪೂಜೆಯು ವಿಜಯದಶಮಿಯಲ್ಲಿ ಸೇರಿದ್ದು ಆಗ ರಾಜಕೀಯ ವಲಯದಲ್ಲಿ ಗಂಭೀರ ಘಟನೆಗಳು ಸಂಭವಿಸಲು ಮೊದಲಾದ್ದರಿಂದ ಈ ಹಬ್ಬವು ಸೂಕ್ತವಾಗಿತ್ತು. ಹಿಂದೂ ಕ್ಯಾಲೆಂಡರ್‌ನಂತೆ ಇದು ಅಶ್ವಿನಿ ಶುಕ್ಲ ಪಕ್ಷದಲ್ಲಿ ಬರುತ್ತದೆ.[೫] ಪ್ರೌಢದೇವರಾಯನ ಕಾಲಕ್ಕೆ ಬಂದಿದ್ದ ವಿದೇಶಿ ಪ್ರವಾಸಿ ಅಬ್ದುಲ್ ರಜ್ಜಾಕ್ ಈ ದೊಡ್ಡ ಹಬ್ಬಕ್ಕೆ ಸಾಕ್ಷಿಯಾಗಿದ್ದನು. ಇವನು ಇದನ್ನು 'ಮಹನಾವೀ' ಎಂದು ಕರೆದು ಈ ಮುಂದಿನಂತೆ ವರ್ಣಿಸಿದ್ದಾನೆ. ಆಡಳಿತ ನಡೆಸುವ ಈ ದೇಶದ ವಿಗ್ರಹಾರಾಧಕರು ತಮ್ಮ ಗೌರವ ಪ್ರತಿಷ್ಠೆ, ತಮ್ಮ ಅಧಿಕಾರ, ಧರ್ಮ, ವೈಭವದ ಪ್ರದರ್ಶನಕ್ಕಾಗಿ ಪ್ರತಿ ವರ್ಷವೂ 'ಮಹಾನವೀ' ಎಂಬ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬವನ್ನು ಆಚರಿಸುವ ರೀತಿ ಹಿಗಿದೆ. ವಿಜಯನಗರದ ರಾಜನ ಅಪ್ಪಣೆಯಂತೆ ಮೂರುನಾಲ್ಕು ತಿಂಗಳು ಪ್ರಯಾಣದಷ್ಟು ವಿಸ್ತಾರವಾದ ಅವನ ರಾಜ್ಯದ ಮಾಂಡಲಿಕರು, ಸರದಾರರು ಮತ್ತು ಮುಖ್ಯಸ್ಥರು ರಾಜಧಾನಿಗೆ ಬರುತ್ತಾರೆ. ಅವರು ಬರುವಾಗ ಸಾವಿರಾರು ಆನೆಗಳ ಸಮೇತ ಬರುತ್ತಾರೆ. ಹೀಗೆ ಸೇರಿದ ಆನೆಗಳ ಸಮೂಹ ಅಲ್ಲೋಲ ಕಲ್ಲೋಲವಾದ ಸಮುದ್ರ ಅಥವಾ ಬಿರುಗಾಳಿಗೆ ತುತ್ತಾದ ಮೇಘವನ್ನು ಹೋಲುತ್ತದೆ. ಆನೆಗಳಿಗೆ ಸೊಗಸಾದ ಹೊದಿಕೆ ಹೊದಿಸಿ ಬೆನ್ನಿಗೆ ಅಂಬಾರಿ ಬಿಗಿದಿರುತ್ತಾರೆ. ಈ ಅಂಬಾರಿಗಳಲ್ಲಿ ದೊಂಬರು, ನಾನಾ ಆಟ ಚತುರರೂ ಕುಳಿತುಕೊಳ್ಳುತ್ತಾರೆ. ಆನೆಯ ಸೊಂಡಿಲು ಮತ್ತು ಕಿವಿಗಳ ಮೇಲೆ ರಸಸಿಂಧೂರ ಮತ್ತು ಇತರೆ ಬಣ್ಣಗಳನ್ನು ಸೇರಿಸಿ ಅಪೂರ್ವವೂ, ಆಶ್ಚರ್ಯವೂ ಆದ ರೀತಿಯಲ್ಲಿ ಅಲಂಕಾರ ಮಾಡುತ್ತಾರೆ. ಅರಮನೆಯ ಮುಂದಿನ ವಿಶಾಲವಾದ ಪ್ರದೇಶದಲ್ಲಿ ಮೂರು, ನಾಲ್ಕು ಮತ್ತು ಐದು ಅಂತಸ್ತಿನ ಅನೇಕ ರಂಗ ಮಂಟಪಗಳನ್ನು ನಿರ್ಮಿಸುತ್ತಾರೆ. ಈ ರಂಗಮಂಟಪಗಳನ್ನು ಮೇಲಿನಿಂದ ಕೆಳಗಿನವರೆಗೆ ನಾನಾ ಚಿತ್ರಗಳಿಂದ ಮನಸ್ಸು ಊಹಿಸಬಹುದಾದ ಎಲ್ಲಾ ಪ್ರಾಣಿಗಳ ಅಂದರೆ ಮನುಷ್ಯರ, ಕಾಡು ಪ್ರಾಣಿಗಳ, ಹಕ್ಕಿಗಳ ಕೊನೆಗೆ ನೋಣ ಮತ್ತು ಹುಳಹುಪ್ಪಟೆಗಳ ಚಿತ್ರಗಳನ್ನು ಅದ್ಭುತವಾದ ಕಲಾ ಚತುರತೆಯಿಂದ ಚಿತ್ರಿಸುತ್ತಾರೆ. ಕೆಲವು ಮಂಟಪಗಳನ್ನು ಯಾವ ರೀತಿ ನಿರ್ಮಿಸುತ್ತಾರೆಂದರೆ ಅವುಗಳನ್ನು ಕ್ಷಿಪ್ರದಲ್ಲಿ ತಿರುಗಿಸಿ ಬೇರೊಂದು ಮುಖ ತೋರಿಸಬಹುದು. ಒಂದೊಂದು ಕ್ಷಣಕ್ಕೆ ಒಂದೊಂದು ತರಹದ ಕೋಣೆ ಅಥವಾ ಹಜಾರ ಕಣ್ಣಿಗೆ ಕಾಣಿಸಿಕೊಳ್ಳುತ್ತದೆ. ಈ ಸ್ಥಳದ ಎದುರಿಗೆ ಒಂಬತ್ತು ಭವ್ಯಾಲಂಕೃತ ಅರಮನೆಗಳು ನಿಂತಿದ್ದವು. ಒಂಬತ್ತನೆಯದರಲ್ಲಿ ರಾಜನ ಸಿಂಹಾಸನ ಇರಿಸಲಾಗಿತ್ತು. ಏಳನೆಯದಲ್ಲಿ ಈ ವೃತ್ತಾಂದ ನಮ್ಮ ಲೇಖಕನಿಗೆ ಸ್ಥಳ ಒದಗಿಸಲಾಗಿತ್ತು. ಅರಮನೆ ಮತ್ತು ಮಂಟಪಗಳ ನಡುವೆ ಸಂಗೀತಗಾರರು ಮತ್ತು ಕತೆ ಹೇಳುವವರು ಇದ್ದರು. ಭವ್ಯ ವಸ್ತ್ರ ಧರಿಸಿದ ಹುಡುಗಿಯರು ರಾಜನ ಎದುರಿಗೆ ಬಂದು ಸುಂದರ ಪರದೆಯ ಹಿಂದೆ ನೃತ್ಯ ಮಾಡುತ್ತಿದ್ದರು. ಗಾರುಡಿಗರು ಅಸಂಖ್ಯ ಪ್ರದರ್ಶನ ನೀಡಿದರು. ಅವರು ಅದ್ಭುತವಾಗಿ ಮಾತು ಕಲಿಸಲಾದ ಆನೆಗಳನ್ನು ಪ್ರದರ್ಶಿಸಿದರು. ಮೂರು ಅನುಕ್ರಮಿತ ದಿನಗಳೆಂದು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ

ಅತ್ಯಂತ ವೈಭವ ಪೂರ್ಣ ಶೈಲಿಯಲ್ಲಿ ಮುಂದುವರಿಸಲಾಯಿತು. ಸಿಡಿಮದ್ದುಗಳ, ಕ್ರೀಡೆ ಮನರಂಜನೆಗಳು ಸಾಗಿದವು.[೨] ಅಂದರೆ ಈ ಹಬ್ಬದ ಸಂಪೂರ್ಣ ಚಿತ್ರವನ್ನು ಕೊಡಲಾಗಿದೆ.

ಅಂದು ಮಹಾನವಮಿ ಉತ್ಸವ ದಿನದಂದು ಸಾಮ್ರಾಜ್ಯದ ನಾನಾ ಭಾಗಗಳಿಂದ ಬಂದವರು, ಒಳಗಿದ್ದವರು ಸಾಮಾನ್ಯರಾದಿಯಾಗಿ ಅರಸ, ಮಾಂಡಲಿಕ ಇತ್ಯಾದಿಗಳೆಲ್ಲರೂ ಉತ್ಸವ ಮುಗಿಯುವವರೆಗೆ ಕ್ರೀಡೆ ಮತ್ತು ವಿನೋದಾವಳಿಗೆ ಯಾವ ಕೊರತೆಯಿಲ್ಲದಂತೆ ಸಂಭ್ರಮಿಸುತ್ತಿದ್ದರು ಎಂದು ತಿಳಿಯುತ್ತದೆ.

ಕೃಷ್ಣದೇವರಾಯನ ಕಾಲದಲ್ಲಿ ಭೇಟಿ ನೀಡಿದ ಪೋರ್ಚ್‌ಗೀಸ್ ಪ್ರವಾಸಿ ಪಾಯೇಸ್, ಅಬ್ದುಲ್ ರಜ್ಜಾಕ್ ಏನನ್ನು ಕಾಣಲು ವಿಫಲನಾದನೋ ಅಂಥವನ್ನ ಸೂಕ್ಷ್ಮವಾಗಿ ಗಮನಿಸಿದ್ದಾನೆ. ಈ ಚರಿತ್ರೆಕಾರನ ವಿಷಯ ವಿಸ್ತೃತವಾಗಿದೆ ಮತ್ತು ಆಸಕ್ತಿದಾಯಕವಾಗಿದೆ. ಅವನ ಹೇಳಿಕೆ ಪ್ರಕಾರ ಈ ಮಹಾನವಮಿ ಹಬ್ಬದ ವಿವರ ಈ ಅನಾಗರಿಕರಲ್ಲಿಯೂ ನಮ್ಮಲ್ಲಿಯಂತೆ ಉತ್ಸವ ಆಚರಿಸುವ ದಿನಗಳಿವೆಯೆಂಬುದನ್ನು ನೀವು ತಿಳಿಯಬೇಕು. ಅವರ ಉಪವಾಸದ ದಿನಗಳು ಇವೆ. ಅವರು ಇಡೀ ದಿನ ಏನನ್ನು ಸೇವಿಸುವುದಿಲ್ಲ. ಮಧ್ಯರಾತ್ರಿಗೆ ಮಾತ್ರ ಸೇವಿಸುತ್ತಾರೆ. ಮುಖ್ಯ ಉತ್ಸವದ ಕಾಲ ಬಂದಾಗ ಅದು ರಾಜ್ಯದ ರಾಜಧಾನಿಯಾದುದರಿಂದಲೂ, ರಾಜನು ಹೊಸ ನಗರದಿಂದ ಈ ಬೀಸ್ನಗ ನಗರಕ್ಕೆ ಆಗಮಿಸುತ್ತಾನೆ. ಈ ಉತ್ಸವಗಳಿಗೆ ಅವರು ಹಾಜರಿರುವಂತೆ ರಾಜ್ಯದ ಎಲ್ಲ ನರ್ತಕಿಯರನ್ನು ಕರೆಯಿಸಲಾಗುತ್ತದೆ. ಹಾಗೆಯೆ, ದಳವಾಯಿಗಳು ಮತ್ತು ರಾಜರು ಮತ್ತು ಮಹಾಪ್ರಭುಗಳನ್ನು ಅವರ ಪರಿವಾರಗಳೊಂದಿಗೆ. ಆದರೆ ರಾಜ ಯುದ್ಧಕ್ಕೆ ಕಳಿಸಿದವರನ್ನು, ಇಲ್ಲವೆ ಗಡಿ ಭಾಗಗಳಲ್ಲಿರುವವರನ್ನು ಇಲ್ಲವೆ (ಆಕ್ರಮಣದ) ಭೀತಿಯಿರುವ ಕಡೆ ರಾಜ್ಯದ ದೂರ ಗಡಿಯಲ್ಲಿರುವವರನ್ನು ಮಾತ್ರ ಅಹ್ವಾನಿಸುವುದಿಲ್ಲ ಉದಾಹರಣೆಗೆ ಒರಿಯಾ ರಾಜ್ಯ ಮತ್ತು ಇಡಲ್‌ಸಾಓನ ಪ್ರದೇಶಗಳು, ಕರೆಯುವುದಿಲ್ಲ. ಇಂಥ ದಳವಾಯಿಗಳು ಇಂಥ ಸ್ಥಳಗಳಲ್ಲಿ ಅನುಪಸ್ಥಿತರಿದ್ದರೂ ನಾನು ಇನ್ನು ಮುಂದೆ ಹೇಳುವವರು ಅವರ ಪರವಾಗಿ ಉತ್ಸವಕ್ಕೆ ಬಂದಿರುತ್ತಾರೆ. ಹನ್ನೆರಡನೆಯ ಸೆಪ್ಟಂಬರದಂದು ಪ್ರಾರಂಭವಾಗಿ ಒಂಬತ್ತು ದಿನ ನಡೆಯುವ ಈ ಉತ್ಸವಗಳು ರಾಜನ ಅರಮನೆಯಲ್ಲಿ ಜರುಗುತ್ತವೆ. ಅರಮನೆ ಈ ತರಹದ್ದು ಇದೆ. ಅದು ನಾನು ಹೇಳಿರುವ ಬಯಲು ಸ್ಥಳಕ್ಕೆ ತೆರೆಯುವ ದ್ವಾರ ಹೊಂದಿದೆ. ಈ ದ್ವಾರದ ಮೇಲೆ ಸ್ವಲ್ಪ ಎತ್ತರದ ಗೋಪುರವಿದೆ. ಮಿಕ್ಕವುಗಳಂತೆ ಇದನ್ನೂ ಕಟ್ಟಲಾಗಿದ್ದು ಅದಕ್ಕೆ ಮೊಗಸಾಲೆಗಳಿವೆ. ಈ ದ್ವಾರದ ಹೊರಗೆ ಅರಮನೆಯನ್ನು ಸುತ್ತುತ್ತದೆಂದು ನಾನು ಹೇಳಿರುವ ಗೋಡೆ ಪ್ರಾರಂಭವಾಗುತ್ತದೆ. ದ್ವಾರದಲ್ಲಿ ಅನೇಕ ದ್ವಾರಪಾಲಕರಿರುವರು. ಅವರು ಕೈಯಲ್ಲಿ ಚರ್ಮದ ಕೊರಡಗಳು ಮತ್ತು ಬಡಿಗೆಗಳನ್ನು ಹಿಡಿದಿರುತ್ತಾರೆ. ದಳವಾಯಿಗಳು ಮತ್ತು ಪ್ರಮುಖರು ಮತ್ತು ಕಾವಲು ಪಡೆಯ ಮುಖ್ಯಸ್ಥನಿಂದ ಆಜ್ಞೆ ಬಂದಿರುವವರನ್ನು ಅಲ್ಲದೆ ಬೇರೆ ಯಾರನ್ನೂ ಪ್ರವೇಶಿಸಗೊಡುವುದಿಲ್ಲ. ಈ ದ್ವಾರ ದಾಟಿದರೆ ಒಂದು ಬಯಲು ಸ್ಥಳವಿದೆ ಮತ್ತು ಮೊದಲಿನಂತಹ ಇನ್ನೊಂದು ದ್ವಾರವುಂಟು. ಅಲ್ಲಿಯೂ ದ್ವಾರಪಾಲಕರು ಮತ್ತು ರಕ್ಷಕರು ಇರುವರು. ಇದನ್ನು ಪ್ರವೇಶಿಸಿದ ಕೂಡಲೆ ಒಂದು ವಿಶಾಲ ಬಯಲು ಸ್ಥಳವಿದೆ. ಅದರ ಒಂದು ಬದಿಗೆ ಮತ್ತು ಇನ್ನೊಂದು

ಬದಿಗೆ ಎತ್ತರವಲ್ಲದ ಮೊಗಸಾಲೆಗಳಿವೆ. ಇಲ್ಲಿ ದಳವಾಯಿಗಳು ಮತ್ತು ಪ್ರಮುಖರು ಉತ್ಸವ ನೋಡಲೋಸುಗ ಕುಳಿತುಕೊಳ್ಳುತ್ತಾರೆ.[೩೩] ಅಂದರೆ ಅಂದು ಉತ್ಸವಗಳಿಗಾಗಿ ಮತ್ತು ಕ್ರೀಡಾ ವಿನೋದಗಳಿಗಾಗಿ ಒಂದು ವ್ಯವಸ್ಥಿತ ಮೈದಾನವಿರುತ್ತಿತ್ತು. ಅದನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಲು ಒಂದು ಸೈನಿಕ ಪಡೆಯಿರುತ್ತಿತ್ತು ಎಂದು ಭಾವಿಸಬಹುದು.

ವಾರಾಂಗನೆಯರು ಮತ್ತು ದೇವಾಲಯದ ಮತ್ತು ಅರಮನೆಯ ನರ್ತಕಿಯರು ಬಹಳ ಹೊತ್ತಿನವರೆಗೆ ದೇವಾಲಯ ಹಾಗೂ ವಿಗ್ರಹದ ಮುಂದೆ ನರ್ತನಗೈಯ್ಯುತ್ತ ಉಳಿಯುತ್ತಾರೆ. ಈ ಒಂಬತ್ತು ದಿನಗಳಲ್ಲಿ ಪ್ರತಿ ಮುಂಜಾನೆ ಸಮಯದಲ್ಲಿ ನಾನು ಹೇಳಿರುವ ಆಚರಣೆಗಳೊಂದಿಗೆ ಇದೆಲ್ಲವನ್ನು ಮಾಡಲಾಗುತ್ತದೆ. ಪ್ರತಿದಿನ (ಹಿಂದಿನದಕ್ಕಿಂತ) ಅಧಿಕ ಭವ್ಯವಾಗಿರುತ್ತದೆ. ಮಹಾನವಮಿ ಹಬ್ಬದಲ್ಲಿ ಏನೇಲ್ಲಾ ಆಚರಣೆಗಳಿದ್ದವು ಎಂಬುದರ ವಿವರಣೆಯನ್ನು ಈ ಪ್ರವಾಸಿ ಕೊಡುತ್ತಾನೆ.

ಆ ಉತ್ಸವದಲ್ಲಿ ಕುಸ್ತಿಗೆ ಬಹಳ ಪ್ರಾಧಾನ್ಯತೆಯಿತ್ತು ಎಂಬುದಕ್ಕೆ ಮಲ್ಲರಿಗೆ ಯಾವ ರೀತಿಯ ಗೌರವ ಕೊಡಲಾಗುತ್ತಿತ್ತು ಎಂದು ಈ ಪ್ರವಾಸಿ ಹೇಳುತ್ತಾನೆ. ಮಲ್ಲರು ನೆಲದ ಮೇಲೆ ಕುಳಿತುಕೊಳ್ಳುತ್ತಾರೆ. ಏಕೆಂದರೆ, ಇವರಿಗೆ ಕೂಡಲು ಅನುಮತಿಯಿದೆ. ಆದರೆ, ಬೇರಾರೂ ಅವನು ಎಂಥಾ ಮಹಾಪ್ರಭುವೇ ಆಗಿರಲಿ, ರಾಜನು ಆಜ್ಞೆ ನೀಡದ ಹೊರತು ಕುಳಿತುಕೂಳ್ಳುವಂತಿಲ್ಲ. ರಾಜನೆದುರು ಯಾವಾಗಲೂ ವೀಳ್ಯದೆಲೆ ತಿನ್ನಬಹುದಾದ ನರ್ತಕಿಯರನ್ನು ಹೊರುಪಡಿಸಿ ಬೇರಾರೂ ತಿನ್ನಬಾರದೆಂದಿದ್ದರೂ ಮಲ್ಲರು ತಿನ್ನಬಹುದಾಗಿದೆ. ರಾಜನು ತನ್ನ ಸ್ಥಾನದಲ್ಲಿ ಆಸೀನನಾದ ತಕ್ಷಣ ತನ್ನ ಕುಲಕ್ಕೆ ಸೇರಿದ, ಸ್ವತಃ ರಾಜರಾಗಿದ್ದ ಮತ್ತು ತನ್ನ ಹೆಂಡತಿಯರ ತಂದೆಗಳಾದ ಮೂವರು ಅಥವಾ ನಾಲ್ವರನ್ನು ತನ್ನೊಂದಿಗೆ ಕುಳಿತುಕೂಳ್ಳಲು ಹೇಳುತ್ತಾನೆ. ಇವರಲ್ಲಿ ಪ್ರಮುಖವಾದವನೆಂದರೆ ಮಲಬಾರದ ದಂಡೆಗುಂಟ ಇರುವ ಎಲ್ಲ ಪ್ರದೇಶದ ರಾಜ. ಈ ರಾಜನನ್ನು ಕುಮಾರ ವೀರ್ಯ ಎಂದು ಕರೆಯಲಾಗುತ್ತದೆ. ಇವನು ಜಗಲಿಯ ಇನ್ನೊಂದು ಬದಿಗೆ, ರಾಜನಷ್ಟೆ ಮುಂಭಾಗದಲ್ಲಿ ಕುಳಿತುಕೂಳ್ಳುತ್ತಾನೆ. ಮಿಕ್ಕವರೆಲ್ಲ ಹಿಂದೆ ಕುಳಿತಿರುವರು.[೩೪] ಅಂದರೆ ಅಂದು ಕುಸ್ತಿಯಾಡುವವರಿಗೆ ಮಹಾನವಮಿ ಉತ್ಸವದಲ್ಲಿ ಯಾವ ರೀತಿಯಾಗಿ ನಡೆಸಿಕೊಳ್ಳುತ್ತಿದ್ದರು ಎಂದು ತಿಳಿಯಬಹುದು.

ಅನಂತರ ಮಲ್ಲರು ಆಟ ಆರಂಭಿಸುವರು. ಅವರ ಕುಸ್ತಿ ನಮ್ಮದರಂತೆ ತೋರುವುದಿಲ್ಲ. ಅಲ್ಲಿ ಹಲ್ಲು ಮುರಿಯುವಂಥ, ಕಣ್ಣು ಕೀಳುವಂಥ, ಮುಖ ವಿಕಾರಗೊಳಿಸುವಂಥ ಬಲವಾದ ಏಟುಗಳನ್ನು ಕೊಡಲಾಗುತ್ತದೆ. ಅವು ಎಷ್ಟು ತೀವ್ರವಾಗಿರುತ್ತವೆಂದರೆ ಆಗೊಮ್ಮೆ ಈಗೊಮ್ಮೆ ಮಾತು ಕಟ್ಟಿಹೋದ ಕೆಲವರನ್ನು ಅವರ ಮಿತ್ರರು ಹೊತ್ತೊಯ್ಯುತ್ತಾರೆ. ಅವರು ಒಬ್ಬರನ್ನೊಬ್ಬರು ಚೆನ್ನಾಗಿ ಒಗೆಯುತ್ತಾರೆ ಕೂಡ. ಅವರಿಗೆ ತಮ್ಮ ಮುಖಂಡರು ಮತ್ತು ತೀರ್ಪಗಾರರಿರುತ್ತಾರೆ. ಅವರು ಕಣದಲ್ಲಿ ಎಲ್ಲರನ್ನೂ ಒಂದೇ ಸಮನಾಗ ನೋಡಿಕೊಳ್ಳುತ್ತಾರೆ ಮತ್ತು ಗೆದ್ದವರನ್ನು ಸತ್ಕರಿಸುತ್ತಾರೆ.

ದಿನದ ಈ ಅವಧಿಯಲ್ಲೆಲ್ಲ ಕುಸ್ತಿ ಮತ್ತು ಸ್ತ್ರೀಯರ ನರ್ತನ ಬಿಟ್ಟು ಬೇರೇನೂ ಮಾಡಲಾಗುವುದಿಲ್ಲ. ಆದರೆ ಸೂರ್ಯ ಕೆಳಗಿಳಿದ ತಕ್ಷಣ ಅನೇಕ ಪಂಜುಗಳನ್ನು ಮತ್ತು

ಅರಿವೆಯಿಂದ ಮಾಡಿದ ದೊಡ್ಡ ಶಾಲುಗಳನ್ನು ಹೊದಿಸುತ್ತಾರೆ. ಇವುಗಳನ್ನು ಕಣದ ಸುತ್ತ ಯಾವ ರೀತಿ ಇಡಲಾಗುತ್ತದೆಂದರೆ ಅದೆಲ್ಲ ದಿನದಂತೆಯೆ ಬೆಳಕಾಗಿರುತ್ತದೆ. ಗೋಡೆಗಳ ಮೇಲೆ ಸಹ ಅವುಗಳನ್ನಿಡಲಾಗುತ್ತದೆ. ಕೋಟೆ ಗೋಡೆಯ ಕಂಡಿಗಳಲ್ಲೆಲ್ಲ ಉರಿಯುವ ದೀಪಗಳನ್ನು ಇರಿಸುತ್ತಾರೆ ಮತ್ತು ರಾಜ ಕುಳಿತುಕೊಳ್ಳುವ ಸ್ಥಳ ಪಂಜುಗಳಿಂದ ತುಂಬಿದೆ. ಇವೆಲ್ಲವನ್ನು ಹೊತ್ತಿಸಿದ ತಕ್ಷಣ ಅನೇಕ ಬಲು ಚಿತ್ತಾಕರ್ಷಕ ಆಟಗಳು ಮತ್ತು ಯುಕ್ತಿಗಳನ್ನು ಆರಂಭಿಸಲಾಗುತ್ತದೆ. ಆದರೆ ಇವುಗಳು ಬಹಳ ಹೊತ್ತು ನಿಲ್ಲುವುದಿಲ್ಲ. ಅವು ರಾಜನಿದ್ದಲ್ಲಿಗೆ ಬಂದು ಹೋಗಿಬಿಡುತ್ತವೆ. ಆ ಮೇಲೆ ಇತರರು ಕುದುರೆ ಮೇಲೆ ಕುಳಿತು ಯುದ್ಧ ಮಾಡುವ ರೀತಿಯಲ್ಲಿ ಪ್ರವೇಶಿಸುತ್ತಾರೆ. ಈ ಕುದುರೆಗಳು ಪೋರ್ತುಗಾಲದಲ್ಲಿ ಕಾರ್ಪೊದ ಡೈಯೊಸ್‌ನ ಉತ್ಸವಕ್ಕೆ ಮಾಡಲಾದಂತಹ ಆಟದ ಕುದುರೆಗಳಂತಿರುತ್ತವೆ. ಬೇರೆಯವರು ಬಲೆಗಳೊಂದಿಗೆ ಮೀನು ಹಿಡಿಯಲೆಂಬಂತೆ ಬಂದು ಕಣದಲ್ಲಿದ್ದ ಜನರನ್ನು ಸೆರೆಹಿಡಿಯುತ್ತಾರೆ. ಈ ಮನರಂಜನೆಗಳು ಮುಕ್ತಾಯವಾದಾಗ ಅವರು ಅನೇಕ ಬಾಣ ಬಿರುಸುಗಳನ್ನು ಮತ್ತು ಅನೇಕ ಬೇರೆ ಬೇರೆ ರೀತಿಯ ಜ್ವಾಲೆಗಳನ್ನು ಮತ್ತು ಉರಿಯುತ್ತಲೆ ತಮ್ಮೊಳಗಿಂದ ಅನೇಕ ಬಾಂಬು ಹಾಗೂ ಆಕಾಶ ಬಾಣಗಳನ್ನು ಉಗುಳುವ ದುರ್ಗಗಳನ್ನೂ ಆಕಾಶದಲ್ಲಿ ಎಸೆಯುತ್ತಾರೆ. ಇದಕ್ಕೆ ಸಾಹಿತ್ಯ ಕೃತಿಯಲ್ಲಿ ದಾಖಲೆ ದೊರೆಯುತ್ತದೆ. ನವರಾತ್ರಿ ಹಬ್ಬದ ಸಂದರ್ಭದಲ್ಲಿ ಏರ್ಪಟ್ಟ ನಾನಾವಿಧವಾದ ಪ್ರದರ್ಶನಗಳನ್ನೆಲ್ಲಾ ವಿವರವಾಗಿ ವರ್ಣಿಸಿದ ರತ್ನಾಕರ ಕಡೆಗೆ 'ಉರಿಬಾಣ ಚೇಳು ಬಾಣಗಳ ಬಿಡುತ ಪರಿಪರಿಂಯುಲಿ ಪುಷ್ಪಬಾಣಗಳಾ ಸುರಿವುತಬರುತಿರ್ದರ್ತಿಕಾರರು ತರತರವಿಡಿದಾತರೆ ಎಂದು ಬಳಸಿ'[೩೫] ವಿನೋದಕಾರರು ಬಾಣ ಬಿರುಸುಗಳನ್ನು ಬಿಡುತ್ತಾ ಬರುತ್ತಿದ್ದರೆಂದು ಹೇಳುವನು.

ಈ ಸುಡುಮದ್ದಿನ ವಿನೋದ ಮುಕ್ತಾಯವಾದ ಮೇಲೆ ದಳವಾಯಿಗಳಿಗೆ ಸೇರಿದ ಅನೇಕ ವಿಜಯೋತ್ಸವ ರಥಗಳು ಪ್ರವೇಶಿಸುತ್ತವೆ. ಅವುಗಳಲ್ಲಿ ಕೆಲವನ್ನು ವಿದೇಶಗಳಲ್ಲಿ ಯುದ್ಧನಿರತ ದಳವಾಯಿಗಳು ಕಳಿಸಿರುತ್ತಾರೆ. ಅವುಗಳು ಪ್ರವೇಶಿಸುವುದು ಹೀಗೆ. ಮೊದಲನೆಯದು ಸಾಲ್ವಟಿನಿಕಾನದು ಮತ್ತು ಅವು ಒಂದರ ಹಿಂದೊಂದು ಬರುತ್ತವೆ. ನರ್ತನಬಾಲೆಯರು ಮತ್ತು ಇತರ ಮಾನವ ಆಕೃತಿಗಳುಳ್ಳ, ಬೆಲೆಯುಳ್ಳ ರಥಗಳು ಒಂದರ ಮೇಲೊಂದು ಅಂತಸ್ತುಗಳನ್ನು ಹೊಂದಿವೆ. ಮಿಕ್ಕವುಗಳೆಲ್ಲ ಒಂದೇ ರೀತಿಯವು. ಮತ್ತು ಅವು ತಮ್ಮ ಕ್ರಮದಲ್ಲಿ ರಾಜನಿದ್ದೆಡೆಗೆ ಸಾಗುತ್ತವೆ. ರಥಗಳು ಹೊರಗೆ ಹೋದ ಮೇಲೆ ಅವುಗಳನ್ನು ಹಿಂಬಾಲಿಸಿ ಅನೇಕ ಕುದುರೆಗಳು ಬರುತ್ತವೆ. ಅವುಗಳನ್ನು ಸಜ್ಜುಗಳಿಂದ ಮತ್ತು ರಾಜನ ಬಣ್ಣದ ಉತ್ಕೃಷ್ಟ ಬಟ್ಟೆಗಳಿಂದ ಹೊದ್ದಿಸಿರುತ್ತಾರೆ. ಅವುಗಳ ತಲೆ ಹಾಗೂ ಕುತ್ತಿಗೆಗಳ ಮೇಲೆ ಅನೇಕ ಗುಲಾಬಿಗಳು ಮತ್ತು ಹೂಗಳಿರುತ್ತವೆ ಮತ್ತು ಅವುಗಳ ಲಗಾಮುಗಳಿಗೆ ಬಂಗಾರದ ಗಿಲೀಟು ಮಾಡಲಾಗಿರುತ್ತದೆ. ಈ ಕುದುರೆಗಳ ಮುಂದೆ ಇನ್ನೊಂದು ಕುದುರೆ ಅರ್ಧ ಸುತ್ತು ಸುತ್ತುತ್ತ ಕುಣಿಯುತ್ತ ನಡೆಯುತ್ತದೆ. ಈ ಕಲೆಯಲ್ಲಿ ತರಬೇತುಗೊಳಿಸಿರುವುದರಿಂದ ಎಲ್ಲ ಕುದುರೆಗಳೂ ಹಾಗೆಯೇ ಮಾಡುತ್ತವೆ. ಇಷ್ಟು ವೈಭವದೊಂದಿಗೆ ನಡೆಸಿಕೊಂಡು ಒಯ್ಯಲಾಗುವ ಈ ಕುದುರೆ ರಾಜ ಇಟ್ಟುಕೊಂಡಂತಹದು. ಅದರ ಮೇಲೆಯೆ ಅವರನ್ನು ರಾಜರಾಗಿ ಪ್ರತಿಜ್ಞೆ

ವಿಧಿಸಿ ಬರಮಾಡಿಕೊಳ್ಳಲಾಗುತ್ತದೆ ಮತ್ತು ಅವರ ನಂತರ ಬರುವವರಿಗೂ ಅದರ ಮೇಲೆಯೆ ಪ್ರತಿಜ್ಞೆ ವಿಧಿಸುತ್ತಾರೆ. ಅದನ್ನೂ ಇಟ್ಟುಕೊಂಡು ಅಷ್ಟೇ ಗೌರವದಿಂದ ನೋಡಿಕೊಳ್ಳುತ್ತಾರೆ.

ಈ ಕುದುರೆಗಳು ನಾನು ಹೇಳಿರುವಂತೆ ಸಾಗುತ್ತ ಕಣವನ್ನು ಎರಡು ಸಲ ಸುತ್ತಿ ಒಂದರ ಮುಂದೊಂದರಂತೆ ಐದಾರು ಸಾಲುಗಳಲ್ಲಿ ಕಣದ ಮಧ್ಯದಲ್ಲಿ ಬಂದು ನಿಲ್ಲುತ್ತವೆ. ರಾಜನ ಕುದುರೆ ಅವುಗಳ ಮುಂದಿದ್ದು ಎಲ್ಲವೂ ರಾಜನಿಗೆ ಎದುರಾಗಿ ನಿಲ್ಲುತ್ತವೆ. ಅವು ಯಾವ ರೀತಿ ನಿಲ್ಲುತ್ತವೆಂದರೆ ಅವುಗಳ ಮತ್ತು ಜನರ ಮಧ್ಯೆ ಸುತ್ತಲೂ ಬಯಲು ಜಾಗವಿರುತ್ತದೆ. ಅಂದರೆ ಕುದುರೆಗಳಿಗೆ ತರಬೇತಿ ಕೊಟ್ಟು ಅದರಿಂದ ಓಟ, ಇತ್ಯಾದಿ ಪ್ರದರ್ಶನಗಳನ್ನು ಪಡೆಯುತ್ತಿದ್ದರು ಎಂದು ಸ್ಪಷ್ಟವಾಗುತ್ತದೆ.

ಇದು ಮುಗಿದ ಮೇಲೆ ಇಪ್ಪತ್ತೈದು ಮೂವತ್ತು ದ್ವಾರಪಾಲಕಿಯರು ಕೈಯಲ್ಲಿ ಛಡಿ ಹೆಗಲ ಮೇಲೆ ಚಾವುಟಿ ಹಿಡಿದು ಒಳಗಿನಿಂದ ಬರುವುದನ್ನು ಕಾಣುತ್ತೀರಿ. ಇವರ ಹಿಂದೆಯೆ ಅನೇಕ ನಪುಂಸಕರು ಬರುತ್ತಾರೆ. ಈ ನಪುಂಸಕರ ನಂತರ ಅನೇಕ ತುತ್ತೂರಿ, ಮದ್ದಲೆ, ಕೊಳಲು (ನಮ್ಮವುಗಳಂತಹವಲ್ಲ), ಪಿಟೀಲು ಮತ್ತಿತರ ಸಂಗೀತ ನುಡಿಸುವ ಸ್ತ್ರೀಯರು ಬರುತ್ತಾರೆ. ಇದರಿಂದ ಅಂದು ಸಂಗೀತಕ್ಕೆ ಯಾವ ರೀತಿಯಾದ ವ್ಯಾದ್ಯಪರಿಕರಗಳನ್ನು ಬಳಸುತ್ತಿದ್ದರು ಹಾಗೂ ಸಂಗೀತಕ್ಕೆ ಎಷ್ಟು ಮನ್ನಣೆಯಿತ್ತು ಎಂದು ತಿಳಿಯುತ್ತದೆ.

ಸ್ತ್ರೀಯರ ನೃತ್ಯವಾದ ಮೇಲೆ ಕುದುರೆಗಳು ಹಿಂದಿರುಗಿ ಹೋಗುತ್ತವೆ. ಆ ಮೇಲೆ ಆನೆಗಳು ಬಂದು ತಮ್ಮ ಸಲಾಮು ಮಾಡಿ ಅವೂ ಹಿಂತಿರುಗುತ್ತವೆ. ಅವು ಹೋದ ಕೂಡಲೆ ರಾಜ ಕಟ್ಟಡದ ಕೊನೆಯಲ್ಲಿರುವ ಚಿಕ್ಕ ಬಾಗಿಲಿನ ಮೂಲಕ ಹೊರಟು ಹೋಗುತ್ತಾನೆ. ಅನಂತರ ಬ್ರಾಹ್ಮಣರು ದೇವರ ವಿಗ್ರಹವನ್ನು ತೆಗೆದುಕೊಂಡು ಅದನ್ನು ನಾನು ತಕ್ಷಣ ಹೊರಬಂದು ವಿಗ್ರಹವಿದ್ದಲ್ಲಿಗೆ ಹೋಗಿ ತನ್ನ ಪಾರ್ಥನೆಗಳನ್ನು ಸಲ್ಲಿಸುತ್ತಾನೆ. ಮತ್ತು ವ್ರತಗಳನ್ನು ಆಚರಿಸುತ್ತಾನೆ. ಆಗ ಅಲ್ಲಿಗೆ ಇನ್ನೂ ಅಧಿಕ ಕೋಣ ಮತ್ತು ಕುರಿ ಬಲಿ ಕೋಡುತ್ತಾರೆ. ಅನಂತರ ನರ್ತಿಸಲು ವಾರಾಂಗನೆಯರು ಬರುತ್ತಾರೆ. ಕೋಣ ಕುರಿಗಳ ಬಲಿ ಮುಗಿದ ಕೂಡಲೆ ರಾಜ ಅಲ್ಲಿಂದ ಹೊರಟು ರಾತ್ರಿಯೂಟಕ್ಕೆ ಹೋಗುತ್ತಾನೆ. ಏಕೆಂದರೆ ಅವನು ಒಂಬತ್ತು ದಿನಗಳೆಲ್ಲ ಉಪವಾಸವಿರುತ್ತಾನೆ, ಮತ್ತು (ಪ್ರತಿದಿನ) ಎಲ್ಲ ಮುಗಿಯುವವರೆಗೆ ಅವನು ಏನನ್ನೂ ತಿನ್ನುವುದಿಲ್ಲ ಮತ್ತು ಅವನ ಊಟದ ಸಮಯ ಮಧ್ಯರಾತ್ರಿ ವಾರಾಂಗನೆಯರು ವಿಗ್ರಹದ ಮುಂದೆ ಬಹಳ ಹೊತ್ತು ನರ್ತಿಸುತ್ತ ಉಳಿಯುತ್ತಾರೆ. ಈ ರೀತಿಯಾಗಿ ಒಂಬತ್ತು ದಿನಗಳ ಈ ಉತ್ಸವಗಳನ್ನು ಆಚರಿಸಲಾಗುತ್ತದೆ.[೩೬] ಈ ಪ್ರವಾಸಿಗನ ಹೇಳಿಕೆಗಳನ್ನು ಗಮನಿಸಿದರೆ ಅಂದು ಮಹಾನವಮಿ ಉತ್ಸವವು ಬಹು ವೈಭವದಿಂದ ನಡೆಯುತ್ತಿತ್ತು ಹಾಗೂ ಅಷ್ಟೇ ಬಿಗಿ ಭದ್ರತೆಯಿಂದ ಕೂಡಿತ್ತು ಎಂದು ತಿಳಿಯುತ್ತದೆ. ಅದರಲ್ಲಿ ನಡೆಯುವ ನೃತ್ಯ, ಸಂಗೀತ, ಕ್ರೀಡೆಳಿಗೆ ಅಂದಿನ ಅರಸರು ತುಂಬಾ ಮಾನ್ಯತೆ ಕೊಟ್ಟಿದ್ದರು. ಅರಸರಾದಿಯಾಗಿ ಸಾಮಂತರು, ವಿದೇಶಿ ಯಾತ್ರಿಕರು, ವರ್ತಕರು, ಜನಸಾಮಾನ್ಯರು ಈ ಹಬ್ಬಕ್ಕೆ ಸಾಕ್ಷಿಯಾಗಿದ್ದರು. ಪ್ರಸ್ತುತ ಇರುವ ಮಹಾನವಮಿ ದಿಬ್ಬದಲ್ಲಿನ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಂದಿನ ಸಾಮಾಜಿಕ ಜೀವನದ ಚಿತ್ರಣವನ್ನು ಕಟ್ಟಿ ಕೊಡಬಹುದು.

ಅಚ್ಯುತರಾಯನ ಅವಧಿಯಲ್ಲಿ ಭೇಟಿ ನೀಡಿದ ನ್ಯೂನಿಜ್ ಕೂಡಾ ಮಹಾನವಮಿ ಹಬ್ಬಕ್ಕೆ ಸಾಕ್ಷಿಯಾಗಿದ್ದ... ಇದು ಸೆಪ್ಟೆಂಬರ್ ತಿಂಗಳಲ್ಲಿ ನಡೆಯುತ್ತದೆ. ಆಗ ಒಂಬತ್ತು ದಿನ ಅವರು ದೊಡ್ಡ ಉತ್ಸವಗಳನ್ನು ಏರ್ಪಡಿಸುತ್ತಾರೆ. ಮೇರಿ ಕನ್ನಿಕೆ ತನ್ನ ಪುತ್ರನನ್ನು ಗರ್ಭದಲ್ಲಿ ಧರಿಸಿದ ಒಂಬತ್ತು ತಿಂಗಳ ಗೌರವಾರ್ಥ ಅವರು ಅದನ್ನು ಮಾಡುತ್ತಾರೆಂದು ಕೆಲವರೆನ್ನುತ್ತಾರೆ. ದಳವಾಯಿಗಳು ರಾಜನಿಗೆ ಭೂ ಕಂದಾಯಗಳನ್ನು ಕೊಡಲು ಈ ಸಮಯಕ್ಕೆ ಬರುವುದರಿಂದಲೇ ಇದನ್ನು ಮಾಡಲಾಗುತ್ತದೆಂದು ಇನ್ನೂ ಕೆಲವರು ಅನ್ನುತ್ತಾರೆ. ಮೊದಲ ದಿನ ಅರಮನೆಯ ಮುಂದಿನ ಜಾಗದಲ್ಲಿ ಅವರು ಒಂಬತ್ತು ಮಂಟಪ ನಿರ್ಮಿಸುತ್ತಾರೆ, ಈ ಒಂಬತ್ತು ಮಂಟಪಗಳನ್ನು ರಾಜ್ಯದ ಒಂಬತ್ತು ಪ್ರಧಾನ ದಳವಾಯಿಗಳು ಮಾಡುತ್ತಾರೆ. ಅವುಗಳು ಬಹಳ ಎತ್ತರವಾಗಿರುತ್ತವೆ. ಅವುಗಳಲ್ಲಿ ಬೆಲೆಯುಳ್ಳ ಬಟ್ಟೆ ಇಳಿಬಿಡಲಾಗುತ್ತದೆ ಮತ್ತು ಅನೇಕ ನೃತ್ಯಗಾರ್ತಿಯರೂ ಅನೇಕ ವಿವಿಧ ಸಾಧನಗಳೂ ಇರುತ್ತವೆ. ಪ್ರತಿಯೊಬ್ಬ ದಳವಾಯಿಯೂ ತನ್ನೊದೊಂದು ಮಂಟಪ ನಿರ್ಮಿಸಲೇಬೇಕು. ಮತ್ತು ಅವರು ಇವುಗಳನ್ನು ರಾಜನಿಗೆ ತೋರಿಸಲು ಬರುತ್ತಾರೆ. ಪ್ರತಿಯೊಬ್ಬನೂ ತನ್ನದೆ ಸಾಧನ ಹೊಂದಿರುತ್ತಾನೆ ಮತ್ತು ಅವರೆಲ್ಲ ಹೀಗೆ ಉತ್ಸವದ ಒಂಬತ್ತು ದಿನಗಳ ಕಾಲಕ್ಕೆ ಬರುತ್ತಾರೆ. ನಗರದ ಅಧಿಕಾರಿಗಳು ನಮ್ಮ ಉತ್ಸವಗಳಲ್ಲಿಯಂತೆಯೇ ಪ್ರತಿರಾತ್ರಿ ತಮ್ಮ ಸಾಧನಗಳೊಂದಿಗೆ ಬರಲೇಬೆಕು. ಮತ್ತು ಈ ಒಂಬತ್ತು ದಿನಗಳಲ್ಲಿ ಅವರು ಪ್ರಾಣಿಗಳನ್ನು ಕೊಂದು ಬಲಿಕೊಡುತ್ತಾರೆ. ಮೊದಲ ದಿನ ಅವರು ಒಂಬತ್ತು ಕೋಣ, ಒಂಬತ್ತು ಕುರಿ, ಒಂಬತ್ತು ಆಡುಗಳನ್ನು ಕೊಲ್ಲುತ್ತಾರೆ. ಅಂದಿನಿಂದ ಮುಂದೆ ಅವರು ಯಾವಾಗಲೂ ಸಂಖ್ಯೆ ದ್ವಿಗುಣಗೊಳಿಸುತ್ತಾ ಪ್ರತಿದಿನ ಹೆಚ್ಚೆಚ್ಚು ಕೊಲ್ಲುತ್ತಾರೆ. ಈ ಪ್ರಾಣಿಗಳ ವದೆ ಮುಕ್ತಾಯಗೊಂಡಾಗ ರಾಜನ ಒಂಬತ್ತು ಕುದುರೆಗಳು ಮತ್ತು ಒಂಬತ್ತು ಆನೆಗಳು ಬರುತ್ತವೆ. ಇವು ಗುಲಾಬಿ ಹೂಗಳಿಂದ ಅಚ್ಛಾದಿತವಾಗಿ ಮತ್ತು ಬೆಲೆಯುಳ್ಳ ಸಜ್ಜುಗಳಿಂದೊಡಗೊಡಿ ರಾಜನ ಮುಂದೆ ಬರುತ್ತವೆ. ಅವುಗಳ ಮುಂದೆ ಅನೇಕ ಪರಿಚಾರಕರಿಂದೂಡಗೂಡಿ ಪ್ರಧಾನ ಅಶ್ವಪತಿ ಹೋಗುತ್ತಾನೆ. ಮತ್ತು ಅವರು ರಾಜನಿಗೆ ಸಲಾಮ್ ಮಾಡುತ್ತಾರೆ. ಅವರು ಮಾಡುವುದು ಮುಗಿದಾಗ ಒಳಗಿನಿಂದ ಪುರೋಹಿತರು ಬರುತ್ತಾರೆ. ಅನ್ನ ಬೇಯಿಸಿದ ಭಕ್ಷ್ಯಗಳು, ನೀರು ಮತ್ತು ಬೆಂಕಿ, ಅನೇಕ ವಿಧದ ಪರಿಮಳಗಳನ್ನು ತರುತ್ತಾರೆ. ಅವರು ಪ್ರಾರ್ಥನೆ ಸಲ್ಲಿಸುತ್ತಾರೆ. (ನಮ್ಮ ಪಾದ್ರಿಗಳು ಪವಿತ್ರ ಜಲ ಸಿಂಪಡಿಸುವಂತೆಯೇ) ಕುದುರೆಗಳು ಮತ್ತು ಆನೆಗಳ ಮೇಲೆ ನೀರು ಸಿಂಪಡಿಸುತ್ತಾರೆ. ಅವುಗಳಿಗೆ ಗುಲಾಬಿ ದಂಡೆಗಳನ್ನು ತೊಡಿಸುತ್ತಾರೆ. ಬಂಗಾರ ಮತ್ತು ಬೆಲೆಯುಳ್ಳ ಹರಳುಗಳ ಸಿಂಹಾಸನದ ಮೇಲೆ ಆಸೀನನಾದ ರಾಜನ ಸಮ್ಮುಖದಲ್ಲಿ ಇದನ್ನು ಮಾಡಲಾಗುತ್ತದೆ. ಅವನು ಈಗೊಮ್ಮೆ ಬಿಟ್ಟರೆ ಎಂದೂ ಇದರ ಮೇಲೆ ಕೂರುವುದಿಲ್ಲ ಮತ್ತು ಈಗ ಆಳುತ್ತಿರುವ ರಾಜ ಅದರ ಮೇಲೆ ಕುಳಿತುಕೊಳ್ಳುವುದಿಲ್ಲ. ಏಕೆಂದರೆ ಅದರ ಮೇಲೆ ಯಾರೇ ಕುಳಿತುಕೊಳ್ಳಲಿ ಅವನು ಸತ್ಯನಿಷ್ಟನಾದ, ಸಂಪೂರ್ಣ ಸತ್ಯ ನುಡಿಯುವ ವ್ಯಕ್ತಿಯಾಗಿರಬೇಕು. ಈ ರಾಜ ಎಂದೂ ಹಾಗೆ ಮಾಡುವುದಿಲ್ಲ. ಇದೆಲ್ಲ ನಡೆಯುತ್ತಿರುವಾಗಲೇ ಪೂರ್ಣ ಒಂದು ಸಾವಿರ ಸ್ತ್ರೀಯರು ಅವನ ಮುಂದೆ ನೃತ್ಯಗೈಯುತ್ತಾ ರಾಜನ ಬದಿಗೆ ಹಾಯ್ದು ಹೋಗುತ್ತಾರೆ. ಮಾಡಲಾದ

ಎಲ್ಲಾ ಸಾಧನಗಳನ್ನು ನೋಡಿದ ಮೇಲೆ ತಮ್ಮ ರೇಷ್ಮೆ ಸಜ್ಜುಗಳಿಂದ ಅಚ್ಛಾದಿತವಾದ ಮತ್ತು ತಮ್ಮ ತಲೆಯ ಮೇಲೆ ಬಂಗಾರದ ಬೆಲೆಯುಳ್ಳ ಹರಳುಗಳ ಬಹಳ ಅಲಂಕಾರಗಳಿಂದೊಡಗೂಡಿದ ರಾಜನ ಎಲ್ಲಾ ಕುದುರೆ, ಆನೆ, ಮತ್ತು ಎತ್ತುಗಳು ದಾಟಿ ಹೋಗಿ ಅರಮನೆಯ ಮುಂದಿನ ಕಣದಲ್ಲಿ ಅತ್ಯಂತ ಸುಂದರವಾದ ಮೂವತ್ತಾರು ಮಂದಿ ಬಂಗಾರ ಮತ್ತು ಮುತ್ತುಗಳ ಕುಶಲಕಾರ್ಯಗಳಿಂದ ಅಲಂಕೃತರಾಗಿ ಬರುತ್ತಾರೆ. ಪ್ರತಿಯೊಬ್ಬಳ ಕೈಗಳಲ್ಲಿ ಎಣ್ಣೆ ದೀಪ ಉರಿಯುವ ಪಾತ್ರೆ ಇರುತ್ತದೆ. ಈ ಸ್ತ್ರೀಯರೊಂದಿಗೆ ಬಂಗಾರದ ತುದಿಗಳ ಬೆತ್ತ ಮತ್ತು ಉರಿಯುವ ಪಂಜು ಹಿಡಿದ ಎಲ್ಲಾ ಪರಿಚಾರಿಕೆಯರು ಮತ್ತು ರಾಜನ ಇತರ ಹೆಂಡಂದಿರು ಬರುತ್ತಾರೆ. ಆ ಮೇಲೆ ಇವರು ರಾಜನೊಂದಿಗೆ ಒಳಹೋಗುತ್ತಾರೆ.[೩೭] ಈ ರೀತಿ ಒಂಬತ್ತು ದಿನಗಳ ಕಾಲ ರಾಜನಿಗಾಗಿ ಸಂತೋಷ ನೀಡುವ ಎಲ್ಲಾ ವಸ್ತುಗಳಿಗಾಗಿ ಅವರು ಹುಡುಕುತ್ತಿರಬೇಕಾಗುತ್ತದೆ. ಅಂದರೆ ಇಲ್ಲಿ ಗಮನಿಸಬೇಕಾದ ಅಂಶಗಳು ಅಂದರೆ ಹಬ್ಬಗಳ ಸಂದರ್ಭದಲ್ಲಿ ಅವರ ಆಹಾರ, ಉಡಿಗೆ ತೊಡಿಗೆ, ಆಭರಣಗಳು ಇವೆಲ್ಲವುಗಳನ್ನು ವಿಜಯನಗರ ಕಾಲದಲ್ಲಿ ಬಳಸುತ್ತಿದ್ದರು. ಅದಕ್ಕೆ ದಾಖಲೆಯಾಗಿ ಅವರ ಶಿಲ್ಪ ಮತ್ತು ಅಂದಿನ ಸಾಹಿತ್ಯ ಕೃತಿಗಳಲ್ಲಿನ ಉಲ್ಲೇಖಗಳು ಸಿಗುತ್ತವೆ.

ಒಂದನೆಯ ದೇವರಾಯನ ಕಾಲದಲ್ಲಿ ಭೇಟಿ ನೀಡಿದ ನಿಕೋಲ-ದೆ-ಕೊಂತಿ ಈ ಒಂಬತ್ತು ದಿನದ ಹಬ್ಬದ ಬಗ್ಗೆ ಮಾತನಾಡುತ್ತಾನೆ. ಇವನು ಕೆಲವು ನಂಬಲಸಾಧ್ಯವಾದ ವಿಷಯ ಹೇಳುತ್ತಾನೆ. ಮೂರನೆಯದು ಒಂಬತ್ತು ದಿನಗಳ ಹಬ್ಬ ಆಗ ದೊಡ್ಡ ಬೀದಿಗಳಲ್ಲಿ ಪಠಸ್ತಂಭದಂತಹ ಸ್ತಂಭಗಳನ್ನು ನೆಟ್ಟು ಬಹು ಸುಂದರವಾದ ಜರತಾರಿ ಬಟ್ಟೆಯ ಚೂರುಗಳನ್ನು ಮೇಲ್ಗಡೆ ಸಿಕ್ಕಿಸುತ್ತಾರೆ. ಈ ಸ್ತಂಭದ ತುದಿಯಲ್ಲಿ ದಿನವೂ ದೇವರಲ್ಲಿ ಅಪಾರ ಭಕ್ತಿಯುಳ್ಳ ಮತ್ತು ಎಂಥ ಕಷ್ಟವನ್ನಾದರೂ ಸ್ಥಿತಿ ಮನಸ್ಸಿನಿಂದ ಸಹಿಸಬಲ್ಲ ಒಬ್ಬನನ್ನು ಕುಳ್ಳಿರಿಸುತ್ತಾರೆ. ಇವನ ಕಡೆಗೆ ಕಿತ್ತಳೆ, ನಿಂಬೆ, ಬಾಳೆ ಮುಂತಾದ ಹಣ್ಣುಗಳನ್ನು ಎಸೆಯುತ್ತಾರೆ.[೩೮] ಇದು ಸಿಡಿ ಆಚರಣೆಯಾಗಿದೆ. ಮಹಾನವಮಿ ಹಬ್ಬದಂದು ಸಾಮಾನ್ಯ ಜನರು ದೇವಾಲಯಗಳಿಗೆ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಕ್ರಿ.ಶ. ೧೫೪೪-೪೫ರ ದಾಖಲೆಯ ಪ್ರಕಾರ ಯತಿರಾಜ ಅಯ್ಯಾಂಗಾರನ ಮಗನಾದ ತುರಯಾಪ್ಪೆಕಲಿಗೋತ್ರದ ರಂಗಪ್ಪನು ಚೆಂಗಲ್ ಪೇಟೆ ಜಿಲ್ಲೆಯ ಶ್ರೀ ಪೆರುಂಬದೂರಿನ ಚೆನ್ನಕೇಶವ ಪೇರುಮಾಳ್ ದೇವರಿಗೆ ಮಹಾನವಮಿ ಪ್ರಯುಕ್ತ ಕಾರ್ಯಗಳಿಗಾಗಿ ೧೧೦ ಗಟ್ಟಿ ವರಹಗಳ ಕಾಣಿಕೆ ನೀಡಿದ.[೩೯]

ವಿಜಯನಗರ ಕಾಲದಲ್ಲಿ ನಡೆಯುತ್ತಿದ್ದ ಮಹಾನವಮಿ ಹಬ್ಬವು ಸಕಲ ಕಲಾ ಪ್ರಭುಗಳ ಹಬ್ಬವೆಂದು ಹೇಳಬಹುದು. ಏಕೆಂದರೆ ಅಲ್ಲಿ ಎಲ್ಲಾ ಕಲಾವಿದರಿಗೂ ಔತಣವಿರುತ್ತಿತ್ತು. ತಮ್ಮ ಕಲಾ ಪ್ರದರ್ಶನಕ್ಕೆ ಕ್ರೀಡಾ ವಿನೋದ ಚಟುವಟಿಕೆಗಳಿಗೆ ಪಾರಿತೋಷಕಗಳು ದೊರೆಯುತ್ತಿದ್ದವು. ವಿದೇಶಿ ಪ್ರವಾಸಿಗರ ಮಾತಿನಂತೆ ಕತೆಗಾರರೂ, ಗಾಯಕರೂ, ನೃತ್ಯದವರು, ಸಂಗೀತದವರೂ, ಮಲ್ಲರಿಗೆ ಎಲ್ಲರಿಗೂ ಹೊನ್ನು ಉಡುಗೊರೆಗಳು ದೊರೆಯುತ್ತಿದ್ದವು. ಇದಕ್ಕೆಲ್ಲ ಆಧಾರವೆಂಬಂತೆ ದೇವಾಲಯಗಳ ಮೇಲಿನ ನೃತ್ಯ, ಸಂಗೀತ, ಕೋಲಾಟ, ಕುಸ್ತಿ, ಬೇಟೆ ಇತ್ಯಾದಿ ಸುಂದರ ಶಿಲ್ಪಗಳು ಇವೆ. ಕೃಷ್ಣದೇವರಾಯನ ಕಾಲಕ್ಕಂತೂ ಈ ಹಬ್ಬವು ತನ್ನ ವೈಭವದ ಪರಾಕಾಷ್ಠೇಯನ್ನು

ತಲುಪಿತ್ತು. ಮುಂದೆ ಈ ಪರಂಪರೆಯನ್ನು ಕಾಯ್ದುಕೊಂಡು ಬಂದ ಶ್ರೇಯೆಸ್ಸು ಮೈಸೂರು ಅರಸರಿಗೆ ಸಲ್ಲುತ್ತದೆ. ಇಂದಿಗೂ ಮೈಸೂರು ದಸರಾ ಸಮಯದಲ್ಲಿ ಕ್ರೀಡೆ–ವಿನೋದ ಚಟುವಟಿಕೆಗಳು ನಡೆಯುವವು.

ದೀಪಾವಳಿ

ಭಾರತದಲ್ಲಿ ಆಚರಿಸುವ ಹಬ್ಬಗಳಲ್ಲಿ ದೀಪಾವಳಿಗೆ ವಿಶೇಷವಾದ ಸ್ಥಾನವಿದೆ. ಇದು ದೀಪಗಳ ಹಬ್ಬ. ಕತ್ತಲೆಯನ್ನು ಹೋಗಲಾಡಿಸುವ, ಮನೆ ಮನೆಗಳಲ್ಲಿ ಬೆಳಕು ಉಂಟು ಮಾಡುವ ಇದನ್ನು ಕಾರ್ತಿಕ ಮಾಸದಲ್ಲಿ ಆಚರಿಸುವರು. ಅಶ್ವೀನಿ ಬಹುಳ ಹದಿನಾಲ್ಕನೆ ತಿಥಿ ನರಕಚತುರ್ದಶಿ ದಿನ ಇದು ನರಕಾಸುರನನ್ನು ಕೊಂದ ದಿನವನ್ನು ಅಶ್ವಯುಜ ಕೃಷ್ಣ ಚತುರ್ದಶಿ ಎಂದು ಕರೆಯುತ್ತಾರೆ. ಕೃಷ್ಣನು ಸೆರೆಯಲ್ಲಿದ್ದ ಸ್ತ್ರೀಯರನ್ನು ಬಿಡುಗಡೆಗೊಳಸಿದ್ದಕ್ಕೆ ಅದರ ದ್ಯೋತಕವಾಗಿ ದೀಪಾವಳಿ ಹಬ್ಬದಂದು ಅಳಿಯನ ಪೂಜೆ ರೂಢಿಗೆ ಬಂದಿದೆ. ಸ್ಥಂಬ ಪುರಾಣ ದೀಪಾವಳಿ ಹಬ್ಬವು ಯಮನ ಸಂಕೇತವಾಗಿದೆ ಎಂದು ಹೇಳಿದೆ. ನಾರದ ಪುರಾಣವು ತಮ್ಮ ಪೂರ್ವಜರು ನರಕದಿಂದ ಸ್ವರ್ಗಕ್ಕೆ ಹೋಗುವುದಕ್ಕಾಗಿ ಈ ದೀಪಾವಳಿಯನ್ನು ಆಚರಿಸುತ್ತಿದ್ದರು ಎಂದು ಹೇಳಿದೆ.[೪೦] ಇದು ಜನಪದರ ನಡುವೆ ಬರುವ ಪ್ರಾಕೃತಿ ಹಬ್ಬ, ಈ ಹಬ್ಬವು ಬೆಳೆಯ ಸಮೃದ್ಧಿಯ ಕಾಲದಲ್ಲಿ ಬರುತ್ತದೆ. ಬೆಳೆಯ ಕೊಯ್ಲಿಗೆ ಪೂರ್ವದಲ್ಲಿ ಇದನ್ನು ಬೆಳಕಿನ ಹಬ್ಬ ಎಂತಲೂ ಕರೆಯುವುದಿದೆ. ಹಾಗಾಗಿ ಈ ಹಬ್ಬದಂದು ಪ್ರತಿಮನೆಯ ಮುಂದೆಯೂ ಹಣತೆಗಳನ್ನು ಕಾಣಬಹುದು.

ದೀಪಾವಳಿ ಹೆಸರೇ ಸೂಚಿಸುವಂತೆ ಕತ್ತಲೆಯಿಂದ ಬೆಳಕಿನೆಡೆಗೆ ಸಾಗುವ ಒಂದು ಕ್ರಿಯೆ, ದೀಪಗಳನ್ನು ಬೆಳಗಿಸುವುದರ ಮೂಲಕ ಜೀವನದಲ್ಲಿ ಬೆಳಕನ್ನು ಪಡೆಯುವ ಒಂದು ಹಬ್ಬವಾಗಿದೆ. ದಿಪ+ಆವಳಿ ದೀಪ ಅಂದರೆ ಜ್ಯೋತಿ, ಆವಳಿ ಎಂದರೆ ಸಾಲು ಹೀಗೆ ಸಾಲು ಸಾಲಾಗಿ ದೀಪಗಳನ್ನು ಬೆಳಗಿಸುವ ಹಬ್ಬವೇ ದೀಪಾವಳಿ. ೧೦೮೨ರ ಮಹಾಮಂಡಳೇಶ್ವರ ಜಗದೇಕ ಮಲ್ಲನ ಕಾಲದ ಶಾಸನ ದೀಪಾವಳಿಯನ್ನು ದಿಂಡೂವಳಿಯ ಪರ್ವ ಎಂದಿದೆ.[೪೧]

ವಿಜಯನಗರ ಕಾಲದ ಹಬ್ಬಗಳಲ್ಲಿ ದೀಪಾವಳಿ ಕೂಡ ಒಂದು. ಈ ಹಬ್ಬದ ಕುರಿತು ಅನೇಕ ಶಾಸನ, ಸಾಹಿತ್ಯ ವಿದೇಶಿ ಪ್ರವಾಸಿಗರ ವರದಿಗಳಲ್ಲಿ ಉಲ್ಲೇಖ ದೊರೆಯುತ್ತದೆ. ಈ ಹಬ್ಬವನ್ನಾಚರಿಸುವಾಗ ಬಡವ, ಶ್ರೀಮಂತ ಎನ್ನದೆ ತಮ್ಮ ಆರ್ಥಿಕ ಸ್ಥಿತಿಗಳಿಗೆ ಅನುಗುಣವಾಗಿ ವಿಜೃಂಭಣೆಯಿಂದ ಎಲ್ಲರೂ ಮನೆಯ ಮುಂದೆ ಎಣ್ಣೆ ದೀಪಗಳನ್ನು ಉರಿಸುತ್ತಾ ಹಬ್ಬವನ್ನಾಚರಿಸುತ್ತಿದ್ದರು.[೪೨] ವಿಜಯನಗರ ಅವಧಿಯಲ್ಲಿ ದೀಪಾವಳಿಯನ್ನು ಅಶ್ವಯುಜ, ಬಹುಲಾ, ಚರ್ತುರ್ದಶಿ, ಅಮವಾಸ್ಯೆ, ಕಾರ್ತಿಕ, ಶುದ್ಧಪಾದ್ಯ ಎಂದು ಐದು ದಿನಗಳವರೆಗೆ ಇತ್ತು. ಅಂದು ಅರಸರಾದಿಯಾಗಿ ಸಾಮಾಂತರು, ರಾಣಿಯರು, ದಂಡನಾಯಕರು ಪ್ರಾಚೀನವಾದ ಈ ಹಬ್ಬವನ್ನು ಅತ್ಯುತ್ಸಾಹದಿಂದ ಆಚರಿಸಲು ಇಷ್ಟಪಡುತ್ತಿದ್ದರು. ಇಂತಹ ಸಮಯದಲ್ಲಿ ಸಾಮಂತರು ಪ್ರಜೆಗಳು ರಾಜನ ಒಪ್ಪಿಗೆಯನ್ನು ಪಡೆದು ದೇವಾಲಯಗಳಿಗೆ ದಾನ–ದತ್ತಿಯನ್ನು ಕೊಡುತ್ತಿದ್ದರು. ಇದಕ್ಕೆ ಅನೇಕ ಶಾಸನಗಳಲ್ಲಿ ದಾಖಲೆಯಿದೆ. ಕ್ರಿ.ಶ. ೧೩೬೩ರ ಒಂದನೇ

ದೇವರಾಯನ ಶಾಸನವೊಂದು ಈ ರೀತಿ ಉಲ್ಲೇಖಿಸಿದೆ. ಸನಿಯಮ ಶೆಟ್ಟಿಯ ಅಳಿಯನಾದ ಕೋಟಿಯಮ್ಮನ ಶೆಟ್ಟಿ ಎಂಬುವವನು ಬಸರೂರು ಪಡುವ ಕೇರಿ ಮಹಾದೇವ ದೇವಾಲಯದ ದೇವರ ಪೂಜೆ ಮತ್ತು ದೀಪಾವಳಿ ಹಬ್ಬದ ಆಚರಣೆಗಾಗಿ ದಾನ ಮಾಡಿದ.[೪೩] ಒಂದನೇ ದೇವರಾಯನ ಆಳ್ವಿಕೆಯಲ್ಲಿ ಮಹಾಪ್ರಧಾನಿ ಬೈಚಯ ದಣ್ಣಾಯಕನು ಬೇಲೂರು ಚನ್ನಕೇಶವ ದೇವಾಲಯದಲ್ಲಿ ಕಾರ್ತಿಕ ಮಹೋತ್ಸವದಂದು (ದೀಪಾವಳಿ ಹಬ್ಬ) ಒಂದು ದೀಪಸ್ತಂಭವನ್ನು ಕಟ್ಟಿಸಿ, ಮೂರು ದಿನಗಳವರೆಗೆ ಸಂಭ್ರಮದಿಂದ ಈ ಹಬ್ಬ ಆಚರಿಸಿದರು.[೪೪] ಸಾಮಂತರು ಪ್ರಜೆಗಳು ತಮಗೆ ಭಕ್ತಿಯಿದ್ದ ದೇವಾಲಯಗಳಿಗೆ ಇದನ್ನು ಆಚರಿಸಲು ದಾನ ದತ್ತಿಯನ್ನು ನೀಡುತ್ತಿದ್ದರು ಮತ್ತು ಅದರ ಸ್ಮರಣೆಗಾಗಿ ದೀಪ ಸ್ತಂಭಗಳನ್ನು ನಿಲ್ಲಿಸುತ್ತಿದ್ದರು.[೪೫] ಅವರ ಕಾಲದ ದೇವಸ್ಥಾನಗಳ ಮುಂದೆ ಇವುಗಳನ್ನು ಇಂದಿಗೂ ಕಾಣಬಹುದು

ಕ್ರಿ.ಶ. ೧೪೪೨ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಕುಂದಾಪುರ ತಾಲೂಕು ಬಸರೂರಿನಲ್ಲಿ ಪ್ರೌಢದೇವರಾಯನು ರಾಜ್ಯಭಾರ ಮಾಡುತ್ತಿದ್ದ ಸಮಯದಲ್ಲಿ ಕೋಟೆಯಣ್ಣ ಶೆಟ್ಟಿಯು ರಂಗಪೂಜೆಗೆ ದಾನ ನೀಡಿದ್ದನ್ನು ಉಲ್ಲೇಖಿಸಿದೆ.[೪೬] ದೇವಸ್ಥಾನದಲ್ಲಿ ದೀಪಾವಳಿಯ ದಿವಸದಂದು ವಿಶೇಷವಾದ ಪೂಜೆ ನಡೆಯುತ್ತಿತ್ತು ಎಂಬುದನ್ನು ಈ ಶಾಸನವು ನಿರ್ದಿಷ್ಟವಾಗಿ ತಿಳಿಸುತ್ತದೆ. ಕ್ರಿ.ಶ. ೧೪೭೨ರಲ್ಲಿ ಇದೆ ಬಸರೂರನ್ನು ಬಾರಕೂರಿನ ವಿಠ್ಠರಸ ಒಡೆಯನು ಆಳುತ್ತಿದ್ದನು. ಇದೇ ಅವಧಿಯಲ್ಲಿ ವಿಜಯನಗರದ ಸಿಂಹಾಸನವನ್ನು ವಿರೂಪಾಕ್ಷ ಮಹಾರಾಯನು ನೋಡಿಕೊಳ್ಳುತ್ತಿದ್ದನು. ಆಗ ಪಡುವಣ ಕೇರಿಯ ಶೆಟ್ಟಿಗಳು ಕಾಶಿವಿಶ್ವನಾಥ ದೇವರ ದೀಪಾವಳಿಯ ಹಬ್ಬಕ್ಕೆ ಮತ್ತು ಅಂದು ನಡೆಯುವ ಮೂರು ದಿನದ ರಂಗ ಪೂಜೆಯನ್ನು ನಡೆಸುವುದಕ್ಕಾಗಿ ದಾನ ನೀಡಿದ್ದನ್ನು ಉಲ್ಲೇಖಿಸಿದೆ.[೪೭] ದೀಪಾವಳಿಯ ಹಬ್ಬದಲ್ಲಿ ದೇವರ ಸನ್ನಿಧಿಯಲ್ಲಿ ಪುರಾಣಗಳ ಕಥೆ ಓದಿದ ದಾಖಲೆಯಿದೆ.

ಚಂಡರಸವೊಡೆಯರು ಬಾರಕೂರು ರಾಜ್ಯವಾಳುವಾಗ ಮೂರು ಕೇರಿಯ ಒಳಗಣ ಅರಿಯಕೇರಿಯ ಸೆಟ್ಟಿಕಾರರು ಮತ್ತು ಸಮಸ್ತರು ಕೂಡಿಕೊಂಡು ಹಲವು ದೇವರುಗಳ ಸೇವೆಗಾಗಿ ಕಲನೇಶವೊಡೆಯರಿಗೆ ದಾನ ನೀಡಿದ ವಿವರವಿದೆ. ವಿನಾಯಕ ದೇವರಿಗೆ ಎರಡು ಹೊತ್ತಿನ ನೈವೇದ್ಯಕ್ಕೆ, ಗಂಧ, ಧೂಪ, ಪೂಜಾರಿಗೆ, ಮಾಲೆಯ ಕಟ್ಟುವವರಿಗೆ, ಹೋಮಕ್ಕೆ ನಲವತ್ತೆಂಟು ಬ್ರಾಹ್ಮಣರ ಭೋಜನಕ್ಕೆ, ನಾಗರಿಗೆ ಹಾಲು, ಬಲಿ ಪೂಜೆಗೆ ಅರಿಯಕೇರಿಯ ಹಲವರಿಗೆ ವೀಳ್ಯಕ್ಕಾಗಿ, ಚೌಡೇಶ್ವರಿ ದೇವರಿಗೆ ಏಳು ದಿನದ ಕಥೆ ಓದಿದವರಿಗೆ ಪ್ರತಿ ಅಮವಾಸ್ಯೆಗೆ ಇಬ್ಬರು ಬ್ರಾಹ್ಮಣರ ಭೋಜನಕ್ಕೆ, ದೀಪಾವಳಿಗೆ ಹಬ್ಬಕ್ಕೆ ಕಾಯಿ, ತುಪ್ಪ ಮುಂತಾದವುಗಳನ್ನು ದಾನ ನೀಡಲಾಗಿದೆ.[೪೮] ಅದೇ ರೀತಿ ಪ್ರೌಢದೇವರಾಯನ ಕಾಲದಲ್ಲಿ ಬಾರಕೂರ ಪ್ರದೇಶ ಆಳುತ್ತಿದ್ದ ಗುರುವಪ್ಪ ಒಡೆಯರು ರಾಯನ ಅನುಮತಿಯಂತೆ ದೀಪಾವಳಿ ಹಬ್ಬವನ್ನು ಮೂರು ದಿನ ಆಚರಿಸಲು ಒಪ್ಪಿಕೊಂಡು ಆತನು ಕೊಟ್ಟ ೨೦ ಹೊನ್ನು, ೨೦ ಗದ್ಯಾಣ ತೆಗೆದುಕೊಂಡು ಚೋಳಿಯ ಕೆರ್ಯ ಕಲ್ಲಂಗೇರಿಯ ವಿನಾಯಕ ದೇವರಿಗೆ ದತ್ತಿಯನ್ನು ನೀಡಿ ಮತ್ತು ಆ ಊರಿನವರ ಅನುಮತಿಯನ್ನು ಪಡೆದು ವಿಶೇಷ ವೈಭವದಿಂದ ಮೂರು ದಿನ ದೀಪಾವಳಿ ಹಬ್ಬದ ದೀಪೋತ್ಸವವನ್ನು ನಡೆಸಿದನು.[೪೯] ಹೀಗೆ ಅರಸರಾಧಿಯಾಗಿ ಸಾಮಂತರು ದೀಪಾವಳಿ ಹಬ್ಬದ ಪ್ರಯುಕ್ತ ದೇವಾಲಯಗಳಿಗೆ ದಾನದತ್ತಿ ಬಿಟ್ಟ ವಿವರಗಳಿವೆ

ಈ ದೀಪಾವಳಿಯ ಆಚರಣೆಗಾಗಿ ಸಾಮಾನ್ಯ ಜನರೂ ದೇವಸ್ಥಾನಗಳಿಗೆ ಕೊಡುಗೆ ನೀಡುತ್ತಿದ್ದರು. ಕ್ರಿ.ಶ. ೧೪೪೩ರಲ್ಲಿ ಕಡಲೂರಿನ ಅರಣೀಪುರದ ಶ್ರೀರಂಗದೇವನ ಮಕ್ಕಳಾದ ಗೋವಣ್ಣ ಮತ್ತು ಬುಳ್ಳಣ್ಣ ಎಂಬುವವರು ಹಿಂದಿನಿಂದ ಬಂದಿದ್ದ ಸಂಪ್ರದಾಯದಂತೆ ಚೆನ್ನಕೇಶವ ದೇವಾಲಯಕ್ಕೆ ಚೈತ್ರದ ದೀಪಗಳ ಹಬ್ಬಕ್ಕೆ ದತ್ತಿ ಕೊಟ್ಟರು.[೩೦]

ಶಕವರ್ಷ ೧೪೪೩ ಕ್ರಿ.ಶ. ೧೫೨೧-೨ರ ಶಾಸನ ಹೇಳುವಂತೆ ದೇವಿಕಾಪುರಂನ ಬೃಹದಾಂಬ ದೇವಸ್ಥಾನಕ್ಕೆ ತಿರುಕಾರ್ತಿಗೈ ಹಬ್ಬಕ್ಕೆ ದೀಪಗಳಿಗಾಗಿ ತುಪ್ಪವನ್ನು, ಮುಖ್ಯಸ್ಥ ತಿರುಮಲ್ಲೈನಾಯಕ ಅವರಿಗೆ ಪುಣ್ಯವಾಗಲೆಂದು ಸದಾಶಿವನಾಯಕನು ನೀಡಿದನು. ಅದೇ ಶಾಸನದಲ್ಲಿ ಮುರುಡರ್ಸರ್ ಪಡೈವಿಡುನಲ್ಲಿ ಕನ್ನಡಿಯ ಮುಖ್ಯಸ್ಥ ದೇವಪುಡೈಯರ್‌ನ ಮಗಳು ಅದೇ ದೇವಾಲಯ ಅದೇ ಹಬ್ಬಕ್ಕೆ ತುಪ್ಪವನ್ನು ಒದಗಿಸಿದಳು.[೩೧] ವಿದೇಶಿ ಪ್ರವಾಸಿಗರ ವರದಿಗಳಲ್ಲಿ ಈ ಹಬ್ಬ ಆಚರಿಸಿದ್ದಕ್ಕೆ ದಾಖಲೆಗಳಿವೆ. ಅಂದು ಮಣ್ಣಿನ ದೀಪಗಳಿಗೆ ಎಣ್ಣೆಯನ್ನು ಹಾಕಿ ಮನೆಯ ಮುಂದೆ, ಮೇಲೆ ಉರಿಸುತ್ತಿದ್ದರು ಅಂದಿದ್ದಾರೆ. ದೀಪಾವಳಿ ಹಬ್ಬದಲ್ಲಿ ಪಗಡೆಯಾಟ ಆಡುವುದು ಇನ್ನೊಂದು ವಿಶೇಷ ಅಂದು ಆಡುವವರಿಗೆ ಪುಣ್ಯ ಲಭಿಸುವುದೆಂದು ಜನಸಾಮಾನ್ಯರ ನಂಬಿಕೆ ಇದು ವಿಜಯನಗರ ಕಾಲದಲ್ಲೂ ಇತ್ತು. ಇದಿಷ್ಟೇ ಅಲ್ಲದೆ ಇನ್ನೂ ಹಲವಾರು ದಾಖಲೆಗಳು ವಿಜಯನಗರ ಕಾಲದಲ್ಲಿ ದೀಪಾವಳಿ ಹಬ್ಬ ನಡೆಯುತ್ತಿತ್ತೆಂದು ದೃಢಪಡಿಸುತ್ತವೆ. ಈ ಮೇಲಿನ ಆಧಾರಗಳಿಂದ ಅಂದು ದೀಪಾವಳಿ ಹಬ್ಬ ಮೂರರಿಂದ ಐದು ದಿನಗಳವರೆಗೆ ಅರಸರಾದಿಯಾಗಿ ಸಾಮಾನ್ಯ ಜನರೂ ಆಚರಿಸುತ್ತಿದ್ದರು. ಆ ಪುಣ್ಯ ದಿವಸದಂದು ಅರಸರಿಗೆ, ಹಿರಿಯರಿಗೆ, ತಂದೆ ತಾಯಿಗಳಿಗೆ ಸ್ವತಃ ತಮಗೆ ಪುಣ್ಯ ಲಭಿಸಲೆಂದು ದಾನ ಧರ್ಮ ಮಾಡುತ್ತಿದ್ದರು ಎಂದು ಶಾಸನಗಳಿಂದ ವೇದ್ಯವಾಗುತ್ತದೆ. ಇಂದು ಸಹ ಈ ಹಬ್ಬದಂದು ದೇವಾಲಯಗಳಿಗೆ ಹೋಗಿ ಪೂಜೆ ಮಾಡಿಸಿ ದೀಪಾವಳಿಗೆ ಎಣ್ಣೆ ಕೊಟ್ಟು ಬರುವುದು ಮುಂದುವರೆದಿದೆ.

ಮಕರ ಸಂಕ್ರಾಂತಿ

ಕೃಷಿಸಂಬಂಧಿ ಸಮೃದ್ಧಿಯ ಹಬ್ಬ. ದೇಶದಾದ್ಯಂತ ಆಚರಣೆಗೊಳ್ಳುವ ದೊಡ್ಡ ಹಬ್ಬ ಪ್ರತಿವರ್ಷ ಮಾರ್ಗಶಿರ ಪುಷ್ಯ ಮಾಸದ ಚತುರ್ಥಿಯಂದು ಆಚರಿಸುತ್ತಾರೆ. ಊರಿಗೆ ಊರೇ ಆಚರಿಸುವ ಈ ಹಬ್ಬದಲ್ಲಿ ಜಾತಿ, ಮತ, ಕುಲಗೋತ್ರಗಳ ಭೇದವಿಲ್ಲದೆ ಎಲ್ಲರೂ ಭಾಗವಹಿಸಿ ಸಮೂಹದ ಕ್ಷೇಮ, ಹಿತಗಳಿಗಾಗಿ ಬೇಡಿಕೊಳ್ಳುತ್ತಾರೆ.

ಸುಗ್ಗಿಯ ಸಂಭ್ರಮದಿಂದ ಎಲ್ಲರ ಚಿಂತೆ ದೂರವಾಗಿ ಮನೆಮನೆಗಳಲ್ಲೂ ಹೊಸ ಬೆಳೆ ತುಂಬಿ ತುಳುಕಾಡುವ ಕಾಲವದು. ಬಗೆ ಬಗೆಯ ದವಸ ಧಾನ್ಯಗಳ ತುಂಬಿ, ಎಲ್ಲರೂ ಸಂತಸದಲ್ಲಿ ಸಂಭ್ರಮಿಸುತ್ತಾರೆ. ಈ ಸನ್ನಿವೇಶದಲ್ಲಿ ಕೃಷಿ ಕುಟುಂಬಗಳಿಗೆ ಸ್ವಲ್ಪ ಬಿಡುವು ದೊರೆತು, ಮನೆ ಕಟ್ಟುವುದು, ಮದುವೆ ಮಾಡುವುದು, ಹೆಣ್ಣು-ಗಂಡಿನ ಹುಡುಕಾಟಕ್ಕೆ ಆರಂಭಿಸುವುದು, ಭೂಮಿ ಇತ್ಯಾದಿ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಕೈಹಾಕುತ್ತಾರೆ. ಬಗೆಬಗೆಯ ಧಾನ್ಯಗಳನ್ನು ಒಕ್ಕಲು ಮಾಡಿ ಮನೆ ತುಂಬುವ, ರೈತ ಜೀವನದ ಉಸಿರಾದ

ದನಕರುಗಳ ಹಬ್ಬವಾದ ಈ ದಿನಗಳಲ್ಲಿ ಸೂರ್ಯ ಸಂಕ್ರಾಂತಿಯಿಂದ ಶಿವರಾತ್ರಿಯವರೆಗೆ ಹುಲ್ಲೆ ಕರುವಿನ ಮೇಲೆಯೂ, ಶಿವರಾತ್ರಿಯಿಂದ ಗೌರಿಹಬ್ಬದವರೆಗೆ ಬಸವನ ಮೇಲೆಯೂ ಪ್ರಯಾಣ ಮಾಡುತ್ತಾನೆಂದು ನಂಬುತ್ತಾರೆ.

ಈ ಹಬ್ಬದಲ್ಲಿ ವ್ಯವಸಾಯ ಸಂಬಂಧಿ ವಸ್ತುಗಳಾದ ಕುಂಟೆ, ಕೊರಡು, ನೇಗಿಲು, ನೊಗ ಇತ್ಯಾದಿಗಳನ್ನು ತೊಳೆದು, ಮನೆಯ ಬಾಗಿಲನ್ನು ಬಿಡದೆ ಮಾವಿನ ತಳಿರು ತೋರಣಗಳಿಂದ ಸಿಂಗರಿಸುತ್ತಾರೆ. ಗ್ರಾಮದ ಎಲ್ಲರೂ ಸಂಭ್ರಮದಿಂದ ಈ ಹಬ್ಬವನ್ನು ಆಚರಿಸುವರು.

ಮಕರದಿಂದ ಮೊದಲುಗೊಂಡು ಅದು ರಾಶಿಗಳಲ್ಲಿ ಉತ್ತರಾಭಿಮುಖವಾಗಿ ಸೂರ್ಯನ ಸಂಚಾರ ತೊಡಗುವುದೆಂದು ಭಾವಿಸಲಾಗುವ ದಿನ. ಇದು ಸಾಮಾನ್ಯವಾಗಿ ಜನವರಿ ಹದಿನಾಲ್ಕು ಅಥವಾ ಹದಿನೈದರಂದು ಬರುತ್ತದೆ. ಸೂರ್ಯ ಮಕರ ರಾಶಿಯನ್ನು ಪ್ರವೇಶಿಸುವ ದಿನವಾದ್ದರಿಂದ ಅದಕ್ಕೆ ಮಕರ ಸಂಕ್ರಾಂತಿ ಅಥವಾ ಸಂಕ್ರಾಂತಿ ಎಂದು ಕರೆಯುವರು.[೩೨] ಹಿಂದೂ ಸಂಸ್ಕೃತಿಯಲ್ಲಿ ಪ್ರತಿಯೊಂದು ಮಾಸಕ್ಕೆ ತಕ್ಕಂತೆ ಒಂದೊಂದು ರಾಶಿ ಹಾಗೂ ಸಂಕ್ರಮಣ ಉಂಟು. ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಸೂರ್ಯನು ಹೋಗುವುದೇ ಸಂಕ್ರಮಣ. ಅಂತೆಯೇ ದ್ವಾದಶ ರಾಶಿಗಳಿಗೆ ತಕ್ಕಂತೆ ದ್ವಾದಶ ಸಂಕ್ರಮಣಗಳುಂಟು. ಹನ್ನೆರಡು ಮಾಸಗಳಲ್ಲಿ ಕ್ರಮವಾಗಿ, ಮೇಷ, ವೃಷಭ, ಮಿಥುನ, ಕರ್ಕಾಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನಸ್ಸು, ಮಕರ, ಕುಂಭ, ಮೀನ ಸಂಕ್ರಮಣಗಳುಂಟು.[೩೩] ಇವುಗಳಲ್ಲಿ ಮಕರ ಸಂಕ್ರಾಂತಿ, ಕರ್ಕಾಟಕ ಸಂಕ್ರಾಂತಿ ಸಂಕ್ರಮಣಗಳೂ ಮುಖ್ಯವಾಗಿವೆ. ದಕ್ಷಿಣ ಭಾರತದಲ್ಲಿ ಈ ಹಬ್ಬವನ್ನು ಮೂರು ದಿನಗಳವರೆಗೆ ಆಚರಿಸುವರು. ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ರೈತಾಪಿ ವರ್ಗದವರು, ಉತ್ಸಾಹದಿಂದ ದನ-ಕರುಗಳನ್ನು ಮೈತೊಳೆದು ಸಿಂಗರಿಸಿ, ಪೂಜಿಸಿ ಮೆರೆಸುವ ಪದ್ಧತಿ ಇದೆ. ದೃಷ್ಟಿ ಪರಿಹಾರಕೋಸ್ಕರ ಕಿಚ್ಚು ಹಾಯಿಸುವುದು, ಹಿಂದಿನ ಕಾಲದಿಂದ ಬಂದ ನಡವಳಿಕೆಯಾಗಿದೆ. ನೂತನ ವಸ್ತ್ರ ಧರಿಸಿ ಅಂದು ಸಂಭ್ರಮದಿಂದ ಕಾಲ ಕಳೆಯುವರು. ಈ ಹಬ್ಬದ ಅಂಗವಾಗಿ ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಎಳ್ಳು ಬೀರುವ ಸಂಪ್ರದಾಯ ರೂಢಿಯಲ್ಲಿದೆ.[೩೪]

ಆಂಧ್ರದಲ್ಲಿ ಇದನ್ನು ಶ್ರೀರಾಮನು ರಾವಣನನ್ನು ಸೋಲಿಸಿ ಸೀತೆಯನ್ನು ತಂದ ದಿನವೆಂದು ಭಾವಿಸಿ ಮನೆಗಳ ಮುಂದೆ ಬೆಂಕಿ ಹಾಕಿ ಕಾಮದಹನ ನಡೆಸುತ್ತಾರೆ. ಇದನ್ನು ಬೋಗಿಮಂಟ ಎಂದು ಕರೆಯುವರು. ಸ್ವರ್ಗಸ್ಥರಾದ ಪಿತೃಗಳು ಅದೃಶ್ಯರಾಗಿ ಸ್ವರ್ಗಲೋಕದಿಂದ ತಮ್ಮ ಮನೆಯೊಳಕ್ಕೆ ಆಗಮಿಸುವರೆಂದು ಅವರ ನಂಬಿಕೆ.[೩೫] ತಮಿಳುನಾಡಿನಲ್ಲಿ ಸಂಕ್ರಾಂತಿಯನ್ನು ಪೊಂಗಲ್ ಎನ್ನುತ್ತಾರೆ. ಪೊಂಗಲ್ ಅನ್ನು ಬೇಯಿಸಿ, ಕಬ್ಬಿನ ಜಲ್ಲೆಗಳನಿಟ್ಟು ಪೂಜೆ ಮಾಡಿ ಸೂರ್ಯನಿಗೆ ನೈವೇದ್ಯ ಮಾಡುತ್ತಾರೆ. ಅಲ್ಲಿ ಇದು ಬಹು ಸಂಭ್ರಮದ ಹಬ್ಬವಾಗಿದೆ.[೩೬] ಈ ಹಬ್ಬದ ಮೂರು ಶುಭ ದಿನಗಳಲ್ಲಿ ಅಕ್ಕಿ, ಬೇಳೆ, ಬೆಲ್ಲ ಹಾಕಿ ಒಂದು ವಿಶೇಷ ತರಹದ ಮೃಷ್ಟಾನ್ನವನ್ನು ಮಾಡುವರು. ತಮಿಳು ಭಾಷೆಯಲ್ಲಿ ಪೊಂಗಲ್ ಎಂದು ಕರೆಯುವರು.[೩೭] ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಈ ಹಬ್ಬ ಆಚರಿಸಿಕೊಂಡು ಬರುತ್ತಿದ್ದಾರೆ. ಇಲ್ಲಿ ಕಬ್ಬು, ಬೆಲ್ಲ, ಎಳ್ಳನ್ನು ಮನೆಮನೆಗೆ ಕೊಟ್ಟು ಸಂಭ್ರಮಿಸುವರು.

ವಿಜಯನಗರ ಪೂರ್ವದಲ್ಲಿ ಈ ಮಕರ ಸಂಕ್ರಾತಿಯನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಿದ್ದರು ಎಂಬುದಕ್ಕೆ ಸಾಕಷ್ಟು ಶಾಸನಗಳ ಉಲ್ಲೇಖವಿದೆ. ಆ ಪುಣ್ಯ ದಿನದಂದು ಅರಸರು, ಸಾಮಂತರು, ಸಾಮಾನ್ಯ ಪ್ರಜೆಗಳು ತಮ್ಮ ಬಂಧುಗಳನ್ನು ಭೇಟಿ ಮಾಡಿ ವಿಶೇಷವಾದಂತಹ ಪೂಜೆ ಸಲ್ಲಿಸಿ, ನೈವೇದ್ಯ ಅಭಿಷೇಕ ಮಾಡಿಸಿ ದಾನದತ್ತಿ ನೀಡಿದ ಉದಾಹರಣೆಗಳು ಸಾಕಷ್ಟು ಇವೆ. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲದೆ ಅದಕ್ಕಿಂತ ಪೂರ್ವದಲ್ಲಿಯೇ ಈ ಹಬ್ಬ ಇತ್ತು. ಚಾಲುಕ್ಯ ದೊರೆ ತ್ರಿಭುವನ ಮಲ್ಲದೇವನು ರಾಜ್ಯಭಾರ ಮಾಡುತ್ತಿರುವಾಗ, ನೊಳಂಬ ಪಲ್ಲವ ಪೆರ್ಮಾಡಿ ಉದಯಾದಿತ್ಯ ದೇವನು ಅಯ್ಯಣವಾಡಿಯನ್ನು ಅಣುಗ ಜೀವಿತವಾಗಿ ಆಳುತ್ತಿದ್ದನ್ನು. ಸಂಕ್ರಾಂತಿಯ ನಿಮಿತ್ತವಾಗಿ ಗೊರಿಕಲ್ಲು-೧೨ರ ಬಳಿಯ ಬಾಡ ಬಾರಚೇಡಿನ ಕೆರೆಯ ಕೆಳಗಿನ ಭೂಮಿಯ ತೋಟವನ್ನು ಬೊಕ್ಕೇಶ್ವರ ದೇವರಿಗೆ ಲೋಕಾಭರಣ ಪಂಡಿತರ ಕೈಯಲ್ಲಿ ದಾನ ಕೊಟ್ಟರು.[೫೮]

ಅದೇ ರೀತಿ ಕಲ್ಯಾಣ ಚಾಲುಕ್ಯ ವಿಕ್ರಮನ ಕಾಲ ಸಂಕ್ರಾಂತಿಯ ಹಬ್ಬದ ನಿಮಿತ್ತವಾಗಿ ಮಾರಾಟದ ಸಪ್ತನಾದ ದೇವರ ಸೇವಕನಾದ ಅವುಜದ ಮಳೆಯನು ಸಕಳೇಶ್ವರ ದೇವರ ಮಾದಿ ರಾಜಯ್ಯನ ಹೆಸರಿನಲ್ಲಿ ದೇವರ ಪ್ರತಿಷ್ಠೆ ಮಾಡಿದಾಗ, ಮಾಳಯ್ಯನ ಮಗಳು ಮತ್ತು ಮಲ್ಲರಸನ ಹೆಂಡತಿ ಬೆಸವಲ ದೇವಿಯರು ಸೇರಿ ಮಾದೇಶ್ವರ ದೇವರ ಅಂಗಭೋಗ, ರಂಗಭೋಗ ಪಾತ್ರಪಾವುಳ ಖಂಡಸ್ಪುಟಿತ ಜೀರ್ಣೋದ್ಧಾರ ಮಹೇಶ್ವರ ದೇವರ ಆಹಾರ ದಾನಕ್ಕೆಂದು ಗಣಮಠವಾಗಿ ಕಲ್ಲಯ್ಯನಿಗೆ ಮಲ್ಲರಸನು ಭೂದಾನ ನೀಡುತ್ತಾರೆ.[೫೯] ಕ್ರಿ.ಶ. ೧೦೪೭ರ ಒಂದು ಶಾಸನವು ಜಯಸಿಂಹನ ಮಗನಾದ ತ್ರೈಲೋಕ್ಯಮಲ್ಲನ ಕಾಲದ್ದಾಗಿದ್ದು, ಅವನ ವೇಹೊರ ಅಗ್ರಹಾರವನ್ನು ವಸಿಷ್ಟಗೋತ್ರದ ಸಾಯಿಮಾರ್ಯನ ಮೊಮ್ಮಗನೂ, ಕೇಸಿಮಾರ್ಯನ ಮಗನೂ ಆದ ಮುದ್ದಿಮಾರ್ಯನಿಗೆ ವೇಹೂರಿನ ತ್ರೈಪುರುಷ ದೇವಾಲಯದ ಪೂಜಾಕಾರ್ಯಗಳಿಗಾಗಿ ಸಂಕ್ರಾಂತಿಯ ಹಬ್ಬದಂದು ದಾನ ನೀಡುತ್ತಾನೆ.[೬೦] ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲದೇವನು ಕಲ್ಯಾಣದಿಂದ ಆಳುತ್ತಿರುವಾಗ ಸಂಕ್ರಾಂತಿಗೆ, ಅವನ ಆಳ್ವಿಕೆಯ ೧೦ನೆಯ ವರ್ಷದ ವಿಭವ, ಸಂಕ್ರಾಂತಿ, ಸೂರ್ಯಗ್ರಹಣದಂದು ಅಂದರೆ ಕ್ರಿ.ಶ. ೧೧೪೮ ರಂದು ದೇಕರಸನ ಮಗ ಮಲ್ಲದೇವ, ಅವನ ಮಗ ಕೇಶವದೇವನನ್ನು ಉಲ್ಲೇಖಿಸಿದ್ದು ಮಲ್ಲರಸನು ಸ್ವಾಮಿಯಾತ್ರೆಗೆ ಬರುವ ಕಪ್ಪಡಿಗಳ ಸತ್ರಕ್ಕೆ ಭೂಮಿಯನ್ನು ದಾನವಾಗಿ ಕೊಟ್ಟನು.[೬೧] ಹಾಗೆಯೇ ತ್ರುಟಿತ ಚಾಳುಕ್ಯವಿಕ್ರಮವರ್ಷ ೩೭ನೆಯ ನಂದನ ಪುಷ್ಯ ಬ್ರಹವಾರ ಉತ್ತರಾಯಣ ಸಂಕ್ರಾನ್ತಿ ಅಂದರೆ ಕ್ರಿ.ಶ. ೨೫-೧೨-೧೧೧೨ನೆಯ ಬುಧವಾರದಂದು ತ್ರಿಭುವನಮಲ್ಲನ ಪಟ್ಟಮಹಾದೇವಿಯು ಪಿರಿಯಬೆಳ್ಳಿ ಹಾರದ ಮೂಲಸ್ಥಾನ ದೇವರ ನಂದಾದೀವಿಗೆಗೆ ಮೂರು ಮತ್ತರ ಭೂದಾನ ಮಾಡುತ್ತಾಳೆ.[೬೨] ಶ್ರೀ ಮುಖಸಂವತ್ಸರದ ಉತ್ತರಾಯಣ ಸಂಕ್ರಾನ್ತಿಯಂದು ಪಾಂಡ್ಯದೇವನು ನೊಳಂಬವಾಡಿ-೩೨೦೦೦ನ್ನು ಆಳುತ್ತಿದ್ದಾಗ ಪಾಂಡ್ಯರಾಜನ ಮಂತ್ರಿ ಸೋಮೇಶ್ವರ ಭಟ್ಟನ ಮಗ ಪೂತ್ಯಣ್ಣಭಟ್ಟನು ನಾರಾಯಣ ದೇವರಿಗೆ ಒಂದು ಲಕ್ಷ ಅಡಕೆಗೆ ಒಂದು ಹಾಗ ತೆರಿಗೆಯನ್ನು ದಾನವಾಗಿ ಬಿಟ್ಟನು. ಶಂಕರ ಭಟ್ಟ ಮತ್ತು ಕಾಡಭಟ್ಟನ ಮಗ ನಾಳಭಟ್ಟರು ಕೆಲವು ದಾನಗಳನ್ನು ನೀಡುತ್ತಾರೆ.[೬೩]

ವಿಜಯನಗರ ಅವಧಿಯಲ್ಲಿ ಈ ಹಬ್ಬಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ದಾನಕೊಟ್ಟಿರುವ ಉಲ್ಲೇಖಗಳಿವೆ. ಕ್ರಿ.ಶ. ೧೩೪೯ ರಲ್ಲಿ ಎರಡನೆಯ ಹರಿಹರನು ಒಂದು ದೇವಾಲಯ ನಿರ್ಮಿಸಿ ಅದರಲ್ಲಿ ಶ್ರೀ ಮಂಜುನಾಥ ದೇವರ ಮೂರ್ತಿ ಪ್ರತಿಷ್ಠಾಪಿಸಿ ಬೃಹಸ್ಪತಿವಾರದ ಮಕರ ಸಂಕ್ರಾಂತಿಯ ಉತ್ತರಾಯಣದ ಆರಂಭದ ಪುಣ್ಯಕಾಲದಲ್ಲಿ ಅಲ್ಲಿ ಪ್ರತಿದಿವಸ ೧೨ ಜನ ಬ್ರಾಹ್ಮಣರಿಗೆ ದಾನ ದತ್ತಿ ಕೊಡುವಂತೆ ಅರಸನು ತನ್ನ ಅಧಿಕಾರಿಗಳಿಗೆ ಅನುಮತಿ ನೀಡಿದನು. ಆದರೆ ದಾನದ ವಿವರ, ಮಂಜುನಾಥ ದೇವರ ಸ್ಥಳದ ಉಲ್ಲೇಖವನ್ನು ಶಾಸನ ತಿಳಿಸಿರುವುದಿಲ್ಲ.[೬೪] ಕ್ರಿ.ಶ. ೧೪೨೪ ರಲ್ಲಿ ಇಮ್ಮಡಿ ದೇವರಾಯನು ವರಾಂಗ ಗ್ರಾಮದ ನೇಮಿನಾಥ ದೇವರಿಗೆ ಅಮೃತಪಡಿಗೆಂದು ಮತ್ತು ಶ್ರೀ ವರ್ಧಮಾನ ಭಟ್ಟಾರಕರಿಗೂ ಮತ್ತು ಇತರ ಸಮುದಾಯದವರ ಆಹಾರ ವ್ಯವಸ್ಥೆಗೆ ವರಾಂಗ ಗ್ರಾಮವನ್ನು ಸರ್ವಸಾಮಾನ್ಯವಾಗಿ ಧಾರೆಯನೆರದು ದಾನವಾಗಿ ನೀಡುತ್ತಾನೆ. ಶಾಸನದಲ್ಲಿ ವರ್ಧಮಾನ ಭಟ್ಟಾರಕರನ ರಾಜಗುರು ಮಂಡಲಾಚಾರ್ಯ ಮಹಾವಾದ ವಾದೀಶ್ವರ ರಾಯವಾದಿ ಪಿತಾಮಹ ಸಕಲ ವಿದ್ವಜ್ಜನ ಚಕ್ರವರ್ತಿ ಎಂದು ಹೋಗಳಲಾಗಿದೆ. ವರಾಂಗದ ಗ್ರಾಮದಿಂದ ಅರಮನೆಗೆ ಸಲ್ಲುವ ಎಲ್ಲಾ ರೀತಿಯ ಹೊನ್ನನ್ನು ದಾನವಾಗಿ ನೀಡಲಾಗಿದೆ. ಇಮ್ಮಡಿ ದೇವರಾಯನೇ ನೇರವಾಗಿ ಹಾಕಿಸಿರುವ ಶಾಸನವಿದು.

ಅಂದರೆ ಅಂದು ಅರಸರೇ ಈ ಹಬ್ಬಕ್ಕೆ ಪ್ರೋತ್ಸಾಹ ಕೊಟ್ಟು ದಾನಕೊಡುತ್ತಿದ್ದುದು ತಿಳಿಯುತ್ತದೆ. ಹಾಗೆಯೇ ತ್ರುಟಿತವಾಗಿರುವ ಈ ಶಾಸನವು ಮಕರ ಸಂಕ್ರಾಂತಿಯಂದು ಹಂಪಿಯ ಎಲ್ಲಮ್ಮ ದೇವಿಗೆ ಭೂಮಿ ದಾನ ನೀಡಿದ ವಿಷಯ ತಿಳಿಸುತ್ತದೆ. ಈ ಶಾಸನದಲ್ಲಿ ಅರಸನ ಉಲ್ಲೇಖ ಭಾಗ ತೃಟಿತವಾಗಿದ್ದರೂ ಸಂವತ್ಸರ ಮತ್ತು ಬಿರುದಿನ ಆಧಾರದಿಂದ ಈ ಶಾಸನವು ಪ್ರೌಢದೇವರಾಯನ ಅವಧಿಗೆ ಸೇರಿದ್ದೆಂದು ತಿರ್ಮಾನಿಸಬಹುದು. ಎಲ್ಲಮ್ಮಳಿಗೆ ರಾಮಾಪುರದ ಸೀಮೆಯೊಳಗೆ ಹತ್ತುಕೊಳಗ ಗದ್ದೆಯನ್ನು ದಾನವಾಗಿ ನೀಡಲಾಗಿದೆ.[೬೫] ಈ ರಾಮಾಪುರ ಈಗಿನ ಕಡ್ಡಿರಾಂಪುರವಾಗಿದೆ.

ಶ್ರೀಕೃಷ್ಣದೇವರಾಯನ ಆಳ್ವಿಕೆಯಲ್ಲಿ ಸಂಕ್ರಾಂತಿ ಹಬ್ಬವನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಿದ್ದ ಉಲ್ಲೇಖಗಳಿವೆ. ಅಂದು ಅರಸರಷ್ಟೇ ಈ ಹಬ್ಬವನ್ನು ಆಚರಿಸುತ್ತಿರಲಿಲ್ಲ ಸಾಮಾನ್ಯರಾಧಿಯಾಗಿ ಅರಸ, ದಂಡನಾಯಕ, ಸಾಮಂತರು ಅರಸನಿಗೆ, ಸಾಮ್ರಾಜ್ಯಕ್ಕೆ, ತಂದೆ, ತಾಯಿಗಳಿಗೆ, ಪುಣ್ಯದೊರೆಯಲಿ, ಸಂಪತ್ತು ವೃದ್ಧಿಸಲಿ ಎಂದು ಪವಿತ್ರ ಕ್ಷೇತ್ರ ಹಾಗೂ ದೇವಾಲಯಗಳಿಗೆ ದಾನಕೊಡುವುದರ ಮೂಲಕ ಈ ಹಬ್ಬ ಆಚರಿಸುತ್ತಿದ್ದರು. ಕೃಷ್ಣದೇವರಾಯನು ಯಜುಶಾಖೆಯ ಸಾಳುವಗೋವಿಂದ ರಾಜ ಅವರಿಗೆ ಕೊಟ್ಟ ನಾಯಕತನಕ್ಕೆ ತಾವು ಪಾಲಿಸಿದ ಕಡುಗನಾಡ, ತೆರಕಣಾಂಬಿ ಸ್ಥಳದಲ್ಲಿ ಕೋಡಿಹಳ್ಳಿಯ ಗ್ರಾಮಕ್ಕೆ ಸಲ್ಲಿಸುವುದು ಇಲ್ಲಿ ವಿವಿಧ ವೃತ್ತಿಗಳ ಮೇಲೆ ತೆರಿಗೆ ವಸೂಲಿ ಮಾಡಿಕೊಂಡು ತೆರಕಣಾಂಬೆಯ ಲೆಕ್ಕದಲ್ಲಿ ಕೊಡಿಸಿ ಮಕರ ಸಂಕ್ರಾಂತಿಯ ಪುಣ್ಯಕಾಲದಲ್ಲಿ ವಿರೂಪಾಕ್ಷದೇವರ ಸನ್ನಿಧಿಗೆ ಕೊಡಲಾಯಿತು. ಇದಲ್ಲದೆ ಇದರಲ್ಲಿ ಶ್ರೀ ಕೃಷ್ಣದೇವರಾಯನಿಗೆ ಬಹು ಅಶ್ವಗಜ, ಸೇನಾ ಸಮೃದ್ಧಿಯಾಗಬೇಕೆಂದು ಸಾಳುವ ಗೋವಿಂದ ರಾಜಗಳು ಕ್ರಿ.ಶ. ೧೫೨೧ ಡಿಸೆಂಬರ್ ೨೮ ರಂದು ತ್ರಯಂಬಕೇಶ್ವರ ದೇವರಿಗೂ ಅಮೃತಪಡಿ ನೈವೇದ್ಯ, ಅಂಗ–ರಂಗ ವೈಭವ ನಡೆಯಬೇಕೆಂದು ದಾನ ಮಾಡಿದರು.[೬೬]

ಕೃಷ್ಣದೇವರಾಯನು ರಾಜ್ಯವಾಳುವಾಗ ಅವಸರದ ದೇಮರಸಯ್ಯನು ಉಂಮತ್ತೂರು ಸೀಮೆಯ ನಾಯಕತನವನ್ನು ಮಾಡುತ್ತಿರುತ್ತಾನೆ. ಇವನು ಅರಸನ ನಿರೂಪದಿಂದ ತಗಡೂರು ಸ್ಥಳದ ಹೆಗ್ಗೂರಾರ ಮತ್ತು ಅದಕ್ಕೆ ಸಲ್ಲುವ ಪುರಮಾರ್ಗ್ಗ ಸರ್ವ ಆದಾಯಗಳನ್ನು ಮಕರ ಸಂಕ್ರಾಂತಿಯ ಪುಣ್ಯಕಾಲದಲ್ಲಿ ಬಂಮಾಪುರ ಶ್ರೀ ಬಾಲಕೃಷ್ಣದೇವರ ಸೇವೆಗಾಗಿ ದಾನ ನೀಡುತ್ತಾನೆ.[೬೭] ಅದೇ ರೀತಿ ತಾಮ್ರಶಾಸನದಲ್ಲಿ ಮಕರ ಸಂಕ್ರಾಂತಿ ಪುಣ್ಯಕಾಲದಲ್ಲಿ ಎಂದು ನೀಡಿದ್ದು ಕೃಷ್ಣದೇವರಾಯನು ರಾಜ್ಯವಾಳುವಾಗ ತ್ರಯಂಬಕಲಿಂಗ ದೇವರಿಗಾಗಿ ತೆರಕಣಾಂಬೆ ಸ್ಥಳದ ಕೋಡಿಹಳ್ಳಿ, ಅಣಿಯೂರು, ಚಂನಯ್ಯನಪುರ, ಚಿರುಕನಹಳ್ಳಿ, ಹೊಸಹಳ್ಳಿ ಚೌಡಿಹಳಪುರ, ಮಂಗಲ, ಬೊಂಮನಹಳ್ಳಿ, ತುಪೂರು, ಈ ಗ್ರಾಮಗಳ ಗಣಾರ ಕಂಮಾರರ ತೆರಿಗೆ, ಕುರಿತೆರಿಗೆ, ಮಾದಾರಿಕೆ, ಉಪ್ಪಿನಕಾವಲಿ ಸುಂಕ, ಎಲೆತೆರುಗೆ ಬೆಟ್ಟದ ಕಾವಲು, ಮುಂತಾದವುಗಳನ್ನು ದಾನವಾಗಿ ನೀಡಿದ.[೬೮]

ಇದರಿಂದ ಅಂದು ಅರಸರು ಕೇವಲ ಚಿನ್ನ, ವಜ್ರ, ವೈಡೂರ್ಯಗಳನ್ನಲ್ಲದೆ ಉಪಕಸುಬುದಾರರ ತೆರಿಗೆ ದಾನವಾಗಿ ಕೊಡುತ್ತಿದ್ದ ಎಂಬುದು ವೇದ್ಯವಾಗುತ್ತದೆ. ಮತ್ತೊಂದು ಶಾಸನದಲ್ಲಿ ಕಾಲವನ್ನು ಶಕವರುಷ ೧೪೪೪ ನೆಯ ವಿಷಸಂವತ್ಸರ ಪುಷ್ಯ ಬ. ೩೦ ಶನಿವಾರ ಮಕರ ಸಂಕ್ರಾಂತಿಯ ಪುಣ್ಯ ಕಾಲ ಎಂದಿದ್ದು ಇದು ಕ್ರಿ.ಶ. ೧೫೨೧ ಡಿಸೆಂಬರ್ ೨೮ ಶನಿವಾರಕ್ಕೆ ಸರಿಹೊಂದುತ್ತದೆ. ದಾನ ನೀಡಿದ ಗ್ರಾಮದಲ್ಲಿ ದಾನ ಪಡೆದ ದೇವಾಲಯದಲ್ಲೊಂದು ಶಾಸನ ಹಾಕಿಸಿದೆ.[೬೯] ಅದೇ ರೀತಿಯಾಗಿ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ದೇವರಾಯ ಪಟ್ಟಣದ ತಿಂಮವೂಡೆಯರ ಮಗ ಕೆಂಚಸೋಮಣ್ಣನಾಯಕರು ಭೈರವ ಪಟ್ಟಣದ ಜನಾರ್ಧನ ದೇವರ ಸೇವೆಗಾಗಿ ಮತ್ತು ನರಸಿಂಹ ನಾಯಕರಿಗೆ ಪುಣ್ಯವಾಗಲಿಯೆಂದು ವಾಣಿಯಗೆರೆ ಗ್ರಾಮವನ್ನು ಸೋಮುಸಮುದ್ರವೆಂದು ಹೆಸರಿಟ್ಟು ದಾನವಾಗಿ ನೀಡಿದ್ದಾನೆ. ಇಲ್ಲಿ ಉಲ್ಲೇಖವಾಗಿರುವ ನರಸಿಂಹನಾಯಕನು ಕೃಷ್ಣದೇವರಾಯನ ತಂದೆಯಾಗಿರಬೇಕು. ಮಕರ ಸಂಕ್ರಾಂತಿಯ ಪುಣ್ಯಕಾಲದಲ್ಲಿ ಈ ದಾನ ನೀಡಿದೆ.[೭೦] ಅಂದರೆ ಅಂದು ಅರಸರು ಸಹ ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲಿ ಎಂದು ದಾನ ನೀಡುತ್ತಿದ್ದರು ಎಂದು ತಿಳಿಯುತ್ತದೆ. ಕ್ರಿ.ಶ. ೧೫೪೬ರ ಶನಿವಾರದಂದು ಸದಾಶಿವರಾಯನು ಮಕರ ಸಂಕ್ರಾನ್ತಿ ನಿಮಿತ್ತವಾಗಿ ಜಂಬುಕೇಶ್ವರ ಬೆಟ್ಟದ ಹನುಮಂತ ಮತ್ತು ಅನಂತಶಯನ ದೇವರ ಅಮೃತಪಡಿಗಾಗಿ ದಿನಕ್ಕೆ ನಾಲ್ಕು ಪಡಿ ಅಕ್ಕಿ ನೀಡುವಂತೆ ಕಟ್ಟಳೆ ಮಾಡುತ್ತಾನೆ.[೭೧] ಅಬೇ ರಾಜನು ರಾಜ್ಯಭಾರ ಮಾಡುತ್ತಿದ್ದಾಗ ಶ್ರೀ ವಿಠಲದೇವರ ಅಮೃತಪಡಿ ನೈವೇದ್ಯಕ್ಕೆ ಅರವೀಡು ರಾಮರಾಜು ಕೊಂಡ್ಯೆಯದೇವನ ಮೊಮ್ಮಗನೂ ಕೋನೇಟೈಯ್ಯನ ಮಗನೂ ಆದ ಕೋನೇಟಿ ಕೊಂಡರಾಜಯ್ಯನು ತಮ್ಮ ತಂದೆಗೆ ಪುಣ್ಯವಾಗಬೇಕೆಂದು ಕೆಲವು ದತ್ತಿಗಳನ್ನು ಬಿಡುತ್ತಾನೆ. ಮಕರ ಸಂಕ್ರಮಣದ ಪುಣ್ಯಕಾಲದಲ್ಲಿ ಶ್ರೀ ವಿಠಲದೇವರಿಗೆ ಕೊಂಡರಾಜಯ್ಯನ ತಮ್ಮ ಉದಗಿರಿ ತಿಂಮ್ಮರಾಜಯ್ಯನು ೧೦ ದಿನಗಳ ತಿರುನಾಳ ಚೆರುಪನ್ನು ಮಾಡಿಸಲು ಪುದುವಟ್ಟು ನೀಡಿದ್ದನು. ಇದಕ್ಕಾಗಿ ರಾಮಸಾಗರದಲ್ಲಿ ಹತ್ತುಕೊಳಗ ಗದ್ದೆ ನೀಡುತ್ತಾನೆ. ಈ ಗದ್ದೆಯಲ್ಲಿ ಫಲವೃಕ್ಷಗಳನ್ನು ಎಲ್ಲಾ ತೆರಿಗೆಗಳಿಂದ ಮುಕ್ತಮಾಡಿ ಸರ್ವಮಾನ್ಯವಾಗಿ ದೇವರಿಗೆ

ಸಮರ್ಪಿಸುತ್ತಾನೆ.[೨] ರಾಯನ ಕಾರ್ಯಕರ್ತರಾದ ಪೆರುಮಾಳ ಅಧಿಕಾರಿ ಚಲ್ಲಯ್ಯನವರಿಗೆ ಪುಣ್ಯವಾಗಬೇಕೆಂದು ಗಂಗನಾಯಕರ ಕುಮಾರ ದಳವಾಯಿಗಳ ರಂಗನಾಯಕರು ಕಾಶಿಯ ಕ್ಷೇತ್ರಕ್ಕೆ ಸಮನಾದ ತಿರುಮಕೊಡಲಿಗೆ ದಕ್ಷಿಣ ಭಾಗದ ಉಮ್ಮತ್ತೂರು ಗ್ರಾಮದ ಶ್ರೀ ರಂಗನಾಥ ದೇವರಿಗೆ ದಿನಾಲೂ ಪೂಜೆ ನೈವೇದ್ಯ ನಡೆಯುವಂತೆ ಕ್ರಿ.ಶ. ೧೫೩೧ರ ಸಂಕ್ರಾಂತಿಯ ಶುಭಕಾಲದಲ್ಲಿ ದಾನ ಮಾಡಲಾಯಿತು.[೩]

ಸದಾಶಿವರಾಯನ ಆಳ್ವಿಕೆಯಲ್ಲಿ ಮಲ್ಲಪಲ್ಲಿ ಎಂಬಲ್ಲಿ ದೇವರ ಅಮೃತಪಡಿ ನೈವೇದ್ಯ ದೀಪಾರಾಧನೆಗಳು ದಿನಾಲು ನಡೆಯುವಂತೆ ಸಂಕ್ರಾಂತಿಯ ಶುಭ ದಿನದಂದು ಬಯಪ್ಪನಾಯಕರ ಕೃಷ್ಣಪ್ಪನಾಯಕ ಅಯ್ಯನವರಿಗೆ ಪುಣ್ಯ ಲಭಿಸಲಿ ಎಂದು ದಾನ ನೀಡಿದನು.[೪] ಹಾಗೆ ಬೆಟ್ಟದ ಜಂಬುಕೇಶ್ವರ ಮತ್ತು ಹನಮಂತ ದೇವರ, ಅನಂತಶಯನ ದೇವರ ಅಮೃತಪಡಿಯ ನೈವೇದ್ಯ, ಪೂಜೆ ಅಭಿಷೇಕಕ್ಕಾಗಿ ಸಂಕ್ರಾಂತಿಯ ಹಬ್ಬದ ಪುಣ್ಯ ಕಾಲದಲ್ಲಿ ಧಾನ್ಯ ದಾನ ಮಾಡಿದ.[೫] ವಿಜಯನಗರದರಸರ ಸಾಮ್ರಾಜ್ಯ ತುಂಬಾ ವಿಶಾಲವಾಗಿದ್ದು ತಮಿಳುನಾಡುವರೆಗೂ ವ್ಯಾಪಿಸಿತ್ತು. ಆ ಭಾಗದಲ್ಲಿ ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಈಗಿನಷ್ಟೆ ಮಹತ್ವ ಆಗಲೂ ಇತ್ತು. ಅಚ್ಚುತರಾಯನ ಕಾಲದ ಆವರ್ತವರ್ಷದ ದಾಖಲೆಯೊಂದು ನಮಃಶಿವಾಯ ನಾಯಕರನ ಆಜ್ಞೆಯಂತೆ ಮಹಾಸಂಕ್ರಮಣದ ಪ್ರಯುಕ್ತ ಅಟ್ಟಿಪಿರವಡೈರೇ ನಮಶ್ಶಿವರಿಯ ನಲ್ಲೂರ್ ಎಂಬ ಹಳ್ಳಿಯನ್ನು ದಾನವಾಗಿ ಕೊಟ್ಟ ವಿಷಯ ತಿಳಿಸುತ್ತದೆ. ಕ್ರಿ.ಶ. ೧೫೪೯ರಲ್ಲಿ ಗಂಗೆ ನಾಯಕನ ಮಗ ದಳವಾಯಿ ರಂಗನಾಯಕನು ಉಮ್ಮತ್ತೂರ್ ನಾಡಿನಲ್ಲಿರುವ ತನ್ನ ಉಂಬಳಿದಾರನಿಂದ ನಿರ್ದಿಷ್ಟ ಭೂಮಿಯನ್ನು ಮಹಾಸಂಕ್ರಾಂತಿ ಹಬ್ಬದ ಪ್ರಯುಕ್ತ ಉಮ್ಮತ್ತೂರಿನ ದೇವ ಶ್ರೀ ರಂಗನಾಥನ ಸೇವಕಾರ್ಯಗಳಿಗಾಗಿ ನೀಡಿದ.[೬] ಅಚ್ಯುತರಾಯನ ಕಾಲದಲ್ಲಿ ಸೋಮವಾರದ ಸಂಕ್ರಮಣದ ಪುಣ್ಯಕಾಲದಲ್ಲಿ ಕಡಬೂರ ರಡ್ಡಪ್ಪಯ್ಯನ ಮಗ ಭಟರ ನಾಗಯ್ಯನಿಗೆ ಸುಖ ಶಾಂತಿಯಿಂದ ಬಾಳಲು ಅದೋನಿ ಪ್ರದೇಶಕ್ಕೆ ಸೇರಿದ ಸಾತನೂರ ಸೀಮೆಯೊಳಗಿನ ಬೊಮ್ಮರಾಯಪುರವೆಂಬ ಒಂದು ಅಗ್ರಹಾರ ಉಂಬಳಿಯಾಗಿ ಕೊಟ್ಟನು.[೭]

ವಿಜಯನಗರದರಸರಲ್ಲಿ ಈ ಸಂಕ್ರಾಂತಿ ಹಬ್ಬವನ್ನು ವಿಶೇಷವಾಗಿ ವೈಷ್ಣವರು ಹೆಚ್ಚು ಆಚರಿಸುತ್ತಿದ್ದರು. ಸಂಗಮ, ಅರಸರು ಶೈವ ಧರ್ಮದವರಾಗಿದ್ದರು, ಹೀಗಾಗಿ ಅವರ ಕಾಲದಲ್ಲಿ ಈ ಹಬ್ಬ ಅಷ್ಟೊಂದು ವಿಶೇಷತೆ ಪಡೆದಿರುವುದಿಲ್ಲ ಆದರೆ ಮುಂದೆ ಬಂದ ಸಾಳುವ, ತುಳುವ ವಂಶದವರಲ್ಲಿ ಆಚರಿಸಿದುದಕ್ಕೆ ಹೆಚ್ಚು ಶಾಸನಗಳಲ್ಲಿ ಉಲ್ಲೇಖವಿದೆ.[೮] ಈ ರೀತಿ ಮೇಲಿನ ಎಲ್ಲಾ ಆಧಾರಗಳಿಂದ ವಿಜಯನಗರ ಕಾಲದಲ್ಲಿ ಸಂಕ್ರಾಂತಿ ಹಬ್ಬವನ್ನು ಬಹುವಿಜೃಂಭಣೆಯಿಂದ ಜನಸಾಮಾನ್ಯರಾದಿಯಾಗಿ, ಅರಸ, ಮಾಂಡಳಿಕ, ಸಾಮಂತರಲ್ಲಿ ಆಚರಿಸುತ್ತಿದ್ದರು ಎಂಬುದು ತಿಳಿಯುತ್ತದೆ. ಹಾಗೆ ಈ ಹಬ್ಬದಂದು ಧನ, ಕನಕ, ಭೂಮಿ, ದವಸ ಧಾನ್ಯಗಳನ್ನು ದೇವಾಲಯಕ್ಕೆ ಪೂಜೆ ಪುನಸ್ಕಾರಗಳಿಗೆ ದಾನ ಬಿಡುತ್ತಿದ್ದರು. ಅಂದಿನಿಂದ ಇಂದಿನವರೆಗೂ ಈ ಸಂಕ್ರಾಂತಿ ಹಬ್ಬ ತನ್ನ ಆಚರಣೆಗಳಲ್ಲಿ ಪ್ರಾದೇಶಿಕವಾಗಿ ಸ್ವಲ್ಪ ಬದಲಾವಣೆಯಾದರೂ ತನ್ನ ಮಹತ್ವವನ್ನು ಉಳಿಸಿಕೊಂಡು ಬಂದಿದೆ.

ರಥಸಪ್ತಮಿ

ಸನಾತನ ಭಾರತೀಯರು ಆಚರಿಸುವ ಹಬ್ಬ-ಹರಿದಿನಗಳಲ್ಲಿ ಅತಿಮುಖ್ಯವಾದ ಒಂದು ಪರ್ವ ರಥಸಪ್ತಮಿ. ಮಾಘಮಾಸದ ಶುಕ್ಲಪಕ್ಷದ ಸಪ್ತಮೀ ತಿಥಿಯಂದು ಇದು ಆಚರಿಸಲ್ಪಡುತ್ತದೆ. ಶೈವ, ವೈಷ್ಣವ ಮುಂತಾದ ಎಲ್ಲಾ ವೈದಿಕ ಸಂಪ್ರದಾಯಗಳ ಜನರೂ ಇದನ್ನು ಭಕ್ತಿ ಮತ್ತು ಶ್ರದ್ಧೆಗಳಿಂದ ಆಚರಿಸುತ್ತಾರೆ. ಇದಕ್ಕೆ ಕಾರಣ ಈ ಹಬ್ಬದ ಆರಾಧ್ಯ ದೇವರು ಸೂರ್ಯ. ಆತನು ಎಲ್ಲಾ ವರ್ಗದವರ ಪೂಜೆಗೂ ವಿಷಯವಾಗಿದ್ದಾನೆ. ಸೌರ ಎಂದು ಕರೆಯಲ್ಪಡುವ ಭಕ್ತಿ ದರ್ಶನದಲ್ಲಿ ಸೂರ್ಯನೇ ಪರಾದೇವತೆ ಪಂಚಾಯತನ ಎಂದು ಕರೆಯಲ್ಪಡುವ ಒಂದು ಪೂಜಾ ಕಲ್ಪದಲ್ಲಿಯೂ ಸೂರ್ಯನು ಆರಾಧ್ಯ ದೇವತೆಗಳಲ್ಲಿ ಒಬ್ಬನಾಗಿ ಪರಿಗಣಿಸಲ್ಪಟ್ಟಿದ್ದಾನೆ.[೭೯] ರಥಸಪ್ತಮೀ ಮತ್ತು ಅಚಲಾ ಸಪ್ತಮೀ ಎಂಬ ಹೆಸರುಗಳಿಂದ ಇದು ಶಾಸ್ತ್ರಗಳಲ್ಲಿ ಪ್ರಸಿದ್ಧವಾಗಿದೆ. ಸೂರ್ಯಗ್ರಹಣತುಲ್ಯ ತು ಶುಕ್ಲಾ ಮಾಘಸ್ಯ ಸಪ್ತಮೀಅಚಲಾ ಸಪ್ತಮೀ ದುರ್ಗಾ ಶಿವರಾತ್ರಿರ್ಮಹಾಭರ: ರಥಸಪ್ತಮೀ ಎಂಬ ಹೆಸರಿಗೆ ಕಾರಣ ಈ ವಿಶಿಷ್ಟವಾದ ಸಪ್ತಮೀತಿಥಿಯೆಂದು, ರಥವರ ಎಂದು ಕರೆಯಲ್ಪಡುವ ಸೂರ್ಯನು ಆರಾಧಿಸಲ್ಪಡುವುದು ಏವಂ ವಿಧಂ ರಥವರಂ ರಥವಾಜಿಯುಕ್ತ ಎಂದು ವಿವರಣೆಯಿದೆ.[೮೦] ಆದರೆ ಅದೇ ಶ್ಲೋಕದ ಮುಂದಿನ ಪದ್ಯದಲ್ಲಿ ಹೈಮಂ ಚ ಹೈಮ ಶತದೀಥೀತಿನಾ ಸಮೇತಂ ಎಂದು ಸೂರ್ಯನನ್ನು ಪ್ರತ್ಯೇಕವಾಗಿ ಕರೆದಿರುವುದರಿಂದ ರಥವರ ಶಬ್ದವು ಸೂರ್ಯನ ರಥಕ್ಕೆ ಅನ್ವಯಿಸುತ್ತದೆಯೇ ಹೊರತು ಸೂರ್ಯನಿಗಲ್ಲ. ಆದುದರಿಂದ ಪ್ರಸಿದ್ಧವಾದ ಸೂರ್ಯರಥದ ಉತ್ತರಗತಿಯ ನಿಮಿತ್ತವಾಗಿ ದೇವರನ್ನು ಆರಾಧಿಸುವ ಸಪ್ತಮೀತಿಥಿ ಎಂದು ರಥಸಪ್ತಮಿ ಶಬ್ಧಕ್ಕೆ ಅರ್ಥ ವಿವರಣೆ ನೀಡಿರುವುದು ಉಚಿತವಾಗಿದೆ.[೮೧] ದೇವಾಲಯಗಳಲ್ಲಿ ಸಾಮಾನ್ಯವಾಗಿ ಉತ್ತರಾಯಣದಲ್ಲಿ ರಥೋತ್ಸವಗಳು ಪ್ರಾರಂಭವಾಗಿ, ಸಪ್ತಮೀ ತಿಥಿ ದಿವಸವಾದ್ದರಿಂದ ಇದನ್ನು ರಥಸಪ್ತಮೀ ಎಂದು ಕರೆಯುವುದು ಅತ್ಯಂತ ಉಚಿತವಾಗಿದೆ. ವಿಜಯನಗರ ಕಾಲದಲ್ಲಿ ಈ ಹಬ್ಬದಂದು ಪುಣ್ಯಸ್ನಾನ ಮಾಡಿದ ಮೇಲೆ ಬಂಗಾರ, ಬೆಳ್ಳಿಯ ಹಾಗೂ ಕಂಚಿನ ದೀಪಗಳನ್ನು ನದಿಯ ದಂಡೆಯ ಮೇಲೆ ಇಟ್ಟು ಸೂರ್ಯನನ್ನು ಪೂಜಿಸಿ ಆ ದೀಪಗಳನ್ನು ನೀರಿನಲ್ಲಿಯೇ ಬೀಡುವ ವಾಡಿಕೆ ಇತ್ತು. ಅಂದು ದೇವಾಲಯಗಳಿಗೆ ಕಾಣಿಕೆ ಕೊಡುತ್ತಿದ್ದರು.[೮೨] ಪ್ರಾಚೀನ ಕಾಲದಿಂದಲೂ ಒಂದು ವಿಶೇಷತೆಯನ್ನು ಪಡೆದುಕೊಂಡು ಬಂದ ಇದರ ಬಗ್ಗೆ ವಿಜಯನಗರ ಕಾಲದಲ್ಲಿ ಹಲವು ಶಾಸನಗಳು ರಥಸಪ್ತಮೀ ಆಚರಿಸುತ್ತಿದ್ದುದನ್ನು ಉಲ್ಲೇಖಿಸಿವೆ. ಈ ಪುಣ್ಯ ಕಾಲದಲ್ಲಿ ಸಾಮಾನ್ಯರಾದಿಯಾಗಿ, ಅರಸ, ಮಾಂಡಳಿಕರು, ದಾನದತ್ತಿ ಬಿಟ್ಟಿರುವುದಿದೆ. ಅರಸರು ರಥಸಪ್ತಮೀಯ ಕಾಲದಲ್ಲಿ ಗ್ರಾಮನಾಮಗಳನ್ನು ಬದಲಾಯಿಸಿ ಅವುಗಳನ್ನು ಬ್ರಾಹ್ಮಣರಿಗೆ ದತ್ತಿಯಾಗಿ ನೀಡಿರುವುದು ಕಂಡುಬರುತ್ತದೆ. ಎರಡನೆಯ ಹರಿಹರನ ಕಾಲದಲ್ಲಿ ತವನಿದಿಯನ್ನು ಹರಿಹರಪುರ ಎಂಬ ಹೊಸ ಹೆಸರಿನಿಂದ ಬದಲಾಯಿಸಿ, ಕಲ್ಲ ಮಾಳಿಗೆಯ ಕೇಶವನ ಮಗ ಮಾಧವನಿಗೆ ರಥಸಪ್ತಮಿಯ ಪುಣ್ಯ ದಿನದಂದು ನರಸಿಂಹಪುರವನ್ನು ಉಂಬಳಿಯಾಗಿ ವಿರೂಪಾಕ್ಷ ದೇವರ ಸಾಕ್ಷಿಯಾಗಿ ಹೇಳಿ ಕ್ರಿ.ಶ. ೧೩೯೭ ಜನವರಿ ೧೭ ರಂದು ನೀಡಿದ ದಾಖಲೆಯಿದೆ.[೮೩]

ಹಾಗೆಯೇ ಕ್ರಿ.ಶ. ೧೫೨೧ ರ ಕೃಷ್ಣದೇವರಾಯನ ಶಾಸನವೊಂದರಿಂದ ಈ ರಥಸಪ್ತಮೀಯ ದಿನ ಕಲಪೂರ ಎಂಬ ಹಳ್ಳಿಯನ್ನು ಕೃಷ್ಣಾಪುರ ಎಂದು ಬದಲಾಯಿಸಿ ಅನೇಕ ಬ್ರಾಹ್ಮಣರಿಗೆ ದಾನದತ್ತಿಗಳನ್ನು ಕೊಟ್ಟನು.[೮೪] ಶ್ರೀಕೃಷ್ಣದೇವರಾಯನ ಮಂಡಲೇಶ್ವರನಾದ ಚಿಕ್ಕ ತಿಮ್ಮಯ್ಯ ಮಹಾದೇವ ಅವರ ಮಗ ತಿಮ್ಮರಾಜ ಇವರು ಸೊಂಡುರ ಸೀಮೆಯೊಳಗೆ ಬರುವ ತಾಳೂರ ಗ್ರಾಮದಲ್ಲಿ ಇರುವ ಶ್ರೀರಾಮಚಂದ್ರ ದೇವಸ್ಥಾನಕ್ಕೆ ಉತ್ಸವ ಮಂಟಪ ಮತ್ತು ಒಂದು ಕೆರೆಯನ್ನು ಕಟ್ಟಿಸಿ, ತಮ್ಮ ತಂದೆ ತಾಯಿಗಳಿಗೆ ಪುಣ್ಯ ದೊರೆಯಲಿ ಎಂದು ರಥಸಪ್ತಮಿಯ ಪುಣ್ಯಕಾಲದಲ್ಲಿ ಶ್ರೀರಾಮಚಂದ್ರ ದೇವರಿಗೆ ದಾನ ಮಾಡಿರುವ ವಿವರವಿದೆ.[೮೫] ಅದೇ ರೀತಿ ಸದಾಶಿವರಾಯನ ಕಾಲದಲ್ಲಿಯೂ ಈ ಹಬ್ಬದ ಆಚರಣೆ ಮುಂದುವರೆಯಿತು. ಇವನ ಅವಧಿಯಲ್ಲಿ ಕೊಂಡ ರಾಜಗಳ ಮಕ್ಕಳು ಮತ್ತು ಕೊನೇಟಿ ತಿಮ್ಮರಾಜಯ್ಯನವರು ತಮ್ಮ ತಂದೆತಾಯಿಗಳಿಗೆ ಪುಣ್ಯ ದೊರೆಯಬೇಕೆಂದು ರಥ ಸಪ್ತಮೀ ದಿನ ಶ್ರೀವಿಠಲ ದೇವರಿಗೆ ನೈವೇದ್ಯ, ದೂಪ, ದೀಪಕ್ಕೆ ಹಟ್ಟಿ ಸೀಮೆಯೊಳಗೆ ಬರುವ ರಾವೂಡರ ಗ್ರಾಮದ ಪ್ರಜೆಗಳೂ ಕೊಡುವ ಸುಂಕವನ್ನು ಭಕ್ತಿಯಿಂದ ದೇವರಿಗೆ ಈ ರಥಸಪ್ತಮೀ ದಿನದಂದು ಕೊಟ್ಟನು.[೮೬] ಕ್ರಿ.ಶ. ೧೫೩೮ರಲ್ಲಿ ತಿರುಪತಿಯ ಮತ್ತು ತಿರುಮಲ ದೇವಾಲಯದ ಭಕ್ತಾದಿಗಳು ೭೦೦ ವರಹ ಫಣಮ್ ಹಣವನ್ನು ರಥಸಪ್ತಮೀ ಆಚರಿಸಲಿಕ್ಕೆ ಖರ್ಚು ಮಾಡಿದರು. ಅಲ್ಲದೆ ಈ ವೇಳೆಯಲ್ಲಿ ಸೂರ್ಯದೇವರ ಮೂರ್ತಿಯನ್ನು ಬೀದಿಯಲ್ಲಿ ಮೆರವಣಿಗೆ ಮಾಡುತ್ತಿದ್ದರು. ಕ್ರಿ.ಶ. ೧೫೪೮ರಲ್ಲಿ ಅರವೀಡು ಬುಕ್ಕರಾಜರ ಮೊಮ್ಮಗ ಚಿನ್ನ ತಿಮ್ಮಯ್ಯ ದೇವನು ವಿನಯಾಮ್ಮನೂರು ಹಳ್ಳಿಯ ತೆರಿಗೆಯ ರೂಪದ ಹಣವನ್ನು ರಥಸಪ್ತಮೀ ಆಚರಣೆಗೆ ಕಳುಹಿಸಿ ಕೊಟ್ಟಿದ್ದನು.[೮೭] ಮೇಲಿನ ಶಾಸನಗಳಿಂದ ಅಂದು ಅರಸರು ಗ್ರಾಮನಾಮ ಬದಲಾಯಿಸಿ ಹೊಸ ಹೆಸರು ಕೊಡುತ್ತಿದ್ದರು. ಹಾಗೆಯೇ ದೇವಾಲಯಗಳಿಗೆ, ಬ್ರಾಹ್ಮಣರಿಗೆ ದಾನ ಬಿಟ್ಟಿರುವುದು ಸ್ಪಷ್ಟವಾಗುತ್ತದೆ. ಪ್ರಾಚೀನ ಕಾಲದಿಂದಲೂ ಸೂರ್ಯನ ಆರಾಧನಾ ಪದ್ಧತಿ ಇದೆ. ಅದೇ ರೀತಿ ವಿಜಯನಗರ ಕಾಲದಲ್ಲಿಯೂ ಮುಂದುವರೆದುಕೊಂಡು ಬಂದಿತು. ಸಾಮಾನ್ಯವಾಗಿ ಜನವರಿ ತಿಂಗಳಲ್ಲಿ ಸೂರ್ಯ ಉಜ್ವಲವಾದ ಪ್ರಕಾಶದಿಂದ ಹೊಳೆಯುತ್ತದೆ. ಹೀಗಾಗಿ ಆ ದಿವಸ ಸೂರ್ಯದೇವನನ್ನು ಕುರಿತು ಆರಾಧನೆ ಮಾಡುವರು.

ಮಹಾಶಿವರಾತ್ರಿ

ಪ್ರಾಚೀನ ಭಾರತೀಯರ ಹಬ್ಬಗಳಲ್ಲಿ ಮಹಾಶಿವರಾತ್ರಿ ಪ್ರಮುಖವಾದುದು. ಇದನ್ನು ವ್ರತರಾಜ ಎಂದು ಕರೆಯುವುದುಂಟು.[೮೮] ಶಿವದೇವತಾ ಆರಾಧನೆ ಪ್ರಧಾನವಾಗಿ ಶೈವರಿಗೆ ಅತ್ಯಂತ ವಿಶೇಷವಾದ ಹಬ್ಬವಾದರೂ, ವೈಷ್ಣವರು ಮುಂತಾದ ಇತರ ಮಹಾದೇವತೆಗಳ ಉಪಾಸಕರೂ, ಶಿವರಾತ್ರಿಯಂದು ವಿಶೇಷವಾಗಿ ಪೂಜೆಯನ್ನು ಮಾಡುತ್ತಾರೆ. ಶೈವೋ ವಾ ವೈಷ್ಣವೋ ವ್ಯಾಪಿ ಯೋ ವಾ ಸ್ಯಾದನ್ಯ ಪೂಜಕ! ಸರ್ವ ಪೂಜಾಫಲಂ ಹಸ್ತಿ ಶಿವರಾತ್ರಿ ಬಹಿಮುಖಃ![೮೯] ಶೈವನಾಗಲಿ, ವೈಷ್ಣವನಾಗಲಿ ಇತರೆ ಯಾವುದೇ ದೇವತೆಯ ಉಪಾಸಕನಾಗಲಿ ಶಿವರಾತ್ರಿಯ ವಿಷಯದಲ್ಲಿ ಬಹಿರ್ಮುಖನಾಗಿದ್ದರೆ, ಆತನ ಎಲ್ಲಾ ಪೂಜಾ ಫಲವೂ ನಾಶವಾಗುತ್ತದೆ. ಶಿವರಾತ್ರಿ ವ್ರತದ ಮಹಾಮಹಿಮೆಯನ್ನು ಶಾಸ್ತ್ರ ಸಂಪ್ರದಾಯಗಳು ಮುಕ್ತಕಂಠದಿಂದ ಕೊಂಡಾಡಿವೆ.

ಶಿವರಾತ್ರಿರಿತಿ ಖ್ಯಾತ ಸರ್ವಯಜ್ಞೋತ್ತಮೋತ್ತಮಾ!
ದಾನಯಜ್ಞತ ಪಸ್ತೀರ್ಥ ವ್ರತಕರ್ಮಾಣಿ ಯಾನಿಚ!
ಶಿವರಾತ್ರಿ ವ್ರತಸ್ಯಾಪಿ ಕೋಟ್ಯಂಶೇ ನ ಸಮಾನಿ ಚ![೧೦]

ಅರ್ಥ ಈ ಶಿವರಾತ್ರಿ ವ್ರತೋತ್ಸವ ಸರ್ವಯಜ್ಞಗಳಲ್ಲೂ ಉತ್ತಮೋತ್ತಮವಾದುದು. ದಾನ, ಯಜ್ಞ, ತಪಸ್ಸು, ತೀರ್ಥ, ವ್ರತ, ಕರ್ಮ, ಇವು ಯಾವು ಶಿವರಾತ್ರಿ ವ್ರತದ ಕೋಟಿ ಪಾಲಿಗೂ ಸಾಟಿಯಲ್ಲ.

ಮಾಘ ಫಾಲ್ಗುಣಯೋರ್ಮಧ್ಯೇ ಕೃಷ್ಣಾಯಾ ತು ಚತುರ್ದಶಿ! ತಸ್ಯಾಂ ಜಾಗರಣಾದ್ರುದ್ರಃ ಪುಜತೋ ಭುಕ್ತಿಮುಕ್ತಿದಃ! ಉಪೋಷಿತೈಃ ಪೂಜಿತಸ್ಸನ್ನರ ಕಾತ್ತಾರೆಯೇತ್ತಥಾಮಾಘ.[೧೧] ಫಾಲ್ಗುಣಗಳ ಮಧ್ಯ ಬರುವ ಈ ಕೃಷ್ಣ ಚತುರ್ದಶಿಯಂದು ಉಪವಾಸ ಮಾಡಿ, ಜಾಗರಣೆ ಮಾಡಿ ಪೂಜಿಸಿದರೆ, ರುದ್ರದೇವರು ಭಕ್ತಿ ಮುಕ್ತಿಗಳೆರಡನ್ನು ಅನುಗ್ರಹಿಸುತ್ತಾರೆ. ನರಕದಿಂದ ಉದ್ಧರಿಸುತ್ತಾರೆ ಎಂಬರ್ಥ ನೀಡುತ್ತದೆ.

ಶಿವರಾತ್ರಿಯ ಕುರಿತು ನಾನಾ ಐತಿಹ್ಯಗಳಿವೆ. ಅವುಗಳಲ್ಲಿ ಬೇಡರ ಕಣ್ಣಪ್ಪನ ಐತಿಹ್ಯ ಸುಪ್ರಸಿದ್ಧವಾಗಿದೆ. ಶಿವಪುರಾಣದ ಪ್ರಕಾರ ಬೇಡನ ಹೆಸರು ಗುರುದ್ರುಹ, ಕಡುದುಷ್ಟನೂ, ಕ್ರೂರಿಯೂ ಆದ ಆತನು ಒಂದು ಶಿವರಾತ್ರಿಯ ದಿನ ಬೇಟೆ ದೊರೆಯದೆ ಅನಿವಾರ್ಯವಾಗಿ ದಿನವಿಡೀ ಉಪವಾಸ ಮಾಡುತ್ತಾನೆ. ಅಂದು ರಾತ್ರಿ ಬೇಟೆಯ ಪ್ರಾಣಿಗಾಗಿ ಕಾಯುತ್ತಾ ಸೋರೆ ಬುರುಡೆಯಲ್ಲಿ ನೀರು ತುಂಬಿ ಒಂದು ಬಿಲ್ವಪತ್ರೆಯ ಮರದ ಮೇಲೆ ಕುಳಿತುಕೊಂಡಿರುತ್ತಾನೆ. ಅಲ್ಲಿಗೆ ಆಕಸ್ಮಾತ್ ಬಂದ ಹೆಣ್ಣು ಜಿಂಕೆಯೊಂದರ ಮೇಲೆ ಬಾಣವನ್ನು ಪ್ರಯೋಗ ಮಾಡುತ್ತಿರುವಷ್ಟರಲ್ಲಿ ಸೋರೆಬುರುಡೆಯಲ್ಲಿದ್ದ ನೀರು, ಬಿಲ್ವಪತ್ರೆಯ ದಳಗಳು ನೆಲದ ಮೇಲೆ ಬಿದ್ದು ಅಲ್ಲಿ ಶಿವಲಿಂಗ ಇದ್ದಿರಲು ಬೇಡನ ಅರಿವಿಲ್ಲದೆಯೇ ಶಿವರಾತ್ರಿಯ ಮೊದಲನೇ ಜಾವದ ಶಿವಪೂಜೆ ಸಂಪನ್ನವಾಗುತ್ತದೆ. ಅಲ್ಲದೆ ಅವನ ಪಾಪ ಪರಿಹಾರವಾಗುತ್ತದೆ.[೧೨] ವಿಜಯನಗರದ ದೇವಾಲಯ, ಭಿತ್ತಿ, ಕಂಬಗಳ ಮೇಲೆ ಸಾಕಷ್ಟು ಸಂಖ್ಯೆಯಲ್ಲಿ ಈ ಬೇಡರ ಕಣ್ಣಪ್ಪನ ಶಿಲ್ಪಗಳು ಕಂಡುಬರುತ್ತವೆ. ಹೀಗೆ ಗರುಡಪುರಾಣ, ಸ್ಕಂದ ಪುರಾಣಗಳಲ್ಲಿ ಶಿವರಾತ್ರಿ ಉಲ್ಲೇಖಗಳಿವೆ. ಶಿವನನ್ನು ಲಿಂಗರೂಪದಲ್ಲಿ ಪೂಜೆ ಮಾಡುವುದು ಭಾರತೀಯರಲ್ಲಿ ಬಹು ಹಿಂದಿನಿಂದಲೂ ಬಂದಿದೆ. ಶೈವಾಗಮಗಳಲ್ಲಿ ಲಿಂಗ ಪೂಜೆಯ ಬಗೆಗೆ ಬಹು ಸುಂದರವಾದ ನಿರೂಪಣೆಯಿದೆ. ಲಿಂಗ ತತ್ವ ಬಹು ಗಹನವಾದ ಅರ್ಥವನ್ನೊಳಗೊಂಡಿದೆ. ಲಿಂಗ ಮಧ್ಯ ಜಗತೆ ಸರ್ವಂ ಎನ್ನುವಂತೆ ಲಿಂಗವು ಜಗತ್ತಿನ ಸರ್ವವನ್ನು ಒಳಗೊಂಡಿದೆ. ಲಿಂಗ ರೂಪವೂ ಅಲ್ಲ ಆರೋಪವು ಅಲ್ಲ ಸಾಕಾರವೂ ಅಲ್ಲ, ನಿರಾಕಾರವೂ ಅಲ್ಲ, ಸಾಕಾರದಿಂದ ನಿರಾಕಾರಕ್ಕೆ ಎಂದರೆ ಸುಗುಣೋಪಾಸನೆಯಿಂದ ನಿರ್ಗುಣೋಪಾಸನೆಗೆ ಮನ ಮಾಡಲು ಇದೊಂದು ಸಾಧನ ವಿಶೇಷ.

ಶೈವ ಪುಣ್ಯ ಕ್ಷೇತ್ರಗಳಲ್ಲಿ ಇದರ ಆಚರಣೆ ವೈಶಿಷ್ಟ್ಯ ಪೂರ್ಣವಾಗಿರುತ್ತದೆ. ಮುಖ್ಯವಾಗಿ ವಾರಣಾಸಿಯಲ್ಲಿ (ಕಾಶಿ) ಇದರ ಸಂಭ್ರಮ ಹೆಚ್ಚು. ಕರ್ನಾಟಕದಲ್ಲಿ ಧರ್ಮಸ್ಥಳ, ಗೋಕರ್ಣ ಇತ್ಯಾದಿ ಶಿವನ ಆರಾಧಕರ ಪವಿತ್ರ ಕ್ಷೇತ್ರಗಳಾಗಿವೆ. ಶಿವರಾತ್ರಿ ಹಬ್ಬ ಆಚರಿಸಲು ಅನೇಕರು

ಇಲ್ಲಿಗೆ ಪ್ರಯಾಣ ಮಾಡುವರು. ಇದೇ ಬಗೆಯಲ್ಲಿ ಆಂಧ್ರದಲ್ಲಿರುವ ಶ್ರೀಶೈಲವು ಶೈವ ಮಹಾಕ್ಷೇತ್ರ, ಇನ್ನೂ ಅನೇಕ ಸ್ಥಳಗಳಲ್ಲಿ ಜಾತ್ರೆ, ರಥೋತ್ಸವಗಳು ನಡೆಯುವುದುಂಟು. ವಿಜಯನಗರದ ಪ್ರಾರಂಭದ ಸಂಗಮ ಮನೆತನದ ಅರಸರು ಶೈವರಾಗಿದ್ದರಿಂದ ಇವರ ಕಾಲದಲ್ಲಿ ಶಿವರಾತ್ರಿ ಹಬ್ಬವನ್ನು ಉತ್ಸಾಹದಿಂದ ಆಚರಿಸಿರುವುದು ಶಾಸನಗಳಲ್ಲಿ ಕಂಡುಬಂದಿದೆ. ಅಂದು ಈ ಹಬ್ಬ ಪ್ರಸಿದ್ಧವಾಗಿತ್ತೆಂಬದಕ್ಕೆ ಆ ಕಾಲದ ಶಾಸನಗಳೇ ಜೀವಂತ ಸಾಕ್ಷಿ ಆಗಿದೆ. ಅರಸರು, ಸಾಮಂತರು, ದಂಡನಾಯಕರು, ಪ್ರಜೆಗಳು ಯಾವುದೇ ಜಾತಿ, ಮತ ಪಂಥವನ್ನು ವ್ಯಕ್ತಪಡಿಸದೆ ಶಿವರಾತ್ರಿಯ ಉತ್ಸವವನ್ನು ಆಚರಿಸಲು ಭಕ್ತಿಯಿಂದ ತಮಗೆ ಮತ್ತು ಅರಸರ, ಅವರ ಸಂಬಂಧಿಕರಿಗೆ ಪುಣ್ಯ ದೊರೆಯಲೆಂದು ಕೆಲವು ಹಳ್ಳಿ ಮತ್ತು ಭೂಮಿಯನ್ನು ದೇವಾಲಯಗಳಿಗೆ ಶಿವರಾತ್ರಿಯ ಉತ್ಸವ ದಿನದಂದು ದಾನ ನೀಡಿರುವುದು ಕಾಣುತ್ತೇವೆ.

ಸಂಗಮ ವಂಶದ ಶ್ರೀವೀರ ಹರಿಹರನು ಆಳುವಾಗ ಬಾರಕೂರ ಪ್ರದೇಶದಲ್ಲಿ ಮಲ್ಲಪ್ಪ ಒಡೆಯನು ಆಳುತ್ತಿದ್ದ, ಈತನ ಕಾಲದಲ್ಲಿ ಮಣೆಗಾರ ಕೇರಿಯೊಳಗೆ ಸೋಮನಾಥ ದೇವರ ಸನ್ನಿದಿಗೆ ಶಿವರಾತ್ರಿಯ ದಿನದಂದು ತುಳುಹಿನ ದೀವಿಗೆ ಮತ್ತು ಕಾಯಿ, ರುದ್ರಪೂಜೆ ಸಲುವಾಗಿ ಬೊಮ್ಮಣ್ಣ ಶೆಟ್ಟಿ ಈತನ ತಮ್ಮ ಮಾದಶೆಟ್ಟಿಯು ಭೂಮಿ ದಾನ ಮಾಡಿದರು.[೯೩] ಅದೇ ರೀತಿ ಒಂದನೇ ಬುಕ್ಕನ ಆಳ್ವಿಕೆಯಲ್ಲಿ ಬಾರಕೂರ ಪ್ರದೇಶವನ್ನು ಆಳುವ ಮಲ್ಲಯ ದಂಡನಾಯಕರು ಶ್ರೀ ಮತ್ತೋಟೇಶ್ವರ ದೇವರಿಗೆ ಚಿಕ್ಕರೆಯ ಊರಿನ ಮೂವತ್ತು ಹಳ್ಳಿಗಳ ಆದಾಯವನ್ನು ಶಿವರಾತ್ರಿಯ ಗೋಷ್ಠಿ ಪೂಜೆಗೆ ದಾನ ಮಾಡಿದರು.[೯೪] ಕ್ರಿ.ಶ.೧೪೦೫ರ ಒಂದನೆಯ ದೇವರಾಯನ ಶಾಸನವು ಶಿವರಾತ್ರಿಯ ಪವಿತ್ರ ದಿನದಂದು ಚಿತ್ತೂರು ಜಿಲ್ಲೆಯಲ್ಲಿ ಬರುವ ತಮ್ಮಡಿಯ ಹಳ್ಳಿಯ ಆದಾಯವನ್ನು ೨೫ ಹೊನ್ನಿನ ರೂಪದಲ್ಲಿ ತನ್ನ ಅಧಿಕಾರಿಗಳಿಂದ ಕಂಪಣವೂಡೆಯ, ಬುಕ್ಕಣವೂಡೆಯ ಇವರಿಗೆ ಕೊಟ್ಟ ತನ್ನ ಅನುಮತಿಯಿಂದ ಅರಮನೆಯಲ್ಲಿನ ಶಿವರಾತ್ರಿ ಉತ್ಸವವನ್ನು ಸಂಭ್ರಮದಿಂದ ಆಚರಿಸಿದರು.[೯೫] ಮುಂದೆ ಈ ವ್ಯವಸ್ಥೆಯನ್ನು ಒಂದನೆಯ ದೇವರಾಯನ ನಂತರ ಬಂದ ಎರಡನೆಯ ದೇವರಾಯನು ಮುಂದುವರೆಸಿಕೊಂಡು ಬಂದ, ತಮ್ಮಡಿ ಹಳ್ಳಿಯ ಆದಾಯ ಚಂದ್ರಗಿರಿಯ ಮಲ್ಲಿಕಾರ್ಜುನ ದೇವರಿಗೆ ಶಿವರಾತ್ರಿ ಉತ್ಸವ ಆಚರಿಸಲು ದತ್ತಿಯನ್ನಾಗಿ ಕೊಟ್ಟನು.

ಅದೇ ರೀತಿಯಾಗಿ ಎರಡನೆಯ ದೇವರಾಯನ ಆಳ್ವಿಕೆಯಲ್ಲಿ ಪೆರುಮಾಳ ದೇಶ ದಂಣಾಯಕರು ಬಾರಕೂರ ಪ್ರದೇಶವನ್ನಾಳುವ ಚಂಡರಸ ಒಡೆಯರು ಮತ್ತು ಅರಸನು ಕೂಡಿ ಕೂಟಕೇರಿಯ ಪಂಚಲಿಂಗೇಶ್ವರ ದೇವಾಲಯದಲ್ಲಿ ಮತ್ತು ಮಾರ್ಕಂಡೇಶ್ವರ ದೇವಾಲಯದಲ್ಲಿ ಶಿವರಾತ್ರಿಯ ಪುಣ್ಯ ಕಾಲದಲ್ಲಿ ವಿಶೇಷ ಪೂಜೆ, ಅಭಿಷೇಕ ನಡೆಯುವಂತೆ ಅರಸನು, ದಂಣಾಯಕರು ದಾನ ದತ್ತಿ ನೀಡಿದ ವಿವರವಿದೆ.[೯೬] ಇದಲ್ಲದೆ ಪ್ರೌಢದೇವರಾಯನು ನಂಜನಗೂಡಿನ ಪ್ರಸಿದ್ಧ ಶ್ರೀ ನಂಜುಂಡೇಶ್ವರ ಸ್ವಾಮಿಗೆ ಶಿವರಾತ್ರಿಯ ಉತ್ಸವ ದಿನದಂದು ಅಮೃತಪಡಿ, ನೈವೇದ್ಯ, ದೀಪಾರಾದನೆಗೆ ಪೋಲಿನ ಹಳ್ಳಿಯ ಸುಂಕವನ್ನು ವಾರಣಾಸಿ ಕೆಂಪ ದೇವರ ಸಣ್ಣನವರನ್ನು ಕೇಳಿ ತಿರುಮಲೆರಾಯ ಮಹಾರಾಯರಿಗೆ ಪುಣ್ಯವಾಗಲೆಂದು ಕ್ರಿ.ಶ. ೧೫೭೯ ಜನವರಿ ೭ ಶಿವರಾತ್ರಿ ದಿನದಂದು ದಾನ ಮಾಡಿದರು.[೯೭]

ಹಾಗೆ ಮುಂದೆ ಬಂದ ಕೃಷ್ಣದೇವರಾಯನೂ ತನ್ನ ಪೂರ್ವಜರಂತೆ ತಾನೂ ಶಿವರಾತ್ರಿ ಹಬ್ಬದ ಪ್ರಯುಕ್ತ ದಾನದತ್ತಿ ನೀಡಿರುವುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಕೃಷ್ಣದೇವರಾಯ ಮಹಾರಾಯನು ಆಳುತ್ತಿರುವಾಗ ಶಿವರಾತ್ರಿ ಪುಣ್ಯಕಾಲದಲ್ಲಿ ಕಕುದ್ಗಿರಿಯೆಂದು ಹೆಸರು ಪಡೆದು ಶಿವಗಂಗೆಯ ಗಂಗಾಧರೇಶ್ವರ ದೇವರ ಸೇವೆಗಾಗಿ ದಾನ ಮಾಡುತ್ತಾನೆ.[೯೮] ಅದೇ ರೀತಿ ಕೃಷ್ಣದೇವರಾಯನು ಅಮರನಾಯಕತನಕ್ಕಾಗಿ ಆದವಾನಿ ದುರ್ಗವನ್ನು ದಾಟಿ ನಾಯಕರ ಮಗ ಸುಂಕಣನಾಯಕರಿಗೆ ನೀಡುತ್ತಾನೆ. ಇವನು ಬೆಳುಗಲ್ಲ ಬಂಡೆಯ ವೀರಭದ್ರ ದೇವರಿಗೆ, ಕೆರೆಬೆಳಗಲ್ಲು ಪಶ್ಚಿಮಕ್ಕೆ ಹೊಲವನ್ನು ದಾನವಾಗಿ ನೀಡುತ್ತಾನೆ. ಈ ದಾನ ಕೃಷ್ಣದೇವರಾಯನಿಗೆ ಪುಣ್ಯವಾಗಲೆಂದು ಶಿವರಾತ್ರಿ ದಿವಸ ದಾನವಾಗಿ ನೀಡಲಾಗಿದೆ.[೯೯]

ಹಾಗೆಯೇ ಉಮ್ಮತ್ತೂರಿನ ಅಧಿಕಾರಿಯಾದ ವೀರ ನಂಜರಾಯ ಒಡೆಯನು ಆತನ ಮಗ ಚನ್ನನಂಜರಾಯ ಒಡೆಯನು ಮಾದಿಹಳ್ಳಿ ಎಂಬ ಗ್ರಾಮಕ್ಕೆ ದಾನವನ್ನು ನೀಡಿ ಚನ್ನನಂಜರಾಯಪುರ ಎಂದು ಅದಕ್ಕೆ ನಾಮಕರಣ ಮಾಡಿದನು. ಮುಂದೆ ಈ ಗ್ರಾಮವನ್ನು ಕಂಚಿಯ ಸಿಂಗಾವರ್ಯರ ಮಕ್ಕಳಿಗೆ ದಾನ ನೀಡಲಾಯಿತು. ಅವರು ಇದನ್ನು ಅಗ್ರಹಾರವನ್ನಾಗಿ ಮಾಡಿದರು. ಮತ್ತು ಈ ಗ್ರಾಮದಿಂದ ಬರುತ್ತಿದ್ದ ತೆರಿಗೆಯ ಹಣವನ್ನು ಅವರು ಶಿವನ ಸಮುದ್ರದ ಸೋಮೇಶ್ವರ ದೇವಾಲಯಕ್ಕೆ ಶಿವರಾತ್ರಿ ಹಬ್ಬದಂದು ಉತ್ಸವ ಆಚರಿಸಲು ಕೊಡುತ್ತಿದ್ದರು.[೧೦೦] ರಾಯನು ಬಳ್ಳಾರಿ ಜಿಲ್ಲೆಯಲ್ಲಿ ಬರುವ ಯಳವೆ ಸೀಮೆಯಲ್ಲಿ ನಡೆದ ಮದುವೆಯ ಕಲಹದಲ್ಲಿ ಭಾಗವಹಿಸಿ ಅದನ್ನು ನಿವಾರಿಸಿ ಅವರ ಹೆಸರಿನ ಮೇಲೆ ಮದುವಣಿಗೆ ಕೊಟ್ಟ ಕಾಣಿಕೆಯಂದು ಶಾಸನ ಹಾಕಿಸಿ ಶಿವರಾತ್ರಿ ಆಚರಣೆಯನ್ನು ಮಾಡಿದನು. ಅದೇ ರೀತಿ ದಂಡನಾಯಕರು ದಾನಕೊಟ್ಟ ವಿವರವಿದೆ.[೧೦೧]

ಕೃಷ್ಣದೇವರಾಯನ ದಂಡನಾಯಕನಾದ ಸಾಳುವ ಗೋವಿಂದ ರಾಜಗಳು ತಮಗೆ ನಾಯಕತ್ವವನ್ನು ದೊರಕಿಸಿ ಕೊಟ್ಟದ್ದಕ್ಕಾಗಿ ತಮ್ಮ ಪ್ರಾಂತದ ಉಮ್ಮತ್ತೂರ ರಾಜ್ಯದ ಹೊಸವಾಡ ಸ್ಥಳದ ಕಲಿಯುಗ ವಾಡಿಯ ಗ್ರಾಮವನ್ನು ಶಿವರಾತ್ರಿಯ ಪುಣ್ಯ ಕಾಲದಲ್ಲಿ ಉಂಬಳಿಯಾಗಿ ವಿರೂಪಾಕ್ಷ ದೇವಾಲಯಕ್ಕೆ ಕ್ರಿ.ಶ. ೧೫೨೨ ಜನವರಿ ೨೬ರಂದು ನೀಡಿ ಈ ಉತ್ಸವವು ಪ್ರತಿವರ್ಷ ಆಚರಿಸಲು ದತ್ತಿಯನ್ನು ಕೊಡಲಾಯಿತು.[೧೦೨] ಕ್ರಿ.ಶ. ೧೫೪೮ರ ಸದಾಶಿವರಾಯನ ಶಾಸನ ಹಾಸನ ಸೀಮೆಯ ಬೇಲೂರು ಚನ್ನಕೇಶವ ದೇವರ ರಥೋತ್ಸವ ಮತ್ತು ಶಿವರಾತ್ರಿಯಂದು ನಡೆಯುತ್ತದೆ. ಇದಕ್ಕೆ ಚಿಕ್ಕ ಸಿಂಗಪ್ಪನಾಯಕನು ಗೋವಿಂದನಹಳ್ಳಿ ಮತ್ತು ಚಿಕ್ಕಗೊಂಡನ ಹಳ್ಳಿಗಳನ್ನು ದಾನ ಮಾಡಿದನು. ಬಾರಕೂರ ಪ್ರದೇಶದಲ್ಲಿ ಆಡಳಿತ ಮಾಡುತ್ತಿದ್ದ ಕಲ್ಲೇಯ ಎಲ್ಲಪ್ಪ ಒಡಯರು ಕೋಟೇಶ್ವರ ದೇವರ ಸನ್ನಿಧಿಯಲ್ಲಿ ಬಸರೂರಿನ ಪಡುವ ಕೇರಿಯ ಗಣಪಶೆಟ್ಟರ ಮಗ ಚೇತುಶೆಟ್ಟಯು ಶಿವರಾತ್ರಿ ಪುಣ್ಯ ಕಾಲದಲ್ಲಿ ಒಂದು ಮಠ ಕಟ್ಟಿಸಿ ಮತ್ತು ಆ ಮಠದಲ್ಲಿ ಜರುಗುವ ಧಾರ್ಮಿಕ ವಿದಿ ವಿಧಾನಗಳಿಗೆ ಶ್ರೀ ಕೋಟೇಶ್ವರ ದೇವರ ಅಭಿಷೇಕಕ್ಕೆ ಶಿವರಾತ್ರಿ ಉತ್ಸವಕ್ಕೆ ದಾನ ನೀಡಿದರು. ಸದಾಶಿವರಾಯನು ರಾಜಕೀಯವಾಗಿ ಅಷ್ಟೊಂದು ವಿಜಯನಗರ ಸಾಮ್ರಾಜ್ಯದಲ್ಲಿ ಹೆಸರು ಗಳಿಸದಿದ್ದರೂ ಕೊಡ ದಾನಧರ್ಮಗಳಲ್ಲಿ ಇನ್ನುಳಿದ ಅರಸರಿಗಿಂತಲೂ ಮೇಲೂ ಆಗಿದ್ದಾನೆ. ಎಂಬುದಕ್ಕೆ ಇವನ ಶಾಸನಗಳೇ ಸಾಕ್ಷಿ.

ಈತನು ಶೈವ ಧರ್ಮದ ಎಲ್ಲಾ ಹಬ್ಬಗಳನ್ನು ಆಚರಿಸಲು ಪವಿತ್ರ ದಿನದಂದು ತನ್ನ ಸಾಮಂತರಿಗೆ, ಪ್ರಜೆಗಳಿಗೆ ಹೇರಳವಾಗಿ ಧನ ಕನಕಗಳನ್ನು ಕೊಡುತ್ತಿದ್ದನು.[೧೦೩] ಶ್ರೀ ವೆಂಕಟಪತಿರಾಯನು ರಾಜ್ಯಭಾರ ಮಾಡುತ್ತಿರುವಾಗ ಹೆಂಜೆರು ಪಟ್ಟಣದ ದೊಡ್ಡ ಹಲಗಯ್ಯನ ಮಗನಾದ, ಚಿಕ್ಕಯ, ಚಿಗ ಚಿಕ್ಕಯ ಈತನು ಶೈವರ ಪುಣ್ಯ ಕ್ಷೇತ್ರವಾದ ಶ್ರೀಶೈಲ ಮಲ್ಲಿಕಾರ್ಜುನ ದೇವರಿಗೆ ಶಿವರಾತ್ರಿ ಹಬ್ಬದ ಪುಣ್ಯ ಕಾಲದಲ್ಲಿ ಕಬ್ಬಿಣದ ದೀಪ ಮಾಲೆಯ ಸ್ತಂಭವನ್ನು ಮಾಡಿಕೊಟ್ಟಿರುವುದಿದೆ.[೧೦೪] ಪ್ರೌಢದೇವರಾಯನ ಕಾಲದ ಶಾಸನ ಇದು ಬಹಳ ವಿಶೇಷವಾಗಿದೆ. ಶಿವರಾತ್ರಿಯ ದಿವಸ ಉಪವಾಸವಿದ್ದು ದೇವರ ಬನದಲ್ಲಿನ ದೇವಾಲಯದಲ್ಲಿ ಜಾಗರಣೆಯನ್ನು ನಡೆಸುತ್ತಿದ್ದಾಗ ಆ ದೇವಾಲಯಕ್ಕೆ ಕಳ್ಳರು ಬಂದು ದಾಳಿ ಮಾಡುವರು. ಆ ಸಮಯದಲ್ಲಿ ಮಲ್ಲಯ್ಯನು ಕಳ್ಳರೊಂದಿಗೆ ಹೋರಾಡಿ ಅವರನ್ನು ಗಾಯಮಾಡಿ ತಾನೂ ಕೊಡ ಗಾಯಗೂಳ್ಳವನು. ಗಾಯಗೊಂಡ ಮಲ್ಲ, ಪಾಡ್ಯದ ದಿವಸ ಶುಕ್ರವಾರ ಮರಣ ಹೊಂದುತ್ತಾನೆ. ಇವನ ತಮ್ಮ ಮಂಜಯಣ ಅಣ್ಣನ ನೆನಪಿಗೋಸ್ಕರ ಈ ವೀರಗಲ್ಲನ್ನು ನೆಡೆಸುತ್ತಾನೆ.[೧೦೫]

ಶಿವರಾತ್ರಿ ಆಚರಣೆಗೆ ಸಂಬಂಧಿಸಿದಂತೆ ಇನ್ನೂ ಅನೇಕ ಶಾಸನಗಳಿವೆ ದೇವಸ್ಥಾನದ ದತ್ತಿ ಮತ್ತು ಬ್ರಾಹ್ಮಣರ ದತ್ತಿಗಳಿಗೆ ಸಂಬಂಧಿಸಿದಂತೆ ಶಿವರಾತ್ರಿ ಸಮಯದಲ್ಲಿ ಔಬಳರಾಜ ಒಡೆಯರ್‌ನಿಂದ ರಚಿತವಾದ ಶಾಸನದಲ್ಲಿ ಶಿವರಾತ್ರಿಯಲ್ಲಿ ಹರಿಹರ ದೇವನ ಅಲಂಕಾರ ಮತ್ತು ಆಚರಣೆಗಳಿಗಾಗಿ ಸೌಕರ್ಯ ಕಲ್ಪಿಸಿದ ವಿಷಯವಿದೆ. ಕ್ರಿ.ಶ. ೧೪೫೯ರ ಶಾಸನವು ರಾಮಗೌಡನ ೨೦೦೦ ಅಡಿಕೆ ಮರಗಳ ಭೂಮಿಯನ್ನು ಸಿಂದ್‌ಗಂಡಿಗೆಯಾಗಿ ಪಡೆದದ್ದಾಗಿ ತಿಳಿಸಿದೆ. ಹೀಗೆ ಶಿವರಾತ್ರಿ ಹಬ್ಬದ ಆಚರಣೆ ವಿಜಯನಗರ ಕಾಲದಲ್ಲಿ ಅತಿ ಉತ್ಸಾಹ ಮತ್ತು ವಿಜೃಂಭಣೆಯಿಂದ ಆಚರಿಸುತ್ತಿದ್ದರು ಅಂದಿನ ದಿನ ದೇವಾಲಯಗಳಲ್ಲಿ ಜಾಗರಣೆ, ಮಾಡುತ್ತಾ ಹಾಡು, ಭಜನೆ, ಪೂಜೆ, ಇತ್ಯಾದಿಗಳೊಂದಿಗೆ ಆ ದಿನ ರಾತ್ರಿಯನ್ನು ಸಂಭ್ರಮದಿಂದ ಕಳೆಯುತ್ತಿದ್ದರು ಈ ಎಲ್ಲಾ ವೆಚ್ಚಗಳನ್ನು ಭರಿಸಲು ಅರಸರಾಧಿಯಾಗಿ ದಂಡನಾಯಕರು ಆದಿನ ದೇವಾಲಯಗಳಿಗೆ ಭೂಮಿ, ಧನ ಕನಕ, ಇತ್ಯಾದಿಗಳನ್ನು ದಾನ ಬಿಟ್ಟಿರುವುದು ಮೇಲಿನ ಶಾಸನಗಳಿಂದ ವಿಧಿತವಾಗುತ್ತದೆ.

ವಸಂತೋತ್ಸವ ಆಚರಣೆ (ಹೋಳಿ)

ವಿಜಯನಗರದ ಪ್ರಮುಖ ಹಬ್ಬಗಳಲ್ಲಿ ಇದು ಒಂದು. ಇದನ್ನು ವಿವಿಧ ಹೆಸರುಗಳಾದ ಹೋಳುಕ, ಹೋಳಿಕ, ಹೋಳಿ, ಫಾಲ್ಗುನಿಕಾ, ವಸಂತೋತ್ಸವ, ಕಾಮನಹಬ್ಬ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಈ ಹಬ್ಬ ಭಾರತ ದೇಶದ ಎಲ್ಲಾ ಕಡೆಗಳಲ್ಲಿಯೂ ಆಚರಿಸಲ್ಪಡುತ್ತದೆ. ಇದು ಆಚರಿಸುವ ದಿನ, ವಿಧಾನಗಳಲ್ಲಿ ವ್ಯತ್ಯಾಸಗಳಿದ್ದರೂ ಆಚರಣೆ ಮಾತ್ರ ಎಲ್ಲಾ ಕಡೆಗಳಲ್ಲಿದೆ. ಫಾಲ್ಗುಣ ಪೌರ್ಣಮಿಯಂದು ಆಚರಿಸುವ ಈ ಹಬ್ಬಕ್ಕೆ ಪುರಾಣಗಳಲ್ಲಿ ನಾನಾ ಕಥೆಗಳು ಕಂಡುಬರುತ್ತವೆ. ಒಂದು ಐತಿಹ್ಯದ ಪ್ರಕಾರ ಹೋಳಿಕಾ ಎಂಬುವವಳು ಹಿರಣ್ಯಾಕ್ಷ ಹಿರಣ್ಯಕಶಿಪು ಅವರ ಸೋದರಿ. ಮಹಾಮಾಯಾವಿನಿ ಮತ್ತು ಅಗ್ನಿ ಸಿದ್ಧಿಯುಳ್ಳವಳು ಅಗ್ನಿಯಲ್ಲಿ ಕುಳಿತರೂ ದೇಹಕ್ಕೆ ಯಾವ ಆಪಾಯವೂ ಒದಗದಿರುವ ಶಕ್ತಿಯನ್ನು ಹೊಂದಿದ್ದಳು.

ದೈತ್ಯರಾಜ ಹಿರಣ್ಯಕಶಿಪುವು ಮಹಾವಿಷ್ಣುಭಕ್ತನಾಗಿದ್ದ. ತನ್ನ ಪುತ್ರ ಪ್ರಹ್ಲಾದನನ್ನು ಸಂಹರಿಸಲು ನಾನಾ ಪ್ರಯತ್ನಗಳನ್ನು ಮಾಡಿದರೂ ಅದು ಸಾಧ್ಯವಾಗಲಿಲ್ಲ. ಆಗ ಆತನು ತನ್ನ ಸೋದರಿಗೆ ಆಜ್ಞೆ ಹೀಗೆ ಮಾಡಿದನು. ನೀನು ಪ್ರಹ್ಲಾದನನ್ನು ಹಿಡಿದುಕೊಂಡು ಉರಿಯುತ್ತಿರುವ ಬೆಂಕಿಯಲ್ಲಿ ಕುಳಿತುಕೊ. ಆಗ ಪ್ರಹ್ಲಾದ ಸುಟ್ಟು ಹೋಗುವನು. ನೀನು ಎಂದಿನಂತೆ ಅಪಾಯವಿಲ್ಲದೆ. ಹೊರಗೆ ಬರುವೆ ಅಣ್ಣನ ಅಣತಿಯಂತೆ ಶಿರಸಾವಹಿಸಿ ಹೋಳಿಕೆ ಪ್ರಹ್ಲಾದನನ್ನು ಅಪ್ಪಿ ತೊಡೆಯ ಮೇಲೆ ಕೂರಿಸಿಕೊಂಡು ತನ್ನ ಮೇಲೆ ಕಟ್ಟಿಗೆಯ ರಾಶಿಗಳನ್ನು ಹಾಕಿ ಬೆಂಕಿ ಹಚ್ಚಲು ರಾಕ್ಷಸರಿಗೆ ಹೇಳಿದಳು. ಅದರಂತೆಯೇ ಬೆಂಕಿಯು ಹಚ್ಚಿಸಲ್ಪಡಲು ಪರಿಣಾಮವು ಹೋಳಿಕೆಯು ತಿಳಿದುಕೊಂಡಿದ್ದಕ್ಕೆ ವಿರುದ್ಧವಾಯಿತು.

ಪ್ರಹ್ಲಾದನು ವಿಷ್ಣು ಭಕ್ತಿಯ ಬಲದಿಂದ ಯಾವ ತಾಪಕ್ಕೂ ಒಳಗಾಗದೆ ಸುಖವಾಗಿ ಕುಳಿತಿದ್ದ. ಬೆಂಕಿಯ ಝುಳದಿಂದ ಹೋಳಿಕೆ ತಾಪದಿಂದ ಕೂಗಿಕೊಳ್ಳುತ್ತಿದ್ದರೂ ರಾಕ್ಷಸರು ಆಕೆಯು ಪ್ರಹ್ಲಾದನ ಮೇಲಿನ ಕರುಣೆಯಿಂದ ಹಾಗೆ ಕೂಗಿಕೊಳ್ಳುತ್ತಿರುವಳೆಂದು ಭಾವಿಸಿ ಮತ್ತೂ ಹೆಚ್ಚಾಗಿ ಕಟ್ಟಿಗೆಯನ್ನು ಬೆಂಕಿಗೆ ಹಾಕತೊಡಗಿದರು. ಕೊನೆಗೆ ಹೋಳಿಕಾ ರಾಕ್ಷಸಿಯ ಮೂಳೆಗಳೂ ಉಳಿಯದ ಹಾಗೆ ಪೂರ್ಣವಾಗಿ ಸುಟ್ಟು ಹೋದಳು. ಪ್ರಹ್ಲಾದನು ಸಂತೋಷದಿಂದ ಬೂದಿಯ ರಾಶಿಯಿಂದ ಹೊರಕ್ಕೆ ಬಂದು ಭಗವಂತನ ಭಜನೆ ಮಾಡತೊಡಗಿದ. ಹೋಳಿಕಾ ಎಂಬ ಆ ದುಷ್ಟ ರಾಕ್ಷಸಿಯು ತನ್ನ ಪಾಪ ಕರ್ಮಕ್ಕೆ ಫಲ ಅನುಭವಿಸಿ ಸತ್ಪುರುಷನ ರಕ್ಷಣೆಯಾದುದರ ಸ್ಮೃತಿಗಾಗಿ ಈ ಕಟ್ಟಿಗೆ ಹಾಕಿ ಸುಡುವ ಹಬ್ಬ ಪ್ರಾರಂಭವಾಯಿತು.[೧೦೬]

ಮತ್ತೊಂದು ಪ್ರಸಿದ್ಧವಾದ ಕಥೆ ಶಿವನು ಮಾಡಿದ ಕಾಮದಹನಕ್ಕೆ ಸಂಬಂಧಿಸಿದ್ದು. ತಪಸ್ಸಿನ ಸಮಾಧಿಯಲ್ಲಿ ಮಗ್ನನಾಗಿದ್ದ ರುದ್ರದೇವರ ಮನಸ್ಸನ್ನು ಕಲುಕಲು ಪ್ರಯತ್ನಿಸಿದ ಆ ಕಾಮದೇವ ಆತನ ಲಾಲಾಟದಿಂದ ಒಂದು ಅಗ್ನಿಯಲ್ಲಿ ಸುಟ್ಟು ಕಾಮದೇವನು ಬೂದಿಯಾದ ಕಥೆ ಎಲ್ಲಾ ಪುರಾಣೇತಿಹಾಸಗಳಲ್ಲೂ ಕಂಡುಬರುತ್ತದೆ.[೧೦೭] ಆ ಕಾಮದಹನದ ಸ್ಮೃತಿಗಾಗಿ ಅಂದು ಬೆಂಕಿಯನ್ನು ಹಚ್ಚಿ ಸುಡುವ ಪದ್ಧತಿಯುಳ್ಳ ಹೋಳಿ ಹಬ್ಬದ ಆಚರಣೆ ಈ ರೀತಿ ಇನ್ನೂ ಅನೇಕ ಐತಿಹ್ಯಗಳಿವೆ. ಫಾಲ್ಗುಣ ಮಾಸದಲ್ಲಿ ಆಚರಿಸುವುದರಿಂದ ಈ ಹಬ್ಬವು ಫಾಲ್ಗುಣಿಕಾ ಎನಿಸುತ್ತದೆ. ಹೋಳಿಕಾ ಮುಂತಾದವು ರಾಕ್ಷಸಿಯ ಅಥವಾ ಭಕ್ಷ ವಿಶೇಷದ ಕಾರಣದಿಂದ ಬಂದ ಹೆಸರುಗಳೂ. ವಸಂತದ ಮಿತ್ರನಾದ ಕಾಮದೇವನು ಪೂಜೆ ನಡೆಯುವುದರಿಂದ ವಸಂತೋತ್ಸವವೆಂದು, ಕಾಮನ ಹಬ್ಬವೆಂದೂ ಕರೆಯಲ್ಪಡುತ್ತದೆ. ಓಕುಳಿ, ವಸಂತೋತ್ಸವ ಎಂದು ಈ ಹಬ್ಬವನ್ನು ಕರೆಯುತ್ತಾರೆ. ಅಂದು ನಗುತ್ತಾ, ನಲಿಯುತ್ತಾ ಆಚರಿಸುತ್ತಾರೆ ಮತ್ತು ಕೃಷ್ಣನು ಗೋಪಿಕಾ ಸ್ತ್ರೀಯರೋಡನೆ ಆಟಗಳ ಅನುಕರಣೆ ಇದಾಗಿದೆ ಎಂದು ತೊಗೂಯ್ಯಾಲೆ ಆಟವನ್ನು ಆಡುತ್ತಾರೆ. ಅಂದರೆ ದೇವರ (ಕೃಷ್ಣ) ಮೂರ್ತಿಯನ್ನು ಉಯ್ಯಾಲೆಯಲ್ಲಿ ಇಟ್ಟು ಅದನ್ನು ವಿಶೇಷವಾಗಿ ಸಿಂಗರಿಸಿ ಜೋಕಾಲಿ ತೂಗುತ್ತಾ ಹಾಡುತ್ತಾರೆ. ಇದಕ್ಕಾಗಿಯೇ ವಿಶೇಷ ಹಾಡುಗಳನ್ನು ಕಟ್ಟಿರುತ್ತಾರೆ.[೧೦೮] ವಿಜಯನಗರ ಕಾಲದಲ್ಲಿ ಈ ಹಬ್ಬವನ್ನು ಬಹು ವಿಶೇಷ ಹಾಗೂ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಎಂಬುದಕ್ಕೆ ಆ ಕಾಲದ ಶಿಲ್ಪ, ವಿದೇಶಿ ಪ್ರವಾಸಿಗರ ಬರವಣಿಗೆ, ಶಾಸನ, ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗೊಂಡ

ವರದಿಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ವಿಜಯನಗರ ಅವಧಿಯಲ್ಲಿ ಎರಡು ರೀತಿಯ ವಸಂತೋತ್ಸವವನ್ನು ಆಚರಿಸಲಾಗುತ್ತಿತ್ತು. ಒಂದು ಬ್ರಹ್ಮೋತ್ಸವದ ಅಂಗವಾಗಿ ಹಾಗೂ ಎರಡನೆಯದ ಸ್ವತಂತ್ರವಾಗಿ ಬ್ರಹ್ಮೋತ್ಸವಂ ಉತ್ಸವ ಆರನೆಯ ದಿನ ವಸಂತೋತ್ಸವ ಆಚರಿಸಲಾಗುತ್ತಿತ್ತು.[೧೦೯] ಹೀಗೆ ವಿಜಯನಗರ ಕಾಲದಲ್ಲಿ ಈ ಹಬ್ಬವನ್ನು ಬಹು ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸಲಾಗುತ್ತಿತ್ತು.

ಬ್ರಹ್ಮೋತ್ಸವ

ಈ ಹಬ್ಬದಂದು ವಿಶೇಷ ಪೂಜೆಯನ್ನು ಮಾಡುತ್ತಿದ್ದರು. ಆ ದಿನ ರಾತ್ರಿ ದೇವರನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೇರವಣಿಗೆ ತೆಗೆದುಕೊಂಡು ಹೋಗಲಾಗುತ್ತಿತ್ತು. ಹಾಗೂ ಸಂತೋಷದ ಸಂಕೇತವಾಗಿ ಶ್ರೀಗಂಧದ ಪುಡಿಯನ್ನು ಹಂಚಲಾಗುತ್ತಿತ್ತು. ಈ ಬ್ರಹ್ಮೋತ್ಸವಂ ಉತ್ಸವಗಳ ಸಂಖ್ಯೆ ಹೆಚ್ಚಿದಂತೆ ವಿಜಯನಗರ ಕಾಲದಲ್ಲಿ ಇದರ ಪ್ರಭಾವ ಸ್ವಲ್ಪ ಕಡಿಮೆಯಾಗಿ ವಸಂತೋತ್ಸವಗಳು ಹೆಚ್ಚಾದವು ಈ ರೀತಿಯ ಬ್ರಹ್ಮೋತ್ಸವಂ ಉತ್ಸವದ ಭಾಗವಾಗಿ ನೇರವೇರಿಸುವ ವಸಂತೋತ್ಸವಗಳಲ್ಲದೆ. ಸ್ವತಂತ್ರ ವಸಂತೊತ್ಸವಗಳನ್ನು ಫಾಲ್ಗುಣ ಮಾಸದಲ್ಲಿ ಮೂರರಿಂದ ಐದು ದಿನಗಳವರೆಗೆ ಆಚರಿಸಲಾಗುತ್ತಿತ್ತು. ಪ್ರತಿ ದಿನ ಬೇರೆ ಬೇರೆ ವಾಹನಗಳಲ್ಲಿ ಮೂರ್ತಿಯನ್ನು ಮೇರವಣಿಗೆ ಮಾಡಲಾಗುತ್ತಿತ್ತು. ಕ್ರಮವಾಗಿ ಅವು ಕೆಳಗಿನಂತಿವೆ. ಮೊದಲ ದಿನ ವಿಶೇಷವಾಹನ, ಎರಡನೆಯ ದಿನ ಹಂಸ ವಾಹನ, ಮೂರನೆಯ ದಿನ ಗರುಡ ವಾಹನ, ನಾಲ್ಕನೆಯ ದಿನ ವೈಕುಂಟ ವಾಹನ, ಐದನೆಯ ದಿನ ಗಜವಾಹನ.[೧೧೦] ಈ ರೀತಿಯಾಗಿ ಐದು ದಿನ ಬೇರೆ ಬೇರೆ ವಾಹನದಲ್ಲಿ ದೇವತೆಗಳ ಮೂರ್ತಿಯನ್ನಿಟ್ಟು ಉತ್ಸವದಲ್ಲಿ ಜನಸಾಮಾನ್ಯರಾದಿಯಾಗಿ ಎಲ್ಲರು ವಿಜೃಂಭಣೆಯಿಂದ ನೃತ್ಯ, ಗೀತಾ ವಾದನಗಳೊಂದಿಗೆ ಮೇರವಣಿಗೆ ಮಾಡುತ್ತಿದ್ದರು. ವಿಶೇಷವಾಗಿ ತಯಾರಿಸಿದ ವಸಂತ ಮಂಟಪದಲ್ಲಿ ದೇವರ ಮೂರ್ತಿಗಳನ್ನಿಟ್ಟು ಶ್ರೀಗಂಧ ಹಾಗೂ ಕುಂಕುಮ ಮಿಶ್ರಿತ ನೀರು ಮೂರ್ತಿಗಳಿಗೆ ಹಾಕಿದ ಮೇಲೆ ಆಗ ಎಲ್ಲಾ ವರ್ಗದ ಜನರು ಬೇದ ಭಾವವನ್ನು ಮರೆತು ಸಂತೋಷದಿಂದ ಮೆರವಣಿಗೆಯ ಜೊತೆ ನೃತ್ಯ ಮಾಡುತ್ತಾ ಓಕುಳಿ ಎರಚಾಟ ಆಡುತ್ತಿದ್ದರು. ವಸಂತೋತ್ಸವದ ಆಚರಣೆಯಲ್ಲಿ ಒಂದು ಮುಖ್ಯ ಸಂಕೇತವೆಂದರೆ ಓಕುಳಿಯ ಎರಚಾಟ, ಓಕುಳಿಯೆಂದರೆ ಕೆಂಬಣ್ಣದ ನೀರು ಸಂಸ್ಕೃತದಲ್ಲಿ ವಸಂತ ಶಬ್ದಕ್ಕೂ ಇದೇ ಅರ್ಥವಿದೆ.

ನಮ್ಮ ಕಾವ್ಯಗಳಲ್ಲಿ ಚಿತ್ರಿತವಾಗಿರುವ ವಸಂತೋತ್ಸವವು ಬಣ್ಣದ ನೀರಿನ ಎರೆಚಾಟದಿಂದಲೇ ಕೊನಗೊಳ್ಳುವುದು. ಈ ಎರಚಾಟದಲ್ಲಿ ನರ ನಾರಿಯರೆಲ್ಲರೂ ಭಾಗವಹಿಸುತ್ತಿದ್ದ ದಾಖಲೆಗಳಿವೆ. ಭಾರತೀಯ ಸಂಸ್ಕೃತಿಯಲ್ಲಿ ಬಹುಜನರ ಸಂತೋಷ, ಉಲ್ಲಾಸ ಉತ್ಸಾಹಗಳನ್ನು ಬಹಿರಂಗವಾಗಿ ಪ್ರಕಟಿಸುವ ಸಂಕೇತವೆಂದರೆ ಅಂದು ಈ ವಸಂಸೋತ್ಸವವೆಂದು ಹೇಳಬಹುದು. ಅದು ದೈವಿಕ ಮತ್ತು ಲೌಕಿಕ ಸಮಾರಂಭಗಳಲ್ಲಿ ಸಮಾನ ಸ್ಥಾನವನ್ನು ಪಡೆದು ನಿಂತಿದೆ. ಹೋಲಿ ಅಥವಾ ಓಕುಳಿ ಕುರಿತಾಗಿ ಅನೇಕ ಶಾಸನ, ಶಿಲ್ಪ ಮತ್ತು ಸಾಹಿತ್ಯದ ಉಲ್ಲೇಖಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಅಂದು ಈ ಹಬ್ಬವನ್ನು ಎಷ್ಟು ವಿಜೃಂಭಣೆಯಿಂದ ಆಚರಿಸುತ್ತಿದ್ದರು

ಎಂಬುದಕ್ಕೆ ಹಜಾರರಾಮಚಂದ್ರ ದೇವಾಲಯದ ಹೊರಭಿತ್ತಿಯ ಶಿಲ್ಪ ನೋಡಿದರೆ ಅರ್ಥವಾಗುತ್ತದೆ.

ಎರಡನೆಯ ದೇವರಾಯನ ಆಳ್ವಿಕೆಯಲ್ಲಿ ಕ್ರಿ.ಶ. ೧೪೨೦-೨೧ರಲ್ಲಿ ಇಟಲಿಯ ಪ್ರವಾಸಿಯಾದ ನಿಕೋಲೊ-ದೆ-ಕೊಂತಿ ವಿಜಯನಗರಕ್ಕೆ ಭೇಟಿಕೊಟ್ಟು ಅವನು ಅಲ್ಲಿ ತಾನು ವಿಕ್ಷೀಸಿದ ಉತ್ಸವಗಳ ಕುರಿತು ವಿವರವಾದ ವರದಿಯೊಂದನ್ನು ಬರೆದಿಟ್ಟಿರುವನು ಅವನ ಹೇಳಿಕೆಯಂತೆ ಮೂರು ದಿನಗಳ ಹಬ್ಬವಿದೆ. ಇದರಲ್ಲಿ ಎಲ್ಲರ ಮೇಲೂ ರಾಜರಾಣಿಯರನ್ನೂ ಬಿಡದೆ, ಓಕುಳಿ ನೀರನ್ನು ಎರಚುತ್ತಾರೆ. ಈ ಓಕುಳಿ ನೀರನ್ನು ಈ ಉದ್ದೇಶಕ್ಕಾಗಿಯೇ ದಾರಿಯ ಪಕ್ಕದಲ್ಲಿ ಇಟ್ಟಿರುತ್ತಾರೆ. ಓಕುಳಿ ಎರಚಿದರೂ ಎಲ್ಲರೂ ನಗುತ್ತಲೆ ಇರುತ್ತಾರೆ.[೧೧೧] ಪಿಯೊಟ್ರೋ ಡೆಲ್ಲಾ ವಾಲೆ ಈ ಹಬ್ಬವನ್ನು ಸೊರತ್‌ನಲ್ಲಿ ಗಮನಿಸಿ ಹೀಗೆ ಹೇಳಿದ್ದಾನೆ. ಭಾರತದ ಜನಾಂಗದವರಿಗೆ ಮಾರ್ಚ್ ೧೫ನೆಯ ದಿನವು ಹಬ್ಬದ ಮೊದಲ ದಿನವಾಗಿದ್ದು ಇದನ್ನು ವೈಭವದಿಂದ ವಸಂತದಲ್ಲಿ ಆಚರಿಸುತ್ತಾರೆ. ದಾರಿಗಳಲ್ಲಿ ಕುಣಿಯುತ್ತಾ ಕೇಸರಿ ನೀರು ಮತ್ತು ಕೆಂಪು ಬಣ್ಣವನ್ನು ಉತ್ಸಾಹದಿಂದ ಪರಸ್ಪರ ಎರಚಾಡುತ್ತಾ ಹಾಡುಗಳನ್ನು ಹೇಳುತ್ತಾರೆ. ನಾನು ಇದನ್ನು ಸ್ಪಾಹನ್‌ನಲ್ಲಿ ನೋಡಿದ್ದೆ ಅಲ್ಲಿಯೂ ಭಾರತ ಜನಾಂಗ ಮತ್ತು ಬನಿಯನ್ನರು ಕೂಡಿ ಆಚರಿಸುತ್ತಾರೆ.[೧೧೨] ಕೈಪಿಯತ್‌ನಲ್ಲೂ ಈ ಹಬ್ಬದ ಕುರಿತಾಗಿ ಅಚ್ಯುತರಾಯರ ದಿವಾಣಕೆ ಪೂರ್ವ ಹಳೆಕೋಟೆಗೆ ಉತ್ತರ ವಸಂತಪ್ಪರಂವಿ ಯೀಗ ಅದಕ್ಕೆ ವೋಕಳಿಕೊಂಡ ಅಂತಯಿದ್ದಾರೆ.

ಯಿದಕ್ಕೆ ಪೂರ್ವ ಪಾತ್ರದವರ ಹೊಲದೊಳಗೆ ಯಿರುವ ದೇವಮ್ಮ ದೇವಾಸ್ಥಾನವು ಯಿದಕೆ ಪೂರ್ವ ವೋಕಳಿ ಆಡುವರು

ಯೀ ದಿವಾಣಕ್ಕೆ ಪೂರ್ವ..... ರಿ ಸದರ್‍ರು ಯಿರುವ ಹವೇಲಿ ಕೋಟಿ ಯೀ ಹವೇಲಿ ವಳಗೆಯಿರ್‍ರುವುದು

ವೋಕಳಿಕೊಂಡ ನೀರು ತುಂಬೋದು[೧೧೩]

ಅಂದರೆ ಹಂಪಿಯಲ್ಲಿ ಓಕುಳಿ ಆಡುತ್ತಿದ್ದ ದಾಖಲೆ ಅದಕ್ಕಾಗಿಯೇ ಓಕಳಿ ಹೊಂಡ ಇತ್ತೇಂದು ಸ್ಪಷ್ಟವಾಗುತ್ತದೆ. ಅಂದು ರಾಜರಾಣಿಯರು ಓಕುಳಿಯಾಡುತ್ತಿದ್ದರು. ತೆಲಗು ಕವಿಯಾದ ನಂದಿ ತಿಮ್ಮಯ ಬರೆದ ಪಾರಿಜಾತ ಪಹರಣಂದಲ್ಲಿ ಶ್ರೀ ಕೃಷ್ಣದೇವರಾಯ ಅವನ ರಾಣಿಯರು ಹೋಳಿ ಹಬ್ಬ ಆಚರಿಸಿದ್ದನ್ನು ವಿವರಿಸಿದ್ದಾನೆ.

ಕೃಷ್ಣದೇವರಾಯ ತನ್ನ ರಾಣಿವಾಸದವರೊಂದಿಗೆ ವಸಂತೋತ್ಸವದ ಸಂದರ್ಭದಲ್ಲಿ ತನ್ನ ಆಸ್ಥಾನ ಕವಿಗಳೂ ಬರೆದ ಕೃತಿಗಳನ್ನು ಕೇಳುತ್ತಿದ್ದನೆಂದು ಹಾಗೂ ಸ್ವತಃ ಕೃಷ್ಣ ದೇವರಾಯ ವಿರಚಿತ ಜಾಂಬವತಿ ಕಲ್ಯಾಣವೆಂಬ ಸಂಸ್ಕೃತ ನಾಟಕದ ನಾಂದಿಯಲ್ಲಿ ವಿರೂಪಾಕ್ಷ ದೇವರ ಚೈತ್ರೋತ್ಸವದ ಸಂಬಂಧದಲ್ಲಿ ಸೇರಿದ ಸಭೀಕರ ಮುಂದೆ ಅದನ್ನು ಅಭಿನಯಿಸಲಾಯಿತೆಂದು ಹೇಳಿದೆ.[೧೧೪] ಈ ನಾಟಕದಲ್ಲಿ ವಸಂತ ಋತುವಿನ ಬಗ್ಗೆ ಉಲ್ಲೇಖಿಸಿದ್ದಾನೆ. ಇದರಲ್ಲಿ ಅರಸರು, ಮಂತ್ರಿಗಳು, ಸಾಮಂತರು ತಪ್ಪದೆ ಸೇರುತ್ತಿದ್ದರು. ಉತ್ಸವದ ವ್ಯವಸ್ಥೆಯನ್ನು ಮಂತ್ರಿಗಳು ನೋಡಿಕೊಳ್ಳುತ್ತಿದ್ದರು ಮತ್ತು ಹಬ್ಬದ ದಿನದಂದು ಮನ್ಮಥನಂತೆ ಹಲವರು ಪೋಷಾಕು ಧರಿಸುತ್ತಿದ್ದರು. ಮೆರವಣಿಗೆಯಲ್ಲಿ ಸುಂದರ ಮತ್ತು

ಅಲಂಕೃತವಾದ ಕಳಸ ಹೊರುತ್ತಿದ್ದರು. ಇದರಲ್ಲಿ ರಾಜನ ಸೈನ್ಯ, ನೃತ್ಯಗಾರರು, ಸಂಗೀತಗಾರರು, ಕವಿಗಳು ಮುಂತಾದವರೆಲ್ಲರೂ ಭಾಗವಹಿಸುತ್ತಿದ್ದರು. ಈ ಮೇರವಣಿಗೆ ರಾಜ ಸಮೇತ ಕೋಟೆಯ ಹೊರ ಬಾಗಿಲನ ತೋಟಕ್ಕೆ ಹೋಗುತ್ತಿತ್ತು. ಇಲ್ಲಿ ಕೆಲವರು ಹಾಡು ಹಾಡುತ್ತಿದ್ದರೆ, ಸಾಮಂತರ ಮತ್ತು ಪ್ರಮುಖ ಮಾಂಡಲಿಕರು ಹೂವಿನ ಗುಚ್ಚ ಮಾಡಿ ರಾಜನಿಗೆ ಕಾಣಿಕೆ ರೂಪದಲ್ಲಿ ಕೊಡುತ್ತಿದ್ದರು.[೧೧೫] ಅಂದು ದೇವಾಲಯಗಳಲ್ಲಿ ಈ ಹಬ್ಬ ತುಂಬಾ ವಿಜೃಂಭಣೆಯಿಂದ ನಡೆಯುತ್ತಿತ್ತು. ರಾಜ, ಸಾಮಂತ, ಮಾಂಡಲಿಕರು, ಈ ಉತ್ಸವ ನಡೆಯಲು ದಾನ ದತ್ತಿ ಬಿಟ್ಟ ಶಾಸನಗಳು ಇವೆ. ಸಾಮಾನ್ಯವಾಗಿ ಶಾಸನಗಳಲ್ಲಿ ಆಲಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ದೇವಾಲಯಗಳು ಅನೇಕ ಪೂಜಾ ಸೇವೆಗಳಿಗೆ ದಾನಗಳನ್ನು ಕೊಡುವಾಗ ವಸಂತೋತ್ಸವಗಳಿಗೂ ದಾನ ಕೊಟ್ಟ ಉಲ್ಲೇಖಗಳಿವೆ. ಕ್ರಿ.ಶ. ೧೨೮೧ರ ದಾಖಲೆ (ಬೇಲೂರಿನ) ಹೊಯ್ಸಳೇಶ್ವರ ದೇವರ ಓಕಳಿ ಎರಚಾಟದ ಬಗ್ಗೆ ಹೇಳುತ್ತದೆ.[೧೧೬]

ಕ್ರಿ.ಶ. ೧೪೩೮ರಲ್ಲಿ ೩೦ ಹೊನ್ನು ಶ್ರೀ ವೈಷ್ಣವ ಬ್ರಾಹ್ಮಣರಿಂದ ಶ್ರೀರಂಗಪುರದ ಶ್ರೀ ರಂಗನಾಥ ದೇವರ ವಸಂತೋತ್ಸವಕ್ಕಾಗಿ ಸಂಗ್ರಹಿಸಲಾಯಿತು.[೧೧೭] ಕ್ರಿ.ಶ. ೧೪೬೮ ರಲ್ಲಿ ದೊರೆ ಸಾಳುವ ನರಸಿಂಹನ ಸಹಾಯಕನಾಗಿದ್ದ ಅಣ್ಣಮರಸಯ್ಯನ ಪ್ರತಿನಿಧಿ ತಿಮ್ಮಿನಾಯಕನು ಮೂಸುಕೂಳುತ್ತೂರು ಹಳ್ಳಿಯಲ್ಲಿ ಸಂಗ್ರಹವಾಗಿದ್ದ ಕೆಲವೊಂದು ತೆರಿಗೆಯನ್ನು ದಕ್ಷಿಣ ಆರ್ಕಾಟ್ ಜಿಲ್ಲೆಯ ತಿರುವಡಿಯ ತಿರುವೀರಟ್ಟಣೇಶ್ವರ ದೇವರ ವಸಂತೋತ್ಸವ ವೇಚ್ಚ ನಿರ್ವಹಣೆಗಾಗಿ ನೀಡಿದ.[೧೧೮] ಕ್ರಿ.ಶ.೧೫೦೯ರ ಶಾಸನದಲ್ಲಿ ಕೃಷ್ಣದೇವರಾಯನಿಗೆ ಕೊಟ್ಟ ಬಿರುದೆಂದರೆ ಪ್ರತಿವರ್ಷ ಚಿನ್ನದ ಹಬ್ಬದ ರಾಜನಾದ ಕಾಮನಿಗೆ ಬಲಿ ಅರ್ಪಿಸುತ್ತಿದ್ದನೋ[೧೧೯] ಎಂಬುದು ೧೫೮೬ರ ದಾಖಲೆಯಲ್ಲಿ ಉದಯಗಿರಿಯಲ್ಲಿ ವಸಂತಮಹೋತ್ಸವ ಜರುಗಿದುದಾಗಿ ಹೇಳಿದೆ.[೧೨೦]

ಸದಾಶಿವರಾಯನ ಆಳ್ವಿಕೆಯಲ್ಲಿ ಕಶ್ಯಪಗೋತ್ರದ ಗೊಬ್ಬರಿ ಓಬಯ್ಯನ ಹೆಂಡತಿ ನರಸಮ್ಮಳು ತಿರುಪತಿಯ ಉತ್ತರಕ್ಕೆ ವಸಂತ ಮಂಟಪವನ್ನು ಕಟ್ಟಿಸಿದಳು ಮತ್ತು ೧೨೦ ವರಹಗಳ ಮೇಲೆ ಬರುವ ಬಡ್ಡಿ ಆದಾಯದಿಂದ ಆ ಮಂಟಪದಲ್ಲಿ ಆಹೋಬಲೇಶ್ವರ ದೇವರಿಗೆ ವಸಂತೋತ್ಸವ ಆಚರಿಸಬೇಕು ಮತ್ತು ಈ ಕಾರ್ಯ ಸರಿಯಾಗಿ ನಡೆಯುವಂತೆ ನರಸಿಂಗ ರಾಜ, ನರಸರಾಜರು, ತಿಮ್ಮರಾಜುವಿನ ಮೇಲ್ವಿಚಾರಣೆಯಲ್ಲಿ ನಡೆಯಬೇಕು ಎಂದಿದೆ.[೧೨೧] ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಚೈತ್ರಶುದ್ಧ ಬಿದಿಗೆ ರಾಮನವಮಿಯಿಂದ ೧೦ನೆಯ ದಿನದ ಅಂದರೆ ಕೊನೆಯ ದಿನ ವಸಂತೋತ್ಸವವೆಂದು ಆಚರಿಸುತ್ತಾರೆ.

ಅಂದು ಉತ್ಸವ ಮೂರ್ತಿಗಳನ್ನು ತುಂಗಾನದಿ ತೀರದಲ್ಲಿ ಜನಿವಾರ ಮಂಟಪಕ್ಕೆ ಕರೆದುಕೊಂಡು ಹೋಗುತ್ತಾರೆ. ಆಗ ೫ ಕಳಶಗಳಲ್ಲಿ ೫ ಬಣ್ಣದ ನೀರನ್ನು ತಯಾರಿಸಿ ಅಣಿಗೊಳಿಸುತ್ತಾರೆ. ಇವೆಲ್ಲವನ್ನು ಮೆರವಣಿಗೆಯಲ್ಲಿ ಮಂಗಳವಾದ್ಯ ಸಮೇತವಾಗಿ ಜನಿವಾರ ಮಂಟಪಕ್ಕೆ ತಂದಿರುತ್ತಾರೆ. ಅಲ್ಲಿ ಸ್ನಾನವಾದ ನಂತರ ದೇವರಿಗೆ ಓಕುಳಿ ಆಡಿಸುತ್ತಾರೆ. ಶ್ರೀ ಸಾಮಾನ್ಯರು ಸಂಭ್ರಮದಲ್ಲಿ ಓಕುಳಿ ಆಡುತ್ತಾರೆ. ಆ ಸಂದರ್ಭದಲ್ಲಿ ಹಾಡು, ನರ್ತನ, ವಾದ್ಯಮೇಳ ಹೀಗೆ ವಿಧವಿಧ ಗಾಯನ ನರ್ತನಗಳಿಂದ ವಸಂತೋತ್ಸವವು ಆಚರಿಸಲ್ಪಡುತ್ತದೆ. ಅಂದು ಸಂಜೆಯವರೆಗೂ ಉತ್ಸವ ಮೂರ್ತಿಗಳನ್ನು ಅದೇ ಮಂಟಪದಲ್ಲಿರಿಸುತ್ತಾರೆ. ರಾತ್ರಿಯ

ವೇಳೆಗೆ ಮತ್ತೆ ಮಂಗಳ ವಾದ್ಯ ಸಂಭ್ರಮದ ಮೆರವಣಿಗೆಯಲ್ಲಿ ದೇವಾಲಯಕ್ಕೆ ಹಿಂದಿರುಗುತ್ತಾರೆ. ಇಂದಿಗೂ ಹಂಪಿಯ ವಿರೂಪಾಕ್ಷ ದೇವಾಲಯದ ವತಿಯಿಂದಲೇ ವಸಂತೋತ್ಸವ ಆಚರಣೆ ನಡೆಯುತ್ತದೆ. ವಿದೇಶಿ ಪ್ರವಾಸಿಗರೂ ಈ ಸಂಭ್ರಮದಲ್ಲಿ ಪಾಲ್ಗೊಳ್ಳುವರು.

ವಿಜಯನಗರ ಕಾಲಕ್ಕೆ ವಸಂತೋತ್ಸವವು ಆಚರಣೆ ಉತ್ತುಂಗವನ್ನೇರಿದ ಕಾಲ. ಇದು ಶಾಸನ, ಶಿಲ್ಪಗಳಿಂದಲೂ ದೃಢಪಟ್ಟಿದೆ. ಅಂತೆಯೇ ಸಾಕಷ್ಟು ಸಾಹಿತ್ಯ ಕೃತಿಗಳು ರಚನೆಯಾಗಿವೆ. ಅವುಗಳಲ್ಲಿ ಪ್ರಮುಖವಾದವು ಅಹೋಬಲನ ವಿರೂಪಾಕ್ಷ ವಸಂತೋತ್ಸವ, ಕನಕದಾಸರ ಮೊಹನತರಂಗಿಣಿ, ಬಲಿಬಾಣಬಟ್ಟನ ಶೃಂಗಾರಭೂಷಣ, ನಂದಿ ತಿಮ್ಮಣನ ಪಾರಿಜಾತ ಪಹಣಂ, ಹೀಗೆ ಆ ಕಾಲಕ್ಕೆ ರಚಿತವಾದ ಅನೇಕ ಕನ್ನಡ, ತೆಲಗು ಕಾವ್ಯ ನಾಟಕಗಳಲ್ಲಿ ವಸಂತೋತ್ಸವದ ವಿವರಣೆ ಇದೆ. ಇಂದಿಗೂ ಇಲ್ಲಿ ನಡೆಯುವ ಪೂಜಾ ಉತ್ಸವ ಪದ್ಧತಿಯಲ್ಲಿ ಸಾಮ್ಯತೆ ಕಂಡುಬರುತ್ತದೆ. ಮೆರವಣಿಗೆ, ಆಹ್ವಾನ, ದೇವರ ಪೂಜೆ, ನದಿಯ ಹತ್ತಿರ ಮೇರವಣಿಗೆ, ಉತ್ಸವ ಮೂರ್ತಿಗಳಿಗೆ ಸ್ನಾನ, ಹಿಂದೆ ಮರಳಿ ದೇವಾಲಯಕ್ಕೆ ಬರುವಾಗ ಜನಸಾಮಾನ್ಯರ ಸಂಭ್ರಮ, ವಾದ್ಯಮೇಳ ನರ್ತನ ಮೂರ್ತಿಗಳ ಮುಂದೆ ಜನ ಓಕುಳಿ ಆಟ ಇವೆಲ್ಲವೂ ಸಾಮ್ಯತೆಯನ್ನು ತೋರಿಸಿಕೊಡುತ್ತವೆ. ಇದರಿಂದ ಒಂದು ಸಂಸ್ಕೃತಿಯು ಅನೇಕ ಶತಮಾನಗಳಾದರೂ ಜನಮಾನಸದಲ್ಲಿ ಸಮಾಜ ಕೆಲವೊಂದು ವ್ಯತ್ಯಾಸಗಳಿಗೀಡಾದರೂ ನಡೆದುಕೊಂಡು ಬರುವುದರ ಜ್ವಲಂತ ಸಾಕ್ಷಿಯಾಗಿ ವಸಂತೋತ್ಸವವು ಪ್ರಚಲಿತದಲ್ಲಿದೆ.

ವಿಜಯನಗರದ ಕಾಲಕ್ಕೆ ವಸಂತೋತ್ಸವವು (ಓಕುಳಿ) ಒಂದು ಜನ ಸಮುದಾಯದ ಅದರಲ್ಲಿ ತಮ್ಮನು ತಾವು ತೋಡಗಿಸಿಕೊಳ್ಳುವ ಜನಪದ ಹಬ್ಬವಾಗಿ ಆಚರಣೆಯಲ್ಲಿತ್ತು. ಜನರೆಲ್ಲರೂ ಭಾಗವಹಿಸಿ, ನರ್ತಿಸಿ ಸಂಭ್ರಮಿಸುವ ಆಚರಣೆ ದೇಸಿ ಸಂಸ್ಕೃತಿ ಎಂದೆನಿಸಿ ಕೊಂಡರೆ, ಒಬ್ಬರಿಂದ ವಿಶೇಷ ಪರಿಣಿತಿಯಲ್ಲಿ ಪ್ರಸ್ತಾಪ ಪಡಿಸುವ ನೃತ್ಯ ಮಾರ್ಗ ಪದ್ಧತಿ ಎಂದೆನಿಸಿಕೊಳ್ಳುತ್ತದೆ. ವಸಂತೋತ್ಸವದಲ್ಲಿ ಹೆಚ್ಚಾಗಿ ದೇಸಿ ಸಂಸ್ಕೃತಿಯನ್ನು ಕಾಣಬಹುದು. ಇದರಲ್ಲಿ ಜನ ಸಮೂಹದ ಪಾಲ್ಗೊಳ್ಳುವಿಕೆ ಜನರ ಸಂಭ್ರಮವೇ ಹೆಚ್ಚು ಆದ್ದರಿಂದ ಇಲ್ಲಿ ದೇಸಿ ನೃತ್ಯ, ಸಂಸ್ಕೃತಿಯನ್ನು ಕಾಣಬಹುದಾಗಿದೆ.

ಪ್ರಥಮ ಏಕಾದಶಿ

ವಿಜಯನಗರ ಕಾಲದಲ್ಲಿ ಹಬ್ಬ, ವ್ರತ, ಜಾತ್ರೆ, ಉತ್ಸವಗಳಿಗೆ ಬರವಿರಲಿಲ್ಲ. ಸಾಮ್ರಾಜ್ಯಕ್ಕೆ, ಅರಸರಿಗೆ, ಹಿರಿಯರಿಗೆ ಪುಣ್ಯ ಲಭಿಸಲಿ ಎಂದು ಯಾವುದಾದರೂ ಒಂದು ಪೂಜಾ ವಿಧಾನ, ಆಚರಣೆಯ ಮೂಲಕ ಒಳಿತನ್ನು ಬಯಸುತ್ತಿದ್ದರು. ಅದೇ ರೀತಿ ಪ್ರತಿ ವರ್ಷ ಅಷಾಡ ಮಾಷ ಶುಕ್ಲಪಕ್ಷ ಏಕಾದಶಿ ತಿಥಿಯಂದು ಪ್ರಥಮ ಏಕಾದಶಿ ಆಚರಿಸುತ್ತಿದ್ದರು. ಅಂದರೆ ಅಂದಿನ ರಾಜರುಗಳು ಯುದ್ಧ ಕೈಗೊಂಡಾಗ ಎರಡೂ ಕಡೆಯ ಸೈನಿಕರು ವೀರ ಮರಣವನ್ನು ಅಪ್ಪುತ್ತಿದ್ದರು. ಅದರಿಂದ ನಮಗೆ ಕೇಡಾಗಬಾರದೆಂದು ಈ ವ್ರತವನ್ನು ಮಾಡುತ್ತಿದ್ದರು. ಮಹಾಭಾರತದಲ್ಲಿ ಕುರುಕ್ಷೇತ್ರ ಯುದ್ಧ ಮುಗಿದ ಮೇಲೆ ಅಮಿತ ಸಂಖ್ಯೆಯಲ್ಲಿ ಸೋದರರನ್ನು ಶತೃಗಳನ್ನು ಕೊಂದ ಪಾಪ ಪರಿಹಾರಕ್ಕಾಗಿ ಯಾವುದಾದರೂ ಸೂಕ್ತ ಉದಾಹರಣೆಯನ್ನು ಹೇಳಬೇಕೆಂದು ಧರ್ಮಜನು ದ್ರೌಪದಿಯೊಂದಿಗೆ ಕೃಷ್ಣನನ್ನು ಪ್ರಾರ್ಥಿಸುವನು.

ಆಗ ಕೃಷ್ಣನು ಏಕಾದಶಿ ವ್ರತದ ಮಹಿಮೆಯನ್ನು ಹೇಳುವನು. ಶಿವಭಕ್ತನು, ದೈತ್ಯನು ಆದ ಮೃದು ಮಾನ್ಯನೆಂಬುವನ ಹಾವಳಿಯನ್ನು ಕುರಿತಾದ ಅದ್ಭುತ ಕತೆಯನ್ನು ಹೇಳುವನು. ವಿಜಯನಗರ ಕಾಲದಲ್ಲಿ ಪ್ರಥಮ ಏಕಾದಶಿಯನ್ನು ಪವಿತ್ರವಾದ ದಿನವೆಂದು ನಂಬಿದ್ದರು. ಆ ದಿನದಂದು ಅರಸರಾದಿಯಾಗಿ ದಂಡನಾಯಕರು, ಸಾಮಂತರು ದೇವಾಲಯಗಳಿಗೆ ದಾನ ನೀಡಿದ್ದನ್ನು ಉಲ್ಲೇಖಿಸಿವೆ. ಈ ದಿನ ವಿಜೃಂಭಣೆಯಿಂದ ಕಳೆಯುತ್ತಿದ್ದರು. ಶ್ರೀ ಕೃಷ್ಣದೇವರಾಯನು ಪ್ರಥಮ ಏಕಾದಶಿಯ ಪುಣ್ಯ ಕಾಲದಲ್ಲಿ ವಿಜಯನಗರ ಪಟ್ಟಣದ ಚಿಕ್ಕ ಹಂಸನ ಕೆರೆಯ ಹಿರಿಯ ತಿರುವೆಂಗಳನಾಥ ದೇವರ ಅಮೃತಪಡಿ ನೈವೇದ್ಯ, ಧೂಪ, ದೀಪಕ್ಕೆ ಅಂಗಭೋಗಕ್ಕೆ ದಾನ ನೀಡಿದ.[೧೨] ಅಚ್ಯುತರಾಯ ಕ್ರಿ.ಶ. ೧೫೩೩ ರಲ್ಲಿ ಗೋದ್ವಾದಶಿ ಪುಣ್ಯ ಕಾಲದಲ್ಲಿ ಕೃಷ್ಣಾಪುರದ ಧಾನ್ಯಗಳ ಅಂಗಡಿಯಿಂದ ಬಂದ ತೆರಿಗೆಯನ್ನು ಬಾಲಕೃಷ್ಣ ದೇವರಿಗೆ ದಾನ ಮಾಡಿದನು. ರಾಜ, ರಾಣಿ, ಸಾಮಂತರು ಸಾಮಾನ್ಯ ಜನರು ಆ ದಿನವನ್ನು ಪುಣ್ಯ ಕಾಲವೆಂದು ತಿಳಿದು ದಾನ ಮಾಡಿದರು.[೧೩] ಅಚ್ಯುತ ದೇವರಾಯನು ಮತ್ತು ಆತನ ಮಂತ್ರಿಯಾದ ಪೆದ್ದಿರಾಜನು ಶ್ರೀರಂಗಪಟ್ಟಣದ ಎಲ್ಲಾ ಜನತೆಯು ಸೇರಿ ಒಂದು ಒಪ್ಪಂದ ಮಾಡಿಕೊಂಡರು. ದೇವಾಲಯಗಳಿಗೆ ಕೊಡುವ ತೆರಿಗೆಯನ್ನು ಮುಕ್ತ ಮಾಡಿ ಶ್ರೀರಂಗಪಟ್ಟಣದ ದೇವಾಲಯಕ್ಕೆ ಸಮರ್ಪಿಸಬೇಕು. ಎಂದು ಕಾವೇರಿಯ ಸಮ್ಮುಖದಲ್ಲಿ ರೈತ ಬಾಂದವರ ಎದುರಿನಲ್ಲಿ ಪ್ರಥಮ ಏಕಾದಶಿಯ ಪುಣ್ಯ ಕಾಲದಲ್ಲಿ ಈ ನಿರ್ಣಯವನ್ನು ಮಾಡಿ ಇದನ್ನು ತಪ್ಪದೆ ಪಾಲಿಸುವಂತೆ ಹೇಳಲಾಯಿತು.[೧೪] ಅರವೀಡು ರಾಮರಾಜ ಕೊಂಡದೇವ ಮಹಾ ಅರಸುಗಳ ಪುತ್ರರಾದ ಕೊನೆಟಿಯ್ಯ ದೇವ ಮತ್ತು ಉದಯಗಿರಿಯ ತಿಮ್ಮರಾಜಯ್ಯ ದೇವ ಮಹಾ ಅರಸುಗಳು ನಮ್ಮ ತಂದೆ ಕೊನಟಿಯ್ಯಗ ಪುಣ್ಯ ಲಭಿಸಲೆಂದು ಪ್ರಥಮ ಏಕಾದಶಿ ಮತ್ತು ದ್ವಾದಶಿಯ ಪವಿತ್ರ ದಿನದಂದು ಹಂಪೆಯ ಶ್ರೀ ವಿಠಲ ದೇವರಿಗೆ ಸರ್ವರೂ ದಾನಮಾಡಿ ಊಯ್ಯಾಲೆ ಮಂಟಪದಲ್ಲಿ ಸಂಭ್ರಮದಿಂದ ಆಚರಿಸಿದರು.[೧೫] ಒಂದು ದೊಡ್ಡ ದೇವಾಲಯದ ಅಂಗಳದಲ್ಲಿ ವಿವಿಧ ರೀತಿಯ ಮಂಟಪ ಕಟ್ಟಿಸುವುದು ಆ ಕಾಲದ ಮತ್ತೊಂದು ಹೊಸ ಪದ್ಧತಿ.

ಹಬ್ಬ ಮತ್ತು ಉತ್ಸವಗಳು ಹೆಚ್ಚಿದಂತೆ ವರ್ಷಕ್ಕೊಂದು ಸಲ ನಡೆಯುವ ದೇವರ ಕಲ್ಯಾಣೋತ್ಸವ, ಮುಂತಾದ ಉತ್ಸವಗಳಿಗೆ ಪ್ರಾಮುಖ್ಯತೆ ಕೊಟ್ಟರು. ದೇವತೆಗಳಿಗೆ ಮದುವೆ ಮಾಡಿಸುವುದು, ಆಟಗಳನ್ನು ಆಡಿಸುವುದು ಇತರೆ ಉತ್ಸವಗಳನ್ನು ಮಾಡಿಸುವುದು ಹೆಚ್ಚಾಯಿತು. ಇದರಿಂದ ದೇವಾಲಯದಲ್ಲಿ ಕಲ್ಯಾಣ, ನಾಟ್ಯ, ಭೋಗ, ಉಯ್ಯಾಲೆ, ವಸಂತ ಮಂಟಪ ಇತ್ಯಾದಿಗಳು ದೇವಾಲಯಗಳ ಸುತ್ತ ಮುತ್ತ ಹಂಪೆ, ತಾಡಪತ್ರಿ, ಪೆನುಗೊಂಡ, ಇನ್ನೂ ಮುಂತಾದೆಡೆಗಳಲ್ಲಿ ಕಾಣಬಹುದು.

ಉತ್ಥಾನ ದ್ವಾದಶಿ

ಬಹು ಹಿಂದಿನಿಂದಲೂ ಪ್ರಥಮ ಏಕಾದಶಿಯ ಜೊತೆ ಉತ್ಥಾನ ದ್ವಾದಶಿಯನ್ನು ಆಚರಿಸಿಕೊಂಡು ಬಂದಿರುವುದಕ್ಕೆ ಹಲವು ದಾಖಲೆಗಳಿವೆ. ಕಾರ್ತಿಕ ಮಾಸದ ಶುಕ್ಲ ಪಕ್ಷ ದ್ವಾದಶಿ ತಿಥಿಗೆ ಉತ್ಥಾನ ದ್ವಾದಶಿ ಎಂದು ಕರೆಯುತ್ತಾರೆ. ವಿಜಯನಗರ ಕಾಲದಲ್ಲಿ ಈ

ದಿನಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದರು. ಆ ದಿನ ಅರಸರಾಧಿಯಾಗಿ ಸಾಮಂತರು, ಅಧಿಕಾರಿಗಳು ಜನಸಾಮಾನ್ಯರು ದಾನ ಕೊಟ್ಟ ವಿವರಗಳಿವೆ.

ವಿಶೇಷವಾಗಿ ವಿಷ್ಣುವಿನ ಆರಾಧಕರು ಹೆಚ್ಚು ಆರಾಧನೆ ಮಾಡುವರು, ಸಂಗಮ ಅರಸರ ನಂತರ ವೈಷ್ಣವ ಧರ್ಮ ಸ್ವೀಕರಿಸಿದ ಅರಸರು ಉತ್ಥಾನ ದ್ವಾದಶಿಯನ್ನು ಹೆಚ್ಚಾಗಿ ಆಚರಿಸಿ ದಾನದತ್ತಿಗಳನ್ನು ನೀಡಿದ್ದು ಕಂಡುಬರುತ್ತದೆ.[೧೨೬] ಅಂದಿನ ಜನಗಳು ನಿಸ್ವಾರ್ಥಿಗಳಾಗಿದ್ದರು. ಅರಸರು, ಪ್ರಜೆಗಳ ತಮಗಷ್ಟೆ ಪುಣ್ಯ ಲಭಿಸಲಿ, ಎಂಬ ಸಂಕುಚಿತ ಮನೋಭಾವನೆ ಇರಲಿಲ್ಲ ನಿಸ್ವಾರ್ಥ ಮನೋಭಾವನೆಯಿಂದ ತಮ್ಮ ಸಂಬಂಧಿಕರು ಅರಸ, ಮಕ್ಕಳಿಗೆ ಪುಣ್ಯದೊರೆಯಲಿ ಎಂದು ದಾನಕೊಡುತ್ತಿದ್ದರು. ಪ್ರೌಢದೇವರಾಯನ ಕಾಲದಲ್ಲಿ ಅವನ ಸಾಮಂತನಾದ ನರಹರಿದೇವ ದಣ್ಣಾಯಕನು ಮಂಗಳೂರು ಪ್ರಾಂತ್ಯವನ್ನು ಆಳುತ್ತಿರುವಾಗ ಒಡೆಯರ ನಿರೂಪದಿಂದ ತಿಮ್ಮಣನಾಯಕ ಎಂಬುವರು ನರಹರಿದೇವ ಅವರ ಮಕ್ಕಳಿಗೆ ಪುಣ್ಯ ಲಭಿಸಲೆಂದು, ಉತ್ಥಾನ ದ್ವಾದಶಿಯಂದು ಭೂಮಿಯನ್ನು ನರಹರಿ ದೇವಾಲಯಕ್ಕೆ ದಾನವಾಡಿದರು.[೧೨೭] ಶ್ರೀಕೃಷ್ಣದೇವರಾಯನು ಕ್ರಿ.ಶ. ೧೫೨೯ ಬುಧವಾರ ೧೦ರಂದು ಬುಕ್ಕರಾಯಪುರದ ತಿರುವೆಂಗಳನಾಥ ದೇವಾಲಯದಲ್ಲಿ ದಶಮಿ ಮತ್ತು ಏಕಾದಶಿ ಆಚರಿಸಲು ನಾಲ್ಕು ದಮ್ಮರಿಗಳನ್ನು ನೀಡಿದನು.[೧೨೮] ನಂದ್ಯಾಲದ ನರಸಿಂಗದೇವನ ಮಗ ನಾರಾಯಣ ದೇವನು ವೇದಾಂತ ಪಂಡಿತ ರಾಮಾನುಜರಿಗೆ ಕೊಟ್ಟ ಕೆಲವು ಮುದ್ರೆಗಳು ಅಚ್ಯುತರಾಯನು ತೆಗೆದುಕೊಂಡು ಆ ಮುದ್ರೆಗಳ ಜೊತೆ ಹೊಸದಾಗಿ ಆಂಜನೇಯ ಮುದ್ರೆ ಸೇರಿಸಿ ಮರಳಿ ರಾಮಾನುಜರಿಗೆ ಕೊಡುವುದರ ಜೊತೆ ಮೇಲುಕೋಟೆಯಲ್ಲಿರುವ ಚನ್ನಕೇಶವ ದೇವಾಲಯದಲ್ಲಿ ಇದ್ದು ಸೇವೆ ಮಾಡಿದ ಚಲುಪಿಳ್ಳೆರಾಯ ಯತಿಗಳಿಗೆ ಉಪಯೋಗಿಸಬೇಕೆಂದು ಉತ್ಥಾನ ದ್ವಾದಶಿಯ ಪವಿತ್ರ ದಿನದಂದು ಅವರಿಗೆ ಹೇಳಲಾಯಿತು.[೧೨೯] ಇಲ್ಲಿ ಅರಸನು ಪ್ರಾರಂಭದಿಂದ ಬಂದ ಒಂದು ಪದ್ಧತಿಯನ್ನು ಪಾಲಿಸುವುದರ ಜೊತೆ ಹೊಸದಾಗಿ ತನ್ನ ಆರಾಧ್ಯಾ ದೇವರಾದ ಆಂಜನೇಯನ ಮುದ್ರೆಯನ್ನು ಸೇರಿಸಿ ರಾಮಾನುಜರಿಗೆ ಮಠದ ಯತಿಗಳಿಗೆ ಕೊಟ್ಟನು. ಅದೇ ರೀತಿಯಾಗಿ ಉತ್ಥಾನ ದ್ವಾದಶಿಯಂದು ವಿರತೊರು ಚನ್ನಕೇಶವ ದೇವಾಲಯಕ್ಕೆ ದಳವಾಯತಿ ಭಂಡಾರಿ ನಾಯಕ ತನಗೆ ಸರ್ವಮಾನ್ಯವಾಗಿ ಕೊಟ್ಟ ಭೂಮಿಯನ್ನು ತನ್ನ ತಂದೆ, ತಾಯಿ ಚಿತ್ತೇಲಾ ಬೊಮ್ಮನಾಯಕನ ನೆನಪಿನಲ್ಲಿ ದಾನಮಾಡಿದರು.[೧೩೦] ವಿಜಯನಗರ ಕಾಲದಲ್ಲಿ ಪ್ರಥಮ ಏಕಾದಶಿ ಮತ್ತು ಉತ್ಥಾನ ದ್ವಾದಶಿಯನ್ನು ಶೈವರಿಗಿಂತಲೂ ವೈಷ್ಣವರು ಹೆಚ್ಚು ಆಚರಿಸಿದ್ದಾರೆ. ಶೈವರಿಗೆ ಶಿವರಾತ್ರಿ, ಮಕರಸಂಕ್ರಾಂತಿ ಹೇಗೋ ಹಾಗೆ ವೈಷ್ಣವರಿಗೆ ಏಕಾದಶಿ ಮತ್ತು ದ್ವಾದಶಿ ಆಚರಣೆಗಳು ಪ್ರಮುಖವಾಗಿವೆ.

ಯುಗಾದಿ

ಈ ಹಬ್ಬವನ್ನು ಪ್ರಾಚೀನ ಕಾಲದಿಂದಲೂ ಆಚರಿಸುತ್ತಾ ಬಂದಿದ್ದಾರೆ. ಇದು ಹಿಂದೂ ಪಂಚಾಂಗದ ಪ್ರಕಾರ ಸಂವತ್ಸರ ಆರಂಭಗೊಳ್ಳುವ ದಿನ. ಈ ದಿವಸದಲ್ಲಿ ಒಳ್ಳೆಯ ಅಥವಾ ಕೆಟ್ಟ ಘಟನೆ ಯಾವುದು ಒದಗಿದರೂ ಇಡೀ ವರ್ಷದಲ್ಲಿ ಅದರ ಪರಂಪರೆ ಮುಂದುವರೆಯುತ್ತದೆ ಎಂಬುದು ನಂಬಿಕೆ. ಹಿಂದೂಗಳಿಗೆ ಹೊಸವರ್ಷ ಜನವರಿ ಒಂದರಂದು ಆರಂಭವಾಗುವುದಿಲ್ಲ,

ಯುಗಾದಿ ದಿನವೇ ಅವರ ಪಾಲಿಗೆ ಹೊಸವರ್ಷ. ಅದರಲ್ಲಿ ಎರಡು ವಿಧಗಳಿವೆ. ಚಾಂದ್ರಮಾನ ಮತ್ತು ಸೌರಮಾನ ಯುಗಾದಿ, ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ಚಾಂದ್ರಮಾನ ಯುಗಾದಿ ಬಳಕೆಯಲ್ಲಿದ್ದರೆ, ತಮಿಳುನಾಡಿನಲ್ಲಿ ಸೌರಮಾನ ಯುಗಾದಿ ಬಳಕೆಯಲ್ಲಿದೆ.[೨೧] ಅಂದು ಎಲ್ಲಾ ವರ್ಗದ ಜನರು ಈ ಹಬ್ಬವನ್ನು ಆಚರಿಸುತ್ತಾರೆ. ಆದರೆ ನವರಾತ್ರಿ, ಸಂಕ್ರಾಂತಿ, ಶಿವರಾತ್ರಿ ಹಬ್ಬಗಳಷ್ಟು ಮಹತ್ವ ಇದ್ದಂತೆ ಕಂಡುಬರುವುದಿಲ್ಲ ಆದರೂ ಈ ಹಬ್ಬ ಆಚರಿಸುತ್ತಿದ್ದರು ಎನ್ನುವುದಕ್ಕೆ ಸಾಕಷ್ಟು ಉಲ್ಲೇಖಗಳಿವೆ. ಈ ಹಬ್ಬದಂದು ಭೂಮಿಗೆ ಮೊದಲ ಬೀಜ ಬಿತ್ತುವ ಪೂಜೆ ಮಾಡುವರು. ಯುಗಾದಿಯ ದಿನ ಹಬ್ಬ ಮುಗಿಸಿಕೊಂಡ ಜನ ಪಂಚಾಂಗ ಫಲ ಕೇಳಿ ಹೊಸವರ್ಷದ ಮಳೆ ಬೆಳೆಯ ಲೆಕ್ಕಾಚಾರ ಮಾಡಿಕೊಳ್ಳುವುದು ರೂಢಿ. ಪಂಚಾಂಗ ಫಲದಂತೆ ಮುಂದಿನ ವ್ಯವಸಾಯಕ್ಕೆ ತೊಡಗುತ್ತಾರೆ. ಈ ಹಬ್ಬಕ್ಕೂ ಮುನ್ನ ಹೊಲಗಳನ್ನು ಹದಗೊಳಿಸಿಕೊಂಡಿರುತ್ತಾರೆ. ಹಬ್ಬದ ದಿನ ಬೆಳಿಗ್ಗೆ ಪೂರ್ವ ನಿರ್ಧಾರಿತ ಮುಹೂರ್ತದ ಹೊತ್ತಿಗೆ ಪೂಜೆಗಾಗಿ ಆಯ್ದ ಹೊಲದ ಮೂಲೆಯೊಂದರಲ್ಲಿ ಬಿತ್ತನೆಯ ಕಾರ್ಯ ನಡೆಯುತ್ತದೆ. ಬಿತ್ತನೆಯ ಬೀಜಕ್ಕಾಗಿ ಆಯ್ಕೆ ಮಾಡಿ ಸಂಗ್ರಹಿಸಿಟ್ಟ ಬೀಜಗಳು ಪರಿಣಾಮಕಾರಿಯೇ ಅಲ್ಲವೇ ಎಂದು ತಿಳಿಯಲು ಈ ಆಚರಣೆಯಲ್ಲಿ ಅಡಗಿದ ತಿರುಳು. ವಿಜಯನಗರ ಕಾಲದಲ್ಲಿ ಈ ಹಬ್ಬವನ್ನು ಆಚರಿಸಿದ ಕುರಿತು ಅನೇಕ ದಾಖಲೆಗಳಿದ ದೃಢಪಡಿಸುವುದು.

ಇಮ್ಮಡಿ ದೇವರಾಯನು ವಿದ್ಯಾನಗರಿಯ ರಾಜಧಾನಿಯಲ್ಲಿ ಆಳುತ್ತಿರುವಾಗ ಇವನ ನಿರೂಪದಿಂದ ರಾಯರಸವೊಡೆಯರು ಬಾರಕೂರಿನ ರಾಜ್ಯವನ್ನು ಆಳುತ್ತಿರುತ್ತಾರೆ. ಈ ಅವಧಿಯಲ್ಲಿ ಇಮ್ಮಡಿ ದೇವರಾಯನಿಗೆ ಕಂಟಕ ಒದಗುತ್ತದೆ. ಈ ಕಂಟಕವು ಪರಿಹಾರವಾಗಿ ಆಯಸ್ಸು ಹೆಚ್ಚಬೇಕೆಂದು ಚೋಳಿಯ ಕಲ್ಲಂಗೆರೆಯ ವಿನಾಯಕ ದೇವರಿಗೆ ಕೈಪಾಡಿಯ ಎಪ್ಪತ್ತನಾಲ್ಕುವೊಕ್ಕಲ ಉತ್ಪತ್ತಿ ಅಲ ಕಾಟಿ ಗದ್ಯಾಣವನ್ನು ದಾನವಾಗಿ ನೀಡುವನು. ನಂದಾದೀಪ, ಅಮೃತಪಡಿ, ಪಂಚಪರ್ವ, ದೀವಾಳಿಗೆ, ಹಬ್ಬ, ನಿಖರದ ಹುಣ್ಣಿಮೆ, ಬೆನಕನ ಚೌತಿ, ವಸಂತ ಯುಗಾದಿ, ಮೊದಲಾದ ಹಬ್ಬಗಳ ಅಡಿಗೆಗೆ ದಾನವಾಗಿ ನೀಡಲಾಗಿದೆ.[೨೨]

ಈ ರೀತಿಯಾಗಿ ಇನ್ನೂ ಅನೇಕ ಶಾಸನೋಕ್ತ ದಾಖಲೆಗಳು ಸಿಗುತ್ತವೆ. ಇಟಲಿಯ ಪ್ರವಾಸಿ ನಿಕೊಲೊ-ದೆ-ಕೊಂತಿ ವಿಜಯನಗರಕ್ಕೆ ಭೇಟಿ ಕೊಟ್ಟಾಗ ಅವನ ಹೇಳಿಕೆಯಂತೆ ಇಲ್ಲಿ ವರ್ಷದಲ್ಲಿ ಮೂರು ದೊಡ್ಡ ಹಬ್ಬಗಳನ್ನು ಆಚರಿಸುತ್ತಾರೆ ಒಂದು ಹಬ್ಬದಲ್ಲಿ ಸ್ತ್ರೀ-ಪುರುಷರಾದಿಯಾಗಿ ನದಿ ಅಥವಾ ಸಮುದ್ರದಲ್ಲಿ ಸ್ನಾನ ಮಾಡಿ ಹೊಸ ಬಟ್ಟೆಗಳನ್ನು ಉಟ್ಟು ಮೂರು ದಿವಸ ನೃತ್ಯ, ಗಾಯನ, ಭೋಜನದಲ್ಲಿ ಕಳೆಯುತ್ತಾರೆ.[೨೩] ಅಂದರೆ ಯುಗಾದಿ ದಿವಸ ಹೊಸಬಟ್ಟೆ, ಹಾಕಿಕೊಂಡು ಸಿಹಿ ಅಡುಗೆಗಳನ್ನು ಮಾಡಿಕೊಂಡು ವಿಜೃಂಭಣೆಯಿಂದ ಆಚರಿಸುತ್ತಿದ್ದರು.

ಶೂಲದ ಹಬ್ಬ

ಶೂಲವೆಂದರೆ ಚೂಪಾದ ತುದಿಯುಳ್ಳ ಒಂದು ಬಗೆಯ ಆಯುಧ, ಇದಕ್ಕೆ ಈಟಿ ಎಂದು ಕರೆಯುತ್ತಾರೆ. ವಿಜಯನಗರ ಕಾಲದಲ್ಲಿ ಈ ಹಬ್ಬದ ಆಚರಣೆಯ ಕುರಿತು ಸಾಹಿತ್ಯ ಶಿಲ್ಪಗಳಲ್ಲಿನ ಉಲ್ಲೇಖ ದೊರೆಯುತ್ತದೆ. ಗುಂಡಬ್ರಹ್ಮಯ್ಯಗಳ ಕಾವ್ಯಗಳ ಪ್ರಕಾರ ಶೂಲದ

ಹಬ್ಬ ಓರಂಗಲ್ಲಿನಲ್ಲಿ ಅನುಷ್ಠಾನಕ್ಕೆ ಬಂದಿತು. ನಂತರ ಕರ್ನಾಟಕದಲ್ಲಿ ಆಚರಣೆಗೊಳಗಾಯಿತು. ಮಧ್ಯಕಾಲೀನ ಇಂತಹ ಸಾಂಸ್ಕೃತಿಕ ಸಂಬಂಧವನ್ನು ಬೆಸೆಯುವ ದೃಷ್ಟಿಯಿಂದ ಗುಂಡಬ್ರಹ್ಮಯ್ಯಗಳ ಸಾಹಿತ್ಯಕ್ಕೆ ವಿಶೇಷ ಮಾನ್ಯತೆ ದೊರೆಯುತ್ತದೆ. ಮರೆಹೊಕ್ಕವರನ್ನು ಕೊಡೆವೆಂಬ ವ್ರತವನ್ನು ನಿಷ್ಠೆಯಿಂದ ಆಚರಿಸಿ ಶೂಲವೇರಿಸಿ ಗುಂಡಬ್ರಹ್ಮಯ್ಯರು ಓರಂಗಲ್ಲಿನ ಭಾಗದ ಜನರ ಐತಿಹ್ಯವಾಗಿ ಉಳಿದಿದ್ದಾರೆ. ಅವರ ಹೆಸರಲ್ಲಿ ಮೂರ್ತಿ ಪ್ರತಿಷ್ಠಾಪನೆ, ದೇವಾಲಯ ನಿರ್ಮಾಣಗಳು ಆಗಿ ಹೋಗಿದ್ದವು. ಆಚರಣೆಯ ಮೂಲವಾಗಿ ಶೂಲದ ಹಬ್ಬವನ್ನು ವಿಜೃಂಭಣೆಯಿಂದ ನೇರವೇರಿಸುತ್ತಿದ್ದರು.[೧೩೪] ಓರಂಗಲ್ಲಿನ ಈ ಆಚರಣೆ ಕನ್ನಡದ ಕಲಿ ಕುಮಾರರಾಮನ ಕಾಲದಲ್ಲೂ ಕರ್ನಾಟಕದಲ್ಲಿ ಆಚರಣೆಗೊಳಲ್ಪಡುತ್ತಿತ್ತು.

ಕನ್ನಡನಾಡಿನ ವೀರ ಶಿರೋಮಣಿ ಪರನಾರಿ ಸಹೋದರ ಕುಮಾರರಾಮನ ಕುರಿತು ಕನ್ನಡದಲ್ಲಿ ಕಾವ್ಯಗಳು ರಚನೆಗೊಂಡಿವೆ. ಅದರಲ್ಲಿ ಪ್ರಥಮವಾಗಿ ಸುಮಾರು ಕ್ರಿ.ಶ. ೧೬ನೆಯ ಶತಮಾನದಲ್ಲಿ ರಚನೆಗೊಂಡ ನಂಜುಂಡ ಕವಿಯ ರಾಮನಾಥಚರಿತೆ ಕಾಲದ ಮತ್ತು ಕಾವ್ಯದ ದೃಷ್ಟಿಯಿಂದ ಇದು ಉನ್ನತವಾದದ್ದು. ನಂಜುಂಡ ಕವಿ ತನ್ನ ಕಾವ್ಯದಲ್ಲಿ ಕುಮಾರ ರಾಮನನ ಶೌರ್ಯ ಸಾಧನೆ ಹೇಳುತ್ತಾ ಅವನ ಜೀವನದಲ್ಲಿ ಎದುರಾದ ಶೂಲದ ಹಬ್ಬದ ಪ್ರಸ್ತಾಪವನ್ನು ಬಹು ಸೊಗಾಸಾಗಿ ಚಿತ್ರಿಸಿದ್ದಾರೆ. ಕುಮಾರರಾಮ ಓರಂಗಲ್ಲಿನ ಪ್ರತಾಪರುದ್ರನ ಮಗ ಎಪ್ಪತ್ತು ರಾಜನ ಬೊಲ್ಲಕುದುರೆಯನ್ನು ಗೆದ್ದು ತರಲು ಹೊರಡುತ್ತಾನೆ. ಓರಂಗಲ್ಲಿನ ಹೊರಹೊಲಯದಲ್ಲಿ ಸೈನ್ಯದೊಂದಿಗೆ ಗುಂಡಬ್ರಹ್ಮಯ್ಯರ ಗುಡಿಯಲ್ಲಿ ಬೀಡು ಬೀಡುತ್ತಾನೆ. ಆತನು ಗುಂಡಬ್ರಹ್ಮಯ್ಯ ದೇವರಿಗೆ ನಮಸ್ಕರಿಸಿ ಎಪ್ಪತ್ತು ರಾಜನ ಬೊಲ್ಲ ಕುದುರೆ ಸಿಕ್ಕರೆ ಶೂಲದ ಹಬ್ಬ ಮಾಡಿಸುವೆ ಎಂಬ ಹರಕೆ ಮಾಡಿಕೊಳ್ಳುತ್ತಾನೆ. ಗುಂಡಬ್ರಹ್ಮಯ್ಯರು ಕನಸಲಿ ಬಂದು ವರವನ್ನು ದಯಪಾಲಿಸುತ್ತಾರೆ. ಬೊಲ್ಲ ಕುದುರೆ ಗೆದ್ದು ಕುಮಾರರಾಮ ಮರಳಿ ತನ್ನ ರಾಜ್ಯಕ್ಕೆ ಬರುತ್ತಾನೆ.

ಒಂದು ದಿನ ಮಲಗಿದಾಗ ಕುಮಾರ ರಾಮನ ಕನಸಿನಲ್ಲಿ ಗುಂಡಬ್ರಹ್ಮಯ್ಯರು ಬಂದು ಶೂಲದ ಮಹಾತ್ಮೆ ವಿವರಿಸುತ್ತಾರೆ.[೧೩೫] ಓರಂಗಲ್ಲಿನ ರುದ್ರಸುತನ ಬೊಲ್ಲನ ತಂದು

ಧೀರಚನ್ನಿಗ ರಾಮನಿರಲು
ಕಾರಣ್ಯನಿಧಿ ಗುಂಡಬ್ರಹ್ಮಯ್ಯ ಸ್ವಪ್ನದಿ
ತೊರೆ ಶೂಲದ ಮಹಾತ್ಮೆಯನು[೧೩೬]
ಈ ಸಂಗತಿಯನ್ನು ಕೇಳಿದ ಕುಮಾರ ರಾಮನ ತಂದೆ
ಮರೆಯದೆ ಶೂಲದ ಹಬ್ಬವ ಮಾಡಿನ್ನು
ವರವೆ ಪಡೆದ ಶರಣರಲಿ
ಧುರದೊಳು ಕಾದಿ ಜಯಸಿದನು ಶೂಲಗಳಿಗೆ
ಇರದೆ ಹಬ್ಬವನ್ನು ಮಾಡೆಂದ[೧೩೭]

ಅಂದು ಸಾಮ್ರಾಜ್ಯದಲ್ಲಿ ಯಾವುದೇ ಹಬ್ಬ ಉತ್ಸವ ಮಾಡಬೇಕಾದರೂ ಡಂಗುರ ಬಾರಿಸಿ ತಿಳಿಸುತ್ತಿದ್ದರು.

ಕೇಳಿ ಕಂಪಿಲರಾಯ ಶೂಲದ ಹಬ್ಬವ
ನಾಳೆ ಮಾಡಿಸಬೇಕೆನಂತ
ಪೇಳಿದ ರಾತ್ರಿ ಡಂಗುರವ ಸಾರಿಸಿದನು
ಕಳೆಯುಳ್ಳ ಹೊಸದುರ್ಗದೊಳಗೆ[೧೩೮]

ಹಬ್ಬ ಎಂದರೆ ಸಾಮಾನ್ಯರಾಧಿಯಾಗಿ ಎಲ್ಲಾ ವರ್ಗದವರು ಪಾಲ್ಗೊಳ್ಳುತ್ತಿದ್ದರು ಜೊತೆಗೆ ನೃತ್ಯ, ಸಂಗೀತ, ಹಾಡು ಹಾಡುತ್ತಾ ಕುಣಿಯುತ್ತಾ ಆಚರಿಸುತ್ತಿದ್ದರು ಎಂಬುದಕ್ಕೆ ಈ ಕೆಳಗಿನ ಪದ್ಯ ದಾಖಲೆಯಾಗಿವೆ.

ಎಲ್ಲಿ ನೋಡಿದರಲ್ಲಿ ಪಲ್ಲಕ್ಕಿ ಸತ್ತಿಗೆ
ಎಲ್ಲಿ ನೋಡಿದರೆ ವಾದ್ಯಗಳು
ಎಲ್ಲಿ ನೋಡಲು ಪಾತ್ರ ಬೋಗ ಸಂಗೀತವು[೧೩೯]
ಅನುವಾಗಿ ಕೊಳಲು, ತಪ್ಪಟೆ ರೌಡೆ ಜಾಗಟೆ
ಘನತರ ಬಿರಿದಿನುಗ್ಗಡವು
ಜನಪತಿ ಕಂಪಿಲ ಮನಸಲಿ ಸುಖವಿರೆ
ಕನಕ ಶೂಲಗಳು ಶೃಂಗರಿಕೆ[೧೪೦]
ಎಲ್ಲಾ ವರ್ಗದ ಜನರು ಸೇರುತ್ತಿದ್ದರು ಎಂಬುದಕ್ಕೆ
ಪರಿಜನ ಪರಜನ ಇರದೆ ಪರಿಸು ಪೋಗೆ
ದೊರೆಗಳರಸ ಬೀಳ್ಕೊಡಲು
ಶರಣರ ಶೂಲದ ಹಬ್ಬವ ಮಾಡಿಸಿ
ಅರಸು ರಾಮನ ಕಳುಹಿದನು[೧೪೧]

ಕುಮಾರ ರಾಮನ ಈ ಶೂಲದ ಹಬ್ಬದಲ್ಲಿ ಪಾಲ್ಗೊಳ್ಳಲು ಅನೇಕ ದೇಶಗಳ ದೊರೆಗಳು ತಮ್ಮ ತಮ್ಮ ಅಲಂಕೃತವಾದ ಶೂಲಗಳ ಸಮೇತ ಕಮ್ಮಟ ದುರ್ಗಕ್ಕೆ ಬಂದು ಸೇರುತ್ತಿದ್ದರು. ಈ ದೊರೆಗಳೆಲ್ಲ ತಂದಿದ್ದ ಶೂಲಗಳು

ಸುರಲೋಕಕ್ಕೆ ಪೊಪರಿಟ್ಟ ನಿಚ್ಚಣಿಗೆಯಂ
ತಿರುಲುನ್ನತಿವೆತ್ತು ಕಣ್ಗೆ
ಕರಮಸೆದವು ದೊರೆದೊರೆಗಳ ಶೂಲವಾ
ಗಿರಿದುರ್ಗ ದೊಳಗಡೆ ವಿಡದೆ[೧೪೨]

ಎನ್ನುವಂತೆ ಕಮ್ಮಟದುರ್ಗದಲ್ಲಿ ಶೂಲಗಳ ವೈಭವ ಮೆರೆಯುತ್ತಿತ್ತು. ಈ ಅನಂತ ಶೂಲಗಳಲ್ಲಿ ರಾಮನ ವೈಜಯಂತಿ ಅತ್ಯಂತ ಪ್ರಧಾನವಾಗಿ ಎದ್ದುಕಾಣುತ್ತಿತ್ತು.

ಹೀಗೆ ಶೂಲದ ಹಬ್ಬಕ್ಕಾಗಿ ಹೊಸಮಲೆ ದುರ್ಗ ಸಿಂಗಾರಗೊಂಡಿತು, ಶೂಲಗಳನ್ನು ಅಲಂಕರಿಸಿ ಮೆರವಣಿಗೆ ಮಾಡುತ್ತಾರೆ. ರತ್ನಾಜಿಯರ ಸೇವಕಿಯರು ಮತ್ತು ಸಂಗಡಿಯರ ಜೊತೆ ಶೂಲದ ಹಬ್ಬ ನೋಡಲು ಬರುತ್ತಾಳೆ. ಹೀಗೆ ಗೊಲ್ಲ, ಕುರುಬ, ಶೆಟ್ಟಿ ಬಣಜಿಗ, ತಳವಾರ, ಹಡಪದ ಪ್ರತಿಯೊಂದು ಸಮುದಾಯದವರೂ ಒಂದೆಡೆ ಸೇರಿ ಹಬ್ಬವನ್ನು ಆಚರಿಸುತ್ತಿದ್ದರು. ಹೀಗೆ ಓರಂಗಲ್ಲಿ ಗುಂಡಬ್ರಹ್ಮಯ್ಯರ ಸ್ಮರಣಾರ್ಥ ಅನುಷ್ಠಾನಗೊಂಡ ಶೂಲದ ಹಬ್ಬ ಕುಮಾರರಾಮನ ಮೂಲಕ ಕರ್ನಾಟಕದಲ್ಲಿ ಆಚರಣೆಗೊಂಡಿತು.

ನಂತರ ಕಾಲದಲ್ಲಿ ಇದು ಕುಮಾರರಾಮನ ಹಬ್ಬ, ಜಾತ್ರೆಯಾಗಿ ಮಾರ್ಪಾಟು ಹೊಂದಿರುವ ಸಾಧ್ಯತೆಗಳಿವೆ[೧೪೩] ಬಹುತೇಕ ಕುಮಾರರಾಮನ ಹಬ್ಬ, ಜಾತ್ರೆಗಳೆಲ್ಲಾ ಅವನ ಯುದ್ಧ ಪರಾಕ್ರಮಗಳನ್ನು ಪ್ರದರ್ಶಿಸುತ್ತವೆ ಮತ್ತು ಅವನ ತ್ಯಾಗ ಬಲಿದಾನಗಳ ಪ್ರತೀಕವಾಗಿ ಮೂಡಿಬಂದಿವೆ.

ಕುಮಾರರಾಮನ ಹಬ್ಬ ಮತ್ತು ಜಾತ್ರೆ ಆಚರಣೆಗಳು ನಾನಾ ಹೆಸರುಗಳಲ್ಲಿ ಬಳ್ಳಾರಿ, ಕೊಪ್ಪಳ, ಚಿತ್ರದುರ್ಗ, ಶಿವಮೊಗ್ಗ, ಉತ್ತರಕನ್ನಡ, ಮಂಡ್ಯ, ಮುಂತಾದ ಕಡೆ ನಾನಾ ಹೆಸರುಗಳಲ್ಲಿ ನಡೆಯುತ್ತಿವೆ. ರಾಯಚೂರು, ಯಾದಗಿರಿ, ಕಲಬುರುಗಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಹಾವೇರಿ, ಜಿಲ್ಲೇಗಳಲ್ಲಿ ಕಬ್ಬೇರ ಸಮುದಾಯದವರು, ತಮ್ಮ ಕುಟುಂಬದ ಮದುವೆ ಸಂದರ್ಭದಲ್ಲಿ ಈರ. ಈರ್ಲ, ಬೀರ, ಮುಂತಾದ ಹೆಸರುಗಳಲ್ಲಿ ಆಚರಣೆಯೊಂದನ್ನು ಆಚರಿಸುತ್ತಾರೆ ಅದು ಕುಮಾರರಾಮನ ಕುರಿತಾಗಿರುವ ಆಚರಣೆಯಾಗಿದೆ.[೧೪೪]

ಈ ಜಾತ್ರೆಯಲ್ಲಿ ಎಲ್ಲಾಸಮುದಾಯದವರು ಅತ್ಯಂತ ಉತ್ಸಾಹದಿಂದ ಭಾಗವಹಿಸುವರು ಇಲ್ಲಿ ಬಿಲ್ಲಾಟ ಎಂಬ ಆಚರಣೆ ನಡೆಯುತ್ತದೆ ಪ್ರಾಯಶಃ ರಾಜನು ಯುದ್ಧಕ್ಕೆ ಹೋರಟ ಸಂಕೇತವಾಗಿರಬೇಕು ಆಗ ಡೊಳ್ಳು ಮೇಳಗಳೊಂದಿಗೆ ಎಲ್ಲಾ ಭಕ್ತಾದಿಗಳು ಕುಮಾರರಾಮನ ಮುಖವಾಡ ಧರಿಸಿ ಓಕುಳಿಯಾಡುತ್ತಾ ಸಂಗೀತಾ ನೃತ್ಯಗಳೊಂದಿಗೆ ಸಂಭ್ರಮಿಸುವರು.

ಪಂಚಪರ್ವ

ಪಂಚಪರ್ವವು ವಿಜಯನಗರ ಕಾಲದ ಶೈವ ದೇವಸ್ಥಾನಗಳಲ್ಲಿ ವಿಶಿಷ್ಟವಾಗಿ ಆಚರಣೆಗೊಳ್ಳುತ್ತಿದ್ದ ಒಂದು ಪ್ರಸಿದ್ಧ ಹಬ್ಬವಾಗಿದೆ. ಊರಿನ ಜನರೆಲ್ಲಾ ಸೇರಿ ಹಬ್ಬವನ್ನು ಆಚರಿಸುತ್ತಿದ್ದರು. ಮುಖ್ಯವಾಗಿ ಊರಿನ ಮುಖ್ಯಸ್ಥರಾದ ಪಂಚಮರು ಈ ಪರ್ವದ ಉಸ್ತುವಾರಿ ವಹಿಸಿಕೊಳ್ಳುತ್ತಿದ್ದುದರಿಂದ ಈ ಹಬ್ಬಕ್ಕೆ ಪಂಚಪರ್ವ ಎಂಬ ಹೆಸರು ಬಂದಿರಬಹುದು.[೧೪೫] ಆದರೆ ಈ ಪಂಚಪರ್ವ ಎಂಬುದು ಪ್ರಮುಖವಾಗಿ ಹೆಸರೆ ಸೂಚಿಸುವಂತೆ ಅಂದು ಆಚರಿಸುತ್ತಿದ್ದ ಐದು ಪ್ರಮುಖ ಉತ್ಸವ ಪೂಜಾ ವಿಧಾನಗಳಿಗೆ ಸಂಬಂಧಿಸಿರಬಹುದು. ಶಾಸನಗಳಲ್ಲಿ ಕಾಣಿಸಿಕೊಳ್ಳುವಂತೆ ಪರ್ವ ಎಂಬ ಹಬ್ಬ ವಿಜಯನಗರ ಕಾಲದ ದೇವಸ್ಥಾನಗಳಲ್ಲಿ ಆಚರಣೆಗೊಳ್ಳುತ್ತಿತ್ತು. ಪರ್ವ ಎಂಬ ಶಬ್ದ ವಿಜಯನಗರ ಕಾಲದ ಪೂರ್ವಲ್ಲಿಯೇ ಕಾಣಿಸಿಕೊಳ್ಳುತ್ತದೆ. ಕ್ರಿ.ಶ. ೧೧೪೯ರ ಶಾಸನದಲ್ಲಿ ಪರ್ವ ಎಂಬ ಶಬ್ದವಿದೆ.[೧೪೬]

ಪರ್ವ ಎಂಬ ಶಬ್ದ ಸಂಸ್ಕೃತಿ ಮೂಲದ್ದು ಇದು ಕನ್ನಡದಲ್ಲಿ ಪರವ್ವ ಎಂದು ಕರೆಸಿಕೊಳ್ಳುತ್ತದೆ.[೧೪೭] ಹೊಯ್ಸಳ ಅರಸ ವೀರನರಸಿಂಹನ ಕಾಲದಲ್ಲಿ ಕ್ರಿ.ಶ. ೧೨೨೬ರಲ್ಲಿ ಪಂಚಪರ್ವಕ್ಕೆ ದಾನ ನೀಡಿದ ವಿವರವಿದೆ.[೧೪೮] ವಿಜಯನಗರ ಕಾಲದಲ್ಲಿಯೂ ಈ ಹಬ್ಬದ ಉಲ್ಲೇಖಗಳು ಸಾಕಷ್ಟು ದೊರೆಯುತ್ತದೆ. ಬಹು ಸಂಭ್ರಮದಿಂದ ಆಚರಿಸಲಿಕ್ಕೆ ದಾನದತ್ತಿ ನೀಡಿದ ವಿವರವಿದೆ.

ವಿಜಯನಗರ ಕಾಲದ ಶಾಸನಗಳಲ್ಲಿ ಪಂಚಪರ್ವ ಎಂಬ ಹೆಸರಿನಿಂದ ಈ ಹಬ್ಬವನ್ನು ಕರೆಯಲಾಗುತ್ತಿತ್ತು. ಈ ಹಬ್ಬವನ್ನು ಗ್ರಾಮದ ಜನರೆಲ್ಲಾ ಸೇರಿ ಧನ, ಧಾನ್ಯವನ್ನು ಜನರಿಂದ ಸಂಗ್ರಹಿಸಿ ಆಚರಿಸುತ್ತಿದ್ದರು ಈ ಹಬ್ಬಕ್ಕಾಗಿ ಅರಸರು ಮಾಂಡಲಿಕರು ದಾನ ಬಿಟ್ಟ ವಿವರವಿದೆ.

ಹಂಪಿಯಲ್ಲಿ ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ನೆಲಮುಟ್ಟದ ಶಿವದೇವಾಲಯದಲ್ಲಿ ಪ್ರತಿವರ್ಷ ಆಚರಿಸುತ್ತಿದ್ದರು. ಕ್ರೀ.ಶ. ೧೫೧೩ ರಲ್ಲಿ ಶ್ರೀಕೃಷ್ಣದೇವರಾಯನು ಅಮೃತಪಡಿ, ನೈವೇದ್ಯ, ಅಂಗ ರಂಗ ಭೋಗ, ಮಕರ ಸಂಕ್ರಾಂತಿ ರಥೋತ್ಸವ ಮತ್ತು ಪಂಚ ಪರ್ವ ಮೊದಲಾದ ಪುಣ್ಯ ಪೂಜಾಕಾರ್ಯಗಳಿಗೆ ಒಟ್ಟು ಹದಿನೇಳು ಗ್ರಾಮಗಳನ್ನು ದಾನ ಬಿಟ್ಟ ವಿವರವಿದೆ.[೧೪೯]

ಕೃಷ್ಣದೇವರಾಯನು ಚಂದ್ರಗುತ್ತಿ ನಾಡಿನ ಅಧಿಕಾರಿಯಾದ ನಾಡಪ್ರಭು ಸಂಕಣ್ಣನಿಗೆ ಆಜ್ಞಾಪಿಸಿ ನಿರೂಪವನ್ನು ನೀಡಿದ ಪ್ರಕಾರ ಕುಪಟೂರು ಗ್ರಾಮದ ಉತ್ಪತ್ತಿಯನ್ನು ಪಂಡಿತರ ಬ್ರಾಹ್ಮಣರ ಪ್ರಥಮ ಪೂಜೆ, ಪ್ರಾಸಾದ, ಪಂಚಪರ್ವ ಮೂದಲಾದ ಆಚರಣೆಗಳಿಗೆ ದಾನ ನೀಡಿದ ವಿವರವಿದೆ.[೧೫೦] ಅದೇ ಕೃಷ್ಣದೇವರಾಯನ ಕಾಲದಲ್ಲಿ ಶ್ರೀವಿಠಲೇಶ್ವರ ದೇವರ ನೈವೇದ್ಯ ಅಮೃತಪಡಿ ನೈವೇದ್ಯಕ್ಕೆ ಅಂಗ ರಂಗ ವೈಭವ, ಮಾಸಪೂಜೆ, ಮಾಸೋತ್ಸವ, ನಿತ್ಯ ನೈಮಿತ್ತಿಕ, ದೀಪಾರಾಧನೆ, ಪಂಚಪರ್ವ ಮುಂತಾದ ಕಾಲಗಳಲ್ಲಿ ಮಹಾಪೂಜೆ ನೈವೇದ್ಯಕ್ಕಾಗಿ, ಸಿಂಘಾಪುರ, ಹುಲಿಗಿಯ ಮಾಗಣಿಯ ಹರಿಯಲಾಪುರವನ್ನು ದಾನವಾಗಿ ನೀಡುತ್ತಾನೆ.[೧೫೧] ಅಂದು ಅತ್ಯಂತ ಪ್ರಸಿದ್ಧಿ ಹೋಂದಿದ ವಿರೂಪಾಕ್ಷ ದೇವಸ್ಥಾನದಲ್ಲಿ ಪಂಚಪರ್ವ ಆಚರಣೆ ಇದ್ದುದನ್ನು ಶಾಸನ ತಿಳಿಸುತ್ತದೆ. ಕ್ರಿ.ಶ. ೧೫೫೭ ರಲ್ಲಿ ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಆದವಾನಿ ರಾಜ್ಯಪಾಲನಾದ ಸುಂಕದ ಬನದರಸನ ಮಗನಾದ ಕರಿಬೇಡ ಸಂಕರಸನು ಕಂಪ್ಲಿಯ ಮಾಗಣಿಯಲ್ಲಿರುವ ಪಂಪಾವಿರೂಪಾಕ್ಷ ದೇವರ ಕಾರ್ತಿಕ ದೀಪಾರಾಧನೆ ಪಂಚಪರ್ವ ಮುಂತಾದ ದೇವತಾ ಕಾರ್ಯಗಳಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[೧೫೨]

ಅದೇ ರೀತಿ ಸದಾಶಿವರಾಯನು ವಿದ್ಯಾನಗರದಲ್ಲಿ ಆಳುತ್ತಿದ್ದಾಗ ವಿಠಲದ ನಂಮಾಳುವಾರನು ಪರಾಂಕುಶ ಮಂಟಪದಲ್ಲಿ ವಿಠಲದೇವರಿಗೆ ನಡೆಯುವ ಪೂಜಾ ಕಾರ್ಯಗಳಿಗಾಗಿ ಭೂ ದಾನ ನೀಡಿರುತ್ತಾನೆ. ವರುಷದಲ್ಲಿ ಒಮ್ಮೆ ನಡೆಯುವ ತಿರುನಕ್ಷತ್ರದಂದು ದೇವಾಲಯದ ಗಂಡು ಮೇಳ, ಹೆಣ್ಣು ಮೇಳಗಳನ್ನು ಕರೆಹಿಸಿ, ವೈಭವ ಮಾಡಿಸಿವುದರ ಜೊತೆ, ಸತ್ತಿಗೆ, ಪತಾಕಿ, ಬಾವುಟ, ತೇರ ಸಿಂಗಾರಕ್ಕೆ ಸೀರೆಗಳು, ಪಂಚಪರ್ವದ ದಿನ ತೇರ ಉತ್ಸವ, ತಿರುನಾಳುದಿನ, ಗೋಕುಲಾಷ್ಟಮಿ, ಊಟಿ ತಿರುನಾಳು, ವಾಮನ ಜಯಂತಿ, ಯುಗಾದಿ, ದೀಪಾವಳಿ, ರಾಮನವಮಿ, ಮಕರ ಸಂಕ್ರಾಂತಿ, ಈ ಉತ್ಸವಗಳಿಗೆ ಸಂಬಂಧಿಸಿದಂತೆ ರಾಮಸಾಗರದ ಹಿರಿಕಾಲುವೆ ಕೆಳಗೆ ಗದ್ದೆಯನ್ನು ಬಿಟ್ಟ ವಿವರವಿದೆ.[೧೫೩] ಅಂದರೆ ಪಂಚಪರ್ವದ ದಿನ ರಥೋತ್ಸವವೂ ನಡೆಯುತ್ತಿತ್ತು. ಅಲ್ಲದೆ ಹಲವು ಹಬ್ಬಗಳನ್ನು ಸಂಭ್ರಮದಿಂದ ಅಂದರೆ ಸಿಡಿಮದ್ದು, ಬಾವುಟಗಳನ್ನು ಹಾರಿಸುವುದರೊಂದಿಗೆ ಆಚರಿಸುತ್ತಿದ್ದರು ಎಂಬುದು ತಿಳಿಯುತ್ತದೆ.

ಅಂದು ಯಾವುದೇ ಶುಭ ಸಮಾರಂಭಗಳು ನಡೆದರೂ ಮೇರವಣಿಗೆ ಮೂಲಕ ಆಚರಿಸುತ್ತಿದ್ದರು ಅದಕ್ಕಾಗಿ ಪ್ರತ್ಯೇಕ ಬೀದಿಗಳಿದ್ದವು. ಹಾಗೂ ಅದಕ್ಕೆ ಒಪ್ಪಿಗೆಯನ್ನು ಪಡೆಯಬೇಕಾಗಿತ್ತು. ಕ್ರಿ.ಶ. ೧೫೮೫ರ ಒಂದು ಶಾಸನದಲ್ಲಿ ರವುಡು ಕುಂದಿಯ ಗೌಡ, ಸೇನಬೋವ, ಮುಂತಾದವರ ಭಿನ್ನಹದ ಮೇರೆಗೆ ಮುಕ್ಕುಂದಿಯ ಪೇಟೆಯನ್ನು ಹೊಸದಾಗಿ ಮಾಡಿಸಿ ಮಾಳಿಗೆ ಮನೆಗಳನ್ನು ಕಟ್ಟಿಸುತ್ತಾರೆ. ಇದಕ್ಕೆ ಸೋಮ ಬೀದಿಯ ಮೇರವಣಿಗೆ

ಹಕ್ಕನು ನೀಡುತ್ತಾರೆ. ಈ ಬೀದಿಯಲ್ಲಿ ಶುಭಕಾರ್ಯಗಳಲ್ಲಿ ಮದುವೆಗಳಲ್ಲಿ ಮಂಗಲ ಕೆಲಸ ಸಮೇತ ಮೆರವಣಿಗೆ ಬರಬಹುದಾಗಿತ್ತು.[೧೫೪]

ಕಟಿಹಬ್ಬ ಮತ್ತು ತುಡಿಹಬ್ಬ

ವಿಜಯನಗರ ಕಾಲದ ಶೈವ ದೇವಸ್ಥಾನಗಳಲ್ಲಿ ಆಚರಣೆಗೊಳ್ಳುತ್ತಿದ್ದ ಕಟಿ ಹಬ್ಬ ಮತ್ತು ತುಡಿ ಹಬ್ಬ ಪ್ರಮುಖವಾದವುಗಳು. ಈ ಎರಡು ಹಬ್ಬಗಳು ತುಳುನಾಡಿಗೆ ಸಂಬಂಧಿಸಿದ ಹಬ್ಬಗಳಾಗಿದ್ದಿರಬಹುದು. ಇವು ಎರಡೂ ಸಾಮೂಹಿಕವಾಗಿ ಆಚರಣೆಗೊಳ್ಳುತ್ತಿದ್ದ ಹಬ್ಬಗಳಾಗಿವೆ.[೧೫೫] ತುಡಿಯ ಹಬ್ಬ ಎಂದರೆ ಕಾರ್ತಿಕ ಮಾಸದ ದೀಪೋತ್ಸವ[೧೫೬] ಇಂದು ಸಹ ಕಾರ್ತಿಕ ಮಾಸದಲ್ಲಿ ದೇವಸ್ಥಾನದ ಆವರಣದಲ್ಲಿ ದೀಪಗಳನ್ನು ಹಚ್ಚುವರು. ಈ ಹಬ್ಬವನ್ನು ಆಚರಿಸುತ್ತಿದ್ದುದಕ್ಕೆ ಶಾಸನೋಕ್ತ ದಾಖಲೆಗಳಿವೆ. ಕ್ರಿ.ಶ. ೧೩೭೩ರಲ್ಲಿ ಬುಕ್ಕನ ಆಳ್ವಿಕೆಯ ಕಾಲದಲ್ಲಿ ಗೋಪರ ಒಡೆಯನು ಬಾರಕೂರು ರಾಜ್ಯವನ್ನು ಆಳುತ್ತಿದ್ದ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೋಟೇಶ್ವರ ದೇವಸ್ಥಾನಕ್ಕೆ ಭೂದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ, ನಂದಿನಾಥ, ಭೃಂಗನಾಥ, ವೀರಭದ್ರದೇವ ಮತ್ತು ಗಣಕುಮಾರ ಹೆಗ್ಗಡೆ ಎಂಬ ವ್ಯಕ್ತಿಗಳು ಕೋಟೇಶ್ವರದಲ್ಲಿ ಕೆಲವು ಭೂಮಿಗಳನ್ನು ಕ್ರಯಕ್ಕೆ ಕೊಂಡು ಕಾಟಿಯ ಹಬ್ಬದಂದು ದಾನ ನೀಡಿದರು.[೧೫೭] ವಿಜಯನಗರ ಕಾಲದಲ್ಲಿ ಮೇಲೆ ಹೇಳಿದ ಹಬ್ಬ-ಜಾತ್ರೆ, ಉತ್ಸವ, ರಥೋತ್ಸವಗಳಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳ ಮೂಲಕ ವಿನೋದವನ್ನು ಪಡೆಯುತ್ತಿದ್ದರು.

ಗೌರಿ ಉತ್ಸವ

ಗೌರಿ ಆಚರಣೆಯಲ್ಲಿ ಸಕ್ಕರೆ ಗೊಂಬೆಗಳಿಂದ ಆರತಿ ಬೆಳಗುವುದು ಹಬ್ಬದ ವಿಶೇಷ ಗೌರಿ ಹುಣ್ಣಿಮೆಯ ರಾತ್ರಿಯಂದು ಗ್ರಾಮದ ಓಣಿಯಲ್ಲಿ ಗೌರಿಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ. ಹೊಸ ಸೀರೆ, ಉಡುಪು ಧರಿಸಿದ ಹೆಣ್ಣುಮಕ್ಕಳು ಗೌರಮ್ಮನ ಮೂರ್ತಿಗೆ ಸಕ್ಕರೆ ಆರತಿ ಬೆಳಗುವರು. ಸಾಮಾನ್ಯವಾಗಿ ಎಲ್ಲಾ ವಯೋಮಾನದ ಹೆಣ್ಣುಮಕ್ಕಳು ಇರುತ್ತಾರೆ. ವಂಶಪಾರಂಪರಿಕವಾಗಿ ಗೌರಿ ಹುಣ್ಣಿಮೆಗೆ ಸಕ್ಕರೆ ಬೊಂಬೆ ತಯಾರು ಮಾಡುವ ಪ್ರತ್ಯೇಕ ಕುಟುಂಬಗಳಿರುತ್ತವೆ. ಒಂದೊಂದು ಗೊಂಬೆಯು ಒಂದೊಂದು ಕತೆಯನ್ನು ಸಂಕೇತಿಸುತ್ತವೆ. ಪಾರ್ವತಿ, ಒಂಟೆ, ಆನೆ, ರಥ, ಅರ್ಜುನ ಬಿಲ್ಲು, ಮಂಟಪ, ಆಂಜನೇಯ, ಬಸವಣ್ಣ ಅಲ್ಲದೆ ವಿವಿಧ ರೀತಿಯ ಪಶುಪಕ್ಷಿಗಳು ವಿವಿಧ ಬಣ್ಣಗಳಲ್ಲಿ ಸೃಷ್ಠಿಸಿರುತ್ತಾರೆ.

ಅಂದು ಗೌರಿ ಉತ್ಸವ ನಡೆಯುತ್ತಿತ್ತು ಎಂಬುದಕ್ಕೆ ಹೊಸವೂರ ಮಹಾಮಾಯಿಯ ಸ್ಥಾನಿಕರು ಆ ದೇವತೆಯ ಬಣ್ಣದ ಕೆಲಸ ಮಾಡಿದ ವಿಜಯನಗರದ ಕಟಕದ ಮಲ್ಲಯ್ಯನಿಗೆ ಗೌರಿ ಉತ್ಸವ ಮಾಡಲು ಎರಡು ಕೊಳಗ ಗದ್ದೆ ನೀಡಿದ ವಿವರವಿದೆ.[೧೫೮] ಅಂದು ಪ್ರತಿಯೊಂದು ಉತ್ಸವ ಕಾರ್ಯಕ್ರಮಗಳು ಸಂಭ್ರಮದಿಂದ ಆಚರಿಸಲ್ಪಡುತ್ತಿದ್ದವು. ದೇವತೆಗಳಿಗೆ ಉತ್ಸವ ಆಚರಣೆಗೆ ಪ್ರತ್ಯೇಕ ಉಯ್ಯಾಲೆ ಕಂಬಗಳನ್ನು ಮಾಡಿಸಿ ಸಂಭ್ರಮಿಸುತ್ತಿದ್ದರು. ತೆಲಗು ಭಾಷೆಯ ಒಂದು ಶಾಸನದಲ್ಲಿ ಅವರ ಕಾಲ ವಿಜಯನ ಸಂವತ್ಸರ ಚೈತು ಶು.೫ ಎಂದಿದೆ. ಬೋಖಿಸೆಟ್ಟಿಯ ಮಗ ಸಿರಿಗೆಸೆಟ್ಟಿಯ ಪತ್ನಿ ಮಾಟಿಮ್ಮ ಹಂಪಿಯಲ್ಲಿ ಉಯ್ಯಾಲೆ ಕಂಬಗಳನ್ನು ಮಾಡಿಸಿದಂತೆ

ಹೇಳಿದೆ. ಈ ರೀತಿಯಾಗಿ ದೇವತೆಗಳಿಗೆ ಉಯ್ಯಾಲೆ ಕಂಬಗಳನ್ನು ಮಾಡಿಸಿ ಅದರಲ್ಲಿ ದೇವತಾ ಮೂರ್ತಿಗಳನ್ನಿಟ್ಟು ಉಯ್ಯಾಲೆ ಆಡಿಸುವುದರ ಮೂಲಕ ಸಂಭ್ರಮಿಸುತ್ತಿದ್ದರು.[೧೫೯] ಅದೇ ರೀತಿ ಪಾಳೆಯಗಾರರ ಕಾಲದಲ್ಲಿಯೂ ಈ ಪದ್ಧತಿ ಮುಂದುವರೆದುಕೊಂಡು ಬಂದಿತು. ಚಿತ್ರದುರ್ಗದ ಕೋಟೆಯೊಳಗೆ ಉಯ್ಯಾಲೆ ಕಂಬವಿರುವುದನ್ನು ಕಾಣಬಹುದು. ಹಾಗೆ ಮನೆಯೊಳಗಡೆ ಶುಭ ಸಂದರ್ಭಗಳಲ್ಲಿ ಸಂಭ್ರಮದಿಂದ ಆಚರಿಸುತ್ತಿದ್ದರು. ಸ್ತ್ರೀಯರು ಗರ್ಭಣಿಯರಾದಾಗ, ಮಗು ಜನಿಸಿದಾಗ, ನಾಮಕರಣ ಮಕ್ಕಳಿಗೆ ಮೊದಲಸಲ ಕೂದಲು ತೆಗೆಸುವಾಗಲೂ ಹಬ್ಬದ ರೀತಿಯಲ್ಲಿ ಸಂಭ್ರಮಿಸುತ್ತಿದ್ಧರು. ಗಂಗಾದೇವಿ ವಿರಚಿತ ಮಧುರಾ ವಿಜಯಂನಲ್ಲಿ ಗರ್ಭಿಣಿಯಾದಾಗ, ಮಗು ಹುಟ್ಟಿದಾಗ, ಮೊದಲ ಸಲ ಕೂದಲು ತೆಗೆಸುವಾಗ ಮಾಡುವ ಆಚರಣೆಗಳಿವೆ.

ಈ ಅರಸಿಯು ಗರ್ಭಿಣಿಯಾದಾಗ ಅರಮನೆಯಲ್ಲಿ ಸಾಮ್ರಾಜ್ಯದಲ್ಲಿ ಮಾಡುವ ಒಂದು ಸಂಭ್ರಮ ಎಂದರೆ

ಪ್ರಜೆಗಳೆಲ್ಲರ ತಾಪ ಹರಿಸುವನು, ಪುರೂಹೂತ
ಸಮವಾಗಿ, ವಿಭವದೇಳ್ಗಯೆಲರಸ ತನ್ನ
ಕುಲಪುರೋತನೊರೆವ ಕಾಲದಲ್ಲಿ ಪುಂಸವನ
ಕ್ರಿಯೆಯನೆಸಗಿದ ತಕ್ಕ ಮರ್ಯದೆಯಿಂದ.[೧೬೦]

ರಾಣಿಯು ಗರ್ಭಣಿಯಾದಾಗ ಹೊಸ ರಾಜಕುಮಾರ ಬರುವ ನಿರೀಕ್ಷೆಯಲ್ಲಿ ಸಾಮಾನ್ಯ ಜನರು ಸಂಭ್ರಮಿಸುವರು. ಹಾಗೆ ರಾಜಪುರೋಹಿತನ ಸಮ್ಮುಖದಲ್ಲಿ ಎಲ್ಲಾ ಆಚರಣೆಗಳನ್ನು ಸಂಭ್ರಮದಿಂದ ಮಾಡುವರು ಜನ್ಮದಿನೋತ್ಸವ ಸಂದರ್ಭದಲ್ಲಿ ಎಲ್ಲಾ ಪ್ರಜೆಗಳಲ್ಲಿಯೂ ಹೊಸದಾಗಿ ಹುಟ್ಟಿದ ಮಗುವಿಗೆ ನಾಮಕರಣ ಮಾಡುವ ಪದ್ಧತಿ ಆಚರಣೆಯಲ್ಲಿತ್ತು. ಅರಸ ಹಾಗೂ ಪ್ರಾಂತ್ಯಗಳನ್ನು ಆಳುತ್ತಿದ್ದ ಶ್ರೀಮಂತರಲ್ಲಿ ಜನ್ಮದಿನದ ಉತ್ಸವ ಸಮಾರಂಭಗಳು ಸಾಮಾನ್ಯವಾಗಿದ್ದವು.[೧೬೧] ಹಾಗೆಯೇ ನಾಮಕರಣ ಮಾಡುವಾಗ

ಇಂತಿಗೆ ಪುರೋಹಿತನು ಒರೆದವೋಲ್ ಶುಭದಿನದಿ
ಸುತನಿಗೆಸಗಿದ ಜಾತಕರ್ಮದಿ ನರೇಂದ್ರ
ಮಂತ್ರಪ್ರಣೀತವಹ ಮುಖದನಲಾನಾ ಪರಿಯ
ತೇಜಸ್ವಿಯಾಗಿ ಬೆಳೆದನು ರಾಜಪುತ್ರ[೧೬೨]

ಅಂದರೆ ರಾಜಪುರೋಹಿತ ಒಂದು ಶುಭದಿನದಂದು ನಾಮಕರಣ ಮಾಡಿದ

ಅರಸ ಹಾಗೂ ಆತನ ಸಾಮಂತರಿಗೆ ತಮ್ಮ ಮಕ್ಕಳ ನಾಮಕರಣ ಸಮಾರಂಭದ ಕಾಲದಲ್ಲಿ ದೇವಾಲಯಗಳಿಗೆ ಮತ್ತು ಬ್ರಾಹ್ಮಣರಿಗೆ ದಾನಧರ್ಮಾದಿಗಳನ್ನು ಮಾಡುವುದು ಪದ್ಧತಿಯಾಗಿತ್ತು. ಈ ರೀತಿಯಲ್ಲಿ ಇಮ್ಮಡಿ ದೇವರಾಯನ ಮಗನಾದ ಮಲ್ಲಿಕಾರ್ಜುನರಾಯನು ತನ್ನ ಮಗನಾದ ನಾಲ್ಕನೆಯ ದೇವರಾಯನ ನಾಮಕರಣೋತ್ಸವ ಕಾಲದಲ್ಲಿ ಸ್ನಾನ ಮಾಡಿ ಗ್ರಾಮವೊಂದನ್ನು ದತ್ತಿ ನೀಡಲು ಸಿದ್ದನಾದುದನ್ನು ಕಾಣುತ್ತೇವೆ.[೧೬೩] ಮಕ್ಕಳಿಗೆ ಮೊದಲ ಸಲ ಕೂದಲನ್ನು ತೆಗೆಸುವಾಗಲೂ ಸಂಭ್ರಮದಿಂದ ಮಾಡುತ್ತಿದ್ದರು.

ಚೌಲಾದಿ ಕ್ರಿಯೆಗಳಾದವು ರಾಜಸವಾನುವಿಗೆ
ಸ್ವಯಂ ಶೋಭಿತನಾದ ಸರ್ವಕಲೆಗಳಲ್ಲಿ
ಗುರುಗಳಿಂದುಪದೇಶಿ ಪಡೆದರೆದು ನೆವಕಾಯ್ತು
ಕಲೆಯ ಗನಿಯಾಗಿದ್ದ ರಾಜಪುತ್ರನಿಗೆ[೧೬೪]

ಹೀಗೆ ಅಂದು ಪ್ರತಿಯೊಂದು ದೇವರ ಉತ್ಸವ, ಆಚರಣೆ, ಮನೆಯ ಶುಭಕಾರ್ಯಗಳನ್ನು ವಿಜೃಂಭಣೆಯಿಂದ ಸಂಬಂಧಿಕರು, ಸ್ನೇಹಿತರು ಎಲ್ಲರೂ ಸೇರಿ ಆಚರಿಸುತ್ತಿದ್ದರು.

ವಿಜಯನಗರದ ಅನೇಕ ಶಾಸನಗಳಲ್ಲಿ ಮಾಸೋತ್ಸವ, ಪಕ್ಷೋತ್ಸವ, ಉತ್ಸವ, ಹಾಗೂ ಮೇಲೆ ಹೇಳಿದ ಹಬ್ಬಗಳು ಪದೇ ಪದೇ ಪ್ರಸ್ತಾಪಗೊಳ್ಳುತ್ತವೆ. ಅಂದರೆ ಅಂದು ಅಪಾರ ಭಕ್ತಿಯುಳ್ಳ ಜನ ಸಮೂಹವಿದ್ದಿತು. ದೇವರುಗಳಿಗೆ, ಭಕ್ತಿಯಿಂದ, ಪ್ರತಿನಿತ್ಯ ಅಂಗ, ರಂಗ ವೈಭೋಗಗಳೊಂದಿಗೆ ಪೂಜೆ ಸಲ್ಲಿಸುತ್ತಿದ್ದರು. ವಿಶೇಷ ದಿನಗಳೆಂದು ಜನಸಾಮಾನ್ಯರಾಧಿಯಾಗಿ ಅರಸ, ಮಾಂಡಲಿಕರು ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಿದ್ದರು. ಅಂದು ನೃತ್ಯ, ಸಂಗೀತ, ಹಾಡು, ಭಜನೆಗಳ ಮುಖಾಂತರ ವಿನೋದವನ್ನು ಪಡೆಯುತ್ತಿದ್ದರು. ದೇವಾಲಯದ ಪ್ರಾಂಗಣದಲ್ಲಿ ಪ್ರತ್ಯೇಕ ಭಜನೆ ಮಂಟಪ, ಕಲ್ಯಾಣ ಮಂಟಪ, ಉತ್ಸವ ಮಂಟಪಗಳಿರುವುದೆ ಇದಕ್ಕೆ ಸಾಕ್ಷಿ. ಇವರ ದೇವಾಲಯಗಳ ಮೇಲಿನ ಶಿಲ್ಪ, ವಾದ್ಯಪರಿಕರಗಳನ್ನು ಗಮನಿಸಿದರೆ ಇವರು ಎಷ್ಟು ಮನರಂಜಕರಾಗಿದ್ದರು ಎಂಬುದು ತಿಳಿಯುತ್ತದೆ. ಹೀಗೆ ಅಂದು ಯಾವುದೇ ಒಂದು ಶುಭ ಕಾರ್ಯವನ್ನು ವೈಭವದಿಂದ ಮಾಡುತ್ತಿದ್ದರು. ವಿಜಯನಗರ ಸಾಮ್ರಾಜ್ಯದ ಅರಸರು, ಕೇವಲ ಸಾಮ್ರಾಜ್ಯ ವಿಸ್ತರಣೆಯಲ್ಲಿ ತೊಡಗಿಕೊಳ್ಳದೆ ಧರ್ಮದ ಉಳಿವಿಗಾಗಿ ಮನಃಶಾಂತಿಗಾಗಿ ಬಿಡುವಿನ ವೇಳೆಯಲ್ಲಿ ಅನೇಕ ರೀತಿಯ ಮನರಂಜನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಶಾಸನೋಕ್ತ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಅಂದು ಪ್ರತಿಯೊಂದು ಹಬ್ಬ, ಉತ್ಸವ, ಜಾತ್ರೆ, ರಥೋತ್ಸವಗಳನ್ನು ಮೇರವಣಿಗೆ, ನೃತ್ಯ, ಸಂಗೀತ ಕಾರ್ಯಕ್ರಮಗಳೊಂದಿಗೆ ಮಾಡುತ್ತಿದ್ದರು.

ಈ ಮೇರವಣಿಗೆಯ ವ್ಯವಸ್ಥೆಯನ್ನು ನಡೆಸಲು ರಾಜ್ಯದ ಹಿರಿಯ ಮುಖಂಡರು ನಡುಕಟ್ಟಿ ನಿಂತಿರುತ್ತಿದ್ದರು. ಈ ಉತ್ಸವಗಳಿಗೆ ಅಸಂಖ್ಯಾತ ಜನ ನೆರೆಯುತ್ತಾರೆ. ವಿಧ ವಿಧ, ವೇಷಗಳೂ, ಹಾಸ್ಯಗಾರರೂ, ತಮ್ಮ ಆಟಪಾಟಗಳನ್ನು ತೋರಿಸುತ್ತಾ ಹೋಗುತ್ತಾರೆ. ಈ ರೀತಿಯ ಮೇರವಣಿಗೆಗಳು ರಾತ್ರಿವರೆಗೂ ಜರುಗುತ್ತಿದ್ದವು.[೧೬೫]

ಬಡಿಗೆ ಹಬ್ಬ

ವಿಜಯನಗರ ಕಾಲದಲ್ಲಿ ಮಹಾನವಮಿ ಉತ್ಸವದಲ್ಲಿ ಸೈನಿಕರಿಗೆ ಹೆಚ್ಚಿನ ಮಹತ್ವವಿತ್ತು. ರಾಯರ ಕಾಲದಲ್ಲಿ ಸೈನಿಕರು ಪ್ರದರ್ಶಿಸುತ್ತಿದ್ದ ವಿವಿಧ ಬಗೆಯ ಖಡ್ಗದಾಟ, ಬಾಣದ ಸಿಡಿತ, ಕುಸ್ತಿ ಮೊದಲಾದವು ಹೆಚ್ಚಿನ ಮಹತ್ವ ಹೊಂದಿದ್ದವು. ಅವರ ಕುರುಹು ಎಂಬಂತೆ ಇಂದಿಗೂ ಮೀನಗೊಂದಿ ಮಲ್ಲಯ್ಯನ ದಸರಾ ಉತ್ಸವದಲ್ಲಿ ನಡೆಯುವ ಬಡಿಗೆ ಆಟವು ಅಂದಿನ ಯೋಧ ಪರಂಪರೆಯ ಪ್ರತೀಕ ಎಂದು ಗುರುತಿಸಬಹುದು.[೧೬೬] ಮೀನಗೊಂದಿಯು ಇಂದಿನ ಬಳ್ಳಾರಿ ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಆಲೂರು

ತಾಲ್ಲೂಕಿನ ಹೊಳಗುಂದ ಮಂಡಲದ ನೆರಣಕಿ ಗ್ರಾಮದ ಬಳಿಯ ದೇವರ ಮಲ್ಲಯ್ಯನ ಗುಡ್ಡದಲ್ಲಿ ಈ ಆಟ ನಡೆಯುತ್ತದೆ. ವಿಜಯದಶಮಿಯ ದಿನ ಸೈನಿಕರಲ್ಲದೆ ಸಾಮಾನ್ಯ ಜನರೂ ಇದರಲ್ಲಿ ಭಾಗವಹಿಸಿ ತಮ್ಮ ಆನಂದೋತ್ಸಾಹಗಳನ್ನು ಗಮನಾರ್ಹವಾಗಿ ಪ್ರಕಟಿಸುತ್ತಿದ್ದರು.

ಸೈನಿಕರು ಆಗಾಗ್ಗೆ ತಂಡೋಪತಂಡವಾಗಿ ಬೆಟ್ಟಗುಡ್ಡಗಳ ಇಳಿಜಾರಿನಿಂದ ಕೆಳಗಡೆ ನುಗ್ಗಿ ಬರುತ್ತಾ ಕೇಕೆಗಳನ್ನು ಹಾಕುತ್ತಾ ತಮ್ಮ ಕೈಗಳಲ್ಲಿದ್ದ ಗುರಾಣಿಗಳನ್ನು ಬಡಿಯುತ್ತಾ ಹಿಡಿದಿದ್ದ ಆಯುಧಗಳನ್ನು ಝುಳಪಿಸುತ್ತಿದ್ದರು. ಅದರಂತೆ ಮೀನಗೊಂದಿಯಲ್ಲಿಯೂ ಜನರು ತಮ್ಮ ಕೈಗಳಲ್ಲಿ ಹಿಡಿದ ಉದ್ದವಾದ ಬಡಿಗೆಗಳನ್ನು ತಂಡೋಪತಂಡವಾಗಿ ನಿಂತು ಬಡಿಯುತ್ತಾರೆ. ನೆರೆದ ಸಾಮಾನ್ಯ ನೋಡುಗರು ಅವರಿಗೆ ಭಂಡಾರವನ್ನು ಚೆಲ್ಲಿ ಕೇಕೆ ಹೊಡೆದು ಹುರಿದುಂಬಿಸುತ್ತಾರೆ. ಆಗ ಗ್ರಾಮಗಳಿಂದ ಬಂದ ಬಡಿಗೆ ಹಿಡಿದ ಗುಂಪು ಅಲ್ಲಲ್ಲಿ ಚಿಕ್ಕ ಬೆಟ್ಟಗಳ ಮೇಲಿನಿಂದ ಬಡಿಗೆಯ ನಾದವನ್ನು ಪ್ರದರ್ಶಿಸುತ್ತಾರೆ. ಭರತೇಶವೈಭವದಲ್ಲಿ ದಿಗ್ವಿಜಯದ ಪ್ರಕರಣದ ನವರಾತ್ರಿ ಸಂಧಿಯಲ್ಲಿ ರತ್ನಾಕರ ವರ್ಣಿಯು ರಾಯನ ಕಾಲದ ನವರಾತ್ರಿಯ ವೈಭವವನ್ನು ವರ್ಣಿಸಿದ್ದಾನೆ ಅಲ್ಲಿ ಓಲಗ ರಾತ್ರಿ ನೆರೆಯಿತು. ಅನೇಕ ಬಗೆಯ ಬಾಣಗಳನ್ನು ಉರಿಸುತ್ತಿದ್ದರು, ಕತ್ತಿ, ಕಠಾರಿ, ಬೆತ್ತ, ಕಕ್ಕಡೆ ಕೊಡಲಿ ಚೂರಿ ಮುಂತಾದವುಗಳನ್ನು ಪ್ರದರ್ಶಿಸುತ್ತಿದ್ದ ಜನರನ್ನು ಭೂಪಾಲ ನಿಂತು ನೋಡಿದ ವಿವರಗಳಿವೆ.

ರಾಜಧಾನಿ ಹಂಪಿಯಲ್ಲಿ ಚಕ್ರವರ್ತಿಯ ಸಮ್ಮುಖದಲ್ಲಿ ನಡೆಯುತ್ತಿದ್ದ ಈ ಸೈನಿಕರ ಕವಾಯತು, ಶೌರ್ಯ ಪ್ರದರ್ಶನ ಅವರ ಆಡಳಿತಕ್ಕೆ ಒಳಪಟ್ಟ ಎಲ್ಲಾ ಪ್ರದೇಶಗಳಲ್ಲಿಯೂ ಆಯಾ ರಾಜರು, ಸಾಮಂತರು, ನಾಯಕರು ಆಚರಿಸಿರಬೇಕು. ಅಲ್ಲದೆ ವಿಜಯನಗರದ ಈ ಸಮೃದ್ಧಿಯು ಕೃಷ್ಣದೇವರಾಯನ ದಂಡಬೀಡು ಬಿಟ್ಟಿದ್ದ ಪಾಳೆಯದಲ್ಲಿಯೂ ಕಾಣಬಹುದು. ಬಹುಶಃ ವಿಜಯನಗರದಲ್ಲಿ ಸೈನಿಕರು ಈ ಮೀನಗೊಂದಿ ಪರಿಸರದ ವಿಶಾಲವಾದ ಬೆಟ್ಟಗಳ ನಡುವಿನ ಮೈದಾನದಲ್ಲಿ ಬೀಡು ಬಿಟ್ಟಿದ್ದಿರಬೇಕು. ಅಲ್ಲದೇ ಇಲ್ಲಿರುವ ಮದ್ದಿನಮನೆ ಎಂಬುದು ಅವರ ಮದ್ದುಗುಂಡು, ಆಯುಧಾಗಾರವಾಗಿರಬೇಕು. ಇದನ್ನು ಜನಸಾಮಾನ್ಯರು ಐತಿಹ್ಯಕಟ್ಟಿ ಕೃಷ್ಣದೇವರಾಯನ ಸೈನಿಕರು ಇದ್ದ ಜಾಗ ಎಂದು ಹೇಳುತ್ತಾರೆ. ದಂಡು ಬೀಡು ಬಿಟ್ಟಿದ್ದ ಈ ಪ್ರದೇಶದಲ್ಲಿ ವಿಜಯ ದಶಮಿಯ ದಿನದಂದು ಆನಂದೋತ್ಸಾಹದಿಂದ ಕುಣಿದಾಡುತ್ತಿದ್ದರು. ಮೂಲತಃ ಈ ಮೀನಗೊಂದಿ ಮೈಲಾರ ಕ್ಷೇತ್ರ ಇಲ್ಲಿ ಕಾರಣಿಕ ಮುಂತಾದ ಆಚರಣೆಗಳು ನಡೆಯುತ್ತವೆ. ವಿಜಯನಗರ ಕಾಲಕ್ಕೆ ಈ ಸೈನಿಕರು ಇಲ್ಲಿ ಬೀಡುಬಿಟ್ಟು ಇಂತಹ ಸೈನಿಕ ಹಬ್ಬಕ್ಕೆ ಕಾರಣವಾಗಿರಬಹುದು.[೧೬] ಇಂದಿಗೂ ಅಲ್ಲಿ ವಿಜೃಂಭಣೆಯಿಂದ ಹಬ್ಬವನ್ನು ಆಚರಿಸುತ್ತಾರೆ.

ಬೇಟೆ ಹಬ್ಬ

ವಿಜಯನಗರ ಕಾಲದಲ್ಲಿ ಬೇಟೆಯು ಎಷ್ಟು ಪ್ರಾಮುಖ್ಯತೆ ಪಡೆದಿತ್ತು ಎಂಬುದನ್ನು ಚರ್ಚಿಸಲಾಗಿದೆ. ಆದರೆ ಸಿಕ್ಕ ಬೇಟೆಯನ್ನು ಹಂಚಿಕೊಳ್ಳುವಾಗ ಅವರು ಪಡುವ ಸಡಗರ ಸಂಭ್ರಮದಲ್ಲಿ ಆಹಾರ ವಿನಿಮಯವಲ್ಲದೆ. ಸಾಮೂಹಿಕವಾಗಿ ಬೇಟೆ ನೃತ್ಯವನ್ನು ಪ್ರದರ್ಶಿಸುತ್ತಿದ್ದರು. ಆದಿ ಮಾನವರ ಕಾಲದಲ್ಲಿಯೂ ಇದು ಇತ್ತು ಎಂದು ಪುರಾತತ್ವ ಆಕರಗಳ ಹಿನ್ನೆಲೆಯಲ್ಲಿ

ಹೇಳಲಾಗಿದೆ. ವಿಜಯನಗರದಲ್ಲಿ ಇದು ರಾಜನಿಗೂ ಪ್ರಜೆಗಳಿಗೂ ತುಂಬಾ ಇಷ್ಟವಾದ ಔಚಿತ್ಯ ಕಾರ್ಯಕ್ರಮವು ಆಗಿದ್ದಂತಿದೆ. ಇಂತಹ ಉತ್ಸವ ಇಂದು ಯುಗಾದಿ ಸಂದರ್ಭದಲ್ಲಿ ಮಾತ್ರ ನೋಡಲು ಸಾಧ್ಯ. ಆದರೆ ವಿಜಯನಗರದಲ್ಲಿ ಸಂದರ್ಭಕ್ಕೆ ತಕ್ಕಂತೆ ಆಯೋಜಿಸಲಾಗಿತ್ತು. ಹಂಪಿಯ ಮಹಾನವಮಿ ಹಬ್ಬವನ್ನು ಆಚರಿಸುವ ಪೂರ್ವದಲ್ಲಿ ಬೇಟೆ ಹಬ್ಬವನ್ನು ಆಚರಿಸುತ್ತಿದ್ದರು.[೧೬೮] ಈ ಬೇಟೆ ಹಬ್ಬವು ಸಾರ್ವತ್ರಿಕವಾಗಿ ನಡೆಯುತ್ತಿತ್ತಲ್ಲದೆ. ಇಂಥಹ ಹಬ್ಬದಿಂದಲೇ ಮಹಾನವಮಿ ಹಬ್ಬಕ್ಕೆ ಪ್ರಾಶಸ್ತ್ಯ ಬಂದಂತಿದೆ,

ಇನ್ನೂ ಕೆಲವು ಆಚರಣೆಗಳ ಮೂಲಕ ನೋಡುವುದಾದರೆ. ಬೇಟೆಗಾರರು ತಮ್ಮ ಆಯುಧಗಳನ್ನು ಪೂಜಿಸುವುದು ಈ ಹಬ್ಬದಲ್ಲಿ ಮತ್ತು ಬೇಟೆಯನ್ನು ಆಯುಧಗಳಿಗೆ ಬಲಿ ಕೊಡಲಾಗುತ್ತದೆ. ವಿಜಯನಗರದ ಕಾಲದ ಮಹಾಯಾತ್ರಾಸ್ಥಳ ಧಾರ್ಮಿಕ ನೆಲೆಯಾದ ತಿರುಪತಿಯಲ್ಲಿ ಬೇಟೆ ಹಬ್ಬವು ನಡೆಯುತ್ತಿದ್ದುದು ಮೊದಲ ಉದಾಹರಣೆ. ಇಲ್ಲಿರುವ ಮಹಾನವಮಿ ದಿಬ್ಬದಲ್ಲಿ ಶೇ ೭೫ ಭಾಗ ವನ್ಯ ಜೀವಿಗಳ ಬೇಟೆ ದೃಶ್ಯಗಳ ಬಗ್ಗೆ ಇರುವ ಶಿಲ್ಪ ಪಟ್ಟಿಕೆಗಳನ್ನು ಅವಲೋಕಿಸಿದರೆ ಬೇಟೆ ನೃತ್ಯ, ಬೇಟೆಹಬ್ಬ ಆಚರಿಸುವ ಬೇಟೆ ದಿಬ್ಬಣವಾಗಿರಬೇಕೆಂದು ನಂಬಬಹುದಾಗಿದೆ. ತಿರುಪತಿ ತಿರುಮಲೆಯಲ್ಲಿ ಬೇಟೆ ಹಬ್ಬವನ್ನು ಬ್ರಹ್ಮೋತ್ಸವ ಆದ ಮೇಲೆ ೨ನೆಯ ದಿನ ದೀಪಾವಳಿ, ೧ದಿನದ ಕಾರ್ತಿಕ ಹಬ್ಬ, ೧ ದಿನ ಬೇಟೆ ಹಬ್ಬ ಮತ್ತು ಒಂದು ದಿನ ಕಣುವ ಹಬ್ಬ ಮಾಡುತ್ತಿದ್ದರು. ಬೇಟೆ ಹಬ್ಬ ಬಹುತೇಕ ಬೇಸಿಗೆಯ ದಿನಗಳಿಂದಲೇ ಕೂಡಿರುತ್ತದೆ. ತಿರುಪತಿಯಲ್ಲಿ ನಡೆಯುವ ಬೇಟೆಹಬ್ಬಕ್ಕೆ ೧೦೦ ಹಣ್ಣು, ಕಬ್ಬು, ಬೆಲ್ಲ, ತೆಂಗಿನಕಾಯಿ, ಎಲೆ, ಅಡಿಕೆ, ಹೂವು, ಪತ್ರೆ ಮೊದಲಾದ ವಸ್ತುಗಳನ್ನು ಪೂಜೆಗೆ ಬಳಸುತ್ತಿದ್ದರು. ಭಕ್ತಾದಿಗಳು ಈ ಹಬ್ಬಕ್ಕೆ ಉದಾರವಾಗಿ ದಾನಕೊಟ್ಟ ಉದಾಹರಣೆಗಳಿವೆ. ತಿಮ್ಮಪ್ಪ ಸಂಪ್ರದಾಯದಂತೆ, ಬೆಲ್ಲ, ಎಲೆ, ಅಡಿಕೆ, ಕಾಯಿ, ೫೦ ಅಡಿಕೆ, ೧೦೦ ಎಲ್ಲೆ ಮೊದಲಾದ ವಸ್ತುಗಳನ್ನು ತಪ್ಪದೆ ಗೋವಿಂದನಿಗೆ ಅರ್ಪಿಸಿದ ಭಕ್ತಾದಿಗಳ ದೇಣಿಗೆಗೆ ಲೆಕ್ಕವಿಲ್ಲ, ಬೇಟೆ ಹಬ್ಬದ ದಿನ ಶ್ರೀ ವೆಂಕಟೇಶ್ವರನನ್ನು ಹೊರಗೆ ಆಹ್ವಾನಿಸುವ ಪ್ರಸಂಗವಿದೆ. ಬೇಸಿಗೆ ಅಥವಾ ಸುಗ್ಗಿಯ ಹಬ್ಬದಂತೆ ಬೇಟೆ ಹಬ್ಬವನ್ನು ತಿರುಪತಿ ಗೋವಿಂದರಾಜನ ಹೆಸರಿನಿಂದ ಸೌಂದರ್ಯ ಇಮ್ಮಡಿಗೊಳಿಸಿ ೨ ಮೊರ ಅಕ್ಕಿ, ತುಪ್ಪ, ಹಣ್ಣು ಕಾಯಿ, ೨೦೦ ಕಬ್ಬಿನ ದಂಟು, ಎಲೆಗಳ, ಮೆಣಸು ೧೦೦ ಲವಂಗ ೨೦೦ ಎಲೆ, ಅಡಿಕೆ ಮತ್ತು ತಾಳೆಗರಿಗಳನ್ನು ಹಂಚಲಾಗುತ್ತವೆ. ಮಂಟಪದಲ್ಲಿ ಆ ದಿನ ಕೊಳದ ಹತ್ತಿರ ಬೇಟೆ ಹಬ್ಬ, ಅಮವಾಸ್ಯೆ ಆದ ಮೇಲೆ ಬಂಡಿ ಹಬ್ಬ ಆಗುತ್ತದೆ. ತೆಲುಗಿನಲ್ಲಿ ಬೇಟೆ ಹಬ್ಬಕ್ಕೆ ಪಾಡಿಯವೆಟ್ರೈ ಎಂದು ಕರೆಯುತ್ತಾರೆ. ವಿಜಯನಗರದ ಕೇಂದ್ರವಾದ ಹಂಪೆಯಲ್ಲಿ ಇತರೆ ಪ್ರದೇಶಗಳಲ್ಲಿ ಬುಡಕಟ್ಟು ಜನರು ಬೇಟೆ ದಿಬ್ಬ, ವೆಂಕಟಗಿರಿಪುರ ಎಂದು ಆರಾಧಿಸುತ್ತಾರೆ. ಅಡವಿಚೆಂಚರು ೧ ದಿನ ತಿರುಪತಿಯಲ್ಲಿ ನಡೆಸಿದಂತೆ ಬೇಟೆ ಹಬ್ಬವನ್ನು ತಾವು ಆಚರಿಸಿಕೊಂಡು ಬಂದಿರುತ್ತಾರೆ ಹಂಪೆಯ ಬೇಟೆಕಾರರ ಹೆಬ್ಬಾಗಿಲು ಬಳಿ ತಿರುಪತಿ ಗುಡ್ಡವಿದ್ದು ಇಲ್ಲಿ ಸಾಂಕೇತಿಕವಾಗಿ ಬೇಟೆ ಹಬ್ಬವನ್ನು ಮಾಡುತ್ತಿದ್ದರಂತೆ.[೧೬೯] ಒಟ್ಟಾರೆ ವಿಜಯನಗರ ಕಾಲದಲ್ಲಿ ಬೇಟೆ ಕಾರ್ಯಕ್ರಮವಿತ್ತು. ಅದನ್ನು ವಿನೋದಕ್ಕಾಗಿ ಆಡುತ್ತಿದ್ದರು. ಅಲ್ಲದೆ ಅದು ಆಹಾರ ಮಾದ್ಯಮ, ವ್ಯತ್ಯಾಸ, ರಕ್ಷಣೆ ವಿವಿಧ ಉಪಯೊಗಗಳಿಗೆ ಒಳಗಾಗಿತ್ತು.

ನಾಗರ ಪಂಚಮಿ

ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿ ಅನೇಕ ವೃಕ್ಷ, ಪ್ರಾಣಿ, ಪಕ್ಷಿ ಸರ್ಪ ವಿಶೇಷಗಳು ದಿವ್ಯಶಕ್ತಿಗಳ ಸಂಕೇತವಾಗಿ ಪೂಜಾರ್ಹವೆನಿಸಿವೆ. ಹಿಂದೂ ಸಂಸ್ಕೃತಿಯ ದಶಾವತಾರಗಳಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ ಮುಂತಾದ ಪ್ರಾಣಿಗಳಿರುವುದು ಗಮನಾರ್ಹ. ಗಣಪತಿಯ ಹೊಟ್ಟೆಯ ಪಟ್ಟಿಯಾಗಿ, ಶಿವನ ಆಭರಣವಾಗಿ, ವಿಷ್ಣುವಿನ ಹಾಸಿಗೆಯಾಗಿ, ಕುಂಡಲಿನೀ ಶಕ್ತಿಯ ಪ್ರತೀಕವಾಗಿ, ತ್ರಿಪುರ ಸಂಹಾರ ಕಾಲದಲ್ಲಿ ಮೇರುವೆಂಬ ಬಿಲ್ಲಿನ ಹೆದೆಯಾಗಿ, ಸಮುದ್ರ ಮಂಥನ ಕಾಲದಲ್ಲಿ ಮಂದರಪರ್ವತವೆಂಬ ಕಡೆಗೋಲಿನ ಹಗ್ಗವಾಗಿ, ದುರ್ಯೋಧನನ ಧ್ವಜ ಚಿಹ್ನೆಯಾಗಿ, ಭೂಮಿಯನ್ನು ಹೊತ್ತ ಆದಿಶೇಷನಾಗಿ, ಪಾರ್ಶ್ವನಾಥ ತೀರ್ಥಂಕರನ ಶಿರೋಲಾಂಛನವಾಗಿ, ಲಕ್ಷ್ಮಣ, ಬಲರಾಮ, ಸುಬ್ರಹ್ಮಣ್ಯ ಸ್ವಾಮಿಯ ಅನನ್ಯ ಸ್ವರೂಪವಾಗಿರುವ ನಾಗ ಪ್ರಾಚೀನ ಕಾಲದಿಂದಲೂ ಭಾರತಿಯರಿಗಷ್ಟೇ ಅಲ್ಲದೆ ಜಪಾನ್, ಚೀನ, ಈಜಿಪ್ಟ್, ಗ್ರೀಸ್ ಮುಂತಾದ ಪುರಾತನ ಸಂಸ್ಕೃತಿಯುಳ್ಳ ಜನತೆಗೂ ಪೂಜಾರ್ಹವಾಗಿದೆ. ಸಿಂಧೂ ಸಂಸ್ಕೃತಿಯ ಅವಶೇಷಗಳಲ್ಲಿ ಸರ್ಪಮಿಥುನ ಸಿಕ್ಕಿದ್ದನ್ನು ಗಮನಿಸಿದಾಗ ಮಾನವ ಜನಾಂಗ ಆದಿಕಾಲದಿಂದಲೂ ಈ ನಾಗಾರಾಧನೆ ಮಾಡುತ್ತಿದ್ದುದು ತಿಳಿಯುತ್ತದೆ. ನಮ್ಮ ದೇಶದಲ್ಲಿ ಶೈವ, ವೈಷ್ಣವ, ಶಾಕ್ತ, ಬೌದ್ಧ, ಜೈನ ಮುಂತಾದ ಎಲ್ಲಾ ಸಂಪ್ರದಾಯಗಳಲ್ಲೂ ನಾಗಪೂಜೆ ಬಳಕೆಯಲ್ಲಿದೆ ಇಷ್ಟಾರ್ಥ ಸಿದ್ಧಿಗಾಗಿ, ಪುತ್ರ ಪ್ರಾಪ್ತಿಗಾಗಿ ಪ್ರಾರ್ಥಿಸುವ, ನಾಗ ಸತ್ತರೆ ವೈದಿಕ ರೀತಿಯಲ್ಲಿ ಉತ್ತರ ಕ್ರೀಯೆ ನಡೆಸುವುದೂ ಉಂಟು.[೧೭]

ಸಾಮಾಜಿಕ ದೃಷ್ಟಿ

ದಯವೇ ಧರ್ಮದ ಮೂಲವಯ್ಯ ಎಂಬುದು ಎಷ್ಟು ಸತ್ಯವೋ ಭಯವೇ ಧರ್ಮದ ಮೂಲವಯ್ಯ ಎಂಬುದು ಅಷ್ಟೇ ಸತ್ಯ. ಪ್ರಾಚೀನ ಕಾಲದಲ್ಲಿ ಹಾವಿನ ಭಯಂಕರ ವಿಷವನ್ನು ಸ್ಮರಿಸಿ, ಅವುಗಳ ಬಾಧೆ ಬರದಿರಲೆಂಬ ಉದ್ದೇಶದಿಂದ ಈ ಹಬ್ಬ ಆಚರಣೆಗೆ ಬಂದಿತೆಂದು ಊಹಿಸಬಹುದು. ಎಲ್ಲೆಲ್ಲೂ ಹಸಿರು ತುಂಬಿ ಕಂಗೊಳಿಸುವ ಮಳೆಗಾಲದಲ್ಲಿ ಬರುವ ಶ್ರಾವಣ ಮಾಸದಲ್ಲಿ ಹಾವುಗಳ ಕಾಟ ಸ್ವಲ್ಪ ಹೆಚ್ಚು. ಈ ವಿಷಜಂತುಗಳ ಬಾಧೆ ನಮಗೆ ತಟ್ಟದಿರಲಿ ಎಂಬ ಉದ್ದೇಶ ಪೂಜಾ ರೂಪದಲ್ಲಿ ಪರಿಣಮಿಸಿರಬಹುದು. ಈ ನಾಗಪೂಜೆ ಆರ್ಯರಿಗಿಂತಲೂ ಮುಂಚೆಯೇ ಭಾರತದಲ್ಲಿದ್ದ ದ್ರಾವಿಡ ಜನಾಂಗದ ಹಬ್ಬವಾಗಿದ್ದು, ನಂತರ ಆರ್ಯರೂ ಇದನ್ನು ಒಪ್ಪಿ ಪುರಾಣಾದಿಗಳಲ್ಲಿ ಸೇರಿಸಿರಬೇಕು. ಮುಂದೆ ನೃತ್ಯ, ಸಂಗೀತ, ವಾಸ್ತುಶಿಲ್ಪ, ಮುಂತಾದ ಕಲಾಪರಿಣಿತರಾದ ನಾಗ ವಂಶಗಳು, ಇತ್ತೀಚಿಗೆ ನಾಗಜನಾಂಗದ ಒಂದು ಪ್ರಾಂತ್ಯಕೂಡ (ನಾಗಾಲ್ಯಾಂಡ್) ಆಗಿರುವುದು ಗಮನಾರ್ಹ.

ಶಾವಣೇ ಪಂಚಮಿ ಶುಕ್ಲಾ ಸಂಪ್ರೋಕ್ತಾ ನಾಗಪಂಚಮಿ!
ಯೇ ತಸ್ಯಾಂ ಪುಜಯಂತೀಹ ನಾಗಾನ್ ಭಕ್ತಿ ಪುರಸ್ಸರಾಃ!![೧೮]
ನತೇಷಾಂ ಸರ್ಪತೋವೀರ, ಭಯಂ ಭವತಿ ಕಂತ್ರೆಚಿತ್

ಅಂದರೆ, ಶ್ರಾವಣ ಶುದ್ಧ ಪಂಚಮಿಗೆ ನಾಗಪಂಚಮಿ ಎಂದು ಹೆಸರು. ಅಂದು ಭಯಭಕ್ತಿಯಿಂದ ನಾಗಾರಾಧನೆ ಮಾಡುವವರಿಗೆ ಸರ್ಪಭಯವಿಲ್ಲ. ಕೃಷ್ಣ ಯಜುರ್ವೇದದಲ್ಲಿ ಬರುವ ಈ ನಾಗಪೂಜಾ ಮಂತ್ರ ಅರ್ಥಪೂರ್ಣವಾಗಿದೆ. ನಮೋ ಅಸ್ತು ಸರ್ಪೇಭ್ಯೋ ಯೇಕೇಚ ಪೃಥಿವೀ ಮನು!

ಯೇ ಅಂತರಿಕ್ಷೇ ಯೇ ದಿವೀತೇಭ್ಯಃ ಸರ್ಪೇಭ್ಯೋನಮಃ!

ಈ ಮಂತ್ರದಿಂದ ಪೂಜಿಸುವ ಭಕ್ತರಿಗೆ ಪುತ್ರ-ಪೌತ್ರಾದಿ ಸಂಪತ್ತು ಲಭಿಸುವುದಲ್ಲದೆ ಸರ್ಪಭಯ ನಿವಾರಣೆಯಾಗುತ್ತದೆ. ನಾಗಾರಾಧನೆ ಭಾರತದ ಬಹುಪ್ರಾಚೀನ ಆರಾಧನೆ. ನಾಗನನ್ನು ಸಮೃದ್ಧಿಯ ಹಾಗೂ ಫಲವಂತಿಕೆಯ ಸಂಕೇತವಾಗಿ ಪರಿಭಾವಿಸಲಾಗುತ್ತದೆ. ಕರ್ನಾಟಕದ ಉದ್ದಗಲಕ್ಕೂ ವ್ಯಾಪಕವಾದ ನಾಗಾರಧನೆಯ ಪ್ರಕಾರವೆಂದರೆ ನಾಗರಪಂಚಮಿ ಹಬ್ಬ. ಶ್ರಾವಣ ಮಾಸದ ಶುದ್ಧ ಪಂಚಮಿಯಂದು ನಡೆಯುವ ಈ ಹಬ್ಬ ಕರ್ನಾಟಕದ ಮನೆ ಮನೆಗಳಲ್ಲೂ ಆಚರಿಸುವಂತಹದು. ಇದು ಹೆಣ್ಣುಮಕ್ಕಳ ಹಬ್ಬವಾಗಿದೆ. ಸುಮಂಗಲಿಯರು ಮಡಿಯುಟ್ಟು ನಾಗಪ್ರತಿಮೆ ಅಥವಾ ಹುತ್ತಕ್ಕೆ ಪೂಜೆ, ನೈವೇದ್ಯ ಪ್ರಾರ್ಥನೆ ಸಲ್ಲಿಸುತ್ತಾರೆ.

ಹೆಣ್ಣುಮಕ್ಕಳ ಹಬ್ಬ

ನಾಗರಪಂಚಮಿ ಹೆಚ್ಚಾಗಿ ಹೆಣ್ಣುಮಕ್ಕಳ ಹಬ್ಬ. ಅದು ಅವರಿಗೆ ಮಾಂಗಲ್ಯ ಪ್ರದ ಸಂತಾನಪ್ರದ ಎಂದೂ ನಂಬಿಕೆಯಿದೆ. ಈ ಹಬ್ಬದ ಕುರಿತಾದ ಅನೇಕ ಜನಪದ ಹಾಡುಗಳಿವೆ.

ನಾಗರ ಪಂಚಮಿ ನಾಡಹೆಣ್ಣಿಗೆ ಹಬ್ಬ
ನಾಗಪ್ಪಗ್ಹಾಲ ಎರೆಯೋಣ, ನನ್ ಗೆಳತಿ
ನಾಗರ ಹೆಡಿಹಾಂಗ ಆಡೋಣ!
ಅಳ್ಳಿಟ್ಟು-ತಂಬಿಟ್ಟು ಮಾಡಿಟ್ಟ ಎಳ್ಳುಂಡೆ
ದುಳ್ಳುರಿ ಕಣ್ಣ ಹಣೆಯಾನ ಕೊರಳಾನ
ನಾಗ ನಿನಗೆಡಯೊ ಕೈಮುಗಿರೋ

ಎಂದು ಹಾಡುತ್ತಾ ಜೋಕಾಲಿಯಾಡುತ್ತಾ ಗಂಡನ ಮನೆಯಲ್ಲಿಯ ಆಯಾಸ, ಕಿರಿಕಿರಿಗಳನ್ನೆಲ್ಲ ಮರೆತ ಹೆಣ್ಣು, ತವರಿನ ಮನೆಯಲ್ಲಿ ಹಿಗ್ಗಿನ ಬುಗ್ಗೆಯಾಗುತ್ತಾಳೆ. ಹಿಂದಿನ ದಿನವಾದ ನಾಗ ಚೌತಿಯಿಂದಲೇ ಆಕೆಯ ಸಡಗರ, ಸಂಭ್ರಮ, ಆರಂಭ ನಾಗರಪಂಚಮಿಯಂದು ಬೆಳಿಗ್ಗೆ ಉಷಕಾಲದಲ್ಲೇ ಎದ್ದು, ಮನೆಯನ್ನೆಲ್ಲಾ ಸಾರಿಸಿ, ರಂಗವಲ್ಲಿ ಇಟ್ಟು, ಸ್ನಾನಮಾಡಿ, ಮಡಿಯುಟ್ಟು ತಂಬಿಟ್ಟು ಉಂಡೆಗಳನ್ನೆಲ್ಲಾ ಅಣಿಗೊಳಿಸಿ ಮಣ್ಣಿನ ಅಥವಾ ಹಿಟ್ಟಿನ ನಾಗನನ್ನು ಮಾಡಿ, ಇಲ್ಲವಾದರೆ ಕಲ್ಲುನಾಗನಿಗೋ, ಹುತ್ತಕ್ಕೂ ಹಾಲೆರೆದು ಅರಿಶಿಣ ಕುಂಕುಮ ಹೂಗಳಿಂದ ಅಲಂಕರಿಸಿ, ಕಡುಬು ಕಜ್ಜಾಯಗಳನ್ನೆಲ್ಲಾ ನೈವೇದ್ಯ ಮಾಡುತ್ತಾರೆ. ನಂತರ ಅಪ್ತೇಷ್ಟರೊಂದಿಗೆ ಭೋಜನ ಮಾಡಿ ಉಯ್ಯಾಲೆಯಾಡಿ ಸಂತೋಷ ಸಂಭ್ರಮ ಅನುಭವಿಸುತ್ತಾರೆ. ಕೆಲವೆಡೆ ಜೀವಂತ ನಾಗಗಳನ್ನು ಪೂಜಿಸುವುದುಂಟು ಪುರುಷರು ಮಕ್ಕಳು ಕಾಯಿಗುದ್ದುವುದು, ತೆಂಗಿನ ಕಾಯಿ ಬಳಸಿ ವಿವಿಧ ಬಗೆಯ ಕ್ರೀಡೆ ಆಡುತ್ತಾರೆ. ಅದರ ವಿಶ್ಲೇಷಣೆ ಕ್ರೀಡೆಗಳ ಅಧ್ಯಾಯದಲ್ಲಿದೆ.

ಪಂಚಮಿ ಹಬ್ಬಕೆ ಉಳಿದಾವ ದಿನ ನಾಕ
ಅಣ್ಣ ಬರಲಿಲ್ಲ ಯಾಕೆ ಕರಿಯೊಕೆ?

ಎಂಬ ಹಾಡು ಹಾಡಿದಾಗ ಮನ ಮಿಡಿಯುತ್ತದೆ. ವಿಜಯನಗರ ಕಾಲದಲ್ಲಿ ನಾಗ ಶಿಲ್ಪಗಳನ್ನು ನೋಡಿದರೆ ಅಂದು ಈ ಹಬ್ಬಕ್ಕೆ ಎಷ್ಟು ಪ್ರಾಶಸ್ತ್ಯ ಕೊಟ್ಟಿದ್ದರು ಎಂದು ಸ್ಪಷ್ಟವಾಗುತ್ತದೆ.

ಗಣೇಶ ಚತುರ್ಥಿ

ಬಾದ್ರಪದ ಶುದ್ಧ ಚತುರ್ಥಿ ಹಿಂದುಗಳಿಗೆ ಗಣಪತಿಯ ಹಬ್ಬ ಅಂದು ಈ ದೇವರಿಗೆ ವರ್ಷದಲ್ಲೇ ವಿಶೇಷವಾದ ಪೂಜೆ, ಆ ದಿನ ಅಬಾಲವೃದ್ದರೆಲ್ಲಾ ಗಣಪತಿ ಮೂರ್ತಿಯನ್ನಿಟ್ಟು ಪೂಜಿಸುತ್ತಾರೆ. ಮಣ್ಣಿನಲ್ಲಿ ರಚಿಸಿ, ಬಣ್ಣ ಬಣ್ಣಗಳಿಂದ ಅಲಂಕರಿಸಿ ಸುಂದರವಾದ ಮಂಟಪ ಕಟ್ಟಿ ಕಡುಬು, ಕಜ್ಜಾಯ, ಪಂಚಕಜ್ಜಾಯ ನೈವೇದ್ಯ ಮಾಡಿ ವಿನಿಯಾಗಿಸುವರು. ಭಾರತ ದೇಶವನ್ನು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಒಂದುಗೂಡಿಸಿದ ಶ್ರೇಯಸ್ಸು ನಮ್ಮ ದೇವತೆಗಳಿಗೆ ಸಲ್ಲುತ್ತದೆ. ಔರಂಗಜೇಬನಂತಹ ರಾಜ ಕೂಡ ಪೂನಾದ ಒಳ ಚಿಂಚ್ವಾಡ್ ಎಂಬಲ್ಲಿಯ ಗಣಪತಿ ದೇವಾಲಯಕ್ಕೆ ದತ್ತಿ ಬಿಟ್ಟಿದ್ದನೆಂದರೆ ಗಣಪತಿಯ ಹಿರಿಮೆ, ಗರಿಮೆ, ಮಹಿಮೆಗಳ ಅರಿವಾಗುತ್ತದೆ.[೧೨] ವಿಜಯನಗರ ಕಾಲದಲ್ಲಿ ಕಡಲೆಕಾಳು ಗಣಪ, ಸಾಸಿವೆಕಾಳು ಗಣಪತಿ ಮೂರ್ತಿಗಳನ್ನು ನೋಡಿದರೆ ಎಷ್ಟು ವೈಭವದಿಂದ ಅಂದು ಈ ಹಬ್ಬವನ್ನು ಆಚರಿಸುತ್ತಿದ್ದರು ಎಂದು ತಿಳಿಯುವುದು. ಬೋಧಿಸತ್ವನೇ ತನ್ನ ಶಿಷ್ಯ ಆನಂದನಿಗೆ ವಿನಾಯಕ ಮಂತ್ರವನ್ನು ಉಪದೇಶಿಸಿದನಂತೆ ಅಶೋಕನ ಮಗಳು ಚಾರುಮಲೆ ನೇಪಾಲದಲ್ಲಿ ಗಣೇಶ ದೇವಾಲಯ ಕಟ್ಟಿಸಿದಳೆಂದು ದಂತ ಕತೆಯಿದೆ.[೧೩]

ಗಣಪತಿಯ ಆಕಾರದಲ್ಲೇ ಅದ್ಭುತ ಕಲ್ಪನೆ ಅಡಗಿದೆ. ದೊಡ್ಡ ತಲೆಯುಳ್ಳ ಅವನನ್ನು ಆರಾಧಿಸುವವರೂ ದೊಡ್ಡ ತಲೆಯುಳ್ಳವರು ಅಂದರೆ ಬುದ್ಧಿವಂತರೂ ಆಗುತ್ತಾರೆ ಆನೆಯ ತಲೆಯಲ್ಲಿ ಜ್ಞಾನೇಂದ್ರಿಯದೊಂದಿಗೆ ರ್ಮೇಂದ್ರಿಯವಾದ ಸೊಂಡಿಲು ಇದೆ. ಅಂದರೆ ಸಮಾಜ ಸುಧಾರಕರು ಕೇವಲ ಜ್ಞಾನಿಗಳು, ಬುದ್ದಿಶೀಲರೂ ಆದರೆ ಸಾಲದು. ಅವರು ಕರ್ಮಶೀಲರೂ ಆಗಿರಬೇಕು. ಎಂಬುದು ಇವರ ಸಂಕೇತ. ಅವನ ವಕ್ರ ತುಂಡ ಅಂದರೆ ಡೊಂಕಾದ ಸೊಂಡಿಲು ಓಂಕಾರದ ಪ್ರತೀಕ ಅವನು ಶೂರ್ಪಕರ್ಣ ಅಂದರೆ ಮರದಂತ ಕಿವಿಯುಳ್ಳವ, ಮಹಾಕಾಯ ಅಂದರೆ ದೊಡ್ಡ ಹೊಟ್ಟೆಯವ ಅವನ ಆ ದೊಡ್ಡಹೊಟ್ಟೆ ಬ್ರಹ್ಮಾಂಡದ ಸಂಕೇತ, ಅವನು ಧಾನ್ಯಾದಿದೇವರು ಹೌದು. ಲಂಬೋದರ ಎಂಬುದು ಧವಸ ತುಂಬಿದ ಕಣಜದ ಸಂಕೇತ ಅವನು ಹೊಟ್ಟೆಗೆ ಸುತ್ತಿಕೊಂಡಿರುವ ಸರ್ಪ, ಬ್ರಹ್ಮಾಂಡವನ್ನು ಹೊತ್ತಿರುವ ಆದಿಶೇಷ ಅವನ ಕೈಯಲ್ಲಿರುವ ಪಾಶ, ಅಂಕುಶಗಳು ನಮ್ಮಲ್ಲಿರುವ ರಾಗ–ದ್ವೇಷಗಳನ್ನು ನಿಯಂತ್ರಿಸುವ ಸಾಧನಗಳು. ಅವನ ಏಕದಂತ ಏಕಾಗ್ರತೆಯ ಹಾಗೂ ಅದ್ವೈತರ ಸೂಚಿಯಾಗಿದೆ. ಮೋದಕ ಗಣೇಶನಿಗೆ ಪ್ರಿಯ ಭಕ್ಷ್ಯ, ಅವನ ವಾಹನವಾದ ಇಲಿ ಕಾಮ, ಕ್ರೋದ, ಲೋಭ, ಮೋಹ, ಮದ–ಮತ್ಸರಗಳ ಸಂಕೇತ ಹೀಗಿರುವ ಗಣಪತಿಯನ್ನು ಹಬ್ಬದ ಸಂಕೇತವಾಗಿ ವಿಜೃಂಭಣೆಯಿಂದ ಆಚರಿಸುವರು.

ಹನುಮಜಯಂತಿ

ಚೈತ್ರ ಶುದ್ಧ ಹುಣ್ಣಿಮೆಯ ಮಾರುತಿಯ ಜನಮ ದಿನ ಸೂರ್ಯೋದಯದ ಕಾಲದಲ್ಲಿ ಜನಿಸಿದ ಹನುಮಂತ ಹುಟ್ಟುತ್ತಲೆ ಕೆಂಪಾದ ಸೂರ್ಯನನ್ನು ಆಗಸದಲ್ಲಿ ಕಂಡು ಹಣ್ಣೆಂದು ಭ್ರಮಿಸಿ ಸೂರ್ಯಮಂಡಲಕ್ಕೆ ಜಿಗಿದು ಸೂರ್ಯನಿಂದ ಶಹಭಾಸಗಿರಿ ಪಡೆದು ವಜ್ರದೇಯಾದವ

ರಾಮಕಥೆಯಿರುವ ತನಕ ತಾನು ಬದುಕಿರಬೇಕೆಂಬ ವರ ಪಡೆದ ಚಿರಂಜೀವಿ ಹನುಮಂತ ಸದಾ ರಾಮನಿದ್ದಲ್ಲಿ ಅವನಿರಬೇಕು. ಅಂತೆಯೇ ಶ್ರೀ ರಾಮನವಮಿಯೆಂದು ರಾಮ ಜಯಂತಿಯಾಗುತ್ತಿದ್ದಂತೆಯೇ ಅದೇ ಹುಣ್ಣಿಮೆಗೆ ಹನುಮಜಯಂತಿ ಬರುತ್ತದೆ.[೧೭೪] ಆದ್ದರಿಂದಲೇ ಶ್ರೀರಾಮನಷ್ಟೇ ಹನುಮಂತನೂ ಜನಪ್ರಿಯ ದೈವ. ಅವನ ಭಕ್ತರಿಲ್ಲದೆ ಮನೆಯಿಲ್ಲ, ಆತನ ಗುಡಿಯಿಲ್ಲದ ಗ್ರಾಮವಿಲ್ಲ, ಹನುಮ ಜಯಂತಿಯೆಂದು ಆ ಎಲ್ಲ ಗುಡಿಗಳಲ್ಲಿ ಆನಂದೋತ್ಸಾಹಗಳಿಂದ ಹನುಮಂತನಿಗೆ ವಿಶೇಷ ಪೂಜೆ, ನೈವೇದ್ಯ ರಥೋತ್ಸವಗಳು ನಡೆಯುತ್ತವೆ. ಇದರ ದಿನ ಶನಿವಾರವೆಂದು ವಿಶೇಷ ಪೂಜೆ ನಡೆಯುತ್ತದೆ.

ಬೊಂಬೆಯಾಟ

ಬೊಂಬೆಗಳಿಗೆ ದಾರಗಳನ್ನು ಕಟ್ಟಿ, ಸೂತ್ರದಾರನು ಆ ದಾರಗಳನ್ನು ಆಡಿಸುವುದರ ಮೂಲಕ ಬೊಂಬೆಗಳನ್ನು ಆಡಿಸುವ ಸೂತ್ರದ ಬೊಂಬೆಯಾಟ. ಈ ಆಟವು ವಿಜಯನಗರ ಕಾಲದಲ್ಲಿ ಪ್ರಚಲಿತದಲ್ಲಿತ್ತು. ಈ ಸೂತ್ರದ ಗೊಂಬೆದಾರರು ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಮುಖ್ಯಸ್ಥರ ಒಪ್ಪಿಗೆಯನ್ನು ಪಡೆದು ಆ ದಿನ ಸಂಜೆ ಕಾರ್ಯಕ್ರಮ ನಡೆಸುತ್ತಿದ್ದರು. ಆಗ ಗ್ರಾಮದ ಜನರೆಲ್ಲರೂ ಆ ಗೊಂಬೆಯಾಟ ವೀಕ್ಷಿಸಲು ಒಂದು ವಿನೋದವನ್ನು ಪಡೆಯುತ್ತಿದ್ದರು. ಬೊಂಬೆಯಾಟವು ವಚನಗಳ ಕಾಲಕ್ಕೆ ತುಂಬಾ ಜನಪ್ರಿಯವಾಗಿತ್ತು ಎಂದು ದೇವರು ಮನುಷ್ಯರನ್ನು ಆಡಿಸುವ ರೀತಿಯನ್ನು ಸೂತ್ರದ ಗೊಂಬೆಯನ್ನಾಡಿಸುವ ಸೂತ್ರದಾರನಿಗೆ ಹಲವು ವಚನಕಾರರು ಹೋಲಿಸುತ್ತಾರೆ.

ಈ ಬೊಂಬೆಗಳನ್ನು ಬಟ್ಟೆಯಿಂದ ಮಣ್ಣಿನಿಂದ ತಯಾರಿಸಿ ಪ್ರತ್ಯೇಕ ಭಾಗಗಳಾಗಿ ವಿಂಗಡಿಸಿರುತ್ತಾರೆ. ಕೈ, ಕಾಲು, ಕತ್ತು ಹೀಗೆ ಪ್ರತಿಯೊಂದು ಭಾಗಗಳನ್ನು ಜೋಡಿಸಿ ಆವುಗಳಿಗೆ ದಾರವನ್ನು ಕಟ್ಟಿರುತ್ತಾರೆ. ಬೊಂಬೆಗಳಿಗೆ ಬಣ್ಣ ಬಣ್ಣದ ಬಟ್ಟೆಗಳನ್ನುಡಿಸಿ ಕಾಲಿಗೆ ಗೆಜ್ಜೆ ಕಟ್ಟಿ ಮುಂತಾದ ಆಭರಣಗಳನ್ನು ತೊಡಿಸುತ್ತಿದ್ದರು.[೧೭೫] ಬೊಂಬೆಗಳಿಗೆ ತಿಲಕವನ್ನಿಟ್ಟು, ಗೊಂಬೆಗಳನ್ನು ಅಲಂಕರಿಸಿ ರಂಗದಲ್ಲಿ ಸುಳಿಯಲು ಬಿಡುತ್ತಿದ್ದರು.[೧೭೬] ಚರ್ಮವನ್ನು ಮನುಷ್ಯರ ಆಕಾರದಲ್ಲಿ ಕತ್ತರಿಸಿ ಅವುಗಳಿಗೆ ಬಣ್ಣವನ್ನು ಹಾಕಿ ಅದನ್ನು ದಾರದ ಸಹಾಯದಂತೆ ತೆರೆಗೆ ಅಂಟಿಕೊಂಡಂತೆ ಆಡಿಸುವ ತೊಗಲು ಗೊಂಬೆಯಾಟ ಈಗಲೂ ರೂಢಿಯಲ್ಲಿದೆ. ಆಡಿಸುವ ರೀತಿ ತೊಗಲು ಗೊಂಬೆಯಾಡಿಸುವವನು ಪ್ರೇಕ್ಷಕರಿಗೆ ಕಾಣಿಸುವುದಿಲ್ಲ. ಪರದೆಯ ಹಿಂದೆ ದಾರಗಳನ್ನು ಹಿಡಿದೆ ಪರದೆಯ ಮುಂದೆ ಬೊಂಬೆಗಳನ್ನು ಬಿಡುತ್ತಾನೆ. ಸಂಭಾಷಣೆಗಳನ್ನು ಹೇಳುತ್ತಾ ಅದಕ್ಕೆ ತಕ್ಕಂತೆ ಬೊಂಬೆಗಳಿಗೆ ಚಲನವಲನ ನೀಡುತ್ತಾನೆ. ಇವು ಪ್ರೇಕ್ಷಕರಲ್ಲಿ ತುಂಬಾ ಮನರಂಜನೆಯನ್ನು ನೀಡುತ್ತದೆ. ಆಂಧ್ರದಲ್ಲಿ ಈಗಲೂ ಬೊಮ್ಮಲಾಟಪಲ್ಲಿ ಎಂಬ ಊರಿದೆ. ಅಲ್ಲಿಂದ ಈ ಬೊಂಬೆ ಆಡಿಸುವವರು ಬರುತ್ತಿದ್ದರು, ಕಾಲನಂತರದಲ್ಲಿ ಅಲ್ಲಲ್ಲಿ ನೆಲೆ ಕಂಡುಕೊಂಡು ಜನಗಳನ್ನು ರಂಜಿಸುವುದೇ ಇವರ ವೃತ್ತಿಯಾಯಿತು. ಈ ಬೊಂಬೆಯಾಟವನ್ನು ನೋಡುವುದು ಗೌರವಸ್ಥರಿಗೆ ತಕ್ಕುದಲ್ಲವೆಂಬ ಭಾವನೆಯು ಆಗ ಪ್ರಚಲಿತದಲ್ಲಿತ್ತೆಂಬುದು. ಚಿತ್ರ ವಿಚಿತ್ರದಾಟವನ್ನು ಜಂಗಮ ಮುಂತಾಗಿ ನೋಡದೆ ತಾನೋಡಿದಾನಾದಡೆ ತೊಗಲು

ಬೊಂಬೆಯ ನೋಡಿದ ಸಮಾನ[೧೭೭].... ಅಂದರೆ ಗೌರವಸ್ಥ ಮನೆತನದವರು ಈ ಆಟವನ್ನು ನೋಡುತ್ತಿರಲಿಲ್ಲ.

ತಳಸಮುದಾಯದ ವರ್ಗದವರು ದಿನವೆಲ್ಲ ಕೆಲಸ ಮಾಡಿ ಸಂಜೆಯ ಬೀಡುವಿನ ವೇಳೆಯಲ್ಲಿ ಈ ಮನರಂಜನೆಯನ್ನು ಪಡೆಯುತ್ತಿದ್ದರು. ಈ ಬೋಂಬೆಯಾಟವು ವಿನೋದಾವಳಿಯ ಸಾಧನಗಳಲ್ಲಿ ಒಂದು ಕೌತುಕವನ್ನು ಕೆರಳಿಸಿ, ವಿಸ್ಮಯವನ್ನುಂಟು ಮಾಡಿ ರಂಜಿಸುತ್ತಿತ್ತು. ದಣಿದ ದೇಹ ಮನಸ್ಸುಗಳನ್ನು ಮತ್ತೆ ಪ್ರಪುಲ್ಲಗೊಳ್ಳುವಂತೆ ಮಾಡಿ ಹೊಸ ಶ್ರಮಕ್ಕೆ ಇದು ಸಿದ್ಧಗೊಳಿಸುತ್ತಿತ್ತು.

೪.೨ ನೃತ್ಯ

ಭಾವ, ತಾಳ, ಲಯಯುಕ್ತವಾದ ಅಭಿನಯವೇ ನೃತ್ಯ. ಇದರಲ್ಲಿ ಕೇವಲ ಅಂಗಿಕಾಭಿನೆಯ ಮಾತ್ರ, ಒಂದೇ ವ್ಯಕ್ತಿ ಪುರಾಣ ಕಥೆಯ ಕೆಲವು ಭಾಗಗಳನ್ನು ಪ್ರೇಕ್ಷಕರಿಗೆ ಆನಂದವಾಗುವಂತೆ ತಾಳಲಯಗಳಿಗೆ ಅನುಗುಣವಾಗಿ ತಲೆ, ಕೈ, ಕಾಲು ಮೊದಲಾದ ಅಂಗಗಳನ್ನು ಸುಕುಮಾರವಾಗಿ ಮಾಡುವುದರ ಮೂಲಕ ಅಭಿನಯಿಸುವುದೇ ನೃತ್ಯ.

ಅಭಿನಯ ದರ್ಪಣದಲ್ಲಿ ನೃತ್ಯದ ಕುರಿತು.

ರಸಭಾವವ್ಯಂಜನಾದ ನೃತ್ಯಂ ಚ. ಪರಿಕೀರ್ತಯೇತ್!
ಏವಂ ನೃತ್ಯಂ ಮಹಾರಾಜಸಭಾಯಾಂ ಕಲ್ಪಯೇತ್ ಸದಾ!![೧೭೮]

ನೃತ್ಯಕ್ಕೆ ಪ್ರಾಶಸ್ತ್ಯ ದೊರೆತು ದೇವದಾಸಿ ಜನಾಂಗ ಪ್ರವರ್ದಮಾನಕ್ಕೆ ಬಂದುದು ಎಂಟು ಒಂಬತ್ತನೇ ಶತಮಾನದಲ್ಲಿ ಇವರು ದೇವರಿಗೆ ವಿಶೇಷ ಸೇವೆ ಮಾಡಲು ಅರ್ಪಿತರಾದವರು ದೇವದಾಸಿಯರ ಮುಖ್ಯ ಕೇಲಸ ದೇವರಿಗೆ ಚಾಮರ ಬೀಸುವುದು ಮತ್ತು ಮೆರವಣಿಗೆಯಲ್ಲಿ ನೃತ್ಯ ಮಾಡುವುದು.[೧೭೯] ಈ ದಾಸಿಯರು ತಮ್ಮ ಉತ್ತಮ ಮಟ್ಟದ ಪ್ರತಿಭೆ, ಕಲೆ, ರಸಿಕತೆಯಿಂದ ದೇವಾಲಯಕ್ಕೆ ಶೋಭೆ ತರುವಂತವರಾಗಿದ್ದರು. ವಿಜಯನಗರ ಕಾಲದಲ್ಲಿ ಈ ಸ್ತ್ರೀಯರು ನೃತ್ಯದಲ್ಲಿ ಎತ್ತಿದ ಕೈ.[೧೮೦] ಇವರು ವಿವಿಧ ವಾದ್ಯ ಪರಿಕರಗಳನ್ನು ಬಾರಿಸುತ್ತಾ ನೃತ್ಯ ಮಾಡುವ ಭಂಗಿಯ ಶಿಲ್ಪಗಳು ದೇವಾಲಯದ ಭಿತ್ತಿ, ಕಂಬಗಳ ಮೇಲಿವೆ.

ನೃತ್ಯದ ಪ್ರಾಚೀನತೆ

ನೃತ್ಯ ಪರಂಪರೆ ಹೇಗೆ ಬೆಳೆಯಿತು ಎಂಬುದನ್ನು ಪ್ರಾಚೀನ ಭಾರತದ ಇತಿಹಾಸದಿಂದಲೋ, ಸಮಕಾಲಿನ ಪ್ರಾಕಾರಗಳಿಂದಲೋ ಹುಡುಕಿ ನೋಡಬೇಕು. ಭಾರತದ ಇತಿಹಾಸ ಪ್ರಾರಂಭವಾಗುವುದು ಕ್ರಿ.ಪೂ. ೨೫೦೦ರ ಸುಮಾರಿಗೆ ಸಿಂಧೂ ಕಣಿವೆಯಲ್ಲಿದ್ದ ಹಾಗೂ ಭಾರತದ ಇನ್ನೂ ಕೆಲವು ಕಡೆ ಇದ್ದಿರಬಹುದಾದ ಪುರಾತನ ನಗರ ರಾಜ್ಯಗಳಿಂದ ಗ್ರೀಕ್ ನಾಗರೀಕತೆಗೆ ಮೂಲವಾಗಿದ್ದ ನಗರ ರಾಜ್ಯಗಳು ಸಂಸ್ಕೃತಿ, ನಗರ ನಿರ್ಮಾಣ ಮುಂತಾದ ಅಂಗಗಳಲ್ಲಿ ವಿಶೇಷ ಪ್ರಾವಿಣ್ಯ ಸಾಧಿಸಿದ್ದು ಗೋತ್ತಾಗುತ್ತದೆ. ಆದರೆ ಪ್ರದರ್ಶಿತ ಕಲೆಗಳಲ್ಲಿ ಏನಾದರೂ ಸಾಧನೆಯಾಗಿತ್ತೆ ಎಂಬುದರ ಬಗ್ಗೆ ಮಾಹಿತಿ ಕೊರತೆಯಿದೆ. ಸಿಗುವ ಒಂದು ಕಿರು ಪ್ರತಿಮೆ ಒಬ್ಬ ನರ್ತಕಿಯದೆಂದೂ, ಆದ್ದರಿಂದ ಆ ಕಾಲದಲ್ಲೆ ನೃತ್ಯ ಪ್ರಕಾರಗಳು

ಅಸ್ತಿತ್ವದಲ್ಲಿದ್ದರಬೇಕೆಂದು ಊಹಿಸಲಾಗುತ್ತದೆ.[೧೮೧] ಶಿಲ್ಪ ಮತ್ತು ಚಿತ್ರಗಳಲ್ಲಿ ನೃತ್ಯ ವಿವರಗಳಿರುವಂತೆ ಪ್ರಾಚೀನ ಕಾವ್ಯಗಳಲ್ಲೂ ವಿವರಗಳಿವೆ. ವಾಲ್ಮೀಕಿ ರಾಮಾಯಣದ ಬಾಲಕಂಡದ ಸೀತಾಸ್ವಯಂವರದ ಸಂದರ್ಭದಲ್ಲಿ ನನೃತ ಶ್ಚಾಪ್ಸರಃ ಸಂಘ.[೧೮೨] ಎಂದು ಭರದ್ವಾಜ ಋಷಿಯು ಭರತನ ಪರಿವಾರಕ್ಕೆ ಅತಿಥ್ಯ ಮಾಡುವ ಸಂದರ್ಭದಲ್ಲಿ ನನೃತು ಶ್ಚಾಪ್ಸರೋಗಣಾಃ.[೧೮೩] ಎಂದು ಸುಂದರ ಕಾಂಡದಲ್ಲಿ ರಾವಣನ ಅಂತಃಪುರದಲ್ಲಿ ಹನುಮಂತನು ಸೀತೆಯನ್ನು ಹುಡುಕುವಾಗ ಕಂಡ ದೃಶ್ಯ ವರ್ಣನೆಯಲ್ಲಿ

'ಅಂಗಹಾರೈಸ್ತ ಥೈವಾನ್ಯ ಕೋಮಲಾ ನೃತ್ತಶಾಲಿನೀ!
ವಿನ್ಯಸ್ತ ಶುಭ ಸರ್ವಾಂಗೀ ಪ್ರಸುಪ್ತಾ ವರವರ್ಣಿನೀ![೧೮೪]

ಅದೇ ಕಾಂಡದ ಮಾಂಸಮಾಸ್ಪದ್ಯ ನೃತ್ಯಾಮ್ಯೋದ ನಿಕುಂಭಿಲಾಂ ಎಂದೂ ಇದೆ.

ಅಂದರೆ ರಾಮಾಯಣ ಕಾಲದಿಂದಲೂ ನೃತ್ಯ ಹೇಗೆ ಪ್ರಸಿದ್ಧಿಯನ್ನು ಪಡೆದಿತ್ತು ಎಂದು ತಿಳಿದುಬರುತ್ತದೆ.

ಪ್ರಾಚೀನ ಕನ್ನಡ ಕವಿಗಳು ನೃತ್ಯ ವಿಚಾರಗಳನ್ನು ತಮ್ಮ ಕಾವ್ಯಗಳಲ್ಲಿ ಪ್ರಕರಣಕ್ಕನುಗುಣವಾಗಿ ವರ್ಣಿಸಿರುತ್ತಾರೆ. ಜೈನ ಕಾವ್ಯಗಳಲ್ಲಿ ಜನ್ಮಾಭಿಷೇಕ ವರ್ಣನೆ ಸಂದರ್ಭದಲ್ಲಿ ಅಭಿನಯಿಸುವ ಇಂದ್ರನ ಆನಂದ ನೃತ್ಯವು ಮುಖ್ಯವಾದದು. ಪ್ರಸಿದ್ಧ ಕನ್ನಡ ಗ್ರಂಥಗಳಾದ ಆದಿಪುರಾಣ ಶಾಂತಿಪುರಾಣ(ಪೊನ್ನ ಕ್ರಿ.ಶ. ೯೫೦) ಅಜಿತನಾಥ ಪುರಾಣ (ರನ್ನ ಕ್ರಿ.ಶ. ೯೯೩), ಪಾರ್ಶ್ವನಾಥ ಪುರಾಣ (ಪಾರ್ಶ್ವನಾಥ ೧೨೨೨)

ಈ ಕಾವ್ಯಗಳಲ್ಲಿ ನೃತ್ಯವು ವರ್ಣಿತವಾಗಿದೆ.

ವಿಜಯನಗರ ಕಾಲದಲ್ಲಿ ಗಂಗಾದೇವಿ ವಿರಚಿತ ಮಧುರಾ ವಿಜಯಂನಲ್ಲಿ ನೃತ್ಯದ ಬಗ್ಗೆ ಉಲ್ಲೇಖವಿದೆ.

ದಿವಸ ನಾಟಕ ವೇಷವನು ತೆಗೆದು ಕಾಲನಟಿ
ನಾಡಲನುವಾಗಿ ಯಾಮಿನಿ ನೃತ್ಯವನ್ನು
ವೇದಿಕೆಯ ಮೇಲೆಳೆದ ಪಾಟಲದ ಜವನಿಕೆಯಾ
ಎಂಬಂತೆ ಚಲುವಾಯಿತು ಸಂಜೆವಳಗೂ[೧೮೫]

ಅಂದರೆ ನೃತ್ಯವನ್ನು ಪ್ರತಿದಿವಸ ಸಂಜೆಯ ವೇಳೆ ಮಾಡುತ್ತಿದ್ದರು

ದಾಸರ ರಚನಗಳಲ್ಲಿ ನೃತ್ಯದ ಕುರಿತು

ನಾರದ ತುಂಬುರಗಾನದ ಮಾಡಲು
ನಂದಿಯು ಮದ್ದಳೆ ಚೆಂದದಿ ಹಾಕಲು
ಫಣವ ಮಟ್ಟಿ ಬಾಲವ ಕೈಯಲಿ ಹಿಡಿದು
ಫಳಫಳಿಸುತ್ತ ನಾಟ್ಯವಾನಡೆ[೧೮೬]

ನೃತ್ಯ ಮಾಡಬೇಕಾದರೆ ಸಂಗೀತ, ವಾದ್ಯಗಳ ಬಳಕೆಯಿರುತ್ತಿತ್ತು

ರಂಬೆ, ಊರ್ವಶಿಯ ನಾಟ್ಯಯದ ಪ್ರಸ್ತಾಪ ಹೀಗಿದೆ.

ರಂಬೆ ಊರ್ವಶಿ ರಮಣಿಯರೆಲ್ಲರು
ಚಂದದಿಂ ಭರತನಾಟ್ಯವ ನಟಸೆ

ಝುರಿ ತಟತಕ ಧಿಮಿತಧಿಗಿಣೆ ತೊಂ ಎಂದು

ಝುಂಪೆ ತಾಳದಿ ತುಂಬರನೊಪ್ಪಿಸೆ[೧೮೭]

ಈ ಉಲ್ಲೇಖದಿಂದ ದಾಸರ ಕಾಲಕ್ಕಾಗಲೇ ಭರತನಾಟ್ಯವು ಕಲೆಯಾಗಿ ಚೆನ್ನಾಗಿ ಬೆಳೆದಿತ್ತೆಂದು ತಿಳಿಯಬಹುದು.

ಕೃಷ್ಣದೇವರಾಯನು ಹುಟ್ಟು ಕನ್ನಡಿಗನಾದ್ದರಿಂದ ಆತನ ಆಮುಕ್ತಮಾಲ್ಯದಲ್ಲಿ ಆಡುಮಾತಿನಲ್ಲಿ ಕನ್ನಡ ಪದಗಳು ಅನಿವಾರ್ಯವಾಗಿದ್ದುವೆಂದು ತಿಳಿಯಬಹುದು. ಹಾಗೆಯೇ ಕನ್ನಡ ಪದಗಳ ಜೊತೆ ಕೆಲವು ತುಳು ಪದಗಳ ಕಾಣಿಸುತ್ತವೆ.

ಗಗನರಂಗಸ್ಥಳಂಬುನ ಮಿಗಲ ಪ್ರೌಢಿ

ಮುಮನ ಗಾಳಿಕ ನಿಲ್ಚಿ ಕೋಲಮು ನಂಟಿಂಪ

ಬೊರಿಮಾಗಂಬುನ ರಾಲುನಿಪ್ಪು ಕಲನಂಗ

ಗಂಪುಲ್ಯೆರಾಲೆ ಮಹಿನಿಂದ್ರ ಗೋಪತತುಲು[೧೮೮]

ಗಗನವೇ ರಂಗಸ್ಥಲ, ಅದರ ಮೇಲೆ ಕತ್ತಲೆಯ ಮೊತ್ತವೆಂಬ ಕಾಳಿಕಾದೇವಿ ನಿಂತಿದ್ದಾಳೆ. ಆಕೆಯ ಎದುರಿನಲ್ಲಿ ನೃತ್ಯ ನಡೆಸಲು ಆ ದೇವಿಯ ಮುಖದಿಂದ ಎದುರಿನ ಕಿಡಿಗಳೋಪಾದಿಯಲ್ಲಿ ಮಿಂಚುಗಳು ಗುಂಪುಗುಂಪುಗಳಾಗಿ ಉದ್ಭವಿಸಿ ಕುಣಿದಾಡುತ್ತಿದ್ದವು. ಕೋಲ ತುಳುನಾಡಿನಲ್ಲಿ ಜನಪ್ರಿಯವಾದ ಪೂಜಾಂಗವಾದ ನೃತ್ಯದ ಹೆಸರು, ಪೂಜಾ ನಂತರ ಕಾಳಿಯ ಆದೇಶ ಹೊಂದಿದ ಭಕ್ತರು ಮಾಡುವ ನೃತ್ಯವಿದ್ದಿರಬಹುದು.

ದಕ್ಷಿಣ ಭಾರತವನ್ನಾಳಿದ ಅರಸು ಮನೆತನಗಳಲ್ಲಿ ವಿಜಯನಗರ ಪ್ರಮುಖವಾಗಿದೆ. ಇಲ್ಲಿ ನೃತ್ಯ ಪೋಷಣೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಎನ್ನುವುದಕ್ಕೆ ಇವರ ದೇವಾಲಯಗಳ ಮೇಲಿನ ಶಿಲ್ಪ, ಶಾಸನಗಳಲ್ಲಿನ ಬಿರುದು, ವಿದೇಶಿ ಪ್ರವಾಸಿಗರ ವರ್ಣನೆ, ಸಮಕಾಲೀನ ಕೃತಿಗಳಿಂದ ವೇದ್ಯವಾಗುತ್ತದೆ. ಅಂದು ನೃತ್ಯಕ್ಕೆ ರಾಜ ಮನ್ನಣೆಯಿತ್ತು. ನೃತ್ಯ ಪೊಷಣೆಗೆ ಅರಸರಾದಿಯಾಗಿ ಮಾಂಡಲಿಕ ದಂಡನಾಯಕ, ಜನಸಾಮಾನ್ಯರೂ ಕೊಡುಗೆ ಕೊಟ್ಟಿದ್ದಾರೆ. ಯುದ್ಧ ಗೆದ್ದಾಗ, ಹಬ್ಬ, ಜಾತ್ರೆ, ಉತ್ಸವ, ಮೇರವಣಿಗೆ ರಥೋತ್ಸವ, ವಿವಾಹ, ನಾಮಕರಣ ಹೀಗೆ ವಿವಿಧ ಸಂದರ್ಭಗಳಲ್ಲಿ ಸಂಭ್ರಮಿಸಲು ನೃತ್ಯ ಮಾಧ್ಯಮ ಪ್ರಮುಖವಾಗಿತ್ತು. ನೃತ್ಯದ ಜೊತೆಗೆ ಸಂಗೀತ, ಸಾಧನಗಳು ಅಭಿವೃದ್ಧಿ ಹೊಂದಿದವು.

ನೃತ್ಯವು ವಿಜಯನಗರದಲ್ಲಿ ಅಷ್ಟೇ ಅಲ್ಲದೆ. ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ವಿಜಯನಗರದರಸರು ಅದನ್ನು ಪೋಷಿಸಿದರು. ನೃತ್ಯಕ್ಕೆ ಸಾಕಷ್ಟು ಪ್ರಾದಾನ್ಯತೆ ಕೊಟ್ಟಿದ್ದರು ಎಂಬುದಕ್ಕೆ ಅವರು ಹಾಕಿಸಿದ ಶಾಸನಗಳಲ್ಲಿಯ ಬಿರುದುಗಳಿಂದ ತಿಳಿಯುತ್ತದೆ. ಬಿರುದಾವಳಿಗಳಲ್ಲಿ ರಾಜವರ್ಗದವರು, ಕುಲೀನ ಸ್ತ್ರೀಯರು, ಲಲಿತಕಲೆ ಅದರಲ್ಲಿಯೂ ನೃತ್ಯ ಸಂಗೀತಗಳಲ್ಲಿ ಪಾಂಡಿತ್ಯ ಹೊಂದಿದ ಬಗ್ಗೆ ಬಹು ವಿಧವಾಗಿ ವರ್ಣಿಸಿರುವುದನ್ನು ಈ ಮುಂದೆ ಗಮನಿಸಬಹುದು. ಬಿರುದುಗಳಲ್ಲಿ ನಟ ನರ್ತನ, ನರ್ತಕ, ನೃತ್ಯ, ಭರತ ಈ ಪದಗಳು ಸು ಕ್ರಿ.ಶ. ೫೫೦ ರಿಂದಲೇ ಕಂಡುಬರುತ್ತವೆ.[೧೮೯] ಕ್ರಿ.ಶ. ಸುಮಾರು ೬ನೆಯ ಶತಮಾನದ ಒಂದು ತಾಮ್ರಶಾಸನದಲ್ಲಿ ಪುನ್ನಾಟ ರಾಜವಂಶದ ತಮರ ಕಶ್ಯಪ ಮನೆತನದ

ರಾಷ್ಟ್ರವರ್ಮವನ್ನು ವರ್ಣಿಸುವಾಗ 'ನಟನರ್ತ್ತನ ನಾದ್ಯತ್ಸವ ವೇಷ'[೧೯೦] ಎಂಬ ಉಲ್ಲೇಖ ದೊರೆಯುತ್ತದೆ. ಉತ್ಸವಗಳಲ್ಲಿ ಭಾಗವಹಿಸುವಂತಹ ಕಲಾವಿದರಿಗೆ ಆಶ್ರಯದಾತನಾಗಿದ್ದನು ಎಂದು ಪ್ರಜಾಪಾಲಕನಾದ ರಾಜನ ಆಶ್ರಯದಲ್ಲಿ ಅವನ ಪ್ರಜೆಗಳು ಕಲಾವಿದರು ಸದಾ ಮಂಗಳ ಕಾರ್ಯಗಳಲ್ಲಿ ಬಹಳ ಉತ್ಸುಕರಾಗಿ ಸಂಭ್ರಮದಿಂದ ಪಾಲ್ಗೊಳ್ಳುತ್ತಿದ್ದರು ಎಂದು ಅರ್ಥೈಸಬಹುದು.

ಚಾಲುಕ್ಯರ ಎರಡನೆಯ ವಿಕ್ರಮಾದಿತ್ಯನ ಕಾಲಕ್ಕೆ ನೃತ್ಯ ಕ್ಷೇತ್ರಕ್ಕೆ ಅಪಾರ ಮನ್ನಣೆಯಿತ್ತು. ಅವನ ಕಾಂಚೀ ರಾಜ್ಯದ ಮೇಲಿನ ದಂಡೆಯಾತ್ರೆಯ ವಿಜಯದ ಸಂಕೇತವಾಗಿ ಆತನ ರಾಣಿ ಲೋಕಮಹಾದೇವಿ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ಕಟ್ಟಿಸಿದಳು. ನೃತ್ಯದ ಅಧ್ಯಯನಕ್ಕೆ ಈ ದೇವಾಲಯವು ಬಹುಮುಖ್ಯವಾಗಿದೆ. ಈ ದೇವಾಲಯದಲ್ಲಿ ೮ನೆಯ ಶತಮಾನದ ನೃತ್ಯಕಲಾವಿದನೊಬ್ಬನನ್ನ ಬಣ್ಣಿಸುವ ಎರಡು ಶಾಸನಗಳು ದೊರೆಯುತ್ತವೆ.

ನವ್ಯಸೇವಾ ಬಿರುದಾಂಕಿತನಾದ ನಾಟ್ಯಚಾರ್ಯನಿದ್ದನೆಂದೂ ಆತನ ಪಾಂಡಿತ್ಯದ ಮುಂದೆ ಇತರ ಕಲಾವಿದರ ಗರ್ವವೆಂಬ ಪರ್ವತವು 'ನವ್ಯಸೇವ್ಯನ' ಪಾಂಡಿತ್ಯದ ಮುಂದೆ ವಜ್ರಾಘತದಂತೆ ಮುರಿದು ಬೀಳುತ್ತಿತ್ತು ಎಂಬ ವರ್ಣನೆಯಿದೆ.[೧೯೧] ನವ್ಯಸೇವ್ಯ ಬಿರುದಾಂಕಿತನಾದ ನಾಟ್ಯಚಾರ್ಯನಾದ ಈತನು ಒಬ್ಬ ನೃತ್ಯ ಮೀಮಾಂಸಕನಾಗಿಬೇಕೆಂದೂ ಈ ಕಾಲಕ್ಕೆ ನಾಟ್ಯಶಾಸ್ತ್ರಕ್ಕೆ ಸಮನಾಂತರವಾದ ಒಂದು ಗ್ರಂಥವನ್ನು ರಚಿಸಿರಬಹುದೆಂದು ವಿದ್ವಾಂಸರ ಅಭಿಮತ.[೧೯೨] ಹೀಗೆ ಇನ್ನೂ ಅನೇಕ ಬಿರುದುಗಳಿರುವುದನ್ನು ಗಮನಿಸಬಹುದು. ಕವಿ ಗಮಕವಾದಿ ವಾಗ್ಮಿ ವಾಗ್ಜೀವಕ ನಟ ನರ್ತನ, ನರ್ತಕ ಗಾಯಕ ವಾದಕ ತಪೋಧನಾಧನ ಬ್ರಾಹ್ಮಣ ಪರಿವಾರ ಪರಿಪೂಷಣ.[೧೯೩] ಸಂಗೀತ ಪ್ರಸಂಗ ಭಂಗೀ ಸಂಗತ ಚತುರ ಭರತನುಂ, ತರ್ಕ ವಿದ್ಯಾ ವಿಸ್ತಾರ ವಿಚಾರ ತನುಂ.[೧೯೪] ಸೌಜನ್ಯ ಮೂರ್ತಿ ಲೋಕೈಕ ಕೀರ್ತಿ ಗೀತ ನೃತ್ಯವಾದ್ಯ ತೋದ್ಯ ವಿನೋದ,[೧೯೫] ಮಧುರ ರಂಗ ನೃತ್ಯರಂಗ[೧೯೬] ಹೀಗೆ ನೃತ್ಯದ ಕುರಿತು ವೈವಿಧ್ಯಮಯವಾದ ವರ್ಣನೆಗಳು ಹೊಯ್ಸಳ ಕಾಲದ ರಾಜರ ಸಾಮಂತರ ಬಿರುದಾವಳಿಗಳಲ್ಲಿ ಕಾಣುತ್ತೇವೆ.

ತಾವರಗೆರೆ ನಕರೇಶ್ವರ ದೇವಾಚಾರ್ಯನಾದ ಸೋಮೇಶ್ವರ ಪಂಡಿತನನ್ನು ಸರ್ವ ಸಿದ್ಧಾಂತ ತರ್ಕ್ಕ ವ್ಯಾಕರಣ ಕಾವ್ಯ ನಾಟಕ ಭರತಾದ್ಯನೇಕ ಸಾಹಿತ್ಯ ವಿದ್ಯಾ ಪ್ರವೀಣ ರುಮಪ್ಪ ಎಂದು ಬಣ್ಣಿಸಲಾಗಿದೆ.[೧೯೭] ಸವದತ್ತಿಯ ಒಂದು ಶಾಸನವು ತ್ರೈಲೋಕ್ಯಮಲ್ಲ ಬಿರುದಾಂಕಿತ ಕಲ್ಯಾಣ ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನನ್ನು ವಾದ್ಯವಿದ್ಯೆಯಲ್ಲಿ ಅಗ್ರಗಣ್ಯನೆಂದೂ, ನೃತ್ಯ ಸಂಗೀತಾಧಿ ವಿದ್ಯೆಗಳಲ್ಲಿ ಕಲಾ ನೈಪುಣ್ಯವನ್ನು ಪಡೆದವನೆಂದೂ ವಿವಿಧ ವಿದ್ಯೆಗಳಲ್ಲಿ ಪಾಂಡಿತ್ಯವನ್ನು ಪಡೆದು ರಾರಾಜೀಸುವ ಸಾರ್ವಭೌಮನೆಂದು ವರ್ಣಿಸಿದೆ.[೧೯೮]

ಹೀಗೆ ನಮಗೆ ಸುಮಾರು ಹತ್ತನೇಯ ಶತಮಾನದಿಂದ ೧೨–೧೩ನೆಯ ಶತಮಾನದವರೆಗೆ ನೃತ್ಯ ತುಂಬಾ ಪ್ರಭಾವಿ ಮಾಧ್ಯಮವಾಗಿತ್ತು ಎಂದು ಅಂದಿನ ಅರಸರು ನರ್ತಕರಿಗೆ ಕೊಟ್ಟ ಬಿರುದುಗಳಿಂದ ತಿಳಿಯುತ್ತದೆ. ಅದೇ ರೀತಿ ಮುಂದೆ ಬಂದ ವಿಜಯನಗರದರಸರ ಕಾಲದಲ್ಲಿ ನೃತ್ಯವು ತುಂಬಾ ಪ್ರಸಿದ್ಧಿಯನ್ನು ಪಡೆದುಕೊಂಡಿತು. ಅಂದು ಸ್ವತಃ ಅರಸರೂ ನೃತ್ಯದಲ್ಲಿ ಪಾಲ್ಗೊಂಡು, ನೃತ್ಯದಲ್ಲಿ ಪ್ರಾವಿಣ್ಯತೇ ಪಡೆದವರಿಗೆ ಬಹುಮಾನ, ದಾನ ನೀಡುವ ಪದ್ಧತಿಯಿತ್ತು.

ಕ್ರಿ.ಶ. ೧೪೩೧ರ ಒಂದು ಶಾಸನವು ಹೇಳುವಂತೆ ಮಂಗಪ್ಪ ಡಣ್ಣಾಯಕನ ಮಗನಾದ ಮಹಾಪ್ರಧಾನ ಪ್ರತಾಪರಾಯನು ಸಂಕನ ಸಮುದ್ರದ ಸೋಮದೇವರ ಸೇವೆಗಾಗಿ ಅವನ ನಾಯಕ ಪರಿಧಿಗೆ ಸೇರಿದ ಶಿವ ಸಮುದ್ರದ ಒಂದು ಸಣ್ಣ ಹಳ್ಳಿಯಾದ ವಿಜಯದೇವರಾಯಪುರ ಎಂದು ಪುನರ್ ನಾಮಕರಣ ಮಾಡಿ ೨೦ ವರಹ ಗದ್ಯಾಣ ನೀಡಿದನು. ಅಲ್ಲಿ ೨ ಪತ್ರದ ಜನ, ಒಬ್ಬ ನಟ್ಟುವ (ನರ್ತಕ) ಒಬ್ಬ ಡೋಲು ಬಡಿಯುವವ (ಮದ್ದಲಕಾರ) ಸಿತಾರವಾಜುರಿ (ಸಿತಾರ್ ಬಾರಿಸುವವನು), ಒಬ್ಬ ದೇವರಿಗೆ ಪೂಜೆ ಸಲ್ಲಿಸಲು, ಏಳು ಜನ ಕಲಾವಿದರನ್ನು ಇಟ್ಟುಕೊಳ್ಳಲು ಆ ಹಣವ ವಿನಿಯೋಗಿಸಲು ದಾನ ನೀಡಿದೆ ಎಂದಿದೆ.[೧೯೯]

ಅಂದು ನೃತ್ಯ ಕಲಿಸಲು ಒಬ್ಬ ಗುರು ಇರುತ್ತಿದ್ದ. ಅದಕ್ಕೆ ಒಂದು ಶಾಲೆಯಿರುತ್ತಿತ್ತು. ಆ ವಿದ್ಯೆಯನ್ನು ವ್ಯವಸ್ಥೆಯ ಅಡಿಯಲ್ಲಿ ಅಭ್ಯಾಸ ಮಾಡಲಾಗುತ್ತಿತ್ತು. ಶ್ರೀಕೃಷ್ಣದೇವರಾಯನು ನಾಟ್ಯ, ಸಂಗೀತವನ್ನು ರಾಘವೇಂದ್ರ ತೀರ್ಥರ ಪೂರ್ವಿಕನಾದ ಕೃಷ್ಣನಿಂದ ಅಭ್ಯಾಸಿಸಿದನು.[೨೦೦] ಭರತ ನಾಟ್ಯಶಾಸ್ತ್ರದ ಪ್ರಕಾರವಾಗಿ ನರ್ತನ ಶಾಲೆ, ನಾಟಕ ಭವನ ಕಟ್ಟಿಸಿದನು. ನೃತ್ಯ ಮಾಡುತ್ತಿದ್ದವರಿಗೆ ಬಹುಮಾನ ಕೊಡುವ ಪದ್ಧತಿಯಿತ್ತು. ಕೃಷ್ಣದೇವರಾಯನು ಹಜಾರಾ ರಾಮಸ್ವಾಮಿ ದೇವಾಲಯದ ದೇವತೆಯ ಗೌರವಾರ್ಥವಾಗಿ ಒಂದು ವಿಶೇಷ ಉತ್ಸವ ಏರ್ಪಡಿಸಿದನು. ಆಸ್ಥಾನ ಕವಿಯಿಂದ ರಚಿಸಲ್ಪಟ್ಟು ಪಾರಿಜಾತ ಪಹರಣಂ ಕವಿತೆಯನ್ನಾಧರಿಸಿದ ಒಂದು ನೃತ್ಯ ಪ್ರದರ್ಶನ ಏರ್ಪಡಿಸಲಾಗಿತ್ತು. ದುರ್ಗಾವತಿಯು ಒಬ್ಬ ವಾರಾಂಗನೆಯಾಗಿದ್ದಳು, ಅದರಲ್ಲಿ ಇವಳು ಸತ್ಯಭಾಮಳ ಪಾತ್ರ ನಿರ್ವಹಿಸಿದ್ದಳು. ಅವಳಿಗೆ ಕೃಷ್ಣದೇವರಾಯನು ಬಹಳ ದುಭಾರಿಯಾದ ವಜ್ರಗಳಿಂದ ಅಲಂಕರಿಸಿದ ಚಿನ್ನದ ಸೊಂಟದ ಪಟ್ಟಿಕೆ ಕೊಡುಗೆಯಾಗಿ ನೀಡಿದನು.[೨೦೧] ಅದೇ ರೀತಿ ಕ್ರಿ.ಶ. ೧೫೨೮ರ ಒಂದು ಶಾಸನವು ಉಲ್ಲೇಖಿಸುವಂತೆ ಪ್ರಧಾನನಾದ ಇಮ್ಮಡಿ ಎಲ್ಲಪ್ಪ ಓಡೆಯನು ಚಿಕ್ಕ ಮಾದಾಪುರ ಗ್ರಾಮವನ್ನು ನರ್ತಕಿ ನಿಲಯಿಗೆ ಉಂಬಳಿಯಾಗಿ ನೀಡಿದ.[೨೦೨]

ಅಂದು ಎಲ್ಲರೂ ನೃತ್ಯ ಮಾಡಲು ಅರ್ಹರಾಗಿರುತ್ತಿರಲಿಲ್ಲ ಅವರಿಗೆ ಕೆಲವೊಂದು ಅರ್ಹತೆಗಳಿರಬೇಕಿತ್ತು. ಅಂತಹವರನ್ನು ಮಾತ್ರ ನೃತ್ಯ ಕಲಿಯಲು ಕಳುಹಿಸುತ್ತಿದ್ದರು. ಕಾಕಾತೀಯ ಸೇನಾ ದಂಡನಾಯಕನಾದ ಜಯಪ್ಪನು ನೃತ್ಯ ಕಲಿಯಲು ಶಿಷ್ಯಳೊಬ್ಬಳಿಗೆ ಯಾವ ಅರ್ಹತೆಗಳು ಇರಬೇಕು ಎಂದು ವಿವರಿಸುತ್ತಾನೆ. ಅವನು ಹೇಳುವಂತೆ ಅವಳ ವಯಸ್ಸಿಗೆ ತಕ್ಕಂತಹ ಮೈಮಾಟ, ವಿಷ್ಣುವಿನ ಭಕ್ತೆಯಾಗಿ, ನೀಳವಾದ ಕಾಯವನ್ನು ಹೊಂದಿರಬೇಕು. ಯಾವುದೇ ಸೌಂದರ್ಯಗಳು, ದೇಹ ಸೌಂದರ್ಯವನ್ನು ಕಡಿಮೆಗೊಳಿಸಿರಬಾರದು ಹಾಗೂ ಚೆಲುವೆಯಾಗಿರಬೇಕು, ಸಾಮಾಜಿಕವಾಗಿ ಹೆಣ್ಣುತನವನ್ನು ಗೌರವಿಸುವ ಸಪ್ತಪದಿಗಳನ್ನು ಹೊಂದಿರಬೇಕು, ಶಿಷ್ಯೆಯು ಸ್ಥಾನಿಕರಲ್ಲಿ ಗಣನೀಯವಾದ ಮಟ್ಟನ್ನು ತಲುಪಿದಾಗ ಅಂದರೆ ಕೈ ತಿರುಗಿಸುವುದು, ಪಾದಗಳನ್ನು ಆಡಿಸುವುದು, ಆಗ ಗುರುಗಳೂ ಇವಳ ನೃತ್ಯದ ಸಣ್ಣ ಸಣ್ಣ ಘಟ್ಟಗಳನ್ನು ಒಂದುಗೂಡಿಸಿ ಕಂಸಾಳೆ ಮತ್ತು ಹಾಡುಗಳೊಂದಿಗೆ ವಾದ್ಯ ಹಾಗೂ ಗಾಯನ ಸಂಗೀತವೊಂದನ್ನು ಸೇರಿಸಿ ಒಂದು ಸಂಯುಕ್ತ ವಿಧಾನ ಮಾಡಬೇಕಿತ್ತು.[೨೦೩] ಇವೆಲ್ಲವುಗಳನ್ನು ಅಭ್ಯಾಸ ಮಾಡಲು ನಾಟ್ಯಶಾಲೆಯಿತ್ತು ಎಂದು ಪಾಯೇಸ್ ಇದರ ಕುರಿತು

ಸುಂದರ ಹಾಗೂ ಸ್ಪಷ್ಟ ಚಿತ್ರಣವನ್ನು ನೀಡುತ್ತಾನೆ. ಇದೊಂದು ಉದ್ದವಾದ ಹಾಗೂ ಕಿರಿದಾದ ಮಂದಿರವಾಗಿದ್ದು ಎಲ್ಲಾ ಕಡೆಗಳಿಂದಲೂ ಅನೇಕ ಪಾರ್ಶ್ವ ಆಧಾರ ಸ್ತಂಭಗಳಿದ್ದವು ಹಾಗೂ ಚಿನ್ನದ ಹೊಳಪು ನೀಡಲಾಗಿತ್ತು. ಪ್ರತಿ ಎರಡು ಕಂಬಗಳ ನಡುವೆ ಒಂದು ಚೌಕಟ್ಟು ಇದ್ದು ಅದರಲ್ಲಿ ಹಾಳೆಯಂತಿದ್ದ ಎಲೆಗಳ ವಿನ್ಯಾಸವಿರುತ್ತಿತ್ತು. ಅವುಗಳ ಎಲೆ ಭಾಗವನ್ನು ಕೆಂಪು ಹಾಗೂ ನೀಲಿ ಬಣ್ಣಗಳ ಲೇಪನಗಳಿಂದ ಹೊಳಪು ನೀಡಲಾಗುತ್ತಿತ್ತು. ಇಲ್ಲಿನ ಮೂರ್ತಿಗಳೆಂದರೆ ಡೋಲನ್ನು ಹಿಡಿದು ನರ್ತಿಸುತ್ತಿರುವ ಸ್ತ್ರೀಯರು, ಚೌಕಟ್ಟುಗಳ ವಿನ್ಯಾಸಗಳು, ನೃತ್ಯವು ಮುಗಿದ ನಂತರ ಅವಸ್ಥೆಯನ್ನು ತೋರಿಸಿದವು. ಒಂದು ವೇಳೆ ನರ್ತಕಿಯರು ನರ್ತಿಸಿದ ನಂತರ ತಾವು ಯಾವ ರೀತಿ ನಿಲ್ಲಬೇಕೆಂಬುದನ್ನು ಮರೆತಾಗ ಅವರು ಈ ಚೌಕಟ್ಟುಗಳಲ್ಲಿ ಅವರು ಹೇಗೆ ಇರಬೇಕೆಂಬುದನ್ನು ನೋಡಿದಾಗ ಅವರಿಗೆ ಸಹಾಯವಾಗುವುದೆಂಬ ಉದ್ದೇಶ ಇವುಗಳದಾಗಿತ್ತು ಇವುಗಳ ಸಹಾಯದಿಂದ ಅವರು ಏನು ಮಾಡಬೇಕೆಂಬುದನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತಿತ್ತು. ಬಣ್ಣದಿಂದ ಮಾಡಿದ ಒಂದು ಏಕಾಂತ ಸ್ಥಳವಿರುತ್ತಿತ್ತು. ಇಲ್ಲಿ ಸ್ತ್ರೀಯರ ತಮ್ಮ ದೇಹ ಹಾಗೂ ಕಾಲುಗಳನ್ನು ಒತ್ತಿ ಹಿಡಿದು ಕೂರುತ್ತಿದ್ದರು. ಇಲ್ಲಿ ಅವರ ಶರೀರವು ಕೃಶವಾಗುವಂತೆ ನೋಡಿಕೊಳ್ಳುತ್ತಿದ್ದರು. ಇದರಿಂದ ಅವರ ನೃತ್ಯವು ಅಮೋಘವಾಗುವುದೆಂಬ ನಂಬಿಕೆ ಅವರದಾಗಿತ್ತು. ರಾಜನು ಈ ನೃತ್ಯಗಳನ್ನು ವೀಕ್ಷಿಸುತ್ತಿದ್ದನು. ಸಭಾಂಗಣದ ಹತ್ತಿರದ ಗೋಡೆಯ ಮಧ್ಯಭಾಗದಲ್ಲಿ ಹನ್ನೆರಡು ವರ್ಷಗಳ ವಯಸ್ಸಿನ ಒಬ್ಬಾಕೆಯ ಚಿನ್ನದ ಪ್ರತಿಮೆ ಇರುತ್ತಿತ್ತು. ಹಾಗೂ ನೃತ್ಯ ಮುಕ್ತಾಯದ ನಂತರ ಅವಳ ತೋಳಿನ ಭಂಗಿಯನ್ನು ಅನುಕರಿಸಲಾಗುತ್ತಿತ್ತು.[೨೦೪]

ಅಂದು ದೇವಾಲಯಗಳಲ್ಲಿ ರಂಗಭೋಗಕ್ಕಾಗಿ ಬಹಳಷ್ಟು ಸಂಖ್ಯೆಯ ನರ್ತಕಿಯರನ್ನು ನೇಮಿಸಿಕೊಳ್ಳುತ್ತಿದ್ದರು. ಅವರಲ್ಲಿ ದೇವದಾಸಿಯರಿರುತ್ತಿದ್ದರು. ನೃತ್ಯವು ಹೆಚ್ಚು ದೇವಾಲಯಗಳಲ್ಲಿ ನಡೆಯುತ್ತಿತ್ತು. ದೇವಸ್ಥಾನದ ಗರ್ಭಗೃಹದ ಮೂರ್ತಿಗೆ ನಡೆಯುವ ಅಲಂಕಾರ ಅಂಗಭೋಗವೆಂದು ಕರೆದರೆ, ಗರ್ಭಗುಡಿಯ ಹೊರಗೆ ರಂಗಮಂಟಪದಲ್ಲಿ ಸಾರ್ವಜನಿಕವಾಗಿ ನಡೆಯುವ ಚಟುವಟಿಕೆಗಳನ್ನು ರಂಗಭೋಗವೆಂದು ಕರೆಯಲಾಗುತ್ತಿತ್ತು. ದೇವಾಲಯದಲ್ಲಿ ನಡೆಯುವ ನಾಟ್ಯ, ನೃತ್ಯ, ನಾಟಕ, ಸಂಗೀತ, ಹಾಡುವಿಕೆ, ನಂದಿಕೋಲು ಕುಣಿಸುವುದು, ಮೊದಲಾದ ಭೋಗಗಳು ರಂಗ ಭೋಗಗಳೆನಿಸುತ್ತವೆ. ಈ ರಂಗಭೋಗವು ಪ್ರಾಚೀನ ಕಾಲದಲ್ಲಿ ಕಂಡುಬಂದರೂ ವಿಜಯನಗರ ಕಾಲದಲ್ಲಿ ಮತ್ತಷ್ಟು ಹೆಚ್ಚು ಪ್ರಚಲಿತಕ್ಕೆ ಬಂದಿತು, ರಂಗ ಭೋಗಕ್ಕಾಗಿ ನವರಂಗದ ಪ್ರದೇಶವು ಚಿಕ್ಕದಾದಾಗ, ಮತ್ತೊಂದು ಹೊಸದಾದ ಮಹಾರಂಗ ಮಂಟಪದ ರಚನೆ ಈ ಕಾಲದಲ್ಲಿ ಪ್ರಾರಂಭವಾಯಿತು. ಇದು ಸಾಮಾನ್ಯವಾಗಿ ೬೪ ಕಂಬಗಳಿಂದ ಕೂಡಿದ ಮಂಟಪವಾಗಿತ್ತು, ಇದರಲ್ಲಿ ಹೆಚ್ಚು ಅಲಂಕೃತವಾದ ಕಂಬಗಳನ್ನು ಬಳಸಿ ಇದನ್ನು ನಿರ್ಮಿಸಲಾಗುತ್ತಿತ್ತು. ಮಹಾರಂಗಮಂಟಪವು ಮಂದಿರ ರಚನೆಯಾಗಿದೆ. ಇದು ಎತ್ತರವಾದ ವೇದಿಕೆಯ ಮೇಲೆ ರಚನೆಯಾಗುತ್ತಿತ್ತು. ಹೆಚ್ಚು ಜನರು ಕುಳಿತು ನೋಡಲು ಅವಕಾಶವನ್ನು ಕಲ್ಪಿಸಲಾಗುತ್ತಿತ್ತು. ವಿಜಯನಗರ ಪೂಜೆಗಳಿಗೆ ಈ ತೆರನಾದ ಮಂಟಪದ ರಚನೆ ಅವಶ್ಯವಿತ್ತು. ಅಂದು ರಂಗಭೋಗವು ಹೆಚ್ಚು ವಿಸ್ತಾರವಾಗಿ ನಡೆದದ್ದನ್ನು ಕಾಣಬಹುದು.

ರಂಗಭೋಗದಲ್ಲಿ ಸ್ತ್ರೀ–ಪುರುಷರಿಬ್ಬರಿಗೂ ಅವಕಾಶವಿತ್ತು. ವಿಜಯನಗರ ಕಾಲದಲ್ಲಿ ದೇವದಾಸಿ ಪದ್ಧತಿಯಿತ್ತು. ಅವರನ್ನು ಸೂಳೆಯರು ಎಂದು ಕರೆಯುತ್ತಿದ್ದರು.[೨೦೫] ಅಚ್ಯುತ ಬಜಾರನ್ನು ಲಾಂಗ್‌ಹರ್ಸ್ಟ್ ಮುಂತಾದ ವಿದ್ವಾಂಸರು ಸೂಳೆ ಬಜಾರು ಎಂದು ಕರೆದಿರುವುದನ್ನು ಇಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರೆಂದೂ ವಿದ್ವಾಂಸರು ಹೇಳಿದ್ದಾರೆ. ಸೂಳೆ ಬಜಾರು ಎಂಬುದು ಇಂದಿಗೂ ಇಲ್ಲಿ ಪ್ರಚಲಿತವಿರುವುದು ಗಮನಾರ್ಹ. ಆದರೆ ಷ. ಶೆಟ್ಟರ್, ವಸುಂಧರಾ ಫಿಲಿಯೋಜಾ ಮುಂತಾದವರು ಈ ಬೀದಿಯು ಸೂಳೆ ಬಜಾರು ಆಗಿರಲಿಲ್ಲವೆಂದು ವಾದಿಸಿದ್ದಾರೆ.[೨೦೬] ದೇವದಾಸಿಯರ ಬಗ್ಗೆ ಹೆಚ್ಚು ಉಲ್ಲೇಖಗಳು ವಿದೇಶಿ ಪ್ರವಾಸಿ ವರದಿ, ಶಾಸನಗಳಲ್ಲಿ ನಿರೂಪಿತವಾಗಿವೆ. ವಿದೇಶಿ ಪ್ರವಾಸಿಯಾದ ಪಾಯೇಸ್‌ನು ದೇವಾಲಯಗಳಲ್ಲಿ ತಾನು ಕಂಡ ದೇವದಾಸಿಯರ ಬಗ್ಗೆ ಬರೆಯುತ್ತಾನೆ. ದೇವರ ಪೂಜೆಯ ಸಮಯದಲ್ಲಿ ದೇವಾಸ್ಥಾನಕ್ಕೆ ಸೇರಿದ ದೇವದಾಸಿಯರು ನೃತ್ಯ ಮಾಡುತ್ತಾರೆ. ಇವರು ಸೂಳೆಗಾರಿಕೆ ಮಾಡುತ್ತಾ ಊರಿನ ಪ್ರಮುಖ ಬೀದಿಗಳಲ್ಲಿ ವಾಸ ಮಾಡುತ್ತಾರೆ. ಇದಕ್ಕೆಂದೇ ಪ್ರತ್ಯೇಕ ಬಜಾರುಗಳಿವೆ.[೨೦೭] ಇವರ ಬಗೆಗೆ ಜನರಲ್ಲಿ ಬಹಳ ಗೌರವ ಭಾವನೆ ಇದೆ. ಅಂದು ದೇವಾಲಯದಲ್ಲಿ ನೃತ್ಯಕ್ಕಾಗಿ ಬಹಳಷ್ಟು ಸಂಖ್ಯೆಯ ನರ್ತಕಿಯರನ್ನು ನೇಮಿಸಿಕೊಳ್ಳುತ್ತಿದ್ದರು. ದೇವದಾಸಿಯರಿಗೆ ದೇವಾಲಯಗಳ ಭೂಮಿಯನ್ನು ನೀಡಲಾಗುತ್ತಿತ್ತು.[೨೦೮] ಅವರಲ್ಲಿ ಕೆಲವರು ವಂಶಪಾರಂಪರ್ಯ ಹಕ್ಕುಗಳ ಆಧಾರದ ಮೇಲೆ ತನ್ನ ಸ್ಥಾನ ಕಾಯ್ದುಕೊಂಡರು ಇವುಗಳನ್ನು ಸಂಪ್ರದಾಯ ವೃತ್ತಿ ಎಂದು ಕರೆಯುತ್ತಾರೆ. ಇನ್ನೂ ಕೆಲವರು ತಮ್ಮ ಪ್ರತಿಭೆ ಮತ್ತು ಅರ್ಹತೆಯಿಂದ ಸ್ಥಾನ ಪಡೆಯುತ್ತಿದ್ದರು ಹಿಂದೆ ಇವರ ಅರ್ಹತೆ ಏನು ಎಂಬುದನ್ನು ಚರ್ಚಿಸಲಾಗಿದೆ.

ನೃತ್ಯ ಮಾಡಲು ರಂಗಮಂಟಪಗಳನ್ನು ನಿರ್ಮಿಸಿದ ಸಾಕಷ್ಟು ಉಲ್ಲೇಖಗಳಿವೆ. ಕ್ರಿ.ಶ. ೧೫೪೫ರ ಒಂದು ಶಾಸನವು ತಿಮ್ಮರಾಜುನೆಂಬುವನು ತನ್ನ ಪೋಷಕರಾದ ವಲ್ಲಭರಾಜು ಹಾಗೂ ವೆಂಗಲಮ್ಮರ ಶ್ರೇಯಸ್ಸಿಗೋಸ್ಕರವಾಗಿ ವಿದ್ಯಾನಗರದ ಮಹಾದೇವಾ ದೇವಾಲಯದಲ್ಲಿ ನೃತ್ಯ, ಗಾಯನ, ಹಾಗೂ ವಾದ್ಯ, ಸಂಗೀತ ಮೇಳಗಳನ್ನು ನಡೆಸಲು ಕಟ್ಟಲಾದ ರಂಗಮಂಟಪದ ಬಗ್ಗೆ ಉಲ್ಲೇಖ ನೀಡುತ್ತದೆ.[೨೦೯]

ವಿಜಯನಗರ ಕಾಲದ ಪೂರ್ವದಲ್ಲಿಯೂ ಈ ಪದ್ಧತಿಯ ಕುರಿತು ಅನೇಕ ಉಲ್ಲೇಖಗಳು ದೊರೆಯುತ್ತವೆ, ಅವರು ಕೇವಲ ನೃತ್ಯ ಮಾಡುತ್ತಿರಲಿಲ್ಲ ಅದರಿಂದ ಬಂದ ಆದಾಯದಲ್ಲಿ ದಾನ ಮಾಡಿದ ಉಲ್ಲೇಖಗಳೂ ಇವೆ. ಮೊಟ್ಟ ಮೊದಲ ಬಾರಿಗೆ ಬಾದಾಮಿ ಚಾಲುಕ್ಯರ ಕಾಲದಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ದೇಗುಲದ ಸೂಳೆಯೊಬ್ಬಳು ದಾನ ಮಾಡಿದ ಉಲ್ಲೇಖ ಕಂಡುಬರುತ್ತದೆ.[೨೧೦] ದೇವಸ್ಥಾನಗಳು ಬೆಳೆದಂತೆ ಸೂಳೆಯರ ಸಂಖ್ಯೆಯು ಬೆಳೆಯಿತು. ಇವರ ಸಂಖ್ಯೆ ಹೆಚ್ಚಾದ್ದರಿಂದ ಅವರ ಕಾರ್ಯಕ್ಷೇತ್ರವೂ ಹೆಚ್ಚಾಯಿತು. ಹಾಗಾಗಿ ಅವರ ಕೆಲಸಗಳಿಗೆ ತಕ್ಕಂತೆ ಸೂಳೆಯರಿಗೆ ಹೆಸರನ್ನು ಇಡಲಾಯಿತು. ಕಂಬದ ಪಕ್ಕದಲ್ಲಿ ದೇವಾಲಯದ ಅಲಂಕಾರಕ್ಕೆ ನಿಲ್ಲುವ ಸೊಳೆಯರು ಕಂಬದ ಸೊಳೆ, ನರ್ತನ, ಇತ್ಯಾದಿ ಕಾರ್ಯಗಳನ್ನು ಮಾಡವ ಸೂಳೆಯರನ್ನು ಪಾತ್ರದವರು ಎಂದು ದೇವರಿಗೆ ಉತ್ಸವ ಮಂಟಪದಲ್ಲಿ ಅಥವಾ ಗರ್ಭಗೃಹದಿಂದ ಹೊರಗೆ ಹೊರಟಾಗ ದೇವರಿಗೆ ಚಾಮರವನ್ನು ಬೀಸುವವರಿಗೆ ಚಾಮರದ ಸೂಳೆ ಎಂದು ಕರೆಯಲಾಗಿದೆ.[೨೧೧]

ಪ್ರೌಢದೇವರಾಯನ ಕಾಲದಲ್ಲಿ ಅಂಗಭೋಗ, ರಂಗಭೋಗಕ್ಕೆ ದಾನ ನೀಡಿದ ಶಾಸನವಿದೆ. ದೇವರಾಯವೊಡೆಯರ ನಿರೂಪದಿಂದ ತ್ರಿಯಂಬಕ ದೇವವೊಡೆಯರು ಮಂಗಳೂರು ರಾಜ್ಯವನ್ನು ಆಳುತ್ತಿರುತ್ತಾನೆ. ಮಂಗಳೂರಿನ ಸೋಮೇಶ್ವರ ದೇವರ ಜೀರ್ಣೋದ್ಧಾರ, ಅಂಗ, ರಂಗಭೋಗ, ನೈವೇದ್ಯಕ್ಕೆಂದು ಅರಸನು ರಾಜಗುರು ಮಹಾಮಂಡಲಾಚಾರ್ಯ ಕ್ರಿಯಾಶಕ್ತಿದೇವವೊಡೆಯರ ನೇತೃತ್ವದಲ್ಲಿ ಭೂಮಿಯನ್ನು ದಾನವಾಗಿ ನೀಡಿದ ವಿಷಯವಿದೆ.[೨೧೨]

ಸ್ವತಃ ಕೃಷ್ಣದೇವರಾಯನ ಕಿರಿಯ ರಾಣಿಯಾದ ಚಿನ್ನಾದೇವಿಯು ಹಂಪಿಯ ವಿರೂಪಾಕ್ಷ ದೇವಾಲಯುದಲ್ಲಿ ಪ್ರಸಿದ್ದ ನರ್ತಕಿಯಾಗಿದ್ದಳು.[೨೧೩] ಅಂದು ನೃತ್ಯವು ಎಷ್ಟು ಪರಿಪೂರ್ಣವಾಗಿತ್ತೆಂಬುದನ್ನು ಅಬ್ದುಲ್ ರಜಾಕ್‌ನ ಪ್ರಕಾರ ಅದನ್ನು ನೋಡಿ ಅವನು ಎಷ್ಟು ತನ್ಮಯನಾದನೆಂದರೆ ಅವನು ಹೇಳುತ್ತಾನೆ ಬಾಲೆಯರು ತಮ್ಮ ಹೆಜ್ಜೆಗಳನ್ನು ಎಷ್ಟು ಅಮೋಘವಾಗಿ ಹಾಕುತ್ತಿದ್ದರೆಂದರೆ ಜ್ಞಾನವು ತನ್ನ ಇಂದ್ರಿಯಗಳನ್ನು ಕಳೆದುಕೊಂಡಿತು ಹಾಗೂ ಆತ್ಮವು ಸಂತೋಷದ ಅಮಲಿನಲ್ಲಿ ತೆಲಿತು ಎಂದಿದ್ದಾನೆ.[೨೧೪] ವಿಜಯನಗರ ಕಾಲದಲ್ಲಿ ದೇವಾಲಯ, ಹಬ್ಬ ಉತ್ಸವಗಳ ಸಮಯದಲ್ಲಿ ಅಲ್ಲದೆ ಯುದ್ಧಕ್ಕೆ ಹೋಗುವಾಗಲೂ ಸಹ ನೃತ್ಯಗಾರ್ತಿಯರನ್ನು ಜೊತೆಗೆ ಕರೆದೊಯ್ಯುತ್ತಿದ್ದರು. ಕೃಷ್ಣದೇವರಾಯನು ರಾಯಚೂರು ಕೋಟೆಗೆ ಮುತ್ತಿಗೆ ಹಾಕಿದಾಗ ಆತನೊಡನೆ ಸುಮಾರು ೨೦,೦೦೦ ನರ್ತಕಿಯರು ಪ್ರಯಾಣ ಮಾಡಿದ್ದರನ್ನೆಲಾಗಿದೆ.[೨೧೫] ಡೊಮಿಂಗೋ ಪಾಯೇಸ್ ಮಹಾನವಮಿ ಹಬ್ಬದಂದು ನರ್ತಕಿಯರು ಸ್ಥಾನ ಏನೆಂಬುದು ತಿಳಿಸುತ್ತಾನೆ. ಅಂದಿನ ನರ್ತಕಿಯರು ಧರಿಸಿರುವ ಆಭರಣಗಳ ಐಸಿರಿಯನ್ನು ಯಾರುತಾನೆ ವರ್ಣಿಸಲು ಸಾಧ್ಯ! ವಜ್ರವೈಡೂರ್ಯಗಳ ಮುತ್ತು ಮಾಣಿಕ್ಯಗಳ ಕೊರಳ ಪಟ್ಟಿ, ತೋಳ್ಬಂದಿ, ನಡುಪಟ್ಟಿ, ಕಾಲ್ಗಡಗ ಇವುಗಳನ್ನು ನೋಡಿ ಆಶ್ಚರ್ಯವಾಗುತ್ತದೆ. ಇವರಲ್ಲಿ ಕೆಲವರಿಗೆ ಆಸ್ತಿಪಾಸ್ತಿಗಳಿವೆ. ಪಲ್ಲಕ್ಕಿಗಳಿವೆ, ಅನೇಕ ದಾನಿಯರೂ ಇದ್ದಾರೆ. ಈ ಊರಿನಲ್ಲಿ ಒಂದು ಲಕ್ಷ ಪಾರ್ಡಾಂವ್‌ಗಳಷ್ಟು ಐಶ್ವರ್ಯವಿರುವ ನಾಯಕಸಾನಿ ಇದ್ದಾಳೆ.[೨೧೬] ಮಹಾನವಮಿ ಹಬ್ಬದ ದಿನ ಬೆಳಗಿನವರೆಗೂ ನೃತ್ಯಗಳು ನಡೆಯುತ್ತಿದ್ದವು. ನರ್ತಕಿಯರ ನರ್ತನವಾದ ನಂತರದ ರಾಜನ ಭೋಜನವಾಗುತ್ತಿತ್ತು. ನೃತ್ಯಗಾರ್ತಿಯರು ಪ್ರತಿ ಶನಿವಾರ ಅರಮನೆಯ ಒಳಗಡೆಯಿರುವ ರಾಜನ ವಿಗ್ರಹದ ಮುಂದೆ ನೃತ್ಯಗೈಯಬೇಕು ಮತ್ತು ಭಂಗಿ ತೋರಬೇಕು ಪಾಯೇಸ್ ಮುಂದುವರೆದು ವಿಗ್ರಹಕ್ಕೆ ನಿತ್ಯವು ನೈವೇದ್ಯ ಮಾಡುತ್ತಾರೆ. ವಿಗ್ರಹವೇ ಊಟ ಮಾಡುತ್ತದೆ ಎಂದು ಜನರ ನಂಬಿಕೆ ಹೀಗೆ ನೈವೇದ್ಯ ಮಾಡುವಾಗ ದೇವಸ್ಥಾನಕ್ಕೆ ಸೇರಿದ ದೇವದಾಸಿಯರು ನೃತ್ಯ ಮಾಡುತ್ತಾರೆ.[೨೧೭] ಹಬ್ಬ, ಜಾತ್ರೆ, ರಥೋತ್ಸವಗಳ ಸಂದರ್ಭದಲ್ಲಿ ವಾರಂಗನೆಯರು ಮತ್ತು ದೇವಾಲಯ, ಅರಮನೆಯ ನರ್ತಕಿಯರು ಬಹಳ ಹೊತ್ತಿನವರೆಗೂ ದೇವಾಲಯ, ನೃತ್ಯಮಂಟಪಗಳಲ್ಲಿ ನೃತ್ಯ, ಹಾಡುಗಳಲ್ಲಿ ಕಾಲಕಳೆಯುತ್ತಾ ಜನರಿಗೆ ವಿನೋದವನ್ನುಂಟು ಮಾಡುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ವಿಜಯನಗರ ಕಾಲದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದೇವಾಲಯ ಕೋಟೆ ಕೊತ್ತಲು, ಕಟ್ಟಡಗಳು ಉತ್ಸವ ಮಂಟಪ, ರಂಗಮಂಟಪಗಳು ನಿರ್ಮಾಣವಾದವು. ಅವುಗಳ ಭಿತ್ತಿ, ಸ್ತಂಭಗಳ ಮೇಲೆ ಉಬ್ಬು ಕೆತ್ತನೆಯ ಶಿಲ್ಪಗಳಲ್ಲಿ ಸಾಕಷ್ಟು ನೃತ್ಯ ಶಿಲ್ಪಗಳಿವೆ. ಇವು ವಿಜಯನಗರದ ನೃತ್ಯವೇ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಿವೆ.

ಕೋಲಾಟದ ನೃತ್ಯಶಿಲ್ಪಗಳು

ಕೋಲಾಟವು ಕರ್ನಾಟಕದ ಜಾನಪದ ಸಂಪ್ರಾದಾಯಿಕ ನೃತ್ಯ ಪ್ರಕಾರ, ವಿಜಯನಗರ ಕಾಲದಲ್ಲಿ ಇದು ಅತ್ಯಂತ ಜನಪ್ರಿಯವಾಗಿ ಹಬ್ಬ, ಉತ್ಸವಗಳ ಅವಿಭಾಜ್ಯ ಅಂಗವಾಗಿದ್ದಂತೆ ತೋರುತ್ತದೆ. ಹಂಪಿ, ತಾಡಪತ್ರಿ, ಪೆನುಗೊಂಡ, ಲೇಪಾಕ್ಷಿ, ಶ್ರೀಶೈಲ ಮುಂತಾದ ಇನ್ನೂ ಅನೇಕ ವಿಜಯನಗರ ದೇವಾಲಯ, ಕಟ್ಟಡ, ಕೋಟೆ, ರಚನೆಗಳಲ್ಲಿ ಕೋಲಾಟದ ದೃಶ್ಯಾವಳಿಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ನರ್ತಕರು ತಮ್ಮ ಕೈಗಳಲ್ಲಿ ಎರಡು ಕೋಲುಗಳನ್ನು ಹಿಡಿದ ಒಬ್ಬರಿಂದೊಬ್ಬರಿಗೆ ಬಡಿಯುತ್ತಾ ವಿವಿಧ ಗತಿ ವಿನ್ಯಾಸಗಳಿಂದ ಜಾನಪದ ಹಾಡಿಗೆ ಕುಣಿಯುವ ಸಮೂಹ ನೃತ್ಯವೇ ಕೋಲಾಟ. ಪ್ರಾರಂಭದಲ್ಲಿ ನಿಧಾನವಾಗಿ ಕೋಲುಗಳನ್ನು ಹಾಕುತ್ತಾ ಪ್ರತಿಘಟ್ಟದಲ್ಲಿ ವೇಗವನ್ನು ಹೆಚ್ಚಿಸಿಕೊಂಡು ಹೋಗಿ ಕೊನೆಗೆ ಕ್ಷಿಪ್ರಗತಿಯಲ್ಲಿ ವರ್ತುಲಾಕಾರದಲ್ಲಿ ಸುತ್ತುತ್ತಾ ಹೆಜ್ಜೆಗಳನ್ನು ಹಾಕುವಾಗ ಸರಿಯಾದ ರೀತಿಯ ಸಂಯೋಜನೆ ಮತ್ತು ಶಕ್ತಿಯೂ ಬೇಕು ಹಳ್ಳಿಗಳಲ್ಲಿ ಗ್ರಾಮಸ್ತರು ಹಬ್ಬ-ಜಾತ್ರೆಗಳಂಥಹ ಸಮಯದಲ್ಲಿ ಕೋಲಾಟವಾಡುವ ರೂಢಿಯು ಇಂದಿಗೂ ಇದೆ. ಹಂಪಿಯ ಹಜಾರರಾಮಚಂದ್ರ ದೇವಾಲಯದ ಹೊರ ಆವರಣದ ಎತ್ತರವಾದ ಗೋಡೆಯ ಮೇಲೆ ಸಾಲು ಕಟ್ಟಿದ ಆನೆ, ಸೈನಿಕರು ಮುಂತಾದ ಚಿತ್ರಣವಿದೆ. ಮೇಲಿನಿಂದ ಎರಡನೆಯ ಸಾಲಿನಲ್ಲಿ ಉದ್ದಕ್ಕೂ ಕೋಲಾಟದ ದೃಶ್ಯವಿದೆ. ಇದು ಪ್ರಾಯಶಃ ನರ್ತಕಿಯರು ಎಲ್ಲಾ ತರಹದ ನೃತ್ಯ ಮಾಡಿ ಕೊನೆಗೆ ನಿಂತಿರುವ ರೀತಿಯ ಶಿಲ್ಪಗಳು ಸೆರೆಹಿಡಿದಿಟ್ಟಿರುವಂತಿದೆ. ಹಾಗೆಯೇ ಕೋಲಾಟದ ಶಿಲ್ಪಗಳು ಮಹಾನವಮಿ ದಿಬ್ಬದ ಅಧಿಷ್ಠಾನದಲ್ಲಿ ವಿಜಯವಿಠಲ ದೇವಾಲಯ ಹಿಂದಿನ ಭಿತ್ತಿಯಲ್ಲಿ ಅನಂತಶಯನ ಗುಡಿ ಕಂಬದ ಕೆಳಭಾಗದಲ್ಲಿ ಲೇಪಾಕ್ಷಿ-ಹೀಗೆ ಇನ್ನೂ ಮುಂತಾದ ದೇವಾಲಯಗಳಲ್ಲಿ ಕಂಡುಬಂದಿವೆ. ಆಂಧ್ರದ ಚಿಂತಾಲವೆಂಕಟರಮಣ ಸ್ವಾಮಿ ದೇವಾಲಯದ ಕೋಲಾಟದ ನರ್ತಕಿಯರನ್ನು ಹಂಪಿಯ ನರ್ತಕಿಯರಿಗೆ ಹೋಲಿಸಿದರೆ ಹೆಚ್ಚು ಸರಳ ರೀತಿಯ ಚಲನೆಗಳಲ್ಲಿದ್ದಾರೆ. ಅವರುಗಳು ತಮ್ಮ ಕಾಲುಗಳನ್ನು ಸ್ವಲ್ಪ ದೂರದಲ್ಲಿರಿಸಿ ಚಲನೆಯಲ್ಲಿ ವೇಗಗತಿಯಲ್ಲಿ ಸಾಗುವಂತೆ ಚಿತ್ರಿಸಲಾಗಿದೆ. ಹಾಗೂ ಸಾಕಷ್ಟು ಬಾಗಿರುವಂತಿದೆ, ಹಂಪಿಯ ನರ್ತಕಿಯರು ಸಾಕಷ್ಟು ಸಂಖ್ಯೆಯಲ್ಲಿರುವಂತೆ ಚಿತ್ರಿಸಲಾಗಿದೆ. ಪ್ರಾಯಶಃ ರಾಜಧಾನಿಯಲ್ಲಿ ನಡೆಯುವ ಉತ್ಸವಗಳಲ್ಲಿ ಹೆಚ್ಚು ನರ್ತಕಿಯರು, ಸಂಗೀತಗಾರರು ಭಾಗವಹಿಸುತ್ತಿದ್ದಿರಬಹುದು. ವಿದೇಶಿ ಸಂದರ್ಶಕರ ವಿವರಗಳೂ ಇದನ್ನು ಅನುಮೋದಿಸುತ್ತವೆ.

ಕೊರವಂಜಿ ಶಿಲ್ಪ

ದಕ್ಷಿಣ ಭಾರತದ ಗ್ರಾಮಗಳಲ್ಲಿ ಕೊರತಿ ಅಥವಾ ಕೊರವಂಜಿಯು ಪರಿಚಿತ ಭವಿಷ್ಯ ನುಡಿಯುವ ಈಕೆ ಕೈಯಲ್ಲಿ ಒಂದು ಬುಟ್ಟಿ ಹಾಗೂ ಬಣ್ಣದ ಕೋಲನ್ನು ಹಿಡಿದು ತಿರುಗಿಸುತ್ತಾ ಒಂದು ಮನೆಯಿಂದ ಇನ್ನೊಂದು ಮನೆಗೆ ಹೋಗಿ ಜನರನ್ನು ರಂಜಿಸುವ ರೀತಿಯಲ್ಲಿ ಹಾಡಿ, ಕುಣಿದು ಬರುವ ಎಲ್ಲರಿಗೂ ಬೇಕಾದ ಹೆಂಗಸು, ಮುರುಗನ ಕಾರ್ತಿಕೇಯ, ಹೆಸರನ್ನು ಹೇಳಿ ಹಾಡಿ ಹೊಗಳುವ ಒಂದು ಪಂಗಡವಿದ್ದರೆ, ಇನ್ನೊಂದು ತಿರುಪತಿಯ

ವೆಂಕಟೇಶ್ವರನನ್ನು ಹಾಡಿ ಹೊಗಳುತ್ತದೆ. ತಮಿಳು ನಾಡಿನಲ್ಲಿ ಕುದ್ರಾಲ ಕೊರವಂಜಿಯೆಂಬ ಒಂದು ನೃತ್ಯ ಸಂಪ್ರದಾಯವೇ ಇದೆ.[೨೧೮] ವಿಜಯನಗರ ಕಾಲದ ದೇವಾಲಯಗಳಲ್ಲಿ ಕೊರವಂಜಿಯ ಶಿಲ್ಪಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಪ್ರಾಯಶಃ ಇವರು ಉತ್ಸವ ಮತ್ತು ರಾಜಸಭೆಗಳಲ್ಲಿ ಈ ಕೊರವಂಜಿ ನರ್ತಕಿಯರು ಬಂದು ಜನರನ್ನು ರಂಜಿಸುತ್ತಿರಬೇಕು.

೪.೩ ಸಂಗೀತ

ಸಂಗೀತವು ಶಬ್ದ, ನಾದ ಮತ್ತು ಶಕ್ತಿಯಿಂದ ಜರುಗುವ ನೈಸರ್ಗಿಕ ಕ್ರಿಯೇ ಭಾವ, ತಾಳ, ಮೇಳ ಮತ್ತು ಮಾಧುರ್ಯಗಳೆಲ್ಲವೂ ಉತ್ತಮ ಸಂಗೀತದ ತಳಹದಿಗಳು. ಸಂಗೀತವು ಮನಸ್ಸಿನ ಒಳಗೆ ನಡೆಯುವ ಹುಟ್ಟು ನೈಸರ್ಗಿಕ ಕ್ರಿಯೆಯಾದ್ದರಿಂದ ಮಾನವರು ಸದ್ದು ಮಾಡದೇ ಸಂಗೀತ ಜ್ಞಾನವಿಲ್ಲದೆ ಮನಸ್ಸಿನೊಳಗೆ ಸಂಗೀತ ನುಡಿಸಬಲ್ಲರು. ಬಹು ಪ್ರಾಚೀನ ಕಾಲದಿಂದಲೂ ಸಂಗೀತ ನೃತ್ಯಗಳು ಭಾರತೀಯರ ಬದುಕಿನಲ್ಲಿ ಹಾಸುಹೊಕ್ಕಾಗಿ ನೆಲಸಿರುವುದನ್ನು ಕಾಣಬಹುದು. ಸಾಮವೇದದಿಂದ ಸಂಗೀತ ಹುಟ್ಟಿತೆಂಬ ಅಭಿಪ್ರಾಯವೂ ಇದೆ. ಸಂಗೀತವನ್ನು ಗಾಂಧರ್ವವಿದ್ಯೆಯೆಂದು ಗುರುತಿಸಿರುವುದುಂಟು. ಏಕವಾಹಿನಿಯಾಗಿ ಬೆಳದು ಬಂದ ಸಂಗೀತ ಸುಮಾರು ೧೬ನೆಯ ಶತಮಾನದ ಹೊತ್ತಿಗೆ ಹಿಂದೂಸ್ತಾನಿ ಮತ್ತು ಕರ್ಣಾಟಕ ಸಂಗೀತಗಳೆಂಬ ಎರಡು ಪದ್ಧತಿಗಳಾಗಿ ಬೆಳೆದು ಬಂದವೆಂದು ವಿದ್ವಾಂಸರು ಗುರುತಿಸುತ್ತಾರೆ.[೨೧೯] ಭಾರತದ ಪ್ರಾಚೀನ ಗ್ರಂಥಗಳಲ್ಲಿ ಅಡಗಿರುವ ಜ್ಞಾನ ಭಂಡಾರದಲ್ಲಿ ಸಂಗೀತ ಶಾಸ್ತ್ರವೂ ಒಂದು, ವೇದ, ಉಪನಿಷತ್, ಪುರಾಣಗಳಲ್ಲಿ, ವ್ಯಾಕರಣಶಾಸ್ತ್ರ ನಿಪುಣನಾದ ಪಾಣಿನಿ (ಕ್ರಿ.ಪೂ. ೩೨೬)ಯ ಗ್ರಂಥಗಳಲ್ಲಿ ಆಧಾರವಿದೆ. ಇದಕ್ಕೂ ಮುಂದೆ ಉದ್ಭವಗೊಂಡ ರಾಮಾಯಣ (ಕ್ರಿ.ಪೂ. ೪೦೦) ಮತ್ತು ಮಹಾಭಾರತ (ಕ್ರಿ.ಪೂ.೫೦೦) ಗಳಲ್ಲಿಯೂ ಪುಷ್ಟಿಗೊಂಡಿವೆ. ಆದರೆ ಹೀಗೆ ಅಲ್ಲಲ್ಲಿ ವಿವರಣೆಗಳಿಂದ ಕೊಡಿದ ವ್ಯಾಖ್ಯಾನಗಳು ಕಂಡುಬಂದರೂ ವಾಗ್ಗೇಯಕಾರರಿಗೂ, ಸಂಗೀತಗಾರರಿಗೂ, ಸಂಗೀತವನ್ನು ಸಾಂಗಾವಾಗಿ ಅರಿಯಲು ಸಾರ್ಥಕವಾಗಿರುವ ಗ್ರಂಥವೆಂದರೆ ಶಾರ್ಙ್ಗದೇವರ ಸಂಗೀತ ರತ್ನಾಕರ ಎಂದೇ ಹೇಳಬೇಕು.[೨೨೦] ಪ್ರಾಚೀನ ಭಾರತೀಯ ಸಂಗೀತವು ಎರಡು ವಿಧವಾಗಿ ವಿಭಜನೆಗೊಂಡಿತ್ತು ೧. ಮಾರ್ಗ ಸಂಗೀತ ೨. ದೇಶಿ ಸಂಗೀತ.[೨೨೧] ಅತ್ಯಂತ ಪ್ರಾಚೀನ ಸಂಗೀತಕ್ಕೆ ಮಾರ್ಗಸಂಗೀತವೆಂದು ಹೆಸರು. ವೇದಗಾನ 'ಅರ್ಚಿನೋ ಗಾಯಂತಿ, ಗಾಥಿನೋಗಾಯಂತಿ, ಸಾಮೀನೋ ಗಾಯಂತಿ' ಎಂದು ಹೇಳಿರುವಂತೆ ವೇದಗಾನವು ನಾಲ್ಕು ಸ್ವರಗಳ ಗಾನವಾಗಿತ್ತು ಮಾರ್ಗ ಸಂಗೀತವು ಬಹಳ ಪುರಾತನವು ಪವಿತ್ರವಾದುದು ಎಂಬ ನಂಬಿಕೆಯುಂಟು.[೨೨೨] ಆಯಾ ಪ್ರದೇಶಗಳಲ್ಲಿ ಅಲ್ಲಿಯ ಜನರಂಜನವಾಗಿರುವ ಸಂಗೀತವು ದೇಶಿಯೆಂದು ಹೆಸರು ಪಡೆದಿದೆ. ಇದು ಪ್ರಸ್ತುತ ರೂಢಿಯಲ್ಲಿರುವ ಸಂಗೀತ, ವಿವಿಧ ಪ್ರಾಂತ್ಯಗಳಲ್ಲಿ ಪ್ರಚಲಿತವಾಗಿದ್ದ ಲೌಕಿಕ ಸಂಗೀತಕ್ಕೆ ದೇಶಿ ಸಂಗೀತವೆಂದು ಹೆಸರು ಜನರಂಜನೆಯು ಇದರ ಮುಖ್ಯ ಲಕ್ಷಣ.[೨೨೩] ಕನ್ನಡಿಗರ ಸಂಗೀತಕ್ಕೆ ಸಂಬಂಧಿಸಿದಂತದಹ ಉಪಲಬ್ಧ ಆಧಾರಗಳನ್ನು ಕಾಣಬೇಕಾದರೆ, ಶಾಸನ, ಶಿಲ್ಪ, ಚಿತ್ರ, ವಿದೇಶಿ ಪ್ರವಾಸಿಗರ ವರದಿ, ಸಾಹಿತ್ಯ ಕೃತಿಗಳನ್ನು ಗಮನಿಸಬೇಕಾಗುತ್ತದೆ. ಸಂಗೀತವು ಹಿಂದಿನ ಕನ್ನಡಿಗರ ಬದುಕಿನ ಒಂದು ಸಹಜ ಅಂಗವೇ ಎನ್ನುವಷ್ಟರ ಮಟ್ಟಿಗೆ ಅದರಲ್ಲಿ

ಬೆರೆತು ಹೋಗಿದ್ದಿತು. ಕೆಳಗಿನ ಅಂಶಗಳಿಂದ ಸಂಗೀತದ ಬಗ್ಗೆ ಆಸಕ್ತಿ, ಶ್ರದ್ಧೆಗಳು ಎಷ್ಟರ ಮಟ್ಟಿಗೆ ಇತ್ತು ಎಂಬುದು ಗೋಚರವಾಗುತ್ತದೆ. ಕ್ರಿ.ಶ. ೪೫೦ರ ತಾಳಗುಂದ ಶಾಸನದಲ್ಲಿ ಮನೆಮನೆಗಳೂ ಸಂಗೀತದ ಮನೋಹರ ನಿನಾದಗಳಿಂದ ಕೂಡಿದ್ದವು ಎಂಬ ವರ್ಣನೆ ದೊರಕುತ್ತದೆ.

ನಾನಾ ವಿಧ ದ್ರವಿಣ ಸಾರ ಸಮುಚ್ಚಯೇಷ್ಟು
ದ್ವಪೇಂದ್ರ ಮದವಾಸಿಕ ಗೋಪುರೇಷು ಸಂಗೀತವಲ್ಗು
ನಿನದೇಷು ಗೃಹೇಷು[೨೨೪]

ಅಣ್ಣಿಗೇರಿ ಮುಂತಾದ ಊರುಗಳನ್ನು ವರ್ಣಿಸುವಾಗ ಅವು ಅಖಿಳ ಕಳಾ ವಾದ್ಯಂಗಳಿಂದ ಶೋಭಿಸುತ್ತಿದ್ದವೆಂಬ[೨೨೫] ಕೈದಾಳ ಗ್ರಾಮವು ನಾನಾಗೇಯ ಚಾತುರ್ಯದಿಂ ಕೊಡಿದ್ದಿತೆಂದು ಒಂದು ಶಾಸನ ಹೇಳುತ್ತದೆ.[೨೨೬] ಬಳಿಗಾವೆಯ ಕೇದಾರ ಮಠದಂತಹ ವಿದ್ಯಾಕೇಂದ್ರಗಳು ಕಥನ, ಗಾಯಕ, ವಾದಕ, ವಾಂಶಿಕ ನರ್ತಕ ಮುಂತಾದ ಕಲಾವಿದರಿಗೆ ಆಶ್ರಯಸ್ಥಾನವಾಗಿದ್ದವು.[೨೨೭] ಅತ್ತಿಮಬ್ಬೆ ಹತ್ತನೆಯ ಶತಮಾನದ ಜೈನ ಮಹಿಳಾ ಮಣಿ, ಕವಿ, ಕದಕ, ಗಾಯಕ, ವಾದಕ, ನಗ್ನ, ಭಗ್ನ ನಟ, ಭಟ, ಮಾಗದ, ಅನಾಥ ಶಿಷ್ಟೇಷ್ಟು ಸಮಭಲಕ್ಷಿತಾರ್ಥ ದಾನ ವಿನೋದ ಎಂದೆನಿಸಿಕೊಂಡಿದ್ದಳೆಂದು ಅವಳ ಲಕ್ಕುಂಡಿ ಶಾಸನದಿಂದ ತಿಳಿದುಬರುತ್ತದೆ.[೨೨೮] ಇದರಿಂದ ಸಂಗೀತ ಕಲೆಗೆ ಪ್ರಾಚೀನ ಅರಸಮನೆತನದ ಕಾಲದಿಂದಲೂ ವಿಶೇಷ ಪ್ರಾಶಸ್ತ್ಯವಿದ್ದು ಆ ಕಾಲದ ರಾಜ, ರಾಣಿ, ಅಧಿಕಾರಿ, ಅವರ ಮಡದಿಯರು ಮತ್ತು ಅಪಾರ ಶ್ರೋತೃಗಳು ಸಂಗೀತವನ್ನು ಬಲ್ಲವರಾಗಿದ್ದರು, ಅಲ್ಲದೆ ಸಂಗೀತ ಪ್ರೋತ್ಸಾಹಕರಾಗಿದ್ದರು. ಅಂಬಳೆಯ ಶಾಸನ ಎರಡನೆಯ ಬಲ್ಲಾಳನನ್ನು ಕುರಿತು

'ಸಂಗೀತ ಭಂಗೀ ಚತುರ ಭರತಂ' ಎಂದು ಹೇಳುತ್ತದೆ.[೨೨೯]

ಉತ್ತಮಚೋಳನನ್ನು ಒಂದು ಶಾಸನ 'ಗೀತ ನೃತ್ಯ ವಾದ್ಯತೋದ್ಯ ವಿನೋದನೆಂದು ಕರೆದಿದೆ. ಮಂಡಳೇಶ್ವರ ಪೆಮ್ಮಾಡಿ ದೇವರಸನನ್ನು 'ಕಾವ್ಯಗೀತರಸಾನುಭವ ವಿನೋದ'ನೆಂದು ಕರೆದಿದೆ.[೨೩೦] ಒಂದು ತಾಮ್ರ ಶಾಸನದಲ್ಲಿ ಕಾಮಚಮೂಪತಿಯ ತಮ್ಮನಾದ ತೇಜಿ ಚಮೂಪನನ್ನು ವರ್ಣಿಸುತ್ತಾ ಅವನು ನರ್ತನದಲ್ಲಿ ಸಂಗೀತ ವಾದ್ಯ ನುಡಿಸುವುದರಲ್ಲಿ ತಿಳುವಳಿಕೆ 'ಉಳ್ಳವನಾಗಿದ್ದನೆಂದು ತಿಳಿಸುತ್ತದೆ.[೨೩೧] ವಿಷ್ಣುವರ್ಧನನ ರಾಣಿ ಶಾಂತಲೆ ಸಂಗೀತ ನರ್ತನಗಳಿಂದ ಅಸಾಧಾರಣ ವ್ಯಕ್ತಿತ್ವದಿಂದ ಆ ಯುಗದ ಖ್ಯಾತ ರಾಣಿ ಎನಿಸಿದ್ದಳು. ಎರಡನೆಯ ಬಲ್ಲಾಳನ ರಾಣಿ ಬಮ್ಮಲೆಯನ್ನು ಒಂದು ಶಾಸನ 'ಗೀತ ವಾದ್ಯ ನೃತ್ಯ ಸೂತ್ರಧಾರ' ಎಂದು ವರ್ಣಿಸಿದೆ. ಚಾಳುಕ್ಯ ವಂಶದ ರಾಣಿ ಲಕ್ಷ್ಮಾದೇವಿಯನ್ನು ಒಂದು ಶಾಸನ ಕಿರ್ತಿಸುತ್ತಾ ಶ್ರವ್ಯ, ಕಾವ್ಯ, ದಿವ್ಯ ಗೀತಾವಾದ್ಯ, ವಿದ್ಯಾ ಪ್ರವೀಣೆ ಎಂದಿದೆ.[೨೩೨]

ಇದೇ ರೀತಿ ಚೋಳ ರಾಜವಂಶದ ಮಲ್ಲದೇವನ ರಾಣಿ ಸೀತಾದೇವಿಯನ್ನು ಶ್ರವ್ಯಕಾವ್ಯದಿವ್ಯಗೀತಾ ವಾದ್ಯ ನೃತ್ಯ ವಿದ್ಯಾ ಪ್ರವೀಣೆ ಎಂದು ಕೀರ್ತಿಸಿದೆ.[೨೩೩] ಅಂದು ರಾಜನ ಆಸ್ಥಾನಗಳಲ್ಲಿ ಸಂಗೀತ ಆಸ್ವಾದಿಸಲು ಸಂಗೀತಗೋಷ್ಠಿ ಏರ್ಪಡಿಸುತ್ತಿದ್ದರು. ಕ್ರಿ.ಶ. ೧೧೯೫ರ ಶಾಸನವೊಂದರಲ್ಲಿ ಬಂದಿರುವ ರಾಜಸ್ಥಾನದ ವರ್ಣನೆಯನ್ನು ನೋಡಿದರೆ ಆಸ್ಥಾನಗಳಲ್ಲಿ

ಕಾವ್ಯ, ನಾಟಕಗಳ ವಿಚಾರ ನಡೆಯುತ್ತಿದ್ದುದರ ಜೊತೆಗೆ ಅಲ್ಲಿ ಸುಂದರಿಯರಾದ ಸ್ತ್ರೀಯರಿಂದ ಗೀತ, ವಾದನ, ನೃತ್ಯ, ವೇಣು ವೀಣಾರವಗಳು ಕೇಳಿಬರುತ್ತಿದ್ದವು ಎಂದು ತಿಳಿಯುತ್ತದೆ.

ಕದಂಬ ವಂಶದ ದಯಾಸಿಂಹನ ಆಸ್ಥಾನದ ವರ್ಣನೆ ಹೀಗಿದೆ:

'ಗೀತ ವಾದ್ಯ ನೃತ್ಯ ವೇಣು ವೀಣಾರವ ಸಂಗತ ಮಂಗಳ ಪಾಠಕೆ ವಿಜೃಂಭಿತಾಸ್ಥಾನನುಂ'[೨೩೪]

ಈ ರೀತಿಯಾಗಿ ವಿಜಯನಗರ ಪೂರ್ವದಲ್ಲಿದ್ದ ಅರಸು ಮನೆತನದವರು ಸಂಗೀತಕ್ಕೆ ಕೊಟ್ಟಷ್ಟು ಮಾನ್ಯತೆ ಇವರು ಯಾವುದೇ ಕೊರತೆಯಿಲ್ಲದಂತೆ ಮುಂದುವರೆಸಿಕೊಂಡು ಬಂದಿರುವುದು ಕೆಳಗಿನ ದಾಖಲೆಗಳು ಪುಷ್ಟೀಕರಿಸುತ್ತವೆ.

ವಿಜಯನಗರ ಕಾಲದಲ್ಲಿ ಸಂಗೀತವು ಸಮೃದ್ಧವಾಗಿ ಬೆಳೆದು ಸಾಂಸ್ಕೃತಿಕ ಪರಂಪರೆಯಾಯಿತು. ಅಂದಿನ ಆಸ್ಥಾನದಲ್ಲಿ ಸಂಗೀತ, ಸಾಹಿತ್ಯ, ನೃತ್ಯ, ನಾಟಕ ಮುಂತಾದ ಕಲೆಗಳಲ್ಲಿ ನುರಿತ ಕಲಾವಿದರು. ತುಂಬಿರುತ್ತಿದ್ದರು ಸಂಗೀತಕ್ಕೆ ಪೂರಕ ಸ್ವರ ವಸ್ತುಗಳೆಂದರೆ ವೀಣೆ, ತಂಬೂರಿ, ಮದ್ದಳೆ, ಮುಖವೀಣೆ, ಕೋಳಲು, ಡಮರುಗ, ಮೃದಂಗ ಇತ್ಯಾದಿಗಳು ಸಂಗೀತ ಪರಿಕರಗಳಾಗಿದ್ದವು. ಇದು ಅವರ ಶಿಲ್ಪಗಳಿಂದ ತಿಳಿಯುವುದು. ಅಂದು ಕಹಳೆ, ಮೃದಂಗ, ಶಂಖ, ನಗಾರಿ ಮತ್ತು ಚಾಗಟಿಗಳು ಪಂಚ ಮಹಾವಾದ್ಯಗಳಾಗಿದ್ದವು. ವೈಣಿಕರು ಈ ವಾದನ ಕಲೆಯಲ್ಲಿ ಹೆಚ್ಚು ಪರಿಣಿತರಾಗಿದ್ದರು. ಇವರ ಪರಿಣಿತಿಯನ್ನು ಕಂಡು ಅರಸರು ಇವರನ್ನು ಸನ್ಮಾನಿಸುತ್ತಿದ್ದರು.

ಅಂದು ಸಂಗೀತವನ್ನು ಎಷ್ಟರಮಟ್ಟಿಗೆ ಪೋಷಿಸಿ ಬೆಳಸಿದರೆಂಬುದಕ್ಕೆ ಅಂದಿನ ಶಾಸನ, ವಿದೇಶಿ ಪ್ರವಾಸಿಗರ ಬರಹ, ಶಿಲ್ಪ, ಸಾಹಿತ್ಯಗಳೇ ಸಾಕ್ಷಿಯಾಗಿ ನಿಲ್ಲುವವು. ಒಂದು ಶಾಸನದಲ್ಲಿ ಇಮ್ಮಡಿ ದೇವರಾಯನನ್ನು ಶ್ರೀ ವೀರಪ್ರತಾಪ ಬುಕ್ಕರಾಯನ ಕುಮಾರನೆಂದು ಉಲ್ಲೇಖಿಸಿದೆ. ಈ ಚಾಮರಾಜನು ಸೋಮೇಶ್ವರ ದೇವರ ಪಾದದಾರಾದಕನೆಂದೂ, ಬೊಪ್ಪದೇವನ ಮಗನೆಂದೂ, ವಂದಿ ಜನ ಪಾರಿಜಾತ ಯುವತೀ ಜನ ಕುಸುಮ ಕೋದಂಡ, ಕದನ ಪ್ರಚಂಡ, ಸಾಮಭೇದಾದಿ ಚತುರೋಪಾಯ ವಿಚಕ್ಷಣ ಸದ್ಧರ್ಮ ರಕ್ಷಣ, ಸಂಗೀತ ಲೋಲನೆಂದು ವಿಶೇಷವಾಗಿ ವರ್ಣಿಸಿದೆ.[೨೩೫] ವಿಜಯನಗರದ ದೊರೆ ಎರಡನೆಯ ದೇವರಾಯನ ಆಸ್ಥಾನದಲ್ಲಿದ್ದ ಕಲ್ಲಪ್ಪದೇಶಿಕನು ಕಲ್ಲಿನಾಥ ಶಾರ್ಙ್ಗದೇವನ, ಸಂಗೀತ ರತ್ನಾಕರವೆಂಬ ಗ್ರಂಥಕ್ಕೆ 'ಸಂಗೀತ ಕಲಾ ನಿಧಿ' ಎಂಬ ಸ್ವತಂತ್ರ ವ್ಯಾಖ್ಯಾನವನ್ನು ರಚಿಸಿದನು. ಇದು ಅಂದಿನ ಸಂಗೀತದ ವಿಕಾಸದಲ್ಲಿ ಮಾರ್ಗದರ್ಶನ ಮಾಡುವ ಶಕ್ತಿಯಾಗಿ ಪರಿಣಮಿಸಿ ನಂತರ ಲಕ್ಷಣಕಾರರ ಮೇಲೆ ಪ್ರಭಾವ ಬೀರಿತು. ಇವನ ಪುತ್ರ ರಾಮಾಮಾತ್ಯ (ಬಯಾಕಾರ ರಾಮಪ್ಪಯ್ಯ) ಸ್ವರ ಮೇಳ ಕಲಾನಿಧಿ ಎಂಬ ಗ್ರಂಥವನ್ನು ರಚಿಸಿ ಕರ್ನಾಟಕ ಸಂಗೀತದಲ್ಲಿ ಕ್ರಾಂತಿ ಉಂಟು ಮಾಡಿದನು. ಇವನ ಕಾಲದಲ್ಲಿ ಶ್ರುತಿ, ಸ್ವರ ಮತ್ತು ಲಕ್ಷಣಗಳ ಸಮನ್ವಯಗೋಳಿಸಲು ಪ್ರಯತ್ನಿಸಿದನು. ಇವನು ಆಧುನಿಕ ಜನಕ ರಾಗಗಳ ಜನಕ.[೨೩೬] ವಿಜಯನಗರದ ಪ್ರಖ್ಯಾತ ಅರಸ ಸ್ವತಃ ಶ್ರೀ ಕೃಷ್ಣದೇವರಾಯನು ಸಂಗೀತ, ಸಾಹಿತ್ಯಕ್ಕೆ ಸಾಕಷ್ಟು ಮನ್ನಣೆ ನೀಡಿದ್ದ. ಅವನು ಆಯಾಸಗೊಂಡ ಸಂದರ್ಭದಲ್ಲಿ ಸಂಗೀತ ಕೇಳಬಯಸುತ್ತಿದ್ದ ಅಂದಿನ ಸ್ತ್ರೀಯರು ಹಾಡು ಹೇಳುವುದರಲ್ಲಿ, ಸಂಗೀತ ಪರಿಕರಗಳನ್ನು

ನುಡಿಸುವುದರಲ್ಲಿ ಹಾಗೂ ನೃತ್ಯದಲ್ಲಿ ಸಾಮಾನ್ಯವಾಗಿ ಪರಿಣಿತಿ ಪಡೆದಿರುತ್ತಿದ್ದವರನ್ನು ಹಿಂದೆ ಚರ್ಚಿಸಿದ್ದೆವೆ. ಕೃಷ್ಣದೇವರಾಯನ ಪತ್ನಿಯರಾದ ತಿರುಮಲಾದೇವಿ ಹಾಗೂ ಚಿನ್ನಾದೇವಿ ಉತ್ತಮ ಕಂಠ ಸಿರಿ ಹೊಂದಿದ್ದರು. ಶ್ರೀ ಕೃಷ್ಣ ದೇವರಾಯನಿಗಾಗಿ ಇವರು ಹಾಡು ಹೇಳುತ್ತಿದ್ದರಂತೆ. ತನ್ನ ಬಿಡುವಿನ ವೇಳೆಯಲ್ಲಿ ಆಗಾಗ ಏಕಾಂತದಲ್ಲಿ ಕುಳಿತು ಇವರ ಹಾಡು ಕೇಳುವುದು ಇವನಿಗೆ ಅಭ್ಯಾಸವಾಗಿತ್ತು.[೨೩೭]

ವಿಜಯನಗರದ ಆಡಳಿತ ಕಾಲದಲ್ಲಿ ಹಲವು ವಿದೇಶಿ ಪ್ರವಾಸಿಗರು ಭೇಟಿ ನೀಡಿ ತಮ್ಮ ಬರಹಗಳಲ್ಲಿ ದಾಖಲಿಸಿದ್ದಾರೆ. ಸಂಗೀತದ ಕುರಿತು ಪಾಯೇಸ್ ಒಂದು ಕಡೆ ಅಲ್ಲಿ ಕಹಳೆ, ಕೊಳಲು ಊದುವರಿದ್ದಾರೆ ಮತ್ತು ನಮ್ಮವಕ್ಕಿಂತ ಭಿನ್ನವಾದ ಇತರ ವಾದ್ಯಗಳನ್ನೂ ಊದುವವರಿದ್ದಾರೆ. ಹಾಗೆಯೇ ಬೋಯಿಗಳಾಗಿ ಮತ್ತು ಅಗಸರಾಗಿ ಹಾಗೂ ಅರಸನಿಗೆ ಅರಮನೆಯಲ್ಲಿ ಅಧಿಕಾರಿಗಳಾಗಿರುವಂತೆಯೇ, ದ್ವಾರದೊಳಗಡೆ ಇರುವ ಇತರ ಕಾರ್ಯಗಳ ಸ್ತ್ರೀಯರಿದ್ದಾರೆ.[೨೩೮] ನಂತರ ತುತ್ತೂರಿ, ಮದ್ದಲೆ, ಕೊಳಲು, ಪೀಟಿಲು ಮತ್ತಿತರ ಬಗೆಯ ಸಂಗೀತ ನುಡಿಸುವ ಅನೇಕ ಸ್ತ್ರೀಯರಿದ್ದಾರೆ. ಮತ್ತೊಬ್ಬ ಪ್ರವಾಸಿ ದು-ಆರ್ತ ಬಾರ್ಬೊಸನ ಹೇಳಿಕೆ ಪ್ರಕಾರ ಅರಮನೆಯ ಊಳಿಗಕ್ಕೆ ಬೇಕಾದ ಹೆಂಗಸರನ್ನು ರಾಜ್ಯದಲ್ಲೆಲ್ಲಾ ಹುಡುಕಿ ಅವರಲ್ಲಿ ರೂಪವತಿಯರನ್ನು ಆರಿಸಿಕೊಳ್ಳುತ್ತಾರೆ. ಅರಮನೆಯ ಎಲ್ಲಾ ಕೆಲಸವೂ ಸ್ತ್ರೀಯರಿಂದಲೇ ನಡೆಯಬೇಕಾದ್ದರಿಂದ ಅದಕ್ಕೆ ಶುಚಿ ರುಚಿಯನ್ನರಿತ ಸ್ತ್ರೀಯರೇ ಬೇಕು ಇವರಿಗೆ ಅರಮನೆಯೊಳಗೆ ವಾಸಕ್ಕೆ ಮನೆಗಳನ್ನು ಕಟ್ಟಿ ಬೇಕಾದುದನೆಲ್ಲಾ ಒದಗಿಸುತ್ತಾರೆ. ಇವರು ತಮ್ಮ ಗಾಯನ, ನೃತ್ಯ, ಅಭಿನಯ ಮುಂತಾದ ವಿಧಾನಗಳಿಂದ ರಾಜನ ಮನಸ್ಸಿಗೆ ಆನಂದವನ್ನುಂಟು ಮಾಡುತ್ತಾರೆ. ಈ ಹಿಂದೆ ನಾನು ಹೇಳಿದ ಕೇರಿಗಳಲ್ಲಿ ಸ್ತ್ರೀಯರು ನಿತ್ಯ ಸ್ನಾನ ಮಾಡಿ ವಾದ್ಯಬಾರಿಸಿ ಹಾಡಿ ನಲಿಯುತ್ತಾರೆ.[೨೩೯] ಹಾಗೆಯೇ ಕೇವಲ ಅರಮನೆಯಷ್ಟೆ ಅಲ್ಲದೆ ಯುದ್ಧಗಳಿಗೆ ಹೋಗಬೇಕಾದರೂ ವಿನೋದ ಪಡೆಯುತ್ತಿದ್ದರು.

ದು-ಆರ್ತ ಬಾರ್ಬೊಸಾ ರಾಜನ ಅಶ್ವದಳ ಮತ್ತು ಕಾಲ್ದಳಗಳಲ್ಲಿರುವವರೆಲ್ಲ ಸೇರಿ ಹತ್ತು ಲಕ್ಷ ಜನರಿದ್ದಾರೆ. ಇವರಿಗೆಲ್ಲ ಸಂಬಳ ಉಂಟು. ಐದಾರು ಸಾವಿರ ಸ್ತ್ರೀಯರೂ ಇದ್ದಾರೆ. ಇವರಿಗೂ ಸಂಬಳವುಂಟು ಯುದ್ಧಕ್ಕೆ ಹೋದಾಗ ಸೈನಿಕರು ಸಂಖ್ಯೆಗನುಗುಣವಾಗಿ ಸ್ತ್ರೀಯರನ್ನೂ ಕಳಿಸುತ್ತಾರೆ. ಇವರಿಲ್ಲದೆ ಸೈನಿಕರು ಯುದ್ಧ ಮಾಡಲಾರರೆಂದೂ, ಸೈನಿಕರು ಒಮ್ಮತದಿಂದ ಇರಲಾರರೆಂದೂ ಹೇಳುತ್ತಾರೆ. ಈ ಸ್ತ್ರೀಯರು ಬಹು ಸೊಗಸುಗಾರ್ತಿಯರು, ನೃತ್ಯ ಗೀತ ಗಾಯನ ದೊಂಬರಾಟಗಳಲ್ಲಿ ನುರಿತ ಚದುರೆಯರು.[೨೪೦] ಈ ರೀತಿ ಸಂಗೀತ, ನೃತ್ಯಗಳನ್ನು ಕೇವಲ ಅರಮನೆಯ ಒಳಗೆ, ಹಬ್ಬ, ಜಾತ್ರೆ, ಉತ್ಸವಗಳೆಂದು ಅಲ್ಲದೆ, ರಣರಂಗದಲ್ಲಿಯೂ ಮನರಂಜನೆಯನ್ನು ಬಯಸುತ್ತಿದ್ದರು ಎಂಬುದು ತಿಳಿಯುತ್ತದೆ. ಅಂದು ಸಂಗೀತವನ್ನು ಕಲಿಸಲು ಗುರುಗಳ ವ್ಯವಸ್ಥೆಯಿತ್ತು. ಸಂಗೀತ ಸೂರ್ಯೋದಯ (ಕ್ರಿ.ಶ. ೧೫೨೦) ಇದರ ಲೇಖಕನಾದ ಭಂಡ ಲಕ್ಷ್ಮೀನಾರಾಯಣನು ಸಂಗೀತ ಮತ್ತು ನೃತ್ಯದ ವ್ಯವಸ್ಥಾಪನಕಣಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿದನು. ಇವನು ಸಂಗೀತಗಾರ ಹಾಗೂ ನೃತ್ಯ ಗುರುವಾಗಿದ್ದನು. ರಾಜಮನೆತನದ ಸ್ತ್ರೀಯರಿಗೆ ನೃತ್ಯ ತರಬೇತಿಯನ್ನು ನೀಡುತ್ತಿದ್ದನು.[೨೪೧]

ನೃತ್ಯ ಹಾಗೂ ಸಂಗೀತಗಳೆರಡೂ ಅಂದಿನ ಎಲ್ಲಾ ಪ್ರಮುಖ ಸಾರ್ವಜನಿಕ ಸಮಾರಂಭಗಳಲ್ಲಿ ಅತ್ಯವಶ್ಯಕ ವಸ್ತುಗಳಾದವು. ಇವುಗಳು ಧಾರ್ಮಿಕ ವಿಧಿಗಳಲ್ಲಿ ಮತ್ತು ಹಬ್ಬ, ಜಾತ್ರೆ, ಆಸ್ಥಾನ ಹಾಗೂ ಸಭೆಗಳಲ್ಲಿ ಅವಶ್ಯಕವಾದ ಕಲಾವಿಧಾನಗಳಾಗಿದ್ದವು. ಈ ಎರಡೂ ಅವಳಿ ಕಲೆಗಳನ್ನು ಪ್ರೋತ್ಸಾಹಿಸುವಲ್ಲಿ ದೇವಾಲಯಗಳು ಮಹತ್ತರವಾದ ಪಾತ್ರ ವಹಿಸುತ್ತಿದ್ದವು. ದೊಡ್ಡ ಹಾಗೂ ಚಿಕ್ಕ ದೇವಾಲಯಗಳೆಲ್ಲವೂ ದೇವಾಲಯದ ನರ್ತಕಿಯರನ್ನು ಹೊಂದಿದ್ದು ರಾಜರು, ಮಂತ್ರಿಗಳು ಹಾಗೂ ಶ್ರೀಮಂತ ನಾಗರೀಕರು ದಾನ ನೀಡಿದ ಭೂ ದತ್ತಿಗಳಿಂದ ಬಹಳಷ್ಟು ಜನ ಜೀವನ ಸಾಗಿಸುತ್ತಿದ್ದರು.

ಸಂಗೀತ ಕುರಿತಂತೆ ಅಂದು ಸಾಕಷ್ಟು ಗ್ರಂಥಗಳು ರಚನೆಯಾದವು. ಶ್ರೀ ವಿದ್ಯಾರಣ್ಯರು ಸಂಗೀತ ಕಲೆಯಲ್ಲಿ ಘನತೆ ಪಡೆದಿದ್ದರು ಗೋವಿಂದ ದೀಕ್ಷಿತನ ಸಂಗೀತ ಸುಧೆಯಲ್ಲಿ ಶ್ರೀ ವಿದ್ಯಾರಣ್ಯರ ಸಂಗೀತ ಸಾರವನ್ನು ಅನುಸರಿಸಲಾಗಿದೆ. ಮಾತುಂಗ ಮುನಿಯ ರಾಗ ವಿಧಾನವನ್ನೂ ರಾಗ ಲಕ್ಷಣಗಳನ್ನು ಅವಲಂಬಿಸಲಾಗಿದೆಯೆಂದು ವಿದ್ಯಾರಣ್ಯರ ಸಂಗೀತ ಸಾರದ ರೀತಿ ಅನುಸರಿಸಲಾಗಿದೆಯೆಂದು, ಸಂಗೀತ ಸುಧೆಯಲ್ಲಿ ಗೋವಿಂದ ದೀಕ್ಷಿತನು ಬರೆದಿದ್ದಾನೆ. ವಿದ್ಯಾರಣ್ಯರು ಮೇಳ ವಿಧಾನದಲ್ಲಿ ಅಗ್ರಗಣ್ಯರೆಂದು ಹೇಳಬಹುದಾಗಿದೆ. ಸುಧೆಯಲ್ಲಿ ಕಂಡುಬರುವ ಹಾಗೆ ಅವರು ೧೫ನೆಯ ಮೇಳಕರ್ತ ರಾಗಗಳನ್ನು ವಿಂಗಡಿಸಿರುತ್ತಾರೆ. ಆದರೆ ಸಂಗೀತ ಸುಧಾ ಗ್ರಂಥವು ಪೂರ್ತಿಯಾಗಿ ದೊರಕಿಲ್ಲ. ಮೊದಲ ನಾಲ್ಕು ಅಧ್ಯಾಯಗಳು ಮಾತ್ರ ದೊರಕಿವೆ.[೨೪೨] ಹಾಗೆ ರಾಮಾಮಾತ್ಯನು ಪುಂಡರೀಕ ವಿಠಲನ ಸಮಕಾಲೀನ, ಪುಂಡರಿಕ ವಿಠಲನು ಸದ್ರಾಗ ಚಂದ್ರೋದಯ, ರಾಗಮಂಜರಿ, ರಾಗಮಾಲೆ, ನಟನ ನಿರ್ಣಯ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ರಾಮಾಮಾತ್ಯನ ಸ್ವರಮೇಳ ಕಳಾನಿಧಿಯು ಈ ಕಾಲದ ಅತ್ಯಂತ ಪ್ರಮುಖ ಕೃತಿ. ಇವನಿಗೆ ಅಭಿನವ ಭಟ್ಟಾಚಾರ್ಯ ಎಂಬ ಬಿರುದಿತ್ತು.[೨೪೩] ಇದು ಕಲ್ಲಿನಾಥನ ಟೀಕೆಗಿಂತಲೂ ಮತ್ತು ಪುಂಡರೀಕ ವಿಠಲನ ಗ್ರಂಥಗಳಿಗಿಂತಲೂ ಮುಖ್ಯವಾದುದು. ಪುಂಡರೀಕ ವಿಠಲನು ಕಲ್ಲಿನಾಥನ ಸೂತ್ರಗಳನ್ನು ಅನುಸರಿಸಿ ಮೇಳ ಪ್ರಸ್ತಾರವನ್ನು ಚರ್ಚಿಸುತ್ತಾನೆ. ಇವನ ಅಭಿಪ್ರಾಯದಲ್ಲಿ ಅಂದು ಪ್ರಚಾರದಲ್ಲಿದ್ದ ರಾಗಗಳೆಲ್ಲಕ್ಕೂ ೯೦ ಮೇಳಕರ್ತರಿದ್ದಾರೆ ಇನ್ನೂ ಹೆಚ್ಚು ಮಂದಿ ಮೇಳಕರ್ತರಿರಬಹುದೆಂದೂ ನುಡಿದಿದ್ದಾರೆ.

ಒಂದು ಶೋಚನಿಯವಾದ ಅಂಶವು ನಮ್ಮ ಮನಸ್ಸನ್ನು ಬಾದಿಸುತ್ತದೆ. ಹುಟ್ಟು ಕನ್ನಡಿಗನಾದವನಿಗೆ ಕನ್ನಡ ಸಾಮ್ರಾಜ್ಯವಾದ ವಿಜಯನಗರದಲ್ಲಿ ಯವ ರೀತಿಯ ಗೌರವವೂ ಪೋಷಣೆಯು ದೊರೆಯಲಿಲ್ಲ, ಈ ವಿಠಲನು ಅಕ್ಬರನ ದರ್ಬಾರಿನಲ್ಲಿ ತಾನ್ಸೇನನಿಗೂ ಅವನ ಶಿಷ್ಯನಾದ ಗೋಪಾಲನಾಯಕನಿಗೂ ಒಂದು ರೀತಿಯಲ್ಲಿ ಗುರುವಾಗಿದ್ದನೆಂದು ತಿಳಿದುಬರುತ್ತದೆ. ಮುಸಲ್ಮಾನ ಚಕ್ರವರ್ತಿಯಾದ ಅಕ್ಬರನಿಂದ ತಕ್ಕ ಸನ್ಮಾನವೂ ದೊರೆತ್ತಿತ್ತು.[೨೪೪] ಈ ಕಾಲದಲ್ಲಿ ಸಂಗೀತ ಪ್ರಸಿದ್ಧಿಯನ್ನು ಪಡೆದಿತ್ತು ಎಂದು ಸಮಕಾಲಿನ ಸಾಹಿತ್ಯ ಪ್ರವಾಸಿಗರ ವರದಿ ಶಾಸನಗಳಿಂದ ತಿಳಿಯುತ್ತದೆ. ಅಂದು ಅರಸರು ತೋರಿದ ಅತೀವ ಆಸಕ್ತಿ ಹಾಗೂ ಅವರ ಆಶ್ರಯದ ಸಲುವಾಗಿ ಸಂಗೀತ ಶಾಸ್ತ್ರವು ಗಣನೀಯವಾದ ಅಭ್ಯುದಯ ಸಾಧಿಸಿತ್ತು.

ಅಂದು ಸಂಗೀತವು ದೇವಾಲಯ, ಅರಮನೆಯ ಆಸ್ಥಾನ, ರಂಗಮಂಟಪಗಳಿಗೆ ಸೀಮಿತವಾಗಿರಲಿಲ್ಲ, ಯುದ್ಧ ಸಮಯದಲ್ಲಿಯೂ ಸಂಗೀತದಿಂದ ಮನರಂಜನೆ ಪಡೆಯುತ್ತಿದ್ದರು. ಎಂಬುದಕ್ಕೆ ಯುದ್ಧದಲ್ಲಿ ದಿನವೆಲ್ಲಾ ಕಾದಾಡಿ ಬಂದ ಸೈನಿಕರು ಸಂಜೆ ತಮ್ಮ ಆಯಾಸ, ಗಾಯಗಳ ನೋವು, ರಸವನ್ನು ಸೋಸುತ್ತಿದ್ದ ಸಂಗೀತ ಕೇಳಿ ಮರೆಯುತ್ತಿದ್ದರೆಂಬ ಪಂಪನ ಹೇಳಿಕೆ 'ರಸವಮಾಸರ್ವನ್ನಗಂ ತಗೂಲ ಪಾಡುವ ಗಾಣರ ಗೇಯು ಮಳ್ಳರಂ ಪೊಸೆಯಿಸೆ....ಪಾರಿಸುವುವುದಗ್ರ ವೀರಭಟರಾಹವ ಕೇಳಿ ಪರಿಶ್ರಮಂಗಳಂ' ಅರ್ಥಗರ್ಭಿತವಾಗಿದೆ.[೨೪೫]

ಕ್ರಿ.ಶ. ೧೫೨೦ ರಾಯಚೂರು ದಂಡಯಾತ್ರೆಯಲ್ಲಿ ಕೃಷ್ಣದೇವರಾಯ ೨೦೦೦೦ ಸಾವಿರ ನರ್ತಕಿಯರನ್ನು ಕರೆದೊಯ್ದಿದ್ದ ಎಂದು ನ್ಯೂನಿಜ್ ಹೇಳುತ್ತಾನೆ.[೨೪೬] ದು-ಅರ್ತ ಬಾರ್ಬೊಸಾನ ಹೇಳಿಕೆಯಂತೆ ರಾಜನ ಅಶ್ವದಳ ಮತ್ತು ಕಾಲ್ದಗಳಗಳಲ್ಲಿರುವವರೆಲ್ಲ ಸೇರಿ ೧೦ ಲಕ್ಷ ಜನರಿದ್ದಾರೆ. ಇವರಿಗೆಲ್ಲ ಸಂಬಳ ಉಂಟು. ಯುದ್ಧಕ್ಕೆ ಹೋದಾಗ ಸೈನಿಕರು ಸಂಖ್ಯೆಗನುಗುಣವಾಗಿ ಸ್ತ್ರೀಯರನ್ನೂ ಕಳುಹಿಸುತ್ತಾರೆ. ಇವರಿಲ್ಲದೆ ಸೈನಿಕರು ಯುದ್ಧ ಮಾಡಲಾರರೆಂದೂ, ಅವರು ಒಮ್ಮತದಿಂದ ಇರಲಾರರೆಂದೂ ಹೇಳುತ್ತಾರೆ. ಈ ಸ್ತ್ರೀಯರು ಬಹು ಸೊಗಸುಗಾತಿಯರು, ನೃತ್ಯ, ಗೀತ, ಗಾಯನ ದೊಂಬರಾಟಗಳಲ್ಲಿ ನುರಿತ ಚದುರೆಯರು.[೨೪೭] ಹೀಗೆ ಅಂದು ಸಂಗೀತವು ವಿನೋದಾವಳಿಯ ಮಾಧ್ಯಮವಾಗಿ ಬಹು ಪ್ರಸಿದ್ಧಿಯನ್ನು ಪಡೆದಿತ್ತು. ಹಾಗೆ ಅಂದಿನ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಿದರೆ ಇನ್ನೂ ಸಾಕಷ್ಟು ಮಾಹಿತಿ ದೊರೆಯುತ್ತದೆ.

ಸಂಗೀತವು ಕೇವಲ ಮನರಂಜನೆಯ ಮಾಧ್ಯಮವಾಗಿರದೆ ಅಂದಿನ ಸಮಾಜದಲ್ಲಿ ನಡೆಯುತ್ತಿದ್ದ ಭಯಾನಕ ನೋವಿನ ಆಚರಣೆಯ ಸಮಯದಲ್ಲಿ ಸಂಗೀತದ ಮೂಲಕ ಅವನ್ನು ಮರೆಮಾಚುವ ಪ್ರಯತ್ನ ನಡೆಯುತ್ತಿತ್ತು. ಭಯಂಕರ ಪದ್ಧತಿಯಾದ ಸಿಡಿ ಆಡುವಾಗಲೂ ಸಂಗೀತ ಬಳಸಲಾಗುತ್ತಿತ್ತು. ಯಾವ ವ್ಯಕ್ತಿಯು ಇದರ ಹರಕೆ ಹೊರುತ್ತಿದ್ದನೋ ಅವನನ್ನು ಸಿಡಿಗೆ ಕಟ್ಟಿ ಎತ್ತಲಾಗುತ್ತಿತ್ತು. ಆ ಸಿಡಿಗೆ ಕೊಂಡಿಗಳಿರುತ್ತಿದ್ದವು. ಆ ಕೊಂಡಿಗಳನ್ನು ಸಂಬಂಧ ಪಟ್ಟ ಪುರುಷ/ಮಹಿಳೆಯರ ದೇಹಕ್ಕೆ ಸಿಕ್ಕಿಸಲಾಗುತ್ತಿತ್ತು. ಪ್ರತ್ಯೇಕ್ಷ ಸಾಕ್ಷಿಯಾದ ಬಾರ್ಬೋಸಾನ ಹೇಳಿಕೆ ಪ್ರಕಾರ ಜನಗಳ ಕೊಗಾಟ, ಕಿರುಚಾಟ, ಸಂಗೀತ ಸಾಧನಗಳ ಶಬ್ದ, ತುಫಾಕಿ ಮದ್ದುಗಳ ಸದ್ದಿನಿಂದ ಹಾಗೂ ಸಂತೋಷ ಅಬ್ಬರದಿಂದ ಸಿಡಿ ಎತ್ತುತ್ತಿದ್ದರು.[೨೪೮]

ನ್ಯೂನಿಜ್‌ನು ಸತಿ ಆಚರಿಸುವಾಗ ಸಂಗೀತ ಬಳಸುತ್ತಿದ್ದ ಬಗ್ಗೆ ಒಂದು ವಿವರಣೆ ನೀಡುತ್ತಾನೆ. ಸತಿಯಾಗಲು ಹೋರಟ ಸ್ತ್ರೀಯು ಹಲವಾರು ರೀತಿಯ ಸಂಗೀತ ವಾದ್ಯಗಳೊಂದಿಗೆ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಳು. ಅವಳು ಬಹಳ ಸಂತೋಷವಾಗಿರುತ್ತಿದ್ದಳು. ಒಬ್ಬನು ಒಂದು ಸಣ್ಣ ಡೋಲನ್ನು ಬಾರಿಸುತ್ತಾ ಹೋಗುತ್ತಾನೆ. ಆನಂತರ ಅವಳಿಗೆ ಒಂದು ಹಾಡು ಹಾಡುತ್ತಾನೆ. ಅದರಂತೆ ಅವಳು ತನ್ನ ಗಂಡನನ್ನು ಸಂಧಿಸಲು ಹೋಗುತ್ತಿರುವಳೆಂದು ಹೇಳುತ್ತಾನೆ. ಇದಕ್ಕೆ ಪ್ರತಿಯಾಗಿ ಅವಳೂ ಹಾಡಿನ ಮೂಲಕವಾಗಿ ಸಮ್ಮತಿಯ ಉತ್ತರ

ನೀಡುತ್ತಾಳೆ. ನಂತರ ಕ್ರಿ.ಶ. ೧೫೬೭ರಲ್ಲಿ ಸೀಸರ್ ಫ್ರೆಡರಿಕ್‌ನು ವಿಜಯನಗರವನ್ನು ಭೇಟಿ ಮಾಡಿದಾಗ ಸತಿ ಪದ್ಧತಿಯಲ್ಲಿ ನೃತ್ಯ ಹಾಗೂ ಸಂಗೀತವೆರಡೂ ಇರುವುದು ನೋಡಿದನು.[೨೪೯]

ಅಂದರೆ ಸಂಗೀತವು ಕೇವಲ ಮನರಂಜನೆಯನ್ನು ಪಡೆಯುವ ಮಾಧ್ಯಮವಾಗದೆ. ದುಃಖದ ಸಮಯದಲ್ಲೂ ಮನಸ್ಸನ್ನು ಉಲ್ಲಾಸಗೊಳಿಸಲು ಬಳಸುತ್ತಿದ್ದರು ಎನ್ನುವುದು ವಿಧಿತವಾಗುತ್ತದೆ. ನಿಕೋಲೋ-ದೆ-ಕೊಂತಿ (೧೪೨೦-೨೧) ಸಂಗೀತವು ಹೇಗೆ ಸಾಮಾಜಿಕ ಕಾರ್ಯಗಳೊಂದಿಗೆ ಸಂಬಂಧವನ್ನು ಹೊಂದಿತ್ತು ಎಂಬುದನ್ನು ದಾಖಲಿಸುತ್ತಾನೆ. ಅವನ ಪ್ರಕಾರ ಅವರು ಮದುವೆಗಳಲ್ಲಿ ಹಾಡುವುದು, ಭೋಜನ ಸವಿಯುವುದು, ಕಹಳೆ ಮತ್ತು ಕೊಳಲನ್ನು ನಾದಗಳೊಂದಿಗೆ ಊದುವುದು, ಇತ್ತು ಅವರು ಹಾಡಲು ಹಾಗೂ ನುಡಿಸಲು ಉಪಯೋಗಿಸುತ್ತಿದ್ದ ಎಲ್ಲಾ ರೀತಿಯ ವಾದ್ಯಗಳು ನಮ್ಮ ರೀತಿಯಾವಾಗಿವೆ.[೨೫೦] ಯುದ್ಧದಲ್ಲಿ ಸೋತಾಗ ದಂಡ ರೂಪದಲ್ಲಿ ಸಂಗೀತ, ನರ್ತಕಿಯರನ್ನು ತೆಗೆದುಕೊಳ್ಳುತ್ತಿದ್ದರು. ಯಾವನು (ರಾಯ) ತನ್ನ ಕಪ್ಪವನ್ನು ಐದು ವರ್ಷ ತಡೆಹಿಡಿದಿದ್ದನೋ ಮತ್ತು ಬಾಕಿ ತೀರಿಸಲು ನಿರಾಕರಿಸುತ್ತಿದನೋ (ಅವನ ವಿರುದ್ಧ) ಅವರ ನಾಡನ್ನು ಯಾವ ಬಗೆಯಲ್ಲಿ ನಾಶ ಪಡಿಸಿದರೆಂದರೆ ರಾಯನು ಅಲ್ಪಕಾಲದಲ್ಲಿಯೇ ಇಪ್ಪತ್ತು ಆನೆಗಳು, ಭಾರಿ ಮೊತ್ತದ ಧನ, ಸಂಗೀತ ಮತ್ತು ನೃತ್ಯಗಳಲ್ಲಿ ಪಳಗಿದ ಇನ್ನೂರು ಸ್ತ್ರೀ ಗುಲಾಮರನ್ನಲ್ಲದೆ. ಮಹಮ್ಮದ್‌ಖಾನನಿಗೆ ಒಂದು ಬೆಲೆಯುಳ್ಳ ಕಾಣಿಕೆ ನೀಡುವ ಮೂಲಕ ಶಾಂತಿ ಪಡೆಯಲು ಸಂತೋಷಿಸಿದನು.[೨೫೧]

ದೇವಾಲಯಗಳಲ್ಲಿ ಸಂಗೀತ

ವಿಜಯನಗರ ಕಾಲದಲ್ಲಿ ಬಹುಮುಖ್ಯವಾಗಿ ಸಂಗೀತಕ್ಕೆ ಕೊಡುಗೆ ನೀಡಿದ ಸ್ಥಳವೆಂದರೆ ದೇವಾಲಯಗಳು. ಅಂದು ದೇವಾಲಯವು ಸಂಗೀತ ಮತ್ತು ನೃತ್ಯ ಕಲಿಯುವ ಪಾಠ ಶಾಲೆಗಳಂತಿದ್ದವು. ದೇವಾಲಯದ ಭಿತ್ತಿ, ಕಂಬಗಳ ಮೇಲಿನ ಶಿಲ್ಪ, ಶಾಸನಗಳು ಪ್ರಮುಖ ಸಾಕ್ಷಿಯಾಗಿ ನಿಲ್ಲುತ್ತವೆ. ಅಂಗಭೊಗ, ದೇವರ ಅಂಗಕ್ಕೆ ಸಲ್ಲುವ ಧೂಪ, ದೀಪ, ನೈವೇದ್ಯ, ಗಂಧ ಇತ್ಯಾದಿಗಳು ಅಂಗಭೋಗ. ರಂಗಭೋಗ, ದೇವಾಲಯದ ಮುಂದೆ ರಂಗದಲ್ಲಿ ನಡೆಯುವ ನರ್ತನ, ಗಾಯನ, ವಾದನಗಳೂ ರಂಗಭೋಗ. ವಿಜಯನಗರದಲ್ಲಿ ಅಲ್ಲದೆ ಅವರ ಪೂರ್ವದಲ್ಲಿಯೂ ಈ ವ್ಯವಸ್ಥೆ ಇತ್ತು. ದೇವದಾಸಿಯರು ಅನೇಕ ದೇವಸ್ಥಾನಗಳ ಭಾಗವಾಗಿದ್ದರು. ಇದರ ಕುರಿತು ಹಿಂದೆ ಚರ್ಚಿಸಲಾಗಿದೆ. ಇವರು ನೃತ್ಯ, ಗೀತ, ವಾದ್ಯಗಳಲ್ಲಿ ನಿಷ್ಣಾತರಾಗಿರುತ್ತಿದ್ದರು. ಇವರಿಗೆ ದಾನ ಕೊಟ್ಟ ಉಲ್ಲೇಖವೂ ದೊರೆಯುತ್ತದೆ. ಕ್ರಿ.ಶ. ೮೦೨ರ ಒಂದು ತಾಮ್ರಪಟದಲ್ಲಿ ಜಿನಾಲಯವೊಂದರ ವಾರವಿಲಾಸಿನಿಯವರ ನೃತ್ಯ, ಗೀತ, ವಾದ್ಯಗಳಿಗೆ ದತ್ತಿ ಕೊಡಲಾಗಿದೆ.[೨೫೨] ಇವರಲ್ಲದೆ ಕೆಲವು ಕಡೆ ಹರ ಬಾರಿಸುವವರಿಗೆ ಪ್ರತ್ಯೇಕ ದತ್ತಿ ಕೊಟ್ಟಿರುವುದನ್ನು ಗುರುತಿಸಬಹುದು.

ವಿದ್ಯಾದಾನಕ್ಕೆ ಮತ್ತರು ಪನ್ನೆರಡು ಪರೆಕಾರರೂ (ಮತ್ತರು)
ಹತ್ತು ಗಾಂಧರ್ವಿಗಗೆ
ಗಾಂಧಾರ್ವಿ-ಗರು ಎಂದರೆ -ಗುರು[೨೫೩]

ಹೀಗೆ ವಿಜಯನಗರ ಕಾಲದಲ್ಲಿ ದೇವಾಲಯಗಳು ಸಂಗೀತದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿದ್ದವು. ಅಂದು ದೇವಾಲಯಗಳಲ್ಲಿ ಸಂಗೀತವನ್ನು ಸಾಮಾನ್ಯರಾದಿಯಾಗಿ ಎಲ್ಲಾ ವರ್ಗದವರು ಕೇಳುತ್ತಿದ್ದರು. ಹಂಪಿಯ ವಿಜಯವಿಠಲ ದೇವಾಲಯದಲ್ಲಿ ಕಲ್ಲಿನ ಕಂಬಗಳಲ್ಲಿ ನಾದ ಹೊರಡುತ್ತದೆ. ಈ ನಾದದಿಂದ ಅಂದು ಅರಸಿಯರು ನೃತ್ಯ ಮಾಡುತ್ತಿದ್ದರು. ನೃತ್ಯ ಮತ್ತು ಸಂಗೀತಗಳಿಗಾಗಿಯೇ ನೃತ್ಯಮಂಟಪ, ರಂಗ ಮಂಟಪಗಳು ರಚನೆಗೊಂಡವು. ಅಂದಿನ ಅರಸರು ಸಂಗೀತವನ್ನು ಅತ್ಯುನ್ನತ ಮಟ್ಟಕ್ಕೆ ಕೊಂಡಯ್ದುರು.

೪.೪ ವಾದ್ಯಗಳು

ಸಂಗೀತ ಮತ್ತು ನೃತ್ಯಕ್ಕೆ ಬೇಕಿರುವುದು ಲಯಬದ್ಧವಾದ ರಾಗ ಮತ್ತು ತಾಳ ಇವುಗಳನ್ನು ಉತ್ಪಾದಿಸುವ ಮಾಧ್ಯಮವೇ ವಾದ್ಯ. ವಾದ್ಯ ಸಂಗೀತಕ್ಕೆ ಭಾರತದಲ್ಲಿ ಆದಿ ಕಾಲದಿಂದಲೂ ಪ್ರೋತ್ಸಾಹ ದೊರೆತಿದೆ. ನಮ್ಮ ದೇಶದಲ್ಲಿ ಸುಮಾರು ಐದುನೂರು ಸಂಗೀತ ವಾದ್ಯಗಳಿವೆ ಎಂದು ತಿಳಿದುಬಂದಿದೆ.[೨೫೪] ನಾವು ವಾದ್ಯಗಳ ಉಗಮ ಮತ್ತು ವಿಕಾಸದ ಕಡೆ ಗಮನ ಕೊಡದೆ ಇಲ್ಲಿ ಮುಖ್ಯವಾಗಿ ವಾದ್ಯಗಳ ಪ್ರಾಚೀನತೆ ಹಾಗೂ ವಿಜಯನಗರ ಕಾಲದಲ್ಲಿ ಬಳಸುತ್ತಿದ್ದ ವಾದ್ಯಗಳನ್ನಷ್ಟೆ ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಾದ್ಯಗಳ ಅದ್ಯಯನಕ್ಕೆ ಮುಖ್ಯವಾಗಿ ಸಾಹಿತ್ಯ ಕೃತಿ, ಶಾಸನ, ಭಿತ್ತಿಚಿತ್ರ, ಶಿಲ್ಪ, ಪ್ರವಾಸಿಗರ ವರದಿಗಳು ಗಮನಾರ್ಹವಾಗಿವೆ. ಭಾರತದ ಮಟ್ಟಿಗೆ ಹೇಳುವುದಾದರೆ ಕ್ರಿಪೂ ಮೂರನೆಯ ಶತಮಾನದಷ್ಟು ಹಿಂದೆಯೇ ಭಾರತೀಯರಿಗೆ ಸಂಗೀತ ವಾದ್ಯಗಳ ಪರಿಚಯವಿತ್ತು. ಆರ್ಯರು ಭಾರತಕ್ಕೆ ಬರುವ ಮೊದಲೇ ಭಾರತದಲ್ಲಿ ಕೊಳಲು ಇತ್ತೆಂಬುದನ್ನು ಪುರಾತತ್ವ ಶೋಧಗಳೂ ಸಾಬಿತು ಪಡಿಸಿವೆ. ಭಾರತೀಯರು ಬಹು ಹಿಂದೆಯೇ ಈಜಿಪ್ಟ್ ಮತ್ತು ಮೆಸಪಟೋಮಿಯಾ ಜೊತೆ ವ್ಯಾಪಾರ ಸಂಬಂಧ ಇಟ್ಟುಕೊಂಡಿದ್ದರು ಎಂಬುದನ್ನು ಗಮನಿಸಿದಾಗ ವಾದ್ಯಗಳ ಮೇಲೆ ಆಗಿರುವ ಪರಸ್ಪರ ಪ್ರಭಾವದ ಅರಿವು ಆಗುತ್ತದೆ. ಗ್ರೀಕರ ಪ್ರಭಾವದಿಂದ ಕ್ರಿ.ಶ. ೨ನೆಯ ಶತಮಾನದ ಹೊತ್ತಿಗೆ ಸ್ತೂಪ ಮೊದಲಾದೆಡೆ ಉಬ್ಬು ಶಿಲ್ಪಗಳಲ್ಲಿ ಆ ಕಾಲದ ನೃತ್ಯ ವಾದ್ಯ, ವಾದಕರನ್ನು ಚಿತ್ರಿಸುವ ಹವ್ಯಾಸ ಭಾರತದಲ್ಲೂ ರೂಢಿಗೆ ಬಂತು. ಮುಂದೆ ಭಾರತದ ವಿವಿದೆಡೆ ಬೇರೆ ಬೇರೆ ಪ್ರಸ್ಥಾನಗಳಲ್ಲಿ ಹುಟ್ಟಿಕೊಂಡ ಗುಡಿ ಗೋಪುರ, ಶಿಲ್ಪ, ಕಲಾವಿಧರ ಚಿತ್ರಗಳಲ್ಲಿ ಸಾಂದರ್ಭಿಕವಾಗಿ ವಾದ್ಯಗಳನ್ನು ದಾಖಲಿಸುವ ಪ್ರವೃತ್ತಿ ವಿಶೇಷವಾಗಿ ನಡೆದಿರುವುದಕ್ಕೆ ವಿಪುಲ ಸಾಕ್ಷ್ಯಗಳಿವೆ.

ಅಧ್ಯಯನಕಾರರು ಊಹಿಸಿರುವಂತೆ ಅಂದಿನ ಮಾನವ ತಾನು ಬೇಟೆಯಾಡಿದ ಪ್ರಾಣಿಗಳ ಮಾಂಸ ತಿಂದು ತೊಗಲನ್ನು ಹೊದ್ದ ಹಾಗೆ ಹದ ಮಾಡಿದ, ಚರ್ಮದಿಂದ ನಾದ ಹೊರಡಿಸಬಹುದೆಂಬುದು ಕಂಡುಕೊಂಡ. ಚರ್ಮವಾದ್ಯಗಳ ಹುಟ್ಟಿಗೆ ಇದೆ ಮೊದಲಾಯಿತು. ಬೇಟೆಯಾಡಲು ಬಳಸುತ್ತಿದ್ದ ಬಿಲ್ಲು ನಾರು, ಪ್ರಾಣಿಯ ಕರುಳುಗಳನ್ನು ಕಟ್ಟಿ ಎಳೆದು ಒಟ್ಟಾಗಿ ಉಂಟಾಗುತ್ತಿದ್ದ ನಾದ ಮುಂದೆ ತಂತಿ ವಾದ್ಯಗಳಿಗೆ ಪ್ರಚೋದನೆ ನೀಡಿತು. ಇನ್ನಷ್ಟು ಬಗೆಯ ವಾದ್ಯಗಳಿಗೆ ನಿಸರ್ಗವೇ ಸ್ಫೂರ್ತಿಯಾಯಿತು. ಆದಿ ಮಾನವನಿಗೆ ದುಷ್ಟ ಶಕ್ತಿಗಳ ಬಗ್ಗೆ ಭಯವಿತ್ತು. ವಿಚಿತ್ರ ಹಾಗೂ ಕರ್ಕಶವಾದ ಶಬ್ದಗಳಿಂದ ಆ ಪೀಡೆಗಳನ್ನು ದೂರ ಓಡಿಸಬಹುದೆಂಬ

ನಂಬಿಕೆಯೂ ಅವನಿಗಿತ್ತು. ಆಗ ಅವುಗಳನ್ನು ಓಡಿಸಲು ಅಗತ್ಯವಾದ ಶಬ್ದ ಮಾಡಲು ಬಳಸುತ್ತಿದ್ದ ಸಾಧನಗಳೆ ಮುಂದೆ ವಾದ್ಯಗಳಾಗಿರಬಹುದು.[೨೫೫] ವಾದ್ಯಗಳಲ್ಲಿ ಅನೇಕ ಬಗೆಯಿವೆ ಅವುಗಳನ್ನು ನಾಲ್ಕು ವಿಧವಾಗಿ ತತ, ಸುಷಿರ, ಅವನದ್ಧ, ಘನ ಎಂದು ವರ್ಗೀಕರಿಸಬಹುದು.

ಗೀತ ಚತುರ್ವಿಧಾತ್ ವಾದ್ಯತ್ ಚಾಯ ತೇ !

ಚೋಪರಜ್ಯತೇ, ತತ್ತಂ, ಸುಷಿರಂಚ ಅವನದ್ದಂ ಘನಮಿತಿ ಸ್ಮತಃ!![೨೫೬]

ತತ, ತಂತಿಗಳಿಂದ ಕೂಡಿರುವ ಅಥವಾ ತಂತಿಗಳ ಕಂಪನದಿಂದ ಸ್ವರಗಳು ಹುಟ್ಟುವ ವಾದ್ಯಗಳು, ಉದಾ: ಪಿಟೀಲು, ವೀಣೆ, ಸಾರಂಗಿ ಇತ್ಯಾದಿ

ಸುಷಿರ, ರಂಧ್ರಗಳ ಮೂಲಕ ಗಾಳಿಯು ನುಗ್ಗಿ ಸ್ವರಗಳು ಹುಟ್ಟುವ ವಾದ್ಯಗಳು

ಉದಾ: ಪೀಪಿ, ಕಹಳ, ಪುಂಗಿ,

ಅನದ್ಧ ಅಥವಾ ಅವನದ್ದ ವಾದ್ಯಗಳು, ಚರ್ಮದಿಂದ ಮುಚ್ಚಲ್ಪಟ್ಟಿರುವ ಮುಖವುಳ್ಳ ವಾದ್ಯ, ಇವುಗಳಲ್ಲಿ ಉದಾ: ನಗಾರಿ, ಭೇರಿ, ಡಮರು, ತಮಟ, ತಬಲ, ಇತ್ಯಾದಿ, ಘನವಾದ್ಯ: ಲೊಹಗಳಿಂದ ಮಾಡಿದ ವಾದ್ಯ, ಕೈದಾಳ, ಚಕ್ರ, ಇತ್ಯಾದಿ

೧೩ನೆಯ ಶತಮಾನದಲ್ಲಿ ಸಂಗೀತ ರತ್ನಾಕರ ಗ್ರಂಥದಲ್ಲಿ ವಾದ್ಯಗಳ ವರ್ಗೀಕರಣ ಮತ್ತು ವೈವಿದ್ಯತೆಗಳನ್ನು ಹೇಳಿರುವ ಪ್ರಕರಣದಲ್ಲಿ ಹೀಗೆ ಇದೆ.

ತತಂ ಯೇನಾವನದ್ಧಂ ಚ ಭವನಂ ನಿಜಮಾಯಯೋ!

ಆನಂದಂ ಘನಮದ್ಯೇಮಿ ತಂ ಬ್ರಹ್ಮ ಸುಷಿರೇ ಹೆರಮ್![೨೫೭]

ತತಂ ಅವನದ್ಧಂ, ಆನಂದ ಘನಂ, ಬ್ರಹ್ಮಸುಷಿರ ಎಂಬ ಪದಗಳು ವಿಸ್ತಾರ ಮಾಯೆಯಿಂದ ಮುಚ್ಚಲ್ಪಟ್ಟಿವೆ. ಆನಂದ ಸ್ವರೂಪವಾಗಿರುವುದು. ಬ್ರಹ್ಮ ರಂಧ್ರ ಎಂಬ ಅರ್ಥದಿಂದ ಶಿವಂ ಎಂಬ ಈಶ್ವರ ಸ್ಮರಣಾಪರವಾಗಿಯೂ, ಅದರಂತೆಯೇ ವೀಣಾದಿ ತಂತಿ ವಾದ್ಯಗಳೂ ತತಂ ಎಂದು, ಮುರಜಾದಿ ವಾದ್ಯಗಳು ಮುಚ್ಚಳಿಕೆಯಿಂದ ಕೂಡಿ ಅವನದ್ದ ಎಂದು, ಘನ ಎಂಬ ಜಾತಿಗೆ ಸೇರಿದ ವಾದ್ಯ ವಿಶೇಷಗಳಾದ ತಾಳಗಳಿಗೂ, ಸುಷಿರ ಎಂದರೆ ರಂಧ್ರ ಲಕ್ಷಣವುಳ್ಳ ಕೋಳಲು ಮೊದಲಾದ ವಾದ್ಯಗಳಿಗೂ ಅನ್ವಯಿಸುವ ಅಲಂಕಾರರ್ಥದಲ್ಲಿ ಪ್ರಯೋಗಿಸಲಾಗಿದೆ.

ಈ ವಾದ್ಯಗಳ ಉಲ್ಲೇಖಗಳು ಸಾಹಿತ್ಯ ಕೃತಿಗಳಲ್ಲಿ ಕಂಡುಬಂದಿವೆ.

ನೌಬತ್ತು ನಗಾರಿ ಬೇರಿ ವಾದ್ಯ

ತಾಳ ಮದ್ದಳೆ ನಾನಾ ಪರಿವಾದ್ಯ

ದುಂದುಂಭಿ ನೌಬತ್ತು ನಾ ಮುಂದೆ ಹೊಯ್ದಿದೆ.[೨೫೮]

ನಗಾರಿ ನೌಬತ್ತು, ಬೇರಿ, ಮದ್ದಳೆ ದುಂದುಭಿ ಮುಂತಾದವು ಚರ್ಮವಾದ್ಯಗಳು ಇವು ಬಡಿಯುವ ವಾದ್ಯಗಳೆಂಬುದು ಈ ಉಲ್ಲೇಖದಿಂದ ಸ್ಪಷ್ಟವಿದೆ. ಇದನ್ನು ಒಂಬತ್ತು ಜನ ಸೇರಿ ಬಾರಿಸುವದು ಎಂದರ್ಥವಿದೆ. ನಗಾರಿ-ನವಪತ್ತು The Nagara and eight other Instruments ಎಂದು ಕಿಟಲ್ ಕೋಶದಲ್ಲಿ ಹೇಳಲಾಗಿದೆ. ನೌಬತ್ತು ಮತ್ತು ನಗಾರಿಗಳು ಜೋಡಿ ವಾದ್ಯಗಳಾಗಿವೆ. ನಗಾರಿಯನ್ನು ಭೇರಿ ದುಂದುಭಿಗಳೆಂದು ಕರೆಯುವುದುಂಟು.

ಇದನ್ನು ಸಂತೋಷದ ವೇಳೆಯಲ್ಲಿ ನುಡಿಸುತ್ತಿದ್ದುದು ರೂಢಿ ಜಾತ್ರೆ, ರಾಜರ ಆಗಮನ ಸಂದರ್ಭ ವಿಜಯೋತ್ಸವಗಳ ಸಮಯದಲ್ಲಿ ಬಾರಿಸುವುದು ಸಾಮಾನ್ಯವಾಗಿತ್ತು.

ಘನ ಸುಷಿರ ಮಾನದ್ದ ತತವೆಂಬ ವಾದ್ಯ ನಿ
ಸ್ವನದೂಳು ಗೋಪಾಂಗ ಪ್ರತ್ಯಂಗ ಭ್ರಮರಿ ಭಾ
ವನೆ ಮಂಡಲುಗಳಿಂ ಶುದ್ಧ ದೇಶಿಗಳೂಳ್ಳಡಿಸಿ[೨೫೯]
ಸಾಧು ವಿಪ್ರ ಜನರೆಲ್ಲ
ವೇದ ಘೋಷಣೆಯ ಮಾಡೆ
ನಾದವುಳ್ಳ ನಗಾರಿಯು
ಭೇದಿಸಲು ನಾಲ್ಕು ದಿಕ್ಕು[೨೬೦]

ನಗಾರಿಯಿಂದ ಉಂಟಾಗುವ ಶಬ್ದ ಬಹಳ ದೂರದವರೆಗೆ ಕೇಳಿಸುತ್ತಿತ್ತು. ಇದರಿಂದಾಗಿ ರಾಜನು ಪ್ರಾಂತ್ಯಕ್ಕೆ ಆಗಮಿಸಿದಾಗ ಜನರಿಗೆ ಮುಟ್ಟಿಸಲು ಈ ವಾದ್ಯವನ್ನು ಬಾರಿಸುವುದು ರೂಢಿಯಲ್ಲಿತ್ತು. ಹಾಗೆಯೇ ಯುದ್ಧ ಗೆದ್ದಾಗ ಉತ್ಸವಗಳಂಥ ಸಮಯದಲ್ಲಿ ಬಳಸುತ್ತಿದ್ದರು.

ಹೊಡೆವ ತಮ್ಮಟೆ ಭೇರಿ (ಡಮರುಗ, ಗಿಡಿಬಿಡಿ, ಡಾಡೆಡಕ್ಕೆ)
ನುಡಿವ ಶಂಖ, ಮೃದಂಗ, ಘನಿಸ್ಯಾಳ ಮೊದಲಾದ
ಬಡಿವ ನಾನಾ ವಾದ್ಯವಿದೆ.[೨೬೧]

ತಮ್ಮಟೆ, ಗಿಡಿಬಡಿ, ಡಾಡೆ, ಡಕ್ಕೆ, ಡಮರುಗ ಮುಂತಾದವು ಚರ್ಮದಿಂದ ಮಾಡಿದ ವಾದ್ಯಗಳು, ಡಕ್ಕೆ ಮತ್ತು ಡಮರುಗ ರಚನೆಯಲ್ಲಿ ಒಂದೇ ರೀತಿಯವು. ಇವನ್ನು ನುಡಿಸುವಾಗ ಡಮಡಮ ಎಂಬ ಧ್ವನಿ ಉಂಟು ಮಾಡುತ್ತದೆ. ತಮ್ಮಟೆ ವೃತ್ತಾಕಾರದ ಚರ್ಮವಾದ್ಯ ಈ ವಾದ್ಯವನ್ನು ಪ್ರಸ್ತುತ ಜನಪದ ಕಲೆಗಳಲ್ಲಿ ಬಳಸುತ್ತಾರೆ. ಎಡಗೈಯಲ್ಲಿ ತಮ್ಮಟೆ ಮತ್ತು ಸಣ್ಣ ಕೋಲು ಹಿಡಿದು ಬಲಗೈಲಿ ದೊಡ್ಡ ಕೋಲಿನಿಂದ ಬಾರಿಸುವರು. ಗ್ರಾಮ ದೇವತೆಗಳ ಉತ್ಸವ ಕಾಲದಲ್ಲಿ, ವಿಶೇಷ ಸಮಾಚಾರವನ್ನು ಸಾರಬೇಕಾದ ಸಂದರ್ಭದಲ್ಲಿ ಈ ವಾದ್ಯವನ್ನು ಬಾರಿಸುವರು. ಗಿಡಿಬಿಡಿ ಒಂದು ಜನಪದ ಚರ್ಮವಾದ್ಯ ಇದು ನಗಾರಿಯಂತೆ ಇರುವ ಬಹಳ ಸಣ್ಣ ರೂಪದ ವಾದ್ಯ ಇದನ್ನು ಹೊಟ್ಟೆಗೆ ಕಟ್ಟಿಕೊಂಡು ಎರಡೂ ಕೈಗಳಿಂದ ಕೊಲು ಬಳಸಿ ಬಾರಿಸುವರು. ಇದನ್ನು ಕೆಲವು ಕಡೆ 'ದುಡಿ' ಎಂದು ಕರೆಯುವರು. ಮದ್ದಳೆ ಇದೂ ಕೂಡ ಚರ್ಮವಾದ್ಯ ಇದು ಈಗಿನ ಮೃದಂಗದಂತೆ, ಇದನ್ನು ದೇವಸ್ಥಾನಗಳಲ್ಲಿ ನೃತ್ಯ, ಯಕ್ಷಗಾನ ಮುಂತಾದ ಕಲೆಗಳಲ್ಲಿ ಬಾರಿಸುವರು.

ಶಾಸನ ಶಿಲ್ಪದಲ್ಲಿ ವಾದ್ಯ

ಶಾಸನ ಶಿಲ್ಪಗಳಲ್ಲಿ ವಾದ್ಯಗಳ ಚಿತ್ರಣವು ಹೆಚ್ಚು ದೊರೆಯುವುದಿಲ್ಲ ಆದರೆ ವೀರನು ಸ್ವರ್ಗಕ್ಕೆ ಹೋಗುವಾಗ ಅಪ್ಸರೆಯರು ಸಂತೋಷದಿಂದ ವಾದ್ಯಗಳನ್ನು ಬಾರಿಸುತ್ತಿರುವ ಚಿತ್ರಣ ಹಲವು ವೀರಗಲ್ಲುಗಳಲ್ಲಿ ಕಂಡುಬರುತ್ತದೆ. ಶಾಸನ ಪಾಠದಲ್ಲಿಯೂ ವಾದ್ಯಗಳ ಬಗ್ಗೆ ಉಲ್ಲೇಖ ದೊರೆಯುತ್ತದೆ. ಸುರದುಂಧುಬಿ ಮೊಳಗುತ್ತಿರಲು[೨೬೨] ಅಪ್ಸರೆಯರು ವೀರನನ್ನು ದೇವಲೋಕಕ್ಕೆ ಕೊಂಡೊಯ್ದರು ಎಂಬ ವಿಷಯ ಹಲವು ಶಾಸನಗಳಲ್ಲಿ ದೊರೆಯುತ್ತದೆ. ನಗರ ತಾಲ್ಲೂಕಿನ

ಒಂದು ಶಾಸನದಲ್ಲಿ ಅಪ್ಸರೆಯರು ವೀರನನ್ನು ಪಂಚ ಮಹಾಶಬ್ದದಿಂದ ಕರೆದೊಯ್ದರು ಎಂಬ ಪ್ರಸ್ತಾಪವಿದೆ.[೨೬೩] ಚಾಳುಕ್ಯ ಭುವನೈಕ್ಯ ಮಲ್ಲನು ಆಳುತ್ತಿದ್ದಾಗ ಅವನ ಪತಿಯ (ಹೆಸರು ದೊರೆತಿಲ್ಲ ಎಡತೊರೆ ಎರಡು ಸಾವಿರದ ಗ್ರಾಮವೊಂದರಲ್ಲಿ ಸ್ವಯಂಭೂ ಮೂಲಸ್ಥಾನ ದೇವಾಲಯಕ್ಕೆ ಜೀರ್ಣೋದ್ಧಾರ ತಪೋಧನ ವಾದ್ಯ ಮುಂತಾದವುಗಳಿಗೆ, ದಾನ ನೀಡಿದ ವಿವರವಿದೆ.)[೨೬೪] ವೀರಗಲ್ಲು ಶಿಲ್ಪಗಳಲ್ಲಿಯೂ ವಾದ್ಯಗಳು ಕಂಡುಬಂದಿವೆ. ಏಕತಾರಿ ಇದನ್ನು ಏಕನಾದ ಎಂದು ಕರೆಯುತ್ತಾರೆ. ಚಪ್ಪಟೆಯಾದ ಸೋರೆಬುರುಡೆಗೆ ಸುಮಾರು ಮೂರು ಅಡಿ ಉದ್ದದ ಬಿದಿರನ್ನು ಸಿಕ್ಕಿಸಿ ಬುರುಡೆಯ ನೆತ್ತಿಗೂ, ಕೊನೆಗೂ ಒಂದು ತಂತಿಯನ್ನು ಬಿಗಿಯಲಾಗಿರುತ್ತದೆ. ತತ್ವದ ಗಾಯಕರು ಇದನ್ನು ಕಡ್ಡಾಯವಾಗಿ ಬಳಸುತ್ತಾರೆ. ಏಕತಾರಿಯನ್ನು ನುಡಿಸುತ್ತಿರುವ ಚಿತ್ರಣ ಕಾಯ್ಕಿಣಿಯ ಕೆಲವು ವೀರಗಲ್ಲುಗಳಲ್ಲಿ ಹಾಗೂ ಹಳದಿಪುರ (ಹೊನ್ನಾವರ ತಾ) ಕೋಳಿಸಾಲು (ಶಿವಮೊಗ್ಗ ಜಿ) ವೀರಗಲ್ಲುಗಳಲ್ಲಿ ಕಂಡುಬಂದಿದೆ. ಈ ವಾದ್ಯವನ್ನು ಅದರ ಬುರುಡೆಯ ಭುಜದ ಮೇಲೆ ಕುಳಿತಿರುವಂತೆ ಇಟ್ಟು ಕೊಂಡು ನುಡಿಸುವರು. ಹಾವಿನ ಹೆಡೆಯಂತೆ ಬಾಗಿರುವ ತುದಿಯುಳ್ಳ ಏಕತಾರಿಯನ್ನು ಕುಪ್ಪಟೂರಿನ (ಸೊರಬ ತಾ ಶಿವಮೊಗ್ಗ ಜಿ) ವೀರಗಲ್ಲುಗಳಲ್ಲಿ ನೋಡಬಹುದು.[೨೬೫]

ವಾದ್ಯಗಳ ತಯಾರಿಕಾ ಕ್ರಮ

ಸಂಗೀತ ಮತ್ತು ನೃತ್ಯ ಇದೆ ಎಂದರೆ ಅಲ್ಲಿ ವಾದ್ಯಗಳಿರಬೇಕು. ಅವುಗಳ ಇತಿಹಾಸದಷ್ಟೇ ವಾದ್ಯಗಳದ್ದು ಅಷ್ಟೇ ದೀರ್ಘವಾದುದು. ವೇದಗಳು ಕೊಳಲು, ವೀಣಾ ಮುಂತಾದ ಸಂಗೀತ ವಾದ್ಯಗಳನ್ನು ಹೆಸರಿಸುತ್ತದೆ. ಹರಪ್ಪಾ –ಮಹೆಂಜೊದಾರೋಗಳಲ್ಲಿ ದೊರಕಿರುವ ಅವಶೇಷಗಳಲ್ಲಿ ಕೊಳಲು, ತಂತೀವಾದ್ಯ ಪ್ರಭೇದಗಳೂ ಸೇರಿವೆ.[೨೬೬] ಕಾವ್ಯಗಳಲ್ಲಿ ಹಲವಾರು ಸಂಗೀತ ವಾದ್ಯ ಪ್ರಭೇದ ಉಲ್ಲೇಖಗಳೀವೆ. ಪ್ರಾಚೀನ ಭಾರತದಲ್ಲಿ ವಾದ್ಯ ಅವುಗಳ ರಚನಾ ಸಾಮಗ್ರಿಗಳಿಗನು ಗುಣವಾಗಿ, ಎಂದರೆ ಆ ವಾದ್ಯ ತಯಾರಿಸಲು ಉಪಯೋಗಿಸುವ ಸಾಮಗ್ರಿಯ ಆಧಾರದ ಮೇಲೆ ಅಥವಾ ಅವುಗಳಿಂದ ನಾದ ಹೊರಡಿಸುವ ರೀತಿಗನುಗುಣವಾಗಿ ಹಲವಾರು ಗುಂಪುಗಳಾಗಿ ವರ್ಗೀಕರಿಸುತ್ತಿದ್ದರು. ತತ (ತಂತೀ ವಾದ್ಯಗಳು) ಅವನದ್ದ (ಚರ್ಮವಾದ್ಯಗಳು), ಸುಷಿರ (ಗಾಳಿಯನ್ನೂದಿದಾಗ ನಾದವನ್ನುಂಟು ಮಾಡುವ ವಾದ್ಯಗಳು) ಘನ (ತಾಳ ಗಂಟೆ ಮುಂತಾದ ಲೋಹ ವಾದ್ಯಗಳು) ಎಂಬುದು ಒಂದು ಬಗೆಯ ವರ್ಗೀಕರಣದ ರೀತಿಯಾದರೆ, ತಂತೀವಾದ್ಯಗಳು, ಚರ್ಮವಾದ್ಯಗಳು, ಮಣ್ಣಿನ ವಾದ್ಯ, ಲೋಹವಾದ್ಯಗಳೆಂಬುದು ಮತ್ತೊಂದು ಬಗೆಯ ವಿಂಗಡಣೆಯ ಕ್ರಮ.[೨೬೭] ಸಂಗೀತ ಮತ್ತು ನೃತ್ಯಕ್ಕೆ ವಾದ್ಯಗಳು ಅವಶ್ಯಕವಾಗಿ ಬೇಕು. ಇಂಥ ವಾದ್ಯಗಳ ಉಲ್ಲೇಖಗಳು ನಮಗೆ ಪ್ರಾಚೀನ ಕಾಲದಿಂದಲೂ ದೊರೆಯುತ್ತವೆ. ಈ ಗ್ರಂಥಗಳಲ್ಲಿ ಉಕ್ತವಾಗಿರುವ ವಾದ್ಯಗಳನ್ನು ಎಷ್ಟೇ ವಿವರಿಸಿದರೂ ಅದರ ಒಂದು ಅಭಿವ್ಯಕ್ತತೆಯನ್ನು ಶಿಲ್ಪ ಇಲ್ಲವೆ ಚಿತ್ರದಲ್ಲಿ ನೋಡಿದಾಗ ಅದರ ಬಗ್ಗೆ ಒಂದು ನಿಶ್ಚಿತ ಅಭಿಪ್ರಾಯ ಒಡಮೂಡುತ್ತದೆ. ನರ್ತಕಿಯರು ಅಥವಾ ನರ್ತಿಸುವ ದೇವತೆಗಳು, ಸಂಗೀತಗಾರ ಅನೇಕ ಪಟ್ಟಿಕೆಗಳನ್ನು ನಾವು ದೇವಾಯಲದ ಶಿಲ್ಪಗಳಲ್ಲಿ ಗಮನಿಸಬಹುದು. ಆ ಕಾಲದ ಶಿಲ್ಪಗಳ ಸಮಯ ನಿಜವಾಗಲೂ ಮೆಚ್ಚುವಂತಹುದು. ಅವರು ಶಿಲ್ಪಗಳಲ್ಲಿ ಸಂಗೀತ ವಾದ್ಯಗಳನ್ನು ಒಂದು ರೀತಿಯ ದಾಖಲೆಯಂತೆ

ರಚಿಸಿ ಹೋಗಿರುವುದರಿಂದ ಇಂದು ಪ್ರಚಲಿತವಿರುವ ಸಂಗೀತ ವಾದ್ಯಗಳ ಪರಂಪರೆಯ ಇತಿಹಾಸವನ್ನು ನಮಗೆ ಅರಿಯಲು ಸಾಧ್ಯವಾಗಿದೆ.

ಫೆರ್ನಾಂವ್ ನ್ಯೂನಿಜ್ ಹೇಳಿಕೆಯಂತೆ. ಯುದ್ಧದಲ್ಲಿ ಉಪಯೋಗಿಸಲು ತಂದಿದ್ದ ನಗಾರಿ, ಡಂಕ, ಹರೆ ಮುಂತಾದ ವಾದ್ಯಗಳ ಕಥೆಯೇ ಬೇರೆ ಇವುಗಳನ್ನೆಲ್ಲ ಉಪಯೋಗಿಸಿ ರಣಭೇರಿಯನ್ನು ಭಾರಿಸಿದಾಗ ಆಕಾಶವೇ ಕಳಚಿ ಬಿದ್ದಂತೆ ಶಬ್ದವಾಗುತ್ತಿತ್ತು. ಹಕ್ಕಿಗಳೇನಾದರೂ ಆ ಶಬ್ದದಲ್ಲಿ ಸಿಕ್ಕಿಕೊಂಡರೆ ಅವಕ್ಕೆ ದಿಕ್ಕು ಕಾಣದೆ ಸುತ್ತಾಡಿ ನೆಲಕ್ಕೆ ಬೀಳುತ್ತಿದ್ದವು. ಅಂದರೆ ಅಂದು ವಾದ್ಯಗಳನ್ನು ಕೇವಲ ಸಂಗೀತಕ್ಕಷ್ಟೆ ಸೀಮಿತಗೊಳಿಸದೆ ರಣರಂಗದಲ್ಲಿ ಬಳಸುತ್ತಿದ್ದರು ಎಂದು ತಿಳಿಯುತ್ತದೆ.[೨೮] ಅರಸರು ಹೊರಗಡೆ ಹೊರಟಾಗಲೂ ವಾದ್ಯಗಳನ್ನು ಬಳಸುತ್ತಿದ್ದರು ಅದಕ್ಕೆಂದೇ ಅವರನ್ನು ನೇಮಿಸಿಕೊಳ್ಳುತ್ತಿದ್ದರು.

ತುತ್ತೂರಿ, ನಗಾರಿ, ವಾದ್ಯ ಬಾವುಟ, ಮುಂತಾದವುಗಳನ್ನು ಹೊತ್ತು ಇಪ್ಪತ್ತೈದು ಕುದುರೆ ಸವಾರರು ಹೋಗುತ್ತಾರೆ. ಅದೇ ರೀತಿ ಕೃಷ್ಣದೇವ ಮಹಾರಾಯನ ಅವಧಿಯಲ್ಲಿ ಹೊಸಮಲೆದುರ್ಗದಲ್ಲಿ ಮುಂಮುಡಿಸಿಂಗನ ಮೊಮ್ಮಗನೂ ಕಂಪಿಲರಾಯ ಮತ್ತು ಹರಿಹರ ದೇವಿಯರ ಮಗನೂ ಆದ ರಾಮನಾಥನ ಗುಡಿಯನ್ನು ಗೋಡಾಯಿ ಮತ್ತು ಆಕೆಯ ತಮ್ಮ ರಾಮಣ್ಣ ಎಂಬವರು ಕಟ್ಟಿಸಿ ಅದರ ಪೂಜೆಗಾಗಿ ಗಂಟೆ, ಜಾಗಟೆ, ಹರಿವಾಣ, ಚೆಂಬು ಮತ್ತು ಹೊನ್ನನ್ನು ದಾನವಾಗಿ ನೀಡಿದರು.[೨೯]

ಕ್ರಿ.ಶ. ೨೫–೧೫೫೨ ಸೋಮವಾರದಂದು ಸದಾಶಿವರಾಯನು ರಾಜ್ಯಭಾರ ಮಾಡುತ್ತಿದ್ದಾಗ ವೇಲೂರು ತಿಂಮಪ್ಪನಾಯಕನ ಮಗ ರಾಮಪ್ಪ ನಾಯಕನು ಮೊರಬದ ಸೀಮೆಯಲ್ಲಿ ಪಂನುಂಕಿನ ಹಳ್ಳಿಯನ್ನು ದೇವಲಾಪುರದ ವಸಂತ ಮಲ್ಲಿಕಾರ್ಜುನ ದೇವರಿಗೆ ಎರಡು ಡೋಲು, ಎರಡು ನಾಗಸ್ವರ ನುಡಿಸಬೇಕು ಎಂದು ಕೋನಯ್ಯ ರಾವುತನ ಮಗ ಮುಖವೇಣಿಯ ಮುನಿರಾವುತನಿಗೆ ದಾನ ನೀಡುತ್ತಾನೆ.[೩೦]

ಅಂದಿನ ಸಾಹಿತ್ಯ ಕೃತಿಗಳಲ್ಲಿ ಸಂಗೀತ ವಾದ್ಯಗಳ ಉಲ್ಲೇಖಗಳು ಸಾಕಷ್ಟು ದೊರೆತಿವೆ. ಭರತೇಶವೈಭವದಲ್ಲಿ

ವೀಣೆಯ ದನಿ ಯಾವುದಾದರೊಳು ಪಾಡುವ
ಗಾನದಿ ಧ್ವನಿ ಯಾವುದೆಂದು ಕಾಣಿಸಿ ಕೊಳ್ಳದೆ ಜನಿಸಿದ್ದ ಮಹಿಮೆಯ
ಕಾಣಿಸಿ ಪಾಡಿರರೊಲ್ಪು[೩೧]

ಧನ್ಯನಿ, ಮಲಹರಿ ದೇಶಾಕ್ಷಿ ರಾಗಗಳನ್ನು ದಂಡಿಗೆ (ವೀಣೆ) ನುಡಿಸುತ್ತಾ ಹಾಡಿದಾಗ ಅವರ ಕಂಠ ವೀಣಾನಾದ ಎರಡೂ ಒಮ್ಮೆಗೆ ಬೆರೆತು ಹೋಗಿ ಕಂಠ ಯಾವುದು ವಾದ್ಯ ಎನ್ನುವುದನ್ನು ಗುರುತಿಸುವುದು ಕಷ್ಟವಾಯಿತು.

ಭೇರಿ ಮೃದಂಗ ದುಂದುಭಿ ಶಂಖ ಕಹಳಾ ಮ
ಹಾರಮಗಳ ಶೋಭನಸ್ವನದ ಮಂದಿ ಗಂ
ಭೀರ ಘೋಷದ ಸಖೀನಿಕರ ದುಗ್ಗಡೆಣೆಗಳ ವರಸಿಂಜಿತಧ್ವನದ
ಭೊರಿ ಸಂಭ್ರಮದೊಳೈತರುತಿರ್ದಳೇಶ್ವರನ

ನಾರಿ ಘನದುರಿತ ಸಂಹಾರಿ ಸತ್ಕೀರ್ತಿವಿ
ಸ್ತಾರಿ ಭಕ್ತವಜ್ರಾಧಾರಿ ಗಿರಿ ರಾಜನ ಕುಮಾರಿ ಪೊನ್ನಂದಣದೊಳ[೨೨]
ಘನ, ಸುಷಿರ, ಮಾನದ್ದ ತತವೆಂಬ ವಾದ್ಯನಿ
ಸ್ವನದೊಳು, ಗೋಪಾಂಗ ಪ್ರತ್ಯಂಗ ಭ್ರಮರಿ ಭಾ
ವನೆಮಂಡಲಂಗಳಿಂ ಶದ್ದ ದೇಶಿಗಳಳ್ಳವೆಸಿ[೨೩]
ವೇಣುವೀಣಾಮೃದಂಗಾನಾಂ ಮನೋಜ್ಞಾನಾಂ ಚ ಸರ್ವಶಃ
ಶಬ್ದೇನಾಪೂರ್ಯತೇ ಹಸ್ಮ ತದ್ವನಂ ಸಂಸಮೃದಿವಂತೆ[೨೪]

ಬಹಳ ಸಮೃದ್ಧಿಯಿಂದ ಕೂಡಿದ ಆ ವನ ಎಲ್ಲಾ ಕಡೆಯು ಮನೋಹರವಾದ ಕೊಳಲು, ವೀಣೆ, ಮೃದಂಗಗಳ ಧ್ವನಿಯಿಂದ ತುಂಬಿಹೋಗಿತ್ತು.

ಬಟ್ಟುತಾಳ

ಇದು ಎರಡರಿಂದ ಮೂರು ಅಂಗುಲಗಳಷ್ಟು ವ್ಯಾಸವಿರುವಂತೆ ವೃತ್ತಾಕಾರವಾಗಿ ಕಂಚಿನಿಂದ ಮಾಡಲಾಗಿರುತ್ತದೆ. ಇವುಗಳ ಮಧ್ಯ ಭಾಗದಲ್ಲಿ ತಗ್ಗು ಇದ್ದು ಕೈಯಲ್ಲಿ ಹಿಡಿಯಲು ದಾರವನ್ನು ಗಂಟು ಮಾಡಿ ಸಿಕ್ಕಿಸಿರುತ್ತಾರೆ. ಒಂದು ಕಂಚಿನ ಮೇಲೆ ಮತ್ತೊಂದನ್ನು ಬಡಿಯುವುದರಿಂದ ಉತ್ತಮ ಧ್ವನಿ ಉಂಟಾಗುತ್ತದೆ. ಹರಿಕಥೆ ದಾಸರು, ಭಜನೆಕಾರರು, ಸಂಗೀತಗಾರರು ಈ ತಾಳವನ್ನು ಬಳಸುತ್ತಾರೆ. ಈ ರೀತಿಯ ಬಟ್ಟು ತಾಳವನ್ನು ಕಾಯ್ಕಿಣಿಯ ಎರಡು ವೀರಗಲ್ಲುಗಳಲ್ಲಿ ಕಾಣಬಹುದು ಅಲ್ಲಿ ವೀರನ ಬಳಿಯಿರುವ ಸ್ತ್ರೀಯೊಬ್ಬಳು ಈ ರೀತಿಯ ಬಟ್ಟುತಾಳ ಹಾಕುತ್ತಿರುವಳು.[೨೫] ಝುಲ್ಲರಿ ಇದು ಬಟ್ಟು ತಾಳದ ರೂಪದಲ್ಲಿಯೇ ಇದು ಬಹಳ ದೊಡ್ಡದಾಗಿರುತ್ತದೆ. ಊಟದ ತಟ್ಟೆಯಷ್ಟು ಅಗಲವಾಗಿರುತ್ತದೆ. ಒಂದಕ್ಕೊಂದು ಬಡಿದರೆ ಜೋರಾದ ಶಬ್ದ ಬರುತ್ತದೆ. ಈ ರೀತಿಯ ವಾದ್ಯವು ವಿಪ್ಪಲೆ (ಹಳದಿಪು (ಹೊನ್ನವರ (ತಾ)) ವೀರಗಲ್ಲುಗಳಲ್ಲಿ ಕಂಡುಬಂದಿದೆ.

ವಿಜಯನಗರ ಕಾಲದಲ್ಲಿ ವಾದ್ಯಗಳ ಬಳಕೆ ವ್ಯಾಪಕವಾಗಿತ್ತು. ಅಂದಿನ ವಾದ್ಯಗಳ ಉಲ್ಲೇಖಗಳನ್ನು ದೇವಾಲಯಗಳ ಮೇಲಿನ ಶಿಲ್ಪ, ಶಾಸನ, ಪ್ರವಾಸಿಗರ ವರದಿ, ಸಾಹಿತ್ಯ ಕೃತಿಗಳಲ್ಲಿ ಕಾಣಬಹುದು.

ದೇವರಾಯರನ ಮಹಾಪ್ರಧಾನಿ ಮಾದಣ ದಂಣಾಯಕರ ನಿರೂಪದಿಂದ ಮಹಾಪ್ರಧಾನಿ ಅಚರಸವೊಡೆಯರು ಬಾರಕೂರು ರಾಜ್ಯವನ್ನು ಆಳುತ್ತಿರುತ್ತಾನೆ. ದೇಮಂಣ ಸೆಟ್ಟಿ ಎಂಬುವನು ಉಪ್ಪುಗುಂಡದ ಶ್ರೀ ದುರ್ಗಾಪರಮೇಶ್ವರಿ ದೇವರಿಗೆ ದೇವರಾಯ ಮಹಾರಾಯನ ಆರೋಗ್ಯ ಸುಧಾರಿಸಲಿ ಮತ್ತು ನೂರ್ಕಾಲ ಬಾಳಲಿ ಎಂಬ ಆಶಯದಿಂದ ಪಂಚಮಹಾವಾದ್ಯಕ್ಕೆಂದು ದಾನ ನೀಡುವನು.[೨೬]

ಇವರು ಭಾರಿಸುವ ಧ್ವನಿ ನಭೋ ಮಂಡಲವನ್ನು ಭೇದಿಸುತ್ತದೆ. ಆ ಶಬ್ದದಲ್ಲಿ ಏನು ಕೇಳಿಸುವುದಿಲ್ಲ ಇವೆಲ್ಲಕ್ಕಿಂತ ಮುಂದೆ ಜನರು ಇದನ್ನು ಆಗಾಗ್ಗೆ ಬಡಿಯುತ್ತಾ ಹೋಗುತ್ತಾರೆ. ಇದರ ಶಬ್ದ ಬಹಳ ದೂರಕ್ಕೆ ಕಳಿಸುತ್ತದೆ. ಇದನ್ನು ಪಿಚಾ ಎಂದು ಕರೆಯುತ್ತಾರೆ.[೨೭] ವಿಜಯನಗರ ಕಾಲದಲ್ಲಿ ಹೆಚ್ಚು ಹಬ್ಬ ಉತ್ಸವಗಳು ನಡೆಯುತ್ತಿದ್ದವು. ಅಂತಹ ಸಮಯದಲ್ಲಿ

ಅನೇಕ ಸಂಗೀತ ವಾದ್ಯಗಾರರನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಪ್ರಾದೇಶಿಕವಾಗಿ ವಿವಿಧ ವಾದ್ಯಗಳನ್ನು ಬಳಸುತ್ತಿದ್ದರು. ಉತ್ಸವಗಳು ಹೆಚ್ಚು ನಡೆಯುತ್ತಿದ್ದರಿಂದ ಸಂಗೀತಗಾರರು ಮತ್ತು ವಾದ್ಯಗಾರರನ್ನು ದೇವಾಲಯಗಳಿಗೆ ಅಧಿಕ ಸಂಖ್ಯೆಯಲ್ಲಿ ನೇಮಿಸಿಕೊಳ್ಳುತ್ತಿದ್ದರು. ವಾದ್ಯಗಳನ್ನು ರಕ್ಷಣೆಗಾಗಿಯೂ ಬಳಸಿದ ದಾಖಲೆಗಳಿವೆ. ಕಾಡು ಪ್ರಾಣಿಗಳಿಂದ ರಕ್ಷಣೆ ಪಡೆಯಲು, ಯುದ್ಧಕ್ಕೆ ಮುನ್ಸೂಚನೆ ಕೊಡಲು, ವಿಜಯೋತ್ಸವದ ಸಮಯದಲ್ಲಿ ಹೀಗೆ ಅನೇಕ ಸಂದರ್ಭದಲ್ಲಿ ವಾದ್ಯಗಳನ್ನು ಬಳಸುತ್ತಿದ್ದರು.

ದೇವರಾಯನ ಕಾಲದಲ್ಲಿ ಒಂದು ಅಸಾಧರಣ ಘಟನೆಯ ಬಗ್ಗೆ ಅಬ್ದುಲ್ ರಜಾಕ್ ದಾಖಲಿಸಿದ್ದಾನೆ. ಈ ವೃತ್ತಾಂತದ ಕರ್ತೃ ಕಾಲಿಕತ್ತದಲ್ಲಿ ತಂಗಿದ್ದ ಸಮಯದಲ್ಲಿ (ನವೆಂಬರ್ ಕ್ರಿ.ಶ. ೧೪೪೨ರಿಂದ ಏಪ್ರಿಲ್ ೧೪೪೩) ತನಗಾಗಿ ಹೊಸಮನೆ ಕಟ್ಟಿಸಿಕೊಂಡಿದ್ದ ರಾಜನ ಸಹೋದರ ಅಲ್ಲಿಗೆ ರಾಜನನ್ನು ಮತ್ತು ಸಾಮ್ರಾಜ್ಯದ ಪ್ರಮುಖ ವ್ಯಕ್ತಿಗಳನ್ನು ಆಮಂತ್ರಿಸಿದ. ಒಬ್ಬರೊಬ್ಬರ ಎದುರಿಗೆ ಊಟ ಮಾಡದಿರುವುದು ಕಾಫಿರರ ಸುಸ್ಥಾಪಿತ ಪದ್ಧತಿ ಆ ಮಂತ್ರಿತರನ್ನೆಲ್ಲಾ ಒಂದು ಭವ್ಯ ಕೋಣೆಯಲ್ಲಿ ಒಂದೆಡೆ ಕೂಡಿಸಲಾಯಿತು. ಆಗಾಗ ರಾಜಕುಮಾರ ಸ್ವತಃ ತಾನೇ ಬಂದು ಇಲ್ಲವೆ ದೂತನನ್ನು ಕಳಿಸಿ ಇಂಥಿಂಥ ದೊಡ್ಡ ಮನುಷ್ಯರು ಬಂದು ತಮ್ಮ ಪಾಲಿನ ಭೋಜನವನ್ನು ಸ್ವೀಕರಿಸಬೇಕೆಂದು ಕೇಳಿಕೊಳ್ಳಲಾಗುತ್ತಿತ್ತು. ನಗರದಲ್ಲಿ ಲಭ್ಯವಿದ್ದ ಎಲ್ಲಾ ನಗಾರಿ, ಬುರುಡೆ ಮದ್ದಲೆ, ಕಹಳೆ ಮತ್ತು ಕೊಳಲುಗಳನ್ನು ಸಂಗ್ರಹಿಸುವಂತೆ ಎಚ್ಚರ ವಹಿಸಲಾಗಿತ್ತು. ಈ ವಾದ್ಯಗಳನ್ನೆಲ್ಲಾ ಏಕ ಕಾಲಕ್ಕೆ ನುಡಿಸಿದಾಗ ಬಾರಿ ಸಪ್ಪಳವಾಗುತ್ತಿತ್ತು. ಕರೆ ಕಳಿಸಿದ ವ್ಯಕ್ತಿ ಭೋಜನ ಶಾಲೆ ಪ್ರವೇಶಿಸಿದ ತಕ್ಷಣ ಹೊಂಚು ಹಾಕಿ ಕಾಯ್ದಿದ್ದ ಇಬ್ಬರು ಹಂತಕರು ಅವನ ಮೇಲೆ ಜಿಗಿದು ಅವನನ್ನು ಕಠಾರಿಯಿಂದ ಇರಿದು ತುಂಡು ತುಂಡಾಗಿ ಕೊಚ್ಚಿದರು ಅವನ ಅಂಗಾಂಗಳನ್ನು ಅಂದರೆ ಅವನ ದೇಹದ ತುಂಡುಗಳನ್ನು ಅಲ್ಲಿಂದ ತೆಗೆದು ಹಾಕಿ ಇನ್ನೊಬ್ಬ ಅತಿಥಿಯನ್ನು ಕರೆಸಲಾಗುತ್ತಿತ್ತು. ಅವನು ಕಗ್ಗೊಲೆಯ ಸ್ಥಳವನ್ನು ಪ್ರವೇಶಿಸಿದನೆಂದರೆ ಅದೃಶ್ಯನಾಗುತ್ತಿದ್ದ. ನಗಾರಿಗಳ ಸಪ್ಪಳ, ಕೂಗಾಟ ಮತ್ತು ಕೋಲಾಹಲದಲ್ಲಿ ಏನಾಗುತ್ತಿದೆ ಎಂಬುದು ಯಾರಿಗೂ ತಿಳಿಯುತ್ತಿರಲಿಲ್ಲ.[೨೮] ಅಂದರೆ ವಾದ್ಯಗಳನ್ನು ಬಳಸಿಕೊಂಡು ಶತ್ರುಗಳನ್ನು ಸಂಹರಿಸಲು ಯಾವ ರೀತಿಯ ತಂತ್ರಗಾರಿಕೆ ಬಳಸುತ್ತಿದ್ದರು ಎಂಬುದು ತಿಳಿಯುತ್ತದೆ.

೪.೫ ನಾಟಕ

ನಾಟಕ ಅಂದರೆ ಅಭಿನಯ ಪ್ರಧಾನವಾದ ದೃಶ್ಯ ಪ್ರಬಂಧ, ರೂಪಕ, ದೃಶ್ಯಕಾವ್ಯ ಎನ್ನಬಹುದು. ನಾಟಕ ಎಂಬ ಶಬ್ದದ ಹುಟ್ಟು ನಟ್ ಎಂಬ ಧಾತುವಿಗೆ ನರ್ತನ ಎಂಬ ಅರ್ಥವಿದ್ದು ಕಾಲಕ್ರಮದಲ್ಲಿ ಅಭಿನಯ ಎಂಬ ಅರ್ಥವನ್ನು ಹೊಂದಿ ನಾಟಕ ಎಂದಾಗಿರಬಹುದು.[೨೯] ಈ ನಾಟಕ ಕತೆ ಭೂಲೋಕದಲ್ಲಿ ಹರಡಲು ಕಾರಣವಾದ ಒಂದು ಕಥೆಯಿದೆ. ನಹುಷ ಚಕ್ರವರ್ತಿ ಸ್ವರ್ಗಾಧಿಪತಿಯಾದಾಗ ಈ ಕಲೆಯನ್ನು ಭೂಲೋಕದಲ್ಲಿ ಹರಡುವಂತೆ ಭರತ ಮುನಿಗೆ ಅಜ್ಞಾಪಿಸಿದನು. ಅವನು ತನ್ನ ಶಿಷ್ಯರನೇಕರನ್ನು ಇಲ್ಲಿಗೆ ಕಳುಹಿಸಿದನು. ಇಲ್ಲಿ ಬಂದು ನೆಲಸಿದ ಈ ದೇವತೆಗಳು ಇಲ್ಲಿನವರೊಡನೆ ವಿವಾಹ ಸಂಬಂಧವನ್ನು ಬೆಳಸಿದರು. ನಾಟಕವೇ ಇವರ ಕಸುಬಾಗಿ ಇವರದೇ ಒಂದು ಗುಂಪಾಯಿತು. ಹೀಗಾಗಿ

ಇದು ಬಾಸ, ಕಾಳಿದಾಸರ ಕಾಲಕ್ಕೆ ವಿಫುಲವಾಗಿ ಬೆಳೆದಿತ್ತು. ಇದರ ಆರಂಭ ದೆಸೆಯನ್ನು ವಿವರಿಸುತ್ತಾ ಕೆಲವು ಪಾಶ್ಚಾತ್ಯರು ಋಗ್ವೇದ ಸೂಕ್ತಗಳಲ್ಲಿನ ಸಂಭಾಷಣೆಗಳನ್ನು ಗಮನಿಸಿ ವೇದಗಳ ಕಾಲಕ್ಕೆ ಇದು ಪ್ರಾರಂಭವಾಯಿತೆಂದು ಅಭಿಪ್ರಾಯಪಡುತ್ತಾರೆ. ಭಾರತದಲ್ಲಿ ನಾಟಕದ ಜನನಕ್ಕೆ ಗ್ರೀಕರ ಸಂಪರ್ಕ ಕಾರಣವೆಂದು ಕೆಲವು ಪಾಶ್ಚಾತ್ಯರ ಅಭಿಪ್ರಾಯ. ಡಾ. ವಾರ್ಡ್ ಮತ್ತು ಸರ್ ಮಾನಿಯರ್ ವಿಲಿಯಮ್ಸ ಎಂಬ ವಿದ್ವಾಂಸರು ಭಾರತದ ನಾಟಕಗಳಿಗೆ ಗ್ರೀಕರ ಯಾವ ಪ್ರಭಾವವೂ ಇಲ್ಲವೆಂದು ಹೇಳುತ್ತಾರೆ. ಜನ ಜೀವನಕ್ಕೆ ಸಂಬಂಧಿಸಿದ ನಾಟಕದ ಹುಟ್ಟಿಗೆ ಕಾರಣ, ಅದರ ಬೆಳವಣಿಗೆಯ ಹಂತಗಳು ಅದರ ಉಚ್ಛ್ರಾಯ ಸ್ಥಿತಿ, ಮುಂತಾದವುಗಳನ್ನು ಗ್ರಂಥಗಳಿಂದ ತಿಳಿಯಬಹುದೇ ಹೊರತು ಅದರ ಹುಟ್ಟು ಇದೇ ಶತಮಾನದಲ್ಲಿ ಎಂದು ನಿರ್ದಿಷ್ಟವಾಗಿ ತಿಳಿದುಬಂದಿಲ್ಲ ಸೃಷ್ಟಿಯ ಜೊತೆಯಲ್ಲೇ ಇದರ ಅವಿರ್ಭಾವೂ ಆಯಿತೆಂದು ಹೇಳಬಹುದು.

ಗುಹಾ ಚಿತ್ರ ಗಮನಿಸಿದರೆ ಬೇಟೆಯ ದೃಶ್ಯಗಳನ್ನು ಅಭಿನಯಿಸುತ್ತಾ ನಾಟಕದ ಹುಟ್ಟಿಗೆ ಕಾರಣವಾಗಿರಬಹುದು. ಭಾರತೀಯ ನಾಟಕ ರಂಗದ ಕಥೆಯು ರಾಮಾಯಣ ಮತ್ತು ಮಹಾಭಾರತ ಕಾವ್ಯಗಳಷ್ಟೆ ಹಳೆಯದು. ಆಗ ಅಲೆಮಾರಿ ಲಾವಣಿಕಾರರು ಈ ಪ್ರಸಂಗಗಳನ್ನು ಅಪಾರ ಸಂಖ್ಯೆಯ ಶ್ರೋತೃಗಳಿಗೆ ಹೇಳುತ್ತಾ ತಿರುಗಾಡುತ್ತಿದ್ದರು. ಈ ಕೃತಿಗಳು ಎರಡು ವಂಶಗಳ (ಸೂರ್ಯ ಮತ್ತು ಚಂದ್ರ) ಸಾಹಸ ಕಾರ್ಯಗಳನ್ನು ಶ್ಲಾಘಿಸುತ್ತವೆ. ಆ ನಂತರದ ಎಲ್ಲಾ ಅರಸರು ಈ ವಂಶಗಳ ಅನುವಂಶಿಕರೆಂದು ತಮ್ಮ ಆಸ್ಥಾನಗಳಲ್ಲಿ ಹೇಳಿಕೊಳ್ಳುತ್ತಿದ್ದರು. ಚರಣರು ತರುವಾಯ ಸೌತಿಗಳು ಸಾರ್ವಜನಿಕ ಪ್ರದರ್ಶನ ಮಾಡುವಲ್ಲಿ ಪರಿಣಾಮಕಾರಿ ರೀತಿಯಲ್ಲಿ ಜೊತೆಗೂಡುತ್ತಿದ್ದರು. ಸಾಹಸ ಕವಿತೆಗಳನ್ನು ನಾಟಕೀಯವಾಗಿ ಹಾಡುವ ರೂಢಿಯು ಎಷ್ಟು ಜನಪ್ರಿಯವಾಗಿತ್ತೆಂದರೆ ವೃತ್ತಿ ನಿರತ ಹಾಡುಗಾರರು ಹುಟ್ಟಿಕೊಂಡರು. ಕವಿತೆಗಳನ್ನು ನಾಟಕೀಯವಾಗಿ ಹಾಡುವ ರೂಢಿಯು ಕ್ರಮೇಣ ನಾಟಕವನ್ನು ಒಂದು ಸ್ವತಂತ್ರ ಕಲೆಯಾಗಿ ನೆಲೆಗೊಳಿಸಿತು.[೨೦]

ವಿಜಯನಗರ ಕಾಲದಲ್ಲಿ ನಾಟಕಕ್ಕೆ ಪ್ರೋತ್ಸಾಹ ದೊರೆತಿತ್ತು ಎಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಅಂದಿನ ಅರಸರು ಪಾತ್ರಧಾರಿಗಳಿಗೆ ಬಿರುದುಗಳನ್ನು ಕೊಟ್ಟು ಗೌರವಿಸುತ್ತಿದ್ದರು. ಸ್ತ್ರೀ ಪುರುಷರಿಬ್ಬರೂ ಪಾತ್ರಧಾರಿಗಳಾಗುತ್ತಿದ್ದರು. ನಾಟಕ ಕಲಿಯಲು ಪ್ರತ್ಯೇಕ ಶಾಲೆಗಳು ನಿರ್ಮಾಣವಾಗಿದ್ದವು. ಈ ರೀತಿ ನಾಟಕ ಕಲೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಬೆಳೆಸಿದರು.

ವಿಜಯಭೂಪತಿ ರಾಯರ ಕುಮಾರ ದೇವರಾಯ ಮಹಾರಾಯರು ಆಳುವಾಗ ಮಹಾಪ್ರಧಾನಿಯಾದ ಮಂಗಪ್ಪದಂಣಾಯಕರ ಮಕ್ಕಳು ಪ್ರತಾಪರಾಯರು ಶಿವನಸಮುದ್ರದ ಊರ ಮುಂದಿನ ಸೋಮೇಶ್ವರ ದೇವರಿಗೆ ಭೂದಾನ ನೀಡಿದ ವಿವರ ಶಾಸನ ಒಳಗೊಂಡಿದೆ. ಮೇಲಿನ ಅಧಿಕಾರಿಯು ತನ್ನ ನಾಯಕತನಕ್ಕೆ ನೀಡಿದ್ದ ಶಿವನಸಮುದ್ರದ ನಾಡಿನ ಯಲಹಂಕನಾಡ ದೇವಸಮುದ್ರದ ಗ್ರಾಮದ ಕಾಲುವಲಿ ವಿರೂಪಾಕ್ಷಪುರ ಗ್ರಾಮದ ಉತ್ಪತ್ತಿಯನ್ನು ದೇವರಾಯ ಮಹಾರಾಯರಿಗೆ ಆಯಸ್ಸು ಆರೋಗ್ಯ ಹೆಚ್ಚಲಿಯೆಂದು ಸೋಮೇಶ್ವರ ದೇವರಿಗೆ ನೈವೇದ್ಯ, ಅಂಗರಂಗಭೋಗಕ್ಕೆ ದಾನ ನೀಡಲಾಗಿದೆ. ಈ ವಿರೂಪಾಕ್ಷಪುರವನ್ನು ಈ ಸಮಯದಲ್ಲಿ

ವಿಜಯದೇವ ಪಾತ್ರದ ಜನ, ನಟುವ ಜನ, ಮದ್ದಳೆಕಾರರು, ಸೀತಾರ ಜನ, ಉಪಾಂಗದ ಜನ, ಕಂಸಾಳೆ ಜನ ಹೀಗೆ ಒಟ್ಟು ಏಳು ಜನರಿಗೆ ಎಂದು ಅಂಗರಂಗಭೋಗವನ್ನು ನಡೆಸಲು ದೇವಸಮುದ್ರದ ಕೆರೆಯ ಕೆಳಗಿನ ಗದ್ದೆಯನ್ನು ದಾನವಾಗಿ ನೀಡಲಾಗಿದೆ. ಅಂದರೆ ಅಂದ ನಾಟಕದಲ್ಲಿ ಪಾತ್ರದಾರಿಗಳಷ್ಟೇ ಅಲ್ಲದೆ ವಾದ್ಯಕಾರರು ಸಂಗೀತಗಾರರು ಉಪಸ್ಥಿತರಿರುತ್ತಿದ್ದರು ಎಂದು ತಿಳಿಯುತ್ತದೆ. ಈ ಎಲ್ಲಾ ವರ್ಗದವರಿಗೂ ಅರಸರು, ಗೌರವ ಬಿರುದು, ದಾನಗಳನ್ನು ಕೊಡುತ್ತಿದ್ದರು.

ಕ್ರಿ.ಶ. ೧೫೧೪ರ ಒಂದು ಶಾಸನವು ನಾಟಕ ಅಭಿನಯಕಾರನಿಗೆ ದಾನ ನೀಡಿದ ವಿವರ ತಿಳಿಸುತ್ತದೆ. ಕೃಷ್ಣದೇವರಾಯನು ಆಳುತ್ತಿರುವಾಗ ಇವನಿಂದ ಮಾಗಣಿಯಾಗಿ ಪಡೆದ ಆದವಾನಿದುರ್ಗವನ್ನು ತಿರುಪತೂರ ಸೋಮೆರಸಗಳ ಮಗ ಕರಣಂ ಬಸವರಸರು ಕೆರಿಯ ಬೆಳುಗಳ್ಳ ಗ್ರಾಮದ ಬಲಸಿಂಗ ದೇವರ ಸೇವೆಗಾಗಿ ಕೆರೆಯ ಬೆಳುಗಲ್ಲು ಗ್ರಾಮದಲ್ಲಿ ಕಪ್ಪು ಭೂಮಿ ದಾನವಾಗಿ ನೀಡುತ್ತಾನೆ.[೨೮೧] ಅಲ್ಲದೆ ಪೋತವರದ ನಟುವ ತಿಂಮನ ಮಗಳು ಪಾತ್ರಿಯೆಂಬುವಳಿಗೆ ತಾಯಿಕುಂಡ ನಾಟಕದ ಚಾಗಯನ ಮಗ ನಟ್ಟುವ ನಾಗಯ್ಯನಿಗೆ ದಾನವಾಗಿ ನೀಡುತ್ತಾನೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ತಾಯಿಕುಂಡ ನಾಟಕವು, ನಾಟಕದ ಪ್ರಕಾರವೇ ಅಥವಾ ಹೆಸರೇ ತಿಳಿಯುವುದಿಲ್ಲ ನಟುವ ಜನಾಂಗಕ್ಕೆ ದಾನದತ್ತಿ ನೀಡಿದ ವಿಷಯ ತಿಳಿಸುವ ಅಪರೂಪದ ಶಾಸನವಿದು. ಇಲ್ಲಿ ನಟ್ಟುವ ನಾಗಯ್ಯ ಮತ್ತು ಅವನ ಮಗಳು ಪಾತ್ರಿಯಾಗಿದ್ದಳು. ಅಂದರೆ ಇವರಿಬ್ಬರೂ ನೀಡಿದ ಅದ್ಭುತ ನಟನೆಗಾಗಿ ಹಾಗೂ ಅವರ ನಟನಾ ಸಾಮರ್ಥ್ಯವನ್ನು ಪರಿಗಣಿಸಿ ದಾನ ನೀಡಲಾಗಿದೆ. ಧೂರ್ತ ಸಮಾಗಮ ಪ್ರಹಸನ ಎಂಬ ಜ್ಯೋತಿರ್ರೇಶ್ವರ ಕವಿ ಶೇಖರಾಚಾರ್ಯರು ಬರೆದ ಎರಡು ಅಂಕಗಳ ನಗೆ ನಾಟಕ ಸಾಳುವ ನರಸಿಂಹನ ಕಾಲದಲ್ಲಿ ಅಭಿನಯಿಸಿರುವುದಾಗಿ ಹೇಳಲಾಗಿದೆ.[೨೮೨]

ಹಬ್ಬ, ಜಾತ್ರೆ, ಉತ್ಸವಗಳ ಸಮಯದಲ್ಲಿ ನಾಟಕ ಪ್ರದರ್ಶನಗಳು ಏರ್ಪಡುತ್ತಿದ್ದವು. ಅದನ್ನು ನೋಡಲು ಸಾಮಾನ್ಯರಾಧಿಯಾಗಿ ಎಲ್ಲ ವರ್ಗದವರು ಉಪಸ್ಥಿತರಿರುತ್ತಿದ್ದರು. ನೆರೆದ ಜನರ ಮುಂದೆ ವಸಂತೋತ್ಸವವನ್ನು ಕಂಗೋಳಿಸಲು ಪ್ರಸಿದ್ಧ ಸಾಮ್ರಾಟ ಕೃಷ್ಣದೇವರಾಯ ಬರೆದ ಜಾಂಬವತಿ ಕಲ್ಯಾಣಂ ಎಂಬ ನಾಟಕ ಅಭಿನಯಿಸಲಾಯಿತು.[೨೮೩] ಅಂದು ಅರಸರು ನಾಟಕವನ್ನ ಬರೆಯುತ್ತಿದ್ದರು ಎಂದು ತಿಳಿದುಬರುತ್ತದೆ. ಕೃಷ್ಣದೇವರರಾಯನು ಹಜಾರ ರಾಮಸ್ವಾಮಿ ದೇವಾಲಯದ ದೇವರ ಗೌರವಾರ್ಥವಾಗಿ ಒಂದು ವಿಶೇಷ ಉತ್ಸವವನ್ನು ಆಚರಿಸಲು ಆಸ್ಥಾನ ಕವಿಯು ರಚಿಸಿದ ಪಾರಿಜಾತಪಹರಣಮ ಅನ್ನು ಆಧಾರಿಸಿ ಒಂದು ನೃತ್ಯ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ದುರ್ಗಾವತಿಯು ಒಬ್ಬ ವಾರಾಂಗನೆಯಾಗಿದ್ದಳು. ಹಾಗೂ ಇವಳು ಸತ್ಯಭಾಮನ ಪಾತ್ರವನ್ನು ನಿರ್ವಹಿಸಿದಳು. ಕೃಷ್ಣದೇವರಾಯನು ವಜ್ರದಿಂದ ಅಲಂಕೃತವಾದ ಒಂದು ಚಿನ್ನದ ಸೊಂಟದ ಪಟ್ಟಿ ಕೊಡುಗೆಯಾಗಿ ನೀಡಿದನು.[೨೮೪]

ಈ ರೀತಿ ನಾಟಕದ ಪಾತ್ರದಾರಿಗಳಿಗೆ ಬಿರುದು, ಬಾವಲಿಗಳನ್ನು ವಿಜಯನಗರ ಕಾಲದಲ್ಲಿ ನೀಡುತ್ತಿದ್ದುದು ಮೇಲಿನ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ನಾಟಕ ಪ್ರದರ್ಶನ ಮಾಡಲು, ನಾಟ್ಯಮಂಟಪಗಳಿದ್ದವು. ಅದರ ಉಲ್ಲೇಖವು ಸಂಕಮ್ಮನಾಯಕನ ಕಾಲದಲ್ಲಿದ್ದ

ಇಕ್ಕೇರಿಯ ಬಳಿಯ ಒಂದು ಸುಂದರ ನಾಟ್ಯಶಾಲೆಯ ಬಗ್ಗೆ ಶಿವತತ್ವರತ್ನಾಕರದಿಂದ ದೃಢೀಕರಣ ದೊರೆಯುತ್ತದೆ. ಇದರ ಪ್ರಕಾರ ರಂಗಮಂಟಪವು ಅದರ ಮುಂದೆ ಒಂದು ತೋಟವನ್ನು ಹೊಂದಿರಬೇಕು ಇದಕ್ಕೆ ಉತ್ತಮ ಗಾಳಿ ಬೆಳಕಿನ ವ್ಯವಸ್ಥೆಯಿರಬೇಕು ಹಾಗೂ ಆಭರಣಯುತವಾದ ದೀಪಗಳಿಂದ ಅಲಂಕೃತಗೋಳಿಸುತ್ತಿರಬೇಕು, ಮದವೇರಿದ ಗಜದ ಕೋರೆಯಿಂದ ಸುಂದರಗೊಳಿಸಬೇಕು. ಬಂಗಾರದ ಸ್ತಂಭಗಳಿಂದ ಆಕರ್ಷರ್ಕಕವಾಗಿ ಕಂಡುಬರುವಂತೆ ಮಾಡಬೇಕು.[೨೮೫]

ಅಂದು ರಾಜ್ಯದಲ್ಲಿ ಎಲ್ಲೆಲ್ಲೂ ಸುಂದರವಾದ ನಾಟಕಭವನಗಳಿದ್ದವು ಶ್ರೀಕೃಷ್ಣದೇವರಾಯನ ಕಾಲದಲ್ಲಿ ಜಾಂಬವತೀ ಕಲ್ಯಾಣ, ಜ್ಯೋತಿರೀಶ್ವರ ಕವಿ ರಾಜಶೇಖರಚಾರ್ಯನ ಧೂರ್ತ ಸಮಾಗಮ ಪ್ರಹಸನಗಳು ಮನೋಹರವಾಗಿ ಪ್ರದರ್ಶಿಸಲ್ಪಟ್ಟವು. ನಾಟ್ಯ ಶಿಕ್ಷಣವನ್ನು ಕಲಿಸಲು ಗುರುಗಳಿರುತ್ತಿದ್ದರು. ಮಲ್ಲಿಕಾರ್ಜುನರಾಯರ ಕಾಲದಲ್ಲಿ ನಾಟ್ಯ ಶಿಕ್ಷಣ ಕೊಡಲು ಆಸ್ಥಾನದಿಂದ ಒಬ್ಬ ನಟನನ್ನು ಯುವರಾಜ ಗಂಗುದಾಸನ ಸಂಸ್ಥಾನಕ್ಕೆ ಕಳುಹಿಸಬೇಕಾಯಿತು.[೨೮೬] ಹೀಗೆ ಅಂದು ಹಬ್ಬ, ಉತ್ಸವ, ಜಾತ್ರೆ, ಸಂದರ್ಭಗಳಲ್ಲಿ ಸಂಗೀತ, ನೃತ್ಯ, ನಾಟಕ ಪ್ರದರ್ಶನಗಳ ನೆರೆದ ಜನ ಸಮೂಹವನ್ನು ವಿನೋದಾವಳಿಗಳಿಂದ ಉಲ್ಲಸಿತರನ್ನಾಗಿಸುತ್ತಿದ್ದವು. ಈ ರೀತಿಯ ಸಂತೋಷ ಕೂಟಗಳಲ್ಲಿ ಅರಸರ, ರಾಣಿ, ಮಾಂಡಲಿಕರ, ಸಾಮಾನ್ಯ ಜನ ಎಲ್ಲರೂ ಭಾಗವಹಿಸಿ ಸಂತಸಪಡುತ್ತಿದ್ದರು. ವಿಜಯನಗರ ಕಾಲದ ವಿನೋದಾವಳಿಗಳ ಉಲ್ಲೇಖಗಳ, ಕನ್ನಡ, ತೆಲುಗು, ಸಂಸ್ಕೃತ, ಸಾಹಿತ್ಯ ಕೃತಿಗಳು, ಶಾಸನ, ವಿದೇಶಿ ಪ್ರವಾಸಿಗರ ವರದಿಗಳಿಂದ ಸ್ಪಷ್ಟವಾಗುತ್ತದೆ.

ವೀರಗಾಸೆ ಕುಣಿತ

ಸಾಮೂಹಿಕ ನೃತ್ಯವನ್ನೊಳಗೊಂಡ ಒಂದು ಕುಣಿತ ಇದರಲ್ಲಿ ಇಬ್ಬರಿಂದ ಮೂವತ್ತು ಕಲಾವಿದರ ಸಂಖ್ಯೆ ಇರುತ್ತದೆ. ಇದರಲ್ಲಿ ಪಂಚವಾದ್ಯಗಳ ಬಳಕೆಯಾಗುತ್ತದೆ ಇದರಲ್ಲಿ ಭಾಗಹಿಸುವ ಕಲಾವಿದರ ವೇಷಭೂಷಣಗಳು ಹೀಗಿರುತ್ತವೆ. ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿಬಣ್ಣದ ರುಮಾಲು, ಕಾವಿಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ ಹಣೆಗೆ ವಿಭೂತಿ ಕಿವಿಯಲ್ಲಿ ಕುಂಡಲ, ಸೊಂಟಪಟ್ಟಿ ಕೈಯಲ್ಲಿ ಬಿಚ್ಚುಗತ್ತಿ, ಕಾಲಲ್ಲಿ ಗೆಜ್ಜೆ, ಕಟ್ಟಿಕೊಂಡು ಉಲ್ಲಾಸ ಭರಿತರಾಗಿ ಕುಳಿತಿರುವ ಎಲ್ಲಾ ಜನಗಳು ಸುಲಲಿತವಾಗಿ ಗುಲ್ಲು ಮಾಡದೆ ನೀವು ಕೇಳಿರಿ ಅಹ ರುದ್ರಾ ಅಹಾಹಾ ದೇವಾ... ಎಂದು ವೀರಗಾಸೆಯ ನರ್ತಕ ಹೇಳುವ ಒಡಪಿನೊಂದಿಗೆ ಕುಣಿತ ಅನಂತರ ಯಾರಾದರೊಬ್ಬ ನರ್ತಕ ಒಡಪು ಹೇಳುತ್ತಾನೆ. ಒಡಪು ಮುಗಿಯುತ್ತಿದ್ದಂತೆ ವಾದ್ಯಗಳ ಭೋರ್ಗರೆತದೊಂದಿಗೆ ಮತ್ತೆ ಮುಂದಿನಗತಿಯ ಕುಣಿತ ಪ್ರಾರಂಭವಾಗುತ್ತದೆ. ಹಬ್ಬ-ಹರಿದಿನಗಳಲ್ಲಿ ತೇರು ಜಾತ್ರೆಗಳಲ್ಲಿ ವೀರಗಾಸೆ ಕುಣಿತವನ್ನು ಏರ್ಪಡಿಸುವ ಸಂಪ್ರದಾಯವಿದೆ.

ಕೀಲು ಕುದುರೆ ಕುಣಿತ

ಇದು ಪ್ರಸ್ತುತ ಕರ್ನಾಟಕದ ವಿಜಯಪುರ, ಬಳ್ಳಾರಿ, ಮಂಡ್ಯ, ಮೈಸೂರು, ಬೆಂಗಳೂರು ಕೊಡಗು ಮತ್ತು ಇನ್ನೊ ಹಲವಾರು ಜಿಲ್ಲೆಗಳಲ್ಲಿ ಪ್ರಚಲಿತವಿರುವ ಒಂದು ಕುಣಿತ. ಕೊಡಗಿನಲ್ಲಿ

ಇದನ್ನು ಪೊಯ್ ಕುದುರೆ ಎನ್ನುವರು. ಕಿಲುಕುದುರೆಯನ್ನು ಮುಖ್ಯವಾಗಿ ಬಿದಿರಿನ ದಬ್ಬೆಗಳಿಂದ ರಚಿಸಿರುತ್ತಾರೆ. ಕಾಲುಗಳನ್ನು ಮಾತ್ರ ಬಿಟ್ಟು ಉಳಿದ ಹೊಟ್ಟೆ, ಎದೆ ಮತ್ತು ಹಿಂಭಾಗವನ್ನು ಕುದುರೆಯ ಆಕಾರದಂತೆ ಬಿದಿರಿನ ತೆಳುವಾದ ದಬ್ಬೆಗಳಿಂದ ಹೆಣೆಯಲಾಗುತ್ತದೆ. ಕಿಲುಕುದುರೆ ಹೆಸರೇ ಹೇಳುವಂತೆ ಕೀಲುಗಳಿಂದ ರಚಿತವಾದುದು. ಕೀಲುಕುದುರೆ ಆಡಿಸುವವನು ಕಾಲಿಗೆ ಎರಡು ಅಡಿ ಉದ್ದದ ಮರಗಾಲು ಕಟ್ಟಿಕೊಂಡಿರುತ್ತಾನೆ. ಈ ಮರದ ಕಾಲುಗಳನ್ನು ಹಗುರ ಹಾಗೂ ಗಟ್ಟಿಯಾದ ಮರದಿಂದ ಮಾಡಿ ಅದರ ಮೇಲೆ ಕಲಾವಿದರು ಕಾಲುಗಳನ್ನು ಕೂರಿಸಲು ಅನುಕೂಲವಾಗುವಂತೆ ಮಾಡಿರುತ್ತಾರೆ. ಕುದುರೆ ಆಕಾರದ ಈ ಬಿದಿರಿಗೆ ಅದೇ ಅಳತೆಯ ಬಣ್ಣ ಬಣ್ಣದ ಗೌನನ್ನು ಹೊದಿಸಿರುತ್ತಾರೆ. ರಾಜ-ರಾಣಿಯರ ವೇಷಭೂಷಣವನ್ನು ಧರಿಸಿದ ಕಲಾವಿದರು ಈ ಕುದುರೆಯ ಬೆನ್ನಿನಲ್ಲಿ ಸೇರಿ ಹೆಗಲುಗಳಿಗೆ ಕುದುರೆಯ ದಬ್ಬೆಯ ದೇಹವನ್ನು ಬಿಗಿದುಕೊಳ್ಳುವರು. ಕೈಯಲ್ಲಿ ಲಗಾಮು ಹಿಡಿದುಕೊಂಡು ಅದರ ತಲೆ ಬಾಲಗಳನ್ನು ಆಡಿಸುತ್ತಾ ಹಿಂದು ಮುಂದು ಮಾಡಿ ಕುಣಿತಾಗ ಅದು ಕುದುರೆಯ ಭಂಗಿಯಂತೆ ಕಾಣುತ್ತದೆ. ಇದನ್ನು ಕುಣಿಸುವಾಗ ನೋಡುವ ಜನರಿಗೆ ಕುದುರೆ ಮೇಲೆ ಮುನುಷ್ಯ ಬಂದಂತೆ ಕಾಣುತ್ತದೆ ಮಕ್ಕಳಾದಿಯಾಗಿ ದೊಡ್ಡವರು ಇದನ್ನು ರಸವತ್ತಾಗಿ ಸಂಭ್ರಮದಿಂದ ಆನಂದವನ್ನು ಅನುಭವಿಸುವರು.

ಹುಲಿವೇಷ

ಹುಲಿವೇಷ ಹಾಕುವುದು ಸಾಮಾನ್ಯವಾಗಿ ಕರ್ನಾಟಕದ ತುಂಬೆಲ್ಲ ಕಂಡುಬರುತ್ತದೆ. ಮೊಹರಂ ಹಬ್ಬದ ಸಂದರ್ಭದಲ್ಲಿ ಈ ವೇಷ ಹೆಚ್ಚಾಗಿ ಹಾಕುತ್ತಾರೆ. ಜಾತ್ರೆ, ಹಬ್ಬಗಳಲ್ಲಿಯೂ ಈ ವೇಷ ಧರಿಸುತ್ತಾರೆ. ಮನರಂಜನೆಗಾಗಿ, ಹೊಟ್ಟೆಪಾಡಿಗಾಗಿ ಹುಲಿ ವೇಷಧರಿಸುವ ಕಲಾವಿದರೂ ಇದ್ದಾರೆ. ಬಿಸಿಲು, ಮಳೆ, ಚಳಿಯಲ್ಲಿ ಬರಿಮೈಯಲ್ಲಿ ನಿಂತು ಸಹಿಸಿಕೊಂಡು ಕುಣಿದು ಕುಪ್ಪಳಿಸುವ ಶಕ್ತಿಯುಳ್ಳ ಯಾವ ವರ್ಗದ ವ್ಯಕ್ತಿಯಾದರೂ ಈ ವೇಷ ಹಾಕಬಹುದು. ಇವರಿಗೆ ಕೆಂಪು ಮಿಶ್ರಿತ ಹಳದಿ ಬಣ್ಣವನ್ನು ಇಡೀ ದೇಹಕ್ಕೆ ಹಚ್ಚಿರುತ್ತಾರೆ. ವೇಷಗಾರ ಚಡ್ಡಿಯನ್ನು ಮಾತ್ರ ಧರಿಸಿರುತ್ತಾನೆ. ಸಾಮಾನ್ಯವಾಗಿ ಬೆಳಿಗ್ಗೆ ಸಾಯಂಕಾಲ ಸಮಯದಲ್ಲಿ ಪ್ರದರ್ಶನ ನೀಡುತ್ತಾರೆ. ಇವರಿಗೆ ಹೆಜ್ಜೆಗಾರಿಕೆಯ ಪರಿಚಯ ಇರಬೇಕು. ಇಲ್ಲದೆ ಹೋದರೆ ಹುಲಿ ಕುಣಿತಕ್ಕೆ ಕಳೆ ಬರುವುದಿಲ್ಲ. ಹಲಗೆ ತಮಟೆಯ ವಾದ್ಯಗಳ ಗತ್ತಿಗೆ ತಕ್ಕಂತೆ ಹುಲಿ ವೇಷಧಾರಿ ಕುಣಿಯುತ್ತಾನೆ. ಮರಿ ಹುಲಿ ಜೊತೆಗಿದ್ದರೆ, ಕುಣಿತಕ್ಕೆ ಹೆಚ್ಚಿನ ಕಳೆ ಬರುತ್ತದೆ. ಮೇಲಿಂದ ಮೇಲೆ ಗಿರಕಿ ಹೊಡೆಯುತ್ತಾ ಹುಲಿಯಂತೆ ನಟನೆ ಮಾಡುತ್ತಾ ಕೆಲವರು ಮೇಲೇರಿ ಹೋಗುವಂತೆ ಮಾಡಿ ಅಂಜಿಸುತ್ತಾ ಜನರನ್ನು ರಂಜಿಸುತ್ತಾರೆ. ವಾದ್ಯಗಳ ಬಡಿತ ತೀವ್ರವಾದಂತೆ ಕುಣಿತ ತೀವ್ರವಾಗುತ್ತದೆ. ಇವರು ಊರುಗಳಲ್ಲೆಲ್ಲ ಸುತ್ತುತ್ತ ಮನೆಮನೆಗೆ ಹೋಗಿ ತಮ್ಮ ಕುಣಿತದಿಂದ ಜನರನ್ನೂ ರಂಜಿಸಿ ಸಂಭಾವನೆ ಪಡೆದುಕೊಳ್ಳುತ್ತಾರೆ. ಕಿರಾಣಿ, ಸಾರಾಯಿ ಅಂಗಡಿಗಳಲ್ಲಿ ಇವರ ಕುಣಿತ ಹೆಚ್ಚು. ಕೆಲವು ಕಡೆ ಹುಲಿ ವೇಷಧಾರಿಯ ಸೊಂಟಕ್ಕೆ ಪಟ್ಟಿಯೊಂದನ್ನು ಕಟ್ಟಿ ಅದಕ್ಕೆ ಹಗ್ಗವನ್ನು ಸೇರಿಸಿ ಇಬ್ಬರು, ಮೂರುಜನ ಹಿಡಿದಿರುತ್ತಾರೆ. ಮುಂದೆ ಹುಲಿ ಆಡಿಸುವ ವ್ಯಕ್ತಿ ಇರುತ್ತಾನೆ.

ನಂದಿ ಧ್ವಜ

ಕರ್ನಾಟಕದ ಒಂದು ವಿಶೀಷ್ಟವಾದ ಮನರಂಜನೆ ವಿಧಾನ ನಂದಿ ಧ್ವಜ ಕಂಬವನ್ನು ಹಿಡಿದು ಕುಣಿಯುವುದು ಇದೊಂದು ಶಕ್ತಿ ಪ್ರದರ್ಶನ ಕಲೆ. ದೈವದ ಮುಂದೆ, ಜಾತ್ರೆಯ ಮೆರವಣಿಗೆಗಳಿಗೆ ನಂದಿ ಧ್ವಜ ಕುಣಿತ ಇರುತ್ತದೆ. ಅತಿ ಎತ್ತರದ ಬಿದಿರು ಕಂಬಕ್ಕೆ ಗೆಜ್ಜೆ ಗಗ್ಗರ ಕೊಳಗ, ಇವನ್ನೆಲ್ಲ ಜೋಡಿಸಲಾಗಿದ್ದು, ಕಂಬವನ್ನೆತ್ತಿ ಕುಣಿಯುವಾಗ ಇವೆಲ್ಲ ಲಯಬದ್ಧ ಸದ್ದು ಮಾಡುತ್ತವೆ. ಇದನ್ನು ನಂದಿ ಕಂಬ, ನಂದಿಕೋಲು, ನಂದಿ ಪಟ ಎಂತಲೂ ಕರೆಯುತ್ತಾರೆ. ಸುಮಾರು ಹದಿನೈದು ಅಡಿ ಅಥವಾ ಅದಕ್ಕಿಂತಲೂ ಎತ್ತರವಿರುವ ಬಿದಿರು ಬೊಂಬಿಗೆ ನಾನಾ ರೀತಿಯ ಅಲಂಕಾರ ಮಾಡಿ ಗಟ್ಟಿ ಮುಟ್ಟಾದ ವ್ಯಕ್ತಿ ಕಂಬವನ್ನು ತೆಗೆದು ತನ್ನ ನಡುವಿಗೆ ಕಟ್ಟಿಕೊಂಡ ಬಟ್ಟೆಯ ಮಡಲಿನ ಒಳಗೆ ಇರಿಸಿಕೊಂಡು ಮೆರವಣಿಗೆಯ ಮುಂದೆ ಸಾಗುತ್ತಾನೆ. ಒಮ್ಮೆ ಒಂದೇ ನಂದಿ ಧ್ವಜ ಪ್ರದರ್ಶನವೂ ಕೆಲವೊಮ್ಮೆ ಅನೇಕ ನಂದಿ ಕಂಬಗಳ ಪ್ರದರ್ಶನವೂ ಇರಬಹುದು. ಬಹಳ ಹೊತ್ತು ಈ ನಂದಿ ಧ್ವಜವನ್ನು ಹಿಡಿದು ಕುಣಿಸುವುದು ಅತ್ಯಂತ ಪ್ರಯಾಸಕರ ಕೆಲಸ ಹಾಗಾಗಿ ಶಕ್ತಿಯುಳ್ಳ ಯುವಕರು ಆಗಾಗ್ಗೆ ಕಂಬವನ್ನು ಕೈ ಬದಲಾಯಿಸಿ ಕೊಂಡು ಹೋಗುವುದುಂಟು. ಈ ಪವಿತ್ರ ಕಂಬವನ್ನು ನೆಟ್ಟಗೆ ನಿಲ್ಲಿಸಿ ಹೊತ್ತು ಕುಣಿಯುವಾಗ ಅದು ಯಾವುದೇ ಕಾರಣಕ್ಕೂ ಬೀಳಬಾರದು ಹಾಗೆ ಬಿದ್ದರೆ ಅದು ಬಟ್ಟಿ ಉತ್ಸವಕ್ಕೆ ಅಪಶಕುನ ಎಂದು ಭಾವಿಸುತ್ತಾರೆ. ಒಟ್ಟಿನಲ್ಲಿ ಈ ನಂದಿ ಧ್ವಜ ಕುಣಿತ ನೋಡುಗರ ಕಣ್ಣಿಗೆ ಹಬ್ಬದ ರೀತಿಯಲ್ಲಿ ಕಂಡು ತುಂಬಾ ವಿನೋದವನ್ನು ನೀಡುತ್ತದೆ.

ಪೂಜಾಕುಣಿತ

ಶಕ್ತಿ ದೇವತೆಗಳಿಗೆ ಸಂಬಂಧಿಸಿದ ಕುಣಿತ ಒಳ್ಳೆಯ ವಿನೋದ ನೀಡುವ ಕಲೆ. ಹಬ್ಬದ ಸಂದರ್ಭದಲ್ಲಿ ಗುಡಿಯೊಳಗಿನ ದೇವತೆ ಪೂಜೆಯ ರೂಪದದಲ್ಲಿ ಹೊರ ಬರುತ್ತಾಳೆಂಬ ನಂಬಿಕೆಯಿಂದಾಗಿ ದೇವತೆಯ ಮುಖವಾಡವನ್ನು ಬಿದಿರಿನ ತಳಿಯ ಮಧ್ಯೆ ಇಟ್ಟು ಅದನ್ನು ಹೊತ್ತು ಕುಣಿಯುವುದಕ್ಕೆ ಪೂಜಾ ಕುಣಿತ ಎನ್ನುವರು. ಪೂಜೆಯನ್ನು ಸುಮಾರು ೫ ಅಡಿ ಉದ್ದ ೩ ಅಡಿ ಅಗಲವಿರುವ ಬಿದಿರಿನ ದಬ್ಬೆಗಳನ್ನು ಜೋಡಿಸಿ ಸಿದ್ದಪಡಿಸಲಾಗುತ್ತದೆ. ಹಬ್ಬ-ಹರಿದಿನ ಊರ ದೇವತೆಯ ಉತ್ಸವಗಳಲ್ಲಿ ಮಾತ್ರವಲ್ಲದೆ, ಹರಕೆ ಮಾಡಿಕೊಂಡಾಗಲೂ ಪೂಜಾ ಕುಣಿತವನ್ನು ಪ್ರದರ್ಶಿಸುತ್ತಾರೆ. ಪೂಜಾ ಕುಣಿತದ ಕಲಾವಿದರು ತಮ್ಮ ಗ್ರಾಮದ ವಿಶಾಲವಾದ ಬಯಲು ಸ್ಥಳದಲ್ಲಿ ಪ್ರದರ್ಶನ ನೀಡುತ್ತಾರೆ. ಪೂಜೆಯನ್ನು ಹೊತ್ತು ಕುಣಿಯುವ ಕಲಾವಿದರು ಹಣೆಗೆ ಕುಂಕುಮ ಇಟ್ಟು, ಬಿಳಿ ಬಣ್ಣ, ಬನೀನು, ನಿಕ್ಕರ್ ಅಥವಾ ವೀರಗಾಸೆ ರೀತಿಯಲ್ಲಿ ಪಂಚೆ ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ತಮಟೆ, ನಗಾರಿ, ಡೋಲು, ಬಡಿತಕ್ಕೆ ಅನುಗುಣವಾಗಿ ಮೂರ್ಹೆಜ್ಜೆ, ನಾಲ್ಕೆಜ್ಜೆ, ಐದ್ಹೆಜ್ಜೆ, ಆರ್ಹೆಜ್ಜೆ, ಎಂಟ್ಹೆಜ್ಜೆ, ಹದಿನಾಲ್ಕೆಜ್ಜೆ, ಹೀಗೆ ವಿವಿಧ ಲಯಗಳಲ್ಲಿ ಕಲಾವಿದರು ಅನೇಕ ಭಾವ ಭಂಗಿಗಳಲ್ಲಿ ಬಾಗುತ್ತಾ, ಬಳುಕುತ್ತಾ ಕುಣಿಯುತ್ತಾರೆ. ಪರಿಣಿತ ಕಲಾವಿದರು ಪೂಜಾ ಕುಣಿತದಲ್ಲಿ ಅನೇಕ ಚಮತ್ಕಾರಗಳನ್ನು ತೋರುತ್ತಾರೆ. ಕುಶಲ ಕಲಾವಿದ ವಾದ್ಯದ ಬಡಿತಕ್ಕೆ ತಕ್ಕಂತೆ ಪೂಜೆಯನ್ನು ತನ್ನ ಕತ್ತಿನಿಂದಲೇ ಒಂದೊಂದೇ ದಿಕ್ಕಿಗೆ

ತಿರುಗಿಸುವಂತೆ ಮಾಡುವುದು ಬಹಳ ಸೊಗಸಾಗಿರುತ್ತದೆ. ಭಾರವಾದ ಪೂಜೆಯನ್ನು ಹೊತ್ತು ಸಾಲಾಗಿ ಬೋರಲಿಟ್ಟ ಮಡಿಗಳ ಮೇಲೆ ಅವು ಒಡೆಯದಂತೆ ತಾಳಕ್ಕೆ ತಕ್ಕಂತೆ ಒಂದೊಂದೇ ಹೆಜ್ಜೆ ಇಟ್ಟುಕೊಂಡು ನಡೆಯುವುದಂತು ಸೋಜಿಗವೆನಿಸುತ್ತದೆ. ಸಾಮಾನ್ಯವಾಗಿ ಈ ಸಂದರ್ಭದಲ್ಲಿ ಧರ್ಮವಾದ್ಯಗಳನ್ನು ಹೊಲೆಯರು ನುಡಿಸುತ್ತಾರೆ. ಜೊತೆಗೆ ಗ್ರಾಮದೇವತೆಯ ಮೇಲೆ ಹಾಡುಗಳನ್ನು ವಿವಿಧ ಜಾತಿಯವರು ಹಾಡುತ್ತಿರುತ್ತಾರೆ. ಪೂಜಾ ಕುಣಿತದಲ್ಲಿ ಅನೇಕ ವಿಧಗಳಿವೆ ತೊಟ್ಟಿಲು ಕುಣಿತ, ಹೆಜ್ಜೆ ಕುಣಿತ, ಗೆಜ್ಜೆ ಕುಣಿತ, ಸುತ್ತು ಕುಣಿತ, ಎದುರು ಕುಣಿತ ಮುಂತಾದವುಗಳಿವೆ. ಕೆಲವು ಪ್ರದೇಶಗಳಲ್ಲಿ ಪೂಜಾ ಕುಣಿತದ ಸಂದರ್ಭದಲ್ಲಿ ಐದಾರು ಜನ ತಮಟೆ ಬಾರಿಸುವವರಿರುತ್ತಾರೆ. ಪೂಜೆ ಹೊತ್ತವರಲ್ಲಿ ಕೆಲವರು ಚಿಕ್ಕ ಬಾಲಕರನ್ನು ಎರಡೂ ಕಡೆಯ ನಡುವಿನ ಮೇಲೆ ಕೂರಿಸಿಕೊಂಡು ಇಲ್ಲವೆ ಎರಡೂ ಕೈಯಲ್ಲೂ ಎರಡು ಪಟ ಹಿಡಿದುಕೊಂಡು ಕುಣಿಯುವ ಸಾಹಾಸವನ್ನು ಮಾಡುತ್ತಾರೆ. ಇದಲ್ಲದೆ ಪೂಜೆ ಹೊತ್ತು ಹಗ್ಗದ ಮೇಲೆ ನಡೆಯುವುದು, ನೆಲದ ಮೇಲಿರಿಸಿದ ನೋಟನ್ನು ತುಟಿಯಿಂದ ಕಚ್ಚಿ ಮೇಲೆತ್ತುವುದರ ಮೂಲಕ ಹಲವು ವಿಶೇಷತೆಗಳನ್ನು ನುರಿತ ಕೆಲವೇ ಕಲಾವಿದರು ಪ್ರದರ್ಶಿಸುತ್ತಾರೆ. ಕೆಲವೊಮ್ಮೆ ಪೂಜಾ ಕುಣಿತಕ್ಕೆ ಒಬಕೆ ಕುಣಿತವೂ ಸೇರ್ಪಡೆಯಾಗುತ್ತದೆ. ಇದರಲ್ಲಿ ಪರಿಣತಿ ಹೊಂದಿದ ವ್ಯಕ್ತಿ ಒನಕೆಯನ್ನು ತಲೆಯ ಮೇಲಿಟ್ಟು ಸಮತೋಲನ ಕಾಪಾಡಿಕೊಂಡು ಕುಣಿಯುವುದು ಪೂಜಾ ಕುಣಿತಕ್ಕಿಂತಲೂ ಭಿನ್ನ ಹಾಗೂ ವಿಶಿಷ್ಟವೆನಿಸುತ್ತದೆ.

ಪೂಜಾ ಕುಣಿತ ಗ್ರಾಮ ದೇವತೆಗಳ ಹಬ್ಬ ಹರಿದಿನ, ಜಾತ್ರೆ, ಉತ್ಸವಗಳ ಸಂದರ್ಭಗಳಲ್ಲಿ ಪ್ರದರ್ಶನಗೊಳ್ಳುತ್ತದೆ. ಪೂಜಾಕುಣಿತಕ್ಕೆ ಭಯ, ಭಕ್ತಿ, ನೇಮನಿಷ್ಠೆಗಳಿವೆ. ಪೂಜೆ ಹೊತ್ತು ಕುಣಿಯುವವರನ್ನು ದೇವರ ಅವತಾರ ಪುರಷರೆಂದು ಭಾವಿಸಿ ಅವರಿಗೆ ಅಪಾರ ಗೌರವಾದರಗಳು ಸಲ್ಲುತ್ತವೆ. ಹಲವು ಹಬ್ಬಗಳಲ್ಲಿ ಇತರೆ ಊರುಗಳಿಂದ ಆಹ್ವಾನಿಸಲಾದ ಹತ್ತಾರು ದೇವತೆಗಳು ಒಂದೆಡೆ ಸೇರಿ ಹತ್ತಾರು ಪೂಜಾ ಕುಣಿತ ತಂಡಗಳ ನಡುವೆ ಸ್ಪರ್ದೆ, ಪೈಪೋಟಿ ಏರ್ಪಡುವುದರಿಂದ ಈ ಸ್ಪರ್ಧಾತ್ಮಕ ಕುಣಿತ ನೋಡುವುದು ಕಣ್ಣಿಗೆ ಹಬ್ಬವೆನಿಸುತ್ತದೆ.

ಮರಗಾಲು

ಊರದೇವತೆಯ ಜಾತ್ರೆ, ಹಬ್ಬ, ಮತ್ತು ಉತ್ಸವಗಳಲ್ಲಿ ಮರಗಾಲಿನ ವಿನೋದಾವಳಿ ಸರ್ವಸಾಮಾನ್ಯವಾಗಿರುತ್ತದೆ. ಇದು ಯಾವುದೇ ಜಾತಿ ಸಮುದಾಯದವರಿಗೆ ಸೀಮಿತವಾಗಿಲ್ಲ, ಉತ್ಸಾಹ ಇರುವ ಯುವಕ ಇದರಲ್ಲಿ ಭಾಗವಹಿಸುತ್ತಾನೆ. ನಡೆಯಲು ಉಪಯೋಗಿಸುವ ಮರ ಹಗುರವಾಗಿಯೂ ಗಟ್ಟಿಯಾಗಿಯೂ ಇರಬೇಕು. ಸಾಮಾನ್ಯವಾಗಿ ಮರಗಾಲಿನ ತಯಾರಿಗೆ ಹಾಲುವಾಣದ ಮರವನ್ನು ಉಪಯೋಗಿಸುತ್ತಾರೆ. ಈ ಮರದ ಎರಡು ತುಂಡುಗಳ ಮೇಲೆ ಪಾದವೂರಲು ಅನುಕೂಲವಾಗುವಂತೆ ಇರುತ್ತದೆ. ಅಂಥ ಪುಟ್ಟ ಹಲಗೆಯ ಕೆಳಕ್ಕೆ ಮರಗಾಲು ಎಷ್ಟು ಉದ್ದ ಬೇಕಾದರೂ ಇರಬಹುದು. ಈ ಮರಗಾಲುಗಳಿಗೆ ನಡು ನಡುವೆ ಗೆಜ್ಜೆ, ಕಟ್ಟಿರುತ್ತಾರೆ. ಮರಗಾಲನ್ನು ಕಟ್ಟಿಕೊಳ್ಳುವುದಕ್ಕೆ ಮೊದಲು ಮೊಳಕಾಲಿನವರೆಗೆ ಬಟ್ಟೆ ಸುತ್ತಿಕೊಳ್ಳುವರು ಆ ಮೇಲೆ ಹಿಮ್ಮಡಿಯ ಮೇಲೆ ಹೆಜ್ಜೆ ಭಾರ ಬೀಳುವಂತೆ ಮರಗಾಲುಗಳ ಮೇಲೆ ನಿಂತು

ಅದನ್ನು ಭದ್ರವಾಗಿ ಕಾಲಿಗೆ ಕಟ್ಟುತ್ತಾರೆ. ಕಟ್ಟಿಕೊಳ್ಳಲು ಸೆಣಬಿನ ದಾರ ಇಲ್ಲವೆ ಬಾಳೆಯ ಪಟ್ಟೆ ಬಳಸುತ್ತಾರೆ. ಮರಗಾಲು ಕುಣಿತ ಕಲಿಯುವ ಮೊದಲು ಸಹಾಯಕರು ಬೇಕು. ಇಲ್ಲದಿದ್ದರೆ ಅಪಾಯ ಇದ್ದೇ ಇರುತ್ತದೆ. ಕೆಲವು ಕಡೆ ಮರಗಾಲಿನ ಪುರುಷರು ಸ್ತ್ರೀವೇಷ ಹಾಕುವುದುಂಟು. ಮರಗಾಲಿನ ಹೆಣ್ಣು ಗಂಡ ಛತ್ರಿ ಹಿಡಿದು ನಡೆಯುವುದುಂಟು, ಛತ್ರಿಯು ನಡೆಯುವಾಗ ಸಮತೋಲನ ಕಾಪಾಡುತ್ತದೆ. ವಾದ್ಯ ಸಮೂಹಗಳಲ್ಲಿ ಇವರು ನಡೆಯುತ್ತ ಮರಗಾಲಿನ ಮೇಲೆ ನಿಂತೇ ಕೆಲವು ವಿನೋದಾವಳಿಯನ್ನು ಜನಕ್ಕೆ ಉಂಟುಮಾಡುತ್ತಾರೆ.

ಯಕ್ಷಗಾನ

ಯಕ್ಷಗಾನ ಬಯಲಾಟಗಳಲ್ಲಿ ಪ್ರಾದೇಶಿಕವಾಗಿ ಅನೇಕ ಪ್ರಭೇದಗಳಿವೆ. ಕರಾವಳಿ ಯಕ್ಷಗಾನ ಕರ್ನಾಟದ ಕರಾವಳಿ ಪ್ರದೇಶದಲ್ಲಿ ಪ್ರಚಲಿತವಿರುವ ಒಂದು ರಂಗ ಸಂಪ್ರದಾಯ ಶಿವರಾಮ ಕಾರಂತರು ಯಕ್ಷಗಾನ ರಂಗಭೂಮಿ ಕ್ರಿ.ಶ. ೧೪೦೦-೧೫೦೦ರ ಅವಧಿಯಲ್ಲಿ ಹುಟ್ಟಿರಬಹುದೆಂದು ಊಹಿಸಿದ್ದಾರೆ. ಆಟ ಆಡಿಸುವ ಸ್ಥಳ ರಂಗಸ್ಥಳ ನಾಲ್ಕು ಬಿದಿರು ಅಥವಾ ಕಂಬಗಳನ್ನು ಕಟ್ಟಿ ಮಾವಿನ ತೋರಣಗಳಿಂದ ಅಲಂಕರಿಸಲಾಗುತ್ತದೆ. ಹಿಮ್ಮೇಳದವರಿಗೆ ಕುಳಿತುಕೊಳ್ಳಲು ಒಂದು ಮಂಚ ಅಥವಾ ಮೇಜು ಪಾತ್ರದಾರಿಗಳಿಗೆ ಕುಳಿತುಕೊಳ್ಳಲು ಒಂದು ಕುರ್ಚಿ ಇಡಲಾಗುವುದು ಯಕ್ಷಗಾನಕ್ಕೆ ಹಿಮ್ಮೇಳ ಒದಗಿಸುತ್ತಿರುವ ವಾದ್ಯಪರಿಕರಗಳೆಂದರೆ ಚೆಂಡೆ, ಮದ್ದಳೆ, ಶ್ರುತಿ, ತಾಳ ಇಲ್ಲವೆ ಜಾಗಟೆ. ಗಾನ ಅಥವಾ ಹಾಡುಗಾರಿಕೆ ಕುಣಿತ ಯಕ್ಷಗಾನದ ಪ್ರಮುಖ ಅಂಗ, ಹಾಡುಗಾರಿಕೆ ಇಲ್ಲಿ ಮುಮ್ಮೇಳದ ಕುಣಿತ ಮತ್ತು ಅಭಿನಯಕ್ಕೆ ಪೂರಕ ಕುಣಿತಕ್ಕೆ ತಕ್ಕಂತೆ ಅಭಿನಯವಿರಬೇಕಾದದ್ದು ಅನಿವಾರ್ಯ ಜಿಗಿತ, ಮೈಚಲನ, ಅಂಗಚಲನೆ, ಹುಬ್ಬುಗಳಚಲನೆ ಇವುಗಳಿಂದ ಪ್ರೇಕ್ಷಕ ತನ್ಮಯನಾಗುವಂತೆ ಮಾಡುವ ಶಕ್ತಿ ಯಕ್ಷಗಾನಕ್ಕಿದೆ. ಯಕ್ಷಗಾನ ಕುಣಿತದಲ್ಲಿ ನವರಸಗಳನ್ನು ಅಭಿವ್ಯಕ್ತಿಸಲು ಅವಕಾಶವಿದೆ. ಅದರಲ್ಲೂ ವೀರ, ಶೃಂಗಾರ, ಹಾಸ್ಯ ಮತ್ತು ಶೋಕರಸಗಳ ಬಳಕೆಯೇ ಹೆಚ್ಚು ಕರಾವಳಿ ಯಕ್ಷಗಾನದಲ್ಲಿ ಲಿಖಿತ ಸಂಭಾಷಣೆಗಳಿಲ್ಲ, ರಾಮಾಯಣ, ಮಹಾಭಾರತ, ಭಾಗವತಗಳಿಂದ ಅಂಭಿಕೂಂಡ ಭಾಗವನ್ನು ಹಾಡಲಾಗುತ್ತದೆ. ಯಕ್ಷಗಾನದ ಪ್ರಾರಂಭದಲ್ಲಿ ಚಂಡೆ ಬಡಿಯಲಾಗುವುದು ಇದಕ್ಕೆ ಇದು ಒಂದು ಊರಿನಲ್ಲಿ ಯಕ್ಷಗಾನ ನಡೆಯಲಿದೆ ಎಂಬುದರ ಸೂಚನೆ. ಚಂಡೆ ಮದ್ದಳೆಗಳ ಝೇಂಕಾರ ಕೇಳಿದೊಡನೆ ಸುತ್ತಲೂ ಇರುವ ಹಳ್ಳಿಗರು ಅಂದಿನ ಆಟವನ್ನು ನೋಡಲು ಸಿದ್ಧರಾಗಿ ಹೋರಡುತ್ತಾರೆ. ಯಕ್ಷಗಾನವೆಂದರೆ ಬೆಳಗಿನವರೆಗೆ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುವ ಅಪೂರ್ವಕಲೆ ಇದರ ವಿಧಾನಗಳು, ಪ್ರಸಂಗಗಳ ವ್ಯಾಪ್ತಿ ವಿಶಾಲವಾಗಿದೆ. ಆದುದರಿಂದ ಇಲ್ಲಿ ಯಕ್ಷಗಾನ ಒಂದು ಪ್ರಮುಖ ವಿನೋದದ ಕಲೆ ಎಂದು ಹೇಳಲು ಪ್ರಯತ್ನಿಸಲಾಗಿದೆ ಅಷ್ಟೇ.

ಗಾರುಡಿ ಗೊಂಬೆ

ಬಿದಿರಿನ ದಬ್ಬೆಗಳನ್ನು ಬಳಸಿ ರೂಪಿಸಿರುವ ಗೊಂಬೆ. ಇಂಥ ಎರಡು ಗೊಂಬೆಗಳು ಈ ಪ್ರದರ್ಶನದಲ್ಲಿರುತ್ತವೆ. ಒಂದು ಗಂಡು, ಒಂದು ಹೆಣ್ಣು ಹತ್ತರಿಂದ ಹನ್ನೆರಡು ಅಡಿ

ಇದ್ದು, ಎತ್ತರಕ್ಕೆ ತಕ್ಕ ಗಾತ್ರದಲ್ಲಿ ರಚಿಸಲಾಗುತ್ತದೆ. ಹೆಣ್ಣು ಗೊಂಬೆಯು ಗಂಡು ಗೊಂಬೆಗಿಂತ ಎತ್ತರದಲ್ಲಿ ಒಂದೆರಡು ಅಡಿ ಕಡಿದು ಇರುತ್ತದೆ ಈ ಗೊಂಬೆಯ ಹೆಸರು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆ.

ಗೊಂಬೆಯ ಸೊಂಟದ ಎತ್ತರದಲ್ಲಿ ಒಳಗೆ ಗಟ್ಟಿ ಮುಟ್ಟಾದ ದಬ್ಬೆ ಅಥವಾ ಹಲಗೆಗಳನ್ನು ಜೋಡಿಸಿರುತ್ತಾರೆ. ಗೊಂಬೆಯನ್ನು ಹೊರುವವರ ತಲೆಯ ಮೇಲೆ ಈ ಹಲಗೆಗಳು ಕುಳಿತುಕೊಳ್ಳುತ್ತವೆ. ಅದೇ ಎತ್ತರದಲ್ಲಿ ಸಣ್ಣ ಕಿಂಡಿಗಳಿದ್ದು ಆ ಕಿಂಡಿಗಳ ಮೂಲಕ ಕಲಾವಿದ ಹೊರಗೆ ನೋಡಲು ಸಾಧ್ಯವಾಗುತ್ತದೆ.

ಗಂಡು ಗೊಂಬೆ ಕೈಯಲ್ಲಿ ಪುಂಗಿ ಹಿಡಿದು ಊದುತ್ತಿರುವಂತೆಯೂ, ಹೆಣ್ಣು ಗೊಂಬೆ ಎರಡೂ ಕೈಗಳನ್ನು ಸೊಂಟದ ಮೇಲಿಟ್ಟುಕೊಂಡು ನರ್ತಿಸುತ್ತಿರುವಂತೆಯೂ ರಚನೆಗೊಂಡಿವೆ. ಈ ಗೊಂಬೆಗಳಿಗೆ ವಸ್ತ್ರಗಳನ್ನು ಹಾಕಿ ಅಲಂಕಾರ ಮಾಡಿರುತ್ತಾರೆ. ಈ ಗೊಂಬೆಗಳ ಕುಣಿತಕ್ಕೆ ನಿರ್ದಿಷ್ಟ ವಾದ್ಯಗಳೇನು ಇರುವುದಿಲ್ಲ. ತಮಟೆ, ವಾಲಗ, ಡೋಲು ಯಾವುದಾದರೂ ಆಗಬಹುದು. ವಾದ್ಯದ ಸದ್ದಿಗೆ ತಕ್ಕ ಹೆಜ್ಜೆ ಹಾಕುತ್ತಾ, ಗೊಂಬೆಗಳನ್ನು ಎಡಕ್ಕೂ ಬಲಕ್ಕೂ ಹಿಂದಕ್ಕೂ ಮುಂದಕ್ಕೂ ಬಾಗಿಸುತ್ತಾ ಕುಣಿಯುವುದು ಆ ಕಲಾವಿದರ ಕೆಲಸ. ಹಬ್ಬ-ಹರಿದಿನಗಳಲ್ಲಿ ಜಾತ್ರೆ ಉತ್ಸವ, ಮೆರವಣಿಗೆಗಳಲ್ಲಿ ಈ ಗೊಂಬೆಗಳ ಮನರಂಜನೆ ಇರುತ್ತದೆ.

ಸಾಹಿತ್ಯಿಕ ವಿನೋದಾವಳಿ

ಪ್ರಸಿದ್ಧ ತತ್ವಜ್ಞಾನಿ, ಸಾಹಿತಿ, ಕವಿಗಳು ವಿಜಯನಗರ ಆಸ್ಥಾನದಲ್ಲಿದ್ದುದರಿಂದ ಅಲ್ಲಿ ನಡೆಯುತ್ತಿದ್ದ ಸಾಹಿತ್ಯಿಕ ಮತ್ತು ತಾತ್ವಿಕ ವಾಗ್ವಾದಗಳು ಆಸ್ಥಾನಿಕರಿಗೆ ಕುತೂಹಲಕಾರಿಯಾಗಿರುತ್ತಿದ್ದವು. ಅರಸರು ಮತ್ತು ಗಣ್ಯರು ಜ್ಞಾನಾರ್ಜನೆಯ ಕಲಿಕೆಯನ್ನು ಗೌರವಿಸಿದ್ದರು ಮತ್ತು ಕಲಿತವರನ್ನು ಉದಾರವಾಗಿ ಪ್ರೋತ್ಸಾಹಿಸುತ್ತಿದ್ದರು. ಅರಸನು ಆಗಾಗ ತತ್ವಜ್ಞಾನಿಗಳೊಂದಿಗೆ ಚರ್ಚೆ ಮಾಡುತ್ತಿದ್ದ ಅಚ್ಯುತರಾಯನು ತಾತ್ವಿಕ ವಿಷಯಗಳಲ್ಲಿ ಆಸಕ್ತನಾಗಿದ್ದು ಅವನು ವಿರಾಮದ ಸಮಯದಲ್ಲಿ ಅದ್ವ ಮತ್ತು ಸದ್ವ ಪದಗಳ ಜಿಜ್ಞಾಸೆಯಲ್ಲಿ ಕಳೆಯುತ್ತಿದ್ದ.[೨೮] ಕೃಷ್ಣದೇವರಾಯನು ಮಧ್ಯಾಹ್ನದ ಅವಧಿಯನ್ನು ತತ್ವಜ್ಞಾನಿಗಳೊಂದಿಗಿನ ಚರ್ಚೆಗಳಿಗೆ ಮಿಸಲಿಟ್ಟಿದ್ದ. ರಾಮರಾಜನು ಸಾಹಿತ್ಯ ಮತ್ತು ಸಂಗೀತ ಪ್ರಜ್ಞರ ನಡುವೆ ಕಳೆಯುತ್ತಿದ್ದ. ವೆಂಕಟಪತಿರಾಯನು ಧರ್ಮಬೋಧಕರೊಂದಿಗೆ ಆಗಾಗ ಸಂವಾದ ನಡೆಸುತ್ತಿದ್ದ. ಬೇರೆ ಬೇರೆ ಭಾಗಗಳ ತತ್ವಜ್ಞಾನಿಗಳೂ ಇಲ್ಲಿನ ಆಸ್ಥಾನ ಪಂಡಿತರಿಗೆ, ತಜ್ಞರಿಗೆ ಸವಾಲೆಸೆದು ಸೋಲಿಸಿ ಅರಸರ ಮೆಚ್ಚುಗೆ ಗಳಿಸುವ ಸಲುವಾಗಿ ಇಲ್ಲಿಗೆ ಬರುತ್ತಿದ್ದರು. ಅರಸನೇ ಈ ರೀತಿಯ ಏರ್ಪಾಡನ್ನು ಕೆಲವೊಮ್ಮೆ ಮಾಡುತ್ತಿದ್ದನು. ಆಗಿನ ದೊಡ್ಡ ತತ್ವಜ್ಞಾನಿಗಳು ತಮ್ಮ ವಾಙ್ಮಯತೆ ಮತ್ತು ವಿಷಯ ಪರಿಣಿತಿಯಿಂದ ಆಸ್ಥಾನವನ್ನು ದಂಗು ಬಡಿಸುತ್ತಿದ್ದಿರಬೇಕು. ವಿಜಯನಗರ ಆಸ್ಥಾನದಲ್ಲಿ ಸಾಹಿತ್ಯ ಪ್ರತಿಭೆಗಳಾದ ಶ್ರೀನಾಥ, ಜಕ್ಕಣ್ಣ, ಅಲ್ಲಾಸಾನೀ ಪೆದ್ದನ್ನ, ಮುಕ್ಕುತಿಮ್ಮನ್ನ, ಧೂರ್ಜಟಿ, ಪಿಂಗಾಳಿ ಸೂರನ್ನ, ನಂದಿ ತಿಮ್ಮನ್ನ, ತೆನಾಲಿ ರಾಮಕೃಷ್ಣ ಮತ್ತಿತರ ಕವಿಗಳು ತಮ್ಮ ಕಾವ್ಯ ರಚನೆಗಳಿಂದ ಆಸ್ಥಾನ ಮಂದಿಯನ್ನು ರಂಜಿಸುತ್ತಿದ್ದರು. ಇತರ ಪ್ರಾಜ್ಞರು ಅವುಗಳನ್ನು ವಿಮರ್ಶಿಸುತ್ತಿದ್ದರು. ಆಲೋಚನೆಯ

ಸ್ವಂತಿಕೆ ಭಾವನೆಗಳ ಭವ್ಯತೆ, ಜ್ಞಾನ, ಪದಸಂಪತ್ತು, ಶೈಲಿ, ಮುಂತಾದ ಅಂಶಗಳು ಉತ್ತಮ ಸಾಹಿತ್ಯ ಕೃತಿಯ ಲಕ್ಷಣಗಳಾಗಿದ್ದವು. ಕಾವ್ಯಗಳನ್ನು ರಚನೆ ಮಾಡಬಲ್ಲಂಥ ಮಹಿಳೆಯರೂ ಇದ್ದರು.

ಈ ಖಚಿತ ಮಾಹಿತಿಯು ವಿಜಯನಗರ ಆಸ್ಥಾನ ಕವಿಗಳ ಘನತೆಯನ್ನು ತೋರಿಸುತ್ತದೆ ಮತ್ತು ಅವರಿಂದ ಆಸ್ಥಾನದಲ್ಲಿ ವಿನೋದಾವಳಿ ಸಮೃದ್ಧವಾಗಿ ದೊರೆಯುತ್ತಿದ್ದಿರಬೇಕು. ಅವರಲ್ಲಿ ಹಲವರು ತಮ್ಮ ಸುಂದರ ಮತ್ತು ಸುಮಧುರ ರಚನೆಗಳಿಗಾಗಿ ಬಿರುದು ಬಾವಲಿಗಳಿಂದ ಸನ್ಮಾನಿತರಾಗುತ್ತಿದ್ದರು. ಕೃಷ್ಣದೇವರಾಯನೂ ಮೇಲ್ಮಟ್ಟದ ಕವಿಯಾಗಿದ್ದ ಎಂಬುದಕ್ಕೆ ಅವನು ರಚಿಸಿದ ಕೃತಿಗಳು ದಾಖಲೆಯಾಗಿವೆ. ಅವನು ಕವಿಗಳನ್ನು ರಾಜಸ್ನೇಹಿತರಾಗಿ ಭಾವಿಸಿದ್ದ ಮತ್ತು ಅವರ ಸಾಮಿಪ್ಯದಲ್ಲಿರಲು ಬಯಸುತ್ತಿದ್ದ ಯುವರಾಜ ಕಂಪಣನಿಗೆ ಕವಿಗಳ ಕಾವ್ಯವಾಚನ ಕೇಳಲು ಇಷ್ಟ.[೨೮೮]

ಎರಡನೆಯ ಹರಿಹರ, ಎರಡನೆಯ ದೇವರಾಯ, ಮಲ್ಲಿಕಾರ್ಜುನ, ವಿರುಪಾಕ್ಷ ವೆಂಕಟಪತಿ, ರಾಮರಾಜರು ತಮ್ಮ ಆಸ್ಥಾನ ಕವಿಗಳ ವಾಚನ ಬಯಸುತ್ತಿದ್ದರು. ಮತ್ತು ಆಸ್ಥಾನ ಕವಿಗಳ ನಡುವೆ ಸನ್ಮಾನ ಮತ್ತು ಬಿರುದುಗಳಿಗಾಗಿ ಸಾಹಿತ್ಯಿಕ ಸ್ಪರ್ಧೆಗಳು ನಡೆಯುತ್ತಿದ್ದುದರಿಂದ ಆಸ್ಥಾನದಲ್ಲಿ ಸಾಕಷ್ಟು ವಿನೋದ ದೊರೆಯುತ್ತಿತ್ತು.

ಅಂದು ಅರಸರ ಜೊತೆ ಕವಿಗಳೂ ಕೂಡ ದಂಡಯಾತ್ರೆಗಳಿಗೆ ಹೊರಡುತ್ತಿದ್ದರು. ರಾಯವಾಚಕದಲ್ಲಿ ಬರುವಂತೆ ದಂಡೆಯಾತ್ರೆಯ ಸಂದರ್ಭದಲ್ಲಿ ಕೃಷ್ಣದೇವರಾಯನು ಕವಿಗಳನ್ನು ವಿಜಯ ಗೀತೆ ರಚಿಸಲು ಕೇಳುತ್ತಾನೆ. ಅಲ್ಲಿಯ ಮುಕ್ಕುತಿಮ್ಮಣ್ಣ ಒಂದು ಕವಿತೆಯನ್ನು ಬರೆಯುತ್ತಾನೆ.[೨೮೯]

ವಿದೂಷಕರು ವಾತಾವರಣವನ್ನು ಹಗುರಗೊಳಿಸಿ ಆಸ್ಥಾನಿಕರನ್ನು ನಗಿಸುತ್ತಿದ್ದರು. ಇವರು ಅರಸರ ಬಳಿಯೇ ಇರುತ್ತಿದ್ದು ಅವನ ಮನಸ್ಸನ್ನು ಖುಷಿಯಾಗಿಡುತ್ತಿದ್ದರು. ಹಾಸ್ಯಪ್ರಜ್ಞೆಗೆ ಜನಪ್ರಿಯನಾಗಿದ್ದ ಅರಸನ ನಂಬಿಕಸ್ಥ ಇವನಾಗಿದ್ದು ಇವನಿಗೆ ಅರಮನೆಯ ರಾಜ ಕೊಠಡಿಯವರೆಗೂ ಪ್ರವೇಶದವಕಾಶವಿತ್ತು. ತೆನಾಲಿ ರಾಮಕೃಷ್ಣ ಕವಿಯು ಸೂಕ್ಷ್ಮ ಮತ್ತು ವಾಸ್ತವ ಹಾಸ್ಯ ಪ್ರಜ್ಞೆಗೆ ಜನಪ್ರಿಯನಾಗಿದ್ದ. ಒಮ್ಮೆ ಕುದುರೆ ಸಾಕಲು ಕೃಷ್ಣದೇವರಾಯನಿಂದ ಅನುಮತಿ ಪಡೆದ ಅದಕ್ಕಾಗಿ ಹಣ ಪಡೆದಿದ್ದ ಆದರೆ ರಾಮಕೃಷ್ಣನು ಪುಟ್ಟ ಕಿಂಡಿಯನ್ನು ಮಾಡಿ ಸಣ್ಣ ಕೋಣೆಯಲ್ಲಿ ಕೂಡಿಹಾಕಿ ಅದನ್ನು ಉಪವಾಸ ಕೆಡವಿದ್ದ. ಪರಿಶೀಲಿಸುವ ದಿನ ರಾಜನಲ್ಲಿಗೆ ಬಂದು, ಕುದುರೆ ಹೆಚ್ಚು ತಿಂದು ಕೊಬ್ಬು ಬೆಳೆದಿರುವುದರಿಂದ ಅದನ್ನು ಸಾಗಿಸಲು ಯಾರನ್ನಾದರೂ ಕಳಿಸಬೇಕೆಂದು ವಿನಂತಿಸಿಕೊಂಡು ರಾಜನು ಒಬ್ಬ ಮುಸ್ಲಿಂ ಅಧಿಕಾರಿಯನ್ನು ಕಳುಹಿಸಿದ. ತೆನಾಲಿರಾಮ ಅವನಿಗೆ ಕಿಂಡಿಯಿಂದ ನೋಡಲು ಹೇಳಿದ ಕಿಂಡಿಯಿಂದ ಆ ಸರ್ದಾರನ ದಾಡಿಯನ್ನು ಕಂಡ ಕುದುರೆ ಹುಲ್ಲೆಂದು ಭಾವಿಸಿ ತಿನ್ನಲೆಳೆದಾಗ ಅವನಿಗೆ ನೋವು ಹೆಚ್ಚಾಗಿದ್ದರಿಂದ ಓಡಿಹೋದ[೨೯೦] ಇಂಥ ಹಲವು ತಮಾಷೆಯ ಕತೆಗಳು ಅವನ ಸುತ್ತ ಹಬ್ಬಿದ್ದವು ಅವು ಆಸ್ಥಾನಿಕರಲ್ಲಿ ನಗೆಯ ಅಲೆಯನ್ನೆಬ್ಬಿಸುತ್ತಿದ್ದವು.

ವಿನೋದಾವಳಿಗಳು ನಮ್ಮ ಪೂರ್ವಿಕರ ಕಾಲದಿಂದಲೂ ನಡೆದುಕೊಂಡು ಬಂದ ಜೀವನದ ಒಂದು ಭಾಗವಾಗಿವೆ. ವಿಜಯನಗರ ಜನಗಳಲ್ಲಿ ಇವು ಹಾಸುಹೊಕ್ಕಾಗಿದ್ದವು. ಅವರು ವಿನೋದಾವಳಿಗಳಾಗಿ ಹಬ್ಬಗಳನ್ನು ಆಚರಿಸುವುದರ ಮೂಲಕ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನೆರವೇರಿಸಿಕೊಳ್ಳುತ್ತಿದ್ದರು. ಪ್ರತಿಯೊಂದು ಹಬ್ಬದಲ್ಲಿಯೂ ವಿಶೇಷವಾದ ಅಡುಗೆಮಾಡಿ ನೆಂಟರಿಷ್ಟರೆಲ್ಲ ಒಂದು ಕಡೆ ಸೇರಿ, ಸೇವಿಸುತ್ತಿದ್ದರು. ಹಬ್ಬಗಳ ಸಂದರ್ಭದಲ್ಲಿ ವಿಶೇಷವಾದ ಕ್ರೀಡೆಗಳನ್ನಾಡುತ್ತಾ ಕಾಲಕಳೆಯುತ್ತಿದ್ದರು. ಯಾವುದೇ ಒಂದು ಶುಭ ಸಮಾರಂಭಗಳು ಜರುಗಿದರೂ ಅದರಲ್ಲಿ ನೃತ್ಯ, ಸಂಗೀತ, ಇತ್ಯಾದಿ ಕಾರ್ಯಕ್ರಮಗಳಿರುತ್ತಿದ್ದವು. ದೇವಾಲಯಗಳಲ್ಲಿ ದಿನನಿತ್ಯ ಪೂಜಾ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಸಂಗೀತ, ನೃತ್ಯ ಕಾರ್ಯಕ್ರಮಗಳು ಹಮ್ಮಿಕೊಳ್ಳುತ್ತಿದ್ದರು.

ಪ್ರತಿವರ್ಷ ತಮ್ಮ ಇಷ್ಟ ದೇವತೆಯಾದ ವಿರೂಪಾಕ್ಷ ಜಾತ್ರಾ ಸಮಯದಲ್ಲಿ ವಿಜೃಂಭಣೆಯಿಂದ ಕಾಲಕಳೆಯುತ್ತಿದ್ದರು. ಅರಸರೊಂದಿಗೆ ಜನಗಳು ಬೇಟೆಗೆ ಹೋಗಿ ಮನರಂಜನೆಯಲ್ಲಿ ತೊಡಗುತ್ತಿದ್ದರು. ಒಟ್ಟಾರೇ ವಿಜಯನಗರ ಅವಧಿಯಲ್ಲಿ ವಿನೋದಾವಳಿಗೆ ಕೊರತೆಯಿರಲಿಲ್ಲ. ಅವು ಅರಸರಾದಿಯಾಗಿ ಸಾಮಾನ್ಯ ಜನರ ಜೀವನದಲ್ಲಿ ಹಾಸುಹೊಕ್ಕಾಗಿದ್ದವು.

ಟಿಪ್ಪಣಿಗಳು

೧. ರಂಗಪ್ರಿಯ ಶ್ರೀಶ್ರೀ,. ಭಾರತೀಯ ಹಬ್ಬ ಹರಿದಿನಗಳು, ಪು-೧.
೨. ವಿರಕ್ತಮಠ ಶಿವಾನಂದ,. ಪ್ರೌಢದೇವರಾಯನ ಕನ್ನಡ ಕಲದ ಸಾಹಿತ್ಯ, ಪು-೫೮.
೩. ಸಜ್ಜನ್ ಎಸ್., (ಎಂಫಿಲ್ ಅಪ್ರಕಟಿತ ನಿಬಂಧ) ವಿಜಯನಗರ ಕಾಲದ ಹಬ್ಬ ಮತ್ತು ಜಾತ್ರೆಗಳು, ಪು-೭.
೪. ಕುಂದೂರಿ ಸರೋಜನಿದೇವಿ,. ರಿಲಿಜಿಯಸ್ ಇನ್ ವಿಜಯನಗರ ಎಂಪಾಯರ್, ಪು-೨೮೪.
೫. ಪಂಚಮುಖಿ ಆರ್.ಎಸ್., ಅಹೋಬಲನ ವಿರೂಪಾಕ್ಷ ವಸಂತೋತ್ಸವ, ಪು-೨೦.
೬. ಸೋಮಶೇಖರ್ ಎಸ್. ವೈ. ಹಂಪಿಯ ಬಜಾರುಗಳು, ಪು-೯
೭. ಶಿವತ್ವಚಿಂತಾಮಣಿ, ಸಂ-೩೮-ಪ-೫೫೪
೮. ಸೋಮಶೇಖರ್, ಪೂರ್ವೋಕ್ತ, ಪು-೧೦.
೯. ರಾಬರ್ಟ್ ಸಿವೆಲ್, ಪರ್‌ಗಾಟನ್ ಎಂಪಾಯಿರ್, ಪು-೮೪.
೧೦. ಅದೇ, ಪು-೨೬೨.
೧೧. ಲಿನ್ಸಾಕ್ಟನ್ ಪರ್ಚೇಸ್ ಫಿಲಿಗ್ರಾಮ್ಸ್ ಸಂ-೧೦, ಪು-೨೭೪.
೧೨. ವೇಗಾ ಪರ್ಚೇಸ್ ಫಿಲಿಗ್ರಾಮ್ಸ್ ಸಂ-೧೦, ಪು-೨೨೨.
೧೩. ಸಾಲೆತೊರೆ, ಬಿ.ಎ., ಸೋಶಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪಾಯರ್ ಭಾಗ-೨ ಪು-೩೮೨.
೧೪. ಎ.ಕ. ೧೦, ಕೆ.ಐ. ಸಂ-೩೪, ಪು-೮.
೧೫. ಎ.ಕ. ೯, ಡಿ.ಜಿ. ಸಂ-೩೦,೮೩, ಪು-೪೬-೬೬.

೧೬. ಸಾಲೆತೊರೆ ಬಿ.ಎ., ಪೂರ್ವೋಕ್ತ, ಪು-೮೩.

೧೭. ಎ.ಆರ್. ರಿಪೋರ್ಟ್ ಪಾರ್, ೧೯೧೪, ಪು-೯೯.

೧೮. ಸಾಲೆತೊರೆ ಬಿ.ಎ., ಪೂರ್ವೋಕ್ತ, ಪು-೩೯೪.

೧೯. ಅದೇ, ಪು-೩೯೪.

೨೦. ಎ.ಆರ್. ರಿಪೋರ್ಟ್ ಪಾರ್, ೧೯೧೮, ಪು-೫೩.

೨೧. ಎ.ಕ. ೩, ಟಿ.ಎನ್. ೧೨೦, ಪು-೯೧-೯೨.

೨೨. ಸೋಮಶೇಖರ್ ಎಸ್.ವೈ., ಹಂಪೆಯ ಬಜಾರುಗಳು, ಪು-

೨೩. ರಾಜಶೇಖರ್ ಎಸ್., ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಪು-೪೧.

೨೪. ಪಂಡಿತ್ ಎಸ್.ಬಸಪ್ಪ.,(ಸಂ) ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ, ಪು೨೫೨.

೨೫. ಎಸ್.ಐ.ಐ., ೪. ಸಂ-೨೫೪.

೨೬. ಅದೇ, ಸಂ-೨೭೮.

೨೭. ಎಸ್.ಐ.ಐ., ೯, ಭಾಗ-೨, ಸಂ-೫೧೮.

೨೮. ಅದೇ, ಸಂ-೫೭೯.

೨೯. ಎ.ಕ. ೬, ಶ್ರೀರಂಗಪಟ್ಟಣ, ಸಂ-೧೨೯.

೩೦. ಎಸ್.ಐ.ಐ., ೯, ಭಾಗ-೨, ಸಂ-೬೬೫.

೩೧. ಸಾಲೆತೊರೆ ಬಿ.ಎ., ಪೂರ್ವೋಕ್ತ, ಪು-೩೭೩.

೩೨. ರಾಬರ್ಟ್ ಸೆವೆಲ್, (ಮೂಲ) ಸದಾನಂದ ಕನವಳ್ಳಿ (ಅನು) ಮರೆತುಹೋದ ಮಹಾಸಾಮ್ರಜ್ಯ ವಿಜಯನಗರ, ಪು-೯೫-೯೭

೩೩. ಅದೇ ಪು-೨೬೮.

೩೪ಬಿ. ಅದೇ, ಪು- ೨೭೨.

೩೫. ಭ. ವೈ. ೨೦-೭೧.

೩೬. ಅದೇ, ಪು-೨೬೭-೨೭೬.

೩೭. ಸಾಲೆತೊರೆ ಬಿ.ಎ., ಪೂರ್ವೋಕ್ತ, ಪು-೩೮೪-೩೮೫.

೩೮. ಅದೇ, ಪು-೩೮೬.

೩೯. ಅದೇ, ಪು-೩೮೭.

೪೦. ಕೂಂದೂರಿ ಸರೋಜನಿದೇವಿ, ಪೂರ್ವೋಕ್ತ, ಪು-೨೭೮.

೪೧. ಕ.ವಿ.ವಿ., ಶಾಸನ ಸಂ-೩, ಪು-೩೦೭.

೪೨. ಕುಂದೂರಿ ಸರೋಜನಿದೇವಿ, ಪೂರ್ವೋಕ್ತ, ಪು-೨೭೭

೪೩. ಎಸ್.ಐ.ಐ. ೯, ಭಾಗ-೨, ಸಂ-೪೪೮.

೪೪. ಎ.ಕ. ೯, ಬೇಲೂರು, ಸಂ-೯೦.

೪೫. ಸಜ್ಜನ್ ಎಸ್, ಪೂರ್ವೋಕ್ತ, ಪು-೮೩.

೪೬. ಎಸ್.ಐ.ಐ. ೧೧(!!), ಸಂ-೪೪೮, ಕ್ರಿ.ಶ. ೧೪೪೨.

೪೭. ಎಸ್.ಐ.ಐ. ೧೧(!!), ಸಂ-೪೬೪, ಕ್ರಿ.ಶ. ೧೪೭೨.

೪೮. ಎಸ್.ಐ.ಐ. ೨೭-೧೦೮ (ಪ್ರೌಢದೇವರಾಯನ ಶಾಸನ ಪು-೨೧೬).

೪೯. ಎಸ್.ಐ.ಐ. ೭, ಸಂ–೩೩೬.
೫೦. ಎ.ಕ. ವಿ.ಪ.೧, ಹೆಚ್.ಎನ್. ೮೨, ಪು–೨೫.
೫೧. ಸಾಲೆತೊರೆ ಬಿ.ಎ., ಪೂರ್ವೋಕ್ತ, ಪು–೩೮೭.
೫೨. ಚಲುವೇಗೌಡ, ಚ.ಚಿ., ಕೆಲವು ಜನಪದ ಸಂಪ್ರದಾಯಗಳು, ಪು–೧೮೬.
೫೩. ಸಜ್ಜನ್ ಎಸ್., ಪೂರ್ವೋಕ್ತ, ಪು–೮೭.
೫೪. ಕನ್ನಡ ವಿಶ್ವಕೋಶ, ಸಂ–೧೨, ಪು–೭೩೯.
೫೫. ರಂಗಸ್ವಾಮಿ ಡಿ.ಟಿ., ಭಾರತದ ಹಬ್ಬಗಳು, ಪು–೧೦೫.
೫೬. ಅದೇ, ಪು–೧೦೫.
೫೭. ಹೂಗಾರ್ ಎಸ್.ಕೆ., ಕಲೆ ಮತ್ತು ಹಬ್ಬ, ಪು–೫೧.
೫೮. ಎ.ಆರ್. ನಂ.ಬಿ. ಸಂ–೮೨೯ ಆಫ್ ೧೯೬೨, ೬೩.
೫೯. ಎ.ಆರ್. ನಂ.ಬಿ. ೫೫೭, ಆಫ್ ೧೯೬–೬೧.
೬೦. ಎಂ.ಆರ್. ಸಂ–೩, ಆಫ್ ೧೯೭೪–೭೫.
೬೧. ಎ.ಆರ್.ಸಂ–೪೬, ಆಫ್ ೧೯೦೪, ಎಸ್.ಐ.ಐ. ೯, ಭಾಗ–೧, ಸಂ–೨೫೨.
೬೨. ಎ.ಆರ್. ಸಂ–೯೨, ಆಫ್ ೧೯೭೭–೭೬.
೬೩. ದೇವರಕೊಂಡಾರೆಡ್ಡಿ, (ಸಂ) ಕನ್ನಡ ವಿ.ವಿ. ಶಾಸನ ಸಂ–೧. ಪು–೨೯೦.
೬೪. ಎಸ್.ಐ.ಐ. ೭, ಸಂ–೧೫೦.
೬೫. ಪರಮಶಿವಮೂರ್ತಿ ಡಿ.ವಿ.,(ಸಂ) ಪ್ರೌಢದೇವರಾಯನ ಶಾಸನಗಳು, ಪು–೪೨–೪೩.
೬೬. ಎ.ಕ. ೩, ಗುಂಡ್ಲ, ಸಂ–೧೩೪.
೬೭. ಎ.ಕ. ೪, ಚಾ.ಮ. ಸಂ–೩೮೬.
೬೮. ಪರಮಶಿವಮೂರ್ತಿ ಡಿ.ವಿ.,(ಸಂ) ಪ್ರೌಢದೇವರಾಯನ ಶಾಸನಗಳು, ಪು–೨೯೩.
೬೯. ಎ.ಕ. ೩, ಗುಂಡ್ಲು, ಸಂ–೧೩೪.
೭೦. ಎ.ಕ. ೧೧, ಚೆನ್ನಗಿರಿ, ಸಂ–೧೬೪.
೭೧. ಎ.ಆರ್. ಸಂ–೬೮೨ ಆಫ್ ೧೯೨೨, ಎಸ್.ಐ.ಐ. ೯, ಭಾಗ–೨, ೬೩೭.
೭೨. ಎ.ಆರ್. ಸಂ–೪೬ ಆಫ್ ೧೮೮೯, ಎಸ್.ಐ.ಐ. ೪, ಸಂ–೨೭೫.
೭೩. ಎ.ಆರ್. ೪, ಚಾಮಾರಾಜನಗರ, ಸಂ–೮೯.
೭೪. ಎಸ್.ಐ.ಐ. ೯, ಭಾಗ–೨, ಸಂ–೬೨೭.
೭೫. ಎಸ್.ಐ.ಐ. ೯, ಭಾಗ–೨, ಸಂ–೬೩೭.
೭೬. ಸಾಲೆತೊರೆ ಬಿ.ಎ., ಪೂರ್ವೋಕ್ತ, ಪು–೪೦೩.
೭೭. ಎಸ್.ಐ.ಐ. ೯, ಭಾಗ–೨, ಸಂ–೫೬೯.
೭೮. ಸಜ್ಜನ್ ಎಸ್., ಪೂರ್ವೋಕ್ತ, ಪು–೯೦.
೭೯. ರಂಗಪ್ರಿಯ ಶ್ರೀಶ್ರೀ, ಪೂರ್ವೋಕ್ತ, ಪು–೫೪೭.
೮೦. ಧರ್ಮ ದೀಪಿಕಾ ಸಿಂಧು ವಾಖ್ಯ.
೮೧. ಶ್ರೀಶ್ರೀ ರಂಗಪ್ರಿಯ ಪೂರ್ವೋಕ್ತ, ಪು–೫೪೯.
೮೨. ಕುಂದೂರಿ ಸರೋಜನಿದೇವಿ, ಪೂರ್ವೋಕ್ತ, ಪು–೨೭೯.

೮೩. ಎ.ಕ. ೮, ಹೊಳೆನರಸಿಂಪುರ, ಸಂ–೮೭.
೮೪. ಎ.ಕ. ೫, ಟಿ.ನರಸಿಪುರ, ಸಂ–೨೨೫.
೮೫. ಎಸ್.ಐ.ಐ. ೯, ಭಾಗ–೨, ಸಂ–೬೧೬.
೮೬. ಎಸ್.ಐ.ಐ. ೯, ಭಾಗ–೨, ಸಂ–೬೧೬.
೮೭. ಕುಂದೂರಿ ಸರೋಜನಿದೇವಿ, ಪೂರ್ವೋಕ್ತ, ಪು–೨೭೯.
೮೮. ರಂಗಪ್ರಿಯಶ್ರೀಶ್ರೀ, ಪೂರ್ವೋಕ್ತ, ಪು–೫೬೪.
೮೯. ಅದೇ, ಪು–೫೬೪.
೯೦. ಅದೇ, ಪು–೫೬೫.
೯೧. ಗರುಡ ಪುರಾಣ–೧, ೧೨೪.
೯೨. ಶಿವಪುರಾಣ, ಕೋಟಿರುದ್ರ ಸಂಹಿತಾ, ಅಧ್ಯಯ–೪೦.
೯೩. ಎಸ್.ಐ.ಐ. ೭, ಸಂ–೩೫೩.
೯೪. ಎಸ್.ಐ.ಐ. ೯, ಭಾಗ–೨, ಸಂ–೪೦೭.
೯೫. ಎಸ್.ಐ.ಐ. ೧೦, ಸಂ–೧೭.
೯೬. ಎಸ್.ಐ.ಐ. ೭, ಸಂ–೩೭೮.
೯೭. ಎ.ಕ. ೩, ನಂಜನಗೂಡು, ಸಂ–೯೩.
೯೮. ಎ.ಕ. ೯, ಬೆಂಗಳೂರು, ಸಂ–೯೦, ಕ್ರಿ.ಶ. ೧೫೧೭.
೯೯. ಎಸ್.ಐ.ಐ. ೯–೧೧, ಸಂ–೫೨೧.
೧೦೦. ಎ.ಕ. ೩, ಗುಂಡ್ಲು, ಸಂ–೧೬೮.
೧೦೧. ಎಸ್.ಐ.ಐ. ೯, ಭಾಗ–೨, ಸಂ–೪೮೦.
೧೦೨. ಎ.ಕ. ೪, ಕೊಳ್ಳೆಗಾಲ, ಸಂ–೮೨.
೧೦೩. ಸಜ್ಜನ್ ಎಸ್., ಪೂರ್ವೋಕ್ತ, ಪು–೧೦೩.
೧೦೪. ಎಸ್.ಐ.ಐ. ೯, ಭಾಗ–೨, ಸಂ–೬೯೨.
೧೦೫. ಎ.ಕ. ೯, ಚೆನ್ನರಾಯಪಟ್ಟಣ, ಸಂ–೧೪೯.
೧೦೬. ರಂಗಪ್ರಿಯ ಶ್ರೀಶ್ರೀ, ಪೂರ್ವೋಕ್ತ, ಪು–೬೦೩.
೧೦೭. ಅದೇ, ಪು–೬೦೪.
೧೦೮. ಕುಂದೂರಿ ಸರೋಜಿನಿ ಪೂರ್ವೋಕ್ತ, ಪು–೨೧೮.
೧೦೯. ಅದೇ. ಪು–೨೧೯.
೧೧೦. ಅದೇ, ಪು–೨೧೮.
೧೧೧. ಪ್ರಾ ಕಂ ಇ, ಸಂ–೨, ಪು–೧೨೮–೧೨೯.
೧೧೨. ಸಾಲೆತೊರೆ ಬಿ.ಎ., ಪೂರ್ವಕ್ತ, ಪು–೩೯೭.
೧೧೩. ಕಲಬುರ್ಗಿ ಎಂ.ಎಂ., ಕರ್ನಾಟಕದ ಕೈಫಿಯತ್ತುಗಳು, ಪು–೪೩೩.
೧೧೪. ಸಾಲೆತೊರೆ ಬಿ.ಎ., ಪೂರ್ವೋಕ್ತ, ಪು–೩೯೭.
೧೧೫. ಸಜ್ಜನ್ ಎಸ್., ಪೂರ್ವೋಕ್ತ, ಪು–೧೦೭.
೧೧೬. ಎ.ಕ. ೫, ಬೇಲೂರು, ಭಾಗ–೧, ಸಂ–೯೦, ಕ್ರಿ.ಶ. ೧೨೮೧.

೧೧೭. ಎ.ಕ. ೩, ಎಸ್.ಆರ್. ೭, ಕ್ರಿ.ಶ. ೧೪೩೮.
೧೧೮. ಎ.ಆರ್. ಸಂ-೩೭೧ ಆಫ್ ೧೯೨೧.
೧೧೯. ಇಂ, ಅಂ, ಭಾಗ-೧, ೩೭೦, ಸಂ-೬೪.
೧೨೦. ಬಟರ್‌ವರ್ತ್ ಚೆಟ್ಟಿ ನೆಲ್ಲೂರು ಇನ್‌ಸ್ಕ್ರಿಪ್ಸ್‌ನ್ಸ್ ೩, ಕ್ರಿ.ಶ. ೧೩೬೬.
೧೨೧. ಎಸ್.ಐ.ಐ. ೧, ಸಂ-೩೯೭.
೧೨೨. ಎಸ್.ಐ.ಐ. ೪, ಸಂ-೨೯೭.
೧೨೩. ಅದೇ, ಸಂ-೨೬೨.
೧೨೪. ಎ.ಕ. ೬. ಶ್ರೀರಂಗಪಟ್ಟಣ, ಸಂ-೫.
೧೨೫. ಎಸ್.ಐ.ಐ. ೯, ಭಾಗ-೨, ಸಂ-೬೫೩.
೧೨೬. ಸಜ್ಜನ್ ಎಸ್., ಪೂರ್ವೋಕ್ತ, ಪು-೧೨೦.
೧೨೭. ಎಸ್.ಐ.ಐ. ೭, ಸಂ-೧೮೪.
೧೨೮. ಎಸ್.ಐ.ಐ. ೧೦, ಸಂ-೮೫.
೧೨೯. ಎ.ಕ. ೬, ಶ್ರೀರಂಗಪಟ್ಟಣ, ಸಂ-೧೩೦.
೧೩೦. ಎಸ್.ಐ.ಐ. ೧೬, ಸಂ-೨೫೨.
೧೩೧. ಸಜ್ಜನ್ ಎಸ್, ಪೂರ್ವೋಕ್ತ, ಪು-೫೦.
೧೩೨. ಎಸ್.ಐ.ಐ. ೭, ಸಂ-೩೩೭.
೧೩೩. ಪ್ರಾ, ಕಂ. ಇ. ಸಂ-೨, ಪು೧೨೮.
೧೩೪. ರವೀಂದ್ರನಾಥ ಕೆ., (ಸಂ) ಗುಂಡಬ್ರಹ್ಮಯ್ಯಗಳ ಸಾಹಿತ್ಯ, ಪು-೧೩-೧೪.
೧೩೫. ಅದೇ, ಪು-೧೪.
೧೩೬. ಹೊಸ.ಕು.ರಾ.ಸಾ, ಸಂ-೭, ಪದ್ಯ-೩.
೧೩೭. ರಾ.ಚ. ಸಂಧಿ-೭, ಪದ್ಯ-೫.
೧೩೮. ಅದೇ, ಸಂಧಿ-೭, ಪದ್ಯ-೬..
೧೩೯. ಅದೇ, ಸಂಧಿ-೭, ಪದ್ಯ-೧೩.
೧೪೦. ಅದೇ, ಸಂಧಿ-೭, ಪದ್ಯ-೧೨೦.
೧೪೧. ಅದೇ, ಸಂಧಿ-೭, ಪದ್ಯ-೬೯.
೧೪೨ ರಾ.ಚ. ಪು-೨
೧೪೩. ದಿವಾಕರ್ ಆರ್.ಬಿ. ಕುಮಾರ್ ಆರ್ ಬಿ.ಬಿ. ಕರ್ನಾಟಕದಲ್ಲಿ ಕುಮಾರರಾಮನ ಹಬ್ಬ ಮತ್ತು ಜಾತ್ರೆಗಳು. ಪು-೫.
೧೪೪. ಅದೇ ಪು- ೫.
೧೪೫. ಸತೀಶ್ ಕೆ., ವಿಜಯನಗರ ಕಾಲದ ಶೈವದೇವಾಲಯಗಳು ಪು-೨೦೦.
೧೪೬. ಎ.ಕ. ೭, ಎಸ್.ಕೆ. ೧೦, ಕ್ರಿ.ಶ. ೧೧೪೮.
೧೪೭. ಚಿದಾನಂದಮೂರ್ತಿ,ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,ಪು-೧೫೫
೧೪೮. ಎಸ್.ಐ.ಐ. ೯, ಭಾಗ-೧, ಸಂ-೩೪೩.
೧೪೯. ಎಸ್.ಐ.ಐ. ೯, ಭಾಗ-೨, ಸಂ-೪೯೩, ಕ್ರಿ.ಶ. ೧೫೧೩.

೧೫೦. ಎ.ಕ. ೭, ಸೂರಬ, ೨೬೫, ಕ್ರಿಶ. ೧೫೨೭.
೧೫೧. ಎಸ್.ಐ.ಐ. ೪, ಸಂ-೨೭೭.
೧೫೨. ಎಸ್.ಐ.ಐ. ೯, ಭಾಗ-೩, ಸಂ-೬೪೮, ಕ್ರಿಶ. ೧೫೫೨.
೧೫೩. ಅದೇ, ಸಂ-೬೬೮ ಅಂಡ್ ೬೬೯.
೧೫೪. ದೇವರಕೊಂಡಾರೆಡ್ಡಿ, ಶಾಸನ ಸಂ-೭, ಸಂ-೧೦, ಪು-೧೫೨.
೧೫೫. ಶೈಲಾ ಟಿ. ಮರ್ಮ., ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು-೨೦೦.
೧೫೬. ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಪು-೧೧೩.
೧೫೭. ಎಸ್.ಐ.ಐ. ೯, ಭಾಗ-೨, ಸಂ-೪೧೫, ಕ್ರಿ>ಶ. ೧೩೭೩.
೧೫೮. ಎ.ಆರ್. ಸಂ-೬೯೧ ಆಫ್ ೧೯??.
೧೫೯. ದೇವರಕೊಂಡರೆಡ್ಡಿ,(ಸಂ) ಕ.ವಿ.ವಿ.ಶಾ. ಸಂ-೩, ಹಂಪಿ ಶಾಸನಗಳು, ಸಂ-೫, ಪು-೫.
೧೬೦. ಕುಶಾಲಪ್ಪಗೌಡ ಕೆ,.(ಅನು) ಗಂಗಾದೇವಿಯ ಮಧುರಾವಿಜಯಂ ಸರ್ಗ-೨, ಪು-೧೩.
೧೬೧. ಐ.ಪಿ.ಎಸ್. ಸಂ-೭೦೨.
೧೬೨. ಕುಶಾಲಪ್ಪ ಗೌಡ ಕೆ., (ಅನು) ಗಂಗಾದೇವಿಯ ಮಧುರಾವಿಜಯ ಸರ್ಗ-೨, ಪು-೩೩.
೧೬೩. ಎ.ಕ. ೮, ಭಾಗ-೨, ಟಿ.ನರಸಿಪುರ, ಸಂ-೨೦೬
೧೬೪. ಕುಶಾಲಪ್ಪ ಗೌಡ ಕೆ,. ಪೂರ್ವೋಕ್ತ, ಸರ್ಗ-೩, ಪಧ್ಯ-೧.
೧೬೫. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಪು-೮೨೬-೮೭.
೧೬೬. ದೇವರಕೊಂಡಾರೆಡ್ಡಿ,(ಸಂ) ಹಂಪಿ ಸಂಪುಟ, ಕಲೆ, ಕ್ರೀಡೆ ಕೌಶಲ, ಪು-೨೦೪.
೧೬೭. ಅದೇ, ಪು-೨೦೬.
೧೬೮. ವಿರೂಪಾಕ್ಷಿ ಪೂಜಾರಹಳ್ಳಿ, ವಿಜಯನಗರ ಕಾಲದ ಸಂಸ್ಕೃತಿ, ಪುರ್-೯೨.
೧೬೯. ಅದೇ, ಪು-೧೬೭.
೧೭೦. ಭಟ್ ವಿ.ಎನ್, ಭಾರತೀಯ ಹಬ್ಬ ವೈಶಿಷ್ಟ್ಯ, ಪು-೧೮.
೧೭೧. ಕೃಷ್ಣಯಜುರ್ವೇದ ಸಂಹಿತೆ, ೪-೫, ೮-೭, ಪು-೧೨೧.
೧೭೨. ಭಟ್ ವಿ.ಎನ್., ಪೂರ್ವೋಕ್ತ, ಪು-೧೧.
೧೭೩. ಅದೇ, ಪು-೧೨.
೧೭೪. ಅದೇ. ಪು-೧೩೮
೧೭೫. ಬಸವರಾಜು ಎಲ್., ಅಲ್ಲಮ್ಮ ವಚನ ಚಂದ್ರಿಕೆ, ೧೯೬೦ ಪು-೫.
೧೭೬. ಉತ್ತಂಗಿ ಚೆನ್ನಪ್ಪ, ಆದಯ್ಯನ ವಚನಗಳು, ೧೯೫೭, ಪು-೧೮೪, ವಚನ-೪೮.
೧೭೭. ಹಿರೇಮಠ ಆರ್.ಸಿ., ಚೆನ್ನಬಸವಣ್ಣನವರ ವಚನ, ೨೮೧-೧೯೫, ಪು-೧೨೪.
೧೭೮. ದೇವಿರಪ್ಪ ಹೆಚ್., (ಸಂ) ಸಿಂಹಭೂಪಾಲ ವಿರಚಿತ ವಾಸ್ಯರಂಜನಂ, ಪು-೩೮.
೧೭೯. ಎನ್‌ಸೈಕ್ಲೊಪಿಡಿಯಾ ಆಫ್ ರಿಲಿಜಿಯನ್ ಅಂಡ್ ಎಥಿಕ್, ಸಂ-೧೦, ಪು-೪೦೦.

೧೮೦. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಪು-೨೭೦.

೧೮೧. ಅಕ್ಷರ ಕೆ.ವಿ., ರಂಗಪ್ರಪಂಚ, ಪು-೫೭.

೧೮೨. ಬಾಲಕಾಂಡ, ಸರ್ಗ-೭.

೧೮೩. ಅಯೋಸರ್ಗ, ೮೯, ಶ್ಲೋಕ-೨೬.

೧೮೪. ಕುಶಾಲಪ್ಪ ಗೌಡ ಕೆ., (ಅನು) ಪೂರ್ವೋಕ್ತ, ಸರ್ಗ-೧೧, ಪದ್ಯ-೩೬.

೧೮೫. ಅದೇ, ಸರ್ಗ-೭, ಪದ್ಯ-೧೯.

೧೮೬. ರಾಮಚಂದ್ರರಾವ್,ಎಸ್.ಕೆ., ಪುರಂದರ ಸಾಹಿತ್ಯ ದರ್ಶನ ಸಂ-೪, ಪು-೧೫೭.

೧೮೭. ಅದೇ, ಪು-೧೫೨.

೧೮೮. ವೆಂಕಟರಾಮಪ್ಪ, ಕೆ., ಶ್ರೀಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ, ಪು-೭೦.

೧೮೯. ಇ.ದ.೨೧, ಕರುಣಾ ವಿಜಯೇಂದ್ರ, ಶಾಸನಗಳ ಬಿರುದಾವಳಿಗಳಲ್ಲಿ ನೃತ್ಯ, ಪು-೧೨೨.

೧೯೦. ಎ.ಕ. (ಪ.ಆ.) ಯಳಂದೂರು, ೧೬೭, ಕ್ರಿ.ಶ. ೫೫೦.

೧೯೧. ಇಂ.ಅಂ. ೧೦, ಸಂ-ಸಿ೪, ೧೬೬-೧೬೨.

೧೯೨. ಚೂಡಾಮಣಿ ನಂದಗೋಪಾಲ್ ಡ್ಯಾನ್ಸ್ ಅಂಡ್ ಮ್ಯೂಸಿಕ್ ಇಟ್ ಟೆಂಪಲ್ ಆರ್ಕಿಟೆಕ್ಚರ್, ಪು-೪೯.

೧೯೩. ಎ.ಕ. ೯, (ಪ.ಆ.) ಬೇಲೂರು, ಸಂ-೪೧೧, ಕ್ರಿ.ಶ. ೧೧೬೦.

೧೯೪. ಎ.ಕ. ೭.೧ (ಹ.ಅ) ಚೆನ್ನಗಿರಿ, ಸಂ-೬೯, ಕ್ರಿ.ಶ. ೧೨೧೪.

೧೯೫. ಎ.ಕ. ೧೨, (ಹ.ಅ) ತಿಪಟೂರು, ಸಂ-೬೪, ೧೧೬೨.

೧೯೬. ಎ.ಕ. ೮, (ಹ.ಕ.) ಸೂರಬ, ಸಂ-೨೮, ಕ್ರಿ.ಶ. ೧೨೦೮.

೧೯೭. ಎ.ಕ. ೭.೧, (ಹ.ಕ.) ಶಿಕಾರಿಪುರ, ಸಂ-೯೪, ೧೧೯೪.

೧೯೮. ಎಸ್.ಐ.ಐ. ೨೦, ಪರಿಸರಗಡ, ಸಂ-೬೩, ಕ್ರಿ.ಶ. ೧೧೯೩.

೧೯೯. ಎ.ಕ. ೯, ಬೆಂಗಳೂರು, ಸಂ-೧೨೭.

೨೦೦. ಪುಲಮತಿ ಶಾಮರಾವ್, ವಿಜಯನಗರದ ಕಲೆ ಮತ್ತು ಸಾಹಿತ್ಯ, ಪು-೧೨೪.

೨೦೧. ಸರಸ್ವತಿ ಎನ್., ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು, ಪು-೧೫೩

೨೦೨. ಎಸ್.ಐ.ಐ. ೧೮, ಸಂ-೨೮೧.

೨೦೩. ಕೃಷ್ಣಮೂರ್ತಿ ವೈದೇಹಿ, ಸೋಷಿಯಲ್ ಅಂಡ್ ಎಕನಾಮಿಕ್ ಕಂಡಿಷನ್ ಇನ್ ಈಸ್ಟರ್ನ್ ಡೆಕ್ಕಟನ್, ಪು-೧೮೫.

೨೦೪. ರಾಬರ್ಟ್ ಸೆವೆಲ್, ಪೂರ್ವೋಕ್ತ, ಪು-೨೮೯.

೨೦೫. ಸತೀಶ ಕೆ., ಪೂರ್ವೋಕ್ತ, ಪು-೧೮೫.

೨೦೬. ಸೋಮಶೇಖರ್ ಎಸ್.ವೈ., ಹಂಪಿ ಬಜಾರುಗಳು, ಪು-೯

೨೦೭. ಅದೇ, ಪು-

೨೦೮. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಪು-೩೬೦,

೨೦೯. ಎಸ್.ಐ.ಐ. ೪, ಸಂ-೨೪೮.

೨೧೦. ಇ. ಅಂ. ೯, ಸಂ-೧೨೪, ಕ್ರಿ.ಶ. ೭೭೮.

೨೧೧. ಸತೀಶ್ ಕೆ., ಪೂರ್ವೋಕ್ತ, ಪು–೧೮೬.
೨೧೨. ಎಸ್.ಐ.ಐ. ೨೭, ಸಂ–೧೧೯.
೨೧೩. ಸರಸ್ವತಿ ಎನ್., ಪೂರ್ವೋಕ್ತ, ಪು–೧೫೭.
೨೧೪. ಇಲಿಯಟ್ ಹೆಚ್.ಎಂ., ಅಂಡ್ ಡಾಸನ್, ದಿ ಹಿಸ್ಟರಿ ಆಫ್ ಇಂಡಿಯಾ ಆನ್ ಟೋಲ್ಡ್ ಬೈ ಇಟ್ಸ್ ಹಿಸ್ಟಾರಿಯನ್ಸ್ ಸಂ–೮, ಪು–೧೧೮.
೨೧೫. ಸೂರ್ಯನಾರಾಯಣ ರಾವ್ ಬಿ., (ಮೂಲ) ಬಾಲಸುಬ್ರಮಣ್ಯ, (ಕನ್ನಡಕ್ಕೆ), ಮರೆಯಲಾಗದ ಮಹಾಸಾಮ್ರಾಜ್ಯ, ಪು–೨೨.
೨೧೬. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಪು೨೦೫.
೨೧೭. ಅದೇ, ಪು–೩೩೨.
೨೧೮. ಚೂಡಾಮಣಿ ನಂದಗೋಪಾಲ್, ಶಿಲೆ–ಕಲೆ, ಪು–೨೦೩.
೨೧೯. ರಾಜರಾವ್ ಎಲ್., ಸಂಗೀತ ಚಂದ್ರಿಕೆ, ಪು–೩೨೨.
೨೨೦. ಕೃಷ್ಣರಾಯ ಅ.ನ., (ಸಂ) ಭಾರತೀಯ ಕಲಾದರ್ಶನ, ಪು–೨.
೨೨೧. ಸಂಪದಾಭಟ, ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಪು–೨೦.
೨೨೨. ಸಂಪತ್ಕುಮಾರ ಚಾರ್ಯ ವಿ.ಎಸ್., ರಾಮರತ್ನಂ ವಿ., ಕರ್ನಾಟಕ ಸಂಗೀತ ದೀಪಿಕೆ, ಪು–೩೦.
೨೨೩. ಅದೇ, ಪು–೩೨.
೨೨೪. ಎ.ಕ. ೭, ಎಸ್.ಕೆ., ೧೭೬.
೨೨೫. ಎಸ್.ಐ.ಐ. ೧೫, ಸಂ–೮೪.
೨೨೬. ಎ.ಕ. ೧೨, ಟಿ.ಎಂ. ಸಂ–೯.
೨೨೭. ಎ.ಕ. ೭, ಸಂ–೧೯೨.
೨೨೮. ಬಿಕೆಐ. ೧, ಸಂ–೫೨.
೨೨೯. ಎ.ಕ. ೬, ಚಿಕ್ಕಮಂಗಳೂರು, ಸಂ–೨೨, ಕ್ರಿ.ಶ. ೧೧೭೮.
೨೩೦. ಎ.ಕ. ೭, ತಿಪಟೂರು, ಸಂ–೬೧, ಕ್ರಿ.ಶ. ೧೧೬೨.
೨೩೧. ಕೆ.ಐ. ೨, ಧಾರವಾಡ, ಸಂ–೨೯, ಕ್ರಿ.ಶ. ೧೧೮೨.
೨೩೨. ಎಸ್.ಐ.ಐ. ೯ (೧) ಕಲ್ಯಾಣದುರ್ಗ, ಸಂ–೨೭೩, ಕ್ರಿ.ಶ. ೧೧೭೯.
೨೩೩. ಎ.ಕ. ೧೨, ಶಿರಾ, ಸಂ–೨೩, ಕ್ರಿ.ಶ. ೧೧೬೭.
೨೩೪. ಎ.ಕ. ಎಮ್.ಜಿ., ಸಂ–೧೮, ೧೧೯೫.
೨೩೫. ಎ.ಕ. ೧೧, ದಾವಣಗೆರೆ, ಸಂ–೯.
೨೩೬. ಸಂಪತ್ಕುಮಾರ ಚಾರ್ಯ ವಿ.ಎಸ್. ವಿ. ರಾಮರತ್ನಂ., ಪೊರ್ವೋಕ್ತ, ಪು–೨೫.
೨೩೭. ಶಿವಪ್ರಸಾದ್, ಟಿ.ಆರ್., ಶ್ರೀ ಕೃಷ್ಣದೇವರಾಯ, ಪು–೧೯೩
೨೩೮. ನಾಗರಾಜು ಹೆಚ್.ಎಂ., ವಿಜಯನಗರದ ಇಮ್ಮಡಿದೇವರಾಯ, ಪು–೨೦೦.
೨೩೯. ನಾಗೇಗೌಡ ಹೆಚ್.ಎಲ್., ಪ್ರಕಂ.ಇ., ಪೊರ್ವೋಕ್ತ, ಪು–೨೭೦.
೨೪೦. ಅದೇ, ಪು–೨೨೯.
೨೪೧. ಸರಸ್ವತಿ ಎನ್., ಪೊರ್ವೋಕ್ತ, ಪು–೧೫೧.

೨೪೨. ಪುಲುಮತಿ ಶ್ಯಾಮರಾವ್, ಪೂರ್ವೋಕ್ತ, ಪು–೧೨೦.

೨೪೩. ಎ.ಕ. ೧೨, ಚಿ.ಮ. ಸಂ–೦೩೯.

೨೪೪. ಪುಲುಮತಿ ಶ್ಯಾಮರಾವ್. ಪೂರ್ವೋಕ್ತ, ಪು–೧೧೯

೨೪೫. ಪಂಪ ಭಾರತ, ೧೧.೪.

೨೪೬. ರಾಬರ್ಟ್ ಸೆವೇಲ್,(ಮೂಲ) ಸದಾನಂದ ಕನವಳ್ಳಿ(ಅನು), ಪೂರ್ವೋಕ್ತ, ಪು–೫೮.

೨೪೭. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಪು–೨೭೨.

೨೪೮. ದ ಬುಕ್ ಆಫ್ ದುರತ್ತ, ಬಾರ್ಬೂಸ, ಸಂ–೨, ಟ್ರಾನ್ಸ್‌ಲೇಟೆಡ್‌ವಿತ್‌ನೋಟ್ಸ್ ಬೈಲಾಂಗ್ಸ್, ವರ್ಕಡ್ಯಾನ್ಸನ್, ಪು–೧೬೨.

೨೪೯. ರಾಬರ್ಟ್ ಸೆವೇಲ್, ಫರಗಾಟನ್ ಎಂಪಾಯರ್, ಪು–೩೭೭.

೨೫೦. ಸರಸ್ವತಿ ಎನ್., ಪೂರ್ವೋಕ್ತ, ಪು–೧೬೧.

೨೫೧. ರಾಬರ್ಟ್‌ಸೆವೇಲ್,(ಮೂಲ) ಸದಾನಂದ ಕನವಳ್ಳಿ(ಅನು), ಪೂರ್ವೋಕ್ತ, ಪು– ೭೪.

೨೫೨. ಎ.ಕ. ೯, ಎನ್.ಐ., ಸಂ–೬೧, ೨೪೦.

೨೫೩. ಕೆ.ಐ. ೧, ಸಂ–೧೭, ಕ್ರಿ.ಶ. ೧೦೫೫.

೨೫೪. ಕುಮಾರಿ ಗಾಯತ್ರಿರಾಜಾಪುರ, ಭಾರತೀಯ ಸಂಗೀತ ದರ್ಶನ ಪು–೧೦೫.

೨೫೫. ಗೋವಿಂದ ರಾಜು ಟಿ., ಪ್ರಾಚೀನ ವಾದ್ಯಗಳು, ನೀಲಗಿರಿ ತಳವಾರ (ಸಂ) ಜಾನಪದ ಪು–೧೩೩.

೨೫೬. ಸಂಪತ್ಕುಮಾರಾಚಾರ್ಯ ವಿ.ಎಸ್., ರಾಮರತ್ನಂ ವಿ., ಕರ್ನಾಟಕ ಸಂಗೀತ ದೀಪಿಕ ಪು–೧೮೫.

೨೫೭. ಅದೇ, ಪು–೧೮೪.

೨೫೮. ಸುನಂದಮ್ಮ ಆರ್.(ಸಂ) ಪುರಂದರ ಸಾಹಿತ್ಯ ದರ್ಶನ, ಭಾಗ–೩, ಪು–೨೭೭.

೨೫೯. ಚನ್ನಬಸವ ಪುರಾಣ, ಸಂಧಿ–೨, ಪಧ್ಯ–೨೯.

೨೬೦. ರಾಮಚಂದ್ರರಾವ ಎಸ್.ಕೆ., ಪುರಂದರ ಸಾಹಿತ್ಯ ದರ್ಶನ ಸಂ–೪, ಪು–೩೮೯.\

೨೬೧. ಅದೇ, ಭಾಗ–೧, ಪು–೩೮.

೨೬೨. ಎ.ಕ. ೫, (೧), ಚನ್ನರಾಯಪಟ್ಟಣ ಸಂ–೨೦೫, ಎ.ಕ. ಸೂರಬ, ೭, ಸೂರಬ ಸಂ–೫೧೭.

೨೬೩. ಎ.ಕ. ೮, ನಗರ, ಕ್ರಿ.ಶ. ೧೨೫೫.

೨೬೪. ಎ.ಆರ್. ಸಂ– ಬಿ.೫೫, ಆಫ್ ೧೯೬೧–೬೨.

೨೬೫. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ಪು–೨೨೦–೨೧.

೨೬೬. ನಾರಾಯಣ ಪಿ.ವಿ., ವಚನಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ಪು– ೩೬೪.

೨೬೭. ಧರ್ಮ ಪಿ.ಸಿ., ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್ಸ್, ಇನ್ ದ, ರಾಮಾಯಾಣ ಆಫ್ ಇಂಡಿಯನ್ ಕಲ್ಚರ್, ಸಂ–೪, ಪ–೪೫೦–೫.

೨೬೮. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಪು–೩೬೯.

೨೬೯. ಕ.ವಿ.ವಿ.ಶಾ.ಸಂ–೧, ಸೂಂಡೂರು–೧೪.

೨೭೦. ಎಸ್.ಐ.ಐ. ೯, ಭಾಗ–೨, ಸಂ–೬೪೭, ಕ.ವಿ.ವಿ.ಶಾ.ಸಂ–೧, ಪು–೨೨೫.

೨೭೧. ಚಿದಾನಂದ ಮೂರ್ತಿಎಂ., ಕನ್ನಡ ಸಾಹಿತ್ಯ ಶಾಸನಗಳಲ್ಲಿ ಸಂಗೀತ ವಿಚಾರ, ಪು–೧೦.

೨೭೨. ಚನ್ನಬಸವ ಪುರಾಣ, ಸಂಧಿ–೩೭, ಪದ್ಯ–೪೦.

೨೭೩. ಅದೇ, ಸಂಧಿ–೨, ಪದ್ಯ–೨೯.

೨೭೪. ಆದಿ ಪರ್ವ, ಅಧ್ಯಾಯ ೨೧೪, ಪದ್ಯ–೨೫.

೨೭೫. ಪರಮಶಿಮೂರ್ತಿ ಡಿ.ವಿ., ಪೂರ್ವೋಕ್ತ, ಸಂ–೨೨೧.

೨೭೬. ಎಸ್.ಐ.ಐ. ೨೭, ಸಂ–೧೨೩.

೨೭೭. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಪು–೩೮೬.

೨೭೮. ಅದೇ ಪು೭೫–೭೬.

೨೭೯. ಗೋಪಾಲಕೃಷ್ಣ ವಿ., ನಾಟಕದ ಹುಟ್ಟು, ಪು–೩೭.

೨೮೦. ಭಾರತದ ಗ್ಯಾಸೆಟಿಯರ್, ಸಂ–೩, ಇತಿಹಾಸ ಮತ್ತು ಸಂಸ್ಕೃತಿ, ಪು–೭೮೭.

೨೮೧. ಪ್ರೌಢದೇವರಾಯನ ಶಾಸನಗಳು, ಪು–೧೬೬–೬೭.

೨೮೨. ಕೃಷ್ಣದೇವರಾಯನ ಶಾಸನ, ಪು–೬೦೪.

೨೮೩. ಕೃಷ್ಣಸ್ವಾಮಿ ಅಯ್ಯಂಗಾರ್ ಎಸ್., ಸೋರ್ಸ ಆಫ್ ವಿಜಯನಗರ ಹಿಸ್ಟರಿ ಪು–೫೩.

೨೮೪. ಸರಸ್ವತಿ ಎನ್., ಪೂರ್ವೋಕ್ತ, ಪು–೧೬೭.

೨೮೫. ರಾಮರಾವ್ ಅಂಡ ಶಾಸ್ತ್ರಿ ಅಂಯ್ಯರ್, ಶಿವತತ್ವರತ್ನಾಕರ, ಪು–೧೬೮.

೨೮೬. ಪುಲಮತಿ ಶ್ಯಾಮರಾವ್, ಪೂರ್ವೋಕ್ತ, ಪು–೧೨೮.

೨೮೭. ತಿರುವೆಂಕಣ್ಣಚಾರಿ, ಗಂಗಾದೇವಿಯ ಮಧುರಾವಿಜಯಂ, ಪು–೧೨೧

೨೮೮. ಅದೇ, ಪು–೩೬

೨೮೯. ಮಧು ಪಿ ಪಾಟೇಲ್, ಕೋರ್ಟ್ ಲೈಫ್ ಅಂಡರ್ ವಿಜಯನಗರ ರೂಲರ್ಸ್, ಪು–೧೬೧

೨೯೦. ಅದೇ ಪು–೧೬೨

ಅಧ್ಯಾಯ ಐದು

ಕ್ರೀಡೆ ಮತ್ತು ವಿನೋದಾವಳಿಗಳ ಸ್ಥಿತ್ಯಂತರ

ಅಧ್ಯಾಯ ಐದು

ಕ್ರೀಡೆ ಮತ್ತು ವಿನೋದಾವಳಿಗಳ ಸ್ಥಿತ್ಯಂತರ

೫.೧ ಪ್ರಭಾವ ಮತ್ತು ಪರಿಣಾಮಗಳು

ವಿಜಯನಗರ ಸಾಮ್ರಾಜ್ಯದಲ್ಲಿ ಕ್ರೀಡೆ ಮತ್ತು ವಿನೋದಾವಳಿಗಳಿಗೆ ಎಂದೂ ಕೊರತೆಯಿರಲಿಲ್ಲ. ಇದು ಅಂದಿನ ಶಾಸನ, ಸಾಹಿತ್ಯ, ಶಿಲ್ಪ, ಪ್ರವಾಸಿಗರ ವರದಿಗಳಿಂದ ದೃಢಪಟ್ಟಿದೆ. ಈ ಸಾಮ್ರಾಜ್ಯ ಸಾಂಸ್ಕೃತಿಕವಾಗಿ ಬೆಳವಣಿಗೆ ಹೊಂದಿದ್ದನ್ನು ಅಂದಿನ ದೇವಾಲಯ, ಅದರ ಮುಂದಿನ ಉತ್ಸವ ಮಂಟಪಗಳು, ಕಲ್ಯಾಣ ಮಂಟಪ, ಬಜಾರುಗಳಿಂದ ತಿಳಿಯುತ್ತದೆ. ಅಂದಿನ ರಾಜಧಾನಿ ಹಂಪಿಯಲ್ಲಿರುವ ದೇವಾಲಯಗಳು ಹೆಚ್ಚಾಗಿ ವೈಷ್ಣವ ಪಂಥಕ್ಕೆ ಸಂಬಂಧಿಸಿದವು. ಇದರಿಂದ ಅಚ್ಯುತರಾಯನ ಕಾಲದಲ್ಲಿ ವೈಷ್ಣವರ ಪ್ರಾಬಲ್ಯ ಗುರುತಿಸಬಹುದು. ಅಂದು ಹಬ್ಬ, ಉತ್ಸವಗಳ ಕಾಲದಲ್ಲಿ ದೇವಾಲಯಗಳ ಸಮುಚ್ಚಯ ಎಲ್ಲಾ ಚಟುವಟಿಕೆಗಳ ಕೇಂದ್ರವಾಗಿದ್ದವು. ಬಜಾರುಗಳು ಸಾಂಸ್ಕೃತಿಕವಾಗಿ ಮಹತ್ವದ ಪಾತ್ರ ವಹಿಸುತ್ತಿದ್ದವು. ವರದರಾಜಮ್ಮನ ಬೀದಿಯ ಎಡಬದಿಯಲ್ಲಿ ಲೋಕಪಾವನ ಕೋಳವನ್ನು ಉತ್ಸವದ ಸಮಯದಲ್ಲಿ ನಡೆಸುವ ತೆಪ್ಪೋತ್ಸವಕ್ಕೆಂದೇ ಕಟ್ಟಿಸಲಾಗಿದೆ. ಕೊಳದ ಮಧ್ಯೆ ಉತ್ಸವ ಮಂಟಪ ಇದು ನಾಲ್ಕು ಕಂಬಗಳಿಂದ ಕೂಡಿದ್ದು, ವಿಮಾನವನ್ನು ಒಳಗೊಂಡಿದೆ. ಹಂಪಿಯ ಎಲ್ಲಾ ಬಜಾರುಗಳಲ್ಲೂ ತೆಪ್ಪೋತ್ಸವಕ್ಕೆಂದು ವಿಶಾಲವಾದ ಕೊಳ ಅಥವಾ ಪುಷ್ಕರಣಿಗಳನ್ನು ನಿರ್ಮಾಣ ಮಾಡಲಾಗಿತ್ತು. ಈ ತೆಪ್ಪೋತ್ಸವ ಕೊಳವನ್ನು ಬೀದಿಯ ಪಕ್ಕದಲ್ಲೆ ನಿರ್ಮಿಸಿರುವುದಕ್ಕೆ ಅಂದು ಈ ಉತ್ಸವದಲ್ಲಿ ಸೇರುತ್ತಿದ್ದ ಹೆಚ್ಚಿನ ಜನಸಂಖ್ಯೆಯೇ ಕಾರಣವಾಗಿರಬಹುದು. ಈ ರೀತಿಯಾಗಿ ಉತ್ಸವ ಮಂಟಪ ಅರಸರಾದಿಯಾಗಿ ಎಲ್ಲಾ ವರ್ಗದವರು ಇದರಲ್ಲಿ ಭಾಗವಹಿಸುತ್ತಿದ್ದರು. ಅಂದು ಅರಸರು ಇದಕ್ಕೆ ಪ್ರೋತ್ಸಾಹ ಕೊಟ್ಟಿದ್ದನ್ನು ಶಾಸನಗಳು ದೃಢಪಡಿಸುತ್ತವೆ. ಪ್ರಸ್ತುತ ದಿನಗಳಲ್ಲಿಯೂ ಈ ರೀತಿಯ ಉತ್ಸವವು ಹಂಪಿಯಲ್ಲಿ ಮನ್ಮಥ ಹೊಂಡದಲ್ಲಿ ಇಂದಿಗೂ ಆಚರಣೆಯಲ್ಲಿರುವುದು ಗಮನಾರ್ಹ.

ವಿಜಯವಿಠಲ, ಮಾಲ್ಯವಂತ, ವಿರೂಪಾಕ್ಷ, ಕೃಷ್ಣಾ ದೇವಾಲಯಗಳು ಕಲ್ಯಾಣ ಮಂಟಪಗಳನ್ನು ಗಮನಿಸಿದರೆ ಅಂದು ದೇವ-ದೇವತೆಯರಿಗೆ ಕಲ್ಯಾಣ ಮಹೋತ್ಸವವನ್ನು

ನಡೆಸುತ್ತಿದ್ದರು. ಅದಕ್ಕಾಗಿಯೇ ಪ್ರತ್ಯೇಕ ಮಂಟಪ, ಉಯ್ಯಾಲೆ, ತೂಗು ಮಂಟಪಗಳನ್ನು ನಿರ್ಮಿಸಿ ಸಂಭ್ರಮಿಸುತ್ತಿದ್ದರು. ಆ ಕಾರ್ಯಕ್ರಮಗಳಿಗೆ ಬಾರಿ ಜನಸಂದಣಿ ಸೇರುತ್ತಿತ್ತು. ಅದಕ್ಕಾಗಿ ದೇವಾಲಯದ ಸುತ್ತಲೂ ವಿಶಾಲವಾದ ಪ್ರಾಕಾರದ ಗೋಡೆ ನಿರ್ಮಿಸಿದ್ದರು. ಉತ್ಸವದ ಸಮಯದಲ್ಲಿ ಯಾವುದೇ ರೀತಿಯ ಗದ್ದಲ, ಗಲಭೆಗಳಾಗದಂತೆ ಮುನ್ನೆಚ್ಚರಿಕೆ ವಹಿಸುತ್ತಿದ್ದುದು ಅಂದಿನ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ. ಅಂದಿನ ವೈಭವದ ವಿಜಯದಶಮಿಯಂದು ಸೇರುತ್ತಿದ್ದ ಮಾಂಡಲಿಕರು, ಜನಸಮೂಹವನ್ನು ಗಮನಿಸಿದರೆ ಅವರ ಆಡಳಿತ ವೈಖರಿ ಸೋಜಿಗವೆನಿಸುತ್ತದೆ. ಉತ್ಸವ ನಡೆಯುವ ಪ್ರದೇಶದಲ್ಲಿ ಎಷ್ಟು ಬಿಗಿಭದ್ರತೆಯಿಂದ ಇರುತ್ತಿತ್ತು ಎಂಬುದಕ್ಕೆ ಪಾಯೇಸ್ ಕೊಡುವ ವರದಿಯನ್ವಯ "ದ್ವಾರದಲ್ಲಿ ಅನೇಕ ದ್ವಾರಪಾಲಕರಿರುವರು, ಅವರ ಕೈಯಲ್ಲಿ ಚರ್ಮದ ಕೊರಡುಗಳು ಮತ್ತು ಬಡಿಗೆಗಳನ್ನು ಹಿಡಿದಿರುತ್ತಾರೆ. ದಳವಾಯಿಗಳು ಮತ್ತು ಪ್ರಮುಖರು ಕಾವಲು ಪಡೆಯ ಮುಖ್ಯಸ್ಥನಿಂದ ಆಜ್ಞೆ ಬಂದಿರುವವರನ್ನು ಮಾತ್ರ ಅಲ್ಲದೆ ಯಾರನ್ನು ಪ್ರವೇಶಗೊಡುವುದಿಲ್ಲ. ಈ ದ್ವಾರ ದಾಟಿದರೆ ಒಂದು ಬಯಲು ಸ್ಥಳವಿದೆ. ಅಲ್ಲಿಯೂ ದ್ವಾರ ಪಾಲಕರು ಮತ್ತು ರಕ್ಷಕರಿರುವರು".[೧] ಇದರಿಂದ ಅವರ ಆಡಳಿತದ ಕಾರ್ಯವೈಕರಿಯನ್ನು ತಿಳಿದುಕೊಳ್ಳಬಹುದು.

ಅಂದು ಸಂಗೀತ ಮತ್ತು ನೃತ್ಯ ಕಲೆಗೆ ವಿಶೇಷವಾದ ಮಹತ್ವವಿತ್ತು. ರಾಜ, ರಾಣಿ, ಅಧಿಕಾರಿಗಳು, ಅವರ ಮಡದಿಯರು ಮತ್ತು ಅಪಾರ ಶೋತೃಗಳು ಸಂಗೀತ ಬಲ್ಲವರಾಗಿದ್ದರು. ಅಲ್ಲದೆ ಸಂಗೀತ ಪ್ರೋತ್ಸಾಹಕರಾಗಿದ್ದರು ಎಂಬುದು ಅವರ ಬಿರುದುಬಾವಲಿಗಳಿಂದ ವೇದ್ಯವಾಗುತ್ತದೆ.

೧ನೆಯ ದೇವರಾಯನ 'ಸಂಗೀತ ವಿದ್ಯಾಸಾಗರ'[೨] ಬಿರುದಿನಿಂದ ಸಂಗೀತ ಸಾಹಿತ್ಯಗಳಲ್ಲಿ ಅವನು ಸಾಧಿಸಿದ ಜ್ಞಾನವನ್ನು ಪ್ರತಿನಿಧಿಸುತ್ತದೆ, ಶ್ರೀಕೃಷ್ಣದೇವರಾಯನನ್ನು ಒಂದು ಶಾಸನದಲ್ಲಿ ಸಂಗೀತ ಸಾಹಿತ್ಯ ಸಮರಾಂಗಣ ಸಾರ್ವಭೌಮ[೩]ನಾಗಿದ್ದನು ಸಂಗೀತ ಮತ್ತು ಸಾಹಿತ್ಯದಲ್ಲಿ ಸ್ವತಃ ಪರಿಣಿತನಾಗಿದ್ದನು ಹಾಗೂ ಸಮರಾಂಗಣದಲ್ಲಿ ಪರಾಕ್ರಮಶಾಲಿಯಾಗಿ ಹೋರಾಡುವವನು[೪] ಎಂದು ಬಣ್ಣಿಸಲಾಗಿದೆ. ಅದೇ ರೀತಿ ಮಹಿಳೆಯರೂ ಇದರಲ್ಲಿ ಪರಿಣಾತಿ ಪಡೆದಿದ್ದರು ಎಂಬುದಕ್ಕೆ ಚೆನ್ನಭೈರಾದೇವಿಯ ನಿದರ್ಶನವನ್ನು ನೋಡಬಹುದು. ಕ್ರಿ.ಶ. ೧೫೪೨ರಲ್ಲಿ ಅಚ್ಯುತರಾಯನ ಕಾಲದಲ್ಲಿ ಹಾಡುವಳಿಯಲ್ಲಿ ಮಹಿಳಾ ಮಂಡಲೇಶ್ವರಳಾಗಿದ್ದಳು. ಇವಳ ಬಿರುದು ಸಂಗೀತ ಪುರವಾರಾಧೀಶ್ವರಿ[೫] ಹೀಗೆ ಅನೇಕ ಬಿರುದುಗಳು ದೊರೆಯುತ್ತವೆ. ರಾಜರು ರಣರಂಗಕ್ಕೆ ಹೋಗುವಾಗಲೂ ನೃತ್ಯ ಸಂಗೀತಗಾರರು ಜೊತೆಗೆ ಹೋಗುತ್ತಿದ್ದರು ಅಂದು ರಣರಂಗದಲ್ಲಿ ನರ್ತಕರು, ಹಾಡುಗಾರರು ಸಂಗೀತಗಾರರನ್ನು ಕೊಲ್ಲಬಾರದು ಎಂಬುದು ಯುದ್ಧ ನಿಯಮವಾಗಿತ್ತು.[೬] ವಿಜಯನಗರ ಪೂರ್ವದಲ್ಲಿಯೇ ಈ ರೀತಿ ಇತ್ತು ಎಂಬುದಕ್ಕೆ ಧುರರಂಗಂ ನೃತ್ಯರಂಗಂ ಪರನೃಪತಿ ಕಪಾಲಳ ತಾಳಳಿನಕ್ತಂ ಚರಿಯರ್ಕಳ್ ಪಾಡುವರ್ ತದ್ವಿಜಯರುಹಯಶಂ ದುಂದುಬಿ ದ್ವಾನಮಾಗುತ್ತಿರೆ ವಿದ್ವಿಪಾವನೀಪಾಳಕನಿಕರದ ರುಂಡಂಗಳಿಂ ತಾಂಡ ವಾಡಂ ಬಿರಮಂ ಮಾಳ್ಪೊಳ್ಪಿನಿಂದ ನಟ್ಟವಿಗನೆನಿಸಿದಂ ವೀರಬಲ್ಲಾಳಭೂಪಂ.[೭] ಅಂದರೆ

ಯುದ್ಧರಂಗವೇ ಬಲ್ಲಾಳನಿಗೆ ನೃತ್ಯರಂಗವಾಯಿತೆಂದೂ ಶತ್ರುರಾಜರ ಕಪಾಲಗಳನ್ನು ತಾಳಗಳನ್ನಾಗಿ ಮಾಡಿಕೊಂಡು ರಾಕ್ಷಸಿಯರು ರಾಜನ ಯಶಸ್ಸನ್ನು ಹಾಡುವರೆಂದೂ, ದುಂದುಭಿಯ ಧ್ವನಿ ಹೊಮ್ಮುತ್ತಿರಲು ಶತ್ರುರಾಜಸಮೂಹದ ರುಂಡಗಳನ್ನು ಧರಿಸಿ ತಾಂಡವ ನೃತ್ಯವನ್ನು ಮಾಡುವ ನಟುವಿಗನ ಹಾಗೆ ಬಲ್ಲಾಳ ಶೋಭಿಸಿದನೆಂದೂ ಶಾಸನ, ಸಾಹಿತ್ಯಿಕ ಕೃತಿಗಳು ನಿರೂಪಿಸುತ್ತವೆ. ಅಂದರೆ ನೃತ್ಯ ಮತ್ತು ಸಂಗೀತ ಯುದ್ಧಗಳಿಗೆ ಮಾನ್ಯತೆ ಕೊಟ್ಟಷ್ಟೆ ಕೊಡುತ್ತಿದ್ದುದು ಇದರಿಂದ ತಿಳಿಯುತ್ತದೆ.

ದಕ್ಷಿಣದ ಹಿಂದೂಸ್ಥಾನದ ಸಾಂಸ್ಕೃತಿಕ ಇತಿಹಾಸದಲ್ಲೇ ಪ್ರಾಯಶಃ ಸಂಗೀತ, ನೃತ್ಯಕ್ಕೆ ವಿಜಯನಗರದ ಅರಸರ ಕಾಲಕ್ಕೆ ದೊರೆತಷ್ಟು ಮನ್ನಣೆ ಯಾರ ಕಾಲಕ್ಕೂ ದೊರೆಯಲಿಲ್ಲವೆನ್ನಬಹುದು. ಅದರಲ್ಲೂ ನರ್ತನ ಕಲೆಗೆ ಅವರಿತ್ತ ನೆರವು ಎಂದು ಮರೆಯಲಾಗದು. ಸಾಲೆತೊರೆ ಅವರು 'Never was dancing held in greater esteem in the History of Southern India then in the days of the Vijayanagara Kings'.[೮] ಎನ್ನುತ್ತಾರೆ. ಕನ್ನಡ ಶಾಸನ, ಕಾವ್ಯಗಳಲ್ಲೂ ನರ್ತನ ನರ್ತಕಿಯರ ವರ್ಣನೆ ವಿಶೇಷವಾಗಿ ಬಂದಿರುವುದಕ್ಕೆ ಅಂದು ನಾಟ್ಯಕಲೆಯ ಬಗೆಗೆ ಜನತೆಯ ಅಭಿರುಚಿ ಹಾಗೂ ಅರಸರಿತ್ತ ಪ್ರೋತ್ಸಾಹಗಳೇ ಕಾರಣ. ನರ್ತಕಿಯರಿಗೆ ಅಂದು ರಾಜನ ಆಶ್ರಯವಿತ್ತು. ಅನೇಕ ರಾಜನರ್ತಕಿಯರು ಪರಂಪರಾಗತವಾಗಿ ರಾಜನ ಓಲಗದಲ್ಲಿ ಸೇವೆ ಸಲ್ಲಿಸುತ್ತಿದ್ದರು. ದೇವಾಲಯದ ವ್ಯವಸ್ಥೆಗೆಂದು ನೇಮಿಸಿದ ಕೆಲವರು ನರ್ತನ ಕಲೆಯಲ್ಲಿ ಪರಿಣಿತರಾಗಿದ್ದು ದೇವಾಲಯದ 'ಅಂಗರಂಗ ಭೋಗ ಸೇವೆಯನ್ನು ಮಾಡುತ್ತಿದ್ದರು. ಅಂದು ಮಹಾನವಮಿ ಉತ್ಸವಾದಿಗಳಲ್ಲಿ ಭಾಗವಹಿಸುತ್ತಿದ್ದ ಗಾಯಕಿಯರ, ನರ್ತಕಿಯರ ವರ್ಣನೆ ಮಾಡುತ್ತಾ ಅಬ್ದುಲ್ ರಜಾಕನಂತೂ ಮೈಮರೆತಿದ್ದಾನೆ.

'The Singers were for the most part young girls. They were seated behind a beautiful curtain opposite the king on a sudden the curtuin was removed on both sides and the grls began to move with their feet with such grace that was dom lost its sensy and the fool was in toxicated with delight'.[9]

ಇಲ್ಲಿ ನರ್ತಕಿಯರ ವೇಷಾಲಂಕಾರ, ರಂಗಲೇಪ, ನಾಟ್ಯ ವಿನ್ಯಾಸವನ್ನು ಅವರು ವಿಸ್ತೃತವಾಗಿ ವರ್ಣಿಸ ಹೋಗಿದ್ದಾನೆ. ಪ್ರೌಢದೇವರಾಯನ ಕಾಲಕ್ಕೆ ರಾಜಧಾನಿಯಲ್ಲಿ ಅನೇಕ ನರ್ತನ ಶಾಲೆಗಳಿದ್ದುದು ತಿಳಿದುಬರುತ್ತದೆ. ಮುಖ್ಯ ನಾಟ್ಯಶಾಲೆಗೆ ಪಟ್ಟದ ನಾಟಕ ಶಾಲೆ ಎಂದು ವಿಶ್ಲೇಷಿಸಿರುವುದು ಕಂಡುಬರುತ್ತದೆ.[೧೦] ಗುಡಿಗಳ ನರ್ತನಗಾತಿಯರೊಳು ಶುದ್ಧ ಪೆರ್ಬಡಿಸುವ ಗೀತಶಬ್ದಗಳಡಿ ತಪ್ಪದೆ ಕೊಲಚಾರಿಗಳಿಂದ ಜಕ್ಕುಡಿ ಮೆರೆದವು ದೇವಾಲಯದಿ[೧೧]

ಅಂದರೆ ಅಂದು ದೇವಾಲಯಗಳಲ್ಲಿ ನೃತ್ಯಗಾರ್ತಿಯರು, ಹಾಡು ಮತ್ತು ವಾದ್ಯದ ತಾಳಗಳಿಗೆ ತಕ್ಕಂತೆ ನೃತ್ಯ ಮಾಡುತ್ತಿದ್ದರು. ಅದಕ್ಕೆ ದೇವಾಲಯಗಳು ವೇದಿಕೆಯಾಗಿದ್ದವು.

ಅಂದು ಪ್ರತಿನಿತ್ಯವು ದೇವಾಲಯಗಳಲ್ಲಿ ಈ ರೀತಿಯ ಸಂಗೀತ ಕಾರ್ಯಕ್ರಮಗಳಿರುತ್ತಿದ್ದವು. ಪ್ರತಿಯೊಂದು ದೇವಾಲಯಗಳಿಗೆ ಇಂತಿಷ್ಟು ನೃತ್ಯಗಾರ್ತಿಯರು ಮೀಸಲಾಗಿದ್ದರು ಅವರ ವೃತ್ತಿಯೇ ನೃತ್ಯವಾಗಿತ್ತು.

ಈ ಮೇಲಿನ ಎಲ್ಲಾ ಅಂಶಗಳನ್ನು ದೃಢೀಕರಿಸಲು ಅಂದಿನ ಸ್ಮಾರಕಗಳ ಮೇಲೆ ಕೆತ್ತಲಾದ ನೃತ್ಯ, ಕೋಲಾಟದ ಶಿಲ್ಪಗಳಲ್ಲಿ ಕಾಣಬಹುದು. ಕೋಲಾಟದ ನೃತ್ಯ, ಕನ್ನಡ ನಾಡಿನಲ್ಲಿ ಬಹು ಹಿಂದಿನಿಂದಲೂ ರೂಢಿಯಲ್ಲಿತ್ತು. ಸಮವಯಸ್ಕರಾದ ಸ್ತ್ರೀ, ಪುರುಷರು ಒಂದೇ ಆಕಾರದ ಪೋಷಾಕು ಧರಿಸಿ ಸಮೂಹಗಾನ ಹಾಡುತ್ತಾ ಕೋಲಾಟವನ್ನು ಆಡುತ್ತಿದ್ದರೆಂದು ಈ ಕಾಲಕ್ಕೆ ಮೃದಂಗ ಹಾಗೂ ನಾನಾ ಪ್ರಕಾರದ ವಾದ್ಯ ವಿಶೇಷವನ್ನು ಬಳಸುತ್ತಿದ್ದರೆಂದು ಪಿಯಟ್ರೋ ಡೆಲ್ಲಾವೇಲ್ಲೆ ಎಂಬ ಪ್ರವಾಸಿ ಇಕ್ಕೇರಿಯಲ್ಲಿ ತಾನು ಕಂಡ ಕೋಲಾಟವನ್ನು ವರ್ಣಿಸುತ್ತಾನೆ.[೨೨] ಈ ಎಲ್ಲಾ ಅಂಶಗಳನ್ನು ದೃಢೀಕರಿಸಲು ಮಹಾನವಮಿ ದಿಬ್ಬ, ಹಜಾರ ರಾಮಚಂದ್ರ ದೇವಾಲಯ, ಇನ್ನಿತರ ಸ್ಮಾರಕಗಳ ಮೇಲಿನ ಅಂಶಗಳು ಪುಷ್ಟಿಕೊಡುತ್ತವೆ, ತಾಡಪತ್ರಿ, ಪೆನುಗೊಂಡ, ಲೇಪಾಕ್ಷಿ, ತಿರುಪತಿ, ಕಂಚಿ, ಇನ್ನಿತರ ಅನೇಕ ದೇವಾಲಯಗಳಲ್ಲಿ ಸಂಗೀತಗಾರರು ವಿವಿಧ ಭಂಗಿಗಳಲ್ಲಿರುವ ನರ್ತಕರು ವಿವಿಧ ವಾದ್ಯಗಳನ್ನು ಹಿಡಿದ ವಾದಕರು ಶಿಲ್ಪಕಲೆಯಲ್ಲಿ ಚಿತ್ರಿತವಾಗಿದ್ದಾರೆ. ಈ ಶಿಲ್ಪಗಳಿಂದ ಸಂಗೀತ ನರ್ತನಗಳು ಅವಿಚ್ಛಿನ್ನವಾಗಿ ಬೆಳೆಯುತ್ತಲೇ ಬಂದಿರುವುದನ್ನು ತಿಳಿಯಬಹುದು. ಹಂಪಿಯ ವಿಜಯವಿಠಲ ದೇವಾಲಯ ಕನ್ನಡಿಗರ ಕಲಾತ್ಮಕತೆಗೆ ಕನ್ನಡಿಯಂತಿದೆ. ಇಲ್ಲಿ ವಿಶ್ವಪ್ರಸಿದ್ಧಿ ಪಡೆದ ಕಲ್ಲಿನ ರಥ, ಸಂಗೀತ ಸ್ವರಗಳು ಹೊರಹೊಮ್ಮುವ ಕಂಬಗಳು ಅದರ ಮೇಲಿನ ಉಬ್ಬುಕೆತ್ತನೆಗಳು ಅಂದಿನ ಸಂಗೀತ, ನೃತ್ಯಗಳು ದೇವಾಲಯಗಳಲ್ಲಿ ನಡೆಯುತ್ತಿದ್ದವೆಂಬುದಕ್ಕೆ ಇಂಬುಕೊಡುತ್ತವೆ.

ವಿಜಯವಿಠಲ ದೇವಾಲಯದಲ್ಲಿ ಅನೇಕ ಹಬ್ಬಗಳನ್ನು ಆಚರಿಸುತ್ತಿದ್ದ ಬಗೆಗೆ ಅಲ್ಲಿಯ ಶಾಸನವೊಂದರಲ್ಲಿ ಹೇಳಿದೆ. ಮಹಾನವಮಿ, ಯುಗಾದಿ, ದೀಪಾವಳಿ, ಶ್ರೀರಾಮನವಮಿ, ಮಕರ ಸಂಕ್ರಾಂತಿ, ಗೋಕುಲಾಷ್ಟಮಿ ಇನ್ನಿತರ ಹಬ್ಬ ಉತ್ಸವಗಳನ್ನು ಹೇಳಿದೆ. ಅದೇ ರೀತಿ ವಿರೂಪಾಕ್ಷ, ಕೃಷ್ಣ, ಮಾಲ್ಯವಂತ ದೇವಾಲಯಗಳಲ್ಲಿಯು ಈ ರೀತಿಯ ಧಾರ್ಮಿಕ ಆಚರಣೆಗಳು ಸಂಭ್ರಮದಿಂದ ಜರುಗುತ್ತಿದ್ದವು. ಅಂದು ಈ ದೇವರುಗಳಿಗೆ ರಥೋತ್ಸವಗಳು ಏರ್ಪಡುತ್ತಿದ್ದವು ಎಂಬುದಕ್ಕೆ ಶಾಸನೋಕ್ತ ದಾಖಲೆಗಳಿವೆ. ಪ್ರಸ್ತುತ ದಿನಮಾನಗಳಲ್ಲಿ ಈ ರೀತಿಯ ಆಚರಣೆಗಳು ಮುಂದುವರಿದುಕೊಂಡು ಬಂದಿವೆ. ವಿಠಲ ದೇವರ ರಥದ ಶೃಂಗಾರಕ್ಕೆ ಬೇಕಾದ ಸೀರೆ, ಬಣ್ಣಬಣ್ಣದ ದಾರ ಕರಿಮಣಿಗಳನ್ನು ಉಪಯೋಗಿಸುತ್ತಿದ್ದರೆಂದು ಮತ್ತು ವಾದ್ಯದವರ ವಿನಿಯೋಗಕ್ಕೆ ಬಿಟ್ಟುಕೊಟ್ಟಗದ್ದೆ.[೨೩] ಅಂದರೆ ರಥೋತ್ಸವ ಆಚರಣೆಯ ಸಂದರ್ಭದಲ್ಲಿ ರಥವನ್ನು ಹೇಗೆ ಶೃಂಗಾರ ಮಾಡುತ್ತಿದ್ದರು ಹಾಗೂ ಅದಕ್ಕೆ ಖರ್ಚುವೆಚ್ಚಗಳಿಗೆ ದಾನ ಬಿಟ್ಟ ವಿವರ ಮೇಲಿನ ಶಾಸನಗಳಿಂದ ವಿಧಿತವಾಗುತ್ತದೆ. ಹಾಗೆಯೇ ರಥ ನಿರ್ಮಾಣದಲ್ಲಿ ಬಡಗಿ, ಕಮ್ಮಾರ, ನೇಕಾರ, ಇನ್ನಿತರ ಕುಶಲಕರ್ಮಿಗಳು ಇದರಲ್ಲಿ ಭಾಗಿಯಾಗುತ್ತಿದ್ದರು. ಹೀಗೆ ಎಲ್ಲಾ ವರ್ಗದವರೂ ಕೂಡಿ ಇಂತಹ ಸಂಭ್ರಮಾಚರಣೆಗಳ ಮೂಲಕ ಸಾಮರಸ್ಯದಿಂದ ಜೀವನ ನಡೆಸಿಕೊಂಡು ಹೋಗುತ್ತಿದ್ದರು. ಯಾವುದೇ ಕ್ರೀಡೆ ಮತ್ತು ಮನರಂಜನೆ ನಡೆದರೂ ಅವರಲ್ಲಿ ಭಾಗವಹಿಸುತ್ತಿದ್ದರು.

ಹಬ್ಬಗಳಂದು ಸ್ತ್ರೀಯರು ಶೃಂಗಾರ ಮಾಡಿಕೊಂಡು ತುಂಬಾ ಸಂಭ್ರಮದಿಂದ ಕಾಲ ಕಳೆಯುತ್ತಿದ್ದರು.

ಶೊಲದ ಹಬ್ಬಕಿನ್ನಾರ ಮನೆಗೆ ಹೋಹೆ
ಬಾಲೆ ಮರುಗಿದಳು, ಸಿಂಗಮ್ಮ
ಸಾಲು ಮುತ್ತಿನ ಸರ ಲೋಲ ಚಿಂತಕ ನೀನು
ಕಳುಹುವೆಯಲ್ಲೊ ಎಮಗೆ.[೧೪]

ಅಂದು ಸ್ತ್ರೀಯರು ಯಾವುದೇ ಹಬ್ಬ ಹರಿದಿನ, ಉತ್ಸವ, ಜಾತ್ರೆಗಳು ಬಂದವೆಂದರೆ ಅದಕ್ಕೂ ಮನ್ನವೆ ಚಿಕ್ಕ ಬಾಲೆಯರು ಸರ, ಕಿವಿಂಯೋಲೆ, ಚಿಂತಾಕು ಇರದಿದ್ದರೆ ಯಾರ ಮನೆಗೂ ಹಬ್ಬಗಳಿಗೆ ಹೋಗುವುದಿಲ್ಲ ಎಂದು ಮರುಗುತ್ತಿದ್ದಳು. ಈ ಎಲ್ಲಾ ಆಭರಣಗಳು ಇಲ್ಲದೆ ಎಲ್ಲಿಗೂ ಕಳುಹಿಸಬೇಡ ಎಂದು ತನ್ನ ತಾಯಿಯನ್ನು ಕೇಳಿಕೊಳ್ಳುವಂತಿದೆ. ಇಂದು ಸಹ ಸ್ತ್ರೀಯರು ಯಾವುದೇ ಹಬ್ಬ, ಉತ್ಸವಗಳಾದಿ ಸಮಯದಲ್ಲಿ ಶೃಂಗಾರಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುವರು.

ವಿಜಯನಗರ ಕಾಲದಲ್ಲಿ ನಡೆಯುತ್ತಿದ್ದ ಹಬ್ಬ, ಜಾತ್ರೆ, ರಥೋತ್ಸವಗಳ ಕಾರ್ಯಕ್ರಮಗಳು ಪ್ರಮುಖ ಬೀದಿಗಳಲ್ಲಿ ನಡೆಯುತ್ತಿದ್ದವು. ಹಂಪಿಯ ಪ್ರಮುಖವಾದ ವಿರೂಪಾಕ್ಷ ಬಜಾರು ಮಾರುಕಟ್ಟೆಯೂ ಆಗಿದ್ದಿತು.[೧೫] ಈ ರೀತಿಯ ಇಲ್ಲಿ ಏಳು ಬಜಾರುಗಳಿವೆ. ಅವುಗಳೆಲ್ಲವೂ ದಿನನಿತ್ಯ ಜನಜಂಗುಳಿಯಿಂದ ಕೂಡಿರುತ್ತಿದ್ದವು. ಹಬ್ಬ, ಉತ್ಸವಗಳ ಸಮಯದಲ್ಲಿ ವಿನೋದ ಚಟುವಟಿಕೆಗಳಾದ ದೊಂಬರಾಟ, ಪ್ರಾಣಿಕಾಳಗ ಪ್ರದರ್ಶನ ಏರ್ಪಡಿಸುತ್ತಿದ್ದರು. ಕಾರಣ ಈ ಬಜಾರುಗಳಲ್ಲಿ ಎಲ್ಲಾ ವರ್ಗದ ಜನರೂ ಸೇರುತ್ತಿದ್ದರು ಹಾಗೂ ಜೂಜಿನಾಟವಾಡಲು ಅನುಕೂಲಕರವಾಗಿತ್ತು. ಅದಕ್ಕೆ ಅನೇಕ ದಾಖಲೆಗಳಿವೆ. ಇಂತಹ ಜನ ಸೇರುತ್ತಿದ್ದ ಕಡೆ ಪ್ರದರ್ಶನಗಳೇರ್ಪಟ್ಟರೆ ಅಂದು ಬೀದಿಗಳಲ್ಲಿ ಜನಜಂಗುಳಿಯಿಂದ ಕೂಡಿರುತ್ತಿತ್ತು ಎಂಬುದಕ್ಕೆ.

ಕೇಣವಿಲ್ಲದೆ ಬೀದಿಬೀದಿಯೊಳಗೆ ದೇವ
ತಾಣ ನೋಟಕರ ಸಂದೋಹ
ಮಾಣದೆ ಮಣಿಸೊಡರ್ವೆಳಗಿನೊಳ್[೧೬]

ವಿರೂಪಾಕ್ಷ ಬಜಾರದಲ್ಲಿಯ ಸ್ಸಾಲುಮಂಟಪಗಳನ್ನು ವ್ಯಾಪಾರದ ಉದ್ದೇಶಕ್ಕಾಗಿ ಕಟ್ಟಿಸಿದ್ದರೂ ರಥೋತ್ಸವಗಳ ಸಂದರ್ಭಗಳಲ್ಲಿ ಯಾತ್ರಿಗಳು ಉಳಿದುಕೊಳ್ಳಲು ಮತ್ತು ರಥೋತ್ಸವವನ್ನು ವೀಕ್ಷಿಸಲು ಅನುಕೂಲವೆನಿಸಿದ್ದವು.[೧೭] ಡೊಮಿಂಗೋ ಪಾಯೇಸನು ವಿರೂಪಾಕ್ಷ ಬಜಾರನ್ನು ಕುರಿತು ಈ ದೇವಾಲಯದಲ್ಲಿ ಪೂರ್ವಕ್ಕಿರುವ ಅದರ ಪ್ರಧಾನ ಹೆಬ್ಬಾಗಿಲು ಎದುರಾಗಿ ಉಪ್ಪರಿಗೆಯ ಮೊಗಸಾಲೆ ಹಾಗೂ ಕಮಾನು ದಾರಿಗಳುಳ್ಳ ಬಲುಸುಂದರ ಮನೆಗಳು ಸುಂದರ ಬೀದಿಯಿದೆ ಎಂದು ಹೇಳಿರುವುದು ಕುಮಾರ ರಾಮನ ಸಾಂಗತ್ಯದಲ್ಲಿ ಚೆಂಡಾಟವನ್ನು ಸ್ತ್ರೀಯರು ಮನೆಯ ಉಪ್ಪರಿಗೆಯ ಮೇಲೆ ನಿಂತು ವೀಕ್ಷಿಸುತ್ತಿದ್ದರು ಎಂಬುದನ್ನು ದೃಢೀಕರಿಸುತ್ತದೆ.

ಪಟ್ಟಣದೊಳು ಸೋಮ ಸೂರ್ಯ ವೀಧಿಯೋಳು
ನೆಟ್ಟನೆ ಚೆಂಡಾಡುತಿರಲು[೨೮]
ಹತ್ತಿದಳೇಳು ನೆಲೆಯ ಉಪ್ಪರಿಗೆಯ
ಸುತ್ತ ನೋಡಿದಳು ಪಟ್ಟಣವು
ವಿಸ್ತರಿಸಿಕೇಳಿದಳು ಅರ್ತಿಯೆಂದಲಿ ನೋಡಿ
ಕೃತಯುಗದ ಚೆಂಡಿನಾಟ![೨೯]

ಚೆಂಡಾಟವನ್ನು ಪ್ರಮುಖ ಪಟ್ಟಣಗಳ ಬೀದಿಗಳಲ್ಲೆ ಆಡುತ್ತಿದ್ದುದು ಈ ಮೇಲಿನ ಅಂಶಗಳಿಂದ ದೃಢಪಡುತ್ತದೆ. ಆಟ ಪ್ರಾರಂಭಿಸುವ ಮುನ್ನ

ಏಳುನೊರು ಕೋಳಿ, ಏಳ್ನೂರು ಎಳೆಗಾಯಿ!
ಏಳ್ನೂರು ಕಬ್ಬಿನ ಕೋಲು
ಏಳುಗೆಳಿಗೆಯೊಳು ಚೆಂಡಿಗೆ ಬಲಿಗೊಟ್ಟು
ಲೋಲ ರಾಮಯ್ಯ ಕೈಮುಗಿದರು[೩೦]

ಅಂದರೆ ಚೆಂಡಿಗೆ ಪೂಜೆ ಮಾಡಿ ಆಟ ಪ್ರಾರಂಭಿಸುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಯಾವುದೇ ಒಂದು ಕಾರ್ಯಮಾಡುವಾಗ ಪೂಜೆ ಮಾಡಿ ಕಾರ್ಯವನ್ನು ಆರಂಭಿಸುತ್ತಾರೆ. ಇದು ಅಂದೂ ಸಹ ವಾಡಿಕೆಯಲ್ಲಿತ್ತು.

ಈ ಮೇಲಿನ ಎಲ್ಲಾ ಅಂಶಗಳಿಂದ ಪಟ್ಟಣಗಳಲ್ಲಿ ಪ್ರಮುಖ ಬೀದಿಗಳಲ್ಲಿ ಜನ ಸೇರುವೆಡೆ ಕ್ರೀಡೆ ಮತ್ತು ವಿನೋದದ ಚಟುವಟಿಕೆಗಳು ಜರುಗುತ್ತಿದ್ದವು. ಪ್ರಸ್ತುತ ದಿನಗಳಲ್ಲಿ ಸಂತೆ, ಬಸ್‌ನಿಲ್ದಾಣ, ಜನನಿಬಿಡ ಪ್ರದೇಶಗಳಲ್ಲಿ ಈ ರೀತಿಯ ಪ್ರದರ್ಶನಗಳು ನಡೆಯುತ್ತವೆ.

ವಿಜಯನಗರ ಕಾಲದಲ್ಲಿ ಬೇಟೆಯು ಯಥೇಚ್ಚವಾಗಿತ್ತೆಂದು ಅಂದಿನ ಶಿಲ್ಪಗಳಿಂದ ತಿಳಿಯುತ್ತದೆ. ಇದು ಅರಸು ಮತ್ತು ಶ್ರೀಮಂತ ವರ್ಗದವರಿಗೆ ವಿನೋದ ಚಟುವಟಿಕೆಯಾಗಿತ್ತು. ಬೇಡರಿಗೆ ಇದು ಆಹಾರ ಮತ್ತು ವ್ಯಾಪಾರ ಮಾಧ್ಯಮವಾಗಿತ್ತು. ಹಂಪಿಯಲ್ಲಿ ವಿದೇಶಗಳಿಂದ ಬಂದ ವರ್ತಕರು ವ್ಯಾಪಾರವಹಿವಾಟುಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ರಾಜಧಾನಿಯಾದ ಹಂಪಿಯಲ್ಲಿ ಪ್ರತಿದಿನವು ಒಂದೊಂದು ಬಜಾರುಗಳಲ್ಲಿ ಸಂತೆಯಾಗುತ್ತಿದ್ದವು ಎಂದು ಸಂಶೋಧನಾತ್ಮಕ ಅಧ್ಯಯನಗಳಿಂದ ದೃಢಪಟ್ಟಿದೆ. ಈ ಸಂತೆಗಳಲ್ಲಿ ಬೇಟೆಯಾಡಿ ತಂದ ಪ್ರಾಣಿ ಪಕ್ಷಿಗಳನ್ನು ಮಾರುತ್ತಿದ್ದರೆಂದು ವಿದೇಶಿ ವರ್ತಕರ ವರದಿಗಳಿಂದ ತಿಳಿಯುತ್ತದೆ.

ಕಮಲ ಮಹಲ್ ಆವರಣದಲ್ಲಿರುವ ವಸತಿ ಸಮುಚ್ಚಯಗಳಾದ ಅಲ್ಲಿಯ ಕೋಟೆ, ಕಾವಲುಗೋಪುರ, ಅರಮನೆ, ಕ್ರೀಡಾಕೊಳ, ಆರಾಮಸೌದ ಇವೆಲ್ಲವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅರಸು ಮನೆತನದವರು ಪ್ರತ್ಯೇಕವಾಗಿ ವಿನೋದದಲ್ಲಿ ತೊಡಗುತ್ತಿದ್ದರು. ಅಲ್ಲಿಗೆ ಸಾಮಾನ್ಯ ಜನಗಳಿಗೆ ಪ್ರವೇಶವಕಾಶ ಇರುತ್ತಿರಲಿಲ್ಲ, ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ ಉನ್ನತವರ್ಗದ ಕ್ರೀಡೆಗಳಾದ ಚದುರಂಗ, ಪಗಡೆಯಾಟ ಇನ್ನಿತರ ಒಳಮನೆ ಕ್ರೀಡೆಗಳನ್ನಾಡುತ್ತಾ

ಪ್ರತ್ಯೇಕ ನೀರಾಟದ ಕೊಳ ನಿರ್ಮಿಸಿಕೊಂಡು ಅದರಲ್ಲಿ ವಿನೋದಾತ್ಮಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರು.

ಅಂದು ದೇವಾಲಯಗಳಲ್ಲಿ ನಿತ್ಯ ಉತ್ಸವ, ಪೂಜಾ ಕಾರ್ಯಕ್ರಮಗಳು ನಡೆಯುತ್ತಿದ್ದವು. ಅದಕ್ಕೆಂದೆ ಅರಸರು ಕೆಲವು ಗ್ರಾಮಗಳ ತೆರಿಗೆಯನ್ನು ದತ್ತಿ ಬಿಡುತ್ತಿದ್ದ ದಾಖಲೆಗಳಿವೆ. ಅದೇ ವ್ಯವಸ್ಥೆಯೇ ಇಂದು ಸಹ ಕೆಲವು ಬದಲಾವಣೆಗಳೊಂದಿಗೆ ಮುಂದುವರೆದಿದೆ. ಇಂದು ದೇವಾಲಯಗಳು ನಿತ್ಯ ಪೂಜಾ ಕಾರ್ಯಕ್ರಮ, ಹಬ್ಬ, ಜಾತ್ರೆ, ಉತ್ಸವಗಳ ಸಮಯದಲ್ಲಿ ಹರಕೆ, ಕಾಣಿಕೆ ರೂಪದಲ್ಲಿ ಬರುವ ಆದಾಯದಿಂದ ಕಾರ್ಯಕ್ರಮಗಳು ಜರುಗುವವು. ವಿಜಯನಗರದ ಅವಧಿಯು ಉತ್ತುಂಗದ ಶಿಖರವೇರಿದ್ದಾಗ ಮಹಾನವಮಿ ಉತ್ಸವವು ಆದ್ದೂರಿಯಿಂದ ನಡೆಯುತ್ತಿತ್ತು ಅದಕ್ಕೆ ವಿದೇಶಿ ಪ್ರವಾಸಿಗರ ವರದಿ, ಶಾಸನ, ಸಾಹಿತ್ಯದಲ್ಲಿ ಉಲ್ಲೇಖಗಳಿವೆ. ಇಂದು ಹಾಳು ಹಂಪಿಯಲ್ಲಿ ಹಿಂದೆ ವೈಭವದಿಂದ ಮೆರೆದ ಉತ್ಸವದ ಸಂಕೇತವಾಗಿ ಮಹಾನವಮಿ ದಿಬ್ಬ, ಇನ್ನಿತರ ಸ್ಮಾರಕಗಳು ಉಳಿದಿವೆ. ಅವುಗಳಲ್ಲಿ ಸಾಮಾಜಿಕ ಜೀವನದಲ್ಲಿ ಕಂಡುಬರುವ ಕ್ರೀಡೆ ಮತ್ತು ವಿನೋದಾವಳಿ ಶಿಲ್ಪಗಳಾದ, ಕುಸ್ತಿ, ಬೇಟೆ, ಕೋಲಾಟ, ನೃತ್ಯ, ವಾದ್ಯಬಾರಿಸುವವರು, ಗೆರೆಯಾಟದ ಹಾಸುಪಟಗಳು, ಶಿಲ್ಪಗಳಲ್ಲಿ ಕಣ್ಮನ ಸೆಳೆಯುತ್ತವೆ. ಮಹಾನವಮಿ ಉತ್ಸವನ್ನು ಮುಂದುವರೆಸಿಕೊಂಡು ಬಂದು ಮೈಸೂರು ಅರಸರ ಕಾಲದಲ್ಲಿ ಇದು ದಸರಾವನ್ನು ಮುಂದುವರೆಸಿದರು. ಇಂದು ನಾಡಹಬ್ಬವಾಗಿ ವಿಶ್ವಮನ್ನಣೆ ಗಳಿಸಿದೆ. ಅಲ್ಲಿನ ಜಂಬೂಸವಾರಿ, ಕುಸ್ತಿ, ನೃತ್ಯ, ಸಂಗೀತ ಕಾರ್ಯಕ್ರಮಗಳು, ರಾಜದರ್ಬಾರು ಕಾರ್ಯಕ್ರಮಗಳು ಅದಕ್ಕೆ ಪುಷ್ಟಿಕೊಡುತ್ತವೆ.

ಅಂದು ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಕುಟುಂಬಸಹಿತವಾಗಿ ದೇವಾಲಯಗಳಿಗೆ ಹೋಗಿ ಅಲ್ಲಿನ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮನರಂಜನೆ ಪಡೆಯುತ್ತಿದ್ದರು.

ತಂದೆ ಮಕ್ಕಳು ನಾವು ಮುದಿನೆ ಸ್ವಾಮಿಗೆ
ಕುಂದುಗೊರಳ ಪರಶಿವಗೆ
ಇಂದು ನಾವೀಗ ಕುಟುಂಬ ಜಾತ್ರೆಗಳನ್ನು
ವೊಂದಿಲಿ ತೆರಳಬೇಕೆಂದು[೨೮]

ಅಂದು ಯಾವುದೇ ಹಬ್ಬ ಜಾತ್ರೆ ಉತ್ಸವಗಳಂತಹ ಸಂದರ್ಭದಲ್ಲಿ ಕುಟುಂಬ ಸಹಿತ ಅದರಲ್ಲಿ ಭಾಗವಹಿಸಿ ವಿನೋದವನ್ನು ಪಡೆಯುತ್ತಿದ್ದರು ಎಂಬುದಕ್ಕೆ ಮೇಲಿನ ವಿವರಣೆಯಿಂದ ದೃಢಪಡುತ್ತದೆ.

ಅಂದಿನ ಕೆಲವು ಕ್ರೀಡೆಗಳು ಯುದ್ಧ ಮತ್ತು ಸೈನ್ಯ ವ್ಯವಸ್ಥೆಯ ತದ್ರೂಪದಂತಿದ್ದವು. ಚದುರಂಗ, ಪಗಡೆಯಾಟ, ಮರಕೋತಿಯಾಟ, ಗಾಳಿಪಟ ಇತ್ಯಾದಿಗಳು. ಅಂದು ವಿಜಯನಗರ ಸಾಮ್ರಾಜ್ಯದ ಮೇಲೆ ಮುಸ್ಲಿಂರು ಪದೇ ಪದೇ ದಾಳಿಮಾಡುತ್ತಿದ್ದರು ಹೀಗಾಗಿ ಸೈನ್ಯವನ್ನು ಯುದ್ಧಗಳಿಗೆ ಸಜ್ಜಗೊಳಿಸುವ ಜವಬ್ದಾರಿ ಅಂದಿನ ಅರಸರ ಸಾಮಂತರ ಮೇಲಿತ್ತು. ಹಿಗಾಗಿ ಮಕ್ಕಳನ್ನೂ ಸಹ ಕ್ರೀಡೆಗಳ ಮುಖಾಂತರವೇ ಸೈನ್ಯಕ್ಕೆ ಸಜ್ಜುಗೊಳಿಸುವ ಬಗೆಯನ್ನು ಕಂಡುಕೊಂಡಿದ್ದರು. ಅವರಿಗೆ ಈ ಕ್ರೀಡೆಯ ಮೂಲಕ ತರಬೇತಿಯನ್ನು ಕೊಡುವ ಹಾಗೆ

ಕ್ರೀಡೆಗಳನ್ನು ಹುಟ್ಟು ಹಾಕಿದ್ದರು. ಒಬ್ಬ ಎದುರಾಳಿಯನ್ನು ಹೇಗೆ ಬಂಧಿಸಬೇಕು, ಕೋಟೆಯನ್ನು ಹೇಗೆ ರಕ್ಷಿಸಿಕೊಳ್ಳಬೇಕು ಮತ್ತು ಹೇಗೆ ಆಕ್ರಮಣಮಾಡಬೇಕು ಇತ್ಯಾದಿ ಅಂಶಗಳು ಅವರ ಕ್ರೀಡೆಯಲ್ಲಿ ಒಳಗೊಂಡಿದ್ದವು.

ಆನೆಕಟ್ಟಾಟವೆ ಎದುರಾಳಿಯನ್ನು ಹೇಗೆ ಸೆರೆಹಿಡಿಯಬೇಕು, ಮರಕೋತಿಯಾಟದಲ್ಲಿ ಕೋಟೆ ಏರುವ ಕಳ್ಳನನ್ನು ಹಿಡಿಯುವ ಬಗೆ ಕಂಡುಕೊಂಡಿದ್ದರು. ಚೆಂಡಾಟ ಚದುರಂಗದಾಟಗಳು, ಸೈನ್ಯ ವ್ಯವಸ್ಥೆಯ ತದ್ರೂಪಗಳೇ ಆಗಿದ್ದವು. ಹೀಗೆ ಕ್ರೀಡೆ ಮೂಲಕ ಅವರು ಸಾಮ್ರಾಜ್ಯ ರಕ್ಷಣೆಯ ಹೊಣೆ ಹೊತ್ತಿದ್ದರು. ಕೋಮಾರರಾಮಯ್ಯನ ಚರಿತ್ರೆಯಲ್ಲಿ ನೇಮಿಖಾನನ ಕಾಳಗ ಮತ್ತು ಸೋಲು ಎಂಬ ೨೧ನೆಯ ಸಂಧಿಯಲ್ಲಿ

ಚದುರಂಗ ಪಗಡೆಯನಾಡುತ ಪೇಳಿದ
ಮದದಾನೆ ಚೆನ್ನಿಗರಾಯ
ಮಂದದಿಂದ ಕಾಟಣ್ಣನೋಳು ಇಂತೆಂದನು
ಚದುರೆ ಪ್ರಧಾನ ಬಂಧಿಹನೆ.[೨೨]

ಅಂದರೆ ಅಂದು ಮುಸ್ಲಿಂರ ಹಾವಳಿ ಹೆಚ್ಚಿದ್ದರಿಂದ ತುಂಬಾ ಜಾಗರೂಕತೆಯಿಂದ ಇರುತ್ತಿದ್ದರು, ಯುದ್ಧ ಸಂಬಂಧಿ ಕ್ರೀಡೆಗಳಿಗೆ ಒಲವು ತೋರಿದ್ದರು. ಬೌದ್ಧಿಕ ಮತ್ತು ದೈಹಿಕ ಕ್ರೀಡೆಗಳಿಗೆ ಹೆಚ್ಚು ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ಅವರು ಯಾವುದೇ ದೇವಾಲಯ, ಸ್ಮಾರಕಗಳನ್ನು ಹೊಕ್ಕರೂ ಅವುಗಳ ಮುಂದೆ ಹುಲಿ ಮನೆಯಾಟ, ಚೌಕಾಬಾರ, ಆನೆಕಟ್ಟಾಟ, ಪಗಡೆಯಾಟ, ಪಗ್ಗದಾಟದ ಕುರುಹು ಕಾಣುತ್ತೇವೆ. ಹಾಗೆ ದೇವಾಲಯದ ಭಿತ್ತಿ ಕಂಬಗಳ ಶಿಲ್ಪಗಳಲ್ಲಿ ಕುಸ್ತಿ, ಕತ್ತಿವರಸೆ, ಇತ್ಯಾದಿ ದೈಹಿಕ ಕಸರತ್ತಿನ ಕ್ರೀಡೆಗಳ ಶಿಲ್ಪಗಳೇ ಹೆಚ್ಚು ಇವೆ. ಹಾಗೆ ಉತ್ಖನನದ ವೇಳೆ ದೊರೆತ ಕುಸ್ತಿಯ ಪರಿಕರ ಅಲ್ಲಿ ದೊರೆತ. ಪಗಡೆಯಾಟದ ದಾಳಗಳು, ಕಸರತ್ತಿನ ಕಲ್ಲುಗಳು ದೊರೆತಿವೆ. ಸ್ತ್ರೀಯರೂ ಕೂಡ ಚೆನ್ನಮಣಿಯಾಟ, ಪಗಡೆಯಾಟ, ಕುಸ್ತಿಗಳಲ್ಲಿ ಪಾಲ್ಗೊಳುತ್ತಿದ್ದರು. ಇವೆಲ್ಲ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ದೈಹಿಕ ಮತ್ತು ಬೌದ್ಧಿಕತೆಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟಿರುವುದು ಕಂಡುಬರುತ್ತದೆ.

ಅಂದು ಪ್ರಾಣಿಗಳನ್ನು ಸಾಕುತ್ತಿದ್ದರು, ಕೆಲವು ಪ್ರಾಣಿಗಳನ್ನು ಕಾಡಿನಿಂದ ಹಿಡಿದು ತಂದು ಪಳಗಿಸುತ್ತಿದ್ದರು. ಕೋಳಿ, ಟಗರು, ಕೋಣ, ಆನೆ, ಈ ರೀತಿಯ ಪ್ರಾಣಿಗಳನ್ನು ಪಳಗಿಸಿ ಅವುಗಳಿಂದ ವಿನೋದ ಪಡೆಯುತ್ತಿದ್ದರು ಪ್ರಾಣಿ, ಪ್ರಾಣಿಗಳ ನಡುವೆ ಕಾಳಗ ಏರ್ಪಡಿಸುವುದು ಇದೇ ಪ್ರಾಣಿ ಗೆಲ್ಲುತ್ತದೆ ಎಂದು ಜೂಜುಕಟ್ಟಿಕೊಳ್ಳುತ್ತಿದ್ದರು. ಈ ರೀತಿಯ ಎಲ್ಲಾ ಪ್ರಾಣಿಕಾಗಳಗಳು ಅಂದಿನ ಪ್ರಮುಖ ಬೀದಿಗಳಲ್ಲೇ ನಡೆಯುತ್ತಿದ್ದವು. ಈ ಕಾಳಗಗಳಿಗೆ ರಾಜಮನ್ನಣೆಯಿತ್ತು. ಜೂಜುಗಾರರ ಮನೆಗಳು ಈ ಬೀದಿಗೆ ಅಂಟಿಕೊಂಡು ಇರುತ್ತಿದ್ದವು ಜೂಜೂಗಾರರು ಈ ರೀತಿಯಾಗಿ ಕಾಲಕಳೆಯುತ್ತಿದ್ದುದಕ್ಕೆ ಅನೇಕ ದಾಖಲೆಗಳಿವೆ. ವಿಜಯನಗರ ಕಾಲದಲ್ಲಿ ಜೂಜಿನಾಟ ಯಥೇಚ್ಚವಾಗಿತ್ತು. ಅಂದಿನ ಜೂಜಿನಿಂದ ಹೇಗೆ ಅವರು ಹಾಳಾಗುತ್ತಿದ್ದರು ಎಂಬುದಕ್ಕೆ ಜೂಜುಂ ಬೇಟೆಯಂ ಕಳ್ಳುಂ....ಕಳವುಮೇಂಬ ಸಪ್ತ ವ್ಯಸನಗಳು ಪೂರ್ದುದು ಇಪ್ಪದು[೨೩] ಎಂದು ಒಬ್ಬ ಕವಿ ಎಚ್ಚರಿಸಿದರೆ ಕನಕದಾಸರು ಈ ಜೂಜುಗಾರರನ್ನು

ವಿತ್ತವಿನಾಶಮಾಡುವ ಜೂಜುಗಾರರೆಂದು ಕರೆದು ಅವರು ಅಂದು ಮನೆಮನೆಗಳಲ್ಲೂ ಇದ್ದರೆಂದು ಹೇಳುವರು

ಲೆತ್ತಪಗಡೆ ರಾಯಬೊಗರಿ ಸೊಲ್ಲೆಹ ಬಾರು
ಗುತ್ತದೊಪ್ಪಿಯ ಸರಿಬೆಸದಿ
ವಿತ್ತವಿನಾಶಮಾಡುವ ಜೂದುಗಾರರ
ಮೊತ್ತ ವಿರ್ದುರು ಮನೆಮನೆಗೆ[೨೪]

ಅಂದು ಜೂಜಾಟಕ್ಕೆ ಇಂತಹ ಸ್ಥಳವೇ ಆಗಬೇಕೆಂದಿರಲಿಲ್ಲ. ನಗರಾಭ್ಯಂತರ ದೇವತಾಭವನದೊಳ್, ಜೂದಿನದಿಂಡೆಯೊಳ್ ನೀತಿಗೆಟ್ಟಾಡುವರ್.[೨೫] ಎಂದು ಈ ಜೂಜುಕೋರರು ದೇವ ಮಂದಿರವನ್ನೂ ಕೂಡ ಬಿಡದೆ ಅಲ್ಲಿಯೂ ನೀತಿಗೆಟ್ಟಾಡುತ್ತಿದ್ದರು ಎಂದು ನೋವಿನಿಂದ ನುಡಿದಿದ್ದಾನೆ. ಈ ಮಾತು ಇಂದಿಗೂ ಸತ್ಯ ಎಂಬುದಕ್ಕೆ ರಕ್ಷಕರಿಲ್ಲದ ಪಾಳು ದೇಗುಲಗಳಲ್ಲಿ, ಹಳ್ಳಿಗಳಲ್ಲಿ ರಜೆದಿನಗಳಲ್ಲಿ ಶಾಲೆಗಳ ಮುಂದೆ, ಊರ ಮುಂದಿನ ಕಟ್ಟೆಗಳ ಮೇಲೆ, ದೇವಾಲಯಗಳ ಮುಂದೆ ಜೂಜುಕೋರರು ಸೇರುವುದನ್ನು ಕಾಣಬಹುದು.

ಈ ಜೂಜುಕಾರರ ಕಾರ್ಯಕ್ಷೇತ್ರ ವಿಶಾಲವಾಗಿತ್ತು ಎಂಬುದಕ್ಕೆ ದಂಡಯಾತ್ರೆಯ ಸಮಯದಲ್ಲಿ ಸೇನೆಯ ಜೊತೆ ತೆರಳುತ್ತಿದ್ದ ನಾನಾ ವೃತ್ತಿಯವರ ಜೊತೆಯಲ್ಲಿ ಜೂಜುಗಾರರು ಇದ್ದರೆಂಬುದಕ್ಕೆ ಕವಿಯ ವರ್ಣನೆಯೇ ಸಾಕ್ಷಿ. ಬಿಸಿನೀರ ಕೇಣಿಗರ್ ಜೂಜುಗಾರರ್ ಮುಖ್ಯರೊದಗಿ ಬರಿತಿರ್ದರ್.[೨೬] ಜೂಜಾಟಗಳ ಮಧ್ಯದಲ್ಲಿ ಆಗುತ್ತಿದ್ದ ಅನಾಹುತಗಳು ಯಾವ ಸ್ವರೂಪದಲ್ಲಿ ಇರುತ್ತಿದ್ದವೆಂಬುದಕ್ಕೆ ಒಬ್ಬ ಕವಿ ಕೋಡುವ ವರ್ಣನೆ ಹೀಗಿದೆ, 'ಕಳದೆ ಪಲ್ಗಳ ಕವಡೆಯ ಗುಪ್ಪೆಯಮಾಡಿ ಆಡುವ ಜೂಂಜೂಗಾರ ಬಳಗವಲ್ಲಿಯೊಪ್ಪಿದರು'[೨೭] ಎಂಬ ಅರ್ಥಗರ್ಭಿತ ವರ್ಣನೆಯೇ ಸಾಕ್ಷಿ. ಹೀಗೆ ವಿಜಯನಗರ ಕಾಲದಲ್ಲಿ ಜೂಜಾಟದಿಂದ ಅಂದಿನ ಸಮಾಜ ಯಾವ ರೀತಿಯಲ್ಲಿ ಸ್ಥಿತ್ಯಂತರವನ್ನು ಪಡೆದಿತ್ತು ಎಂದು ಗುರುತಿಸಬಹುದು.

ವಿನೋದಾವಳಿಯಲ್ಲಿ ಸಂಗೀತ, ನೃತ್ಯಗಳು ಪ್ರಮುಖ ಪಾತ್ರವಹಿಸಿವೆ. ವಿಜಯನಗರ ಕಾಲದಲ್ಲಿ ಇವು ಉತ್ತುಂಗದ ಸ್ಥಿತಿಯಲ್ಲಿದ್ದವು. ಆ ಕಾಲಘಟ್ಟದಲ್ಲಿ ಉತ್ತರ ಭಾರತದಲ್ಲಿ ಮುಸ್ಲಿಂ ಪ್ರಭಾವ ಹೆಚ್ಚಾಗತೊಡಗಿದಾಗ ದಕ್ಷಿಣದಲ್ಲಿ ಭಾರತೀಯತನವನ್ನು ಉಳಿಸಿಕೊಂಡು ಬರಲು ಕರ್ಣಾಟಕ ಸಂಗೀತ ಕಾರಣವಾಯಿತು. ಭಾರತೀಯ ಸಂಗೀತ ಶಾಸ್ತ್ರದಲ್ಲಿ ಉಜ್ವಲವಾದ ದ್ರುವ ನಕ್ಷತ್ರದಂತಿರುವ ಹೆಸರು ಸಾರಂಗದೇವನದು. ಗೀತ, ವಾದ್ಯ, ನೃತ್ಯ ಈ ಮೂರು ಅಂಗಗಳಲ್ಲಿ ಅದುವರೆಗೆ ಆದ ಬೆಳವಣಿಗೆಯನ್ನು ಸಮಾಲೋಕನೆಗೈದು ಮುಂದಿನ ವಿಕಾಸಕ್ಕೆ ಭದ್ರವಾದ ತಳಹದಿಯನ್ನು ಹಾಕಿದ ಮಹಾ ವ್ಯಕ್ತಿ ಈತ, ಹಾಗೆ ವಿಜಯನಗರ ಕಾಲದಲ್ಲಿ ಸಂಗೀತದಲ್ಲಿ ಸ್ಮರಿಸಲೇಬೇಕಾದ ದೊಡ್ಡ ಹೆಸರು ಗೋಪಾಲನಾಯಕ[೨೮] ಈತ ಕರ್ನಾಟಕ ಮತ್ತು ಹಿಂದೂಸ್ಥಾನಿ ಎರಡೂ ಸಂಗೀತ ಪದ್ಧತಿಗಳಲ್ಲಿ ಪ್ರಸಿದ್ಧನಾಗಿದ್ದಾನೆ. ಇವರು ಕರ್ನಾಟಕದಿಂದ ಹೋಗಿ ಉತ್ತರ ಭಾರತದಲ್ಲಿ ತನ್ನ ಛಾಪನ್ನು ಮೂಡಿಸಿದ ವ್ಯಕ್ತಿ. ಹಾಗೆ ಪ್ರೌಢದೇವರಾಯನ ಕಾಲದಲ್ಲಿದ್ದ ಕಲ್ಲಿನಾಥ ಅಥವಾ ಕನ್ನಡದ ಕಲ್ಲಪ್ಪ ಈತ ಸಾರಂಗದೇವನ ಸಂಗೀತ ರತ್ನಾಕರಕ್ಕೆ ವ್ಯಾಖ್ಯಾನವನ್ನು ಬರೆದನು. ಅದೇ ರೀತಿ ರಾಮರಾಯನ ಆಳ್ವಿಕೆಯ ಕಾಲದಲ್ಲಿ ರಾಮಾಮಾತ್ಯ

ಸ್ವರಮೇಳ ಕಲಾನಿಧಿ ಈತನ ಗ್ರಂಥ. ಹಾಗೆ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರದ ವೈಭವ ಅತ್ಯುನ್ನತ ಶಿಖರವನ್ನೇರಿದ್ದು ಸಾಹಿತ್ಯ, ಸಂಗೀತಾದಿ ಕಲೆಗಳಿಗೆ ವಿಶೇಷ ಪೋಷಣೆಯನ್ನು ನೀಡಿದ್ದರಿಂದ. ಹೀಗೆ ಸಂಗೀತವನ್ನು ಜನ ಜೀವನದಲ್ಲಿ ಹಾಸುಹೊಕ್ಕಾಗಿಸಲು ಕಾರಣರಾದವರು ವಾಗ್ಗೇಯಕಾರರು, ಭಕ್ತರು, ಸತ್ಪುರುಷರು. ಒಂದು ಕಡೆ ಅದು ಮನರಂಜನೆಯ ಮಾರ್ಗವಾಗಿ ದೇವಸ್ಥಾನದ ಆಶ್ರಯದಲ್ಲಿ ಬೆಳೆದುಬಂದರೆ ಇನ್ನೊಂದು ಕಡೆ ಆಧ್ಯಾತ್ಮ ರಂಗದಲ್ಲಿ ಪ್ರಧಾನ ಪಾತ್ರವಹಿಸಿತು.

ಹೀಗೆ ವಿಜಯನಗರ ಕಾಲದಲ್ಲಿ ಒಂದು ವ್ಯವಸ್ಥಿತ ರೀತಿಯಲ್ಲಿ ಸಂಗೀತ, ನೃತ್ಯ ಕಲೆಗಳನ್ನು ಅಂದಿನ ಅರಸರಾದಿಯಾಗಿ ಸಾಮಂತರು, ಪೋಷಿಸಿ ಬೆಳಸಿದರು, ಈ ಎಲ್ಲಾ ಅಂಶಗಳನ್ನು ಅಂದಿನ ದೇವಾಲಯಗಳ ಭಿತ್ತಿ, ಕಂಬಗಳ ಮೇಲಿನ ಉಬ್ಬು ಶಿಲ್ಪಗಳು ದೃಢಪಡಿಸುತ್ತವೆ. ಅಂದಿನ ಶಿಲ್ಪಗಳಲ್ಲಿನ ವಾದ್ಯಗಳನ್ನು ನೋಡಿದರೆ ಅವರು ಯಾವ ವಿಧದ ವಾದ್ಯಗಳನ್ನು ಬಳಸುತ್ತಿದ್ದರು ಎಂದು ತಿಳಿಯುತ್ತದೆ. ಅವರು ನಾಲ್ಕು ರೀತಿಯ ವಾದ್ಯ ಬಳಸುತ್ತಿದ್ದರು ಎಂಬುದಕ್ಕೆ ತಂತಿಯನ್ನು ಕಟ್ಟಿ ನುಡಿಸುವ ವೀಣಾಕವೇ ತತವೆನಿಸುವುದು: ಧರ್ಮವಂ ಕಟ್ಟಿ ನುಡಿಸುವ ಮುರಜಾದಿಕವೇ ಅನದ್ಧವೆನಿಸುವುದು ಕಂಚಿನ ತಾಳಾದಿಕವೆ ಘನವೆನಿಸುವುದು.[5] ಹೀಗೆ ಈ ನಾಲ್ಕು ರೀತಿಯ ವಾದ್ಯ ಬಳಸುತ್ತಿದ್ದರು. ಅದೇ ರೀತಿಯಲ್ಲಿ ಇಂದಿನ ಸಂಭ್ರಮಚಾರಣೆಗಳಾದ ರಥೋತ್ಸವ, ವಿವಾಹ, ನಾಟಕ, ನೃತ್ಯ, ಇಂತಹ ಎಲ್ಲಾ ಕಾರ್ಯಕ್ರಮಗಳಲ್ಲಿ ಈ ಮೇಲಿನ ವಾದ್ಯಪರಿಕರಗಳನ್ನು ಬಳಸುತ್ತಾರೆ. ಈ ಎಲ್ಲಾ ಪ್ರಕಾರದ ವಾದ್ಯಗಳ ತಂತ್ರಜ್ಞಾನದ ಪ್ರಭಾವದಿಂದ ಸ್ವಲ್ಪ ಬದಲಾವಣೆ ಹೊಂದಿವೆ. ತಂತ್ರಜ್ಞಾನದ ಅಭಿವೃದ್ಧಿಯಿಂದ ವಾದ್ಯಗಳೆಲ್ಲವೂ ಕಂಪ್ಯೂಟರ್‌ಮಯವಾಗಿವೆ.

ವಿಜಯನಗರದರಸರು ಸಾಮ್ರಾಜ್ಯ ವಿಸ್ತರಣೆಯ, ಆಡಳಿತದ ಜೊತೆ ವಿನೋದ ಚಟುವಟಿಕೆಗಳಾದ ಸಂಗೀತ, ನಾಟ್ಯ, ಸಾಹಿತ್ಯ, ಕಲೆ, ಕ್ರೀಡೆಗಳ ಬೆಳವಣಿಗೆಗೂ ಕಾರಣರಾದರು. ದೇವರಾಯನ ಆಸ್ಥಾನ ಕವಿಯಾದ ಅಷ್ಟಭಾಷಾ ಕವೀಂದ್ರ, ಚಂದ್ರಶೇಖರನು ಓಲಗದ ಮೇಳದವರ ಬಗೆಗೆ ಹೇಳುತ್ತ, ಪಂಪಾಸ್ಥಾನದಲ್ಲಿ ಅಂದು ನಡೆಯುತ್ತಿದ್ದ ನರ್ತನ, ವಾದನ, ಸಂಗೀತ ಕಲೆಗಳ ಸೂಕ್ಷ್ಮ ಪರಿಚಯ ಮಾಡಿಕೊಟ್ಟಿದ್ದಾನೆ.

ವಿಜಯನಗರದಲ್ಲಿ ಪ್ರೌಢದೇವರಾಯ ಮತ್ತು ಕೃಷ್ಣದೇವರಾಯರ ಕಾಲದಲ್ಲಿ ಸಾಮ್ರಾಜ್ಯದ ವೈಭವವು ಪರಾಕಾಷ್ಠತೆ ಮುಟ್ಟಿದ ಸ್ವರ್ಣಕಾಲ, ಇವರಿಬ್ಬರೂ ಸಾಮ್ರಾಜ್ಯದ ಗಡಿ ಗೆರೆಗಳನ್ನು ಹೆಚ್ಚಿಸಿ ಸಮಗ್ರ ದಕ್ಷಿಣ ಹಿಂದೂಸ್ಥಾನವನ್ನು ತಮ್ಮ ಹತೋಟಿಯಲ್ಲಿ ತಂದು ರಾಜ್ಯವಾಳಿದರು. ಅಲ್ಲದೆ ಕಲೆ, ಸಾಹಿತ್ಯ, ಸಂಗೀತಗಳ ಅಭಿರುಚಿಯುಳ್ಳವರು ಮತ್ತು ಸ್ವತಃ ಪ್ರತಿಭಾವಂತರು. ಅವರ ಸಾಮ್ರಾಜ್ಯದಲ್ಲಿ ಸಾಂಸ್ಕೃತಿಕ ಸಂವರ್ಧನೆಗೆ ಅವಕಾಶ ಮಾಡಿಕೊಟ್ಟಿದ್ದರು. ವಿಜಯನಗರದ ಅರಸರು ಅಂದು ಆಚರಿಸುತ್ತಿದ್ದ ಹಬ್ಬಗಳು ಹಿಂದೂ ಸಂಸ್ಕೃತಿಯಲ್ಲಿ ಗಣನೀಯವಾದ ಸ್ಥಾನ ಪಡೆದಿವೆ. ಅವುಗಳಲ್ಲಿ ಉಲ್ಲೇಖಾರ್ಹವೆಂದರೆ ಮಹಾನವಮಿ ಉತ್ಸವ, ವಸಂತೋತ್ಸವ, ಶಿವರಾತ್ರಿ, ಯುಗಾದಿ ಹಬ್ಬಗಳು ಇಂದಿಗೂ ಹಾಳುಬಿದ್ದ ಹಂಪಿಯನ್ನು ನೋಡಹೋದವರಿಗೆ

ಮಹಾನವಮಿದಿಬ್ಬ ಎಂಬ ಎತ್ತರವಾದ ಚೌಕಾಕಾರದ ವೇದಿಕೆಯು ಇದೆ. ಅಂದಿನ ಮಹಾನವಮಿ ಆಚರಣೆಯ ಕೇಂದ್ರ ಸ್ಥಾನವಾಗಿತ್ತೆಂಬುದಕ್ಕೆ ನಿದರ್ಶನವಾಗಿದೆ. ಅಂದು ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಈ ಹಬ್ಬದ ಆಚರಣೆಯ ವೈಶಿಷ್ಟ್ಯವನ್ನು ಒತ್ತಿ ಹೇಳಿದ್ದಾರೆ. ಅಬ್ದುರ್ ರಜಾಕ್ ಈ ಉತ್ಸವ ಮೂರು ದಿನ ನಡೆಯುತ್ತಿತ್ತು ಎಂದು ಹೇಳುತ್ತಾನೆ. ಆದರೆ ಅವನಿಗಿಂತ ಮೊದಲಿನವನಾದ ನಿಕೋಲೋ-ಡಿ-ಕಾಂಟಿ, ನ್ಯೂನಿಜರು ಇದು ಒಂಬತ್ತು ದಿನಗಳ ಹಬ್ಬವಾಗಿತ್ತೆಂದು ಪ್ರತಿದಿನ ವಿಶೇಷ ಪೂಜೆ, ಉತ್ಸವ, ಪ್ರದರ್ಶನ, ಸಭೆ ಸಮಾರಂಭಗಳು ನಡೆಯುತ್ತಿದ್ದವೆಂದು ಹೇಳುತ್ತಾರೆ. ಅಬ್ದುಲ್ ರಜ್ಜಾಕನು ಉತ್ಸವದ ಕಾಲಕ್ಕೆ ನಡೆಸುತ್ತಿದ್ದ ನರ್ತಕಿಯರ ಸಂಭ್ರಮವನ್ನು ವರ್ಣಿಸಿದ್ದಾನೆ. ರಾಜನು ರತ್ನಖಚಿತವಾದ ಸಿಂಹಾಸನದ ಮೇಲೆ ಕುಳಿತಿರುತ್ತಾನೆ. ಅವನ ಹಿಂದೆ ತೆಳುವಾದ ಪರದೆಯಿದ್ದು ಅಲ್ಲಿ ನರ್ತಕಿಯರ ತಂಡವಿರುತ್ತದೆ. ಸಭಾಂಗಣದಲ್ಲಿ ರಾಜ್ಯದ ಮಂತ್ರಿಗಳು ಉಳಿದ ಅಧಿಕಾರಿ ವರ್ಗ ಹಾಗೂ ಪ್ರಜಾಸಮೂಹವೆ ನೆರೆದಿರುತ್ತದೆ. ಸಭಾಮಂಟಪದ ಸುತ್ತಾ ಕಾವಲುಗಾರರು ಬರಹೋಗುವವರ ವ್ಯವಸ್ಥೆಗೆ ನಿಂತಿರುತ್ತಾರೆ. ಸಭೆಯ ಕಾರ್ಯಕಲಾಪಗಳು ನಡೆಯುತ್ತಿದ್ದಾಗ ಸದ್ದುಗದ್ದಲ ನಡೆಯದಂತೆ ಶಾಂತಿ ಪಡೆ ಸುಸಜ್ಜಿತವಾಗಿರುತ್ತದೆ. ಗೊತ್ತುಪಡಿಸಿದ ಅವಧಿಯಲ್ಲಿ ನರ್ತನ, ಗಾಯನ, ಕಾವ್ಯಗೋಷ್ಠಿಗಳು ನಡೆಯುತ್ತವೆ. ಈ ಉತ್ಸವದ ಅಂಗವಾಗಿ ನಡೆಯುವ ವಿವಿಧ ವಿನೋದಾವಳಿಗಳಲ್ಲಿ ಕುದುರೆಗಳ ಮೆರವಣಿಗೆ, ದೊಂಬರಾಟದ ಪ್ರದರ್ಶನ, ಮಲ್ಲಕಾಳಗ, ಕತ್ತಿವರಸೆ, ಮುಖ್ಯವಾದವು ಕೃಷ್ಣದೇವರಾಯನ ಕಾಲಕ್ಕಂತೂ ಈ ಉತ್ಸವವು ತನ್ನ ವೈಭವದ ಪರಕಾಷ್ಠತೆಯನ್ನು ಮುಟ್ಟಿತು. ಈ ಪರಂಪರೆಯನ್ನು ಕಾಯ್ದುಕೊಂಡು ಬಂದ ಶ್ರೇಯಸ್ಸು ಅನಂತರದ ಮೈಸೂರು ಅರಸರಿಗೆ ಸಲ್ಲುತ್ತದೆ. ಇಂದಿಗೂ ದಸರಾ ಹಬ್ಬದ ಜಂಬೂಸವಾರಿ ವಿಶ್ವವಿಖ್ಯಾತವಾಗಿರುವುದನ್ನು ನಾವು ನೋಡುತ್ತೇವೆ.

ಯಾವ ದೊರೆಗಳ ಸಾಮ್ರಾಜ್ಯವು ಕಲಬುರ್ಗಿಯಿಂದ ಕನ್ಯಾಕುಮಾರಿ, ಬಂಗಾಲದಿಂದ ಮಲಬಾರದವರೆಗೆ ವ್ಯಾಪಿಸಿತ್ತೊ, ಅವರಿಗೆ ಸಿಲೋನ್, ಪೇಗು, ಟಿನ್ನೇಸರು, ಪುಲಿಕಾಟ ಮೊದಲಾದ ವಿದೇಶದ ದೊರೆಗಳೂ ಸಹ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ಅವರ ರಾಜಧಾನಿಯ ಪುರಬೀದಿಗಳಲ್ಲಿ ಮುತ್ತು, ರತ್ನಗಳನ್ನು ರಾಶಿ ರಾಶಿಯಾಗಿ ಸುರವಿ ನಿರ್ಭಿತಿಯಿಂದ ವ್ಯಾಪರ ಮಾಡುತ್ತಿದ್ದರು. ಅವರ ಆಸ್ಥಾನಗಳಲ್ಲಿ ಸರ್ವಧರ್ಮ ಸಮ್ಮೇಳನ ಸರ್ವ ಭಾಷಾಮಯಿಯಾದ ಸಾಹಿತ್ಯ ಸರಸ್ವತಿ ನಾಟ್ಯವಾಡಿದಳು. ಅವರು ಹಿಂದೂಗಳಾಗಿದ್ದರು. ಅನ್ಯಮತೀಯರನ್ನು ಆದರದಿಂದ ಕಂಡರು. ಅಂದಿನ ಕಾಲದ ಜನಜೀವನದ ಕ್ರೀಡೆ ಮತ್ತು ವಿನೋದಾವಳಿಯ ಇತಿಹಾಸವನ್ನು ಅವಲೋಕಿಸುವಲ್ಲಿ ಆ ಕಾಲದ ಸಾಂಘಿಕ ಹಾಗೂ ಸಾಂಸ್ಕೃತಿಕ ಜೀವನ ತಿಳಿದುಬರುತ್ತದೆ. ಈ ಕಾಲಕ್ಕೆ ಅನೇಕ ಮತ ಪಂಥಗಳು ಸಾಮಾಜಿಕ ವರ್ಗಗಳು, ಕುಲಭೇದ, ಜಾತಿಭೇದಗಳು, ರಾಜಕೀಯ, ಧಾರ್ಮಿಕ, ಆರ್ಥಿಕ, ಪಕ್ಷ ಪಂಗಡಗಳು, ಉಚ್ಚವರ್ಗ, ನಿಮ್ನ ವರ್ಗಗಳಿದ್ದರೂ ನಿತ್ಯದ ಬದುಕಿನಲ್ಲಿ ಕೂಡಿ ಬಾಳುವ ಒಂದು ಸಂಸ್ಕೃತಿ ಅವರ ಕ್ರೀಡಾ ಮತ್ತು ವಿನೋದಾವಳಿ ಬದುಕಿನಲ್ಲಿ ಎದ್ದು ಕಾಣುತ್ತದೆ.

ಕೆರೆಕಟ್ಟುವುದು, ಬಾವಿ ತೋಡುವುದು, ಅರವಟ್ಟಿಗೆ ನಡೆಸುವುದು ಅಂದಿನ ಧಾರ್ಮಿಕ ಕಾರ್ಯಗಳಾಗಿದ್ದು ಅವರು ತೋರುತ್ತಿದ್ದ ಸ್ನೇಹ ಸಹಕಾರ ಭಾವನೆ ಗಮನಾರ್ಹವಾದುದು. ಆ ಕಾಲಕ್ಕೆ ಪ್ರಬಲವಾಗಿದ್ದ ಜಾತಿ ಪಕ್ಷ-ಪಂಗಡಗಳು ಬಲಗೈ, ಎಡಗೈ ಪಂಥಗಳು. ಅಲ್ಲದೆ ಭಿನ್ನಮತ ಪಕ್ಷಗಳು ನಿಮ್ನವರ್ಗದವರ ವರ್ತಕ ಸಂಘಗಳು ಪರಸ್ಪರ ಸಂಘರ್ಷಣೆಗೆ ತುತ್ತಾಗಿದ್ದರೂ ನಿತ್ಯ ವ್ಯವಹಾರದ ವಿಷಯದಲ್ಲಿ ಹಬ್ಬ-ಉತ್ಸವ ಹರಿದಿನಗಳಲ್ಲಿ ಒಂದಾಗಿ ಬಾಳುತ್ತಿದ್ದರು. ಊರ ದೇವಾಲಯಗಳಿಗೆ ಎಲ್ಲಾ ಜಾತಿಯವರೂ ನಡೆದುಕೊಳ್ಳುವುದು, ಹಬ್ಬ-ಹರಿದಿನಗಳಲ್ಲಿ ಸಮಭಾಗಿಗಳಾಗಿ ವರ್ತಿಸುವುದು ಅಂದಿನ ಕನ್ನಡ ಜನತೆಯ ನಿತ್ಯ ಸಂಸ್ಕೃತಿಯಾಗಿತ್ತು. ಅರಸರು, ಅಧಿಕಾರಿ ವರ್ಗದವರು ಹಾಕಿಕೊಟ್ಟ ದಾನ ಶಾಸನಗಳಲ್ಲಿ ಅವರ ನಿಷ್ಪಕ್ಷಪಾತ ಎದ್ದು ಕಾಣುತ್ತದೆ.

ದೇವಾಲಯ ರಕ್ಷಣೆ, ಪರಂಪರೆಯ ಕಟ್ಟಳೆಗಳನ್ನು ಕಾಯ್ದುಕೊಳ್ಳುವ ಶಕ್ತಿ, ಸರ್ವಧರ್ಮ ಸಮನ್ವಯ, ದೃಷ್ಟಿ ಪ್ರಜಾನುರಾಗ ಇವು ಅಂದಿನ ಅರಸರ ಉನ್ನತ ದೇಯಗಳಾಗಿದ್ದವು. ಕುಮಾರರಾಮ ಚೆಂಡಾಟವಾಡುತ್ತಾನೆ ಎಂಬ ಮಾತು ಕೇಳಿದೊಡನೆ

ಕಟ್ಟಿಗೆಕಾರರು ಬಂದರು ಕೇರಿಕೇರಿಯಲಿ!
ಮಂದಿಯ ಹೊರಡ ಹೇಳಿದರು ರಾಮಯ್ಯನು
ಇಂದು ಚೆಂಡಾಟರಾಡುವರೆ![೩೦]

ಅಂದರೆ ಯಾವದೇ ಕ್ರೀಡೆಗಳು ನಡೆಯಲಿ ಪ್ರತಿಯೊಂದು ಗ್ರಾಮದ ಕೇರಿಗಳಿಗೆ ಹೋಗಿ ಇಂದು ಕ್ರೀಡೆಗಳು ನಡೆಯಲಿವೆ ಎಂದು ಮಾಹಿತಿ ಕೊಡುತ್ತಿದ್ದರು. ಇಂದು ಸಹ ಗ್ರಾಮೀಣ ಭಾಗದಲ್ಲಿ ಊರ ಕಾರ್ಯಕ್ರಮಗಳು ನಡೆದರೆ ತಮಟೆ ಭಾರಿಸುವ, ಕೂಗುವ, ಮತ್ತು ಮೈಕ್‌ಗಳಲ್ಲಿ ಹೇಳುವುದರ ಮೂಲಕ ತಿಳಿಸುತ್ತಾರೆ.

ಗಮ್ಮನೆ ಆ ಮಾತು ಕೇಳುತ ಕೆಲಬರು
ತಮ್ಮ ಮನದಿ ಹರುಷದಲಿ
ಉಮ್ಮಾಯದಿಂದ ಶೃಂಗರಿಸಿಯೇ ಬೀದಿಯೋ
ಳಿಮ್ಮಡಿ ರೂಪ ತೋರಿದರು[೩೧]

ಈ ಮಾತುಗಳನ್ನು ಕೇಳಿ ಜನಗಳು ಆ ಕ್ರೀಡೆಯ ಪ್ರತಿರೂಪವನ್ನು ತಮ್ಮ ಮನದಲ್ಲಿಯೇ ಕಲ್ಪಿಸಿಕೊಂಡು ಸಂತೋಷಪಡುತ್ತಿದ್ದರು

ಅಂದರೆ ಚೆಂಡಾಟಕ್ಕೆ ಬೀದಿಯನ್ನು ಶೃಂಗರಿಸಿ ತಯಾರು ಮಾಡಿದರು ಎಂದಿದೆ

ದೇವಿಸೆಟ್ಟಿಯ ಲಂಗ, ಬೇವಿನ ಸಂಗಯ್ಯ,
ಕೋವಿದ ಕೂಟಗಾರ, ದೇವ!
ಹಾವಳಿಗಾರ ಹಂಪಯ್ಯ ಮೊದಲಾದವರು
ಕೋವಿದ ರಾಮನ ಬಳಿಗೆ[೩೨]

ಯಾವುದೇ ಕ್ರೀಡೆಗಳು ನಡೆಯಲಿ ಆ ಬೀದಿಗಳನ್ನು ಶೃಂಗರಿಸಿ ಆಟಕ್ಕೆ ಸಿದ್ಧಗೊಳಿಸುತ್ತಿದ್ದರು. ನಂತರ ಆಟಗಾರರ ಬಳಿ ಹೋಗಿ ತಿಳಿಸಿ ಆಟಕ್ಕೆ ಸಿದ್ದವಾಗಲು ಹೇಳುತ್ತಿದ್ದರು. ವಿಜಯನಗರ ಕಾಲದ ಪ್ರಭಾವ ಪ್ರಸ್ತುತ ಸಮಾಜದ ಮೇಲೆ ಆಗಿದೆ.

ಅಂದು ಎಲ್ಲಾ ವರ್ಗದ ಜನರು ಸೇರುತ್ತಿದ್ದರು ಎಂದು ಅಂದರೆ ಸ್ವಾಮಿ ಭಕ್ತಿ, ಪ್ರಾಮಾಣಿಕತೆ, ಸಹಕಾರ ಮನೋಭಾವಗಳ ಪ್ರಜೆಗಳ ಕರ್ತವ್ಯಗಳಾಗಿದ್ದವು. ಇಂತಹ ಕ್ರೀಡಾಕೂಟಗಳ ಮುಖಾಂತರ ಅವರು ಸಾಂಘಿಕ ಜೀವನ ನಡೆಸುವುದನ್ನು ಕಲಿತಿದ್ದರು. ಮನುಷ್ಯನ ಬದುಕಿನಲ್ಲಿ ಕ್ರೀಡೆ ಮತ್ತು ವಿನೋದಾವಳಿಗೆ ಪ್ರಮುಖವಾದ ಸ್ಥಾನವಿದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಬದುಕಿನ ವಿವಿಧ ಘಟ್ಟಗಳಲ್ಲಿ ಇವುಗಳೊಂದಿಗೆ ಸಂಬಂಧ ಹೊಂದಿರುತ್ತಾನೆ. ಸಾಮಾಜಿಕ ಸಂಬಂಧಗಳೊಂದಿಗೆ ಇವು ನಿಕಟವಾದ ಸಂಬಂಧವಿದ್ದು ಈ ಹಿನ್ನೆಲೆಯಲ್ಲಿ ಇವುಗಳು ರೂಪುಗೊಂಡಿವೆ. ಮೇಲ್ನೋಟಕ್ಕೆ ಮನರಂಜನೆಯ ಸಾಧನಗಳಾಗಿ ಕಂಡುಬಂದರೂ ಅವುಗಳಿಗೆ ಮಹತ್ವದ ಸಾಮಾಜಿಕ ಉದ್ದೇಶಗಳಿವೆ. ಅಂದು ರಾಜರೂ ಸಹ ಇಂತಹ ಕಾರ್ಯಗಳಿಗೆ ಬೆಂಬಲವಾಗಿ ನಿಲ್ಲುತ್ತಿದ್ದರು. ಅಂದಿನ ಸಮಾಜದಲ್ಲಿ ನಡೆಯುತ್ತಿದ್ದ ಕ್ರೀಡಾ-ವಿನೋದ ಚಟುವಟಿಕೆಗಳು ಅಂದಿನ ಸಮಾಜದ ಮೇಲೆ ಸಾಕಷ್ಟು ಪರಿಣಾಮ ಬೀರಿದ್ದವು.

೫.೨. ಪ್ರಸ್ತುತ ದಿನಗಳಲ್ಲಿ ಕ್ರೀಡೆ ವಿನೋದಾವಳಿ ಸ್ಥಿತ್ಯಂತರ

ಆಧುನಿಕತೆಯ ಬಹುಮುಖ್ಯ ಪರಿಣಾಮ ಎಂದರೆ ಬಹುಮುಖ ಆಯ್ಕೆಗಳ ಕಣ್ಮರೆ. ಭೌತಿಕವಾಗಿ, ದೈಹಿಕವಾಗಿ ಕಣ್ಮರೆಯಾಗದಿದ್ದರೂ ಬದಲಾದ ಪರಿಸ್ಥಿತಿಯಲ್ಲಿ ಪ್ರಾಚೀನ ಬಹುಮುಖ ಆಕರ್ಷಣೆ ಮತ್ತು ನ್ಯಾಯಬದ್ಧತೆಗಳು ಇಲ್ಲವಾಗುತ್ತವೆ. ಹಳೆಯ ಆಯ್ಕೆಗಳಿಗೆ ಅಪ್ರಸ್ತುತತೆಯ ಗರಬಡಿದು ಬಿಟ್ಟಿದೆ. ಜೊತೆಗೆ, ಆಧುನಿಕತೆ ಎಂದರೆ ಈ ದೃಷ್ಟಿಯ ಅನಿವಾರ್ಯ ಆಯ್ಕೆಗಳ ಪರಿಸ್ಥಿತಿ, ಹಳೆಯ ಆಯ್ಕೆಗಳನ್ನು ಗಮನದಲ್ಲಿಟ್ಟುಕೊಂಡು ಹೊರಟರೆ ಶೂನ್ಯದ ಸ್ಥಿತಿ ಆವರಿಸುತ್ತದೆ. ಆದುದರಿಂದಲೇ ಆಧುನಿಕತೆಯ ಅತ್ಯಂತ ಪರಿಣಾಮಕಾರಿ ಸ್ಥಿತಿ ಇರುವುದು. ಆಧುನಿಕ ಕ್ರೀಡೆ ಮತ್ತು ವಿನೋದಾವಳಿಗೆ ಸಂಬಂಧಿಸಿದಂತೆ ಪ್ರತಿಷ್ಠಿತ ಮಾದರಿ ಸೃಷ್ಟಿಸಿದೆ. ಇಂತಹ ಪ್ರತಿಷ್ಠಿತ ಮಾದರಿಗಳು ಬಹುಮುಖ್ಯವಾಗಿ ವಾಣಿಜ್ಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿವೆ. ಆಧುನಿಕತೆಯ ವಿಜ್ಞಾನದ ಮುಖೇನ ಯಜಮಾನತೆಯನ್ನು ಹೊಂದಿದೆ. ಈ ತರಹದ ಸೃಷ್ಟಿ ಅವಸರದ ಸೃಷ್ಟಿ. ದಿಢೀರನೆ ಸ್ಫೋಟಗೊಂಡಿದ್ದು ಪ್ರಾಚೀನ ಕ್ರೀಡೆ ಮತ್ತು ವಿನೋದಾವಳಿಗಳು ಜ್ಞಾನ, ತಿಳುವಳಿಕೆ, ಪರಂಪರೆ ಹಾಗೂ ಜೀವನ ಕೌಶಲ್ಯತೆಯ ಹಿನ್ನೆಲೆಯಲ್ಲಿ ಬಂದಿರುವಂತಹದ್ದು. ಅಂದರೆ ಶತಮಾನಗಳ ಶೋಧನೆಯಿಂದ ಕೂಡಿರುವಂತಹದ್ದು. ಈ ಜ್ಞಾನ ಒಂದು ಕೇಂದ್ರದಲ್ಲಿ ಇರುವುದಲ್ಲ ಬಹುತೇಕ ಕೇಂದ್ರಗಳಲ್ಲಿ ಇರವಂಥಹದ್ದು. ಇದು ಸ್ವತಂತ್ರವಾಗಿ ಸೃಷ್ಟಿಯಾಗಿ ಬೆಳೆದು ಸ್ವತಂತ್ರ ಕಾರ್ಯ ತತ್ಪರತೆಯನ್ನು ಪಡೆದಿದೆ. ಇದು ಮನುಷ್ಯರೊಂದಿಗೆ ಇದೆ. ನಾವು ನಮ್ಮನ್ನು ಬೇರೆಯ ತೂಕಕ್ಕೆ ಒಳಪಡಿಸುವ ಒತ್ತಡಕ್ಕೆ ಒಳಗಾಗಿದ್ದೇವೆ. ಇದು ಎಷ್ಟು ಸರಿ ಎಂದು ಯೋಚಿಸುವ ಕಾಲವಿದೆ. ಆಧುನಿಕತೆಯ ಕೇಂದ್ರೀಕರಣದಲ್ಲಿ ಕ್ರೀಡೆ, ವಿನೋದಾವಳಿ, ಸಾಹಿತ್ಯಗಳನ್ನು ಕೂಡ ನಾಗರೀಕತೆ ಹೆಸರಿನಲ್ಲಿ ಪೊಳ್ಳುಗೊಳಿಸುತ್ತದೆ. ಜೀವಂತ ಕ್ರೀಡೆ ಮತ್ತು ವಿನೋದಾವಳಿಗಳನ್ನು ಕೂಡ ಸುಲಭದಲ್ಲಿ ಮಾರಲು ಸಾಧ್ಯವಿಲ್ಲ. ಆದರೆ ಮಾರುಕಟ್ಟೆಯ ಸರಕಾಗಿ ಪರಿವರ್ತಿಸುತ್ತಿದೆ. ಈ ಜಾಗತೀಕರಣ ಕ್ರೀಡೆ ಮತ್ತು ವಿನೋದಾವಳಿಗಳನ್ನು ಅವುಗಳ ಪರಿಸರ ಸಂದರ್ಭಗಳಿಂದ ಬೇರ್ಪಡಿಸಿ ಶ್ರೀಮಂತರು ಸುಖ ಸಂತೋಷಕ್ಕಾಗಿ ನಗರಗಳ

ಪಂಚತಾರ ಹೋಟಲ್‌ಗಳಲ್ಲಿ ಪ್ರದರ್ಶಿಸುವುದು ಇದಕ್ಕೊಂದು ನಿದರ್ಶನ. ಕಲೆ ಮತ್ತು ಕಲೆಗಾರರನ್ನು ಸ್ಥಾಪಿತ ಹಿತಾಸಕ್ತಿಗಳು ತಮ್ಮ ಭೋಗಕ್ಕಾಗಿ ದುಡಿಸಿಕೊಳ್ಳುತ್ತಾರೆಯೇ ವಿನಃ ಪೋಷಿಸಿ ಬೆಳಸುತ್ತಿಲ್ಲ. ಇವುಗಳ ಮಾದರಿಯನ್ನು ಎಂದು ಬೆಳೆಯಲು ಬಿಡುವುದಿಲ್ಲ. ವರ್ಗ ಶ್ರೇಷ್ಠ ಪ್ರಬಲರ ಅಂಕೆಯಲ್ಲಿರುವ ಸಮೂಹ ಮಾಧ್ಯಮಗಳು ಕ್ಲಾಸಿಕಲ್ ಸಾಂಸ್ಕೃತಿಕ ಕಲಾಪ್ರಕಾರಗಳನ್ನು ಸಾಮಾನ್ಯ ಜನರ ಮೇಲೆ ಹೇರುತ್ತಾ ವೈವಿಧ್ಯಮಯ ಸಂಸ್ಕೃತಿಯ ಅವನತಿಗೆ ಕಾರಣವಾಗುವ ಸಾಧ್ಯತೆ ಹೆಚ್ಚಾಗಿದೆ. ಪ್ರತಿಷ್ಠಾಪಿತ ಮಾದರಿ ಸಮಾಜದ ಅಭಿರುಚಿಯನ್ನು ಭ್ರಷ್ಟಗೊಳಿಸಲು ಪ್ರಯತ್ನಿಸುತ್ತಿವೆ. ಪ್ರಭಲ ಶಕ್ತಿಗಳು ಲಾಭ ದೃಷ್ಠಿಯಿಂದ ನೋಡಿಯೇ ವಿನಃ ಜೀವನದ ಸಂಭ್ರಮದ ದೃಷ್ಠಿಯಿಂದಲ್ಲ.

ನಮ್ಮ ಬದುಕು ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಾ ಹೋಗುತ್ತಿದೆ. ಜಾಗತೀಕರಣ, ವ್ಯಾಪಾರೀಕರಣ, ನಗರೀಕರಣದ ನೆಪದೊಳಗೆ ದೇಶಿಯತೆ ದೂರವಾಗುತ್ತಿದೆ. ಗ್ರಾಮ ಸಂಸ್ಕೃತಿಯ ವೈವಿಧ್ಯಮಯ ಆಚರಣೆಗಳು ನಾಶವಾಗುತ್ತಿವೆ. ಇನ್ನೂ ಕೆಲವು ಕ್ರೀಡೆ ಮತ್ತು ವಿನೋದಾವಳಿಗಳು ತಮ್ಮ ಮೂಲ ಸ್ವರೂಪ ಕಳೆದುಕೊಂಡು ಹೊಸರೂಪ ಪಡೆದುಕೊಂಡಿವೆ.

ಕ್ರೀಡೆ ಮತ್ತು ವಿನೋದಾವಳಿಗಳು ನಮ್ಮ ಸಂಸ್ಕೃತಿಯ ಸಂಕೇತಗಳೆಂಬಂತೆ ಬದುಕಿನಲ್ಲಿ ಬೆರೆತಂಥವುಗಳು. ಇವುಗಳು ಬರೀ ಮನರಂಜನಾ ಮಾಧ್ಯಮಗಳಾಗಿ ನಿಲ್ಲದೆ ಧಾರ್ಮಿಕ ಪರಂಪರೆಯ ಮಹತ್ವ ಗಳಿಸಿಕೊಂಡಂತವು. ಮನುಷ್ಯನ ದೈಹಿಕ ಶಕ್ತಿ ಬಲಗೊಳ್ಳಲು ಮತ್ತು ಸಂಸ್ಕೃತಿಯ ಉಳಿಕೆಗೆ ಇವು ಸಾಧನಗಳಾಗಿ ನಿಲ್ಲುತ್ತವೆ. ಆದರೆ ಇಂದು ಪ್ರಾಚೀನ ಕ್ರೀಡೆ ಮತ್ತು ವಿನೋದಾವಳಿಗಳು ಮರೆಯಾಗುತ್ತಿವೆ. ದೂರದರ್ಶನ, ಸರ್ಕಾರ ನಡೆಸುವ ಕೆಲವು ಕಾರ್ಯಕ್ರಮಗಳಲ್ಲಿ ಕೇವಲ ವೇದಿಕೆಗೆ ಸೀಮಿತವಾಗಿವೆ. ಇವುಗಳ ಹುಟ್ಟು ಮತ್ತು ಬೆಳವಣಿಗೆ ಉಳಿಸಿಕೊಂಡು ಹೋಗುವ ಚಿಂತನೆಯ ಅಗತ್ಯ ನಮಗೆ ಎದ್ದುಕಾಣುತ್ತದೆ.

ನಮ್ಮ ಪೂರ್ವಿಕರು ಇಂತಹ ಕ್ರೀಡೆ ಮತ್ತು ವಿನೋದಾವಳಿಗಳಿಂದ ಬದುಕಿನ ಸಂಬಂಧ ಗಳಿಸಿಕೊಳ್ಳುತ್ತಿದ್ದರು ಎಂಬುದನ್ನು ಮರೆಯದೆ ಇವುಗಳ ಪುನಃಶ್ಚೇತನಕ್ಕೆ ಮುಂದಾಗಬೇಕಾಗಿದೆ. ಮನುಷ್ಯನ ಜೀವನ ವಿಕಾಸದ ನೆಲೆಯಲ್ಲಿ ಕ್ರೀಡೆ ಮತ್ತು ವಿನೋದಾವಳಿಗಳು ಪ್ರಧಾನ ಪಾತ್ರವಹಿಸಿವೆ. ಅಂದು ನಾಗರಿಕ ಬದುಕಿನಿಂದ ದೂರವಿದ್ದ ಮುನುಷ್ಯ ಕಾಡಿನಲ್ಲಿರುವಾಗ ಆಸರಿಕೆ ಮತ್ತು ಬೇಸರಿಕೆ ಕಳೆಯಲು ತನಗೆ ತಿಳಿದಂತೆ, ಮನಸ್ಸಿಗೆ ಮುದವಾಗುವಂತೆ ಆಟವಾಡುತ್ತಾ, ತನ್ನೊಟ್ಟಿಗೆ ಬೇರೆಯ ಜನರೊಂದಿಗೆ ಬಾಳಿನ ಪ್ರತಿಬಿಂಬದ, ಕ್ರೀಡೆಗಳನ್ನು ರೂಪಿಸಿಕೊಂಡು ಇತರರಿಗೂ ಕಲಿಸಿದ್ದ. ಪ್ರಾಚೀನ ಮತ್ತು ಮಧ್ಯಕಾಲೀನ ಕಾಲದಲ್ಲಿ ರಾಜ ಮಹಾರಾಜರ ಆಶ್ರಯಗಳಲ್ಲಿ ಕೆಲವು ಕ್ರೀಡೆ ಮತ್ತು ವಿನೋದಾವಳಿ ಚಟುವಟಿಕೆಗಳು ಪೋಷಿಸಿ ಬೆಳಸಿದರು. ಅವು ನಮ್ಮ ಸಂಸ್ಕೃತಿಯ ಪ್ರತಿಬಿಂಬದಂತೆ ಇರುತ್ತಿದ್ದವು. ಮಾನಸಿಕವಾಗಿ ದೈಹಿಕವಾಗಿ ಮನಸ್ಸಿಗೆ ಮುದ ನೀಡುತ್ತಿದ್ದವು. ಅವುಗಳಲ್ಲಿ ಪರ ವಿರೋಧ ಚಟುವಟಿಕೆಗಳಿಂದ ಕೂಡಿದ್ದು, ಒಂದು ಸಾಮ್ರಾಜ್ಯ ಜಯಿಸಲು ನೆರವಾಗುವಂತಹ, ತನಗೆ ಆಪತ್ತು ಬಂದಾಗ ಹೇಗೆ ರಕ್ಷಿಸಿಕೊಳ್ಳಬೇಕು ಎಂಬಂತಹ ಕ್ರೀಡೆಗಳನ್ನು ರೂಪಿಸಿಕೊಂಡಿದ್ದರು. ಯುದ್ಧ ಜಯಿಸಿದಾಗ,

ಹಬ್ಬ ಹರಿದಿನ, ಜಾತ್ರೆ ಉತ್ಸವಗಳಂತಹ ಸಂದರ್ಭಗಳಲ್ಲಿ ವಿನೋದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದರು.

ಆಧುನಿಕತೆಯ ರಭಸದ ತೆರೆಯಲ್ಲಿ ಇವುಗಳು ಕರಗಿ ಮಾಯವಾಗುತ್ತಿವೆ. ಎಷ್ಟೋ ಪ್ರಾಚೀನ ಕ್ರೀಡೆ ಮತ್ತು ವಿನೋದಾವಳಿಗಳು ಹೆಸರಿಗೆ ಮಾತ್ರ ಇದ್ದು ವೇದಿಕೆಗೆ ಅಷ್ಟೆ ಸೀಮಿತವಾಗಿವೆ. ಅವುಗಳು ಇಂದು ನಡೆಯಲಾಗದ ಸವಕಲು ನಾಣ್ಯಗಳಾಗಿವೆ. 'ಬೀದಿ ಕೂಸು ಬೆಳೆಯಿತು, ಕೋಣೆ ಕೂಸು ಕೊಳೆಯಿತು' ಎಂಬ ಗಾದೆ ಮಾತು ನಿಜಕ್ಕೂ ಸತ್ಯವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಆಧುನಿಕತೆಯ ಶಿಷ್ಟ, ಪಾಶ್ಚಾತ್ಯ ಕ್ರೀಡೆ ಮತ್ತು ವಿನೋದಾವಳಿಗೆ ಸಿಗುವ ಸ್ಥಾನಮಾನ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಂತಹ ದೇಶಿಯ ಕ್ರೀಡೆ ಮತ್ತು ವಿನೋದಾವಳಿಗಳಿಗೂ ಪ್ರಾಧಾನ್ಯತೆ ಸಿಗಬೇಕು. ಅನೇಕ ರಾಜಕೀಯ ವಿಭಾಗದಿಂದ ಕೂಡಿದ ನಮ್ಮ ದೇಶದಲ್ಲಿ ಶತ ಶತಮಾನಗಳಿಂದ ಕಲಹ-ಕೋಲಾಹಲಗಳಿಂದ ನೆಮ್ಮದಿ, ವೈಭವಗಳು ಕಣ್ಣಾಮುಚ್ಚಾಲೆಯಂತೆ ನಡೆದುಕೊಂಡು ಬಂದಿವೆ. ದೇಶದಲ್ಲಿ ಮೇಲಿಂದ ಮೇಲೆ ಅನೇಕ ಪರಕೀಯರ ಪ್ರಭಾವಗಳಾಗಿವೆ. ನೆಮ್ಮದಿಯ ಸುಭದ್ರ ಆಡಳಿತದಿಂದ ವಂಚಿತವಾಗಿದೆ. ಅನೇಕ ಮತ ಧರ್ಮಗಳ ಪೈಪೋಟಿ ನಡೆದಿದೆ ವಿವಿಧ ಬಗೆ ರೂಢಿ ಸಂಪ್ರದಾಯಗಳು ಸಾಮಾಜಿಕ ಸಮಸ್ಯೆಗಳು ಉದ್ಭವಿಸಿವೆ. ನಮ್ಮಲ್ಲಿ ಅನೇಕ ಕ್ರೀಡೆಗಳು ಹುಟ್ಟಿದವು. ಪ್ರಚಾರ ಹೊಂದಿದವು. ರೂಪಾಂತರಗೊಂಡವು, ವಿನೋದಾವಳಿಗಳು ಸಂಸ್ಕೃತಿಯ ಪ್ರತಿಬಿಂಬದಂತೆ ಬೆಳೆದು ನಿಂತವು. ಇಷ್ಟಾದರೂ ಪ್ರಾಚೀನ ಕಾಲದ ಕ್ರೀಡೆ ಮತ್ತು ವಿನೋದಾವಳಿಯ ಪ್ರವಾಹ ಇಪ್ಪಂತ್ತೊಂದನೆಯ ಈ ಕಂಪ್ಯೂಟರ್ ಯುಗಕ್ಕೂ ಹರಿಯುತ್ತಾ ಬಂದಿರುವುದನ್ನು ಕಾಣುತ್ತೇವೆ. ಕೆಲವು ನಶಿಸಿ ಹೋಗಿರುವುದನ್ನು ನೋಡಬಹುದು. ಇವುಗಳು ಕೇವಲ ಅಲ್ಲಲ್ಲಿ ನಡೆಯುವ ಸಾರ್ವಜನಿಕ ಸಮಾರಂಭಗಳಲ್ಲಿ ಪ್ರದರ್ಶಿತಗೊಳ್ಳಲು ಸೀಮಿತವಾಗಿವೆ. ಈ ನಿಟ್ಟಿನಲ್ಲಿ ಗ್ರಾಮೀಣ ಕ್ರೀಡೆಗಳನ್ನು ಉಳಿಸಿ, ಪೋಷಿಸಿಕೊಂಡು ಹೋಗುವ ಮನಸ್ಸು ಮಾಡಬೇಕಿದೆ.

ಇಂದು ಪಾಶ್ಚಿಮಾತ್ಯ ಶಿಕ್ಷಣದ ಸಂಪರ್ಕದಿಂದಲೋ, ವೈಜ್ಞಾನಿಕತೆಯ ಪ್ರಭಾವದಿಂದಲೋ ನಗರ ಪಟ್ಟಣಗಳಲ್ಲಿ ಮಕ್ಕಳಾದಿಯಾಗಿ ದೊಡ್ಡವರೂ ಪಾಶ್ಚಿಮಾತ್ಯ ಕ್ರೀಡೆ, ಸಂಗೀತ, ನೃತ್ಯ, ನಾಟಕ, ಸಿನಿಮಾಗಳತ್ತ ವಾಲುತ್ತಿದ್ದಾರೆ ಇಂಥ ಸೊಂಕು ಗ್ರಾಮೀಣ ಪ್ರದೇಶಕ್ಕೂ ಬಾಧಿಸದೇ ಬಿಟ್ಟಿಲ್ಲ. ಚಿಕ್ಕ ಮಕ್ಕಳು, ಬುಗರಿ, ಚಿನ್ನಿಕೋಲು, ಮರಕೋತಿಯಾಟ, ಗೋಲಿ, ಕುಂಟಾಬಿಲ್ಲೆ, ಲಗೋರಿ ಆಟಗಳನ್ನು ಮರೆಯುತ್ತಿದ್ದಾರೆ. ತುಂಬಾ ಬೆಲೆ ತೆರಬೇಕಾದ ಪಾಶ್ಚಿಮಾತ್ಯ ಕ್ರೀಡೆಗಳಾದ ಕ್ರೀಕೆಟ್, ಹಾಕಿ, ವಾಲಿಬಾಲ್, ಥ್ರೂಬಾಲ್, ಬಾಸ್ಕೇಟ್‌ಬಾಲ್, ರಿಂಗ್, ಟೆನಿಸ್‌ನಂತ ಕ್ರೀಡೆಗಳತ್ತ ವಾಲುತ್ತಿದ್ದಾರೆ. ಈ ಕ್ರೀಡೆಗಳು ಶಾಲಾಕಾಲೇಜು, ವಿಶ್ವವಿದ್ಯಾಲಯ ಮಟ್ಟಗಳಲ್ಲಿ ಬಳಕೆಯಾಗುತ್ತಿವೆ. ದುಬಾರಿ ವೆಚ್ಚದ ಪರಿಕರ ಬಳಸುವ ಪರಿಸ್ಥಿತಿಯುಂಟಾಗಿದೆ. ಸಾಮಾನ್ಯ ಮಕ್ಕಳ ಕೈಗೆ ಇವುಗಳು ಸಿಗುವ ಸ್ಥಿತಿಯಲ್ಲಿ ಇಲ್ಲ ಆದರೂ ಪಾಶ್ಚಿಮಾತ್ಯ ಕ್ರೀಡೆ ವಿನೋದಾವಳಿಯ ವ್ಯಾಮೋಹ ಬಿಡುತ್ತಿಲ್ಲ.

ಪ್ರಸ್ತುತ ನಗರ-ಪಟ್ಟಣಗಳಲ್ಲಿ ಜರುಗುವ ಕ್ರೀಡೆ ವಿನೋದಾವಳಿಗಳು ವಿದೇಶಿಯರ ದುಂದು ವೆಚ್ಚದ ಕಾರ್ಯಕ್ರಮಗಳಾಗಿವೆ. ಹಣ ಕಟ್ಟಿ ಆಡುವ ಕುದುರೆ ಓಟ, ಇಸ್ಪೀಟ್, ಲಾಟರಿ, ಮಟ್ಕ ಇತ್ಯಾದಿಗಳು ಆಟದ ಪಾವಿತ್ರ್ಯ ಕಳೆದು ದ್ವೇಷ ಅಸೂಯೆ ಜಗಳಗಳಿಗೆ ಕಾರಣಗಳಾಗಿವೆ. ಪಬ್, ಬಾರ್, ಸಿನಿಮಾ, ವಿಡಿಯೊ ಥಿಯೇಟರ್, ಪಂಚತಾರಾ ಹೋಟಲ್‌ಗಳಲ್ಲಿ ನಡೆಯುವ ಸಂಗೀತ, ನೃತ್ಯದಂತಹ ವಿನೋದಾವಳಿಗಳು ಸಮಾಜದ ಸ್ವಾಸ್ತ್ಯವನ್ನು ಹಾಳುಗೆಡಹಿವೆ. ಬುದ್ಧಿಮತ್ತೆಯನ್ನು ಹೆಚ್ಚಿಸುವ ಕ್ರೀಡೆಗಳಾದ ಆನೆಯಾಟ, ಪಗಡೆಯಾಟ, ಹುಲಿಮನೆಯಾಟ, ಪಗ್ಗದಾಟಗಳು ಅಳಿವಿನಂಚಿನಲ್ಲಿವೆ. ದೈಹಿಕ ಬಲ ನೀಡುವ ಕ್ರೀಡೆಗಳಾದ ಕಲ್ಲೆತ್ತುವುದು ಚಿನ್ನಿದಾಂಡು, ಕೋಲಾಟ, ಲಗೋರಿ, ಮರಕೋತಿಯಾಟ, ಕಣ್ಣಾಮುಚ್ಚಾಲೆ ಚೆಂಡಾಟ ಇಂತಹ ಕ್ರೀಡೆಗಳು ಗ್ರಾಮೀಣ ಜನರಲ್ಲಿ ಇಂದು ಮರೆಯಾಗಿವೆ.

ಕುಟುಂಬ, ಗ್ರಾಮಗಳನ್ನು ಒಂದುಗೂಡಿಸುವ ಸಾಂಸ್ಕೃತಿಕ ಚಟುವಟಿಕೆಗಳಾದ ಜಾತ್ರೆ, ಉತ್ಸವ, ಹಬ್ಬ ಹರಿದಿನಗಳಲ್ಲಿ ನಡೆಯುವ ಮನರಂಜನಾತ್ಮಕ ಅಂಶಗಳು ಕೂಡ ಕಣ್ಮರೆಯಾಗುತ್ತಿವೆ. ಈ ರೀತಿಯಾಗಿ ನಮ್ಮ ದೇಶದಲ್ಲಿ ಎಷ್ಟೋ ಪ್ರಾಚೀನ ಕ್ರೀಡೆ, ವಿನೋದಾವಳಿಗಳು ನಶಿಸುತ್ತಿವೆ. ಇಂಥವುಗಳನ್ನು ಸಂಗ್ರಹಿಸಿ ಅವುಗಳನ್ನು ಮತ್ತೆ ಚಾಲ್ತಿಗೆ ಬರುವಂತೆ ಕಾರ್ಯಗಳು ಆಗಬೇಕಿದೆ.

ಕೈಗಾರಿಕಾ ಕ್ರಾಂತಿಯ ಮೂಲಕ ಹುಟ್ಟಿದ ಬಂಡವಾಳಶಾಹಿ ವ್ಯವಸ್ಥೆಯು ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸತೊಡಗಿದವು. ಗೃಹ ಕೈಗಾರಿಕೆಗಳು ಕಡಿಮೆಯಾಗಿ ಅವುಗಳಿಗೆ ಸಂಬಂಧಿಸಿದ ಜನಪದ ಕಲೆಗಳು ಮತ್ತು ಆಟದ ಸಾಮಗ್ರಿಗಳು ಮರೆಯಾದವು, ಮೊದಲು ಬುಗರಿ, ಚಿನ್ನಿಕೋಲನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಇಂದು ಎಲ್ಲಾ ತಯಾರಿರೂಪದಲ್ಲಿ ಪ್ಲಾಸ್ಟಿಕ್ ಪರಿಕರಗಳು ದೊರೆಯುತ್ತಿವೆ. ಇವುಗಳಿಂದ ಪರಿಸರ ಮಾಲಿನ್ಯದ ಜೋತೆಗೆ ಪ್ರಾಚೀನ ಕ್ರೀಡೆಗಳು ಮರೆಯಾಗುತ್ತಿವೆ. ಮೊದಲು ಗ್ರಾಮೀಣ ಪ್ರದೇಶಗಳಲ್ಲಿ ಬೀದಿನಾಟಕ, ದೊಂಬರಾಟ, ಗೊಂಬೆಯಾಟಗಳು ಉಚಿತವಾಗಿ ಮನರಂಜನೆಯನ್ನು ನೀಡುತ್ತಿದ್ದವು. ಅದೇ ಇಂದು ಸಿನಿಮಾ ಪಬ್, ಬಾರ್‌ಗಳಿಗೆ ಹೆಚ್ಚು ಮೊತ್ತದ ಹಣ ನೀಡಿ ನೋಡಬೇಕಾಗಿದೆ. ಇಂಥ ಗ್ರಾಮೀಣ ಪ್ರದೇಶದ ಕಲೆಗಳು ಸಾಮೂಹಿಕವಾಗಿ ಮರೆಯಾಗಿರುವುದನ್ನು ಕಾಣಬಹುದು.

ಸಾಮಾಜಿಕ ಬದಲಾವಣೆಯಲ್ಲಿ ಕ್ರೀಡೆ ಮತ್ತು ವಿನೋದಾವಳಿ

ಸ್ವಾತಂತ್ರ್ಯನಂತರ ಮುಖ್ಯವಾಗಿ ಹೊಸ ಶಿಕ್ಷಣ, ಅಂತರಾಷ್ಟ್ರೀಯ ಸಂಬಂಧ ಕೈಗಾರಿಕಾ ನೀತಿಗಳಿಂದಾಗಿ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳುಂಟಾದವು. ಈ ರೀತಿಯ ಬದಲಾವಣೆಗಳು ನಮ್ಮ ನಾಡಿನ ಸಾಮಾಜಿಕ ವ್ಯವಸ್ಥೆಯ ಮೇಲೂ ಆಗಿವೆ. ಈ ದೃಷ್ಟಿಯಿಂದ ಹಿಂದಿನ ರೂಪ ಮತ್ತು ಮೌಲ್ಯ ಹೊಂದಿರುವ ಪ್ರಾಚೀನ ಕ್ರೀಡೆ ಮತ್ತು ವಿನೋದಾವಳಿಗಳು ಕಣ್ಮರೆಯಾಗಿವೆ. ಅಥವಾ ಹೊಸ ರೂಪ ಪಡೆದು ಕ್ರಿಯೆಯಲ್ಲಿವೆ.

ಇದಕ್ಕೆ ಅನೇಕ ಉದಾಹರಣೆ ನೀಡಬಹುದು, ಚೆಂಡಾಟ, ಚಿನ್ನಿದಾಂಡು, ಪಗ್ಗದಾಟ, ಬೊಂಬೆಯಾಟ, ಬಯಲಾಟ ಹಾವಾಡಿಗರಾಟ ಇಲ್ಲವಾಗಿವೆ. ಇಂದು ಹುಲಿಮನೆಯಾಟ

ಜನಪ್ರಿಯವಾಗಿಲ್ಲ. ಮುಖ್ಯವಾದ ಕಾರಣವೆಂದರೆ ಭೌಗೋಳಿಕ ಮತ್ತು ಸಾಮಾಜಿಕ ಪರಿಸರದಲ್ಲಾದ ಬದಲಾವಣೆ ಅಂದು ಅತಿ ಹೆಚ್ಚು ಅರಣ್ಯ ಪ್ರದೇಶವಿತ್ತು ಸಾಕಷ್ಟು ಕಾಡು ಪ್ರಾಣಿಗಳಿದ್ದವು ಇಂದು ಕಾಡು ಮತ್ತು ನಾಡಿನ ಸಂಬಂಧ ಹಿಂದಿನಂತಿಲ್ಲ. ಅಂದು ಜನರು ತಮ್ಮ ಅಗತ್ಯ ಮತ್ತು ಕಸುಬುಗಳಿಗಾಗಿ ಕಾಡು ಅವಲಂಬಿಸಿದ್ದರು. ಬೇಟೆಯಾಡಲು, ಕಟ್ಟಿಗೆ ತರಲು ಇತರೆ ಉದ್ದೇಶಗಳಿಗೆ ಕಾಡೇ ಜೀವನದ ಒಂದು ಭಾಗವಾಗಿತ್ತು. ಇಂದು ಉರುವಲಿಗೆ ಬದಲಾಗಿ ಗ್ಯಾಸ್, ಸೀಮೆಎಣ್ಣೆ ತಂತ್ರಜ್ಞಾನದ ಬದಲಾವಣೆಯಿಂದಾಗಿ ಸೌರವಿದ್ಯುತ್ ಒಲೆಗಳು, ಅರಣ್ಯ ಸಂರಕ್ಷಣೆಯ ಕಾನೂನಿನಿಂದಾಗಿ ಕಾಡು ಪ್ರಾಣಿಗಳ ಬೇಟೆಯ ನಿಷೇಧಗಳು ಜನರ ಕಾಡಿನ ನಡುವಿನ ಸಂಬಂಧಗಳ ಬದಲಾವಣೆಗೆ ಮುಖ್ಯವಾದ ಕಾರಣ.

ಹುಲಿಯಂತಹ ಕಾಡು ಪ್ರಾಣಿಗಳ ಸಂಖ್ಯೆ ಕಡಿಮೆಯಾಗಿದೆ. ಅಂದು ನಾಡ ಹಸು ಮೇಯಿಸಲು ಕಾಡಿಗೆ ಹೋಗಬೇಕಾಗಿತ್ತು. ಇಂದು ಹೈಬ್ರಿಡ್ ತಳಿ ಹಸುಗಳಿಂದ ಮನೆಯಲ್ಲೇ ಕಟ್ಟಿ ಮೆಯಿಸುವ ಪದ್ಧತಿ ಇದೆ. ಇಂತಹ ದೃಷ್ಟಿಯಿಂದ ಕಾಡಿನೊಂದಿಗಿನ ಸಂಬಂಧ ಗ್ರಾಮೀಣ ಭಾಗದ ಜನರಲ್ಲಿ ಸಾಕಷ್ಟು ಬದಲಾವಣೆ ತಂದಿದೆ. ಕಾಡುನಾಡಿನ ಸಂಬಂಧ ಮಹತ್ವ ಕಳೆದುಕೊಳ್ಳುವ ಕಾರಣವಾಗಿದೆ. ಅಂದು ಹಸುಗಳನ್ನು ಮೇಯಿಸಲು ಹೋದಾಗ ಹುಲಿಯು ಅವುಗಳನ್ನು ಅಪಹರಿಸುವ ಮೂಲಕ ಆರ್ಥಿಕ ಉತ್ಪಾದನೆಯ ಮೇಲೆ ಅತಿಕ್ರಮಣ ಮಾಡುವ ಸ್ಥಿತಿ ಇತ್ತು ಆದರೆ ಇಂದಿಲ್ಲ, ಅಂದು ಹುಲಿಯಿಂದ ಹೇಗೆ ತಪ್ಪಿಸಿಕೊಳ್ಳಬೇಕು, ಅದನ್ನು ಹೇಗೆ ಬಂಧಿಸಬೇಕು ಎಂಬ ಚಾಣಾಕ್ಷತೆ ಆಟದ ಮೂಲಕ ಕಟ್ಟಿಕೊಂಡು ಬುದ್ಧಿಮತ್ತೆಯನ್ನು ಪ್ರದರ್ಶಿಸುತ್ತಿದ್ದರು. ಅಂದು ಈ ಕ್ರೀಡೆಯು ತುಂಬಾ ಜನಪ್ರಿಯವಾಗಿತ್ತು. ಕ್ರಿ.ಶ. ೩-೪ನೆಯ ಹಿಂದಿನ ಸ್ಮಾರಕಗಳ ಮುಂದಿರುವ ಚಿತ್ರಗಳಿಂದ ಅದರ ಪ್ರಖ್ಯಾತಿಯನ್ನು ಗಮನಿಸಬಹುದು. ಇಂದು ಎಲ್ಲೊ ಕೆಲವೊಂದು ಹಳ್ಳಿಗಳ ದೇವಸ್ಥಾನದ ಮುಂದೆ, ಶಾಲೆಯ ಮುಂದೆ ರಜೆ ದಿನಗಳಂದು ಆಡುವ ಪರಿಸ್ಥಿತಿಯಿದೆ.

ಅಂದು ದೊಂಬರಾಟ, ಬಯಲಾಟ, ಬೊಂಬೆಯಾಟ ಹೆಚ್ಚು ಜನಪ್ರಿಯವಾಗಿದ್ದವು. ಗ್ರಾಮೀಣ ಪ್ರದೇಶಗಳಿಗೆ ಹೋಗಿ ಉಚಿತ ಪ್ರದರ್ಶನವನ್ನು ಕೊಟ್ಟು ಅವರು ಕೊಟ್ಟ ಕಾಳು, ಕಡಿ, ಊಟವನ್ನು ಪಡೆದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಆದರೆ ಇಂದು ದೂರದರ್ಶನದಲ್ಲಿ ಬರುವ ಧಾರವಾಹಿ, ಸಿನಿಮಾಗಳು ತಂತ್ರಜ್ಞಾನದಿಂದ, ವಿಡಿಯೊ ಗೇಮ್ಸ್‌ಗಳ ಹಾವಳಿ ಇವೆಲ್ಲವುಗಳು ನಶಿಸಲು ಕಾರಣವಾಗಿವೆ.

ಪ್ರಾಚೀನ ಕಾಲದಿಂದಲೂ ಜಾತಿ ವ್ಯವಸ್ಥೆಯಿದೆ. ಇಂದು ಜಾತಿ ವ್ಯವಸ್ಥೆಯ ಒಟ್ಟು ಸ್ವರೂಪದಲ್ಲಿ ರಾಜಕೀಯ ಸ್ಥಿತ್ಯಂತರ, ಹೊಸ ಶಿಕ್ಷಣ ಕಾನೂನು, ಆಧುನಿಕ ಸಂಶೋಧನೆಗಳಿಂದ ಬದಲಾಗಿದೆ. ಇಂದು ನಾಡಿನಲ್ಲಿ ಜಾತಿ ವ್ಯವಸ್ಥೆಯಿದೆಯಾದರೂ ಅಂದು ಹಿಂದಿನ ರೀತಿಯಲ್ಲಿ ಕ್ರೀಯಾಶೀಲವಾಗಿಲ್ಲ. ಸಂಬಂಧಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಜಾತಿ ವ್ಯವಸ್ಥೆಯನ್ನು ಪರಿಚಯಿಸುವ ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ಹುಟ್ಟಿದ ಮುಟ್ಟಾಟ ಜಾತಿ ವ್ಯವಸ್ಥೆಗೆ ಉದಾಹರಣೆಯಾಗಿದೆ. ಅವುಗಳನ್ನು ಸಂವಹನ ಮಾಡುತ್ತಿದ್ದ ಸಾಮಾಜಿಕ ಅಂಶಗಳು ಇಂದಿನ ವ್ಯವಸ್ಥೆಗೆ ಅನಿವಾರ್ಯವಲ್ಲದ ಕಾರಣದಿಂದ ಅವುಗಳು ತಮ್ಮ ಮಹತ್ವವನ್ನು ಕಳೆದುಕೊಂಡಿವೆ.

ಕೆಲವೊಂದು ಆಟಗಳಾದ ಲಗೋರಿ, ಮರಕೋತಿ, ಗೋಲಿಯಾಟ, ಜನಪ್ರಿಯವಾಗಿದ್ದ ಸಾಮೂಹಿಕ ಆಟಗಳು ಇಂದು ಸಂಪೂರ್ಣವಾಗಿ ಕಣ್ಮರೆಯಾಗಿವೆ. ಇದಕ್ಕೆ ಮುಖ್ಯಕಾರಣ ಸಾಮೂಹಿಕ ಮನರಂಜನೆಯನ್ನು ಪಡೆಯುವ ಉತ್ಸಾಹ ಜನರಲ್ಲಿ ಇಲ್ಲದಿರುವುದು. ದೂರದರ್ಶನ ಸಿನಿಮ, ಬಯಲಾಟ ಮತ್ತು ಕಂಪ್ಯೂಟರ್, ವಿಡಿಯೋ ಗೇಮ್ಸ್ ಇತ್ಯಾದಿ. ಗ್ರಾಮೀಣ ಪರಿಸರದ ಕೃಷಿ ಕೆಲಸಗಳ ನಿರ್ವಹಣೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಪಾರಂಪರಿಕ ಪದ್ಧತಿಗಳ ಸ್ಥಾನದಲ್ಲಿ ಆಧುನಿಕ ಯಾಂತ್ರಿಕ ಪದ್ಧತಿ ಬಂದಿವೆ. ವ್ಯಕ್ತಿ ಮತ್ತು ಭೂಮಿ ಸಂಬಂಧಗಳಲ್ಲಿ ಸಾಕಷ್ಟು ಬದಲಾವಣೆ ತಂದಿವೆ. ಚೆನ್ನೆಮಣೆ, ಕುಂಟಬಿಲ್ಲೆ, ಬಳೆಚೂರು, ಆನೆಕಲ್ಲು, ಚೌಕಾಬಾರ ಇಂಥಹ ಆಟಗಳ ಮಹತ್ವವನ್ನು ಕಳೆದುಕೊಂಡಿವೆ. ಚೆನ್ನೆಮಣೆ ಆಟವು ಸಾಮಾಜಿಕ ಉದ್ದೇಶ ಕೃಷಿ ಸಂಸ್ಕೃತಿಯಲ್ಲಿ ಪರಿಚಯಿಸುವುದು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ವ್ಯಕ್ತಿಯನ್ನು ತರಬೇತಿಗೊಳಿಸುತ್ತದೆ. ಈ ಆಟ ಅಷಾಡ ತಿಂಗಳಲ್ಲಿ ಆಡದಿರುವುದರಿಂದ ಬಡತನದ ವಿರಾಮ ತಿಂಗಳಾಗಿ ಉಳಿದಿದೆ.

ಕುಟುಂಬದ ರಚನೆಯ ಸ್ವರೂಪದಲ್ಲೂ ವ್ಯಾಪಕವಾದ ಬದಲಾವಣೆಯಾಗಿರುವುದನ್ನು ಗಮನಿಸಬಹುದು. ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಅವಿಭಕ್ತ ಕುಟುಂಬದ ವ್ಯವಸ್ಥೆ ಜಾರಿಯಲ್ಲಿತ್ತು. ಈಗ ಹಲವಾರು ಕಾರಣಗಳಿಂದಾಗಿ ಅವಿಭಕ್ತ ಕುಟುಂಬಗಳು ಆಧುನಿಕ ಕುಟುಂಬಗಳಾಗಿವೆ. ಅವಿಭಕ್ತ ಕುಟುಂಬದಲ್ಲಿ ಮಕ್ಕಳು ಮತ್ತು ಕುಟುಂಬದ ಸದಸ್ಯರುಗಳ ಸಂಖ್ಯೆ ಹೆಚ್ಚಾಗಿತ್ತು. ಇದರಿಂದ ಆಟಗಳು ಕುಟುಂಬದ ಜೀವನದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದವು. ಆಧುನಿಕ ಕುಟುಂಬಗಳಲ್ಲಿ ಗಂಡ, ಹೆಂಡತಿ, ಮಕ್ಕಳು ಇರುವುದರಿಂದ ಕುಟುಂಬದ ಸದಸ್ಯರ ಸಂಖ್ಯೆ ತೀರಾ ಕಡಿಮೆ ಆಗಿದೆ. ಕುಟುಂಬ ಪದ್ಧತಿಯಲ್ಲಿ ಆಟದ ಸ್ಥಿತ್ಯಂತರವೂ ಜನಪದ ಆಟಗಳ ಮೇಲೆ ಪರಿಣಾಮ ಬೀರಿದೆ. ಅವುಗಳ ಬಳಕೆ ಕಡಿಮೆಯಾಗಿದೆ. ಅಲ್ಲದೆ ಮದುವೆಯಾಟ, ಮನೆಯಾಟ, ಗಂಡ ಹೆಂಡತಿಯಾಟ, ಕೆಲವೊಂದು ದಿನನಿತ್ಯ ಜೀವನದ ಅನುಕರಣೆಯ ಆಟಗಳನ್ನು ಸಾಕಷ್ಟು ಬದಲಾವಣೆ ಪಡೆದುಕೊಂಡಿವೆ. ಇವು ದೈನಂದಿನ ಬದುಕಿಗೆ ಶಿಕ್ಷಣವನ್ನು ನೀಡುವ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತಿದೆ ಆದರೆ ಇಂದು ಶಿಕ್ಷಣದ ವ್ಯವಸ್ಥೆ ದೂರದರ್ಶನ ಆಧುನಿಕ ಆಟಗಳು ಈ ರೀತಿಯ ಶಿಕ್ಷಣ ನೀಡುವುದರಿಂದ ಇಂತಹ ಆಟಗಳೊಂದಿಗೆ ಮಕ್ಕಳ ಸಂಬಂಧವು ಕಡಿಮೆಯಾಗಿದೆ.

ಕ್ರೀಡೆಗಳಲ್ಲಾದ ಬದಲಾವಣೆಗೆ ಇನ್ನೂ ಹಲವಾರು ಕಾರಣಗಳು ನೀಡಬಹುದಾಗಿದೆ. ಕಂಪ್ಯೂಟರ್‌ನಂತಹ ಹೊಸ ಹೊಸ ಮಾಧ್ಯಮಗಳು ಆಟದ ಸ್ಥಾನವನ್ನು ಆವರಿಸಿ ಕೊಂಡಿವೆ. ಮಕ್ಕಳು ಸಂಜೆಯ ಸಮಯವನ್ನು ಕಂಪ್ಯೂಟರ್, ದೂರದರ್ಶನದ ಮುಂದೆ ಕುಳಿತು ಕಾಲಕಳೆಯುತ್ತಾರೆ. ಇವು ಕ್ರೀಡೆಗಳೊಂದಿಗಿನ ಸಂಬಂಧದಿಂದ ಸಂಪೂರ್ಣವಾಗಿ ವಂಚಿತರಾಗುವಂತೆ ಮಾಡುತ್ತವೆ. ಮನೆಪಾಟಗಳು ಮಕ್ಕಳನ್ನು ಆಟದಿಂದ ದೂರವಾಗಲೂ ಕಾರಣವಾಗಿದೆ. ನಿರ್ಧಿಷ್ಟ ಸಮಯಕ್ಕೆ ನಿರ್ಧಿಷ್ಟ ಕೆಲಸಗಳನ್ನು ಮಾಡುವ ವೇಳಾಪಟ್ಟಿಯನ್ನು ಮಕ್ಕಳ ಮೇಲೆ ಹೇರಿರುವುದರಿಂದ ಸಂಜೆಯ ವೇಳೆ ಮಕ್ಕಳ ಆಟದ ಸಮಯ ಮರೆಯುತ್ತಿದ್ದಾರೆ. ಇದರಿಂದ ನೂರಾರು ಆಟಗಳೊಂದಿಗಿನ ಅವರ ಸಂಬಂಧ ಹೊರಟು ಹೋಗಿದೆ. ಅಂತರಾಷ್ಟ್ರೀಯ

ಆಟಗಳ ಜನಪ್ರಿಯತೆ ಜನಪದ ಆಟಗಳ ಕಣ್ಮರೆಗೆ ಅವರೊಂದಿಗಿನ ಸಂಬಂಧ ದೂರವಾಗಲು ಕಾರಣವಾಗಿದೆ. ಕ್ರಿಕೇಟ್, ಟೆನಿಸ್, ವಾಲಿಬಾಲ್, ಥ್ರೋಬಾಲ್, ಕಬ್ಬಡಿ, ಖೋಖೋ ನಿಯಮದ ಆಟಗಳ ನಾಡಿನಲ್ಲಿ ಜನಪ್ರಿಯವಾಗಿವೆ. ಇಂದು ಸಾಂಸ್ಕೃತಿಕ ಸಂದರ್ಭಗಳು ಬದಲಾಗುತ್ತಿದೆ. ಆಚರಣಾತ್ಮಕ ಸಂದರ್ಭದಲ್ಲಿ ಆಡುತ್ತಿದ್ದ ಆಟಗಳು ನಿಂತುಹೋಗಿವೆ. ಬಹುಮುಖ್ಯವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯೇ ನಮ್ಮ ನಾಡಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತಂದಿರುವುದರಿಂದ ಆಟಗಳ ಮೂಲಕ ಸಂಸ್ಕೃತಿಯನ್ನು ಕಲಿಯುವ ಸ್ವರೂಪ ಬದಲಾಗಿದೆ.

ನಮ್ಮ ನಾಡಿನಲ್ಲಿ ಹಿಂದೆ ಗರಡಿ ಮನೆಗಳಿದ್ದು ಮಲ್ಲರ ಅಭಿರುಚಿಗೆ ತಕ್ಕಂತೆ ವಿವಿಧ ರೀತಿಯಲ್ಲಿ ತರಬೇತಿ ನೀಡುತ್ತಿದ್ದವು. ಕತ್ತಿವರಸೆ, ದೊಣ್ಣೆವರಸೆ, ಸುದರ್ಶನ ಚಕ್ರದಂತೆ ಎರಡು ಕೈಯಲ್ಲಿ ದೊಣ್ಣೆಗಳನ್ನು ತಿರುಗಿಸುತ್ತಿದ್ದರು. ದೇಹವು ಕಬ್ಬಿಣದ ವಜ್ರಕಾಯವಾಗುವಂತೆ ಮಾಡಲಾಗುತ್ತಿತ್ತು. ಅದರ ಬದಲು ಇಂದು ಜಿಮ್‌ಗಳು ತಲೆ ಎತ್ತಿವೆ.

ಮೀನಿನಂತೆ ನೀರಿನಲ್ಲಿ ಈಜಾಡುವುದು, ಮರದಿಂದ ಮರಕ್ಕೆ ನೆಗೆಯುವುದು, ದೊಡ್ಡ-ದೊಡ್ಡ ಕಲ್ಲುಗಳನ್ನು ಎತ್ತುವುದು ಮುಂತಾದವು ಮನುಷ್ಯ ತನ್ನ ಆಹಾರಕ್ಕಾಗಿ ನೆಲೆಗಾಗಿ, ಏನೆಲ್ಲ ಪ್ರಯತ್ನಗಳನ್ನು ನಡೆಸುತ್ತಿದ್ದ. ಕಾಡು ಮೇಡುಗಳಲ್ಲಿ ಜೀವಿಸುವಾಗ ಕಾಡು ಮೃಗಗಳನ್ನು ಎದುರಿಸುವ ಧೈರ್ಯವನ್ನು ಕಲಿತ. ಕಾಡುಮೃಗಗಳು ಕೊಲ್ಲುವುದರಿಂದ ಬೇಟೆ ಅನಿವಾರ್ಯವಾಗಿತ್ತು. ಪ್ರಾಣಿ ರಕ್ಷಣೆಯ ತಂತ್ರ ವಿಧಾನ ಪದ್ಧತಿಗಳು ಕಾಲಾನಂತರದಲ್ಲಿ ತನ್ನ ಮೂಲ ಉದ್ದೇಶ ಕಳೆದುಕೊಂಡು ವಿನೋದದ ಆಟವಾಗಿ ಮಾರ್ಪಾಟಾದವು. ಯುವಕರು ಇಂತಹ ಆಟಗಳಲ್ಲಿ ಭಾಗವಹಿಸುವುದರ ಮೂಲಕ ಈ ಜನರನ್ನು ಸಂತೋಷಗೊಳಿಸುವುದರ ಜೊತೆಗೆ ಯುದ್ಧ ಕಲೆಯನ್ನು ಕರಗತ ಮಾಡಿಕೊಳ್ಳುತ್ತಿದ್ದರು. ಹಿಂದೆ ಪ್ರತಿಯೊಂದು ಹಳ್ಳಿಯಲ್ಲಿ ಕಳ್ಳಕಾಕರು, ಶತ್ರುಗಳ ಭಯವನ್ನು ಎದುರಿಸಬೇಕಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಹಲವು ಆಟಗಳನ್ನು ಸೃಷ್ಟಿಸಿಕೊಂಡಿದ್ದ. ಕಳ್ಳ-ಪೋಲಿಸ್ ಆಟ, ಜೂಟಾಟ ಇತ್ಯಾದಿಗಳು ಇಂದಿನ ಆಧುನಿಕ ವ್ಯವಸ್ಥೆಯಿಂದ ಇಲ್ಲವಾಗಿವೆ. ಜನಪದ ಆಟಗಳಿಗೂ ಗ್ರಾಮೀಣ ಜನ ಜೀವನಕ್ಕೆ ಅನ್ಯೋನ್ಯ ಸಂಬಂಧವಿದೆ. ಹಿಂದೆ ಆಟಗಳು ಜೀವನದ ಅನಿವಾರ್ಯ ಕ್ರಿಯೆಯಾಗಿದ್ದವು. ಶಾಸ್ತ್ರೀಯ ಶಿಕ್ಷಣ ಇಲ್ಲದ ಕಾಲದಲ್ಲಿ ಕ್ರೀಡಾಂಗಣವೇ ಪಾಠಶಾಲೆ, ಆಟವೇ ಶಿಕ್ಷಣವಾಗಿತ್ತು. ಆದ್ದರಿಂದ ನಮ್ಮ ನಾಡಿನ ಕ್ರೀಡೆಗಳಿಗೆ ಪ್ರೋತ್ಸಾಹ ಮತ್ತು ಮಹತ್ವದ ಸ್ಥಾನವಿತ್ತು. ಯಾವುದೇ ಜಾತಿ, ಜನಾಂಗ, ಸ್ತ್ರೀ-ಪುರುಷ ಎಂಬ ಭೇದವಿಲ್ಲದೆ ಮಕ್ಕಳು ತಾವೆಲ್ಲ ಒಂದೇ ಎಂಬ ಭಾವನೆಯಿಂದ ಆಡುತ್ತಿದ್ದರು. ಈಗ ಅವೆಲ್ಲ ಅಳಿವಿನಂಚಿನಲ್ಲಿವೆ. ಸ್ಥಿತ್ಯಂತರಗೊಂಡು ಬೇರೆ ರೀತಿಯಲ್ಲಿ ಪ್ರದರ್ಶಿತವಾಗುತ್ತಿವೆ. ಗ್ರಾಮೀಣ ಕ್ರೀಡೆಗಳನ್ನು ಉಳಿಸುವಲ್ಲಿ ಪ್ರಾಥಮಿಕ ಶಾಲೆ, ಅಂಗನವಾಡಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಶಾಲಾ-ಕಾಲೇಜುಗಳಲ್ಲಿ ಹೊರಡಿಸುವ ಪತ್ರಿಕೆಗಳು ನಮ್ಮ ದೇಶಿಯ ಕ್ರೀಡೆಗಳಿಗೆ ವಿಶೇಷ ಸ್ಥಾನಮಾನ ನೀಡಬೇಕು. ಹಣದ ಖರ್ಚಿಲ್ಲದೆ ಅನೇಕ ಕ್ರೀಡೆಗಳು ಇಂದು ಗ್ರಾಮೀಣ ಮಕ್ಕಳಿಗೆ ಸುಲಭವಾಗಿ ಕಲಿಸಿ ಅವರ ಶಾರೀರಿಕ, ದೈಹಿಕ ಶಕ್ತಿಯನ್ನು ಹೆಚ್ಚಿಸಬಹುದೆಂಬುದನ್ನು ಅರಿತು ಪ್ರೋತ್ಸಾಹ ನೀಡಿ ಇತ್ಯಾದಿ ಕ್ರೀಡೆಗಳನ್ನು ಬದುಕಿಸಿಕೊಳ್ಳಬೇಕು.

ಶಿಕ್ಷಣದಲ್ಲಿ ಕ್ರೀಡೆ

ಸಮಾಜದಲ್ಲಿ ಶಿಕ್ಷಣದ ಮೂಲ ಉದ್ದೇಶ ವ್ಯಕ್ತಿಯ ಬದುಕಿಗೆ ಪೂರಕವಾದ ಮೌಲ್ಯಗಳನ್ನು ಕಲಿಸುವುದು. ವ್ಯಕ್ತಿಯ ಬದುಕಿಗೆ ಸಿದ್ಧಗೊಳಿಸುವುದು, ಬದುಕನ್ನು ಪರಿಚಯಿಸುವುದು, ಸಮಕಾಲೀನ ಮೌಲ್ಯಗಳನ್ನು ತಿಳಿಸುವುದು. ಶಿಕ್ಷಣವೆಂಬುದು ಕೇವಲ ಪಠ್ಯಕ್ರಮಗಳ ಅಧ್ಯಯನ ಮಾತ್ರವಲ್ಲ. ಕ್ರೀಡೆಗಳನ್ನು ಶಿಕ್ಷಣದಲ್ಲಿ ಬಳಸುವ ಕುರಿತು ಹಲವಾರು ರೀತಿಯ ಚರ್ಚೆ ಮತ್ತು ಸಂಶೋಧನೆಗಳು ನಡೆಯಬೇಕು. ಕ್ರೀಡೆಯನ್ನು ಶಿಕ್ಷಣದಲ್ಲಿ ಬಳಸುವ ಪ್ರಯೋಜನ ಮತ್ತು ತೊಂದರೆಗಳು ವಿದ್ವಾಂಸರು ಚರ್ಚಿಸಿದ್ದಾರೆ. ಶಿಕ್ಷಣದ ಪಠ್ಯಕ್ರಮದಲ್ಲಿ ಕ್ರೀಡೆ ಸೇರಿಸುವುದರಿಂದ ಶಾರೀರಿಕ ಬೆಳವಣಿಗೆಯ ಮಹತ್ವವನ್ನು ಪೂರೈಸುತ್ತದೆ. ಕ್ರೀಡೆ ವ್ಯಕ್ತಿಯ ಮೌಲ್ಯ ನಿರ್ಮಾಣದಲ್ಲಿ ಸಹಕಾರಿಯಾಗಿದೆ. ಸಾಮಾಜಿಕ ಬದುಕಿಗೆ ಮಾನವಿಯ ಮೌಲ್ಯಗಳನ್ನು ಬೆಳೆಸುತ್ತದೆ. ಸಾಮಾಜೀಕರಣದ ಪ್ರಬಲ ಮಾಧ್ಯಮವಾಗಿದೆ. ನೇರವಾಗಿ ಮತ್ತು ಸಾಂಕೇತಿಕವಾಗಿ ವ್ಯಕ್ತಿಯನ್ನು ಸಾಮಾಜಿಕ ಬದುಕಿಗೆ ಸಿದ್ಧಗೊಳಿಸುತ್ತದೆ. ವ್ಯಕ್ತಿಯಲ್ಲಿ ಸಹನೆ ಸ್ಪರ್ಧಾ ಮನೋಭಾವ ಕಷ್ಟಸಹಿಷ್ಣತೆ ಸೋಲು ಒಪ್ಪಿಕೊಳ್ಳುವ ಮನೋಭಾವ ಇತ್ಯಾದಿ ಗುಣಗಳನ್ನು ಕ್ರೀಡೆ ಬೆಳೆಸುವುದರಿಂದ ಶಿಕ್ಷಣದಲ್ಲಿ ಅದನ್ನು ಬಳಸುವುದು ಅಗತ್ಯವಾಗಿದೆ. ಮುಂದಿನ ಬದುಕಿಗೆ ಕಿರಿಯರನ್ನು ಅಣಿಗೊಳಿಸಲು ಕ್ರೀಡೆಯ ತರಬೇತಿ ಬೇಕು. ಕ್ರೀಡೆಗಳು ಮನರಂಜನೆಗಾಗಿ ಮಾತ್ರ ಎಂದಾದರೆ ಅದರ ಮುಖ್ಯ ಉದ್ದೇಶ ಕಳೆದುಹೋಗುತ್ತದೆ. ಇದು ಅವರ ನಾಳಿನ ಬದುಕಿನ ತರಬೇತಿ. ಇಲ್ಲಿ ಕ್ರೀಡಾಂಗಣ ಇವರ ಪಾಲಿನ ಪಾಠಶಾಲೆ. ಆದರೆ ನಮ್ಮ ಶಾಲೆ ಎಲ್ಲಾ ಮಕ್ಕಳು ಆಟ ಆಡುವುದಾದರೆ ಇಲ್ಲಿ ಬಹುಜನರ ಪಾಲಿಗೆ ಮನರಂಜನೆಯೊಂದೇ ಸಾಕು. ಮನರಂಜನೆಯ ಜೊತೆಗೆ ಅವರು ನಾಳಿನ ಉತ್ತಮ ನಾಗರೀಕನಾಗಲು ಅನುಕೂಲ ಇರಬೇಕು.

ಹಬ್ಬ ಹರಿದಿನಗಳು ಜಾತ್ರೆ, ಉತ್ಸವ ಮುಂತಾದ ದಿನಗಳಂದು ನಡೆಯುವ ಕೋಲಾಟ, ಕುಣಿದು ಕುಪ್ಪಳಿಸುತ್ತ ಚಿಕ್ಕಮಕ್ಕಳಿಗಾಗಿ ಬೀದಿಯಲ್ಲಿ ನಡೆಯುವಂಥ ಸಾಹಸ, ಶಕ್ತಿ ಸಾಮರ್ಥ್ಯ ತೋರಿಸುವ ಭಂಗಿ, ಕುಸ್ತಿ ಆಟ ಮನರಂಜನೆಗಾಗಿ ಬೆಂಕಿಯಲ್ಲಿ ನೆಗೆಯುತ್ತಿದ್ದು ಕುಣಿಯುವುದು ನಡೆಯತ್ತಿದ್ದವು. ಹೀಗಾಗಿ ಹಳ್ಳಿಯ ಜನರು ಕೃಷಿಯಿಂದ ಜೀವನ ನಡೆಸುತ್ತಿದ್ದರು ವಿವಿಧ ಬಗೆಯ ಕೆಲವೊಂದು ಆಟಗಳನ್ನು ತೊರಿಸಿ ಪ್ರೇಕ್ಷಕರಿಂದ ಶಹಬಾಸಗಿರಿಯನ್ನು ಪಡೆದುಕೊಳ್ಳುತ್ತಿದ್ದರು, ಹಳ್ಳಿಗಳಿಂದ ಇಂತಹ ಕಲೆಯನ್ನು ಪ್ರದರ್ಶನ ತಮ್ಮ ಪ್ರತಿಭೆ ಕೀರ್ತಿಯನ್ನು ಹೆಚ್ಚಿಸಿಕೊಂಡು ಸತ್ಕಾರ, ಸನ್ಮಾನ ಮಾಡಿಸಿಕೊಂಡು ಬಿರುದಾವಳಿ ಪಡೆಯುತ್ತಿದ್ದರು. ಆದರೆ ಇಂದು ಯಾಂತ್ರಿಕ ಬದುಕಿನಿಂದ ಮಾಯವಾಗಿವೆ.

ಆಧುನಿಕ ಶಿಷ್ಟ ಆಟಗಳಿಗೆ ಸಿಗುವ ಸ್ಥಾನಮಾನ ಗ್ರಾಮೀಣ ಜನಪದ ಆಟಗಳಿಗೂ ಸಿಗಬೇಕು. ಅನೇಕ ರಾಜಕೀಯ ವಿಭಾಗದಿಂದ ಕೂಡಿದ ನಮ್ಮ ದೇಶದಲ್ಲಿ ಶತಶತಮಾನಗಳಿಂದ ಕಲಹ ಕೋಲಾಹಲ ನೆಮ್ಮದಿ ವೈಭವಗಳ ಕಣ್ಣಾಮುಚ್ಚಾಲೆ ನಡೆದುಕೊಂಡು ಬಂದಿದೆ. ದೇಶದಲ್ಲಿ ಮೇಲಿಂದ ಮೇಲೆ ಅನೇಕ ಪರಕೀಯ ಅಭಿಯೋಗಗಳಾಗಿವೆ. ಆಗಾಗ ನೆಮ್ಮದಿಯ ಸುಭದ್ರ ಆಡಳಿತ ಏರ್ಪಟ್ಟಿದೆ. ಅನೇಕ ಮತಧರ್ಮಗಳ ಪೈಪೋಟಿ ನಡೆದಿದೆ. ವಿವಿಧ ಬಗೆ

ರೂಢಿ–ಸಂಪ್ರದಾಯಗಳು ಸಾಮಾಜಿಕ ಸಮಸ್ಯೆಗಳು ಉದ್ಭವಿಸಿವೆ. ನಮ್ಮಲ್ಲಿ ಅನೇಕ ಆಟಗಳು ಹುಟ್ಟಿದವು; ಅನೇಕ ಪ್ರಾಚೀನ ಕ್ರೀಡೆಗಳು ನಶಿಸಿವೆ. ಇನ್ನೂ ಹಲವು ರೂಪಾಂತರಗೊಂಡಿವೆ. ಹೀಗಾದರೂ ಅನೇಕ ಕ್ರೀಡೆಗಳ ಪ್ರವಾಹ ಇಪ್ಪತ್ತೊಂದನೆಯ ಶತಮಾನಕ್ಕೂ ಹರಿಯುತ್ತಿದೆ. ಚೆಂಡಾಟವು ಜನಪ್ರಿಯ ಮನರಂಜನೆಯ ಆಟ. ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ಮಾತ್ರವಲ್ಲದೆ ಸಹಜ ಸಂದರ್ಭದಲ್ಲೂ ಅದು ಜನಪ್ರಿಯವಾಗಿದೆ. ಬಿಡುವಿನ ಸಮಯದಲ್ಲಿ ಗ್ರಾಮೀಣ ಯುವಕರು ಒಟ್ಟಿಗೆ ಸೇರಿ ಚೆಂಡಾಟವನ್ನು ಆಡುತ್ತಿದ್ದರು. ಈಗ ಈ ರೀತಿಯ ಕ್ರೀಡೆಗಳು ಗ್ರಾಮೀಣ ಭಾಗದಲ್ಲಿ ಕಾಣುವುದಿಲ್ಲ. ಇದಕ್ಕೆ ಹಲವಾರು ಕಾರಣಗಳನ್ನು ನೀಡಬಹುದು. ಸಾಮಾಜಿಕ ರಚನೆಯಲ್ಲಿ ಕ್ರೀಡೆಯ ಬದಲಾವಣೆಯಿಂದ ಜಾತಿಪದ್ಧತಿ ಸಂದರ್ಭಗಳಲ್ಲಿ ಬದಲಾವಣೆಯನ್ನು ತಂದಿದೆ. ಚೆಂಡಾಟದಂತಹ ಸಂಘರ್ಷ ಪ್ರಧಾನ ಆಟಗಳು ಮಹತ್ವವಾಗಿಲ್ಲ. ಈ ರೀತಿಯ ಸಂಘರ್ಷವನ್ನು ಅಭಿವ್ಯಕ್ತಿಗೊಳಿಸಲು ರಾಜಕೀಯ ಸಂಘಟನೆ ಮೊದಲಾದವುಗಳಿವೆ. ಪ್ರತಿಭಟನೆ ಮತ್ತು ಪ್ರತಿಕ್ರಿಯೆಗಳ ಮೂಲಕ ನೀಡಲಾಗುತ್ತದೆ. ಇದರಿಂದ ಮಾನಸಿಕ ತೃಪ್ತಿಯನ್ನು ಪಡೆಯಲು ಆಟಗಳಂಥ ಮಾಧ್ಯಮಗಳು ಬೇಕಾಗಿಲ್ಲ ಎಲ್ಲಕ್ಕಿಂತ ಮುಖ್ಯವಾಗಿ ಕಾಲ್ಚೆಂಡು ಆಟದ ಚೆಂಡಾಟದ ಪರಿಶಿಷ್ಟ ಮಾದರಿಯಾಗಿದೆ. ಅಂತರಾಷ್ಟ್ರೀಯವಾಗಿಯೂ ಜನಪ್ರಿಯ ಆಟವಾಗಿದೆ. ಇಂತಹ ದೃಷ್ಟಿಯಿಂದ ಚೆಂಡಾಟದ ಸ್ಥಾನವನ್ನು ಕಾಲ್ಚೆಂಡಿನಂತಹ ಅಥವಾ ವಾಲಿಬಾಲ್, ಥ್ರೋಬಾಲ್‌ನಂತಹ ನಿಯಮಬದ್ಧ ಕ್ರೀಡೆಗಳು ಇಂದು ಜನಪ್ರಿಯತೆ ಗಳಿಸಿವೆ.

ಶಿಕ್ಷಣದ ಮೂಲಕ ವೈಜ್ಞಾನಿಕ ಸಾಧನ ಕಂಡುಕೊಂಡ ಮಾನವ ವಿನೋದಾವಳಿಗಾಗಿ ಬೇರೆ ಬೇರೆ ಮಾಧ್ಯಮಗಳನ್ನು ಕಂಡುಕೊಂಡನು. ಇದರಿಂದ ಗ್ರಾಮೀಣದ ಮನರಂಜನೆಯಲ್ಲಿ ಒಂದಾಗಿದ್ದ ದೊಂಬರಾಟಕ್ಕೆ ಆಕರ್ಷಣೆ ಕಡಿಮೆಯಾಯಿತು. ಆಗ ಆ ಕಸುಬನ್ನೇ ನಂಬಿದ್ದ ದೊಂಬರ ಸ್ಥಿತಿ ಶೋಚನೀಯವಾಯಿತು. ಇಂಥ ಸಂದರ್ಭದಲ್ಲೂ ಅದನ್ನು ಮುಂದುವರೆಸುತ್ತಾ ಜನರ ಅಭಿರುಚಿಗೆ ತಕ್ಕಂತೆ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದಾರೆ. ಹಿಂದಿನಂತೆ

ಅವಿಭಕ್ತ ಕುಟುಂಬಗಳು ಸೇರಿ ದೊಡ್ಡ ಪ್ರಮಾಣದಲ್ಲಿ ಪ್ರದರ್ಶನ ನೀಡುವುದಿಲ್ಲ. ಬದಲಾಗಿ ಚಿಕ್ಕ ಕುಟುಂಬಗಳು ಪ್ರತ್ಯೇಕವಾಗಿ ಅಲೆಮಾರಿಗಳಾಗಿ ಆಟ ಪ್ರದರ್ಶನ ಮಾಡುತ್ತಿರುವುದು ಕಂಡುಬರುತ್ತದೆ. ಮಹಿಳೆಯರು ಪ್ರದರ್ಶಿಸುವ ಕೆಲ ಆಟಗಳು ಈ ಕೆಳಗಿನಂತಿವೆ. ಒಂದೂವರೆ ಅಡಿ ಎತ್ತರ ಮರದ ಸ್ಟೂಲಿನ ನಾಲ್ಕು ಕಾಲುಗಳ ಕೆಳಗೆ ನಾಲ್ಕು ಬೀರು ಬಾಟಲಿಗಳನ್ನು ಇಟ್ಟು ನಿಲ್ಲಿಸಿರುತ್ತಾರೆ. ಅದರ ಮೇಲೆ ನಿಂತು ಒಂದು ಅಡಿ ವ್ಯಾಸವಿರುವ ಕಬ್ಬಿಣದ ಬಳೆಯ ಒಳಗೆ ಒಂದು ಕಾಲನ್ನು ತೂರಿಸಿ ಅನಂತರ ಇದೇ ದೇಹವನ್ನು ಬಾಗಿಸಿ ತೋರಿಸುವರು. ಆಗ ಆ ಬಳೆಯನ್ನು ಇನ್ನೊಂದು ಕಾಲಿನ ಮೂಲಕ ಹೊರಗೆ ತೆಗೆಯುವರು. ತದನಂತರ ಸ್ಟೂಲಿನ ಕಾಲ ಕೆಳಗಿರುವ ನಾಲ್ಕು ಬಾಟಲಿಯಲ್ಲಿ ಒಂದನ್ನು ತೆಗೆಯುವರು ಮೂರು ಬಾಟಲಿ ಮೇಲಿಟ್ಟು ಸ್ಟೂಲಿನ ಮೇಲೆ ನಿಂತು ಸಮತೋಲನ ಕಾಪಾಡಿಕೊಂಡು ಮೊದಲು ಹೇಳಿದ ರೀತಿಯಲ್ಲೆ ಒಂದು ಅಡಿ ವ್ಯಾಸದ ಕಬ್ಬಿಣದ ಬಳೆಯ ಒಳಗೆ ದೇಹವನ್ನು ತೂರಿಸುವರು. ಇದು ನೋಡುಗರಿಗೆ ಗಾಬರಿ ಉಂಟು ಮಾಡುವಂತಿರುತ್ತದೆ. ಮತ್ತೊಂದು ಆಟ ಸಲಾಕೆಯನ್ನು

ಮಣಿಸುವುದು. ಇದು ಹಿಂದೆಯೂ ಇತ್ತು ಈಗಲೂ ಇದೆ. ತುಂಬಿದ ಕೊಡವನ್ನು ಹಲ್ಲಿನಿಂದ ಕಚ್ಚಿ ಮೇಲೆತ್ತಿ ಸುತ್ತು ಹಾಕುವುದು ಒಂದೂವರೆ ಅಡಿ ವ್ಯಾಸದ ಕಬ್ಬಿಣದ ಬಳೆಯಲ್ಲಿ ಇಬ್ಬರು ಹೆಣ್ಣು ಮಕ್ಕಳು ಏಕಕಾಲದಲ್ಲಿ ತೂರುವುದು, ಕಣ್ಣಿನ ರೆಪ್ಪೆಯಿಂದ ರೂಪಾಯಿಯನ್ನು ಎತ್ತುವುದು, ಬೆನ್ನು ನೆಲಕ್ಕೆ ಮಾಡಿ ಮಲಗಿ ಮೇಲ್ಮುಖವಾಗಿ ದೇಹವನ್ನು ಬಿಲ್ಲಿನಂತೆ ಬಾಗಿಸಿ ನೆಲದ ಮೇಲಿರುವ ರೂಪಾಯಿಯನ್ನು ಕಣ್ಣಿನ ರೆಪ್ಪೆಗಳಿಂದ ಹಿಡಿದು ಮೇಲೆದ್ದು ನಿಲ್ಲಬೇಕು. ಪ್ರೇಕ್ಷಕರು ೫-೧೦ ರೂಪಾಯಿ ನೋಟನ್ನು ಹಾಕಿ ಕಣ್ಣಿನ ರೆಪ್ಪೆಯಿಂದ ತೆಗೆಸುವರು ಇದರಿಂದ ಒಬ್ಬರಿಗೆ ಮೋಜು, ಇನ್ನೊಬ್ಬರಿಗೆ ಹೊಟ್ಟೆಪಾಡಿನ ಸಂಗತಿಯಾಗಿದೆ. ಇದೇ ರೀತಿ ಗಂಡಸರೂ ಕೆಲವು ಸಾಹಸಗಳನ್ನು ಪ್ರದರ್ಶಿಸುವರು. ಸೈಕಲ್ ಸವಾರಿ ಮಾಡುತ್ತಲೆ ಒಂದು ವರ್ಷದ ಮಗುವನ್ನು ಎತ್ತಿಕೊರಿಸಿಕೊಳ್ಳುವುದು, ಸೈಕಲ್ ಮೇಲೆ ಕುಳಿತು ತಟಸ್ಥವಾಗಿ ನಿಲ್ಲುವುದು, ಮುಂದಿನ ಚಕ್ರವನ್ನು ಮೇಲೆತ್ತಿ ಹಿಂದಿನ ಒಂದೇ ಚಕ್ರದಲ್ಲಿ ಸ್ವಲ್ಪ ದೂರ ಚಲಿಸುವುದು. ನೆಲದಲ್ಲಿ ಬಿದ್ದಿರುವ ರೂಪಾಯಿ ನೋಟನ್ನು ಸೈಕಲ್‌ನಲ್ಲಿ ಸವಾರಿ ಮಾಡುತ್ತಾ ದೇಹವನ್ನು ಬಾಗಿಸಿ ಕೈಯಿಂದ ತೆಗೆಯುವುದು ಹೀಗೆ ಇನ್ನೂ ಹಲವಾರು ಕಸರತ್ತುಗಳನ್ನು ಸೈಕಲ್‌ನಲ್ಲಿ ತೋರಿಸುವರು ನೆಲದ ಮೇಲೆ ದೇಹವನ್ನು ಮಣಿಸುವ ಅನೇಕ ಸಾಧನೆಗಳನ್ನು ಮಾಡುವರು.

ಇತ್ತೀಚೆಗೆ ಬಹಳ ಸರಳವಾದ ಕೈಚಳಕವನ್ನು ಹೆಚ್ಚು ಹೆಚ್ಚು ಪ್ರದರ್ಶನ ಮಾಡುವುದುಂಟು. ಅವುಗಳೆಂದರೆ, ಒಂದು ಉದ್ದನೆಯ ಕೋಲಿಗೆ ಬಟ್ಟೆ ಸುತ್ತಿ ಅದಕ್ಕೆ ಸೀಮೆಎಣ್ಣೆ ಹಾಕಿ ಬೆಂಕಿ ಹಚ್ಚುವರು, ಉರಿಯುತ್ತಿರುವ ಪಂಜನ್ನು ಕೈ ಮೇಲೆ ಉಜ್ಜಿಕೊಳ್ಳುವರು, ನಾರು ತೆಗೆದ ತೆಂಗಿನ ಕಾಯಿಯನ್ನು ದಾರದಲ್ಲಿ ಪೋಣಿಸಿ ಲಂಬಾಕಾರದಲ್ಲಿ ಹಿಡಿದುಕೊಂಡು ಆ ದಾರದಲ್ಲಿ ಜಾರಿಸುವುದು ಅರ್ಧದಲ್ಲಿ ನಿಲ್ಲಿಸುವುದು ಮಾಡುತ್ತಾರೆ. ಅದೇ ರೀತಿ ಒಂದು ತಗಡಿನ ಡಬ್ಬದಲ್ಲಿ ನೀರು ತುಂಬಿ ಅದರ ಮುಚ್ಚಳಕ್ಕೆ ಜರಡಿಯಂತೆ ತೂತುಮಾಡುವರು ಅದರಿಂದ ಮುಚ್ಚಿ ಬುಡ ಮೇಲೆ ಮಾಡಿ ಹಿಡಿಯುವರು. ನೀರು ಒಮ್ಮೆ ಸುರಿಯುವಂತೆ ಮತ್ತೊಮ್ಮೆ ನಿಲ್ಲುವಂತೆ ಮಾಡುವರು. ಇದು ಪ್ರೇಕ್ಷಕರಿಗೆ ಒಂದು ವಿಸ್ಮಯದಂತೆ ಕಾಣುವುದು. ತುಂಡು ಮಾಡಿದ ಹಗ್ಗವನ್ನು ಒಂದು ಮಾಡುವುದು, ಇಸ್ಪೀಟ್ ಎಲೆಗಳನ್ನು ಖಾಲಿ ತೋರಿಸುವುದು. ಮತ್ತೊಮ್ಮೆ ಒಂದೇ ಅಕ್ಷರಗಳಿರುವಂತೆ ತೋರಿಸುವುದು ಮತ್ತು ಈ ಇಸ್ಪೀಟ್ ಎಲೆಗಳು ಒಂದಕ್ಕೊಂದು ಅಂಟಿಕೊಂಡು ಸರಪಳಿಯಂತೆ ಮಾಡುವುದುಂಟು ಹಾಗೂ ನೀರಿನೊಳಗಿನಿಂದ ಒಣ ಉಸುಕು ತೆಗೆಯುವುದು ಈ ಎಲ್ಲಾ ಪ್ರದರ್ಶನಗಳನ್ನು ಜಾದೂ ಎಂದು ಹೇಳುವರು. ಹೀಗೆ ದೊಂಬರಲ್ಲಿ ಕೆಲವರು ಮಾತ್ರ ಮೇಲೆ ಹೇಳಿದಂತೆ ಸರಳವಾದ ಆಟಗಳನ್ನು ಪ್ರದರ್ಶನ ಮಾಡುತ್ತಾ ಒಂದು ನೆಲೆ ಕಂಡುಕೊಳ್ಳದೆ ಇಂದಿಗೂ ಅತಂತ್ರದ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಒಟ್ಟಾರೆ ವಿಜಯನಗರ ಕಾಲದಲ್ಲಿ ಕ್ರೀಡೆ ಮತ್ತು ವಿನೋದಾವಳಿಗಳು ಅಂದಿನ ಸಾಮಾನ್ಯ ವರ್ಗದವರ ಮೇಲೆ ಸಾಕಷ್ಟು ಪರಿಣಾಮ ಬೀರಿದ್ದವು. ಅಂದು ಹಬ್ಬ-ಹರಿದಿನಗಳ ಸಮಯದಲ್ಲಿ ಸಾಮರಸ್ಯದಿಂದ ಇರುತ್ತಿದ್ದರು. ಕ್ರೀಡೆಗಳ ಮೂಲಕ ದೈಹಿಕ ಮತ್ತು ಬೌದ್ಧಿಕತೆಗೆ ಹೆಚ್ಚು ಒತ್ತು ಕೊಟ್ಟಿದ್ದರು. ಅದರ ಮೂಲಕ ತಾವು ಸದೃಢಗೊಂಡು ತಮ್ಮ ಮಕ್ಕಳನ್ನು ಸಜ್ಜುಗೊಳಿಸುತ್ತಿದ್ದರು.

ಹಬ್ಬ, ಉತ್ಸವಗಳ ಮೂಲಕ ತಮ್ಮ ನೋವುಗಳನ್ನು ಮರೆತು ನಲಿವನ್ನು ಹಂಚಿಕೊಳ್ಳುತ್ತಿದ್ದರು. ಅಂತಹ ಸಮಯದಲ್ಲಿ ದೇವಾಲಯಗಳಲ್ಲಿ, ಪ್ರಮುಖ ಬಜಾರುಗಳಲ್ಲಿ ಕ್ರೀಡೆ, ನೃತ್ಯ, ಸಂಗೀತದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು.

ಹೀಗೆ ವಿಜಯನಗರ ಕಾಲದ ಕ್ರೀಡೆ ಮತು ವಿನೋದಾವಳಿ ಅಂದಿನ ಸಾಮಾಜಿಕ ರಚನೆಯಲ್ಲಿ ಯಾವ ಪಾತ್ರ ವಹಿಸಿತು, ಅದರ ಪ್ರಭಾವ ಮತ್ತು ಪರಿಣಾಮಗಳೇನು ಎಂಬುದರ ಜೊತೆಗೆ ಪ್ರಸ್ತುತ ದಿನಮಾನಗಳಲ್ಲಿ ಈ ಕ್ರೀಡೆ ವಿನೋದಾವಳಿಗಳು ಬದಲಾದ ಸಮಾಜದಲ್ಲಿ ಹೇಗೆ ಸ್ಥಿತ್ಯಂತರಗೊಂಡು ಸಮಾಜದಲ್ಲಿ ಚಾಲ್ತಿಯಲ್ಲಿವೆ ಎಂಬುದೂ ಗಮನಾರ್ಹ ಸಂಗತಿಯಾಗಿದೆ.

ಅಡಿಟಿಪ್ಪಣಿ

೧. ಸದಾನಂದ ಕನವಳ್ಳಿ., ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು-೨೬೭.
೨. ಸೋಮಶೇಖರ್ ಎಸ್.ವೈ., ಕರ್ನಾಟಕದ ಬಿರುದಾವಳಿಗಳು, ಪು-೧೦೧.
೩. ಕ.ವಿ.ವಿ.ಶಾ.ಸಂ.೩, ಪು-೮.
೪. ಸೋಮಶೇಖರ್ ಎಸ್.ವೈ., ಪೂರ್ವೋಕ್ತ, ಪು-೧೨೭.
೫. ಅದೇ, ಪು-೫.
೬. ಶೇಷಶಾಸ್ತ್ರೀ ಆರ್., ಕರ್ನಾಟಕದ ವೀರಗಲ್ಲುಗಳು, ಪು-೧೬೬
೭. ಎ.ಕ. ೮, ಸೂರಬ,೨೮, ಕ್ರಿ.ಶ. ೧೨೦೮.
೮. ಸಾಲೆತೊರೆ ಬಿ.ಎ., ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪಾಯಿರ್, ಪು- ೪೦೮.
೯. ಎಲಿಯಟ್ ಹಿಸ್ಟರಿ., ಪು- ೧೧೭.
೧೦. ಎ.ಕ. ೭, ಕೆ,ಜಿ, ೨೯.
೧೧. ಮೋ.ತ. ಸಂ.೧೮.ಪ.೭.
೧೨. ಪಿಯೋಟ್ರಾಡೆಲ್ಲಾವಾಲೆ-ಟ್ರಾವೇಲ್ಸ್,೧೧,ಪು-೨೮೬.
೧೩. ಎಸ್.ಎಸ್.ಐ.೯ ಭಾಗ,೨ ಸಂ.೬೬೮..
೧೪ ಕೊ.ರಾ.ಚ. ಸಂ,೧೯. ಪ, ೯೯.
೧೫. ಸೋಮಶೇಖರ್ ಎಸ್.ವೈ., ಹಂಪಿಯ ಬಜಾರುಗಳು, ಪು-೧೨.
೧೬. ಮೋ.ತ. ಸಂ,೧೮, ಪ, ೮.
೧೭. ಸೋಮಶೇಖರ್ ಎಸ್.ವೈ., ಹಂಪಿಯ ಬಜಾರುಗಳು, ಪು-೧೨.
೧೮. ಹೊ.ಕು.ರಾ.ಚ. ಸಂ.೯, ಪ.೨೧೯.
೧೯. ಅದೇ., ಸಂ.೯, ಪ. ೨೭೨.
೨೦. ಅದೇ., ಸಂ.೯. ಪ. ೧೩೨.
೨೧. ಕೊ.ರಾ.ಚ., ಸಂ.೨೩, ಪ. ೮.
೨೨. ಅದೇ., ಸಂ.೨೧, ಪ. ೧೨.

೨೩. ಧರ್ಮಾಮೃತ., ೧೫-೧೨೫.
೨೪. ಮೋ.ತ., ಸಂ.೨೦, ಪ. ೨೫.
೨೫. ಕು.ಸು.ಮಾ., ೨-೭.
೨೬ ಚ.ಬ.ಪು., ೪೨-೪೦.
೨೭ ನೇ.ಮಿ.ಸ. ೮-೯೩.
೨೮. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ, ಪು-೬೬೩.
೨೯. ಅದೇ., ಪು-೬೮೦.
೩೦. ಹೊ.ಕು.ರಾ.ಚ., ಸಂ.೯, ಪ.೬೪.
೩೧. ಅದೇ., ಸಂ.೯, ಪ.೬೫.
೩೨. ಅದೇ., ಸಂ. ೯ ಪ. ೧೪೯.

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಪ್ರಸ್ತುತ ಮಹಾಪ್ರಬಂಧವು **ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ** ಎಂಬ ವಿಷಯವನ್ನು ಕುರಿತಿದೆ. ವಿಜಯನಗರ ಅವಧಿಯಲ್ಲಿದ್ದ ಕ್ರೀಡೆ ಮತ್ತು ವಿನೋದಾವಳಿಗಳನ್ನು ಬೌದ್ಧಿಕ, ದೈಹಿಕ, ಮನರಂಜನಾತ್ಮಕ ಕ್ರೀಡೆಗಳಾಗಿ ವಿಭಾಗಿಸಿ ಅಧ್ಯಯನ ಕೈಗೊಳ್ಳುವುದರ ಜೊತೆಗೆ ಅಂದಿನ ಸಮಾಜದ ಮೇಲೆ ಇವು ಬೀರಿದ ಪ್ರಭಾವ ಮತ್ತು ಪರಿಣಾಮಗಳನ್ನು ಅರಿಯುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಕ್ರೀಡೆ ಎನ್ನುವುದು ಸಂಸ್ಕೃತದ ಕ್ರೀಡಾ ಎನ್ನುವ ಧಾತುವಿನಿಂದ ಬಂದಿದೆ. ಅದಕ್ಕೆ ಆಟ, ವಿಲಾಸ, ವಿನೋದ ಇತ್ಯಾದಿ ಅರ್ಥಗಳಿವೆ. ದೇಹ, ಮನಸ್ಸು ಮತ್ತು ಬುದ್ಧಿಗಳ ಸಹಯೋಗದೊಂದಿಗೆ ಮಾಡುವ ಪ್ರತಿಯೊಂದು ಕೌಶಲ್ಯಯುತ ಕಾರ್ಯ ಕ್ರೀಡೆಯಾಗಿದೆ. ವಿನೋದವೆಂಬುದು ಪ್ರಮೋದ, ಸಂತೋಷ. ಇದನ್ನು ಆನಂದಗೊಳಿಸು, ಸಂತೋಷಪಡಿಸು, ಆಟವಾಡಿ ಸಂತೋಷಪಡಿಸು, ಮನಸ್ಸನ್ನು ಬೇರೆ ಕಡೆ ತಿರುಗಿಸು ಎಂದು ಅರ್ಥೈಸಬಹುದು. ಆವಳಿ ಎಂಬುದು ಸಾಲು, ಸಮೂಹ. ವಿನೋದ+ಆವಳಿ=ವಿನೋದಾವಳಿ. ಅಂದರೆ ವಿನೋದಗಳ ಸಮೂಹ ಅಥವಾ ಸಮುಚ್ಚಯ. ಒಟ್ಟಿನಲ್ಲಿ ಕ್ರೀಡೆ ಕೌಶಲ್ಯಯುತ ಕಾರ್ಯವಾದರೆ ವಿನೋದಾವಳಿ ಮನಸ್ಸಿಗೆ ಮುದ ನೀಡುವ ಚಟುವಟಿಕೆಯಾಗಿದೆ.

ಕ್ರೀಡೆಗಳು ಸಮಾಜ ಮತ್ತು ಸಂಸ್ಕೃತಿಯ ನಿಲುವುಗನ್ನಡಿಗಳಾಗಿದ್ದು ಜೀವನದ ಪಡಿಯಚ್ಚಿನಂತೆ ಮೂಡಿಬಂದಿವೆ. ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವ ಪ್ರಾಣಿಗಳೊಂದಿಗೆ ನಿರಂತರವಾಗಿ ನಡೆಸಿದ ಹೋರಾಟದ ಪ್ರತೀಕವಾಗಿ ಆನೆಕಟ್ಟಾಟ, ಕೋಳಿ, ಟಗರು, ಕೋಣ ಮತ್ತು ಗೂಳಿಕಾಳಗಗಳನ್ನು ಕಾಣಬಹುದು. ಕಾಲಕ್ರಮೇಣ ಮಾನವನಲ್ಲಿ ಹೋರಾಟ ಮತ್ತು ಯುದ್ಧದ ಹಂತಗಳು ಹೇಗೆ ಬದಲಾವಣೆ ಹೊಂದಿದವೋ ಅವುಗಳನ್ನೇ ಅನುಕರಿಸಿ ಆಡುವ ಕ್ರೀಡೆಗಳೂ ಹಂತಹಂತವಾಗಿ ಬದಲಾಗಿರುವುದು ಗಮನೀಯ ಸಂಗತಿ. ಕ್ರೀಡೆಗಳ ಇತಿಹಾಸ ಮತ್ತು ಪರಂಪರೆಯನ್ನು ತಿಳಿಯುವ, ಅವುಗಳ ಪ್ರಾಚೀನತೆ ದೃಢೀಕರಿಸುವ ಪ್ರಯತ್ನವನ್ನು

ವಿಜಯನಗರ ಪೂರ್ವ ಹಾಗೂ ವಿಜಯನಗರ ಕಾಲದ ಕಾವ್ಯ, ಶಾಸನ, ಪುರಾತತ್ವೀಯ ಆಕರಗಳಿಂದ ಅವುಗಳ ಜನಪ್ರಿಯತೆ ಹೇಳುವುದರೊಂದಿಗೆ ವಿಕಸನದ ಬೆಳವಣಿಗೆಗಳನ್ನು ಅರ್ಥ ಮಾಡಿಕೊಳ್ಳುವುದೂ ಮುಖ್ಯವಾಗಿದೆ.

ದೈಹಿಕ ಕಸರತ್ತಿನ ಕ್ರೀಡೆಗಳಲ್ಲಿ ವಿಜಯನಗರ ಕಾಲದಲ್ಲಿ ಪ್ರಮುಖವಾಗಿ ಎರಡು ಬಗೆಯ ತಂತ್ರಗಳನ್ನು ಕಂಡುಕೊಂಡಿದ್ದರು. ಭಾರ ಎತ್ತುವ ಮೂಲಕ ಬಲಪ್ರದರ್ಶನ ಒಂದು ಬಗೆಯದ್ದಾದರೆ ಇನ್ನೊಬ್ಬ ವ್ಯಕ್ತಿ ಅಥವಾ ಪ್ರಾಣಿಯೊಂದಿಗೆ ಸೆಣಸಾಡಿ ತಮ್ಮ ಸಾಮರ್ಥ್ಯವನ್ನು ಸಮರ್ಥಿಸಿಕೊಳ್ಳುತ್ತಿದ್ದುದು ಇನ್ನೊಂದು ಬಗೆಯಾಗಿದೆ. ಭಾರವನ್ನು ಎತ್ತುವುದರಲ್ಲಿ ಸಾಕಷ್ಟು ವೈವಿಧ್ಯತೆಗಳಿದ್ದು ಜೀವನದ ಅಂಗಗಳಾಗಿರುವ ಗುಂಡುಕಲ್ಲು, ಧಾನ್ಯ, ಉಸುಕು ತುಂಬಿದ ಚೀಲ, ಚಕ್ಕಡಿಗಾಲಿ, ನೀರು ತುಂಬಿದ ಕೊಡ-ಇವೇ ಮೊದಲಾದ ವಸ್ತುಗಳನ್ನು ಉಪಕರಣಗಳಾಗಿ ಬಳಸಿಕೊಂಡಿರುವುದು ವಿಶೇಷವಾಗಿದೆ. ದೈಹಿಕ ಕಸರತ್ತಿನ ಕ್ರೀಡೆಗಳಲ್ಲಿ ಒಬ್ಬ ವ್ಯಕ್ತಿ ಪ್ರಸಿದ್ಧನಾದರೆ ಆತ ಮನೆ ಅಥವಾ ಊರಿನ ಪ್ರಶಂಸನೀಯ ವ್ಯಕ್ತಿಯಾಗಿರದೆ, ಅರಸನ ಪ್ರಶಂಸೆಗೂ ಪಾತ್ರನಾಗುತ್ತಿದ್ದ. ಕತ್ತಿ, ಕೋಲುವರಸೆ, ಓಟದಂತಹ ಕ್ರೀಡೆಗಳನ್ನಾಡುತ್ತಾ ಸಾಮ್ರಾಜ್ಯದ ರಕ್ಷಣೆಗೆ ಬೇಕಾದ ತಂತ್ರಗಳನ್ನು ಇಂತಹ ಕ್ರೀಡೆಯ ಮೂಲಕ ಕಂಡುಕೊಂಡದ್ದು ಗಮನಾರ್ಹ.

ದೇವಾಲಯ, ಸ್ಮಾರಕಗಳ ಮೇಲಿನ ಶಿಲ್ಪ, ಶಾಸನಗಳು ಹಾಗೂ ಉತ್ಖನನದ ವೇಳೆ ದೊರೆತ ಸಲಕರಣೆಗಳಲ್ಲಿ ಕ್ರೀಡಾ ಚಟುವಟಿಕೆಗಳು ದಾಖಲಾಗಿವೆ. ಬೌದ್ಧಿಕ ಪ್ರಾವೀಣ್ಯತೆಯ ಗೆರೆಯಾಟಗಳಾದ ಪಗಡೆ, ಚೌಕಾಬಾರ, ಪಗ್ಗದಾಟ. ಹುಲಿಕವಿಲೆಮನೆ, ಆನೆಕಟ್ಟಾಟಗಳಲ್ಲಿ ತಮ್ಮ ಬುದ್ಧಿಮತ್ತೆಯನ್ನು ಒರೆಗಲ್ಲಿಗೆ ಹಚ್ಚುತ್ತಿದ್ದರು. ವಿಜಯನಗರದ ಪ್ರತಿಯೊಂದು ಸ್ಮಾರಕಗಳ ಮುಂದಿನ ನಕ್ಷೆಗಳು ಇದಕ್ಕೆ ಪುಷ್ಟಿನೀಡಿವೆ. ವಿರಾಮದ ವೇಳೆಯ ಬೇಸರ ನೀಗಿಸಿಕೊಳ್ಳುವ ಕ್ರೀಡೆಗಳಾಗಿ ಮೇಲ್ನೋಟಕ್ಕೆ ಕಂಡರೂ ಯುದ್ಧ ತಂತ್ರ, ಸಾಮ್ರಾಜ್ಯ, ಸಾಕುಪ್ರಾಣಿಗಳ ರಕ್ಷಣೆ ಇತ್ಯಾದಿ ಸಂಗತಿಗಳು ಅಡಗಿರುವುದು ಬಹುಮುಖ್ಯವಾಗಿವೆ.

ಕ್ರೀಡೆಗಳು ಸಾಮಾಜಿಕ ಜೀವನದ ಅವಿಭಾಜ್ಯ ಅಂಗಗಳು ನಿತ್ಯ ಜೀವನದ ಜೊತೆಗೆ ಹಬ್ಬ, ಜಾತ್ರೆ, ಉತ್ಸವ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಪ್ರದರ್ಶನಾತ್ಮಕವಾಗಿ, ಕೆಲವು ಕ್ರೀಡೆಗಳನ್ನು ಯುದ್ಧ ತಂತ್ರದ ಪ್ರತಿರೂಪವಾಗಿಯೂ ರೂಢಿಸಿಕೊಂಡಿದ್ದರು. ಲಗ್ಗೆಯಾಟ, ಮರಕೋತಿಯಾಟ, ಚದುರಂಗ ಇತ್ಯಾದಿ ಕ್ರೀಡೆಗಳು ಮಕ್ಕಳನ್ನು ಸೇನೆಗೆ ತರಬೇತಿಗೊಳಿಸುವ ಕಾರ್ಯಕ್ರಮಗಳೂ ಆಗಿದ್ದವು. ಉದಾಹರಣೆ ಲಗ್ಗೆಯಾಟವು ಕೋಟೆ ಕಾಳಗದ ತದ್ರೂಪವೇ ಆಗಿದೆ. ಇಲ್ಲಿ ಕೋಟೆಯನ್ನು ಕೆಡಹುವುದು, ರಕ್ಷಿಸುವುದು, ದಾಳಿ ಮಾಡುವುದು, ದಾಳಿಯಾದಾಗ ರಕ್ಷಿಸುವುದು- ಇದರಲ್ಲಿ ಅಡಗಿರುವ ಮುಖ್ಯ ತಂತ್ರಗಳು. ಮರಕೋತಿಯಾಟದ ಮೂಲಕ ಮಕ್ಕಳು ಕೋಟೆ ಹತ್ತುವುದು, ಇಳಿಯುವುದು, ಅಪಾಯ ಬಂದಾಗ ರಕ್ಷಿಸಿಕೊಳ್ಳುವುದು- ಇವೇ ಕಾರ್ಯಗಳನ್ನು ಈ ಕ್ರೀಡೆಗಳ ಮೂಲಕ ಕಂಡುಕೊಂಡಿದ್ದುದು ದೃಢಪಡುವ ಸಂಗತಿ.

ಕ್ರೀಡೆಗಳು ಭಾವೈಕ್ಯತೆಯ ದ್ಯೋತಕ. ಇವು ಮನುಷ್ಯರ ನಡುವೆ ನಡೆಯಬೇಕಾಗಿರುವುದರಿಂದ ಸಹಜವಾಗಿಯೇ ಮನುಷ್ಯರನ್ನು ಮುಖಾಮುಖಿಯಾಗಿಸುತ್ತವೆ. ಅಂದಿನ ಸಮಾಜದ ಎಲ್ಲಾ

ಸ್ತರದ ಜನರು ಒಂದಿಲ್ಲೊಂದು ಕ್ರೀಡೆಯಲ್ಲಿ ತೊಡಗುತ್ತಿದ್ದರು. ಇದಕ್ಕೆ ಚಟುವಟಿಕೆಯಲ್ಲಿ ಭಾಗವಹಿಸುವ ಕಾತುರ, ವೈಯಕ್ತಿಕವಾಗಿ ಕೌಶಲ್ಯ ಮೆರೆಯುವ ಹಂಬಲ, ಸಾಮ್ರಾಜ್ಯದ ಕೀರ್ತಿ ಹೆಚ್ಚಿಸಲು ಕ್ರೀಡಾ ಸ್ಪರ್ಧೆಯಲ್ಲಿ ದೊರೆತ ಜಯ, ಜಯದೊಂದಿಗೆ ಬರುವ ಹಣ ಬಿರುದು ಮತ್ತು ಸನ್ಮಾನ ಸಡಗರಗಳು ಕ್ರೀಡೆಯ ಆಕರ್ಷಣೆಯನ್ನು ಹೆಚ್ಚಿಸುತ್ತಿದ್ದುದು ನೈಜನೀಯ.

ಕ್ರಿ.ಶ. ಹದಿಮೂರರಿಂದ ಹದಿನಾರನೆಯ ಶತಮಾನದವರೆಗಿನ ಅವಧಿಯಲ್ಲಿ ದೇಹದಾರ್ಢ್ಯತೆಗೆ ಸಂಬಂಧಿಸಿದ ಕ್ರೀಡೆಗಳಿಗೆ ಹೆಚ್ಚಿನ ಮಹತ್ವ ದೊರೆತಿತ್ತು. ವಿಜಯನಗರದ ಪರಿಣಾಮಕಾರಿ ಬೆಳವಣಿಗೆಯೆಂದರೆ ಪ್ರತಿ ಗ್ರಾಮ, ನಗರ, ಪಟ್ಟಣಗಳಲ್ಲಿ ಆಂಜನೇಯನ ಗುಡಿ ಮತ್ತು ಗರಡಿ ಮನೆಗಳು ಜನ್ಮತಾಳಿದ್ದುದು. ಕುಸ್ತಿಗೆ ಅಂದು ಹೆಚ್ಚು ಪ್ರಾಧಾನ್ಯತೆ ನೀಡಿದ್ದು. ಅರಸರಾದಿಯಾಗಿ ಸಾಮಾನ್ಯ ಜನ, ಸ್ತ್ರೀಯರೂ ಕುಸ್ತಿಯಲ್ಲಿ ಪಾಲ್ಗೊಂಡಿದ್ದುದು ವಿಶೇಷವಾಗಿದೆ. ನಂತರ ಮೈಸೂರು ಅರಸರ ಕಾಲಾವಧಿಯಲ್ಲಿ ಮುಂದುವರೆದು ಇಂದಿಗೂ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಜನಪ್ರಿಯ ಕ್ರೀಡೆಯಾಗಿರುವುದು ಗಮನಾರ್ಹ.

ವಿಜಯನಗರ ಅವಧಿಯಲ್ಲಿ ದೈಹಿಕ ಮತ್ತು ಬೌದ್ಧಿಕ ಕಸರತ್ತಿನ ಕ್ರೀಡೆಗಳಿಗೆ ವಿಶೇಷ ಒತ್ತು ನೀಡಲಾಗಿತ್ತು. ಸಮಕಾಲೀನ ರಾಜಕೀಯ ಸ್ಪರ್ಧೆ ಹಾಗೂ ನೆರೆಯ ಬಹಮನಿ ಸುಲ್ತಾನರ ದಾಳಿಗಳಿಂದ ಪ್ರಜೆಗಳಾದಿಯಾಗಿ ಅರಸರು ಯುದ್ಧತಂತ್ರದ ಕ್ರೀಡೆಗಳಲ್ಲಿ ತೊಡಗಿಕೊಂಡು, ತಮ್ಮ ಮಕ್ಕಳಿಗೂ ಕ್ರೀಡೆಗಳ ಮೂಲಕ ಸೈನಿಕ ತರಬೇತಿ ಕೊಡುವಲ್ಲಿ ನಿರತರಾಗಿದ್ದರು. ಕ್ರೀಡೆಗಳಲ್ಲಿ ಪ್ರಾದೇಶಿಕ ಭಿನ್ನತೆಯು ಅಷ್ಟೇ ಸಹಜವಾಗಿದ್ದಿತು. ಒಂದು ಕ್ರೀಡೆಯ ಮೂಲ ಆಶಯವನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡು ಆಡಿರುವುದು ಕಂಡುಬರುವುದಿಲ್ಲ. ಆದರೆ ಅದರಲ್ಲಿ ಬಳಸುವ ವಸ್ತು ಮತ್ತು ನಿಯಮಗಳಲ್ಲಿ ಸಾಮಾನ್ಯವಾಗಿ ವ್ಯತ್ಯಾಸಗಳು ಕಂಡುಬರುತ್ತವೆ. ಇದಕ್ಕೆ ನಿದರ್ಶನವೆಂಬಂತೆ ಲಗ್ಗೆಯಾಟಕ್ಕೆ ಕರಾವಳಿ, ಮಲೆನಾಡಿನ ಭಾಗದಲ್ಲಿ ತೆಂಗಿನ ಚಿಪ್ಪು ಬಳಸಿದರೆ, ಬಯಲು ಸೀಮೆಯಲ್ಲಿ ಕಲ್ಲನ್ನು ಬಳಸುವರು. ಅದೇ ರೀತಿ ಚಿನ್ನಿಕೋಲಾಟ ಕರ್ನಾಟಕದಾದ್ಯಂತ ಆಡುವುದಿದೆ. ಚಿನ್ನಿ ಇಡುವ ಗುಳಿಗೆ ಕುಳಿ, ಗುಳಿ, ಪತ್ತೆ, ಬುದ್ದು, ಬುಜ್ಜಿ ಮುಂತಾಗಿ ಕರೆಯುತ್ತಾರೆ. ಹಾಗೆಯೇ ಚೌಕಾಬಾರ, ಪಗಡೆಯಾಟಗಳಿಗೆ ಕವಡೆಯ ಬದಲಿಗೆ ಹುಣಸೇ ಬೀಜ, ಕಪ್ಪೆಚಿಪ್ಪು, ಕಡಲೆ ಬೀಜಗಳನ್ನು ಬಳಸುತ್ತಿದ್ದುದು ವಿಶೇಷ. ಈ ರೀತಿಯ ಪ್ರಾದೇಶಿಕ ಭಿನ್ನತೆಗಳು ಇಂದಿಗೂ ಮುಂದುವರಿದಿರುವುದು ವಿಶೇಷವಾಗಿದೆ.

ವಿಜಯನಗರ ಅವಧಿಯಲ್ಲಿ ಕೈಗೊಂಡ ವಿನೋದಾವಳಿ ಚಟುವಟಿಕೆಗಳಾದ ಹಬ್ಬ, ಉತ್ಸವ ಕ್ರೀಡೆಗಳು ಹೆಚ್ಚಾಗಿ ಬಯಲು ಪ್ರದೇಶಗಳಲ್ಲಿ ಜರುಗಿವೆ. ಇದು ಅಂದಿನ ಬಜಾರುಗಳಲ್ಲಿಯ ಕಾರ್ಯಚಟುವಟಿಕೆಗಳಿಂದ ದೃಢಪಡುವ ಸಂಗತಿ. ಸಂಭ್ರಮಾಚರಣೆಯನ್ನು ಮನೆಯೊಳಗೆ ಆಚರಿಸುತ್ತಿದ್ದರೂ, ಹೊರಬಯಲಲ್ಲೂ ಆಚರಿಸಿದ ಬಗೆಗೆ ಮಹಾನವಮಿ ದಿಬ್ಬ, ಬಜಾರುಗಳು, ದೇವಾಲಯದ ಆವರಣಗಳು ಸಾಕ್ಷ್ಯಗಳಾಗಿವೆ.

ಅಂದು ಅರಸರಾದಿಯಾಗಿ ಸಾಮಂತ, ಮಾಂಡಲಿಕ, ಪ್ರಜೆಗಳು ನವರಾತ್ರಿ, ದೀಪಾವಳಿ, ಯುಗಾದಿ, ಹೋಳಿ ಇತ್ಯಾದಿ ಹಬ್ಬಗಳಲ್ಲಿ ಕ್ರೀಡೆ, ನೃತ್ಯ, ಸಂಗೀತ ಮತ್ತು ಜೂಜಾಟಗಳ

ಮೂಲಕ ಕಾಲಕಳೆಯುತ್ತಿದ್ದುದು ವಿಶೇಷವಾಗಿದೆ. ಮುಂದೆ ಮೈಸೂರು ಅರಸರ ಕಾಲಕ್ಕೆ ಇದೇ ಪರಿಪಾಠ ಬೆಳೆದು ಬಂದು ದಸರಾ ಉತ್ಸವ ಸಾರ್ವಜನಿಕ ಹಬ್ಬವಾಗಿ ಇಂದು ನಾಡಹಬ್ಬವಾಗಿ ಆಚರಿಸಲ್ಪಡುತ್ತಿದೆ. ಇದರಲ್ಲಿ ಅನೇಕ ಕ್ರೀಡಾ ವಿನೋದಾವಳಿ ಚಟುವಟಿಕೆಗಳು ನಡೆಯುತ್ತಿದ್ದುದು ದಾಖಲಾರ್ಹ ಸಂಗತಿ. ಈ ಕುರಿತು ಪ್ರವಾಸಿಗರು ಮನದಣಿಯೆ ಬಣ್ಣಿಸಿರುವುದು ಗಮನಾರ್ಹ. ಅಲ್ಲಿ ದೇವ ದೇವತೆಗಳಿಗೆ ಕಲ್ಯಾಣೋತ್ಸವ, ರಥೋತ್ಸವ, ಪ್ರಾಣಿಬಲಿ, ಪೂಜೆ, ಪುನಸ್ಕಾರಗಳನ್ನು ಮಾಡುವುದರ ಮೂಲಕ ಸಂಗೀತ ನೃತ್ಯ, ಕೋಲಾಟ, ಭಜನೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಂತೋಷದಿಂದ ಸಂಭ್ರಮಿಸುತ್ತಿದ್ದರು. ಅದೇ ಪ್ರಭಾವ ಇಂದಿಗೂ ಹುಲಿಗಿ, ಗಾಳೆಮ್ಮನಗುಡಿ, ಕಮಲಾಪುರ, ಹಂಪಿ, ಆನೆಗೊಂದಿ, ಅನಂತಶನಯಗುಡಿ ಸುತ್ತಮುತ್ತಲಿನ ಪರಿಸರದಲ್ಲಿ ಸಾಮಾನ್ಯರಾದಿಯಾಗಿ ಪ್ರತಿಯೊಂದು ವರ್ಗದವರು ಮುಂದುವರಿಸಿಕೊಂಡು ಬಂದಿರುವುದು ವಿಶೇಷವಾಗಿದೆ.

ವಿಜಯನಗರ ಸಾಮ್ರಾಜ್ಯವು ಅನೇಕ ಜ್ಞಾನಶಿಸ್ತುಗಳ ನೆಲೆವೀಡೆಂದು ಪ್ರಖ್ಯಾತವಾಗಿದ್ದಿತು. ಅರಸ, ಸಾಮಂತ, ಪ್ರಾಂತ್ಯಾಧಿಕಾರಿಗಳ ರಾಜಧಾನಿಗಳು, ಅಸ್ಥಾನಗಳೂ, ಪಂಡಿತರು, ವಿದ್ವಾಂಸರು ಹಾಗೂ ಕಲಾವಿದರ ಕೇಂದ್ರಗಳಾಗಿದ್ದವು. ನೃತ್ಯ, ಸಂಗೀತ, ನಾಟಕ ಕಲೆಗಳು ಹೆಚ್ಚಾಗಿ ಅಭಿವೃದ್ಧಿ ಪಡೆದಿದ್ದವು. ರಾಜಸ್ಥಾನಗಳೂ, ಜನಗೋಷ್ಠಿಗಳೂ ಇವುಗಳನ್ನು ಲಾಲಿಸಿ ಪಾಲಿಸಿದವು. ಸಂಗೀತ ಕುರಿತು ಶಾಸ್ತ್ರೀಯ ಗ್ರಂಥಗಳು ರಚನೆಯಾದವು. ಅವುಗಳಲ್ಲಿ ಕಲ್ಲಿನಾಥಾರ್ಯನ ಸಂಗೀತರತ್ನಾಕರ ಟೀಕೆ, ಗೋಪತಿಪ್ಪನ ತಾಳದೀಪಿಕೆ, ರಾಮಮಾತ್ಯನ ಸ್ವರಮೇಲಕಲಾನಿಧಿ, ರಘನಾಥನಾಯಕನ ಸಂಗೀತ ಸುಧ ಮೊದಲಾದ ಗ್ರಂಥಗಳು ಪ್ರಮುಖವೆನಿಸಿವೆ. ವಿಜಯನಗರ ಕಾಲದ ದೇವಸ್ಥಾನದ ಭಿತ್ತಿ, ಕಂಬಗಳ ಮೇಲಿನ ನೃತ್ಯ, ವಾದಕರ ಶಿಲ್ಪಗಳು ಇದಕ್ಕೆ ಪುಷ್ಟಿದಾಯಕವಾಗಿವೆ. ವಿಜಯನಗರ ಅವಧಿಯ ಪರಿಣಾಮಕಾರಿ ಬೆಳವಣಿಗೆಯೆಂದರೆ ಸಂಗೀತ, ನೃತ್ಯ ಮತ್ತು ನಾಟಕಗಳಲ್ಲಿ ಪ್ರಯೋಗವಾದುದು. ಸಂಗೀತಕ್ಕೆ ದಾಸರು ನೀಡಿದ ಕೊಡುಗೆ ಅಪಾರವಾದದ್ದು. ದಾಸರಲ್ಲಿ ಪುರಂದರದಾಸರನ್ನು ಕರ್ನಾಟಕ ಸಂಗೀತದ ಪಿತಾಮಹನೆಂದೇ ಕರೆದಿರುವುದು ಗಮನಾರ್ಹ ಅಂಶ. ಅಂದು ನೃತ್ಯಕ್ಕೆ ಅಂದು ವಿಶೇಷ ಅದ್ಯತೆ ನೀಡಿದುದ್ದನ್ನು ಸ್ಮಾರಕಗಳ ಮೇಲಿರುವ ಸ್ತ್ರೀ ಪುರುಷ ಶಿಲ್ಪಗಳು ಸಾಕ್ಷ್ಯಗಳಾಗಿವೆ. ಸಂಗೀತವು ಕೇವಲ ಅರಮನೆ, ದೇವಾಲಯ, ರಂಗಮಂಟಪಗಳಿಗೆ ಸಿಮೀತವಾಗಿರಲಿಲ್ಲ. ಯುದ್ಧದಲ್ಲಿ ದಿನವೆಲ್ಲಾ ಕಾದಾಡಿ ಬರುವ ಸೈನಿಕರು ಸಂಜೆ ತಮ್ಮ ಆಯಾಸ ಗಾಯಗಳ ನೋವನ್ನು ನೃತ್ಯ, ಸಂಗೀತಗಳಿಂದ ಮರೆಯುತ್ತಿದ್ದರು. ಕ್ರಿ.ಶ. ೧೫೨೦ರ ರಾಯಚೂರು ದಂಡೆಯಾತ್ರೆಯಲ್ಲಿ ಇಪ್ಪತ್ತು ಸಾವಿರ ನರ್ತಕಿಯರನ್ನು ಕರೆದೊಯ್ದದ್ದು ದಾಖಲಾರ್ಹ ವಿಚಾರ. ಅಂದು ತತ, ಸುಶಿರ, ಘನ, ಅವನದ್ಧ ವಾದ್ಯಗಳು ಪ್ರಯೋಗವಾದವು. ನೃತ್ಯ, ಸಂಗೀತಗಳಿಗೆ ಪರಿಣತಿ ಅವಶ್ಯಕವಾಗಿತ್ತು. ಅವರ ಪ್ರತಿಭೆಗಳನ್ನು ದೇಶ, ವಿದೇಶಗಳಿಂದ ಬಂದಿರುವ ವಿದ್ವಾಂಸರು, ಕಲಾವಿದರ ಮುಂದೆ ಪ್ರದರ್ಶಿಸಿ ಪ್ರಶಂಸೆ ಪಡೆಯುತ್ತಿದ್ದರು.

ಹಬ್ಬ ಉತ್ಸವಗಳಂದು ನಡೆಯುತ್ತಿದ್ದ ಸಂಗೀತ, ನೃತ್ಯ, ನಾಟಕಗಳು ಬಹುಮುಖ್ಯ

ಮನೋರಂಜನಾ ಕಾರ್ಯಕ್ರಮಗಳು. ನೃತ್ಯ ಸೇವೆಯನ್ನು ನೀಡುವ ನೂರಾರು ಸ್ತ್ರೀಯರು ಸಾಮ್ರಾಜ್ಯದ ದೇವಮಂದಿರಗಳಲ್ಲಿ ಪೋಷಣೆಗೆ ಒಳಗಾಗಿದ್ದರು. ನೃತ್ಯಕ್ಕೆ ಸೌಂದರ್ಯವತಿಯರಿಗೆ ಸ್ಥಾನ ಕಲ್ಪಿಸಲಾಗುತ್ತಿತ್ತು. ಅಂದು ನಾಟಕಗಳು ರಚನೆಯಾಗಿ ಜಾತ್ರೆ, ಹಬ್ಬ, ಉತ್ಸವ ಮೊದಲಾದ ಸಂದರ್ಭಗಳಲ್ಲಿ ಪ್ರಯೋಗಿಸಲ್ಪಡುತ್ತಿದ್ದವು. ವಿಜಯನಗರ ಮೊದಲಾದ ರಾಜಧಾನಿಗಳಲ್ಲಿಯೂ, ತಂಜಾವೂರು, ಇಕ್ಕೇರಿ ಮುಂತಾದ ಪಟ್ಟಣಗಳಲ್ಲಿ ನಾಟ್ಯಗೃಹಗಳಿದ್ದವು. ಪುರುಷರಂತೆ ಸ್ತ್ರೀಯರೂ ರಂಗಭೂಮಿಯನ್ನು ಅಲಂಕರಿಸುತ್ತಿದ್ದರು. ದೇವಸ್ಥಾನಗಳಲ್ಲಿ ಪ್ರತಿನಿತ್ಯ ಸಂಗೀತ ನೃತ್ಯ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಕಲೆಯನ್ನು ಪೋಷಿಸಿ ಕಲಾಕಾರರನ್ನು ಬೆಳೆಸಿದ ಕೀರ್ತಿ ವಿಜಯನಗರದ್ದಾಗಿದೆ.

ಬೇಟೆಯು ವಿನೋದಾವಳಿಯ ಪ್ರಮುಖ ಮಾಧ್ಯಮ. ಅರಸ, ಶ್ರೀಮಂತರಿಗೆ ಅದೊಂದು ಪ್ರತಿಷ್ಠೆ ಹಾಗೂ ಮನರಂಜನೆಯಾಗಿದ್ದಿತು. ಅದರಲ್ಲಿ ಸಾಮ್ರಾಜ್ಯದ ಹಿತರಕ್ಷಣೆಯೂ ಸೇರಿತ್ತು. ಕಾಡಂಚಿನ ಪ್ರಜೆಗಳ, ಬೆಳೆಗಳ ಸಂರಕ್ಷಣೆಗಾಗಿ ಬೇಟೆ ಅನಿವಾರ್ಯವಾಗಿತ್ತು. ಅದಕ್ಕಾಗಿ ಪ್ರತ್ಯೇಕ ಬೇಡರ ಪಡೆಯು ಸದಾ ಸಿದ್ಧವಾಗಿರುತ್ತಿತ್ತು. ಪ್ರಜೆಗಳಿಂದ ಕಾಡು ಪ್ರಾಣಿಗಳ ಹಾವಳಿ ಕುರಿತು ದೂರು ಬಂದಾಗ ತಕ್ಷಣ ಬೇಡರ ಪಡೆಯನ್ನು ಕಳುಹಿಸಿಕೊಡುವುದರ ಮೂಲಕ ಸಮಸ್ಯೆಯನ್ನು ಪರಿಹರಿಸಲಾಗುತ್ತಿತ್ತು. ಬೇಡರು ಬೇಟೆಯಾಡಲು ಆಯುಧ, ಬಲೆ, ಬೇಟೆ ನಾಯಿ ಇತ್ಯಾದಿಗಳನ್ನು ಹೊಂದಿರುತ್ತಿದ್ದರು, ಅಂದು ಸ್ತ್ರೀಯರು ಪುರುಷರೊಂದಿಗೆ ಬೇಟೆಗೆ ಹೋಗಿ ಅವರೊಂದಿಗೆ ವಿನೋದದಲ್ಲಿ ಪಾಲ್ಗೊಳ್ಳುತ್ತಿದ್ದರು. ವಿಜಯನಗರ ಕಾಲದ ಶಿಲ್ಪಗಳಲ್ಲಿ ಯಥೇಚ್ಚವಾಗಿ ಕಾಣಬರುವ ಚುಂಚುಲಕ್ಷ್ಮಿ(ಬೇಡ–ಬೇಡತಿ) ಶಿಲ್ಪಗಳು ಇದಕ್ಕೆ ಪ್ರಮುಖ ಸಾಕ್ಷ್ಯವಾಗಿವೆ. ಕಾಡಿನಿಂದ ಹಿಡಿದು ತಂದ ಪ್ರಾಣಿ–ಪಕ್ಷಿಗಳನ್ನು ಪಳಗಿಸುವ ಮೂಲಕ ಹಾಗೂ ಟಗರು, ಕೋಣ, ಎತ್ತು, ಆನೆ, ಕೋಳಿ ಇವುಗಳ ಸ್ಪರ್ಧೆಯನ್ನು ಏರ್ಪಡಿಸುವ ಮೂಲಕ ಮನರಂಜನೆಯನ್ನು ಪಡೆಯುತ್ತಿದ್ದರು.

ಒಟ್ಟಿನಲ್ಲಿ ವಿಜಯನಗರ ಕಾಲದಲ್ಲಿ ಕ್ರೀಡೆ ಮತ್ತು ವಿನೋದಾವಳಿಗಳು ಮಾನವನ ಜೀವನಕ್ರಮದ ಭಾಗಗಳಾಗಿದ್ದವು. ದಿನ ಅಥವಾ ವರ್ಷವಿಡೀ ದುಡಿದ ದೇಹ ಹಾಗೂ ಮನಸ್ಸನ್ನು ಕ್ರೀಡೆ ಮತ್ತು ವಿನೋದಾವಳಿಗಳಂತಹ ಮನರಂಜನೆಗಳ ಮೂಲಕ ಪುನಶ್ಚೇತನಗೊಳಿಸುವ ಪ್ರಯತ್ನಗಳನ್ನು ಕಂಡುಕೊಂಡದ್ದು ಗಮನಾರ್ಹ. ಹಾಗೆಯೇ ವರ್ಷದುದ್ದಕ್ಕೂ ಬರುವ ಬಿಸಿಲು, ಮಳೆ, ಚಳಿಗಾಲಗಳಿಗೆ ಅನುಗುಣವಾಗಿ ಕ್ರೀಡೆ ಮತ್ತು ವಿನೋದಾವಳಿಗಳು ಬದಲಾಗುತ್ತಿದ್ದುದು ನೈಜನೀಯ. ಹಾಗೆಯೇ ಮಾನವ ತನ್ನ ವೃತ್ತಿ ಬದುಕಿಗೆ ಅನುಗುಣವಾಗಿ ದೊರೆಯುವ ಬಿಡುವನ್ನು ಮನದ ಆಹ್ಲಾದಕ್ಕಾಗಿ ಕ್ರೀಡೆ ಮತ್ತು ವಿನೋದಾವಳಿಗಳ ಮೂಲಕ ಬಳಸಿಕೊಂಡಿರುವುದು ಗಮನೀಯ ಸಂಗತಿ.

ಕ್ರೀಡೆ ಮತ್ತು ವಿನೋದಾವಳಿಗಳು ಮಾನವನ ಆಸರಿಕೆ–ಬೇಸರಿಕೆಗಳಿಗೆ ವಿರಾಮ ಮತ್ತು ವಿಶ್ರಾಂತಿ ನೀಡಿ ಬದುಕಿನ ಉತ್ತೇಜಕಗಳಾಗಿ ಚರಿತ್ರೆಯುದ್ದಕ್ಕೂ ನಡೆದು ಬಂದಿವೆ.

ಹಾಗೆಯೇ ಇಂದಿಗೂ ಮುಂದುವರಿದುಕೊಂಡು ಬಂದಿವೆ. ಕ್ರೀಡೆ ಮತ್ತು ವಿನೋದಾವಳಿಗಳು ಇಂದಿನ ಆಧುನಿಕ ಜಗತ್ತಿನಲ್ಲಿ ಕಾಲಮಾನ, ವಯೋಮಾನ, ಪರಿಕರ, ತಂತ್ರಜ್ಞಾನಗಳ ಮೂಸೆಯಲ್ಲಿ ವಿಭಿನ್ನ ಹಾಗೂ ವಿಶಿಷ್ಟ ಆಯಾಮಗಳಲ್ಲಿ ಮೈದೆಳೆದು ಜೀವಂತಿಕೆಯನ್ನು ಸೃಜಿಸಿಕೊಳ್ಳುತ್ತಾ ಮುನ್ನಡೆದಿರುವುದು ಶ್ಲಾಘನಾರ್ಹ.

ಅನುಬಂಧಗಳು

ಸಂಕ್ಷೇಪ ಸೂಚಿ

ಎ.ಕ.	:	ಎಫಿಗ್ರಾಫಿಯಾ ಕರ್ನಾಟಿಕ.
ಎ. ಆರ್.	:	ಆನ್ಯುಯಲ್ ರಿಪೋರ್ಟ್ ಆನ್ ಇಂಡಿಯನ್ ಎಫಿಗ್ರಾಫಿ.
ಇಂ. ಎ.	:	ಇಂಡಿಯನ್ ಎಫಿಗ್ರಫಿ.
ಐ. ಎ.	:	ಇಂಡಿಯನ್ ಆಂಟಿಕ್ವಯರಿ.
ಐ ಪಿ ಸ್.	:	ಕ್ರೋನಾಲಾಜಿಕಲ್ ಲಿಸ್ಟ್ ಆಫ್ ಇನ್ಸ್ಕ್ರಿಪ್ಷನ್ಸ್. ಆಫ್ ದ ಪುದುಕೋಟ್ಟೈ ಸ್ಟೇಟ್
ಎ. ಆರ್. ಐ. ಇ.	:	ಆರ್ಕ್ಯಾಲಾಜಿಕಲ್ ರಿಪೋರ್ಟ್ ಆಫ್ ಇಂಡಿಯನ್ ಎಫಿಗ್ರಾಫಿ.
ಎಂ. ಎ. ಆರ್.	:	ಆರ್ಕ್ಯಾಲಾಜಿಕಲ್ ಸರ್ವೇ ಆಫ್ ಮೈಸೂರು ಆನ್ಯುಯಲ್ ರಿಪೋರ್ಟ್.
ಟಿ. ಡಿ. ಐ.	:	ತಿರುಪತಿ ತಿರುಮಲ ದೇವಸ್ಥಾನಂ ಇನ್ಸ್ಕ್ರಿಪ್ಷನ್ಸ್.
ಕೆ. ಐ.	:	ಕರ್ನಾಟಕ ಇನ್ಸ್ಕ್ರಿಪ್ಷನ್ಸ್.
ವಿ. ಪಿ. ಆರ್.	:	ವಿಜಯನಗರ ಪ್ರೊಗ್ರೇಸ್ ರಿಪೋರ್ಟ್.
ಎಸ್, ಐ. ಐ.	:	ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್.
ಬಿ ಕೆ ಐ	:	ಬಾಂಬೆ ಕರ್ನಾಟಕ ಇನ್ಸ್ಕ್ರಿಪ್ಷನ್ಸ್.
ಕ ವಿ ವಿ ಶಾ ಸಂ.	:	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ
ಕ. ಸಾ. ಪ. ಪ.	:	ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ.
ಕ. ಸಾ. ಪ.	:	ಕನ್ನಡ ಸಾಹಿತ್ಯ ಪರಿಷತ್
ಕಂ. ನ. ವಿ.	:	ಕಂಠಿರವ ನರಸರಾಜ ವಿಜಯಂ.
ಪ್ರಾ ಕಂ. ಇ.	:	ಪ್ರವಾಸಿ ಕಂಡ ಇಂಡಿಯಾ.
ಇ. ದ.	:	ಇತಿಹಾಸ ದರ್ಶನ.
ಚ. ಪು.	:	ಚನ್ನಬಸವ ಪುರಾಣ.
ಪಂ. ಭಾ.	:	ಪಂಪ ಭಾರತ.
ಪು. ದಾ. ಕೀ.	:	ಪುರಂದರದಾಸರ ಕೀರ್ತನೇಗಳು.
ಭಿ. ಬ. ಪು.	:	ಭೀಮ ಕವಿಯ ಬಸವ ಪುರಾಣ.
ಶಾ. ಪು.	:	ಶಾಂತಿನಾಥ ಪುರಾಣ.
ಜೈ. ಭಾ.	:	ಜೈಮಿನಿ ಭಾರತ.
ಕೋ ರಾ ಚ.	:	ಕೋಮಾರ ರಾಮನ ಚರಿತೆ.
ಹೋ ಕು ರಾ ಸಾ.	:	ಹೊಸಕುಮಾರರಾಮನ ಸಾಂಗತ್ಯ.
ಪು. ಸಾ. ದ.	:	ಪುರಂದರ ಸಾಹಿತ್ಯ ದರ್ಶನ.
ರಾ. ಚ.	:	ರಾಮನಾಥ ಚರಿತೆ.
ಭ. ವೈ.	:	ಭರತೇಶ ವೈಭವ.
ನೇ. ಪು.	:	ನೇಮಿನಾಥ ಪುರಾಣ.

ಮ. ಮ. ವಿ. : ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ.
ಮೋ. ತ. : ಮೋಹನ ತರಂಗಿಣಿ.
ಚಂ. ಸಾ. : ಚಂದ್ರಪ್ರಭಾ ಸಾಂಗತ್ಯ.
ನ. ಚ. : ನಳ ಚರಿತೆ.
ದ ಚ : ದಶಕುಮಾರ ಚರಿತೆ
ಕಂ. ನ. ವಿ. : ಕಂಠಿರವ ನರಸರಾಜವಿಜಯಂ

ಪ್ರಾಥಮಿಕ ಆಕರಗಳು–ಕನ್ನಡ.

ಎಫಿಗ್ರಾಫಿಯಾ ಕರ್ನಾಟಿಕ ಸಂಪುಟಗಳು. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಕಲಬುರ್ಗಿ, ಎಂ.ಎಂ., (ಸಂ), ೧೯೯೪, *ಕರ್ನಾಟದ ಕೈಫಿಯತ್ತುಗಳು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಕುಶಾಲಪ್ಪಗೌಡ, ಕೆ., (ಅನು), ೧೯೮೯, *ಗಂಗಾದೇವಿಯ ಮಧುರಾವಿಜಯಂ ಅಥವಾ ವೀರಕಂಪಣರಾಯ ಚರಿತಂ,* :ಜಯಗೌರೀ ಪ್ರಕಾಶನ.ಪೆರಾಜೆ

ಕೃಷ್ಣಭಟ್ಟ, ಕೆ., (ಅನು), ೧೯೭೨, *ಕೌಟಿಲ್ಯನ ಅರ್ಥಶಾಸ್ತ್ರ.* ಸಮಾಜ ಪುಸ್ತಕಾಲಯ, ಧಾರವಾಡ,

ತೊರವೆ ನರಹರಿ.,*ತೊರವೆ ರಾಮಾಯಣ,* ೧೯೫೬–೫೯, ಭಾಗ–೧ ಮತ್ತು ೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ದೇವರಕೊಂಡಾರೆಡ್ಡಿ ಮತ್ತು ಇತರರು., (ಸಂ), ೧೯೯೮–೨೦೦೦, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ*–೧, ೨, ೩, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇವೀರಪ್ಪ, ಎಚ್., (ಸಂ), ೧೯೯೪, *ರಾಮನಾಥ ಚರಿತ,* ಸಂಪುಟ–೨–೩, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನರಸಿಂಹಾಚಾರ್, ಡಿ.ಎಲ್., (ಸಂ), ೧೯೫೫, *ವಡ್ಡಾರಾಧನೆ,* ಶಾರದಾಮಂದಿರ, ಮೈಸೂರು.

ನಾಗರಾಜಯ್ಯ ಹಂ.ಪ., ಕುಲಕರ್ಣಿ ಆರ್.ವಿ., ೨೦೦೪, *ನೇಮಿನಾಥ ಪುರಾಣ* ಸಂಪುಟ ೧–೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನಾಗೇಗೌಡ, ಎಚ್.ಎಲ್., ೧೯೬೪–೬೬, *ಪ್ರವಾಸಿ ಕಂಡ ಇಂಡಿಯಾ, ಸಂಪುಟ* ೧–೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನಿರುಪಮಾ., ೧೯೭೭, *ಆಮುಕ್ತಮಾಲ್ಯದ* (ಶ್ರೀ ಕೃಷ್ಣದೇವರಾಯ), ಶ್ರೀ ಪ್ರಕಾಶನ, ಬೆಂಗಳೂರು, ಅನಂತರಂಗಾಚಾರ್.ಎನ್., ೧೯೭೯, ಪಂಪ, *ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಬಸಪ್ಪ, ಎಸ್., (ಸಂ), ೧೯೭೦, *ಶಿವತತ್ವಚಿಂತಾಮಣಿ* (ಲಕ್ಕಣ್ಣ ದಂಡೇಶ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಮಲ್ಲೇಪುರಂ ಜಿ.ವೆಂಕಟೇಶ., (ಸಂ), ೧೯೯೯, ಬಸವರಾಜ ಭೂಪಾಲ, *ಶಿವತತ್ತ್ವರತ್ನಾಕರ,* ಸಂ.೧–೨, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಂಜುನಾಥನ್, ಜಿ.ಜಿ., (ಸಂ), ೧೯೮೭, *ಭೀಮಕವಿ ಬಸವ ಪುರಾಣ,* ಲಿಂಗಾಯಿತ ಅಭಿವೃದ್ಧಿ ಸಂಸ್ಥೆ. ಧಾರವಾಡ,

ಮಂಜುನಾಥನ್, ಜಿ.ಜಿ., (ಸಂ), ೧೯೭೦, *ಸನತ್ಕುಮಾರ ಚರಿತೆ* ತೆರಕಣಾಂಬಿ ಬೊಮ್ಮರಸ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅನುಚಕ್ರಕೋಡಿ ಈಶ್ವರಶಾಸ್ತ್ರಿ., ೧೯೮೭, ಮನು, *ಮನುಸ್ಮೃತಿ,* ಸಮಾಜ ಪುಸ್ತಕಾಲಯ, ಧಾರವಾಡ.

ವಿರೂಪಾಕ್ಷ ಪಂಡಿತ., ೧೯೨೬, *ಚೆನ್ನಬಸವ ಪುರಾಣ,* ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ,

ಶಾಮಶಾಸ್ತ್ರಿ, ಆರ್., (ಸಂ), ೧೯೩೪ *ಕಂಠೀರವ ನರಸರಾಜ ವಿಜಯಂ* (ಗೋವಿಂದ ವೈದ್ಯ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶಾಮಶಾಸ್ತ್ರಿ, ಆರ್., (ಸಂ), ೧೯೭೩, *ಕೆಳದಿ ನೃಪವಿಜಯಂ* (ಲಿಂಗಣ್ಣ ಕವಿ), ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಸೀತಾರಾಮಯ್ಯ, ಎಂ.ವಿ.,(ಸಂ), ೧೯೭೫, *ಕವಿರಾಜಮಾರ್ಗ,* ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

ಹಿರೇಮಠ, ಆರ್.ಸಿ., (ಸಂ), ೧೯೭೩, *ಮೋಹನತರಂಗಿಣಿ* (ಕನಕದಾಸರು) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪೂರಕ ಆಕರ-ಕನ್ನಡ

ಅಡಪ ರಾಮಕೃಷ್ಣರಾವ್(ಮೂಲ), ಪೂರ್ಣಿಮ ಕುಂತೂರ್(ಅನು)., ೨೦೦೩, *ಕೃಷ್ಣದೇವರಾಯ,* ಸಾಹಿತ್ಯ ಆಕಾಡೆಮಿ, ನವದೇಹಲಿ.

ಅನಂತಕೃಷ್ಣಶರ್ಮ (ರಾಳ್ಳಪಲ್ಲಿ)., ೧೯೭೧, *ಸಾಹಿತ್ಯ ಮತ್ತು ಜೀವನ ಕಲೆ,* ಕಾವ್ಯಾಲಯ ಪ್ರಕಾಶನ, ಮೈಸೂರು.

ಕರ್ನಾಟಕ ಚರಿತ್ರೆ ಏಳು ಸಂಪುಟಗಳು, ೧೯೯೭. ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಅರವಿಂದ ಮಾಲಗತ್ತಿ., ೧೯೯೯, *ಪುರಾಣ ಜಾನಪದ ಮತ್ತು ದೇಶಿವಾದ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಅರಳುಮಲ್ಲಿಗೆ ಪಾರ್ಥಸಾರಥಿ., ೧೯೮೬, *ಧೀಮಂತ ಕರ್ನಾಟಕ,* ರಾಘವೇಂದ್ರ ಪ್ರಕಾಶನ, ಬೆಂಗಳೂರು.

ಅಕ್ಷರ, ಕೆ.ವಿ., ೧೯೯೪, *ರಂಗ ಪಪ್ರಂಚ,* ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.

ಆಚಾರ್ ಕೆ.ವಿ., ೧೯೭೬, *ಕರ್ನಾಟಕ ರಂಗಭೂಮಿ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಅದ್ವಾರಿ ನಾರಾಯಣ., (ಮೂಲ) ಪ್ರಸನ್ನ ಕುಮಾರ (ಅನು): *ಲೇಪಾಕ್ಷಿ ದೇವಾಲಯದ ಚರಿತ್ರೆ,* ಬುಕ್ಕರಾಯಸಮುದ್ರ, ಅನಂತಪುರ.

ಆದ್ಯ ರಾಮಾಚಾರ್ಯ., ೧೯೮೫, *ಶ್ರೀ ಕ್ಷೇತ್ರ ತಿರುಪತಿ*, ವರದರಾಜ ಪ್ರಕಾಶನ, ಬೆಂಗಳೂರು.

ಆದ್ಯ ರಂಗಾಚಾರ್ಯ, ಆರ್.ಎಲ್., ಅನಂತರಾಮಯ್ಯ., (ಅನು), ೧೯೭೧, *ಭಾರತೀಯ ರಂಗಭೂಮಿ*, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯ, ಹೊಸ ದೆಹಲಿ.

ಆದ್ಯರಾಮಾಚಾರ್ಯ., ೧೯೮೪, *ಭಾವನ*, ವರದರಾಜ ಪ್ರಕಾಶನ, ಬೆಂಗಳೂರು.

ಆರ್ವಿಯಸ್ ಸುಂದರಂ.,(ಕನ್ನಡಕ್ಕೆ): *ಕ್ರೀಡಾಭಿರಾಮ*, ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಆರ್ಯಾಂಬ ಪಟ್ಟಾಬಿ., ೧೯೮೭, *ಟೆನಿಸ್*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಒಡೆಯರ್, ಡಿ., ಹೆಗ್ಗಡೆ., ೨೦೦೫, *ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕ ಹಕ್ಕ-ಬುಕ್ಕರು*, ಅಖಿಲಾ ಏಜೆನ್ಸೀಸ್, ಅಂಜನಾದ್ರಿ, ಮೈಸೂರು.

ಕರುಣಾ ವಿಜಯೇಂದ್ರ., ೨೦೦೭-೮, *ಕರ್ನಾಟಕ ದೇವಾಲಯಗಳಲ್ಲಿ ರಂಗಭೋಗ*, (ನೃತ್ಯ), ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ಕರೀಗೌಡ ಬೀಚನಹಳ್ಳಿ., ೨೦೦೦, *ಕರಕುಶಲಕಲೆಗಳು, ವಿಶ್ವಕೋಶ-೨*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕರೀಂಖಾನ್, ಎಸ್.ಕೆ., (ಸಂ), ೧೯೯೦, *ಜನಪದ ಆಟಗಳು*, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಕಲಬುರ್ಗಿ, ಎಂ.ಎಂ., (ಸಂ), ೨೦೦೦, ವಿರಣ್ಣ ರಾಜೂರ, *ಹೊಸ ಕುಮಾರರಾಮನ ಸಾಂಗತ್ಯ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ, ಎಂ.ಎಂ., (ಪ್ರ.ಸಂ), ೧೯೯೮, *ಮಾನಸೋಲ್ಲಾಸ*, ದ್ವಿತಿಯ ಸಂಪುಟ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕಲಬುರ್ಗಿ, ಎಂ.ಎಂ., ೨೦೦೪, *ಮಾರ್ಗ-ಸಂ,೪*, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು,

ಕಲಮದಾನಿ ಗುರುರಾಯರು., ೧೯೭೪, *ವಿಜಯನಗರ ಸಾಮ್ರಾಜ್ಯ*, ಎ.ಎಂ., ಕರಡಿ, ಬುಕ್‌ಸೆಲರ್, ಹುಬ್ಬಳ್ಳಿ.

ಕುಂದೂರಿ ಈಶ್ವರದತ್ತು., (ತೆಲುಗುಮೂಲ): ಗುರುಮೂರ್ತಿ ಪೆಂಡಕೂರು, (ಕನ್ನಡ ಅನು), ೨೦೧೧, *ಭಗ್ನ ವಿಜಯನಗರ ಚರಿತ್ರೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕುಮಾರಿ ಗಾಯಿತ್ರಿ ರಾಜಾಪುರ., ೧೯೬೦, *ಭಾರತೀಯ ಸಂಗೀತ ದರ್ಶನ*, ಹ.ರಾ. ಪುರೋಹಿತ ಸಂಯುಕ್ತ ಕರ್ನಾಟಕ ಮುದ್ರಣಾಲಯ, ಹುಬ್ಬಳ್ಳಿ.

ಕೃಷ್ಣರಾಯ, ಅ.ನ., ೧೯೬೮, *ಭಾರತೀಯ ಕಲಾದರ್ಶನ*, ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡೆಮಿ, (ಮೈಸೂರು ರಾಜ್ಯ) ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.

ಕೃಷ್ಣರಾವ್, ಯು.ಎಸ್., ಮತ್ತು ಶ್ರೀಮತಿ ಚಂದ್ರಭಾಗದೇವಿ., ೧೯೫೬, ಆಧುನಿಕ *ಭಾರತದಲ್ಲಿ ನೃತ್ಯಕಲೆ*, ಕರ್ನಾಟಕ ಪಬ್ಲೀಷಿಂಗ್ ಹೌಸ್ ಕೋಟೆ, ಬೆಂಗಳೂರು.

ಕೃಷ್ಣರಾವ್, ಎಂ.ವಿ. ಮತ್ತು ಕೇಶವಭಟ್ಟ, ಎಂ., ೧೯೭೦, *ಕರ್ನಾಟಕದ ಇತಿಹಾಸ ದರ್ಶನ*, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು.

ಕೃಷ್ಣಶರ್ಮ (ಬೆಟಗೇರಿ)., ೧೯೮೩, *ಕರ್ನಾಟಕ ಜನಜೀವನ*, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು.

ಕೃಷ್ಣರಾಯ, ಅ.ನ., (ಸಂ), ೧೯೯೪, *ಭಾರತೀಯ ಕಲಾದರ್ಶನ*, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು.

ಕೊಡದ, ಎಸ್.ಬಿ., ೧೯೬೦, *ವಿಜಯನಗರದ ನಿರ್ಣಾಯಕ ಯುದ್ಧ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕೊಡದ, ಎಸ್.ಬಿ., ೧೯೬೬, *ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ-ಮುಸ್ಲಿಂ ಬಾಂಧವ್ಯ*, ಕೋಡದ ಪ್ರಕಾಶನ.

ಕೊಡದ, ಎಸ್.ಬಿ., *ವಿಜಯನಗರದ ಉಚ್ಛ್ರಾಯ ಕಾಲ*, ಪ್ರಭಾ ಪಬ್ಲಿಷರ್ಸ್, ಧಾರವಾಡ.

ಕೋತಿನ, ಎಸ್.ಎಸ್., (ಗದ್ಯಾನುವಾದ): ೧೯೭೭, *ಮೋಹನತರಂಗಿಣಿ*, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ಕೋಡದ, ಎಸ್.ಬಿ., ೧೯೯೯, *ತಾಳಿಕೋಟೆ ಯುದ್ಧ*, ಪ್ರಭಾ ಪಬ್ಲೀಷರ್ಸ್, ಧಾರವಾಡ.

ಗಣನಾಥ ಎಕ್ಕಾರು., ೨೦೦೦, *ತುಳುನಾಡಿನ ಜನಪದ ಆಟಗಳು*, ಜ್ಞಾನೋದಯ ಪ್ರಕಾಶನ, ಬೆಂಗಳೂರು.

ಗಂಗಾನಾಯಕ್, ಕೆ.ಎನ್., (ಪ್ರ.ಸಂ), ಜಯಲಕ್ಷ್ಮೀ ಸೀತಾಪುರ., (ಸಂ), ೨೦೧೧, *ಕನ್ನಡ ಜಾನಪದ*, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಗಂಗಾನಾಯಕ್, ಕೆ.ಎನ್., (ಪ್ರ.ಸಂ.): ಚಂದ್ರಕುಮಾರ್, ಎಂ., ಗೀತಾ, ಬಿ.ಎಂ.,(ಸಂ) ೨೦೧೧, *ಕ್ರೀಡೆಗಳು*, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಗಣೇಶ್ ಕೆ.ಆರ್., ಶೇಷಶಾಸ್ತ್ರಿ ಆರ್., ೧೯೯೭, *ಆಂಧ್ರಪ್ರದೇಶದ ಕನ್ನಡ ಶಾಸನಗಳು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಗೋಪಾಲರಾವ್, ಹೆಚ್.ಎಸ್., ನರಸಿಂಹನ್, ಅ.ಲ., ೨೦೦೮, *ವಿಜಯನಗರ ಶಿಲ್ಪಕಲೆ*, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

ಗೀತಾನಾವಲ್, ೨೦೦೯, *ಕರ್ನಾಟಕ ಸಂಗೀತ*, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಗೌರೀಶ, ಪಿ., ೨೦೦೦, *ಜನಪದ ಕುಶಲಕಲೆಗಳು*, ಚೇತನ ಬುಕ್ ಹೌಸ್, ಮೈಸೂರು.

ಚಂದ್ರಶೇಖರ್, ಎಂ., (ಗದ್ಯಾನುವಾದ), ೧೯೭೭, *ವಿರೂಪಾಕ್ಷಪಂಡಿತ ಕೃತ ಚನ್ನಬಸವ ಪುರಾಣ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚಂದ್ರಶೇಖರ ರೆಡ್ಡಿ ಡಿ., (ಸಂ): ೨೦೦೭, *ಶ್ರೀಕೃಷ್ಣದೇವರಾಯ ವೈಭವಂ*, ತೆಲುಗು ಸಮಿತಿ, ಹೈದರಬಾದ್.

ಚಿದಾನಂದಮೂರ್ತಿ, ಎಂ., ೧೯೮೪, *ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಚಿದಾನಂದಮೂರ್ತಿ ಎಂ., ೨೦೧೧, *ಹೊಸಬೆಳಕಿನಲ್ಲಿ ಹಂಪಿ.* ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಚಿತ್ರಲೇಖ., ೧೯೮೯, *ನಮ್ಮ ಹಳ್ಳಿಯ ಆಟಗಳು*, ಪ್ರಕಾಶ ಸಾಹಿತ್ಯ, ಬೆಂಗಳೂರು.

ಚಿದಾನಂದಮೂರ್ತಿ ಎಂ., ೧೯೬೬, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಚಿದಾನಂದಮೂರ್ತಿ, ಎಂ., ೧೯೯೮, *ಕನ್ನಡ ಸಾಹಿತ್ಯ ಶಾಸನಗಳಲ್ಲಿ ಸಂಗೀತ ವಿಚಾರ*, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಚಲುವರಾಜು., ೨೦೦೦, *ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚೆನ್ನಬಸಪ್ಪ, ಗೊ.ರು., ೧೯೯೭, *ಕರ್ನಾಟಕ ಜನಪದ ಕಲೆಗಳು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚೆನ್ನಕ್ಕ ಎಲಿಗಾರ., ೧೯೯೦, *ಶಾಸನಗಳಲ್ಲಿ ಸ್ತ್ರೀಸಮಾಜ*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಚೆಲುವೇಗೌಡ, ತ.ಚಿ., ೧೯೭೮, *ಕೆಲವು ಜನಪದ ಸಂಪ್ರದಾಯಗಳು*, ತಳಗವಾಡಿ ಪ್ರಕಾಶನ, ಮೈಸೂರು.

ಜ್ಯೋತ್ಸ್ನಾ ಕಾಮತ್., ೧೯೮೮, *ಕರ್ನಾಟಕ ಶಿಕ್ಷಣ ಪರಂಪರೆ*, ಮುಂಬಯಿ, ವಿಶ್ವವಿದ್ಯಾಲಯ, ಮುಂಬಯಿ.

ಜೋಶಿ, ಜಿ.ಜಿ., ೧೯೯೧, *ಕೌಟಲ್ಯನ ರಾಜ್ಯ ಪದ್ಧತಿಯ ಸಮೀಕ್ಷೆ*, ಶರತ್ ಪ್ರಕಾಶನ, ಬೆಳಗಾವಿ.

ಜಯ ವೀರನಾಥ, ಜಿ.ಎಂ., ೧೯೮೬, *ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆ*, ಪ್ರಸಾರಾಂಗ, ಗುಲಬರ್ಗ ವಿಶ್ವವಿದ್ಯಾಲಯ, ಗುಲಬರ್ಗ.

ಜೋಸೆಫ್, ಪಿ.ಎಂ., ೧೯೫೭, *ಆಟಗಳ ಪುಸ್ತಕ*, ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

ತಳವಾರ, ಎನ್.ಎಂ., ೨೦೦೨, *ನಂಜುಂಡ ಕವಿಯ ರಾಮನಾಥ ಚರಿತೆ ಸಾಂಸ್ಕೃತಿಕ ಅಧ್ಯಯನ*, ಅಭಿರುಚಿ ಪ್ರಕಾಶನ, ಮೈಸೂರು.

ತಪಸ್ವೀಕುಮಾರ್., (ಸಂ), ೧೯೯೭, *ರತ್ನಾಕರವರ್ಣಿ ಮತ್ತು ಜಾನಪದ*, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ತುಳಸಿರಾಮಚಂದ್ರ., ೨೦೦೧, *ಪದಗತಿ-ಪಾದಗತಿ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿಪ್ಪೇರುದ್ರಸ್ವಾಮಿ, ಎಚ್., *ಕರ್ನಾಟಕ ಸಂಸ್ಕೃತಿ ಸಮೀಕ್ಷೆ*, ೨೦೦೭, ಡಿ.ವಿ.ಕೆ. ಮೂರ್ತಿ ಪ್ರಕಾಶನ ಮೈಸೂರು.

ತಿಪ್ಪೇರುದ್ರಸ್ವಾಮಿ, ಎಚ್., (ಪ್ರಸಂ): ಲಕ್ಕಪ್ಪಗೌಡ, ಹೆಚ್.ಜೆ., ೧೯೮೩, *ಮಲೆನಾಡು ಜಾನಪದ*, ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ, ಬಿ.ಆರ್., ಪ್ರಾಜೆಕ್ಟ್

ತಿಮ್ಮಾಪೂರ, ಹೆಚ್.ಐ., ೧೯೯೯, *ಸಣ್ಣಾಟಗಳು*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ದೇವೀರಪ್ಪ, ಹೆಚ್., (ಸಂ), ೧೯೬೪, *ನಂಜುಂಡಕವಿ ವರಚಿತ ರಾಮನಾಥ ಚರಿತ, ಸಂಪುಟ-೩*, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ದೇಜಗೌ., ೧೯೯೪, *ಜಾನಪದ ಮಹಾಸಂಪುಟ*, ಬೆಳಕೆರೆ ಪ್ರಕಾಶನ, ಮೈಸೂರು.

ದೇವರಕೊಂಡಾರೆಡ್ಡಿ., (ಸಂ), ೨೦೦೬, *ಹಂಪಿ ಸಂಪುಟ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇವರಕೊಂಡಾರೆಡ್ಡಿ., (ಸಂ), ೨೦೦೦-೦೫, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ*, ೧,೨,೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇನಾಶ್ರೀ., ೧೯೮೯, *ಪ್ರಾಚೀನ ಮನುಕುಲದ ಕಥೆ*, ಪ್ರಕಾಶ ಸಾಹಿತ್ಯ, ಬೆಂಗಳೂರು.

ದೇಸಾಯಿ, ಪಿ.ಬಿ., ೨೦೦೭-೮, *ವಿಜಯನಗರ ಸಾಮ್ರಾಜ್ಯ*, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ದೀಕ್ಷಿತ್, ಜಿ.ಎಸ್., ರಾಮಸ್ವಾಮಿ, ಬಿ., ಭಾರ್ಗವಿ ಶಿವಯ್ಯ, ೧೯೯೭, *ಶ್ರೀಕೃಷ್ಣದೇವರಾಯ-ಜೀವನ ಸಾಧನೆಗಳು*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ದಿವಾಕರ್, ಆರ್.ಬಿ., ಕುಮಾರ್, ಆರ್.ಬಿ., ೨೦೧೪, *ಕರ್ನಾಟಕದಲ್ಲಿ ಕುಮಾರರಾಮನ ಹಬ್ಬ ಮತ್ತು ಜಾತ್ರೆಗಳು-೨*, ಗಂಗೋತ್ರಿ ಪ್ರಕಾಶನ, ರಾಮಸಾಗರ.

ದೀಕ್ಷಿತ್, ಜಿ.ಎಸ್., (ಸಂ), ೧೯೯೧, *ಸಂಗಮರ ಕಾಲದ ವಿಜಯನಗರ ಅದರ ಇತಿಹಾಸ ಮತ್ತು ಸಂಸ್ಕೃತಿಗಳ* ಅಧ್ಯಯನ, ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ದಿವಾಕರ, ಆರ್.ಆರ್., ೧೯೯೭, *ವೇದಯುಗ, (ಭಾಗ-೧)*, ಭಾರತೀಯ ವಿದ್ಯಾಭವನ, ಬೆಂಗಳೂರು.

ಧೂಪದ, ಎಂ.ಟಿ., ೨೦೧೧, *ಕನ್ನಡ ಜನಪದ ರಂಗ ಪರಂಪರೆ*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ನರೇಂದ್ರ ರೈ ದೇರ್ಲ., ೧೯೯೫, *ಕನ್ನಡದಲ್ಲಿ ಬೇಟೆ ಸಾಹಿತ್ಯ*, ಕರ್ನಾಟಕ ಸಂಘ, ಪುತ್ತೂರು.

ನಂಜುಂಡಸ್ವಾಮಿ, ಎ.ಎಸ್., ೧೯೯೯, *ವಿಜಯನಗರದ ಇತಿಹಾಸ*, ಸಮಾಜ ಪುಸ್ತಕಾಲಯ ಶಿವಾಜಿಬೀದಿ, ಧಾರವಾಡ.

ನಾಯಕ, ಎನ್.ಆರ್., ಶ್ರೀಮತಿ ಶಾಂತಿ ನಾಯಕ., (ಸಂ), ೧೯೭೯, *ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ನಾಗರಾಜು, ಹೆಚ್.ಎಂ., ೧೯೯೯, *ವಿಜಯನಗರದ ಇಮ್ಮಡಿ ದೇವರಾಯ*, ಸಂವಹನ ಶಿವರಾಂಪೇಟೆ, ಮೈಸೂರು.

ನಾಗರಾಜರಾವ್ ಹವಾಲ್ದಾರ., ೨೦೧೦, *ಬದಲಾಗುತ್ತಿರುವ ಕಾಲಘಟ್ಟದಲ್ಲಿ ಶಾಸ್ತ್ರೀಯ ಸಂಗೀತ, ಪ್ರಸಾರಾಂಗ,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗೇಗೌಡ, ಹೆಚ್.ಎಲ್., ೧೯೬೬, *ಪ್ರವಾಸಿ ಕಂಡ ಇಂಡಿಯಾ, ಸಂಪುಟ-೨,* ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನಾಗರಾಜರಾವ್, ಎಂ.ಎಸ್., (ಸಂ), ೧೯೯೮, ಪ್ರಕಾಶ್, ಎಂ.ಪಿ., ಸೀತಾಲಕ್ಷ್ಮಿ ಶ್ರೀನಿವಾಸ (ಅನು), ಅಲೆಕ್ಸಾಂಡರ್, ಜೆ.ಗ್ರೀಣ್.ಲಾ, (೧೮೫೬) ಜಾನ್ ಗಾಲಿಂಗ್ಸ್ (೧೯೮೩), *ಪ್ರವಾಸಿ ಕಂಡ ವಿಜಯನಗರ,* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ.

ನಾಗೇಶ್, ಹೆಚ್.ವಿ., ೨೦೦೦, *ಹೂವಿನ ಕೋಲು ಒಂದು ಕಿರು ಕಲಾಪ್ರಕಾರ,* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ನಾಡಗೀರ, ಕೆ.ಜಿ., ೧೯೮೦, *ಶರೀರ ಶಿಕ್ಷಣ ಮತ್ತು ಕ್ರೀಡೆಗಳ ಇತಿಹಾಸ,* ಶರೀರ ಶಿಕ್ಷಣ ಪ್ರಕಾಶನ, ಧಾರವಾಡ.

ನಾಯಕ, ಹಾ.ಮಾ., ೧೯೮೧, *ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ-೫,* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಾರಾಯಣ ಶರ್ಮ., ೧೯೫೯, *ಕನ್ನಡ ನಾಡಿನ ಕಥೆಗಳು,* ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ

ನಿರಂಜನ. (ಪ್ರಸಂ), ೧೯೭೩, ಜ್ಞಾನ ಗಂಗೋತ್ರಿ, *ಕಿರಿಯರ ವಿಶ್ವಕೋಶ,* ಕರ್ನಾಟಕ ಪಬ್ಲಿಷಿಂಗ್ ಹೌಸ್ ಲಿಮಿಟೆಡ್, ಬೆಂಗಳೂರು.

ನಿಂಗಣ್ಣ ಸಣ್ಣಕ್ಕಿ., ೨೦೦೨, *ಜಾನಪದ ತರಂಗಗಳು,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನೇಲಟೂರು ವೆಂಕಟರಮಣಯ್ಯ, (ತೆಲಗುಮೂಲ): ಗುರುಮೂರ್ತಿ ಪೆಂಡಕೂರು., (ಅನು), ೨೦೦೭, *ಶ್ರೀ ಕೃಷ್ಣದೇವರಾಯ,* ಪ್ರಸಾರಾಂಗ ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ.

ಪರಮಶಿವಮೂರ್ತಿ ಡಿ.ವಿ., (ಸಂ), ೨೦೦೭, *ಪ್ರೌಢದೇವರಾಯನ ಶಾಸನಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಮಶಿವಮೂರ್ತಿ ಡಿ.ವಿ., ೨೦೧೦, *ಕೃಷ್ಣದೇವರಾಯನ ಶಾಸನಗಳು,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಮಶಿವಮೂರ್ತಿ ಡಿ.ವಿ., ೧೯೯೯, *ಕನ್ನಡ ಶಾಸನಶಿಲ್ಪ,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಮಶಿವಮೂರ್ತಿ ಡಿ.ವಿ. ವಾಸುದೇವ ಬಡಿಗೇರ, ವಿರೂಪಾಕ್ಷಿ ಪೂಜಾರ ಹಳ್ಳಿ., (ಸಂ), ೨೦೧೪, *ಕೃಷ್ಣದೇವರಾಯ ಆಯ್ದ ಲೇಖನ ಸಂಪುಟ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಾರ್ಥಸಾರಥಿ, ೧೯೮೬, *ಅರಳುಮಲ್ಲಿಗೆ,* ರಾಘವೇಂದ್ರ ಪ್ರಕಾಶನ, ಬೆಂಗಳೂರು.

ಪ್ರಕಾಶ್, ಎಂ.ಪಿ., ೨೦೦೩, *ಡೋಂಮಿಂಗೋಸ್ ಪಿಯಾಸ್ ಕಂಡ ವಿಜಯನಗರ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಲುಮತಿ ಶ್ಯಾಮರಾವ್., ೧೯೫೬, *ವಿಜಯನಗರದ ಕಲೆ ಮತ್ತು ಸಾಹಿತ್ಯ,* ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು ಸರ್ಕಾರ, ಬೆಂಗಳೂರು.

ಮರಂದರ, ಎ.ಎಂ., ೧೯೭೪, *ಭಾರತೀಯ ವಾದ್ಯಗಳು,* ಪಠ್ಯ ಮಸ್ತಕ ನಿರ್ದೇಶನಾಲಯ, ಕನಾಟಕ ವಿಶ್ವವಿದ್ಯಾಲಯ, ಧಾರವಾಡ

ಪಾಟೀಲ್, ಎಸ್.ಸಿ., ೧೯೯೩, *ಕರ್ನಾಟಕದ ಜನಪದ ಚಿತ್ರಕಲೆ,* ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

ಪಾಂಡುರಂಗ ಬಾಬು, ಡಿ., ೨೦೧೦, *ನಮ್ಮ ಆಟಗಳ ನುಡಿಗಟ್ಟು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪೊತೆ. ಹೆಚ್.ಟಿ., ೨೦೦೧, *ಜಾನಪದ ಸಿಂಗಾರ,* ಕುಮಾರ–ಪೂರ್ಣಿಮಾ ಪ್ರಕಾಶನ, ರಾಯಚೂರು.

ಫಿಲಿಯೋಜಾ(ವಸುಂಧರಾ)., ೧೯೮೨, : *ಅಳಿದುಳಿದ ಹಂಪೆ,* ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು.

ಬಸವರಾಜ ಮಲಶೆಟ್ಟಿ., (ಸಂ), ೧೯೯೯, *ಎನಗಿಂತ ಕಿರಿಯರಿಲ್ಲ,* ಶ್ರೀ ಅಗಡಿ ಸಂಗಣ್ಣ ಅಭಿನಂದನ ಸಮಿತಿ, ಕೊಪ್ಪಳ.

ಬರಗೂರು ರಾಮಚಂದ್ರಪ್ಪ., (ಪ್ರ.ಸಂ), ಶ್ರೀನಿವಾಸರಾಜ, ಬಸವರಾಜ ಕಲ್ಗುಡಿ (ಸಂ), ೨೦೦೨, *ಕರ್ನಾಟಕ ಸಂಗೀತ,* ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಬೆಟಗೇರಿ ಕೃಷ್ಣಶರ್ಮ., ೧೯೮೩, *ಕರ್ನಾಟಕ ಜನಜೀವನ,* (ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ), ಕರ್ನಾಟಕ ಸರ್ಕಾರ, ಬೆಂಗಳೂರು.

ಭಟ್, ಎಸ್.ಆರ್., ೧೯೮೪, *ಪ್ರಾಚೀನ ಭಾರತದಲ್ಲಿ ಜನಜೀವನ,* ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಭಟ್, ವಿ.ಎನ್., ೨೦೦೨, *ಭಾರತೀಯ ಹಬ್ಬ ವೈಶಿಷ್ಟ್ಯ,* ವಿಶ್ವನಾಥ ಪ್ರಕಾಶನ, ಶಿವಮೊಗ್ಗ.

ಭಟ್ಟ, ವಿ.ಎನ್., ೧೯೬೯, *ಶರೀರ ಶಿಕ್ಷಣ ಇತಿಹಾಸ,* ಕೆ.ಜಿ. ನಾಡಗೀರ ಶರೀರ ಶಿಕ್ಷಣ ಪ್ರಕಾಶನ, ಧಾರವಾಡ.

ಬೈರಪ್ಪ ವಿಠಲಾಪುರ, ಕೆ., ೧೯೮೯, *ಹರ್ಷತರುವ ಹಬ್ಬಗಳು,* ಜೈಜಗತ್ ಪ್ರಕಾಶನ, ತುಮಕೂರು.

ಬೈರೇಗೌಡ, ಎಂ., ೧೯೯೯, *ಜಾನಪದ ವೈವಿಧ್ಯ,* ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು.

ಬಿರಾದಾರ, ಮ.ಗು., ೨೦೦೦, *ಹೋಳಿಯ ಹಾಡುಗಳು,* ಕನ್ನಡ ಮಸ್ತ ಪ್ರಾಧಿಕಾರ ಬೆಂಗಳೂರು.

ಬಾಶಮ್, ಎ.ಎಲ್., (ಇಂಗ್ಲೀಷ್ ಮೂಲ): ಮಿರ್ಜಿ, ಡಿ.ಆರ್., (ಕನ್ನಡಕ್ಕೆ): ೨೦೧೨, *ಪ್ರಾಚೀನ ಭಾರತವೆಂಬ ಅದ್ಭುತ,* ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ಭೂಸನೂರು ಮಠ, ಸಂ.ಶಿ., (ಸಂ), *ವಿಜಯ ಕಲ್ಯಾಣ* (ವಿಜಯನಗರ ಸಂಸ್ಕೃತಿಯ ಸಮಗ್ರ ದರ್ಶನ), ಮಹಾಕವಿ ಹರಿಹರ ಸ್ಮಾರಕ ಸಂಶೋಧನಾ ಕೇಂದ್ರ, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ, ಹಂಪಿ.

ಮಲ್ಲಿಕಾರ್ಜುನ, ಯು., ೨೦೦೮, *ಗರಡಿ ಸಂಪ್ರದಾಯ*, ಅಪರಂಜಿ ಪ್ರಕಾಶನ, ಗುಲಬರ್ಗ.

ಮಲ್ಲಿಕಾರ್ಜುನ ಸಂ ಮೇತ್ರಿ., ೨೦೦೬, *ಜಾನಪದ ಆಟಗಳು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮಂಜುನಾಥ ಬೇವಿನಕಟ್ಟೆ., ೧೯೯೭, *ವಿಜಯನಗರದ ಸಾಂಸ್ಕೃತಿಕ ಆಯಾಮಗಳು*, ಶ್ರೀ ವಿದ್ಯಾವಿಜಯನಗರ ಹಂಪಿ ಹೆರಿಟೇಜ್, ಟ್ರಸ್ಟ್, ಆನೆಗೊಂದಿ.

ಮುದೇನೂರು ಸಂಗಣ್ಣ., (ಸಂ), ೧೯೯೫, *ಗೊಂಬೀಗೌಡರ ಸೂತ್ರದಗೊಂಬೆ ಆಟಗಳು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮಲ್ಲಾಪುರ, ಬಿ.ವ್ಹಿ., ೨೦೦೦, *ಪ್ರೌಢದೇವರಾಯ–ವಿಜಯಕಲ್ಯಾಣ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾದೇವಿ, ಎಂ.ಎ., ೧೯೮೮, *ಮೈಸೂರು ರಾಜ್ಯದ ಸಾಮಾಜಿಕ ಜೀವನ*, ಕಮಲ ಪ್ರಕಾಶನ, ಮೈಸೂರು.

ಮಹಾದೇವ ಮಾ ಜಗತಾಪ., ೨೦೦೪, *ಕರ್ನಾಟಕ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮಾಲಿಮುದ್ದಣ., (ಪ್ರಸಂ), ೨೦೦೦, *ಶಿವರಾಮಯ್ಯನವರ ಗ್ರಾಮೀಣ ಸಂಸ್ಕೃತಿ ಸಂದರ್ಭಕೋಶ*, ಕಲಾಪ್ರಕಾಶನ, ಬೆಂಗಳೂರು.

ಮುರಲೀಧರರಾವ್, ಕೆ., ೧೯೯೮, *ನೃತ್ಯಲೋಕ*, ಅತ್ರಿ ಬುಕ್ ಸೆಂಟರ್, ಮಂಗಳೂರು.

ರವೀಂದ್ರನಾಥ, ಕೆ., (ಸಂ), ೨೦೦೬, *ಗುಂಡಬ್ರಹ್ಮಯ್ಯಗಳ ಸಾಹಿತ್ಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಂಗಸ್ವಾಮಿ, ಎ., (ಸಂ), ಶ್ರೀಧರ್, ಹೆಚ್.ಜಿ., (ಲೇ): ೨೦೧೨, *ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಯುದ್ಧವರ್ಣನೆ*, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ರಮೇಶ್, ಕೆ.ವಿ., ೧೯೬೮, *ತುಳುನಾಡಿನ ಇತಿಹಾಸ*, ಗೀತಾ ಬುಕ್ ಹೌಸ್, ಬೆಂಗಳೂರು.

ರಮೇಶ್, ಬೆ.ಗೋ., ೧೯೮೯, *ಭಾರತದ ಜನಪ್ರಿಯ ಹಬ್ಬಗಳು*, ಪ್ರಾಕಾಶ ಸಾಹಿತ್ಯ, ಬೆಂಗಳೂರು.

ರಂಗನಾಥ್, ಹೆಚ್.ಕೆ., ೨೦೦೦, *ಕರ್ನಾಟಕ ರಂಗಭೂಮಿ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ರಹಮತ್ ತರೀಕೆರೆ., (ಸಂ), ೨೦೦೦, *ಧರ್ಮ*, ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ–೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮಮೂರ್ತಿರಾವ್, ಕೆ.,(ಸಂ), ೨೦೦೮, *ನೃತ್ಯದರ್ಪಣ*, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು.

ರಾಜಶೇಖರ, ಎಸ್., *ವಿಜಯನಗರ ಕಾಲದ ಘಟನಾವಳಿ ಸೂಚಿ*, ಸುಜಾತ ಪಬ್ಲಿಕೇಶನ್ಸ್, ಧಾರವಾಡ.

ರಾವ್, ಎಸ್.ಆರ್., (ಅನು), ೧೯೯೪, ಗುರುರಾಜಾಚಾರ್., *ಲೋಥಲ್ ಮತ್ತು ಸಿಂಧೂ ನಾಗರೀಕತೆ,* ಧಾರವಾಡ.

ರಾಮಚಂದ್ರರಾವ್, ಎಸ್.ಕೆ., ೧೯೮೫, *ಪುರಂದರ ಸಾಹಿತ್ಯ ದರ್ಶನ,* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ರಾಜಶೇಖರ್, ಎಸ್., ೧೯೮೫, *ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ,* ಸುಜಾತ ಪಬ್ಲಿಕೇಷನ್, ಧಾರವಾಡ.

ರಾಮರಾಜು, ಬಿ., (ಮೂಲ ಸಂ): ಶ್ರೀರಾಮಭಟ್ಟ (ಅನು): ಸುಮಿತ್ರಬಾಯಿ, ಬಿ.ಎನ್., (ಪ್ರಾಕೃತದ ಸಂಸ್ಕೃತರೂಪ), ೨೦೦೮, *ಶ್ರೀಕೃಷ್ಣದೇವರಾಯ ವಿರಚಿತ ಜಾಂಬವತೀ ಪರಿಣಯಂ,* ದ್ರಾವಿಡ ವಿಶ್ವವಿದ್ಯಾಲಯ, ಶ್ರೀನಿವಾಸವನಂ, ಕುಪ್ಪಂ.

ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ೧೯೭೧, *ಸಾಹಿತ್ಯ ಮತ್ತು ಜೀವನ ಕಲೆ,* ಕಾವ್ಯಾಲಯ ಪ್ರಕಾಶನ, ಮೈಸೂರು.

ರಾಜೇಂದ್ರ, ಡಿ.ಕೆ., ೧೯೮೫, *ಕರಪಾಲ ಮೇಳ,* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಲಕ್ಷ್ಮಣ್ ತೆಲಗಾವಿ., ೨೦೦೯, *ವಿಜಯನಗರದ ರಾಮಾನುಜಕೂಟಗಳು,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲಕ್ಕಪ್ಪಗೌಡ, ಹೆಚ್.ಜೆ., (ಪ್ರ.ಸಂ), ೨೦೦೦, *ಕರ್ನಾಟಕ ಬುಡಕಟ್ಟುಗಳು, ಸಂಪುಟ–೨,* ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಲಲಿತ ಶ್ರೀನಿವಾಸನ್., *ಕರ್ನಾಟಕ ನೃತ್ಯರಂಗ ನೃತ್ಯಶಿಲ್ಪಗಳು,* ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು.

ವೆಂಕಟರತ್ನಂ, ಎ.ವಿ., ೧೯೭೪, *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ,* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ವಸುಂಧರಾ ಫಿಲಿಯೋಜಾ., ೧೯೮೦, *ವಿಜಯನಗರ ಸಾಮ್ರಾಜ್ಯ ಸ್ಥಾಪನೆ,* ಮನೋಲ್ಲಾಸ ಪ್ರಕಾಶನ, ಬೆಂಗಳೂರು.

ವಸುಂಧರಾ ಫಿಲಿಯೋಜಾ., ೧೯೮೨, *ಅಳಿದುಳಿದ ಹಂಪೆ,* ಮನೋಲ್ಲಾಸ, ಬೆಂಗಳೂರು.

ವಸು, ಎಂ.ವಿ., (ಸಂ), ೨೦೦೯, *ಕನ್ನಡದೊಳ್ ಭಾವಿಸಿದ ಜನಪದಂ,* ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು.

ವೆಂಕಟರಾಮಪ್ಪ, ಕೆ., ೧೯೭೪, *ಶ್ರೀ ಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ,* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ವೆಂಕಟಚಾಲಶಾಸ್ತ್ರೀ, ಟಿ.ವಿ., (ಸಂ), ೧೯೮೧, *ಕನ್ನಡ ಸಾಹಿತ್ಯ ಚರಿತ್ರೆ, ಸಂ–೫,* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ವೆಂಕಟರಮಣಯ್ಯ, ಎನ್., (ಮೂಲ), ಗುರುಮೂರ್ತಿ ಪೆಂಡಕೂರು (ಅನು), ೨೦೧೦, *ವಿಜಯನಗರ ಚರಿತ್ರೆ,* ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

ವೆಂಕಟರಾವ್, ಎನ್.ಎಸ್., ೨೦೦೧, *ರಂಗಭೂಮಿ*, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ವೆಂಕಟಾಚಲಶಾಸ್ತ್ರಿ, ಟಿ.ವಿ., ೧೯೮೭, *ಕನ್ನಡ ಚಿತ್ರಕಾವ್ಯ*, ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡ.

ವೇಣೀ ಮಾಧವಶಾಸ್ತ್ರೀ ಜೋಶಿ., ೧೯೯೬, *ಸಂಸ್ಕೃತ ಸಾಹಿತ್ಯದಲ್ಲಿ ಉತ್ಸವಗಳು*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವಿರಕ್ತಮಠ ಶಿವಾನಂದ., ೧೯೭೮, :*ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವಿವೇಕ ರೈ, ಬಿ.ಎ., (ಸಂ), ೧೯೯೦, *ಜನಪದ ಆಟಗಳು*, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ವಿದ್ವಾನ್ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು., ೧೯೯೯, *ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ*, ಸಂವಹನ ಪ್ರಕಾಶನ, ಶಿವರಾಂಪೇಟೆ, ಮೈಸೂರು.

ವಿವೇಕ್ ರೈ, ಬಿ.ಎ., ೨೦೦೫, *ಪ್ರವಾಸಿ ಕಂಡ ವಿಜಯನಗರ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಲ್ಯಂ ಮಾಡ್ತ, (ಪ್ರ.ಸಂ), ಸೋಮಶೇಖರ ಇಮ್ರಾಪೂರ., ೧೯೯೦, *ಕರ್ನಾಟಕ ಭಾರತಿ* (ತ್ರೈಮಾಸಿಕ ಪತ್ರಿಕೆ), ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವಿಲ್‌ಡ್ಯೂರಾಂಟ್., ೨೦೦೭, *ನಾಗರಿಕತೆಯ ಕಥೆ ನಮ್ಮ ಪ್ರಾಚ್ಯ ಪರಂಪರೆ*, ಸಂಪುಟ-೧, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವಿರೂಪಾಕ್ಷಿ ಪೂಜಾರಹಳ್ಳಿ., ೨೦೦೭, *ಬೇಟೆ ಮತ್ತು ಬೇಡರು*, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ.

ವಿರೂಪಾಕ್ಷಿ ಪೂಜಾರಹಳ್ಳಿ., ೨೦೦೮, *ವಿಜಯನಗರ ಕಾಲದ ಸಂಸ್ಕೃತಿ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿರೂಪಾಕ್ಷಿ ಪೂಜಾರಹಳ್ಳಿ., ೨೦೧೫, *ಕೃಷ್ಣದೇವರಾಯನ ತೀರ್ಥಯಾತ್ರೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಲ್ಯಂ ಮಾಡ್ತ., (ಪ್ರ.ಸಂ), ಇಮ್ರಾಪುರ, ಎಸ್.ಜಿ., (ಸಂ), ೧೯೯೪,*ಜಾನಪದ ಸಾಹಿತ್ಯ ದರ್ಶನ ಭಾಗ-೧೬*, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶೇಠ್, ಬಿ.ಎಸ್., ೧೯೯೧, *ಕರ್ನಾಟಕದಲ್ಲಿ ಸತಿ ಪದ್ಧತಿ*, ಶ್ರೀನಾಗನೂರು ರುದ್ರಾಕ್ಷಿಮಠ, ಬೆಂಗಳೂರು.

ಶೇಷಾಶಾಸ್ತ್ರಿ, ಆರ್., ೧೯೮೨, *ಕರ್ನಾಟಕದ ವೀರಗಲ್ಲುಗಳು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶೇಷಗಿರಿರಾವ್., (ಸಂ), ೨೦೧೦, *ನಾಗರಿಕತೆಯ ಕತೆ ನಮ್ಮಪ್ರಾಚ್ಯ ಪರಂಪರೆ*, ಸಂಪುಟ-೧, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಶೈಲಾ, ಟಿ., ವರ್ಮ., ೨೦೦೨, *ತುಳುನಾಡಿನ ಸಾಂಸ್ಕೃತಿಕ ಅಧ್ಯಯನ*, ಜ್ಞಾನೋದಯ ಪ್ರಕಾಶನ, ಬೆಂಗಳೂರು.

ಶೇಷಾಚಲವರ್ಮ., (ಅನು), ೧೯೯೦, *ಕನ್ನಡ ಮಹಾಭಾರತ, ಆದಿಪರ್ವ-೨,* ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಷೇಕ್.ಆಲಿ, ಬಿ., ೧೯೯೭, *ಕರ್ನಾಟಕ ಚರಿತ್ರೆ, ಸಂಪುಟ-೩,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀಕಂಠಯ್ಯ, ಕೆ., ೧೯೮೨, *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ,* ಗೀತಾ ಬುಕ್ ಹೌಸ್, ಮೈಸೂರು.

ಶ್ರೀಕಂಠಯ್ಯ, ಕೆ., ೧೯೮೩, *ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು,* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶ್ರೀಮತಿ ಕಪಿಲಾ ವಾತ್ಸ್ಯಾಯನ್, ಶ್ರೀ ಸಚ್ಚಿದಾನಂದ ವಾತ್ಸ್ಯಾಯನ್., (ಮೂಲ): ಶ್ರೀ.ಎಂ., ರಾಮನ್ (ಕನ್ನಡಾನುವಾದ), ೧೯೫೯, *ಜಾನಪದ ನೃತ್ಯಗಳು,* ಅರುಣೋದಯ ಪ್ರಕಾಶನ, ಬೆಂಗಳೂರು.

ಶಿವರಾಮ ಕಾರಂತ.,೧೯೬೩, *ಯಕ್ಷಗಾನ ಬಯಲಾಟ,* ಹರ್ಷ ಪ್ರಕಟಣಾಲಯ, ಪುತ್ತೂರು, ದಕ್ಷಿಣ ಕನ್ನಡ.

ಶಿವಕುಮಾರಸ್ವಾಮಿ, ಸಿ.ಎಸ್., ೧೯೫೯, ೧೯೯೮, *ಕರ್ನಾಟಕ ಜಾತ್ರೆಗಳು,* ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ, ಬಿ.ಆರ್., ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶಿವಶಂಕರ ಅರಳೀಮಟ್ಟ., ೧೯೭೮, *ಓಲಿಂಪಿಕ್ ಕ್ರೀಡೆಗಳು ನಡೆದು ಬಂದದಾರಿ,* ಉದಯ ಪ್ರಕಾಶನ, ಕ್ಯಾಂಪ್, ಬೆಳಗಾವಿ.

ಶೀಲಾಕಾಂತ ಪತ್ತಾರ., ೨೦೦೦, *ಬಾದಾಮಿ ಸಾಂಸ್ಕೃತಿಕ ಅಧ್ಯಯನ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀಕಂಠಯ್ಯ, ಕೆ., ೧೯೮೯, *ಕವಿಗಳು ಕಂಡ ಕ್ರೀಡೆಗಳು,* ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶ್ರೀಧರ್, ಎಂ.ಕೆ., ೧೯೯೪, *ಸಾಹಸ ಕ್ರೀಡೆಗಳು,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸಂಪತ್ಕುಮಾರಾಚಾರ್ಯ, ವಿ.ಎಸ್., ರಾಮರತ್ನಂ., ೨೦೦೦, *ಕರ್ನಾಟಕ ಸಂಗೀತ ದೀಪಿಕೆ,* ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

ಸರಸ್ವತೀದೇವಿ, ಎಸ್., ಭಗವತಿ., ೨೦೦೭-೮, *ಹಂಪೆಯ ಶಾಸನಗಳು ಒಂದು ಅಧ್ಯಯನ,* ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ಸಣ್ಣಯ್ಯ, ಬಿ.ಎಸ್., (ಸಂ), ೧೯೬೩, *ಕನಕದಾಸರ ಮೋಹನ ತರಂಗಿಣಿ ಸಂಗ್ರಹ,* ಗೀತಾಬುಕ್ ಹೌಸ್, ಮೈಸೂರು.

ಸರಸ್ವತಿ, ಎನ್., ೨೦೦೮, *ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು,* ಸಿಂಚು ಮಲ್ಟಿಗ್ರಾಫ್, ವಿದ್ಯಾರಣ್ಯಪುರಂ, ಮೈಸೂರು.

ಸತ್ಯನಾರಾಯಣ, ರಾ., ೧೯೮೬, *ಭಾರತೀಯ ಸಂಗೀತದಲ್ಲಿ ಪರಿಭಾಷ ಪ್ರಯೋಗ,* ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಸಂಗಮೇಶ್ ಬಾ. ಮಟೋಳು., ೨೦೧೦, *ಕರ್ನಾಟಕದ ಕುಸ್ತಿ ಪೈಲ್ವಾನರು ಒಂದು ಅವಲೋಕನ*, ವಿರೇಶ್ವರ ಪ್ರಕಾಶನ, ಜಮಖಂಡಿ.

ಸುಶೀಲ ಹೊನ್ನೇಗೌಡ., ೧೯೭೬, *ಜನಪದ ಆಟಗಳು*, ಶರತ್ ಪ್ರಕಾಶನ, ನೆಹರೂನಗರ, ಮಂಡ್ಯ.

ಸುಚೇತಾ ನವರತ್ನ., (ಅನು), ೨೦೧೦, *ಅಚ್ಯುತರಾಯಾಭ್ಯುದಯಂ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸುನಂದಮ್ಮ, ಆರ್., ೧೯೯೯, *ದಾಸ ಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ*, ಲಾವಣ್ಯ ಮುದ್ರಾಣಾಲಯ, ಬೆಂಗಳೂರು.

ಸೀತಾರಾಮಯ್ಯ, ಎಂ.ವಿ., (ಪ್ರಸಂ): ಆಚಾರ್ಯ, ವಿ.ಎಸ್.ಎಸ್., ೧೯೮೩, *ಶ್ರೀ ಕೃಷ್ಣದೇವರಾಯನ ದಿನಚರಿ*, ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ಸಿವೆಲ್ ರಾಬರ್ಟ್., (ಅನು:ಸದಾನಂದ ಕನವಳ್ಳಿ): ೧೯೯೨, *ಮರೆತುಹೋದ ಮಹಾಸಾಮ್ರಜ್ಯ ವಿಜಯನಗರ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೂರ್ಯನಾರಾಯಣ ರಾವ್., (ಮೂಲ) ಬಾಲಸುಬ್ರಮಣ್ಯ (ಕನ್ನಡಕ್ಕೆ), ೨೦೦೦, *ಮರೆಯಲಾಗದ ಮಹಾಸಾಮ್ರಾಜ್ಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೂರ್ಯನಾಥ ಕಾಮತ್., ೨೦೦೯, *ವಿಜಯನಗರದ ಕೃಷ್ಣದೇವರಾಯ*, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

ಸೋಮಶೇಖರ್, ಎಸ್.ವೈ., ೧೯೯೭, *ಹಂಪಿಯ ಬಜಾರುಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ್, ಎಸ್.ವೈ., ೨೦೦೯, *ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ*, ಸಂಚಿಕೆ ಪ್ರಕಾಶನ, ಚಿತ್ರದುರ್ಗ.

ಸೋಮಶೇಖರ್, ಎಸ್.ವೈ., ೨೦೧೪, ಕರ್ನಾಟಕದ ಬಿರುದಾವಳಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹನಮಂತರಾವ್, ಬಿ., ದೊಡ್ಡಮನಿ, ೨೦೦೪, *ಜಾನಪದ ಹಬ್ಬಗಳು ಮತ್ತು ಉತ್ಸವಗಳು*.

ಹನುಮಂತರಾವ್, ಬಿ., ದೊಡ್ಡಮನಿ, ೨೦೦೪, *ಜಾನಪದ ಹಬ್ಬಗಳು*, ಮತ್ತು ಉತ್ಸವಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಹರಿಲಾಲ್ ಪವಾರ್., ೧೯೯೭, *ಡಕ್ಕಲಿಗರು*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹೆಗಡೆ, ಎಂ.ಜಿ., ೧೯೯೬, *ಉತ್ತರ ಕನ್ನಡದ ಯಕ್ಷಗಾನ ರಂಗಭೂಮಿ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹೂಗಾರ ಎಸ್.ಕೆ., ೧೯೭೭, *ಕಲೆ ಮತ್ತು ಹಬ್ಬ*, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹಿರೇಮಠ, ಎಸ್.ಎಸ್., ೧೯೯೨, ಕರ್ನಾಟಕ ಸಂಸ್ಕೃತಿ ಪರಂಪರೆ ಹಬ್ಬಗಳು, ಭಾಗ–೧, ಸಮತಾ ಪ್ರಕಾಶನ, ಹರಪನಹಳ್ಳಿ.

ಹಿರೇಮಠ, ಬಿ.ಆರ್., ೧೯೮೦, *ಶಾಸನಗಳಲ್ಲಿ ಕರ್ನಾಟಕದ ವರ್ತಕರು*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪತ್ರಿಕೆಗಳು ಮತ್ತು ಇತರೆ

ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಇತಿಹಾಸ ದರ್ಪಣ, ೨೦೧೦, (ಪತ್ರಿಕೆ) ವಿಶೇಷ ಸಂಚಿಕೆ–೪, ಸಂಪುಟ–೧, ಕೃಷ್ಣದೇವರಾಯ ಮತ್ತು ವಿಜಯನಗರ ಸಾಮ್ರಾಜ್ಯ.

ಕರ್ನಾಟಕ ಭಾರತಿ.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ವಿಜಯನಗರ ಅಧ್ಯಯನ ಸಂಪುಟಗಳು, ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು.

ಸಾಧನೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಬೆಂಗಳೂರು.

ಭಾರತದ ಗ್ಯಾಸೆಟಿಯರ್, ಸಂಪುಟ–೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಕನ್ನಡ ವಿಶ್ವಕೋಶ, ೧೯೮೬, ಸಂಪುಟ–೧೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪ್ರಜಾವಾಣಿ ದಿನಪತ್ರಿಕೆ.

ಸುಧಾ.

ಕರ್ಮವೀರ.

ಪಿಎಚ್.ಡಿ./ಎಂ.ಫಿಲ್ ಅಪ್ರಕಟಿತ ಪ್ರಬಂಧಗಳು

ಅರವಿಂದ ಮಾಲಗತ್ತಿ., ೧೯೯೧, ಉತ್ತರ ಕರ್ನಾಟಕದ ಜನಪದ ಆಟಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಂಪದಾಭಟ್., ೧೯೯೯, ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲ ಚಿತ್ರಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗಂಗಾಧರ, ಟಿ., ೨೦೦೪, ಬಳ್ಳಾರಿ ಜಿಲ್ಲೆ ಬೇಡ ಸಮುದಾಯದ ಕ್ರೀಡೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಜ್ಜನ್ ಎಸ್., ೨೦೦೭, ವಿಜಯನಗರ ಕಾಲದ ಜಾತ್ರೆ ಮತ್ತು ಹಬ್ಬಗಳು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

English Books

Anual Reports on Indian Epigraphy

Anual Reports on south Indian Epigraphy

Anual Reports of the Mysore Archacological Department.

Ayyangar S.k.,(Ed), 1919. Sources of Vijayanagara History, University Historical Series, Madras.

Anna L. Dallapiccola, Anila Verghese., 1998, Manohar American Institute Of Indian Studies, New Delhi.

Altekar A.S., 1927, History of Village Communites in Western India, Bombay.

Bylongs workdanson., (Translate),1916, The book of durrthe barbosa, Vol-2, London

Burton Stein, 1994, The New Cambridge history of India Vijayanagara, New Delhi.

Chakravarthi P.C., 1972, The Art of war in Ancient India, Oriental Publishing House, Delhi.

Epigraphica Indica, 1983, published by Director General, Archaeological Survey of India, Janapath, New Delhi.

Elliot H.M., And Dowson John, History Of the India on Told by Histostorians Vol-8

Heras H., 1927, The Arividu dynasty of Vijayanagara, B.G Paul and Co, Madaras.

Heras H., 1980, South India under the Vijayanagar Empire, Vol-I, Cosmo Publication, New Delhi.

Hayavadana Rao C., 1930, Mysore Gazetter, Vol-II, Part-III, Government of Mysore, Bangalore.

Ismail K.,1984, Karnataka Tempels, Sandeep Prakashna, New Delhi.

Joshi S.K., 1985, Defence Architecture in early Karnataka, Sandeep Prakashan, Delhi.

Jawaharlal hundo., 1978 Current Trends In Floker, Institute Of Kannada Studies.

Joystna K Kamath., 1980 Social Life in Medval Karnataka, Abhinava Publication, New Delhi.

Krishna Ayangar A.N.,(Ed), 1941, Achutarayabhudayam of Rajanatha Dindima, Adyar Library.

Konduri Sarojini Devi, 1990, Religion in Vijayanagara Empire, Sterling publishers private limited.New Delhi.

Krishnamacharulu C.R., (Ed) 1939 South Indian Epigraphy, Anuail Report.

Karmakar D.P.,1974, A Cultural History Of Karnataka, Karnataka Vidya Vardhka Sangha, Dharwar.

Longhurst A.H., 1982, Hampi Ruins, Asian Educational Series, Delhi.

Lakshinarayanarao, (Ed) 1975, Bombay Karnataka Inscriptions.Vol-3.

Madho P. Patil., 1999, Court Life under The Vijayanagara Rulers, B.R. Publishing Corporation, Delhi.

Mahalingam T.V., 1969-76, Administration and Social life under Vijayanagar, 2 vols, Madras University.

Mahalingam T.V., 1951, Economic life in the Vijayanagara Empire, Madras.

Mahalingam T.V., 1967, South Indian Polity, University of Madras, Madras.

Majumdhar B.K., 1960,The Military System in Ancient india,F.K.L.M. pvt. Ltd.

Meera Sing, 1978, Medieval History of India, Vikas publishing House, New Delhi.

Muzoomdar R.C.,(Ed), 1960, History and Culture of indian people, Vol- VI, VII, Bharatiya Vidya Bhavan, Delhi.

Narasimha Murthy A V., Suresh K.M., Poonacha K.P., Basavaraj K.R.,(Editres), Hemakuta, Bharatiya Kala Prakashn, Delhi.

Nilakanta Sastri K.A., Venkata Ramanayya N., 1946, *Further Sources of Vijayanagara History,* Madras.

Nilakanta Shastri K.A., 1971, A history of South india, Oxford University Press.

Noboru Karashima, 1992, South Indian Socity under Vijayanagara rule, Oxford University press, New Delhi.

panchamuki R.S.,(Ed), *Karnataka Inscriptions, 5 Vols.*, Dharwad.

Panchamuki, (Ed), 1941, Karnataka Inscriptions, Vols 1.2.Kannada Research Office, Dharwar.

Rajashekara S., 1985, Master pisess of Vijayanagara Art, Bombay.

Reddeppa K., 2001, Material cultere depicted in vijayanagara temples, Bharatiya Kala Prakashan, Dilhi.

Ramasharma M.H., 1980, The History of Vijayanagara Empire, Vol-II, Bombay.

Saletore B.A., 1934, Social And political life in the vijayanagara Empire, Vol,2, B.G. Paul and Co, Publisher, Madras.

Saletore R.N., 1982, Vijayanagara Art, Sandeep Prakashna, Delhi.

Srigondekar G.K., (Ed), 1939, Manasollasa Of King Someshwara, Vol-II, Orintial Institute, Boroda.

Srilakshmi Kataragadde. 1996, women in Vijayanagara, Devya Publishing House, Bangalore.

Sewell, Robert, 1962, Forgotton Empire, National Book Trust, Delhi.

Suryanarayan Rao, 1905, A history of vijayanagara, The Never to be Forgotten Empire, Addison and Co, Madras.

Srinivas Murthy H.V., Ramakrishnan S., 1982, History Of Karnataka, Chand And Company, New Delhi.

South Indian Inscriptions.

Suryakanth, (Translate),1970, Varadambikaparinaya of Thirumalamba, Chowkhamba Publication, Varanasi.

Thiruvenkatachari S.,(Ed), 1957, Madhurvijayam of Gangadeve, Annamalai University.

Venkataramanayya N., 1946, Further Sources of Vijayanara History, Madaras.

Venkataramanayya N., 1935, Studies in the History of Third Dynasty of Vijanagara, University of Madras.

Venkataratnam A.V.,1972, Local Government in the Vijayanagar Empire, Mysore University.

Venkataranam A.V., 1972, Local Government in the Vijayanara Empire, Mysore University.

ವಿಜಯನಗರ ಸಾಮ್ರಾಜ್ಯದ ನಕ್ಷೆ

———————— 1471 ರ ಮೊದಲಿನ ಗಡಿ

- - - - - - - - - - 1471 ರ ನಂತರದ ಗಡಿ



ಛಾಯಚಿತ್ರಗಳು



ದ್ವಂದ್ವ ಕಾಳಗ ಮಹಾನವಮಿ ದಿಬ್ಬ.



ದೋಂಬರಾಟ, ಚಂಡಿಕೇಶ್ವರ ದೇವಾಲಯದ ೭ನೇ ಕಂಬದಲ್ಲಿ.



ಕುಸ್ತಿಯ ಪಟ್ಟು, ಮಹಾನವಮಿ ದಿಬ್ಬ.



ಬೇಟೆಗೆ ನಾಯಿಯೊಂದಿಗೆ ತೆರಳುತ್ತಿರುವುದು
ಮಹಾನವಮಿ ದಿಬ್ಬ ಬಲಗಡೆ ಪಟ್ಟಿಕೆ.



ಕುಸ್ತಿಯ ಒಂದು ಭಂಗಿ, ಮಹಾನವಮಿ ದಿಬ್ಬ ಬಲಗಡೆಪಟ್ಟಿಕೆ



ದೊಂಬರಾಟ, ಮಾಲ್ಯವಂತ ರಘನಾಥ ದೇವಾಲಯದ
೧೩ನೇ ಕಂಬ ಕೆಳಗಡೆ.




ಹುಲಿ ಬೇಟೆ, ಮಹಾನವಮಿ ದಿಬ್ಬದ ಮುಂದೆ ಬಲಗಡೆ ಪಟ್ಟಿಕೆ.



ಕುಸ್ತಿ, ವಿಜಯ ವಿಠಲ ದೇವಾಲಯದ ಮಕ್ಕದ ಮಂಟಪದ ಅಧಿಷ್ಠಾನದಲ್ಲಿ.



ಕೋಲಾಟ,೧೫ನೇ ಕಂಬದ ಕೆಳಗೆ ಅನಂತಶಯನಗುಡಿ.



ಕುಸ್ತಿಯ ಒಂದು ಪಟ್ಟು, ಮಾಲ್ಯವಂತ ರಘುನಾಥ ದೇವಾಲಯದ ೩೦ನೇ ಕಂಬ ಮಧ್ಯೆ



ದೊಂಬರಾಟ, ಅನಂತಶಯನಗುಡಿ ೪೮ನೇ ಕಂಬದ ಕೆಳಗೆ.



ವಿದೇಶಿ ಯಾತ್ರಿಕ, ಬ್ಯಾಂಡ್ ಟವರ್‌ನ ಅಧಿಷ್ಠಾನದಲ್ಲಿ.



ಕುಸ್ತಿಯ ಒಂದು ಭಂಗಿ, ಹಜಾರರಾಮಚಂದ್ರ
ದೇವಾಲಯದ ಹಿಂದಿನ ಭಿತ್ತಿಯಲ್ಲಿ.



ನೃತ್ಯ, ಹಜಾರ ರಾಮಚಂದ್ರ ದೇವಾಲಯದ ೨ನೇ ಕಂಬದ ಮೇಲೆ.




ದೊಂಬರಾಟ ಅಚ್ಯುತದೇವಾಲಯದ ೨೯ನೇ ಕಂಬ ಕೆಳಗೆ.



ಕಮಲ ಮಹಲ್, ಹಂಪಿ.




ಕತ್ತಿವರಸೆ, ಸುಗ್ರಿವ ಗುಹೆಯ ಆಗ್ನೇಯದಲ್ಲಿರುವ ಪಾಳು ದೇವಾಲಯದಲ್ಲಿ.



ಪಗಡೆಯಾಟ, ಅಂತರಜಾಲದಿಂದ.




ಪಗ್ಗದಾಟ, ವಿಜಯ ವಿಠಲ ದೇವಾಲಯದ ಉತ್ತರ ದ್ವಾರಬಾಗಿಲಲ್ಲಿ.



ಕುಸ್ತಿಗೆ ತಯಾರಾಗಿರುವ ಮಲ್ಲ, ವಿಜಯ ವಿಠಲ ದೇವಾಲಯದ ಅಧಿಷ್ಠಾನದಲ್ಲಿ.



ಬೇಟೆ,ಸುಗ್ರೀವ ಗುಹೇಯ ಆಗ್ನೇಯದಲ್ಲಿರುವ ಪಾಳು ದೇವಾಲಯದಲ್ಲಿ.



ಕೋಲಾಟ ವಿಜಯ ವಿಠಲ ದೇವಾಲಯದ ಅಧಿಷ್ಠಾನದಲ್ಲಿ.



ದೊಂಬರಿಂದ ದೈಹಿಕ ಕಸರತ್ತಿನ ಆಟ, ಕಲ್ಲಿನ ಗುಂಡನ್ನು ದೇಹದ ಮೇಲೆ ಹಾಯಿಸಿಕೋಳ್ಳುತ್ತಿರುವುದು(ಕಮಲಾಪುರ).



ಚೆನ್ನೆಮಣೆಯಾಟ, ಅಂತರಜಾಲದಿಂದ.



ದೊಂಬರಿಂದ ದೈಹಿಕ ಕಸರತ್ತಿನ ಆಟ,
ಬಂಡಿ ಗಾಲಿಯನ್ನು ಕೈಯಲ್ಲಿ ತಿರುಗಿಸುತ್ತಿರುವುದು.



ಕಲ್ಲನ್ನು ಕೈಯಿಂದ ಹೊಡೆಯುತ್ತಿರುವುದು. ಕಮಲಾಪುರ.




ದೊಂಬರಿಂದ ಕತ್ತಿಯಿಂದ ಕಸರತ್ತು ಮಾಡುತ್ತಿರುವುದು.
ಕಮಲಾಪುರ.



ನೆಗಿಲನ್ನು ಬಾಯಲ್ಲಿ ಎತ್ತಿರುವುದು. ಕಮಲಾಪುರ.



ಕೋಲುವರಸೆ, ಹಜಾರರಾಮಚಂದ್ರ
ದೇವಾಲಯದ ಹೊರ ಭಿತ್ತಿಯಲ್ಲಿ.



ಕತ್ತಿವರಸೆ, ಹಜಾರರಾಮಚಂದ್ರ ದೇವಾಲಯದ ಹೊರಭಿತ್ತಿಯಲ್ಲಿ.



ರಥೋತ್ಸವ, ಹಂಪಿ.



ಹಂಪಿ ರಥೋತ್ಸವದಲ್ಲಿ ಸೇರಿರುವ ಜನಸ್ತೋಮ.



ಕೋಲಾಟ, ಹಂಪಿ ಉತ್ಸವದಲ್ಲಿ.



ಕೀಲುಕುದುರೆ. ಹಂಪಿ ಉತ್ಸವ.



ಹಂಪಿ ರಥೋತ್ಸವದಲ್ಲಿ ಸೇರಿರುವ ಜನಸ್ತೋಮ.



ಕೀಲು ಕುದುರೆ, ಕುಣಿತ ಕಮಲಾಪುರ.



ನಂದಿಕೋಲು ಕುಣಿಸುತ್ತಿರುವುದು. ಹಂಪಿ ಉತ್ಸವದಲ್ಲಿ.



ಮರಗಾಲು ಕುಣಿತ, ಹಂಪಿ ಉತ್ಸವ.



ಗಾರಿಡಿಗೊಂಬೆ, ಹಂಪಿ ಉತ್ಸವದಲ್ಲಿ .



ಹುಲಿವೇಷಧಾರಿಗಳು, ಹಂಪಿ ಉತ್ಸವ.



ಪೂಜಾ ಕುಣಿತ, ಹಂಪಿ ಉತ್ಸವ.



ಲಂಬಾಣಿ ನೃತ್ಯ, ಹಂಪಿ ಉತ್ಸವ.



ಕೋಲಾಟ, ಹಂಪಿ ಉತ್ಸವ.



ಕಾರ್ತಿಕದಲ್ಲಿ ದೀಪ ಮಣ್ಣಿನ ದೀಪ ಬೇಳಗಿಸುತ್ತಿರುವುದು ಹಂಪಿ.



ಕಹಳೆ ಊದುತ್ತಿರುವುದು, ಹಂಪಿ ಉತ್ಸವ.




ಕುಸ್ತಿ, ಹಂಪಿ ಉತ್ಸವದಲ್ಲಿ.



ಜಗ್ಗಲಗೆ ಬಾರಿಸುತ್ತಿರುವುದು, ಹಂಪಿ ಉತ್ಸವ.



ಜಗ್ಗಲಗೆ ಬಾರಿಸುತ್ತಿರುವುದು. ಹಂಪಿ ಉತ್ಸವ.



ಕತ್ತಿವರಸೆ. ಆಂಧ್ರದ ಕಾಶಿವಿಶ್ವೇಶ್ವರಾಲಯಂನ ಹೋರ ಭಿತ್ತಿಯಲ್ಲಿ



ಸ್ತ್ರೀಕುಸ್ತಿ, ಆಂಧ್ರದ ಚಿಂತಾಲವೆಂಕಟರಮಣ
ದೇವಾಲಯದ ಬಲಭಿತ್ತಿಯಲ್ಲಿ



ಹುಲಿಬೇಟೆ, ಆಂಧ್ರದ ಗೋರಂಟ್ಲದ
ಮಾದವರಾಯ ದೇವಸ್ಥಾನದ ೧೩ನೇ ಕಂಬದಲ್ಲಿ



ಕತ್ತಿವರಸೆ, ಆಂಧ್ರದ ಗೋರಂಟ್ಲದ
ಮಾದವರಾಯ ದೇವಸ್ಥಾನದ ೪ನೇಕಂಬ



ಸ್ತ್ರೀ ಕುಸ್ತಿ, ಮೈಸೂರು ದಸರಾ.



ಕುಸ್ತಿಗೆ ಮುನ್ನ ಅಖಾಡಕ್ಕೆ ಪೂಜೆ ಮಾಡುತ್ತಿರುವುದು.



ಕುಸ್ತಿಯ ಅಖಾಡವನ್ನು ಸಿದ್ಧಗೋಳಿಸುತ್ತಿರುವುದು.




ಸ್ತ್ರೀ ಕುಸ್ತಿ ಮೈಸೂರು ದಸರಾ.



ವಿದೇಶಿಯರು, ಹೋಳಿಯಲ್ಲಿ ಪಾಲ್ಗೊಂಡಿರುವುದು, ಹಂಪಿ.



ವಿದೇಶಿಯರು, ಹೋಳಿಯಲ್ಲಿ ಪಾಲ್ಗೊಂಡಿರುವುದು, ಹಂಪಿ.




ಹೋಳಿ ಆಡುತ್ತಿರುವುದು, ಹಜಾರರಾಮಚಂದ್ರ ದೇವಾಲಯದ ಮುಂದಿನ ಬಲಭಿತ್ತಿಯಲ್ಲಿ




ಕೋಲುವರಸೆ, ಹಜಾರರಾಮಚಂದ್ರ ದೇವಾಲಯದ ಭಿತ್ತಿಯಲ್ಲಿ




ಹಂದಿ ಬೇಟೆ, ಲೇಪಾಕ್ಷಿ.



ಬೇಟೆ ಚಿತ್ರಣ, ಲೇಪಾಕ್ಷಿ.




ಹಂದಿ ಬೇಟೆ, ಲೇಪಾಕ್ಷಿ.



ಪುತ್ರೋತ್ಸವ, ಲೇಪಾಕ್ಷಿ.



ಸ್ತ್ರೀ ಕುಸ್ತಿ, ಪೆನುಗೊಂಡ ರಾಮಭದ್ರ ದೇವಾಲಯದ ಮುಂದಿನ ಭಿತ್ತಿಯಲ್ಲಿ



ಗರಡಿ ಮನೆ, ನಿಡುಗಲ್ ಕೋಟೆಯ ಮೇಲೆ.




ತೆಂಗಿನ ಕಾಯಿಯಿಂದ ಆಡುತ್ತಿರುವುದು
ಆಂಧ್ರದ ಗೌಡನಪಲ್ಲಿಯಲ್ಲಿ.



ತೆಂಗಿನ ಕಾಯಿಯಿಂದ ಆಡುತ್ತಿರುವುದು,
ಆಂಧ್ರದ ಗೌಡನಪಲ್ಲಿಯಲ್ಲಿ.




ವಾಧ್ಯ ನುಡಿಸುತ್ತಿರುವುದು ಲೇಪಾಕ್ಷಿ.




ಮೂವರೊಂದಿಗೆ ಕುಸ್ತಿ,
ಗೋರಂಟ್ಲ ಮಾಧವರಾವ ದೇವಾಲಯದ ಗಿನೇ ಕಂಬದಲ್ಲಿ.




ವಾದ್ಯದೊಂದಿಗೆ ನೃತ್ಯ ಗೋರಂಟ್ಲ
ಮಾಧವರಾವ ದೇವಾಲಯದ ೭ನೇ ಕಂಬದಲ್ಲಿ.




ಆನೆ ಪಳಗಿಸುತ್ತಿರುವುದು, ಪೆನುಗೊಂಡ.




ನಾಯಿಯೊಂದಿಗೆ ಬೇಟೆಯಾಡಿ ಬರುತ್ತಿರುವುದು ,ಪೆನುಗೊಂಡ.




ಕೋಲಾಟ,ತಾಡಪತ್ರಿ ಬುಗ್ಗಾರಾಮಲಿಂಗೇಶ್ವರ ದೇವಸ್ಥಾನದ ಅಧಿಷ್ಠಾನದಲ್ಲಿ.



ಟಗರು ಕಾಳಗ, ಮೇಲುಕೋಟೆ.




ಚನ್ನೆಮಣೆಯಾಟ. ಶ್ರವಣಬೆಳಗೊಳ.




ಟಗರು ಕಾಳಗ. ಮೂಡಬಿದರಿ ಸಾವಿರ ಕಂಬಗಳ ಬಸದಿ.




ಟಗರು ಕಾಳಗ. ಮೂಡಬಿದರಿ ಸಾವಿರ ಕಂಬಗಳ ಬಸದಿ.



ಗೆರೆಯಾಟ, ಶ್ರವಣಬೇಳಗೋಳ.




ಚುಕ್ಕಿಯಾಟ, ಬೇಲೂರು.




ಚೆನ್ನೆಮಣೆಯಾಟ, ಅಜಂತಾ ೧೦ ನೇ ಗುಹೇಯಲ್ಲಿ.



ಕಾಳಿನಾಟ, ಅಂತರಜಾಲದಿಂದ.



ಪಗ್ಗದಾಟ, ಅಂತರಜಾಲದಿಂದ.




ಟಗರು ಕಾಳಗ, ಶಿರಾ.



ವಾದ್ಯ ಬಾರಿಸುತ್ತಿರುವುದು, ಶೃಂಗೇರಿ ಶಾರದಾಂಬ ದೇವಾಲಯದ ಅಧಿಷ್ಠಾನದಲ್ಲಿ.




ವಾದ್ಯ ಬಾರಿಸುತ್ತಿರುವುದು, ಶೃಂಗೇರಿ ಶಾರದಾಂಬ ದೇವಾಲಯದ ಅಧಿಷ್ಠಾನದಲ್ಲಿ.



ಅಷ್ಟಕೋನಾಕೃತಿಯ ಜಲಸೌಧ, ಹಂಪಿ.



ಕಲ್ಯಾಣಿ, ತಿರುಪತಿ ದೇವಸ್ಥಾನದ ಮುಂದೆ.



ಮುಷ್ಟಿಯುದ್ಧ, ತಮಿಳುನಾಡು ತಿರುವಣ್ಣಾ ಮಲೈ
ದೇವಸ್ಥಾನದ ಅಧಿಷ್ಠಾನದ ಪಟ್ಟಿಕೆಯಲ್ಲಿ.



ಮಹಾನವಮಿ ದಿಬ್ಬ, ಹಂಪಿ.



ಲಗೋರಿಯಾಟ, ಹಂಪಿ.



ಸಕ್ರೆಬೈಲಿನಲ್ಲಿ ಆನೆಗಳ ಕ್ರೀಡಾಕೂಟ

ಪ್ರಜಾವಾಣಿ ದಿನಪತ್ರಿಕೆ ೦೭/೧೦/೨೦೧೩



ನೀರಿನ ಕೊಡಪಾನ ಹೊತ್ತುಕೊಂಡು ಓಡುತ್ತಿರುವುದು,
ಮೈಸೂರು ದಸರಾದಲ್ಲಿ ಪ್ರಜಾವಾಣಿ ದಿನಪತ್ರಿಕೆ.



ಟಗರುಕಾಳಗ, ಹುಬ್ಬಳ್ಳಿ, ಪ್ರಜಾವಾಣಿ ದಿನ ಪತ್ರಿಕೆ.



